ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕಿರಣಕುಮಾರ್ ಹೆಚ್.ಜಿ.

ಮಾರ್ಗದರ್ಶಕರು

ಡಾ.ಎಂ.ಮಲ್ಲಿಕಾರ್ಜುನ ಗೌಡ

ಸಹ ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಕಿರಣಕುಮಾರ್ ಹೆಚ್.ಜಿ.

ಮಾರ್ಗದರ್ಶಕರು
ಡಾ.ಎಂ.ಮಲ್ಲಿಕಾರ್ಜುನ ಗೌಡ
ಸಹ ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೯

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ **ಕಿರಣಕುಮಾರ್ ಹೆಚ್.ಜಿ.** ಅವರು **"ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ"** ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಂ.ಮಲ್ಲಿಕಾರ್ಜುನ ಗೌಡ
ಸಹ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

“ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ” ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ಡಾ.ಎಂ.ಮಲ್ಲಿಕಾರ್ಜುನ ಗೌಡ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

H.G. [signature]
ಕಿರಣಕುಮಾರ್ ಹೆಚ್.ಜಿ.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ : 16/12/2019

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಮಹತ್ವ

ಪ್ರಸ್ತಾವನೆ

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆಯ ಹರವು ಬಹುವಿಸ್ತಾರವಾಗಿ ಬೆಳೆದಿದೆ. ಸಣ್ಣಕತೆಯು ಅತೀ ಸೂಕ್ಷ್ಮತೆ ಹಾಗೂ ತೀಕ್ಷ್ಣತೆಯಿಂದ ಹೆಚ್ಚು ಓದುಗರ ಮೇಲೆ ಪ್ರಭಾವವನ್ನು ಉಂಟುಮಾಡಿದೆ. ಕಡಿಮೆ ಸಮಯದಲ್ಲಿ ಹೆಚ್ಚಿನ ತಿಳುವಳಿಕೆ ಹಾಗೂ ಅನುಭವ ನೀಡುವ ಸಾಮರ್ಥ್ಯವನ್ನು ಸಣ್ಣಕತೆಗಳು ಹೊಂದಿವೆ. ಸಮಾಜವನ್ನು ಕೇಂದ್ರೀಕರಿಸಿಕೊಂಡು ಸಾಹಿತ್ಯವು ರಚಿಸಲ್ಪಟ್ಟಿರುತ್ತದೆ. ಸಮಾಜವನ್ನು ಹೊರತುಪಡಿಸಿದ ಸಾಹಿತ್ಯ ಸೃಷ್ಟಿಯನ್ನು ಊಹಿಸಿಕೊಳ್ಳುವುದು ಅಸಾಧ್ಯ. ಯಾವುದೇ ಸಾಹಿತ್ಯ ಪ್ರಕಾರ ಇಲ್ಲವೇ ಕಾವ್ಯ, ಕತೆ, ಕಾದಂಬರಿ ಹುಟ್ಟಲು ಆ ಕಾಲದಲ್ಲಿನ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಒತ್ತಡಗಳು ಕಾರಣವಾಗಿರುತ್ತವೆ. ಅಂತೆಯೇ ಕನ್ನಡ ಆಧುನಿಕ ಸಾಹಿತ್ಯದಲ್ಲೂ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬ ನೆಲೆಯಿಂದ ಕನ್ನಡ ಸಾಹಿತ್ಯವು ಹಲವು ಕಾಲಘಟ್ಟಗಳಲ್ಲಿ ಬೆಳೆದುಬಂದಿರುವುದನ್ನು ನೋಡಬಹುದಾಗಿದೆ. ಇದಕ್ಕೆ ಸಣ್ಣಕತೆ ಪ್ರಕಾರವು ಹೊರತಾಗಿಲ್ಲ. ಆಯಾ ಕಾಲಘಟ್ಟಗಳಲ್ಲಿನ ಆಶಯ, ಪ್ರಭಾವ, ಪರಿಸ್ಥಿತಿಗಳ ಪ್ರೇರಣೆ ಮತ್ತು ಆ ಸಂದರ್ಭದಲ್ಲಿನ ಸಾಂಸ್ಕೃತಿಕ ಒತ್ತಡದಲ್ಲಿ ಸಣ್ಣಕತೆಗಳು ರೂಪುಗೊಂಡಿರುವುದನ್ನು ಮುಖ್ಯವಾಗಿ ಗಮನಿಸಬಹುದು.

ತೊಂಭತ್ತರ ದಶಕದ ನಂತರದಲ್ಲಿ ಉಂಟಾದ ಅನೇಕ ಕ್ರಾಂತಿಕಾರಕ ವಿದ್ಯಮಾನಗಳು ಸಮಾಜದ ಬದಲಾವಣೆಗೆ ಕಾರಣವಾದವು. ಸರ್ಕಾರವು ಜಾರಿಗೆ ತಂದ ಹೊಸ ಆರ್ಥಿಕ ನೀತಿ, ಜಾಗತೀಕರಣ, ಉದಾರೀಕರಣ, ಖಾಸಗೀಕರಣದಂತಹ ಅನೇಕ ನೀತಿಗಳು ಮೂರನೇ ರಂಗದ ರಾಷ್ಟ್ರಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದವು. ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ಮಾರುಕಟ್ಟೆಯ ಸ್ವಾಮ್ಯವು ಬಂಡವಾಳಶಾಹಿ ವರ್ಗದ ಕೈಗೆ

ಸಿಕ್ಕಿದ್ದರಿಂದ ಬಡವರ, ರೈತರ, ಹಿಂದುಳಿದವರ ಮೇಲೆ ತೀವ್ರತರವಾದ ಹೊಡೆತ ಬಿದ್ದಿತು. ಮುಂದುವರಿದ ದೇಶಗಳು ರೂಪಿಸಿದ ಈ ನೀತಿಯಿಂದಾಗಿ ತೃತೀಯ ರಂಗದ ದೇಶಗಳು ನವವಸಾಹತುಶಾಹಿ ನೀತಿಗೆ ಅನಿವಾರ್ಯವಾಗಿ ಒಳಗಾಗಲೇಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಲಾಯಿತು. ಈ ಹಂತದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ರೀತಿಯ ಚಳವಳಿ, ಸಿದ್ಧಾಂತದ ರೂಪುರೇಷೆಯಾಗಲೀ ಪ್ರಭಾವ ಬೀರದಿದ್ದದ್ದು ಕನ್ನಡ ಕಥಾ ಸಾಹಿತ್ಯದಲ್ಲಿ ಈ ರೀತಿಯ ಜಾಗತೀಕರಣದ ಸ್ವರೂಪವನ್ನು ಅರಿಯಲು ಕತೆಗಳು ಹುಟ್ಟಿಕೊಂಡದ್ದನ್ನು ಮುಖ್ಯವಾಗಿ ಗಮನಿಸಬೇಕು.

ಪ್ರಭುತ್ವವು ಒಪ್ಪಿಕೊಳ್ಳುವ ಆರ್ಥಿಕ ನೀತಿಗಳಾದ ಕೈಗಾರೀಕರಣ, ವಸಾಹತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಂತಹ ಹಲವು ಅಂಶಗಳು ಸಮಾಜವನ್ನು ಪಲ್ಲಟಗೊಳಿಸಿರುವುದನ್ನು ಕಾಣಬಹುದು. ಇಂತಹ ವಿಚಾರಗಳನ್ನು ಸಮಾಜಶಾಸ್ತ್ರ, ಅರ್ಥಶಾಸ್ತ್ರ ಅಥವಾ ಇನ್ನಿತರೆ ಮಾನವಿಕ ಶಾಸ್ತ್ರಗಳು ಅಧ್ಯಯನ ಮಾಡಿದರೂ, ಅವು ಕೇವಲ ಅಂಕಿ–ಅಂಶಗಳನ್ನು ನೀಡುವ ಮತ್ತು ಅದಕ್ಕೆ ವರದಿಗಳನ್ನು ಮಾತ್ರ ನೀಡುವ ಕಾರ್ಯವನ್ನು ಮಾಡುತ್ತದೆ. ಆದರೆ ಸಾಹಿತ್ಯವು ಇಂತಹ ವಿಚಾರಗಳನ್ನು ಭಿನ್ನ ನೆಲೆಯಲ್ಲಿ ಗ್ರಹಿಸುವ, ಅದಕ್ಕೆ ಕಾರಣ, ಪರಿಣಾಮ, ಪ್ರಭಾವವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತದೆ. ಆದ್ದರಿಂದ ಬದಲಾಗುತ್ತಿರುವ ಸಮಾಜವನ್ನು ಇಂದಿನ ಸಮಕಾಲೀನ ಕತೆಗಳು ಹೇಗೆ ಅಭಿವ್ಯಕ್ತಗೊಳಿಸಿವೆ? ಕತೆಗಾರರು ಈ ರೀತಿಯ ಸನ್ನಿವೇಶವನ್ನು ಯಾವ ಹಿನ್ನೆಲೆಯಿಂದ ಗ್ರಹಿಸುತ್ತಿದ್ದಾರೆ? ಅದಕ್ಕೆ ಕತೆಗಾರರು ಕತೆಗಳ ಮೂಲಕ ನೀಡುತ್ತಿರುವ ಪರ್ಯಾಯದ ನೆಲೆಗಳ ಸ್ವರೂಪವನ್ನು ಗುರುತಿಸುವುದು ಅಧ್ಯಯನದ ಮುಖ್ಯ ನೆಲೆಯಾಗಿದೆ.

ತೊಂಭತ್ತರ ದಶಕದಿಂದ ನಂತರದ ದಿನಗಳಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಆಗುತ್ತಿರುವ ತೀವ್ರತರವಾದ ಪಲ್ಲಟಗಳನ್ನು ಎದುರಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಇದಕ್ಕೆ ಮುಖ್ಯ ಕಾರಣ ಜಾಗತೀಕರಣ, ಖಾಸಗಿಕರಣ ಮತ್ತು ಉದಾರೀಕರಣದ ನೀತಿಗಳು. ಈ ಜಾಗತೀಕರಣವನ್ನು ತೃತೀಯ ಅಥವಾ ಬಡರಾಷ್ಟ್ರಗಳು ಅರ್ಥೈಸಿಕೊಂಡಿರುವ ನೆಲೆ ವಿಶಿಷ್ಟವಾದುದು ಮತ್ತು ವಾಸ್ತವವಾದಿ ಚಿಂತನೆಯಿಂದ ಕೂಡಿದ್ದು. ಜಾಗತೀಕರಣ ಎಂದರೆ ವ್ಯಾಪಾರ ಸಂಬಂಧಿ ಕೆಲಸಗಳನ್ನು ಪಶ್ಚಿಮ ದೇಶಗಳು ಪೂರ್ವದ ದೇಶಗಳ ಮೇಲೆ ವ್ಯಾಪಕವಾಗಿ ಹಮ್ಮಿಕೊಂಡವು. ಬಂಡವಾಳ, ಉತ್ಪನ್ನ ಮತ್ತು ಅವುಗಳ ಬೆಲೆ ನಿಯಂತ್ರಣವನ್ನು ಕೈಯಲಿಟ್ಟುಕೊಂಡು ಮೂರನೇ ಜಗತ್ತಿನ ರಾಷ್ಟ್ರಗಳನ್ನು ವರ್ತಕರನ್ನಾಗಿ ಪರಿವರ್ತಿಸಲಾಯಿತು. ಹೀಗೆ ಪರಿವರ್ತಿಸಿದ್ದರ ಫಲವಾಗಿ

ತೃತೀಯ ರಾಷ್ಟ್ರಗಳ ಮೇಲೆ ಭಾರೀ ಪ್ರಮಾಣದ ಬದಲಾವಣೆಗಳು ಕಂಡುಬಂದಿತು. ಹಾಗಾಗಿ ಈ ಎಲ್ಲಾ ವಸ್ತುಗಳನ್ನು ಆಮದು ಮಾಡುವ ಮೂಲಕ ಪಶ್ಚಿಮದ ದೇಶಗಳ ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಯಿತು. ಇದು ಒಂದು ರೀತಿಯಲ್ಲಿ ಜಾಗತೀಕರಣದ ಪ್ರಭಾವ ಹಾಗೂ ಅದರ ಪರಿಣಾಮದಿಂದ ಇಂತಹ ರಾಷ್ಟ್ರಗಳ ಮೇಲೆ ಪರಿವರ್ತನೆಯನ್ನು ಉಂಟುಮಾಡಲು ಕಾರಣವಾಯಿತು. ಇದರ ಪರಿಣಾಮಗಳೆಂದರೆ ಔದ್ಯೋಗಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಭಾಷಿಕವಾಗಿ, ಸಂವಹನ ಮಾಧ್ಯಮವಾಗಿ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ಪಲ್ಲಟಗಳು ಉಂಟಾದವು.

ಈ ಹಿನ್ನೆಲೆಯಿಂದ ಸಮಾಜದಲ್ಲಿ ಬದಲಾವಣೆಗಳು ಜಾಗತೀಕರಣದ ಪ್ರಭಾವದಿಂದ ಬಹುದೊಡ್ಡ ಮಟ್ಟದಲ್ಲಿ ನಡೆದಿವೆ. ಇದನ್ನು ಕನ್ನಡ ಸಣ್ಣಕತೆಗಳ ಮೂಲಕ ಗುರುತಿಸುವುದು ಈ ಸಂಶೋಧನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಜಾಗತೀಕರಣವು ಇಂದು ತಂದೊಡ್ಡಿರುವ ಸಾಧಕ-ಬಾಧಕಗಳನ್ನು ಕುರಿತಂತೆ ಅದರ ಆಳ-ಅಗಲಗಳನ್ನು ಕುರಿತಂತೆ ಕನ್ನಡ ಕತೆಗಾರರು ಗ್ರಹಿಸಿರುವ ನೆಲೆ ಯಾವುದು? ಎಂದು ಅರಿಯುವುದು ಸಂಶೋಧನೆಯ ಮತ್ತೊಂದು ಉದ್ದೇಶವಾಗಿದೆ. ಜಾಗತೀಕರಣಕ್ಕೆ ಪ್ರತಿರೋಧವಾಗಿ ಕನ್ನಡದ ಕತೆಗಳು ನೀಡುತ್ತಿರುವ ಪ್ರತಿಕ್ರಿಯೆ ಯಾವ ಬಗೆಯದು? ಹಾಗೂ ಕತೆಗಳು ಜಾಗತೀಕರಣದ ಹಿನ್ನೆಲೆಯಲ್ಲಿ ಕತೆಗಳು ಬದಲಾಗುತ್ತಿರುವ ಸಮಾಜದ ಸ್ವರೂಪವನ್ನು ಕಟ್ಟಿಕೊಡುತ್ತಿರುವ ನೆಲೆ ಯಾವುದು? ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗುವುದು.

'ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ' ಎಂಬ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಜಾಗತೀಕರಣ ಹಾಗೂ ನವ ಆಧುನಿಕವಾದದ ಪ್ರಭಾವಕ್ಕೆ ಸಿಲುಕಿದ ಪರಿಸ್ಥಿತಿಯಲ್ಲಿ ಕತೆಗಾರರು ಅದರ ಪ್ರಭಾವ ಪರಿಣಾಮಗಳನ್ನು ಸೂಕ್ಷ್ಮವಾಗಿ ಕತೆಗಳಲ್ಲಿ ಮೂಡಿಸುವ ಪ್ರಯತ್ನವನ್ನು ಕತೆಗಳ ಮೂಲಕ ಮಾಡಿದ್ದಾರೆ.

ಅಧ್ಯಯನ ಉದ್ದೇಶ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಣ್ಣಕತೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅನೇಕ ಬಗೆಯ ನೆಲೆಗಳಲ್ಲಿ ಒಂದು ವಿಷಯವಸ್ತುವನ್ನು ವಿಶ್ಲೇಷಿಸುವ, ವಿಮರ್ಶಿಸುವ, ವ್ಯಾಖ್ಯಾನಿಸುವ ದೃಷ್ಟಿಕೋನವನ್ನು ಈ ಸಣ್ಣಕತೆಯ ಪ್ರಕಾರವು ಹೊಂದಿರುತ್ತದೆ. ಸಮಾಜದಲ್ಲಿ ಪ್ರತಿನಿತ್ಯ ನಡೆಯುವ ವಿದ್ಯಮಾನಗಳಿಗೆ ಸಾಹಿತ್ಯವು ಪ್ರತಿಕ್ರಿಯಿಸುತ್ತಾ, ಅದನ್ನು ಸಮಸ್ಯೀಕರಿಸಿ

ಅದಕ್ಕೆ ಪರಿಹಾರ ಮಾರ್ಗವನ್ನು ಸೂಚಿಸುವ ದಿಕ್ಸೂಚಿಯಾಗಿ ಕೆಲಸ ಮಾಡುತ್ತಿದೆ. ಅಲ್ಲದೇ ಭಾರತೀಯ ಸಮಾಜದಲ್ಲಿ ಅನೇಕ ಪಲ್ಲಟಗಳು ಹಲವಾರು ಕಾರಣಗಳಿಗಾಗಿ ನಡೆದಿವೆ. ಉದಾಹರಣೆಗೆ ಕೈಗಾರೀಕರಣ, ಆಧುನೀಕರಣದ ಪರಿಣಾಮಗಳು ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪಲ್ಲಟಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಅಂತೆಯೇ ಜಾಗತೀಕರಣದ ಪ್ರಭಾವದಿಂದಾಗಿ ಕಳೆದ ಸುಮಾರು ೨೫ ವರ್ಷಗಳಲ್ಲಿ ಸಮಾಜವು ಅನೇಕ ಬದಲಾವಣೆಗಳಿಗೆ ತನ್ನನ್ನು ಆಗು ಮಾಡಿಕೊಂಡಿದೆ. ಇಂತಹ ಸಮಾಜದಲ್ಲಿ ಪಲ್ಲಟಗಳು ನಡೆಯುವುದಕ್ಕೆ ವಿದ್ಯಮಾನಗಳು ಬಹುಮುಖ್ಯವಾಗಿ ಕಾರಣೀಭೂತವಾಗಿರುತ್ತವೆ. ಇಂತಹ ಬದಲಾವಣೆಯು ಅನೇಕ ನೆಲೆಗಳಲ್ಲಿ, ಹಿನ್ನೆಲೆಯಲ್ಲಿ ನಡೆದಿರುವುದಕ್ಕೆ ಹಲವು ಹೊಸ ಹೊಸ ವ್ಯತ್ಯಯಗಳು ಸಮಾಜದಲ್ಲಿ ಕಾಣಿಸಿಕೊಂಡು ಅದು ಜನಜೀವನದ ಮೇಲೆ ವ್ಯಾಪಕವಾದ ಪರಿಣಾಮವನ್ನು ಬೀರಿವೆ.

ಈ ಹಿನ್ನೆಲೆಯಲ್ಲಿ ಜಾಗತೀಕರಣ ಸಂದರ್ಭದ ಒಟ್ಟಾರೆ ಈ ೨೫ ವರ್ಷಗಳಲ್ಲಿ ಸಮಾಜದಲ್ಲಿ ಆಗಿರುವ, ಆಗುತ್ತಿರುವ ಬದಲಾವಣೆಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳ ಮೂಲಕ ಗ್ರಹಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಅಲ್ಲದೇ ಈ ಕೆಳಗಿನ ಕೆಲವು ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನವನ್ನು ನಡೆಸಲಾಗಿದೆ.

- ಕಥಾಸಾಹಿತ್ಯದ ಭಾಷೆ, ನಿರೂಪಣೆ, ಕಥನ ಕ್ರಮ, ವಿನ್ಯಾಸಗಳು ಹೇಗೆ ಬದಲಾಗುತ್ತಿರುವ ಸಮಾಜವನ್ನು ಅಭಿವ್ಯಕ್ತಿಸಿವೆ ಎಂಬುದನ್ನು ಗುರುತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.
- ಸಣ್ಣಕತೆಗಾರರು ಹಿಂದಿನ ಕನ್ನಡ ಕಥಾಸಾಹಿತ್ಯದ ಕತೆಗಾರರಿಗಿಂತ ಭಿನ್ನವಾಗಿ ಹೇಗೆ ರಚಿಸಿದ್ದಾರೆ ಹಾಗೂ ಪರಂಪರೆಯ ಎಳೆಗಳನ್ನು ಕತೆಗಳಲ್ಲಿ ಹೇಗೆ ಮರು ರೂಪಿಸಿಕೊಂಡಿದ್ದಾರೆ ಎಂದು ಗುರುತಿಸುವುದು.
- ಜಾಗತೀಕರಣ, ಖಾಸಗೀಕರಣ ಮತ್ತು ಬಂಡವಾಳಶಾಹಿಯ ಮಾರುಕಟ್ಟೆ ನೀತಿಗಳು ಇಡೀ ಸಮಾಜದ ಮೇಲೆ ಪರಿಣಾಮವನ್ನು ಬೀರಿವೆ. ಈ ಪರಿಣಾಮವನ್ನು ಕತೆಗಳು ಗ್ರಹಿಸಿರುವ ಸ್ವರೂಪವನ್ನು ಅರಿಯುವುದು.
- ಸಮಾಜದ ದುಡಿಮೆ, ಉತ್ಪಾದನೆ, ಶಿಕ್ಷಣ, ಉದ್ಯೋಗ ಮುಂತಾದ ಆಯಾಮಗಳಲ್ಲಿ ನೆಡೆದಿರುವ ಬದಲಾವಣೆಗಳನ್ನು ಕತೆಗಳು ಗ್ರಹಿಸಿರುವ ಸ್ವರೂಪವನ್ನು ಅರಿಯುವುದು.
- ಸಮಾಜದ ಜನರ ಜೀವನ ಕ್ರಮದಲ್ಲಿ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ನೆಡೆದಿರುವ ಪಲ್ಲಟಗಳನ್ನು ಅರಿಯುವುದು.

- ಜಾಗತೀಕರಣ ಮತ್ತು ಆಧುನಿಕತೆಯ ಪರಿಣಾಮಗಳಿಗೆ ಸಮಾಜವು ಒಡ್ಡಿಕೊಂಡಿರುವ ಆಯಾಮಗಳನ್ನು ಅರಿಯುವುದು.
- ಸಮಾಜವು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಹೊಸತಲೆಮಾರಿನ ಸಣ್ಣಕತೆಗಳು ಪರೋಕ್ಷವಾಗಿ ಸೂಚಿಸುತ್ತಿರುವ ಪರ್ಯಾಯಗಳನ್ನು ಗುರುತಿಸುವುದು.

ಅಧ್ಯಯನದ ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ ಕಥನ ಸಾಹಿತ್ಯಕ್ಕೆ ವಿಶಿಷ್ಟವಾದ ಆಯಾಮವಿದೆ. ಕನ್ನಡದ ಪ್ರಾಚೀನ ಗದ್ಯವೆಂದು ಕರೆಯಲಾಗುವ ವಡ್ಡಾರಾಧನೆಯಿಂದಲೂ ಕನ್ನಡದ ಕಥನ ಸಾಹಿತ್ಯವು ವಿಶಿಷ್ಟವಾಗಿ ಬೆಳೆದುಬಂದಿದೆ. ಇಂತಹ ಕನ್ನಡ ಕಥಾಸಾಹಿತ್ಯದ ಹರವು ತುಂಬಾ ವಿಶಾಲವ್ಯಾಪ್ತಿಯನ್ನು ಹೊಂದಿದೆ. ಪ್ರಸ್ತುತ ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ ಎಂಬ ಅಧ್ಯಯನಕ್ಕೆ ಪ್ರಮುಖವಾಗಿ ೧೯೯೧ ರಿಂದ ಅಂದರೆ ಜಾಗತೀಕರಣದ ಪರಿಕಲ್ಪನೆಯು ಭಾರತಕ್ಕೆ ಪರಿಚಯಿಸಲ್ಪಟ್ಟ ನಂತರದ ಕಾಲಮಾನದಲ್ಲಿ ಕನ್ನಡದ ಕತೆಗಾರರು ಸೃಷ್ಟಿಸಿದ ಕತೆಗಳನ್ನು ಇಲ್ಲಿ ಮುಖ್ಯವಾಗಿ ಅಧ್ಯಯನದ ವ್ಯಾಪ್ತಿಯ ಭಾಗವಾಗಿ ಗುರ್ತಿಸಲಾಗಿದೆ. ಅಲ್ಲದೇ ತೊಂಭತ್ತೊಂದರ ದಶಕದ ನಂತರದಲ್ಲಿ ಅನೇಕ ಯುವಮನಸ್ಸುಗಳು ಜಾಗತೀಕರಣ ಸಂದರ್ಭದಲ್ಲಿ ಬದಲಾಗುತ್ತಿರುವ ಸಮಾಜದ ವಸ್ತುಸ್ಥಿತಿಯನ್ನು ಸಾಹಿತ್ಯದ ಮೂಲಕ ಅದರಲ್ಲೂ ಕತೆಗಳ ಮೂಲಕ ಕಟ್ಟಿಕೊಟ್ಟಿರಬಹುದಾದ ಅಂಶಗಳನ್ನು ಇಲ್ಲಿ ಅಧ್ಯಯನದ ಕೇಂದ್ರವನ್ನಾಗಿ ಮಾಡಿಕೊಳ್ಳಲಾಗಿದೆ. ಅಧ್ಯಯನದ ದೃಷ್ಟಿಯಿಂದ ಇಲ್ಲಿ ಆಯ್ದ ಕತೆಗಾರರ ಪ್ರಾತಿನಿಧಿಕ ಕತೆಗಳನ್ನು ಆಯ್ದುಕೊಂಡು ಅಧ್ಯಯನಕ್ಕೆ ನಿರ್ದಿಷ್ಟ ಚೌಕಟ್ಟನ್ನು ರೂಪಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ "ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ" ಎನ್ನುವ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಟ್ಟು ಏಳು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳನ್ನು ವಿಸ್ತಾರವಾಗಿ ಈ ಕೆಳಗಿನಂತೆ ನೋಡಬಹುದು.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಅಧ್ಯಯನದ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ. ಅಂದರೆ ಸಣ್ಣಕತೆಗಳನ್ನು ಇಲ್ಲಿ ಯಾವ ಕಾರಣಕ್ಕೆ ಅಧ್ಯಯನದ ದೃಷ್ಟಿಯಿಂದ ಆಯ್ದುಕೊಂಡು ಜಾಗತೀಕರಣ ಸಂದರ್ಭದಲ್ಲಿ

ಬದಲಾಗುತ್ತಿರುವ ಸಮಾಜವನ್ನು ಕುರಿತ ನೋಟವನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತಿದೆ ಎಂಬ ಅಂಶಗಳನ್ನು ಇಟ್ಟುಕೊಂಡು ಅಧ್ಯಯನಕ್ಕೆ ಪೂರಕವಾಗಿ ಸಮಸ್ಯೀಕರಣ–ಗೊಳಿಸಿಕೊಳ್ಳಲಾಗಿದೆ.

ಎರಡನೇ ಅಧ್ಯಯನದಲ್ಲಿ ಪ್ರಸ್ತುತ ಅಧ್ಯಯನದ ವಿಷಯದ ಮೇಲೆ ಈವರೆಗೂ ನಡೆದಿರುವ ಅಧ್ಯಯನಗಳ ಒಟ್ಟಾರೆ ಸಮೀಕ್ಷೆಯನ್ನು ನಡೆಸಲಾಗಿದೆ. ಅಂದರೆ ಇಲ್ಲಿ ಮುಖ್ಯವಾಗಿ ಮೂರು ಭಾಗಗಳಲ್ಲಿ ಇದುವರೆಗೂ ನಡೆದಿರುವ ಕನ್ನಡ ಸಣ್ಣಕತೆಗಳ ಅಧ್ಯಯನಗಳ ಆಗು–ಹೋಗುಗಳನ್ನು ತಿಳಿಯಲಾಗಿದೆ.

೧. ಅಧ್ಯಯನಗಳ ಸಮೀಕ್ಷೆ

೨. ಪ್ರಬಂಧಗಳು ಮತ್ತು ಲೇಖನಗಳು

೩. ಕನ್ನಡದ ಕಥಾಸಂಕಲನಕ್ಕೆ ಬರೆದಿರುವ ಮುನ್ನುಡಿಗಳು

ಈ ಮೂರು ಅಂಶಗಳನ್ನು ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ ಜಾಗತೀಕರಣ ಸಂದರ್ಭವನ್ನು ಮತ್ತು ಅದರಿಂದ ಸಮಾಜವು ಬದಲಾವಣೆಗೆ ಒಳಗಾಗುತ್ತಿರುವ ಅಂಶಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಅಲ್ಲದೇ ಇಲ್ಲಿ ಮುಖ್ಯವಾಗಿ

೧. ಕನ್ನಡ ಸಾಹಿತ್ಯವು ಜಾಗತೀಕರಣವನ್ನು ಗ್ರಹಿಸಿರುವ ಬಗೆ

೨. ಮಾನವಿಕಗಳು ಜಾಗತೀಕರಣವನ್ನು ನೋಡಿರುವ ಬಗೆ

೩. ಕನ್ನಡ ಕತೆಗಾರರು ಜಾಗತೀಕರಣದ ಅಭಿಪ್ರಾಯವನ್ನು ತಿಳಿಸಿರುವ ಬಗೆ

ಎನ್ನುವುದಾಗಿ ಮುಖ್ಯವಾಗಿ ಮೂರು ನೆಲೆಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ಮೂರರಲ್ಲಿ ಮುಖ್ಯವಾಗಿ ಅಧ್ಯಯನ ವಿಷಯಕ್ಕೆ ಪೂರಕವಾಗಿ 'ಬದಲಾಗುತ್ತಿರುವ ಸಮಾಜ' ಮತ್ತು 'ಜಾಗತೀಕರಣ ಸಂದರ್ಭದಲ್ಲಿ ಬದಲಾಗುತ್ತಿರುವ ಸಮಾಜ' ಎಂಬ ಪರಿಕಲ್ಪನೆಯನ್ನಿಟ್ಟುಕೊಂಡು ಚರ್ಚಿಸಲಾಗಿದೆ. ಈ ಎರಡೂ ಪರಿಕಲ್ಪನೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಯಾವ ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ ಎನ್ನುವುದನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ. ಅಲ್ಲದೇ ಸಾಹಿತ್ಯದ ಸಂದರ್ಭದಲ್ಲಿ ಮತ್ತು ಮಾನವಿಕಗಳ ಸಂದರ್ಭದಲ್ಲಿ ಈ ಎರಡೂ ಪರಿಕಲ್ಪನೆಗಳನ್ನು ಹೇಗೆ ಗ್ರಹಿಸಿದ್ದಾರೆ ಎನ್ನುವುದನ್ನು ಅರಿಯುವುದರ ಜೊತೆಗೆ ಅಧ್ಯಯನದ ಪರಿಕಲ್ಪನೆಯನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜದ ಸ್ವರೂಪವನ್ನು ಚರ್ಚಿಸಲಾಗಿದೆ. ಪ್ರಮುಖವಾಗಿ ಸಮಾಜದಲ್ಲಿರುವ ಕುಟುಂಬದಲ್ಲಿ ಮತ್ತು ಕುಟುಂಬೇತರ ಸಂಬಂಧಗಳಲ್ಲಿ ಆಗುತ್ತಿರುವ ಬದಲಾವಣೆ, ಆರ್ಥಿಕವಾಗಿ ಇಂದು ಸಮಾಜದಲ್ಲಿ ಆಗುತ್ತಿರುವ ಬದಲಾವಣೆ, ಶೈಕ್ಷಣಿಕ ಕ್ಷೇತ್ರದಲ್ಲಿ ಭಾಷೆ ಮತ್ತು ಶಿಕ್ಷಣದಲ್ಲಿ ಆಗುತ್ತಿರುವ ಬದಲಾವಣೆಗಳು, ರಾಜಕೀಯವು ಸಮಾಜದ ಮೇಲೆ ಹೇರುತ್ತಿರುವ ಅಧಿಕಾರಯುತವಾದ ನೀತಿ-ನಿಯಮಗಳು, ಅಭಿವೃದ್ಧಿ ಯೋಜನೆಗಳು ಬಂಡವಾಳಶಾಹಿಗಳ ಹಿಡಿತದಲ್ಲಿ ಖಾಸಗೀಕರಣವನ್ನು ಒಪ್ಪಿಕೊಂಡ ಸರ್ಕಾರವು ಸಮಾಜದ ಮೇಲೆ ಮಾಡುತ್ತಿರುವ ಪಲ್ಲಟಗಳನ್ನು ಗ್ರಹಿಸಲಾಗಿದೆ.

ಸಾಂಸ್ಕೃತಿಕ ನೆಲೆಯಲ್ಲಿ ಆಗುತ್ತಿರುವ ಬದಲಾವಣೆಗಳಾದ ಜನರ ಜೀವನವಿಧಾನ, ಸಂಸ್ಕೃತಿಯ ಮೇಲೆ ಹೊಡೆತ, ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ, ಜೊತೆಗೆ ಮಹಿಳೆಯರ ಹಿನ್ನೆಲೆಯಲ್ಲಿ ಪುರುಷವಾದಿ ಮನಸ್ಥಿತಿ, ಉತ್ಪಾದನಾ ಕ್ಷೇತ್ರದಲ್ಲಿ ಮಹಿಳೆ ಮುಂತಾದವುಗಳ ಬಗ್ಗೆ ಜಾಗತೀಕರಣ ಸಂದರ್ಭದಲ್ಲಿ ಮಹಿಳೆಯ ಸ್ಥಿತಿಗತಿಗಳನ್ನು ಕತೆಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದಲ್ಲದೇ ಬದಲಾಗುತ್ತಿರುವ ಸಮಾಜದಲ್ಲಿ ವೃತ್ತಿ, ಅಸಮಾನತೆ, ಪ್ರತಿಭಟನೆ, ಹೋರಾಟ, ಭ್ರಷ್ಟಾಚಾರ, ನಗರೀಕರಣ, ವಲಸೆ ಪ್ರವೃತ್ತಿ, ಜಾತಿ, ಧರ್ಮ ಎನ್ನುವ ಅಂಶಗಳನ್ನು ಮುಖ್ಯ ನೆಲೆಯನ್ನಾಗಿಟ್ಟುಕೊಂಡು ಕನ್ನಡ ಸಣ್ಣಕತೆಗಳಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರತಿಪಾದಿಸಿರುವ ಧೋರಣೆಯನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಆಧುನಿಕತೆಯು ಸಮಾಜದ ಮೇಲೆ ಮಾಡುತ್ತಿರುವ ಪರಿಣಾಮಗಳನ್ನು ಗುರ್ತಿಸಲಾಗಿದೆ. ಆಧುನಿಕತೆಯು ಭಾರತದ ಸಂದರ್ಭದಲ್ಲಿ ವಸಾಹತುಶಾಹಿಯ ಪರಿಣಾಮದಿಂದ ಆರಂಭವಾಯಿತು ಎಂದು ತಿಳಿಯಲಾಗಿದೆ. ಅಲ್ಲಿ ಅನೇಕ ಅನುಕೂಲಗಳ ಜೊತೆಗೆ ಅನಾನುಕೂಲಗಳನ್ನು ಅದು ಮಾಡಿತು. ಹಾಗೆಯೇ ಸಾಮಾಜಿಕ ಸುಧಾರಣೆ, ಶಿಕ್ಷಣ, ವೈಚಾರಿಕ ಪ್ರಜ್ಞೆ ಇನ್ನಿತರ ಹೊಸ ಆಯಾಮಗಳನ್ನು ನೀಡಿತು ಎನ್ನುವುದನ್ನು ಗುರ್ತಿಸಲಾಗಿದೆ. ಜಾಗತೀಕರಣ ಸಂದರ್ಭದಲ್ಲಿನ ಆಧುನಿಕತೆಯು ಸಮಾಜದಲ್ಲಿ ಯಾವ ರೀತಿಯ ಪರಿಣಾಮವನ್ನು ಮಾಡಿದೆ ಎನ್ನುವುದನ್ನು ಕತೆಗಳ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಆಧುನಿಕತೆಯು ಪರಂಪರೆಯ ಮೇಲೆ ಮಾಡುತ್ತಿರುವ ಪಲ್ಲಟಗಳನ್ನು, ಅಲ್ಲದೇ ಆಧುನಿಕತೆಯು ಇಂದು ಸಮಾಜದಲ್ಲಿ ಸಂಬಂಧಗಳ ಮೇಲೆ ಮಾಡುತ್ತಿರುವ ಪರಿಣಾಮಗಳು, ವಿಜ್ಞಾನ ಮತ್ತು ತಂತ್ರಜ್ಞಾನದಿಂದ

ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳ ಜೊತೆಗೆ ಮಾರುಕಟ್ಟೆ ವ್ಯವಸ್ಥೆಯಲ್ಲಿ ಆಧುನಿಕತೆಯು ಜಾಗತೀಕರಣ ಸಂದರ್ಭದಲ್ಲಿ ಮಾಡುತ್ತಿರುವ ಬದಲಾವಣೆಯನ್ನು ಕತೆಗಳ ಮೂಲಕ ಗುರುತಿಸಲಾಗಿದೆ.

ಅಧ್ಯಾಯ ಆರರಲ್ಲಿ ಜಾಗತೀಕರಣ ಸಂದರ್ಭದಲ್ಲಿ ಮನುಷ್ಯನ ಅನೇಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಯಿಂದ ಅವನ ಮೇಲೆ ಪ್ರತಿಕೂಲ ಪರಿಣಾಮಗಳು ಬೀರುತ್ತಿವೆ ಎನ್ನುವುದನ್ನು ಕನ್ನಡದ ಸಣ್ಣಕತೆಗಳಲ್ಲಿ ಪ್ರಚುರಪಡಿಸಲಾಗಿದೆ. ಇದೆಲ್ಲದರ ಪರಿಣಾಮ ಅವನು ಯಾಂತ್ರಿಕ ಜೀವನವನ್ನು ನಡೆಸುವ ಪರಿಸ್ಥಿತಿಯು ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಮನುಷ್ಯ ಕಳೆದುಕೊಳ್ಳುತ್ತಿರುವ ಮಾನವೀಯ ಪ್ರಜ್ಞೆಯನ್ನು ಗುರ್ತಿಸಲಾಗಿದೆ. ಮಾನವೀಯತೆ, ಏಕಾಂಗಿತನ, ಆಯ್ಕೆಯ ಸ್ವಾತಂತ್ರ್ಯ, ಮಾನಸಿಕ ಖಿನ್ನತೆ ಎನ್ನುವ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ಬದಲಾಗುತ್ತಿರುವ ಮನುಷ್ಯರ ಮಾನವೀಯ ಪ್ರಜ್ಞೆಯ ವಸ್ತುಸ್ಥಿತಿಯನ್ನು ಕತೆಗಳ ಮೂಲಕ ಗುರ್ತಿಸಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಮೇಲಿನ ಅಧ್ಯಾಯಗಳಲ್ಲಿನ ತಾತ್ವಿಕತೆಯನ್ನು ಅನುಸಂಧಾನ ಮಾಡಲಾಗಿದೆ. ಜಾಗತೀಕರಣ ಸಂದರ್ಭದಲ್ಲಿ ಕನ್ನಡ ಸಣ್ಣಕತೆಗಳಲ್ಲಿ ಜಾಗತೀಕರಣವು ವಿರೋಧದ ಹಿನ್ನೆಲೆಯಲ್ಲಿ ರೂಪುಗೊಂಡಿದ್ದರೆ, ಸಮಾಜವು ಇದಕ್ಕೆ ವಿರುದ್ಧವಾದ ಧಿಕ್ಕಿನಲ್ಲಿ ಜಾಗತೀಕರಣದ ಇಂತಹ ಅಂಶಗಳನ್ನು ಒಪ್ಪಿಕೊಂಡಿರುವುದನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೂ ಅಧ್ಯಯನದಿಂದ ಕಂಡುಕೊಳ್ಳಲಾದ ಫಲಿತಗಳನ್ನು ಗುರ್ತಿಸಲಾಗಿದೆ.

ಅಧ್ಯಯನದ ವಿಧಾನ

"ಜಾಗತೀಕರಣದ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ" ಎನ್ನುವ ಅಧ್ಯಯನವನ್ನು ಮುಖ್ಯವಾಗಿ ವಿಶ್ಲೇಷಣಾತ್ಮಕ ಹಾಗೂ ವಿಮರ್ಶಾತ್ಮಕ ಮಾದರಿ ವಿಧಾನವನ್ನು ಅನುಸರಿಸಲಾಗಿದೆ. ಅಲ್ಲದೇ ಬದಲಾಗುತ್ತಿರುವ ಸಮಾಜ ಎಂದಾಗ ಎಲ್ಲಾ ಪರಿಕಲ್ಪನೆಗಳನ್ನು ಸಮಾಜದಿಂದಲೇ ಅಧ್ಯಯನ ಮಾಡಬೇಕಾಗಿರುವುದರಿಂದ ಅಂತರಶಿಸ್ತೀಯ ಮತ್ತು ಬಹುಶಿಸ್ತೀಯ ವಿಧಾನವನ್ನು ಬಳಸಲಾಗಿದೆ. ಅಲ್ಲದೇ ಪ್ರಾದೇಶಿಕತೆಯ ಆಧಾರದ ಮೇಲೆ ಇಡೀ ಸಣ್ಣಕತೆಗಾರರ ಒಟ್ಟಾರೆಯಾದ ಜಾಗತೀಕರಣದ ಬಗೆಗಿನ ಅಭಿಪ್ರಾಯಗಳನ್ನು ಕತೆಗಳಲ್ಲಿ ಮೂಡಿಸಿರುವ ನೆಲೆಯ ಸ್ವರೂಪವನ್ನು ಗುರ್ತಿಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ಜಾಗತೀಕರಣದ ನಂತರದ ಕಳೆದ ೨೫ ವರ್ಷಗಳ ಸಾಮಾಜಿಕ ಬದಲಾವಣೆಯ ವಿವರಗಳನ್ನು ಬೇರೆ ಬೇರೆ ಜ್ಞಾನಶಿಸ್ತುಗಳು ಸಮೀಕ್ಷೆ ಮಾಡಿವೆ. ಉದಾಹರಣೆಗೆ ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಸಮೂಹ ಮಾಧ್ಯಮದವರು ಇತ್ಯಾದಿ. ಆದರೆ ಸಾಹಿತ್ಯದ ಮುಖ್ಯ ಪ್ರಕಾರಗಳಲ್ಲಿ ಒಂದಾದ ಸಣ್ಣಕತೆಗಳು ಇಂತಹ ಬದಲಾವಣೆಯನ್ನು ಗ್ರಹಿಸಿರುವ ಸ್ವರೂಪ ಹೇಗೆ ಭಿನ್ನ ಎಂದು ಗುರುತಿಸುವುದು ಅಧ್ಯಯನದ ಮಹತ್ವವಾಗಿದೆ. ಉಳಿದ ಜ್ಞಾನಶಿಸ್ತುಗಳು ಸಮಾಜದ ಬಾಹ್ಯ ಸ್ವರೂಪದ ಬದಲಾವಣೆಯನ್ನು ಗುರುತಿಸಿದರೆ ಸಾಹಿತ್ಯ ಪ್ರಕಾರವಾದ ಸಣ್ಣಕತೆಗಳು ಸಮಾಜದ ಅಂತರಂಗದ ತುಮುಲಗಳನ್ನು, ಮಿಡಿತಗಳನ್ನು ಗುರುತಿಸುತ್ತದೆ. ಆ ಮೂಲಕ ಸಮಾಜದಲ್ಲಿ ನಡೆದಿರುವ ಆಂತರಿಕ ಪಲ್ಲಟಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ.

ಅಧ್ಯಾಯ : ಎರಡು

ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಅಧ್ಯಾಯ : ಎರಡು

ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ ಕಥಾಪರಂಪರೆಯು ತುಂಬಾ ವಿಶಿಷ್ಟವಾಗಿ ಬೆಳೆದುಬಂದಿದೆ. ಕಥಾಸಾಹಿತ್ಯ ಪರಂಪರೆಯ ಕಾಲದ ಅನಿವಾರ್ಯತೆಗೆ ಮತ್ತು ಆಶಯಕ್ಕೆ ತಕ್ಕಂತೆ ಕನ್ನಡದಲ್ಲಿ ಕತೆಗಳು ರೂಪುಗೊಂಡಿರುವುದನ್ನು ಒಂದು ನೂರು ವರ್ಷಗಳನ್ನು ಗಮನಿಸಿದಾಗ ತಿಳಿಯಬಹುದು. ಕನ್ನಡ ಸಾಹಿತ್ಯವು ಕಾಲಘಟ್ಟಗಳ ಆಶಯ, ಧೋರಣೆ, ಅಭಿವ್ಯಕ್ತಿಗೆ ಅನುಸಾರವಾಗಿ ಕನ್ನಡದ ಕತೆಗಳು ರಚನೆಯಾಗಿವೆ. ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ದಲಿತ–ಬಂಡಾಯ ಮತ್ತು ಸ್ತ್ರೀವಾದ ಇನ್ನು ಮುಂತಾದ ನೆಲೆಗಳಿಂದ ಕತೆಗಳು ಹುಟ್ಟಿಕೊಂಡಿವೆ. ದಲಿತ ಬಂಡಾಯೋತ್ತರ ಕಾಲದಲ್ಲಿ ಯಾವುದೇ ಸಾಹಿತ್ಯದ ಚಳುವಳಿಯ ಹಿನ್ನೆಲೆಗಳಿಲ್ಲದೇ ಪ್ರಾದೇಶಿಕತೆ ಮತ್ತು ವೈಯಕ್ತಿಕ ಅನುಭವಗಳ ಮೇಲೆ ಕತೆಗಳನ್ನು ರಚಿಸಿದ್ದಾರೆ.

ಕನ್ನಡದಲ್ಲಿ ಕಥಾ ಸಾಹಿತ್ಯದ ಮೇಲೆ ಅಧ್ಯಯನಗಳು ಹೇರಳವಾಗಿಯೇ ನಡೆದಿವೆ. ಆರಂಭಿಕ ಕತೆಗಾರರಾದ ಪಂಜೆಯವರಿಂದ ಹಿಡಿದು ನವೋದಯ, ನವ್ಯ, ದಲಿತ, ಬಂಡಾಯದವರೆಗೂ ಕತೆಗಾರರ ಕತೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸೇರಿದಂತೆ ಅನೇಕ ಲೇಖಕರ/ವಿದ್ವಾಂಸರ ಕೃತಿಗಳು, ಅಧ್ಯಯನಗಳು, ಪ್ರಬಂಧಗಳನ್ನು ರಚಿಸಿದ್ದಾರೆ. ಈ ನೆಲೆಯಲ್ಲಿ ಜಿ.ಎಸ್. ಆಮೂರ ಅವರ 'ಕನ್ನಡ ಕಥನ ಸಾಹಿತ್ಯ: ಸಣ್ಣಕತೆ', ಕೀರ್ತಿನಾಥ ಕುರ್ತಕೋಟಿ ಅವರ 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ', ಕರೀಗೌಡ ಬೀಚನಹಳ್ಳಿ ಅವರ 'ವ್ಯಷ್ಟಿ ಸಮಷ್ಟಿ', ಟಿ.ಪಿ.ಆಶೋಕ ಅವರ 'ಕಥನ ಕಾರಣ' ಇನ್ನೂ ಹಲವು ವಿಮರ್ಶಕರು ಕತೆಗಳ ಮೇಲೆ ಹೆಚ್ಚಿನ ಅಧ್ಯಯನಗಳನ್ನು ಮಾಡಿರುವುದು ಕಾಣಬಹುದು.

"ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ" ಎಂಬ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ

ಅಧ್ಯಯನಗಳು ಬಂದಿರುವುದು ಅತ್ಯಂತ ವಿರಳವಾಗಿದೆ. ಆದಾಗ್ಯೂ ಕನ್ನಡದಲ್ಲಿ ೧೯೯೧ ರಿಂದ ಈಚೆಗಿನ ಕಥಾಸಾಹಿತ್ಯವನ್ನು ಕುರಿತಂತೆ ಅಧ್ಯಯಗಳು, ಲೇಖನಗಳು, ಪ್ರಬಂಧಗಳ ರೂಪದಲ್ಲಿ ಹಾಗೂ ವಿಮರ್ಶಕರ ಕೃತಿಗಳಲ್ಲಿ ಅಧ್ಯಯನವನ್ನು ನೆಡೆಸಿರುವುದು ಕಂಡುಬರುತ್ತದೆ. ಇದನ್ನು ಮೂರು ನೆಲೆಗಳಲ್ಲಿ ಗಮನಿಸುವುದಾದರೆ.

೧. ಅಧ್ಯಯನಗಳ ಸಮೀಕ್ಷೆ

೨. ಪ್ರಬಂಧಗಳು ಮತ್ತು ಲೇಖನಗಳು

೩. ಕನ್ನಡದ ಕಥಾಸಂಕಲನಕ್ಕೆ ಬರೆದಿರುವ ಮುನ್ನುಡಿಗಳು

೧. ಅಧ್ಯಯನಗಳ ಸಮೀಕ್ಷೆ

'ಕರ್ನಾಟಕದ ಸಾಮಾಜಿಕ ಬದಲಾವಣೆ ಸಮಾಜಶಾಸ್ತ್ರ ಹಾಗೂ ಸಾಹಿತ್ಯ ನೋಡಿರುವ ಬಗೆ' ಎಂಬ ಅಧ್ಯಯನದಲ್ಲಿ ಮುಖ್ಯವಾಗಿ ಎರಡು ನೆಲೆಗಳಲ್ಲಿ ಸಮಾಜದಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

೧. ಸಮಾಜಶಾಸ್ತ್ರೀಯ ಹಿನ್ನೆಲೆಯಿಂದ ಸಮಾಜಶಾಸ್ತ್ರಜ್ಞರು ಸಮಾಜದ ಬದಲಾವಣೆಯನ್ನು ನೋಡಿರುವ ಬದಲಾವಣೆ.

೨. ಕನ್ನಡ ಸಾಹಿತ್ಯದ ಮೂಲಕ ಕನ್ನಡ ವಿದ್ವಾಂಸರು ಸಮಾಜದ ಬದಲಾವಣೆಯನ್ನು ಗ್ರಹಿಸಿರುವ ನೆಲೆ.

ಪ್ರಸ್ತುತ ಅಧ್ಯಯನದಲ್ಲಿ ಜಾಗತೀಕರಣ ಸಂದರ್ಭದ ರೀತಿಯಲ್ಲಿಯೇ ನಡೆದ ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಸಾಧಕ-ಬಾಧಕಗಳನ್ನು ಕುರಿತಂತೆ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಸಮಾಜ ಮತ್ತು ಕನ್ನಡ ಈ ಎರಡೂ ಶಾಸ್ತ್ರಗಳು ಬದಲಾಗುತ್ತಿರುವ ಸಮಾಜವನ್ನು ಗ್ರಹಿಸಿರುವ ಬಗೆಯನ್ನು ಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ. ಸಮಾಜ-ಶಾಸ್ತ್ರಜ್ಞರಾದ ಬಾಲ್ಜಾಕ್, ಲಾರೆನ್ಸ್, ಡಿಕ್ಸನ್‌ರ ಕೃತಿಗಳನ್ನು ಜೊತೆಗೆ ಕನ್ನಡದ ಸಮಾಜಶಾಸ್ತ್ರಜ್ಞರನ್ನು ಒಂದು ಕಡೆ ಅಧ್ಯಯನದ ಕೇಂದ್ರವನ್ನಾಗಿ ಆಯ್ದುಕೊಂಡಿದ್ದಾರೆ. ಇನ್ನೊಂದು ಕಡೆ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯನ್ನು ಬರೆದಿರುವ ಕುವೆಂಪು, ಕಾರಂತರನ್ನು ಇಟ್ಟುಕೊಂಡು ತೌಲನಿಕವಾಗಿ ಅಧ್ಯಯನ ನೆಡೆಸಿದ್ದಾರೆ. ಸಮಾಜಶಾಸ್ತ್ರಜ್ಞರು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಮೈತಳೆದ ಸಿದ್ಧಾಂತಗಳ ಮೂಲಕ ಸಮಾಜವನ್ನು ಪ್ರವೇಶಿಸಿದರೆ; ಕನ್ನಡ ಸಾಹಿತ್ಯವು ಪ್ರಸ್ತುತ ಸಮಾಜದಲ್ಲಿನ ಬದುಕಿನ

ಮೂಲ ಅನುಭವವನ್ನಿಟ್ಟುಕೊಂಡು ಸಮಾಜವನ್ನು ಪ್ರವೇಶಿಸಿದೆ. ಸಮಾಜಶಾಸ್ತ್ರೀಯ ಅಧ್ಯಯನಗಳು ವೈಜ್ಞಾನಿಕ ದಾಖಲೆಗಳನ್ನು ನೀಡಿದರೆ; ಸಾಹಿತ್ಯವು ಸೃಜನಶೀಲತೆಯಿಂದ ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ಕಟ್ಟಿಕೊಟ್ಟಿದೆ.

'ಹೊಸತಲೆಮಾರಿನ ಕಥಾಸಾಹಿತ್ಯದ ಪ್ರವೃತ್ತಿಗಳ ಅಧ್ಯಯನ' ಎಂಬ ಸಂಶೋಧನಾ ಪ್ರಬಂಧದಲ್ಲಿ ಕನ್ನಡದ ಮೊದಲ ತಲೆಮಾರಿನಿಂದ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳ ಅಧ್ಯಯನವನ್ನು ಕುರಿತಂತೆ ಸಂಶೋಧನೆ ಮಾಡಲಾಗಿದೆ. ಕನ್ನಡ ಸಾಹಿತ್ಯದ ಪ್ರಮುಖ ಕಾಲಘಟ್ಟಗಳಾದ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯದ ಹಿನ್ನೆಲೆಯಲ್ಲಿ ಕಥಾ ಸಾಹಿತ್ಯವು ರೂಪಗೊಂಡಿರುವುದನ್ನು ತಿಳಿಸುತ್ತಾ, ಆ ಕಾಲದ ವಿಮರ್ಶಕರು ಕುರಿತು ನಡೆಸಿರುವ ಅಧ್ಯಯನವನ್ನು ಮುಖ್ಯವಾಗಿ ತಿಳಿಸುತ್ತಾ 'ಹೊಸತಲೆಮಾರು' ಎಂದರೆ ಯಾವುದು ಮತ್ತು ಏಕೆ ಎನ್ನುವುದನ್ನು ತಿಳಿಸಿದ್ದಾರೆ. ಕನ್ನಡ ಕಥಾಸಾಹಿತ್ಯ ವರ್ಗನೆಲೆಯ ಅಧ್ಯಯನ, ರಾಷ್ಟ್ರೀಯವಾದಿ ಅಧ್ಯಯನ, ದಲಿತವಾದಿ ಅಧ್ಯಯನ, ಸ್ತ್ರೀವಾದಿ ಅಧ್ಯಯನಗಳ ಮೂಲಕ ಕಥೆಗಳ ಮುಖ್ಯ ಪ್ರವೃತಿಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಹೊಸ ತಲೆಮಾರಿನ ಕತೆಗಾರರು ಮುಖ್ಯವಾಗಿ ದಲಿತ-ಬಂಡಾಯ, ವರ್ಗ ಕೇಂದ್ರಿತ, ಸಮಕಾಲೀನ ಗ್ರಾಮೀಣ ಸಮಸ್ಯೆಗಳನ್ನು, ಮಹಿಳಾ ಸಮಸ್ಯೆಗಳನ್ನು, ಜಾಗತೀಕರಣ ಪ್ರಭಾವದ ಹಿನ್ನೆಲೆಯಲ್ಲಿ ಹಾಗೂ ಲೇಖಕರ ವೈಯಕ್ತಿಕ ಅನುಭವ/ಸಮಸ್ಯೆಯನ್ನು ಕೇಂದ್ರೀಕರಿಸಿ ಕತೆಯಾಗಿಸಿದ್ದಾರೆ ಎನ್ನುವುದನ್ನು ಅಧ್ಯಯನದಲ್ಲಿ ತಿಳಿಸಲಾಗಿದೆ.

ಸಾಮಾಜಿಕ ಆಶಯ, ನೈತಿಕತೆಯ ಶೋಧನೆ, ಭಿನ್ನ ಭಾಷಾ ಪ್ರಯೋಗ, ಹೊಸ ಲೋಕಗ್ರಹಿಕೆಗಳು, ಪ್ರಾದೇಶಿಕತೆ ಮುಂತಾದ ಹಲವು ನೆಲೆಗಳನ್ನು ಹೊಸ ತಲೆಮಾರಿನ ಕಥಾಸಾಹಿತ್ಯದ ಪ್ರವೃತ್ತಿಯೆಂದು ಗುರ್ತಿಸಿದ್ದಾರೆ. ನಗರಕೇಂದ್ರಿತ ಮತ್ತು ಬೇರೆ-ಬೇರೆ ವಲಯಗಳಲ್ಲಿ ವೃತ್ತಿ ಆರಂಭಿಸಿರುವವರು ವೃತಿಕೇಂದ್ರಿತ ಸಮಸ್ಯೆಗಳನ್ನು ಮತ್ತು ಬಿಕ್ಕಟ್ಟುಗಳನ್ನು ಕತೆಗಳಲ್ಲಿ ನಿರೂಪಿಸಿದ್ದಾರೆ. ಇವರ ಕತೆಗಳಲ್ಲಿ ನಿರ್ದಿಷ್ಟವಾದ ತಾತ್ವಿಕತೆ ಇರದೇ ಭಿನ್ನ ತಾತ್ವಿಕತೆಗಳು ಕಾಣಿಸಿಕೊಂಡು ಹಲವು ಲೋಕದೃಷ್ಟಿಗಳು ಸೃಷ್ಟಿಯಾಗಿವೆ. ಈ ಶತಮಾನದ ಕತೆಗಾರರು ಜಾಗತೀಕರಣದ ಪ್ರಭಾವದಿಂದ ಬದಲಾಗುತ್ತಿರುವ ಸಮಾಜವನ್ನು ಗುರ್ತಿಸುತ್ತಾರೆ. ಆಧುನಿಕೋತ್ತರವಾದದ ಸಾಮಾಜಿಕ ಕ್ರೌರ್ಯ ಕಥೆಗಳಲ್ಲಿ ಕಂಡುಬರುತ್ತಿವೆ ಎನ್ನುವುದನ್ನು ಕತೆಗಳ ಮೂಲಕ ಉದಾಹರಿಸಿದ್ದಾರೆ. ಉದಾ: ವಸುಧೇಂದ್ರ(ಕೆಂಪುಗಿಣಿ, ಕ್ಷಮೆಯಿಲ್ಲದೂರಿನಲ್ಲಿ)

'ವಸುಧೇಂದ್ರ ಅವರ ಸಣ್ಣಕತೆಗಳಲ್ಲಿ ಆಧುನಿಕತೆ' ಎಂಬ ಅಧ್ಯಯನದಲ್ಲಿ ಜಾಗತೀಕರಣದ ಪ್ರಭಾವವನ್ನು ಕುರಿತು ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ವಸುಧೇಂದ್ರರ ಕತೆಗಳ ವಸ್ತು ಮುಖ್ಯವಾಗಿ ಆಧುನಿಕತೆ, ಸಾಫ್ಟ್‌ವೇರ್ ಪ್ರಪಂಚ, ಬ್ರಾಹ್ಮಣ ಸಮುದಾಯದ ಸಂವೇದನೆ, ಸಮೂಹ ಮಾಧ್ಯಮಗಳು ಮುಂತಾದವುಗಳು ಎಂದು ಮುಖ್ಯವಾಗಿ ಗುರ್ತಿಸಿದ್ದಾರೆ. ಜಾಗತೀಕರಣವು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಕುರಿತಂತೆ ಮಹಿಳೆಯರ ಸಮಸ್ಯೆ, ಪರಿವರ್ತನೆ, ನಗರ ಮತ್ತು ಗ್ರಾಮೀಣ ಭಾಗದ ಅಂಶಗಳು, ಅಂತರ್ಜಾತಿ ವಿವಾಹ, ಜಾಗತೀಕಣದ ಸಂದರ್ಭದಲ್ಲಿ ಶಿಕ್ಷಣ ತೆಗೆದುಕೊಳ್ಳುತ್ತಿರುವ ಆಯಾಮಗಳು ಮುಂತಾದ ಸ್ವರೂಪವನ್ನು ಅವರ ಕತೆಗಳಲ್ಲಿ ಕಾಣಲು ಸಾಧ್ಯ. ವಸುಧೇಂದ್ರರು ಬಳಸುವ ಭಾಷೆ ಮುಖ್ಯವಾಗಿ ಮೂರು ನೆಲೆಗಳಲ್ಲಿ ಗುರ್ತಿಸಿದ್ದಾರೆ.

೧. ತಂತ್ರಜ್ಞಾನದ ಭಾಷೆ

೨. ಜನಸಾಮಾನ್ಯರ ಭಾಷೆ

೩. ಪ್ರಾದೇಶಿಕತೆಯ ಭಾಷೆ

'ಮಹಿಳಾ ಕಥಾಸಾಹಿತ್ಯ : ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು' ಎಂಬ ಅಧ್ಯಯನದಲ್ಲಿ ಆಧುನಿಕತೆ, ಕೈಗಾರೀಕರಣ ಮತ್ತು ನಗರೀಕರಣದ ಪರಿಣಾಮಗಳು ಮಹಿಳೆ ಮತ್ತು ಕುಟುಂಬ ಮೇಲೂ ಉಂಟಾಗಿದೆ. ಜಾಗತೀಕರಣ ಸಂದರ್ಭದಲ್ಲಿ ಮಹಿಳೆಯರ ಪಾತ್ರ, ಅವಳ ಸ್ಥಾನವನ್ನು ಕುಟುಂಬದಲ್ಲಿ ಒಡಮೂಡಿರುವ ವಿನ್ಯಾಸಗಳಿಂದ ಗುರ್ತಿಸಿದ್ದಾರೆ. ಮಾನವರು ಪ್ರೀತಿ, ಸ್ನೇಹ, ವಿಶ್ವಾಸವನ್ನು ಹಂಚಿಕೊಳ್ಳಲು ಕುಟುಂಬವನ್ನು ಬಯಸುತ್ತಿದ್ದರೂ; ಇಂದಿನ ಖಾಸಗೀಕರಣದ ವಲಯದಲ್ಲಿ ಕುಟುಂಬವು ಬಿಡಿ-ಬಿಡಿಯಾಗಿ ಒಡೆದು ಹೋಗಿದೆ. ಬಂಡವಾಳಶಾಹಿ ಸಂದರ್ಭದಲ್ಲಿ ಮಾರುಕಟ್ಟೆಯು ಹೆಣ್ಣನ್ನು ವ್ಯಾಪಾರೀ ದೃಷ್ಟಿಕೋನದಿಂದ ಬಳಸಿಕೊಳ್ಳುತ್ತದೆ. ಕುಟುಂಬದಲ್ಲಿ ಹೆಣ್ಣು ಒಬ್ಬಂಟಿಯಾಗಿದ್ದು ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಳೆ. ಕೇವಲ ಮಾರುಕಟ್ಟೆಯಲ್ಲಿ ಅಷ್ಟೇ ಅಲ್ಲದೇ ವಿವಾಹದ ಸಂದರ್ಭಗಳಲ್ಲಿಯೂ ಹೆಣ್ಣನ್ನು ವ್ಯಾಪಾರೀ ದೃಷ್ಟಿಕೋನದಲ್ಲಿ ನೋಡಲಾಗುತ್ತಿದೆ. ಇಂದಿನ ಜಾಗತೀಕರಣ ವಲಯದಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಸ್ಯೆಗೆ ಒಳಗಾಗಿದ್ದಾರೆ ಎನ್ನುವ ಅಂಶಗಳನ್ನು ಪ್ರಬಂಧದ ಮೂಲಕ ನಿರೂಪಿಸಿದ್ದಾರೆ.

೨. ಲೇಖನಗಳು ಮತ್ತು ಕೃತಿಗಳು

ಜಾಗತೀಕರಣವನ್ನು ಕುರಿತಾಗಿ ಎಲ್ಲಾ ಜ್ಞಾನ ಶಿಸ್ತುಗಳು ತಮ್ಮ ಅಭಿಪ್ರಾಯವನ್ನು ಮಂಡಿಸಿವೆ. ಜಾಗತೀಕರಣದ ಮೂಲ ಧೋರಣೆ ಆರ್ಥಿಕ ಅಭಿವೃದ್ಧಿಯನ್ನು

ಇಟ್ಟುಕೊಂಡಿದ್ದರೂ, ಅದರ ಪರಿಣಾಮ ಕೇವಲ ಆರ್ಥಿಕ ಕ್ಷೇತ್ರ ಮಾತ್ರವಲ್ಲದೇ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ವಲಯಗಳಲ್ಲೂ ಉಂಟು ಮಾಡಿರುವುದನ್ನು ಮುಖ್ಯವಾಗಿ ಗಮನಿಸಬಹುದು. ಮುಖ್ಯವಾಗಿ ಎರಡು ನೆಲೆಗಳಲ್ಲಿ ಜಾಗತೀಕರಣವನ್ನು ಗ್ರಹಿಸಿರುವ ಬಗೆಯನ್ನು ನೋಡುವುದಾದರೆ

ಅ. ಕನ್ನಡ ಸಾಹಿತ್ಯವು ಜಾಗತೀಕರಣವನ್ನು ಗ್ರಹಿಸಿರುವ ಬಗೆ

'ಜಾಗತೀಕರಣ ಮತ್ತು ಕನ್ನಡ' ಎಂಬ ಲೇಖನದಲ್ಲಿ ಅರವಿಂದ ಚೊಕ್ಕಾಡಿಯವರು ಜಾಗತೀಕರಣ ಮತ್ತು ಆಧುನೀಕರಣವನ್ನು ಬೇರೆ–ಬೇರೆ ಪರಿಕಲ್ಪನೆಯಲ್ಲಿಟ್ಟು ಚರ್ಚಿಸಿದ್ದಾರೆ. ಈ ಎರಡರ ತಾತ್ವಿಕ ಆಶಯಗಳು, ಆಯಾಮಗಳು ಭಿನ್ನವಾದವುಗಳು ಮತ್ತು ವಿರುದ್ಧವಾದವುಗಳು. ಆದರೆ ಆಧುನೀಕರಣದೊಂದಿಗೆ ಜಾಗತೀಕರಣವಿದೆ ಎಂದು ಪ್ರತಿಪಾದಿಸುತ್ತಾರೆ. ಆಧುನೀಕರಣ ಮತ್ತು ಜಾಗತೀಕರಣದಿಂದ ಉಂಟಾದ ಮತ್ತು ಉಂಟಾಗುತ್ತಿರುವ ಪರಿಣಾಮಗಳನ್ನು ತೌಲನಿಕವಾಗಿ ಚರ್ಚಿಸುತ್ತಾರೆ. ಆಧುನಿಕತೆಯು ಸಮಾನತೆಯ ಆಶಯವನ್ನು ಇಟ್ಟುಕೊಂಡ ತತ್ವವಾದರೆ, ಜಾಗತೀಕರಣವು ಅಸಮಾನ ಸಮಾಜದ ನಿರ್ಮಾಣದತ್ತ ಸಾಗುವ ತತ್ವವಾಗಿದೆ. ಈ ಹಿನ್ನೆಲೆಯಲ್ಲಿ ಜಾಗತೀಕರಣವು ಕನ್ನಡದ ಮೇಲೆ ಮಾಡಿದ ಪರಿಣಾಮಗಳನ್ನು ಪರಿಶೀಲಿಸಲಾಗಿದೆ. ಇಂಗ್ಲೀಷ್ ಭಾಷೆಯನ್ನು ಜಾಗತೀಕರಣವು ಆರ್ಥಿಕ ಭಾಷೆಯಾಗಿ ಬೆಳೆಸುವುದರ ಮೂಲಕ ಪ್ರಾದೇಶಿಕ ಭಾಷೆಗಳ ಪ್ರಾಮುಖ್ಯತೆ ಕಳೆದುಕೊಳ್ಳುವಂತೆ ಮಾಡಿದೆ. ಜಾಗತೀಕರಣದಿಂದ ಜನಪದ ಕಲೆಗಳು, ಆಟಗಳು, ದೇಸಿಯತೆಯ ಅಂಶಗಳು ಅವಸಾನದತ್ತ ಸಾಗುತ್ತಿರುವ ಅಂಶವನ್ನು ಚರ್ಚಿಸಿದ್ದಾರೆ. ಭಾಷಿಕ ಅಂಶಗಳಿಗೆ ಮಹತ್ವವನ್ನು ನೀಡದೇ ಅದನ್ನು ಕೇವಲ ಆರ್ಥಿಕ ಅಂಶಗಳಿಗಾಗಿ ಭಾಷೆಯನ್ನು ಬಳಕೆ ಮಾಡಲಾಗುತ್ತಿದೆ. ಕೃಷಿರಂಗ, ಕಲೆ, ಭಾಷೆ, ಸಂಸ್ಕೃತಿಯನ್ನು ಜಾಗತೀಕರಣ ತನ್ನ ಮಾರುಕಟ್ಟೆ ನೀತಿಯನ್ನಿಟ್ಟುಕೊಂಡು ಆರ್ಥಿಕ ನೆಲೆಯಲ್ಲಿ ಅವು ವ್ಯವಹರಿಸುವಂತೆ ಮಾಡಲಾಗುತ್ತಿದೆ ಎನ್ನುವ ಅಭಿಪ್ರಾಯವನ್ನು ಮಂಡಿಸಿದ್ದಾರೆ.

'ಜಾಗತೀಕರಣ ಜಾರುಬಂಡೆ' ಎಂಬ ಲೇಖನದಲ್ಲಿ ಬರಗೂರು ರಾಮಚಂದ್ರಪ್ಪ ಅವರು ೨೦ನೇ ಶತಮಾನದ ಮೊದಲ ದಶಕದಲ್ಲಿ ಆಧುನಿಕತೆ ಎನ್ನುವುದು ಹೊಸ ಚರ್ಚೆ, ಚಿಂತನೆ ಮತ್ತು ಚಲನಶೀಲತೆಯನ್ನು ಹುಟ್ಟುಹಾಕುವ ಮೂಲಕ ನೆಲಮುಟ್ಟುವ ಮನೋಧರ್ಮವನ್ನು ರೂಪಿಸಿತು. ಮುಂದುವರೆದು ಕೋಮುವಾದ ಮತ್ತು ಜಾಗತೀಕರಣ ಈ ಎರಡು ಪ್ರಕ್ರಿಯೆಗಳು ದೇಶಕ್ಕೆ ಮಾರಕವಾಗಿ ಪರಿಣಮಿಸಿವೆ ಎಂದು ವಿಶ್ಲೇಷಿಸುತ್ತಾರೆ.

ಮಿಶ್ರ ಆರ್ಥಿಕ ಪದ್ಧತಿಯಲ್ಲಿ ಇದ್ದ ಸ್ವಾತಂತ್ರವನ್ನು ಜಾಗತೀಕರಣದ ಪ್ರಕ್ರಿಯೆಯಿಂದ ಖಾಸಗೀಕರಣ ಶಕ್ತಿಯನ್ನು ಹೊಂದಿರುವ ಬಂಡವಾಳಶಾಹಿಗಳು ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹೇಗೆ ತಮ್ಮ ಪ್ರಭುತ್ವವನ್ನು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನೆಲೆಯೂರುವಂತೆ ಮಾಡಿದವು ಎನ್ನುವುದನ್ನು ತಿಳಿಸುತ್ತಾರೆ. ನೆಲಮೂಲ ಸಂಸ್ಕೃತಿಗೆ ಜಾಗತೀಕರಣ ವಿರುದ್ಧವಾಗಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಜ್ಞಾನದ ಧಿಕ್ಕನ್ನು ನಿಯಂತ್ರಿಸುವಷ್ಟು ಬಲಾಢ್ಯವಾಗಿ ಜಾಗತೀಕರಣವು ಬೆಳೆದುನಿಂತಿದೆ. ಇದಕ್ಕೆ ಪರಿಹಾರವಾಗಿ ಜಾಗತೀಕರಣವನ್ನು ಸೈದ್ಧಾಂತಿಕ ಶಿಸ್ತು, ಸಾಂಸ್ಕೃತಿಕ ಅನನ್ಯತೆ ಮತ್ತು ಸಾಮಾಜಿಕ ಕಾಳಜಿಯಿಂದ ಪರ್ಯಾಯ ಚಿಂತನೆಯನ್ನು ಕಟ್ಟಬಹುದು ಎಂದಿದ್ದಾರೆ.

‘ಜಾಗತೀಕರಣ ಪರ್ಯಾಯ ಸಾಧ್ಯತೆಗಳು : ಸಾಹಿತ್ಯಿಕ ಆಯಾಮ’ ಎನ್ನುವ ಲೇಖನದಲ್ಲಿ ಕೇಶವಶರ್ಮ ಅವರು ಜಾಗತೀಕರಣ ಪ್ರಾರಂಭವಾಗುವ ಹಂತದಿಂದಲೇ ಸಾಹಿತ್ಯಿಕ ಆಯಾಮಗಳ ಪ್ರಶ್ನೆಗಳು ಪ್ರಾರಂಭವಾಗಬೇಕು ಎನ್ನುತ್ತಾರೆ. ಇವರು ಜಾಗತೀಕರಣದ ನೆರಳು ನೇರವಾಗಿ ಸಾಹಿತ್ಯ ವಲಯದ ಮೇಲೆ ಬೀಳದೇ ಇರುವುದರಿಂದ; ಅದರ ನಿಜವಾದ ಪರಿಣಾಮ ಸಾಹಿತ್ಯದ ಮೇಲೆ ಬಿದ್ದಿಲ್ಲ ಎನ್ನುತ್ತಾರೆ. ಆದರೆ ಈ ಮಾತನ್ನು ಒಪ್ಪುವುದು ಕಷ್ಟವಾಗುತ್ತದೆ. ಏಕೆಂದರೆ ಸಾಹಿತ್ಯವು ಸಮಾಜದಲ್ಲಿನ ಸೂಕ್ಷ್ಮ ಸಂಗತಿಗಳನ್ನು ತನ್ನ ವಸ್ತುವನ್ನಾಗಿ ಮಾಡಿಕೊಂಡಿರುವಾಗ ಜಾಗತೀಕರಣದ ಪ್ರಭಾವ ಸಾಹಿತ್ಯದ ಮೇಲೆ ಇರುವುದನ್ನು ಅನೇಕ ಉದಾಹರಣೆಗಳ ಮೂಲಕ ಕಂಡುಕೊಳ್ಳಬಹುದು. ಜಾಗತೀಕರಣವು ‘ಜಾಗತಿಕ ಜ್ಞಾನ ಪರಂಪರೆಯ ವಿಚಾರಧಾರೆಯನ್ನು ಹೆಚ್ಚಾಗಿ ಬಳಕೆಗೆ ತಂದು ದೇಶಿಯ ಜ್ಞಾನ ಪರಂಪರೆಯನ್ನು ನಾಶಗೊಳಿಸಿದೆ. ಕನ್ನಡ ಅಥವಾ ಯಾವುದೇ ಸಾಹಿತ್ಯದ ಮುದ್ರಣ ಸಂಸ್ಕೃತಿಯ ಮೇಲೆ ಜಾಗತೀಕರಣದ ಪ್ರಭಾವ ಅಗಾಧ ಪ್ರಮಾಣದಲ್ಲಿದೆ. ಯಾವ ಪುಸ್ತಕಗಳಿಗೆ ಮುದ್ರಣವನ್ನು ಕಲ್ಪಿಸಬೇಕು ಎಂಬುದನ್ನು ಜಾಗತೀಕರಣದ ಮಾರುಕಟ್ಟೆಯು ನಿರ್ಧರಿಸುವಷ್ಟರ ಮಟ್ಟಿಗೆ ಸಾಹಿತ್ಯಿಕ ವಲಯದ ಮೇಲೆ ಪರಿಣಾಮವನ್ನು ಬೀರಿದೆ ಎಂದು ವಿಶ್ಲೇಷಿಸಿದ್ದಾರೆ.

‘ಸಂಸ್ಕೃತಿಯ ನುಡಿಗಟ್ಟಿನ ಸಮಸ್ಯೆ : ಜಾಗತೀಕರಣದ ಚರ್ಚೆಯಲ್ಲಿ’ ಎಂಬ ರಹಮತ್ ತರೀಕೆರೆ ಅವರ ಲೇಖನದಲ್ಲಿ ಜಾಗತೀಕರಣವು ಎರಡು ನೆಲೆಯಲ್ಲಿ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿದೆ ಎಂದು ವಿಶ್ಲೇಷಿಸುತ್ತಾರೆ.

೧. ಜಾಗತೀಕರಣ ವಿರೋಧಿ ಸಂಸ್ಕೃತಿ ಚಿಂತನೆ

೨. ಜಾಗತೀಕರಣ ಪರವಾದ ಸಂಸ್ಕೃತಿ ಚಿಂತನೆ

ಜಾಗತೀಕರಣವು ಮುಖ್ಯವಾಗಿ ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆ ಆಗಿರುವುದರಿಂದ ಆ ಕುರಿತ ಸಮಸ್ಯೆಯನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ಸಂಸ್ಕೃತಿ ನಾಶ ಎಂಬ ಅಂಶವನ್ನು ವಿದ್ವಾಂಸರು ತರುವ ಉದ್ದೇಶವನ್ನು ಕುರಿತು ಪ್ರಶ್ನೆ ಮಾಡಿದ್ದಾರೆ. ಜಾಗತೀಕರಣ ಮತ್ತು ಸಂಸ್ಕೃತಿಯನ್ನು ಕುರಿತ ತಾತ್ವಿಕ ತೊಡಕುಗಳನ್ನು ಚರ್ಚಿಸುತ್ತಾರೆ. ಜಾಗತೀಕರಣದ ವಿರುದ್ಧ ಸಂಸ್ಕೃತಿ ನಾಶ ಎಂಬ ಪರಿಕಲ್ಪನೆಯನ್ನು ಲೇಖಕರು ಏಕೆ ಬಳಸುತ್ತಿದ್ದಾರೆ ಎಂಬುದಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ವಸಾಹತುಶಾಹಿಯ ವಿರೋಧಿ ಚಳುವಳಿಯಲ್ಲಿ ಇಂತಹ ಸಂಸ್ಕೃತಿಯ ಪ್ರಶ್ನೆಯನ್ನು ತಂತ್ರವಾಗಿ ಬಳಸಿದಂತೆ ಜಾಗತೀಕರಣವನ್ನು ಪ್ರತಿರೋಧಿಸುವ ಸವಾಲಾಗಿ ಈ ಪರಿಭಾಷೆಯನ್ನು ಬಳಸಲಾಗುತ್ತಿದೆ ಎಂದು ಹಲವು ಉದಾಹರಣೆಗಳ ಮೂಲಕ ತಿಳಿಸುತ್ತಾರೆ. ಜಾಗತೀಕರಣದ ಚರ್ಚೆಯಲ್ಲಿ ಪ್ರಭುತ್ವವೇ ಹೇಗೆ ದ್ವಂದ್ವ ಸ್ಥಿತಿಯಲ್ಲಿದೆ ಎಂಬುದನ್ನು ಸಂಸ್ಕೃತಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಜಾಗತೀಕರಣಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ ಎನ್ನುತ್ತಾರೆ.

'ಜಾಗತಿಕ ಗ್ರಾಮಕ್ಕೆ ಗೌಡ ಯಾರು?' ಎಂಬ ಲೇಖನದಲ್ಲಿ ಜಾಗತೀಕರಣದ ಸಂದರ್ಭದಲ್ಲಿ ಅಸಹಾಯಕ ಸ್ಥಿತಿಯಲ್ಲಿರುವ ಸಂಸ್ಕೃತಿಗಳು ಜಾಗತೀಕರಣದ ಸವಾಲನ್ನು ಸ್ವೀಕರಿಸುವ ಬದಲು ಅದರ ವಿರುದ್ಧ ಸೋಲನ್ನು ಒಪ್ಪಿಕೊಳ್ಳುತ್ತಿವೆ ಎನ್ನುತ್ತಾರೆ. ಈ ಪ್ರಕ್ರಿಯೆ ಆರಂಭವಾಗುವುದು ಮೊದಲಿಗೆ ದಲಿತರಲ್ಲಿಯೇ ಎಂದು ಜಾಗತೀಕರಣ ಪ್ರಕ್ರಿಯೆಗೆ ದಲಿತ ಹಿನ್ನೆಲೆಯಲ್ಲಿ ಚಿಂತನೆಯನ್ನು ನಡೆಸುತ್ತಾರೆ. ಜಾಗತೀಕರಣದಿಂದ ದಲಿತರು ಪ್ರಗತಿ ಕಾಣಲು ಸಾಧ್ಯ ಎಂದು ವಾದಿಸುವವರ ಮಾತಿಗೆ ಪ್ರತಿಕ್ರಿಯೆಯಾಗಿ ಮೇಲಿನ ಮಾತನ್ನು ತಿಳಿಸುತ್ತಾರೆ. ಈ ಮಾತಿಗೆ ಸಾಹಿತ್ಯಿಕ ಆಯಾಮವನ್ನು ಕನ್ನಡದ ಕಾವ್ಯಗಳನ್ನಿಟ್ಟುಕೊಂಡು ಚರ್ಚಿಸುತ್ತಾರೆ. ಪ್ರಭುತ್ವದ ವಿಜಯ, ಯುದ್ಧ, ದಾಳಿಗಳನ್ನೇ ಮುಖ್ಯವಾಗಿ ಇಟ್ಟುಕೊಂಡು ಹೇಗೆ ಕೆಲಸ ಮಾಡುತ್ತದೆ ಮತ್ತು ಅದನ್ನೇ ಸಾಹಿತ್ಯಿಕ ವಲಯದಲ್ಲಿ ತರುತ್ತದೆ ಎಂಬುದನ್ನು ವಿಕ್ರಮಾರ್ಜುನ ವಿಜಯ, ಸಾಹಸಭೀಮವಿಜಯ ಕಾವ್ಯಗಳ ಮೂಲಕ ಚರ್ಚಿಸುತ್ತಾರೆ. ಆದರೆ ಅಪ್ಪಿತಪ್ಪಿಯೂ ಏಕಲವ್ಯ ವಿಜಯ, ಕರ್ಣವಿಜಯವನ್ನು ಬರೆಯಲಿಲ್ಲ. ಏಕೆಂದರೆ ಅಪಜಯ ಹೊಂದಿರುವವರು ಬಹುಸಂಖ್ಯಾತ ದಲಿತರು, ಶೂದ್ರರು, ಶೋಷಿತರು. ಪ್ರಭುತ್ವಕ್ಕೆ ಪ್ರತಿರೋಧವಾಗಿಯೇ ಮಂಟೇಸ್ವಾಮಿ ಕಾವ್ಯ, ಜುಂಜಪ್ಪ, ಮಾದೇಶ್ವರ ಕಾವ್ಯಗಳು ಹಾಗೆಯೇ ಸಂಗೊಳ್ಳಿ ರಾಯಣ್ಣ, ಸರ್ಜಪ್ಪನಾಯಕ ಹೆಸರಿನಲ್ಲಿ ಲಾವಣಿಗಳು ಹುಟ್ಟಿಕೊಂಡವು. ಇಲ್ಲಿ ಇವರು ಒಂದು

ಅಂಶವನ್ನು ಮುಖ್ಯವಾಗಿ ಗುರುತಿಸಿದ್ದಾರೆ. 'ಅನಕ್ಷರಸ್ಥ ದಲಿತರು ಪರಂಪರೆಯ ಹಾದಿಯತ್ತ ನಡೆದರೆ, ಅಕ್ಷರಸ್ಥ ದಲಿತರು ಜಾಗತೀಕರಣದ ಕಡೆ ಒಲವನ್ನು ತೋರುತ್ತಿದ್ದಾರೆ' ಎನ್ನುತ್ತಾರೆ.

'ಜಾಗತೀಕರಣ ಕನ್ನಡ ಸಂಸ್ಕೃತಿಯ ವಿವೇಕ' ಎಂಬ ಲೇಖನದಲ್ಲಿ ಅಮರೇಶ ನುಗಡೋಣಿ ಅವರು ಖಲೀಲ್ ಗಿಬ್ರಾನ್ ಅವರ ಮಾತಿನೊಂದಿಗೆ ಅವರ ಮಾತೊಂದರ ಮೂಲಕ ಜಾಗತೀಕರಣವನ್ನು ಪ್ರವೇಶಿಸುತ್ತಾರೆ. ಜಾಗತೀಕರಣದಿಂದ ಸಮಾಜವು ಬದಲಾವಣೆಯನ್ನು ಪಡೆಯುತ್ತಿದೆ. ಭಾರತದಂತಹ ರಾಷ್ಟ್ರಗಳಲ್ಲಿ ಮೂಲಕಸುಬಾದ ವ್ಯವಸಾಯ ಇಂದು ದಿವಾಳಿಯಾಗಿ ಹೋಗಿದೆ. ಕಾರ್ಮಿಕರು ಕೆಲಸವನ್ನು ಕಳೆದುಕೊಳ್ಳುತ್ತಿರುವ ಸನ್ನಿವೇಶ ಎದುರಾಗಿದೆ. ಜಾಗತೀಕರಣ ಮುಖ್ಯವಾಗಿ ೨ ಅಂಶಗಳನ್ನು ವ್ಯವಸ್ಥಿತವಾಗಿ ನಿರಾಕರಿಸುತ್ತದೆ.

೧. ಸಾಂಸ್ಕೃತಿಕ ಸಂಪತ್ತು (ದುಡಿಮೆ)
೨. ಪ್ರತಿಭೆ (ಸೃಜನಶೀಲ ಉತ್ಪಾದನೆ)

ಅಂದರೆ ಜಾಗತೀಕರಣದ ಅರ್ಥವ್ಯಾಪ್ತಿಯನ್ನು ಈ ಎರಡು ನೆಲೆಗಳನ್ನು ನಿರಾಕರಿಸುವುದರ ಮೂಲಕ ಸುಲಭವಾಗಿ ಅದು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಿದೆ. ಜ್ಞಾನ ಕ್ಷೇತ್ರಗಳು ಇಂದು ತಮ್ಮ ಅರ್ಥವ್ಯಾಪ್ತಿಯನ್ನು ಕಳೆದುಕೊಂಡು ವಿಜ್ಞಾನ ಮತ್ತು ತಂತ್ರಜ್ಞಾನಗಳು ಸೃಷ್ಟಿಸುವ ಜ್ಞಾನಕ್ಕೆ ಮಾತ್ರ ಹೆಚ್ಚಿನ ಮಹತ್ವ ಬಂದಿರುವುದರಿಂದ ಮಾನವಿಕಗಳು ಸೊರಗತೊಡಗಿವೆ. ಗಾಂಧೀಜಿ, ವಚನಕಾರರ ಮೂಲಕ ಸಮಾಜದಲ್ಲಿ ಆಗಬೇಕಾಗಿರುವ ಆರ್ಥಿಕ ನಿಲುವನ್ನು ಕುರಿತು ತಿಳಿಸಿದ್ದಾರೆ.

ತಾತ್ವಿಕತೆ :

ಜಾಗತೀಕರಣವನ್ನು ಕನ್ನಡ ಸಾಹಿತ್ಯವು ಗ್ರಹಿಸಿರುವ ಬಗೆಯನ್ನು ಮೇಲಿನ ಲೇಖನಗಳ ಮೂಲಕ ತಿಳಿಯಲಾಗಿದೆ. ಅಲ್ಲದೇ ಇದು ಸಮಾಜದ ಜನಜೀವನದ ಮೇಲೆ ಯಾವ ರೀತಿಯಾದ ಪರಿಣಾಮವನ್ನು ಬೀರಿದೆ ಎನ್ನುವುದನ್ನು ಅರಿಯಲಾಗಿದೆ. ಆರ್ಥಿಕ ಅಭಿವೃದ್ಧಿಯ ಜಪವನ್ನಿಟ್ಟುಕೊಂಡು ಇಂದು ಕೆಲವೇ ಜನರಿಗೆ ಉಪಯುಕ್ತವಾಗಿರುವ ಅನೇಕ ಕೆಲಸ-ಕಾರ್ಯಗಳನ್ನು, ಯೋಜನೆಗಳನ್ನು ಹಮ್ಮಿಕೊಂಡು ಬಹುಜನರ ಹಿತಾಸಕ್ತಿಯನ್ನು ಕಡೆಗಣಿಸಲಾಗುತ್ತಿದೆ. ಸಮಾಜದಲ್ಲಿನ ತಳವರ್ಗದ ದಲಿತರ, ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ದಾಳಿಯನ್ನು ಪರೋಕ್ಷವಾಗಿ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವು ಜಾಗತೀಕರಣವನ್ನು ನೋಡಿರುವ ತಾತ್ವಿಕತೆಯನ್ನು ಹೀಗೆ ಗುರುತಿಸಲಾಗಿದೆ.

೧. ಕನ್ನಡ ಭಾಷೆ ಸೇರಿದಂತೆ ಇನ್ನಿತರೆ ಪ್ರಾದೇಶಿಕ ಭಾಷೆಗಳನ್ನು ಜಾಗತೀಕರಣವು ಇಂಗ್ಲೀಷ್ ಭಾಷೆಯನ್ನು ಆರ್ಥಿಕ ಭಾಷೆಯನ್ನಾಗಿ ಬಳಕೆ ಮಾಡಿಕೊಳ್ಳುವ ಮೂಲಕ ಪ್ರಾದೇಶಿಕ ಭಾಷೆಗಳ ನಾಶಕ್ಕೆ ಕಾರಣವಾಗಿದೆ.

೨. ಭಾಷೆ ಕೇವಲ ಸಂವಹನ ಸಾಧನ ಮಾತ್ರವಲ್ಲದೇ ಒಂದು ಜನಾಂಗದ/ಸಂಸ್ಕೃತಿಯ ಆಶಯಗಳನ್ನು, ಅದರ ಧೋರಣೆಗಳನ್ನು ಪ್ರತಿನಿಧಿಸುತ್ತಿರುತ್ತದೆ. ಆದರೆ ಜಾಗತೀಕರಣದಿಂದ ಇಂದು ಭಾಷೆ ಕೇವಲ ವ್ಯವಹಾರಕ್ಕಾಗಿ, ಆರ್ಥಿಕ ಉದ್ದೇಶಗಳಿಗಾಗಿ ಮಾತ್ರ ಬಳಕೆಯಾಗುತ್ತಿದೆ.

೩. ಕೃಷಿಯೇ ಭಾರತದ ಜೀವಾಳವಾಗಿದೆ. ಜಾಗತೀಕರಣದ ಪರಿಣಾಮ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಕೃಷಿಯನ್ನು ಕಡೆಗಣಿಸುವಂತೆ ಮಾಡಿ, ಅದರ ಜಾಗದಲ್ಲಿ ಬಂಡವಾಳಶಾಹಿಗಳ ಕೈಗಾರಿಕೆಗಳು ಎದ್ದುನಿಲ್ಲಲು ಸಹಾಯಕವಾಗುವಂತೆ ಕೆಲಸ ಮಾಡುತ್ತಿದೆ.

೪. ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದ ಚಿಂತನೆಯನ್ನು ಹೊಂದಿರುವ ಜಾಗತೀಕರಣವು ಸಮಾನತೆಯನ್ನು ನೆಲೆಸಲು ಬೇಕಾದ ವಾತಾವರಣವನ್ನು ಸೃಷ್ಟಿಸದೇ, ಅದಕ್ಕೆ ಪ್ರತಿರೋಧವಾಗಿ ಅಸಮಾನ ಸಮಾಜವನ್ನು ಸೃಷ್ಟಿಸುವ, ಬಂಡವಾಳ ಪ್ರಧಾನ ಮಾರುಕಟ್ಟೆ ಕೇಂದ್ರಿತ ಸಮಾಜವನ್ನು ಸೃಷ್ಟಿಸುತ್ತಿದೆ.

೫. ಜಾಗತೀಕರಣದಿಂದಾಗಿ ಇಂದು ನೆಲಮೂಲ ಸಂಸ್ಕೃತಿಗಳಾದ ಜನಪದರು, ಬುಡಕಟ್ಟುಗಳು, ದಲಿತರು, ತಳವರ್ಗಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಳೆದುಕೊಳ್ಳುತ್ತಿವೆ. ಪ್ರಭುತ್ವದ ನೆರಳು ಈ ಜಾಗತೀಕರಣದ ಹಿಂದೆ ಕೆಲಸ ಮಾಡುತ್ತಿರುವುದರಿಂದ ನೆಲಮೂಲ/ದೇಸಿ ಸಂಸ್ಕೃತಿಗಳು ಅಳಿದು ಅವುಗಳ ಸ್ಥಾನದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಗಳು ಬೇರನ್ನು ಬಿಟ್ಟಿವೆ.

೬. 'ಜ್ಞಾನ' ಎಂಬ ಪರಿಕಲ್ಪನೆಗೆ ಜಾಗತೀಕರಣದಿಂದ ಇಂದು ಸೀಮಿತ ಅರ್ಥ ಸಿಗುವಂತಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಬರುವ ಜ್ಞಾನ ಮಾತ್ರ ಸತ್ಯ ಎನ್ನುವಂತೆ ಮಾಡಲಾಗಿದೆ. ದೇಸಿ ಜ್ಞಾನ ಪರಂಪರೆಯನ್ನು ಅಳಿಸಿ, ಅದರ ಜಾಗದಲ್ಲಿ ಜಾಗತಿಕ ಜ್ಞಾನ ಪರಂಪರೆಯನ್ನು ಸೃಷ್ಟಿಸಲಾಗುತ್ತಿದೆ.

೭. ಜಾಗತೀಕರಣದ ನೆರಳು ಕನ್ನಡ ಸಾಹಿತ್ಯದ ಮೇಲೆ ಸಂಪೂರ್ಣವಾಗಿ ಬಿದ್ದಿಲ್ಲ ಎನ್ನುವ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಅದರ ಛಾಯೆಯನ್ನು ಕನ್ನಡ ಸಾಹಿತ್ಯದ

ಸೃಜನಶೀಲ ಮತ್ತು ಸೃಜನೇತರ ಕೃತಿಗಳಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಣಲು ಸಾಧ್ಯವಿದೆ. ಉದಾಹರಣೆಗೆ ಅಮರೇಶ ನುಗಡೋಣಿ, ಮಹಾಂತೇಶ ನವಲಕಲ್, ವಿವೇಕ ಶಾನಭಾಗ, ವಸುಧೇಂದ್ರ ಮುಂತಾದವರ ಕತೆಗಳು.

೮. ಜಾಗತೀಕರಣವು ಕೃಷಿ, ಕಾರ್ಮಿಕರ ದುಡಿಮೆಯ ಶಕ್ತಿಯನ್ನು ಹಾಗೂ ಅವರ ಸೃಜನಶೀಲ ಪ್ರತಿಭೆಯನ್ನು ಕಡೆಗಣಿಸುತ್ತಿದೆ.

ಆ. ಮಾನವಿಕಗಳು ಜಾಗತೀಕರಣವನ್ನು ನೋಡಿರುವ ಬಗೆ

'ಅಸಮಾನತೆಯ ಜಾಗತೀಕರಣ' ಕೃತಿಯಲ್ಲಿ ೯೦ರ ದಶಕದಲ್ಲಿ ಅಧಿಕೃತ ರೂಪ ತಳೆದ ಜಾಗತೀಕರಣ ನೀತಿಯು W.T.O ಮತ್ತು GATTನ ಒಪ್ಪಂದದ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೇರಲಾದ ಹೊಸ ಆರ್ಥಿಕ ನೀತಿಗಳನ್ನು ಕುರಿತು ಭಾರತದ ಮೇಲೆ ಉಂಟಾಗಿರುವ ದುಷ್ಪರಿಣಾಮಗಳನ್ನು ಚರ್ಚಿಸಿದ್ದಾರೆ. ಜಾಗತೀಕರಣವು ಭಾರತದಲ್ಲಿ ವರ್ಗಬೇಧವನ್ನು ಹೆಚ್ಚು ಮಾಡುತ್ತಿರುವ ಹೊಸ ಆಯಾಮಗಳನ್ನು ಉದಾಹರಣೆಗಳ ಮೂಲಕ ತಿಳಿಸುತ್ತಾರೆ. ರೈತರ ಆತ್ಮಹತ್ಯೆ, ಕೃಷಿಗೆ ಬೆಲೆ ಕುಸಿತ ಇನ್ನೂ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ. ಅರ್ಥಶಾಸ್ತ್ರಜ್ಞರು ಇಂದು ಆರ್ಥಿಕ ನೀತಿಯನ್ನು ಹೇಗೆ ಮಂಡಿಸುತ್ತಿದ್ದಾರೆ ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. 'ಆರ್ಥಿಕ ಅಭಿವೃದ್ಧಿ ಎನ್ನುವುದನ್ನು ಇಂದಿನ ಅರ್ಥಶಾಸ್ತ್ರವು ಜನರ ಬದುಕಿಗೂ ಆರ್ಥಿಕ ನೀತಿಗಳೂ ಯಾವುದೇ ಸಂಬಂಧವಿಲ್ಲ' ಎನ್ನುವಂತೆ ಮಾಡಿದೆ ಎಂದಿದ್ದಾರೆ.

ಜಾಗತೀಕರಣ ತಂದೊಡ್ಡುತ್ತಿರುವ ಅಸಮಾನತೆಗಳು

- ಜಾಗತೀಕರಣ ಮಾರುಕಟ್ಟೆಯ ಅರ್ಥವ್ಯವಸ್ಥೆಯಿಂದ ಆಗುತ್ತಿರುವ ಮೂಲಭೂತ ಪರಿಣಾಮವೆಂದರೆ ಅರ್ಥವ್ಯವಸ್ಥೆಗೂ, ಜನಸಾಮಾನ್ಯರ ಬದುಕಿಗೂ ನಡುವೆ ಯಾವುದೇ ಸಂಬಂಧವನ್ನು ಕಲ್ಪಿಸದೇ ಪ್ರತ್ಯೇಕಗೊಳಿಸಿರುವುದು.
- ಸೆನ್ಸೆಕ್ಸ್ ಎನ್ನುವುದು ಜನರು ಕಷ್ಟದಲ್ಲಿದ್ದಾಗ ಅದು ಗರಿಷ್ಠ ಮಟ್ಟದಲ್ಲಿರುತ್ತದೆ. ಜನರು ಸಂತೋಷದಿಂದ ಇದ್ದಾಗ ಅದು ಕನಿಷ್ಟ ಮಟ್ಟವನ್ನು ತಲುಪಿರುತ್ತದೆ. ಕಾರಣ ಸೆನ್ಸೆಕ್ಸ್ ನಿರ್ಧಾರವಾಗುವುದು ದೇಶದ ಜನಸಾಮಾನ್ಯರ ದೃಷ್ಟಿಯಿಂದ ಅಲ್ಲ, ಅದು ಬಂಡವಾಳಶಾಹಿ ಶ್ರೀಮಂತರ ಆರ್ಥಿಕ ಕುಸಿತದಿಂದ.
- ಜಾಗತೀಕರಣದ ಪ್ರಭಾವದಲ್ಲಿ ಮಾಧ್ಯಮಗಳ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ಈ ಮಾಧ್ಯಮಗಳು ಯಾರ ಪರವಾಗಿ ನಿಂತು ಕೆಲಸ ಮಾಡುತ್ತವೆ ಎನ್ನುವುದು ಬಹಳ ಮುಖ್ಯವಾಗುತ್ತದೆ.

- ಷೇರುಮಾರುಕಟ್ಟೆಯ ವಿಚಾರದಲ್ಲಿ ೧೨೦ಕೋಟಿ ಭಾರತೀಯರಲ್ಲಿ ೧.೧೫ರಷ್ಟು ಜನರು ಮಾತ್ರ ಹೂಡಿಕೆಯನ್ನು ಮಾಡಿದ್ದಾರೆ. ಆದರೆ ಷೇರುಮಾರುಕಟ್ಟೆ ಕುಸಿತ ಕಂಡಾಗ ಪ್ರಭುತ್ವ ಸ್ಪಂದಿಸುವ ಧೋರಣೆಗೂ; ಅದೇ ರೈತರಿಗೆ ಮಾರುಕಟ್ಟೆ ಬೆಲೆ ಸಿಗಲಿಲ್ಲ ಎಂಬ ಕಾರಣಕ್ಕೆ ಆತ್ಯಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಪ್ರಭುತ್ವವು ಸ್ಪಂದಿಸುವ ಧೋರಣೆಗೂ ಅಜಗಜಾಂತರ ವ್ಯತ್ಯಾಸವಿದೆ.
- ಬಹುರಾಷ್ಟ್ರೀಯ ಕಂಪೆನಿಗಳು/ಕಾರ್ಪೋರೇಷನ್‌ಗಳ ಲಾಭಕ್ಕಾಗಿ ಜಗತ್ತಿನಾದ್ಯಂತ ಸಣ್ಣರೈತರ ವಿನಾಶವನ್ನು ಮಾಡುತ್ತಿವೆ.
- ಈ ಎಲ್ಲಾ ಜಾಗತೀಕರಣದ ಪರಿಣಾಮಗಳಿಗೂ ಕೇವಲ W.H.O, ವಿಶ್ವಬ್ಯಾಂಕ್, I.M.F. ಸಂಸ್ಥೆಗಳ ಪಾತ್ರದ ಜೊತೆಯಲ್ಲಿ ಅದನ್ನು ಒಪ್ಪಿಕೊಂಡು ನಿರಂತರವಾಗಿ ಜನರ ಮೇಲೆ ಹೇರಿಕೊಂಡು ಬರುತ್ತಿರುವ ಸರ್ಕಾರದ ಪಾತ್ರವು ಅಷ್ಟೇ ದೊಡ್ಡದಾಗಿದೆ.

'ಸಾಂಸ್ಕೃತಿಕ ಜಾಗತೀಕರಣ ಹಾಗೂ ಪ್ರತಿರೋಧ' ಎನ್ನುವ ಲೇಖನವು ಜಾಗತೀಕರಣವನ್ನು ಕುರಿತಂತೆ ಇದರ ಭರಾಟೆಯಲ್ಲಿ ಸಾಂಸ್ಕೃತಿಕ ಅಂಶಗಳೂ ಕೂಡ ಕೊಚ್ಚಿಹೋಗುವ ಇಲ್ಲವೇ ಅಮೂಲಾಗ್ರವಾಗಿ ಬದಲಾವಣೆಯನ್ನು ಹೊಂದುವ ಅಪಾಯವನ್ನು ಚರ್ಚಿಸುತ್ತಾರೆ. ಈ ಅಪಾಯದ ನಡುವೆಯೇ ತನ್ನತನವನ್ನು ಕಾಪಾಡುವ ಕಾಳಜಿಯು ಬಹುತೇಕ ರಾಷ್ಟ್ರಗಳಲ್ಲಿ ಕಾಡುತ್ತಿದೆ. ಜಾಗತೀಕರಣ ಪ್ರಧಾನವಾಗಿ ಆರ್ಥಿಕವಾದ ಪ್ರಕ್ರಿಯೆಯಾಗಿ ಗುರುತಿಸಿಕೊಂಡರೂ ಆನುಷಂಗಿಕವಾಗಿ ಆ ಸಮುದಾಯದ ಸಾಂಸ್ಕೃತಿಕ ಕಾಳಜಿಗಳನ್ನು ಬಾಹ್ಯ ಒತ್ತಡದ ಮೂಲಕ ಪ್ರಭಾವಿಸುವ ಅಂಶವಾಗಿಯೂ ಕೆಲಸ ಮಾಡುತ್ತಿದೆ.

ಈ ರೀತಿಯ ಸಾಂಸ್ಕೃತಿಕ ಅಂಶಗಳ ಮೇಲೆ ಪ್ರಭಾವವನ್ನು ಬೀರುತ್ತಿರುವ ಸಾಂಸ್ಕೃತಿಕ ಜಾಗತೀಕರಣಕ್ಕೆ ಪರ್ಯಾಯಗಳು, ಪ್ರತಿರೋಧಗಳು ಇಂದು ಹೆಚ್ಚಾಗುತ್ತಿವೆ. ಜಾಗತೀಕರಣವನ್ನು ಪ್ರತಿರೋಧಿಸುವ ಅಂಶಗಳೆಂದರೆ

೧. ಸ್ವದೇಶೀ/ದೇಸಿಯ ಅಸ್ಮಿತೆಯನ್ನು ಪರೋಕ್ಷವಾಗಿ ಜಾಗತೀಕರಣಕ್ಕೆ ಪ್ರತಿರೋಧವಾಗಿ ಒಡ್ಡುವುದು.

೨. ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಅಂಶವನ್ನು ಜಾಗೃತಗೊಳಿಸುವ ಮೂಲಕ.

೩. ಪ್ರಭುತ್ವ ಶಕ್ತಿ ಮತ್ತು ಅಧಿಕಾರವನ್ನು ಸಂಚಯಗೊಳಿಸಿ ಸಾಂಸ್ಥಿಕವಾಗಿಯೇ ಪ್ರತಿರೋಧಿಸುವುದು.

'ಜಾಗತೀಕರಣ : ಒಂದು ಸವಾಲು, ಒಂದು ಅವಕಾಶ' ಲೇಖನದಲ್ಲಿ ಯುವಜನತೆಯು ಜಾಗತೀಕರಣ ಬಗ್ಗೆ ಸಹಾನುಭೂತಿ ನಿಲುವನ್ನು ತಳೆದಿದ್ದಾರೆ ಎನ್ನಲಾಗಿದೆ. ಸಮಾಜವಾದಿ ಚಿಂತಕ ಪ್ರೊ. ಲಿಸ್ಲಿ ಸ್ಕ್ಲೇರ್ ಅವರು ಜಾಗತೀಕರಣವನ್ನು ಕೇವಲ ಒಂದು ನೆಲೆಯಿಂದ ಅಂದರೆ ಬಂಡವಾಳಶಾಹಿ ನೆಲೆಯಿಂದ ಮಾತ್ರ ನೋಡಲಾಗುತ್ತಿದೆ. ಅದಕ್ಕೆ ಬಂಡವಾಳಶಾಹಿ ಆರ್ಥಿಕ ನೆಲೆಯನ್ನು ಬಿಟ್ಟು ಸಾರ್ವತ್ರಿಕ ಜಾಗತೀಕರಣಗಳು ಬಹಳಷ್ಟಿವೆ ಎಂದು ಜಾಗತೀಕರಣದ ಹರವನ್ನು ವಿಸ್ತರಿಸುತ್ತಾರೆ. ಜಾಗತೀಕರಣವನ್ನು ಇವರು ಕಾರ್ಲ್‌ಮಾರ್ಕ್ಸ್ ಅವರು ಕಾರ್ಮಿಕ ಸಂಘಟನೆಯಿಂದಲೇ ಕರೆ ನೀಡಿದ್ದರು ಎಂದು ತಿಳಿಸಿದ್ದಾರೆ. ಜಾಗತೀಕರಣವು ಪ್ರಾದೇಶಿಕತೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮಾನವ ಹಕ್ಕುಗಳನ್ನು ರಕ್ಷಣೆ ಮಾಡುವ ನೆಪದಲ್ಲಿ ಅಲ್ಲಿನ ಸಾರ್ವಭೌಮತ್ವವನ್ನು ದುರ್ಬಲಗೊಳಿಸುತ್ತದೆ. ಇವರ ಲೇಖನದಲ್ಲಿ ಮುಖ್ಯವಾಗಿ ಜಾಗತೀಕರಣದ ಬಗ್ಗೆ ವೈರುಧ್ಯಗಳಿದ್ದರೂ; ಭಾರತವು ಸಹ ಇದೇ ಬಗೆಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಉದಾಹರಣೆ ಮೂಲಕ ತಿಳಿಸುತ್ತಾರೆ. ವಿದೇಶಿ ಕಂಪೆನಿಗಳು ಜಾಗತೀಕರಣದ ಮೂಲಕ ಬಂಡವಾಳ ಹೂಡಿ, ಆ ಮೂಲಕ ಬರುವ ಲಾಭವನ್ನು ತಮ್ಮ ದೇಶಗಳಿಗೆ ರವಾನಿಸುತ್ತವೆ ಎಂಬ ಅಭಿಪ್ರಾಯವನ್ನು ಕುರಿತಂತೆ ಭಾರತವು ಸಹ ಇದೇ ಪ್ರಕ್ರಿಯೆಯನ್ನು ವಿದೇಶದಲ್ಲಿ ಮಾಡಲಾಗುತ್ತಿದೆ ಎಂಬ ಅಂಶವನ್ನು ತಿಳಿಸುತ್ತಾರೆ.

'ಜಾಗತೀಕರಣದ ಇತ್ತೀಚಿನ ಆಯಾಮಗಳು' ಎಂಬ ಲೇಖನದಲ್ಲಿ ಜಾಗತಿಕ ಮಟ್ಟದಲ್ಲಿ ತೀವ್ರಗೊಳ್ಳುತ್ತಿರುವ ಸಾಮಾಜಿಕ ಸಂಬಂಧಗಳು ಮತ್ತು ಬೆಳವಣಿಗೆಯ ಕಾರಣದಿಂದ ಸ್ಥಳೀಯ ಸಂದರ್ಭಗಳು, ಘಟನೆ ಯಾವುದೋ ಮೂಲೆಯಲ್ಲಿ ನಡೆಯುವ ಘಟನೆಗಳಿಂದ ದಟ್ಟವಾದ ಪ್ರಭಾವಕ್ಕೆ ಒಳಗಾಗುತ್ತಿರುವ ವಿದ್ಯಮಾನವಾಗಿ ಜಾಗತೀಕರಣದ ಪ್ರಕ್ರಿಯೆ ಕಂಡುಬರುತ್ತಿದೆ. ಜಾಗತೀಕರಣವು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಮಾಡಿರುವ ಮುಖ್ಯ ಪರಿಣಾಮಗಳನ್ನು ಹೀಗೆ ಗುರುತಿಸಲಾಗಿದೆ.

೧. ವಿಸ್ತೃತಗೊಳ್ಳುತ್ತಿರುವ ಸಾಮಾಜಿಕ ಸಂಬಂಧಗಳು
೨. ತೀವ್ರಗೊಳ್ಳುತ್ತಿರುವ ಪ್ರವಹನ ಕ್ರಿಯೆ
೩. ಹೆಚ್ಚುತ್ತಿರುವ ಅಂತರ್‌ಬೇಧಿಕರಣ
೪. ಜಾಗತಿಕ ಮೂಲಭೂತ ಸೌಕರ್ಯ

ಇದೆಲ್ಲಕ್ಕಿಂತ ಮುಖ್ಯವಾಗಿ ಜಾಗತೀಕರಣದ ಬಹುದೊಡ್ಡ ಪರಿಣಾಮ ಒಂದು ನಿರ್ದಿಷ್ಟ ಮಾದರಿಯ ಉತ್ಪಾದನಾ ವ್ಯವಸ್ಥೆಯಿಂದ ಮುಂದುವರಿದು, ಅದೇ ಭೂಮಿಕೆಯನ್ನು

ಸಿದ್ಧಪಡಿಸಿ ಮುಂದುವರೆಯುವ ಪ್ರಕ್ರಿಯೆಯಾಗಿ ಕಂಡುಬರುತ್ತಿದೆ. ಇದರಿಂದ ಚಲನಚಿತ್ರ, ಓದುವ ಪತ್ರಿಕೆಗಳ ಸ್ವರೂಪ. ಕೇಳುಚ ಸಂಗೀತ, ತಿನ್ನುವ ಆಹಾರ, ನೃತ್ಯ, ಚಿತ್ರಕಲೆ ಎಲ್ಲವೂ ಒಂದು ರೀತಿಯ ಸೀಮಿತ ಚೌಕಟ್ಟನ್ನು ರೂಪಿಸಿಕೊಂಡಿದೆ. ಜಾಗತೀಕರಣ ಮುಖ್ಯವಾಗಿ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳ ಮೂಲಕ ತನ್ನ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿದೆ. ಜಾಗತೀಕರಣವು ರೂಪುಗೊಳ್ಳಲು ಈ ಕೆಳಗಿನ ಅಂಶಗಳು ಸಹಾಯ ಮಾಡಿವೆ.

* ಬಹುರಾಷ್ಟ್ರೀಯ ಕಂಪೆನಿಗಳ ಮಾಧ್ಯಮಗಳು
* ವೃತ್ತಪತ್ರಿಕೆಗಳು
* ಶಿಕ್ಷಣ ವ್ಯವಸ್ಥೆ
* ಆರೋಗ್ಯ ಮತ್ತು ತಂತ್ರಜ್ಞಾನ
* ಅರ್ಥವ್ಯವಸ್ಥೆ

'ಜಾಗತೀಕರಣ ಮತ್ತು ಮಹಿಳಾ ಚಳವಳಿ' ಎಂಬ ಲೇಖನವು ಸರ್ಕಾರ ಇಂದು ಜಾಗತೀಕರಣದ ಪ್ರಭಾವದಿಂದ ಆರ್ಥಿಕ ನೀತಿಯನ್ನು ರೂಪಿಸುವಾಗ ಮಾರುಕಟ್ಟೆ ಸಂವಿಧಾನವು ದಲಿತರಿಗೆ ಮೀಸಲಾತಿಯ ಸೌಲಭ್ಯ, ಭೂ ಸುಧಾರಣೆ, ಕಡ್ಡಾಯ ಮತ್ತು ಉಚಿತ ಶಿಕ್ಷಣ ಕಾರ್ಯಕ್ರಮಗಳಿಗೆ ನೀಡುವ ವೆಚ್ಚವನ್ನು ಕಡಿತಗೊಳಿಸುವ ರಾಜಕೀಯ ಒತ್ತಡವನ್ನು ಪ್ರಭುತ್ವದ ಮೇಲೆ ಹೇರುತ್ತಿದೆ. ಇದು ಮಹಿಳೆಯರೂ ಸೇರಿದಂತೆ ಎಲ್ಲಾ ನಿರ್ಲಕ್ಷಿತ ಸಮುದಾಯಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಉದ್ದಿಮೆಗಳಲ್ಲಿ, ಕೈಗಾರಿಕೆಗಳಲ್ಲಿ ಹೆಚ್ಚು ಖಾಸಗೀಕರಣಕ್ಕೆ ಅವಕಾಶ ಮಾಡಿಕೊಟ್ಟು ಮಹಿಳೆಯರಿಗೆ ಕೆಲಸ ದೊರಕದಂತೆ, ದೊರಕಿದರೂ ಕೆಳದರ್ಜೆಯ, ಖಾಯಂ ಅಲ್ಲದ, ಸುರಕ್ಷತೆ ಇಲ್ಲದ ಅಸಂಘಟಿತ ವಲಯದ ಕೆಲಸಗಳನ್ನು ನೀಡಲಾಗುತ್ತಿದೆ. ಪ್ರಜಾಪ್ರಭುತ್ವದ ಸಮಾನ ವೇತನದ ಪ್ರಶ್ನೆಯೇ ಈ ಹಂತದಲ್ಲಿ ಇಲ್ಲ. ಇದು ಲಿಂಗ ಅಸಮಾನತೆಯನ್ನು ಸೃಷ್ಟಿಸುತ್ತಿದೆ ಎನ್ನುತ್ತಾರೆ.

ತಾತ್ವಿಕತೆ

೧. ಜಾಗತೀಕರಣದ ಮಾರುಕಟ್ಟೆಯ ಅರ್ಥವ್ಯವಸ್ಥೆಯಿಂದ ಆಗುತ್ತಿರುವ ಮೂಲಭೂತ ಪರಿಣಾಮವೆಂದರೆ ಅರ್ಥವ್ಯವಸ್ಥೆಗೂ, ಜನಸಾಮಾನ್ಯರ ಬದುಕಿಗೂ ನಡುವೆ ಯಾವುದೇ ಸಂಬಂಧವನ್ನು ಕಲ್ಪಿಸದೇ ಪ್ರತ್ಯೇಕಗೊಳಿಸಿರುವುದು.

೨. ಜಾಗತೀಕರಣವು ಅಸಮಾನತೆಯನ್ನು 'ಸೆನ್ಸೆಕ್ಸ್' ಕುಸಿತದಿಂದ ದೇಶದ ಅರ್ಥವ್ಯವಸ್ಥೆಯನ್ನು ಗುರುತಿಸುವುದು, ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದ ಖಾಸಗೀಕರಣ ಮಾಡಿ ಬಡವರಿಗೆ ವೈದ್ಯಕೀಯ ಸೌಲಭ್ಯ ದೊರಕದಂತೆ ಮಾಡಿರುವುದು. ಬಹುರಾಷ್ಟ್ರೀಯ ಕಂಪೆನಿಗಳ ಲಾಭಕ್ಕಾಗಿ ಜಗತ್ತಿನಾದ್ಯಂತ ಸಣ್ಣರೈತರ ವಿನಾಶ ಮಾಡಿರುವುದು, ಸರ್ಕಾರಗಳು ಜಾಗತೀಕರಣದೊಂದಿಗೆ ಸೇರಿಕೊಂಡು ಜನರ ಮೇಲೆ ಪ್ರಭುತ್ವವನ್ನು ಹೇರಿಕೊಂಡು ಬರುತ್ತಿರುವುದನ್ನು ಅಂಕಿ-ಅಂಶಗಳ ಮೂಲಕ ತಿಳಿಸುತ್ತವೆ.

೩. ಜಾಗತೀಕರಣಕ್ಕೆ ಆರ್ಥಿಕ ಮಾನದಂಡವೇ ಮುಖ್ಯವಾದರೂ ಅದರ ಪರಿಣಾಮ ಆನುಷಂಗಿಕವಾಗಿ ಆ ಸಮಾಜದ ಸಾಂಸ್ಕೃತಿಕ ಕಾಳಜಿಗಳನ್ನು ಬಾಹ್ಯ ಒತ್ತಡಗಳ ಮೂಲಕ ಪ್ರಭಾವಿಸುವ ಅಂಶವಾಗಿ ಜಾಗತೀಕರಣದ ಪರಿಣಾಮವನ್ನು ಗುರುತಿಸಲಾಗಿದೆ.

೪. ಇಂತಹ ಸಾಂಸ್ಕೃತಿಕ ಅಂಶಗಳ ಮೇಲೆ ಪ್ರಭಾವವನ್ನು ಬೀರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ಸ್ವದೇಶಿ ಅಸ್ಮಿತೆಯನ್ನು, ಸಂಸ್ಕೃತಿಯನ್ನು ಕಾಪಾಡುವುದರ ಮೂಲಕ, ಪ್ರಭುತ್ವವನ್ನು ಬಳಸಿಕೊಳ್ಳುವ ಮೂಲಕ ಪರ್ಯಾಯವನ್ನು ಕಂಡುಕೊಳ್ಳಬಹುದು.

೫. ಜಾಗತೀಕರಣವನ್ನು ಕೇವಲ ಬಂಡವಾಳಶಾಹಿಯಾಗಿ ಮಾತ್ರ ನೋಡದೇ ಅದರಲ್ಲಿ ಹಲವು ನೆಲೆಯ ಸಾರ್ವತ್ರಿಕ ಜಾಗತೀಕರಣಗಳನ್ನು ಕಾಣಲು ಸಾಧ್ಯ. ಈ ಜಾಗತೀಕರಣವು ಪ್ರಾದೇಶಿಕತೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅಭಿವೃದ್ಧಿಶೀಲ ರಾಷ್ಟ್ರಗಳ ಸಾರ್ವಭೌಮತ್ವವನ್ನು ದುರ್ಬಲಗೊಳಿಸುತ್ತಿದೆ.

೬. ವಿದೇಶಿ ಕಂಪೆನಿಗಳು ಜಾಗತೀಕರಣದ ಮೂಲಕ ಬಂಡವಾಳ ಹೂಡಿ ಬರುವ ಲಾಭವನ್ನು ತಮ್ಮ ದೇಶಗಳಿಗೆ ರವಾನಿಸುತ್ತವೆ ಎಂಬ ಅಭಿಪ್ರಾಯವನ್ನು ಕುರಿತಂತೆ ಭಾರತವು ಸಹ ಇದೇ ಪ್ರಕ್ರಿಯೆಯನ್ನು ವಿದೇಶದಲ್ಲಿ ಮಾಡಲಾಗುತ್ತಿದೆ.

೭. ಜಾಗತೀಕರಣ ಉತ್ಪಾದನಾ ವ್ಯವಸ್ಥೆಯ ಭೂಮಿಕೆಯೊಂದನ್ನು ಸಿದ್ಧಪಡಿಸುವ ಮೂಲಕ ಸಮಾಜದಲ್ಲಿನ ಪತ್ರಿಕೆ, ಚಲನಚಿತ್ರ, ಸಂಗೀತ, ಆಹಾರ, ಚಿತ್ರಕಲೆ ಹೀಗೆ ಎಲ್ಲವುಗಳ ಮೇಲೆ ಅಧಿಪತ್ಯವನ್ನು ಸಾಧಿಸುತ್ತದೆ.

೮. ಮಹಿಳೆಯರಿಗೆ ಖಾಸಗೀಕರಣದ ನೆಪದಲ್ಲಿ ಕೆಳದರ್ಜೆಯ, ಖಾಯಂ ಅಲ್ಲದ, ಅಸಂಘಟಿತ ವಲಯದಲ್ಲಿ ಉದ್ಯೋಗಗಳನ್ನು ನೀಡಲಾದರೂ ಅಲ್ಲಿ ಅವರನ್ನು

ಕಡೆಗಣಿಸಲಾಗುತ್ತಿದೆ. ಇದರ ಜೊತೆಯಲ್ಲಿ ಲಿಂಗ ಅಸಮಾನತೆಯನ್ನು ಉಂಟುಮಾಡುತ್ತಿದೆ. ಮಹಿಳೆಯರು ಮನೆಯಲ್ಲಿ ಕೆಲಸದ ಜೊತೆಗೂ ಅವಳು ಹೊರಗಡೆ ಕೆಲಸವನ್ನು ನಿರ್ವಹಿಸುತ್ತಿದ್ದಾಗಲೂ ಅವಳ ಕೆಲಸವನ್ನು ಪರಿಗಣಿಸದೇ ಇರುವುದು ಕೂಡ ಈ ಅಸಮಾನತೆಯಿಂದಲೇ.

ಇ. ಕನ್ನಡದ ಕಥಾಸಂಕಲನಗಳಲ್ಲಿ ಬಂದಿರುವ ಮುನ್ನುಡಿ ಮತ್ತು ಬೆನ್ನುಡಿಗಳು

ಜಾಗತೀಕರಣದ ನಂತರದ ಕಾಲಘಟ್ಟದಲ್ಲಿ ಕತೆಗಳನ್ನು ಬರೆಯಲು ಆರಂಭಿಸಿರುವ ಕತೆಗಾರರು ಈ ಹಿಂದೆ ಇದ್ದಂತಹ ಯಾವುದೇ ಸಾಹಿತ್ಯ ಚಳುವಳಿಗಳ ಪ್ರಭಾವವಿಲ್ಲದೇ ಪ್ರಾದೇಶಿಕತೆಯ ಹಿನ್ನೆಲೆಯಿಂದ, ಸಮಾಜದಲ್ಲಿ ತಮಗೆ ಆದಂತಹ ಅನುಭವಗಳನ್ನು ಕತೆಯಲ್ಲಿ ಮೂಡಿಸಿದ್ದಾರೆ. ಈ ಹೊತ್ತಿನಲ್ಲಿ ಬರೆಯುತ್ತಿರುವ ಕತೆಗಾರರಿಗೆ ಜಾಗತೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ಆಗುತ್ತಿರುವ ಬದಲಾವಣೆಗಳು ಕತೆಗಳ ಮೂಲಕವಾಗಿ ಹೊರಬಂದಿವೆ. ಈ ಕಥಾಸಂಕಲನಕ್ಕೆ ಮುನ್ನುಡಿ ಮತ್ತು ಬೆನ್ನುಡಿಗಳನ್ನು ಹೊಂದಿವೆ ಇವುಗಳು ಜಾಗತಿಕ ವಿಮರ್ಶಾ ಲೇಖನಗಳಷ್ಟೇ ಜಾಗತೀಕರಣ ಸಂದರ್ಭಕ್ಕೆ ಪ್ರತಿಕ್ರಿಯೆಯಾಗಿ ಕನ್ನಡ ಸಾಹಿತ್ಯ ಕತೆಗಳು ಪ್ರತಿಕ್ರಿಯಿಸಿರುವ ಬಗೆ, ಜಾಗತೀಕರಣಕ್ಕೆ ತೋರಬೇಕಾದ ನಿಲುವುಗಳನ್ನು, ತೊಡಕುಗಳನ್ನು ವಿಶ್ಲೇಷಿಸಿದ್ದಾರೆ.

ಜಾಗತೀಕರಣದ ಪ್ರಭಾವದಿಂದಾಗಿ ಇಂದು ಡಿಜಿಟಲೀಕರಣ ಮುಖ್ಯವಾಗಿ ಓದುವ ಸಂಸ್ಕೃತಿ ನಾಶವಾಗುತ್ತಿದೆ. ಸಮಕಾಲೀನ ಸಂದರ್ಭದ ಕತೆಗಳು ಆಧುನಿಕೋತ್ತರ ಸಮಾಜದ ಆಳದಲ್ಲಿರುವ ಎಲ್ಲಾ ಬಗೆಯ ಕ್ರೌರ್ಯವನ್ನು, ವಿಕ್ಷಿಪ್ತತೆಯನ್ನು ಅದರ ಸಂಘರ್ಷಗಳನ್ನು ಕತೆಗಳಲ್ಲಿ ತರಬೇಕಾದ ಅನಿವಾರ್ಯತೆ ಇದೆ. ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳಂತಿರುವ ಅಧಿಕಾರ ಮತ್ತು ಸಂಖ್ಯಾ ಬಾಹುಳ್ಯವಿರುವ ಸಮುದಾಯಗಳು ಅಸಹಾಯಕ ಜನವರ್ಗಗಳ ಮೇಲೆ ನಿರಂತರವಾಗಿ ಕ್ರೌರ್ಯವನ್ನು ಎಸಗುತ್ತಿವೆ. ಸಮಕಾಲೀನ ಜಾಗತೀಕರಣ ಸಂದರ್ಭದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿವರಗಳನ್ನು ಕತೆಗಳಲ್ಲಿ ಹಿಡಿದಿಡುವ ಪ್ರಯತ್ನಗಳು ನಡೆಯುತ್ತಿವೆ. ಸಮಕಾಲೀನ ನಾಗರೀಕತೆಯ ಸ್ವರೂಪವನ್ನು ಅದರ ವೈವಿಧ್ಯತೆಗಳನ್ನು ಪರಿಣಾಮಗಳನ್ನು ಕತೆಗಳಲ್ಲಿ ಕಟ್ಟಿಕೊಡುವ ಪ್ರಯತ್ನಗಳು ನಡೆಯುತ್ತಿವೆ.

ಜಾಗತೀಕರಣದ ಪರಿಣಾಮವು ಇಂದು ಕತೆಗಳ ಮೇಲೆ ಹೇಗಿದೆಯೆಂದರೆ ಕನ್ನಡ ಕತೆಗಳು ಸೃಜನಶೀಲವಾಗಿ ಸೃಷ್ಠಿಯಾಗಿರುವುದು. ಆದರೆ ಪತ್ರಿಕೆಯು ಒಂದು ಅಂಕಣಕ್ಕೆ ಸೀಮಿತವಾಗಿ ಬರೆಯಬೇಕಾದ ಅನಿವಾರ್ಯತೆಯ ಚೌಕಟ್ಟಿನಲ್ಲಿ ಕತೆಗಳು ನಿರ್ಮಾಣಗೊಳ್ಳುವ ಪರಿಸ್ಥಿತಿಯಿದೆ. "ಯಾವುದೇ ಪತ್ರಿಕೆಗಳು ತಮಗೆ ಬೇಕಾದ ವಿವರಗಳನ್ನು ಲೇಖಕರಿಂದ

ಬಯಸುವುದು. ಕೈ ಬರಹದಲ್ಲಿ ಅಲ್ಲ, ಡಿಟಿಪಿ ಮಾಡಿಸಿ, ಪ್ರೂಫ್ ನೋಡಿ, ಇ–ಮೇಲ್ ವಿಳಾಸಕ್ಕೆ ಕಳಿಸಲು ತಿಳಿಸಿಕೊಡುತ್ತವೆ. ಅನಿವಾರ್ಯವಾಗಿ ಬರಹಗಾರರು ಈ ತಂತ್ರಜ್ಞಾನವನ್ನು ಕಲಿಯುವ ಒತ್ತಡಕ್ಕೆ ಒಳಗಾಗಲೇಬೇಕಾಗಿದೆ" ಎಂದು ಅಮರೇಶ ನುಗಡೋಣಿಯವರು ತಿಳಿಸುತ್ತಾರೆ. ಅಂದರೆ ಜಾಗತೀಕರಣದ ಪರಿಣಾಮವಾಗಿ ಇಂದು ಬರಹಗಾರರು ಕಂಪ್ಯೂಟರ್ ಆಧಾರಿತವಾದ ತಂತ್ರಜ್ಞಾನವನ್ನು ಕಲಿಯಲೇಬೇಕಾದ ಅನಿವಾರ್ಯತೆಯನ್ನು ಉಂಟುಮಾಡುತ್ತಿದೆ. ಅಂದರೆ ಅನಿವಾರ್ಯವಾಗಿ ಮಾರುಕಟ್ಟೆಯ ಮುದ್ರಣ ತಂತ್ರಜ್ಞಾನಕ್ಕೆ ಒಳಗಾಗಲೇಬೇಕಾಗುವ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ.

ಜಾಗತೀಕರಣದ ನೆಲಮೂಲ ಸಂಸ್ಕೃತಿಯು ಅಳಿವಿನ ಅಂಚಿಗೆ ಹೋಗುತ್ತಿರುವುದನ್ನು ಮುಖ್ಯವಾಗಿ ಪರಿಗಣಿಸಬೇಕಾದ ಅನಿವಾರ್ಯತೆಯಿದೆ. ಇಂದಿನ ಜಾಗತೀಕರಣವು ಪ್ರಭುತ್ವ ಭಾಷೆಯಾಗಿ ಇಂಗ್ಲೀಷನ್ನು ಸೃಷ್ಟಿಸುವುದರ ಮೂಲಕ ಪ್ರಾದೇಶಿಕ ಭಾಷೆಗಳನ್ನು ಕೊಲ್ಲುತ್ತಿದೆ. ಭಾಷೆಯ ಜೊತೆಗೆ ಕಲೆ, ಸೃಜನಶೀಲತೆ, ಆತ್ಮವಿಶ್ವಾಸವು ನಾಶವಾಗುತ್ತಿದೆ. ಮುಗ್ಧ ಶ್ರಮಿಕರ ನಿತ್ಯದ ಗಂಜಿಯನ್ನು ಕದ್ದ ಜಾಗತಿಕ ಮಾರುಕಟ್ಟೆಯ ಅಟ್ಟಹಾಸವನ್ನು ರಾಜಕೀಯ ದಳ್ಳಾಳಿಗಳ ದುರಾಸೆಗಳನ್ನು ಜಾಗತೀಕರಣವು ಸೃಷ್ಟಿಸುತ್ತಿದೆ. ಬದಲಾದ ಪರಿಸ್ಥಿತಿಯಲ್ಲಿ ಕತೆಗಾರರ ಕತೆಗಳು ಈ ನೆಲೆಯಲ್ಲಿ ಕತೆಗಳನ್ನು ಸೃಷ್ಟಿಸುವ ಕೆಲಸವನ್ನು ಮಾಡುತ್ತಿವೆ. ಇಂದಿನ ಪರಿಸ್ಥಿತಿಯಲ್ಲಿ ರಾಜಕೀಯದಲ್ಲೂ ಹಾಗೂ ಸಾಹಿತ್ಯದಲ್ಲೂ ಐಡೆಂಟಿಟಿಯ ಪ್ರಶ್ನೆಯನ್ನು ಮುಂಚೂಣಿಗೆ ತರಲಾಗುತ್ತಿದೆ. ಈ ಐಡೆಂಟಿಟಿಯನ್ನು ಕಾಯ್ದುಕೊಳ್ಳಲು ಬರವಣಿಗೆಯನ್ನು ಮತ್ತು ಅದರ ಮುದ್ರಣವನ್ನು ಮಾರುಕಟ್ಟೆಯ ವ್ಯವಸ್ಥೆಗೆ ಪೂರಕವಾಗಿ ಕೆಲಸ ಮಾಡುವ ಅನಿವಾರ್ಯತೆಯನ್ನು ಜಾಗತೀಕರಣವು ನಿರ್ಮಾಣ ಮಾಡುತ್ತಿದೆ.

ಜಾಗತೀಕರಣವು ನಮ್ಮ ಮುಂದಿರುವ ಹಳ್ಳಿ ಮತ್ತು ಪಟ್ಟಣ ಎರಡನ್ನೂ ಒಂದು ಮಾಡುವ ತವಕದಲ್ಲಿದೆ. ಇವುಗಳ ನಡುವೆ ವ್ಯತ್ಯಾಸವೇ ಇಲ್ಲದಂತೆ ಮಾಡಲಾಗುತ್ತಿದೆ. ಇಂದಿನ ಸಮಕಾಲೀನ ಸಂದರ್ಭದ ವಾಸ್ತವಗಳು ಕತೆಗಾರರನ್ನು ತೀವ್ರವಾಗಿ ಕಾಡುವಂತೆ ಮಾಡಿವೆ. ತತ್ವ ಸಿದ್ಧಾಂತಗಳಿಲ್ಲದೇ ಕೇವಲ ಪ್ರಚಾರಕ್ಕಾಗಿ ಮಾತ್ರ ಸಾಹಿತ್ಯ ಸೃಷ್ಟಿಯಾಗುವಂತೆ ಮುದ್ರಣ ವ್ಯವಸ್ಥೆ ನೋಡಿಕೊಳ್ಳುತ್ತಿದೆ. 'ಜೀವನಾನುಭವದ ಅಭಿವ್ಯಕ್ತಿ ಮತ್ತು ಸಿದ್ಧಾಂತಬದ್ಧತೆಯೇ ಹೆಚ್ಚು ಎಂಬ ನಿಲುವನ್ನು ಬಿಟ್ಟು ಕೆಲವು ಸಾಹಿತ್ಯ ಪ್ರಚಾರಕರು ಅನುಭವ ಅಥವಾ ಸಿದ್ಧಾಂತಕ್ಕಿಂತಲೂ ಪ್ರಚಾರ ಪ್ರತಿಷ್ಠಾಪನೆ, ಮುದ್ರಾಧಾರಣೆಯೇ ಮುಖ್ಯ ಎಂಬ ನಿಲುವಿನ ಸುಗ್ಗಿಯ ಹಿಗ್ಗನ್ನು ಕೃತಕವಾಗಿ ಸೃಷ್ಟಿಸುತ್ತಿರುವ ಜಾಗತಿಕ ಜಾಣರು ಈ ಎರಡರ ನಡುವಿನ ಗೊಂದಲದಲ್ಲಿದ್ದಾರೆ' ಎಂದು ಕೇಶವ ಮಾಳಗಿಯವರು ಹೇಳುತ್ತಾರೆ.

ಅಧ್ಯಾಯ : ಮೂರು

ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ಮೂರು

ಪರಿಕಲ್ಪನಾತ್ಮಕ ಚರ್ಚೆ

ಬದಲಾಗುತ್ತಿರುವ ಸಮಾಜ

ಸಮಾಜ ನಿಂತ ನೀರಲ್ಲ, ಅದು ಹರಿಯುವ ನೀರಿನಂತೆ ಸದಾ ಚಲನಶೀಲ ಪ್ರವೃತ್ತಿಯನ್ನು ಹೊಂದಿದೆ. ಬದಲಾವಣೆ ಎಂಬುದು ಏಕಪ್ರಕಾರವಾಗಿ ನೆಡೆಯುವ ಪ್ರಕ್ರಿಯೆಯಾಗಿರುವುದಿಲ್ಲ. ಅದಕ್ಕೆ ಹಲವು ಭಿನ್ನ ಮುಖಗಳಿದ್ದು, ಅನೇಕ ಆಯಾಮಗಳಿಂದ ಕೂಡಿರುವಂತಹುದ್ದು. ಮಾನವರು ಪ್ರಾಚೀನ ಕಾಲದಲ್ಲಿ ಒಂಟಿಯಾಗಿ ಜೀವನ ಸಾಗಿಸುತ್ತಿದ್ದರು. ಮಾನವರು ಪ್ರಾಣಿಗಳಿಗಿಂತ ಭಿನ್ನವಾಗಿ ಮಾತನಾಡುವ, ಆಲೋಚಿಸುವ ಸಾಮರ್ಥ್ಯವನ್ನು ಹೊಂದಿದ್ದರಿಂದ ಹಾಗೂ ಭಾವನಾತ್ಮಕ ಜೀವಿಯಾದ್ದರಿಂದ ಅವರಿಗೆ ಸಾಮೂಹಿಕ ಅನಿವಾರ್ಯತೆ ಎನ್ನುವುದು ಉಂಟಾಯಿತು. ಅಲೆಮಾರಿಯಾಗಿದ್ದ ಮಾನವರು ಹೀಗೆ ಒಂದೆಡೆ ನೆಲೆಸಿ ಜೀವಿಸತೊಡಗಿದರು. ಸಮಾಜ ರೂಪುಗೊಂಡ ನಂತರ ಸಮಾಜದಲ್ಲಿ ಪ್ರೀತಿ, ಸಹಬಾಳ್ವೆ, ಸಹಕಾರ, ಸಂಘರ್ಷ, ವ್ಯವಸಾಯ, ಹಬ್ಬ, ಜಾತಿ, ಸಂಪ್ರದಾಯ, ಆಚಾರ-ವಿಚಾರ, ನಡೆ-ನುಡಿ ಹೀಗೆ ಹತ್ತು ಹಲವಾರು ಸಾಂಸ್ಕೃತಿಕ ಆಯಾಮಗಳನ್ನು ಪಡೆದುಕೊಂಡಿತು. ಕಾಲಾನಂತರದಲ್ಲಿ ಉಂಟಾಗುವ ಅನೇಕ ಕಾರಣಗಳಿಂದ ಸಮಾಜದಲ್ಲಿ ಬದಲಾವಣೆಗಳು ಸಂಭವಿಸುತ್ತವೆ.

ಅಂತೆಯೇ ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲೂ ಸಹ ಈ ರೀತಿಯ ಬದಲಾವಣೆಗಳು ಆಗಿರುವುದು, ಆಗುತ್ತಿರುವುದನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿದುಬರುತ್ತದೆ. ವಸಾಹತುಶಾಹಿ, ಕೈಗಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣ ಇತ್ಯಾದಿ ಹಲವಾರು ಸಂಗತಿಗಳಿಂದ ಸಮಾಜವು ಬದಲಾವಣೆಯನ್ನು ಕಾಣುತ್ತಿದೆ. ಇಂತಹ ವಿಚಾರಗಳನ್ನು ಸಮಾಜಶಾಸ್ತ್ರ ಅಧ್ಯಯನ ಮಾಡಿದರೂ, ಅದು ಕೇವಲ

ಅಂಕಿ–ಅಂಶಗಳನ್ನು ನೀಡುವ ಮತ್ತು ಅದಕ್ಕೆ ಕಾರಣಗಳನ್ನು ಮಾತ್ರ ನೀಡುವ ಕಾರ್ಯವನ್ನು ಮಾಡುತ್ತದೆ. ಆದರೆ ಸಾಹಿತ್ಯ ಇಂತಹ ವಿಚಾರಗಳನ್ನು ಭಿನ್ನ ನೆಲೆಯಲ್ಲಿ ಗ್ರಹಿಸುವ ಪ್ರಯತ್ನವನ್ನು ಮಾಡುತ್ತದೆ.

ಸಮಾಜಶಾಸ್ತ್ರ ಮುಖ್ಯವಾಗಿ ಎರಡು ನೆಲೆಯಲ್ಲಿ ಸಾಮಾಜಿಕ ಬದಲಾವಣೆಯನ್ನು ಗ್ರಹಿಸಲು ಪ್ರಯತ್ನಿಸುತ್ತದೆ.

೧. ಸಂರಚನಾವಾದಿ ನೆಲೆ

ಸಂರಚನಾವಾದಿ ನೆಲೆಯು ಸಮಾಜದ ರಚನೆ, ಘಟಕಗಳು ಮತ್ತು ಅವುಗಳ ಕಾರ್ಯಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಸಾಮಾಜಿಕ ಬದಲಾವಣೆ ಎಂದು ತಿಳಿಯುವುದು.

೨. ಮಾರ್ಕ್ಸ್‌ವಾದಿ ನೆಲೆ

ಮಾರ್ಕ್ಸ್‌ವಾದಿ ಸಮಾಜಶಾಸ್ತ್ರಜ್ಞರು ತಳರಚನೆ ಅಥವಾ ಆರ್ಥಿಕ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆಯನ್ನು, ಅದರ ಮೂಲಕ ಮೇಲು ರಚನೆಯಾದ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಮೌಲ್ಯಗಳಲ್ಲಿ ಉಂಟಾಗಿರುವ ಬದಲಾವಣೆಯನ್ನೇ ನಿಜವಾದ ಸಾಮಾಜಿಕ ಬದಲಾವಣೆಯೆಂದು ಗುರ್ತಿಸಲಾಗಿದೆ.

ಸಮಾಜ ಬದಲಾವಣೆಯನ್ನು ಸಮಾಜ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಕಾಣಬಹುದು. ಸಾಮಾಜಿಕ ಬದಲಾವಣೆ ಎನ್ನುವುದು ಒಂದು ಎಲ್ಲೆಗೆ ಮಾತ್ರ ಸೀಮಿತವಾದುದಲ್ಲ. ಇಲ್ಲಿ ಸಾಮಾಜಿಕ ಬದಲಾವಣೆಯನ್ನು ಸಮಾಜಶಾಸ್ತ್ರಜ್ಞರು ಗುರುತಿಸಿರುವ ನೆಲೆಗಳೆರಡರ ಸಂಯೋಗದೊಂದಿಗೆ ನೋಡುವ ಬಗೆಯನ್ನು ಸಾಹಿತ್ಯ ಪಠ್ಯಗಳು ಮಾಡುತ್ತಿವೆ. ಕರ್ನಾಟಕದ ಸಾಂಸ್ಕೃತಿಕ ಪರಿಸರವನ್ನು ಗಮನಿಸಿದಾಗ ೧೨ನೇ ಶತಮಾನದ ವಚನ ಚಳುವಳಿಯು ಸಮಾಜದಲ್ಲಿದ್ದ ಜಾತಿ, ಅಸಮಾನತೆ, ತಾರತಮ್ಯ ನೀತಿ, ಮುಂತಾದವುಗಳನ್ನೆಲ್ಲ ಎತ್ತಿ ತೋರಿಸುವ ಮೂಲಕ ಸಮಾಜದಲ್ಲಿ ಪಲ್ಲಟಗಳನ್ನು ಉಂಟು ಮಾಡಲು ಸಾಧ್ಯವಾಯಿತು. ಅಲ್ಲದೇ "ವಚನ ಚಳುವಳಿಯಿಂದ ಅವರ ಕಾಯಕ ಪರಿಕಲ್ಪನೆಯ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಮಾಜದ ಕೊನೆಯ ಅಂಚಿನಲ್ಲಿನ ಸಮುದಾಯಗಳಿಗೂ ಸಾಧ್ಯವಾಗಿ ಆಧ್ಯಾತ್ಮಿಕ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಕಾರಣವಾಯಿತು"[೧] ಎಂದು ಅಮರೇಶ ನುಗಡೋಣಿಯವರು ತಿಳಿಸುತ್ತಾರೆ. ವಚನ ಚಳುವಳಿಯಲ್ಲದೇ ಮುಂದೆ ಭಕ್ತಿಪಂಥ, ರೈತಾಪಿ ಚಳುವಳಿ, ಭಾಷಿಕ ಹೋರಾಟಗಳು ಸಮಾಜದಲ್ಲಿ ಅನೇಕ ಬದಲಾವಣೆಗಳು ಉಂಟಾಗುವಂತೆ ಮಾಡಿದವು. ಕರ್ನಾಟಕದ

ಸಮಾಜದಲ್ಲಿ ಇದ್ದಂತಹ ಜಾತಿವ್ಯವಸ್ಥೆ, ಊಳಿಗಮಾನ್ಯ ಪದ್ಧತಿ, ಜಮೀನ್ದಾರಿ ಪದ್ಧತಿ, ಪುರೋಹಿತಶಾಹಿ ನೀತಿಗಳ ವಿರುದ್ಧ ಜನರು ಮಾಡಿದ ಹೋರಾಟಗಳ ಪರಿಣಾಮವಾಗಿ ಸಾಮಾಜಿಕ ಬದಲಾವಣೆಗೆ ಕಾರಣವಾಯಿತು.

ಯುರೋಪಿಯನ್ನರ ಆಗಮನದಿಂದ ಸಾಮಾಜಿಕವಾದ ಬಹುಮುಖ್ಯ ಪರಿಣಾಮಗಳೆಂದರೆ ಜಾತಿವ್ಯವಸ್ಥೆ, ಕೌಟುಂಬಿಕ ನಂಬಿಕೆಗಳಲ್ಲಿ, ಸ್ತ್ರೀಯರ ಸ್ಥಾನಮಾನದಲ್ಲಿ, ಶಿಕ್ಷಣ ಪದ್ಧತಿಯಲ್ಲಿ ಹಾಗೂ ಸಾಮಾಜಿಕ ಸಂಸ್ಥೆಗಳ ಮೇಲೆ ಭಾರತೀಯರು ಹೊಂದಿದ್ದ ಮನೋಧರ್ಮ ಬದಲಾವಣೆ ಹೊಂದಲು ಕಾರಣವಾಯಿತು. ಕೈಗಾರೀಕರಣ ನೀತಿಯಿಂದಾಗಿ ಭಾರತೀಯ ಸಮಾಜದಲ್ಲಿ ಅನೇಕ ಸಾಂಸ್ಕೃತಿಕ ಸ್ಥಿತ್ಯಂತರಗಳು ಉಂಟಾಗಲು ಕಾರಣವಾಯಿತು. ಭಾರತೀಯ ಸಮಾಜದ ಆಳದಲ್ಲಿ ಬೇರೂರಿದ್ದ ಜಾತಿವ್ಯವಸ್ಥೆ, ಅಸ್ಪೃಶ್ಯತೆ, ಮೂಢನಂಬಿಕೆ, ಸತಿಸಹಗಮನ ಪದ್ಧತಿಯಂತಹ ಅನಿಷ್ಟ ಪದ್ಧತಿಗಳ ಬಗೆಗೆ ಅರಿವು ಮೂಡಿಸುವ ಕೆಲಸವನ್ನು, ಆ ಮೂಲಕ ಸಮಾಜದಲ್ಲಿ ಪಲ್ಲಟಗಳು ಉಂಟಾಗಲು ಈ ಪಾಶ್ಚಾತ್ಯರ ಆಗಮನದಿಂದ ಸಾಧ್ಯವಾಯಿತು. ವಸಾಹತುಶಾಹಿಯ ನೀತಿಯಿಂದಾಗಿ ಭಾರತೀಯ ಸಮಾಜದಲ್ಲಿ ಶಿಕ್ಷಣದಿಂದ ಹೊಸ ಹೊಸ ವಿಚಾರಗಳು, ಜ್ಞಾನಶಿಸ್ತುಗಳ ಜೊತೆಗೆ ಅವರು ಸಮಾಜದಲ್ಲಿದ್ದ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಜನರಿಗೆ ತಿಳಿಸುವ ಮೂಲಕ ಭಾರತೀಯ ಸಮಾಜದಲ್ಲಿ ಬದಲಾವಣೆ ಉಂಟಾಗಲು ಕಾರಣವಾಯಿತು. ಅಂತೆಯೇ ಭಾರತೀಯರಲ್ಲಿ ವಸಾಹತು ನೀತಿಯಿಂದಾಗಿ ಆಗುತ್ತಿರುವ ಅನೇಕ ದುಷ್ಪರಿಣಾಮಗಳನ್ನು ಅರಿತು ಅದರ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಸಾಧ್ಯವಾಗುವಂತೆ ಮಾಡಿದ್ದು ಇಂಗ್ಲೀಷ್ ಶಿಕ್ಷಣವನ್ನು ಕಲಿತವರಿಂದಲೇ.

ಭಾರತೀಯ ಸಂದರ್ಭದಲ್ಲಿ ಲೋಹಿಯಾ, ಪೆರಿಯಾರ್, ಅಂಬೇಡ್ಕರ್, ಗಾಂಧೀಜಿಯವರ ಚಿಂತನೆಗಳು ಸಮಾಜದ ಅಂಚಿನಲ್ಲಿರುವ ದಲಿತರು, ಕೆಳವರ್ಗದವರು, ಮಹಿಳೆಯರ ಸ್ಥಿತಿಗತಿಗಳಲ್ಲಿ ಪಲ್ಲಟಗಳನ್ನು ಉಂಟು ಮಾಡುವಲ್ಲಿ ಮತ್ತು ಅವರ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಯಿತು. ಸಮಾಜದಲ್ಲಿ ಬೇರೂರಿದ್ದ ಜಾತಿಪದ್ಧತಿ, ಪುರುಷವಾದಿ ಮನೋಧೋರಣೆ, ಮಹಿಳೆಯರ ಬಗೆಗಿನ ನಿಲುವುಗಳು, ಅಸಮಾನತೆಯ ನೀತಿಗಳ ವಿರುದ್ಧವಾಗಿ ಜನರಲ್ಲಿ ಹೋರಾಟ ಮಾಡಲು ಪ್ರೇರಣೆಯನ್ನು ನೀಡಿದ್ದಲ್ಲದೇ ಅವರ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಸಹಕಾರಿಯಾಯಿತು. ಸಮಾಜದಲ್ಲಿದ್ದ ವೈದ್ಧಿಕಶಾಹಿ ನೀತಿಯ ಇಂತಹ ಅನೇಕ ಆಚರಣೆಗಳನ್ನು ಒಪ್ಪಿಕೊಂಡು ಬಂದಂತಹ

ದಲಿತರು ಹಾಗೂ ಕೆಳವರ್ಗದವರು ಇವರ ಚಿಂತನೆಗಳ ಮೂಲಕ ಸಾಮಾಜಿಕವಾದ ಬದಲಾವಣೆಗೆ ತಮ್ಮ ಹಕ್ಕುಸಾಮ್ಯತೆಯನ್ನು ಕಾಪಾಡಿಕೊಳ್ಳಲು ಮುಂದಾದುದು ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟಾದ ಬಹುದೊಡ್ಡ ಪಲ್ಲಟವಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ಥೂಲವಾಗಿ ಗಮನಿಸಿದಾಗಲೂ ಕೂಡ ಈ ರೀತಿಯ ಸಾಹಿತ್ಯಿಕವಾಗಿ ಆದಂತಹ ಬದಲಾವಣೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಿಂದ ಆಧುನಿಕ ಕನ್ನಡ ಸಾಹಿತ್ಯದವರೆಗೂ ಹಲವಾರು ನೆಲೆಗಳಲ್ಲಿ ಸಾಮಾಜಿಕ ಬದುಕನ್ನೇ ಕೇಂದ್ರೀಕರಿಸಿ ಭಿನ್ನ ಭಿನ್ನ ಆಶಯಗಳನ್ನಿಟ್ಟುಕೊಂಡು ಸಾಹಿತ್ಯ ರಚನೆಯು ಉಂಟಾಗಿದೆ. ನವೋದಯ ಸಾಹಿತ್ಯವು ಆದರ್ಶತ್ವದ ಪರಿಕಲ್ಪನೆ, ಉದಾರವಾದಿ ಮನೋಭಾವನೆ, ಮಾನವ ವ್ಯಕ್ತಿತ್ವದ ಹಲವು ಕಲ್ಪನೆಗಳನ್ನು ಸಾಹಿತ್ಯಕವಾಗಿ ಕಟ್ಟಿಕೊಟ್ಟಿತು. ಸ್ವಾತಂತ್ರ್ಯದ ಮೂಲಕ ರಾಷ್ಟ್ರೀಯತೆಯನ್ನು ಮುಖ್ಯ ಮಾಡಿಕೊಂಡು ವಸಾಹತುಶಾಹಿ ಧೋರಣೆಗೆ ವಿರುದ್ಧವಾಗಿ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಯಾಯಿತು. ಮುಂದೆ ಪ್ರಗತಿಶೀಲ ಸಂದರ್ಭದಲ್ಲಿ ಇದ್ದ ಬಡತನ, ನಿರುದ್ಯೋಗ, ಬಾಲ್ಯವಿವಾಹ, ವೇಶ್ಯಾಪದ್ಧತಿಯಂತಹ ಸಾಮಾಜಿಕ ಸಮಸ್ಯೆಗಳನ್ನು ಸಾಹಿತ್ಯದ ವಸ್ತುವಾಗಿ ಮಾಡಿಕೊಂಡು ಸಮಾಜದ ಪಲ್ಲಟಗಳಿಗೆ ಪ್ರತಿಸ್ಪಂದಿಸಿತು. ಸಾಹಿತ್ಯವನ್ನು ಸಾಮಾಜಿಕ ಬದಲಾವಣೆಯ ಸಾಧನವನ್ನಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಬಳಸಿಕೊಳ್ಳಲಾಯಿತು. ಎಲ್.ಎಸ್.ಶೇಷಗಿರಿರಾವ್ ಅವರು "ನವೋದಯ ಲೇಖಕರಂತೆಯೇ ಪ್ರಗತಿಶೀಲರು 'ಬದುಕು ಸ್ವೀಕಾರಾರ್ಹ' ಎಂಬ ನಂಬಿಕೆಯಿಂದಲೇ ಬರೆಯುತ್ತಾರೆ. ಬದುಕನ್ನು ಇನ್ನೂ ಶುಭ್ರಗೊಳಿಸಬೇಕೆಂಬ ಕಳಕಳಿ ಇವರಲ್ಲಿ ತೀವ್ರ. ನವೋದಯ ಸಾಹಿತಿ, ಬಹುಮಟ್ಟಿಗೆ 'ಸಾಹಿತ್ಯ, ವ್ಯಕ್ತಿಯ ಮನಸ್ಸನ್ನು ಮೃದುಗೊಳಿಸುವ ಸಾಧನ ಎಂದು ನಂಬಿದರೆ, ಅದು ಸಾಮಾಜಿಕ ಕ್ರಾಂತಿಯನ್ನು ಸಾಧಿಸುವ ಶಕ್ತಿ' ಎಂದೂ ಪ್ರಗತಿಶೀಲ ಸಾಹಿತಿ ನಂಬಿದ"[೨] ಎಂಬುದಾಗಿ ಪ್ರಗತಿಶೀಲ ಸಾಹಿತ್ಯದ ಮೂಲಕ ಉಂಟಾದ ಸಾಮಾಜಿಕ ಪಲ್ಲಟಗಳನ್ನು ತಿಳಿಸುತ್ತಾರೆ.

ಎರಡು ಮಹಾಯುದ್ಧಗಳ ನಂತರದಲ್ಲಿ ಪಾಶ್ಚಾತ್ಯರಲ್ಲಿ ಹುಟ್ಟಿಕೊಂಡಂತಹ ಒಂಟಿತನ, ನಿರಾಸಕ್ತಿ ಭಾವನೆ, ಬೇಸರ, ಹತಾಶೆ ಹಾಗೂ ಅಸ್ತಿತ್ವದ ಪ್ರಶ್ನೆಗಳು ಅನೇಕ ಚಿಂತನೆಗಳನ್ನು ಹುಟ್ಟುಹಾಕಿದವು. ನವ್ಯ ಸಾಹಿತ್ಯದ ಆಶಯಗಳನ್ನು ಪಾಶ್ಚಾತ್ಯರಿಂದ ಎರವಲು ಪಡೆದು ಕನ್ನಡ ಸಾಹಿತ್ಯದಲ್ಲಿ ಈ ರೀತಿಯಾದಂತಹ ಪ್ರಶ್ನೆಗಳನ್ನು ಇಟ್ಟುಕೊಂಡು ಸಾಹಿತ್ಯವು ರಚನೆಯಾಗತೊಡಗಿತು. ಮುಂದೆ ೭೦ರ ದಶಕದಲ್ಲಿ ಸಮಾಜದ ಕೆಳಸ್ಥರದಲ್ಲಿಯೇ ಉಳಿದಿದ್ದ ದಲಿತರು, ಶೋಷಿತರು, ಕೆಳವರ್ಗದವರು, ಮಹಿಳೆಯರು ಸಾಹಿತ್ಯ ರಚನೆಗೆ

ತೊಡಗಿದರು. ಈ ಹಂತದಲ್ಲಿ ಶಿಕ್ಷಣವನ್ನು ಕಲಿತ ಈ ವರ್ಗಗಳು ಜಾತಿಯ ಹಿನ್ನೆಲೆಯಲ್ಲಿನ ಸ್ವ ಅನುಭವಗಳಾದ ಶೋಷಣೆ, ಬಡತನ, ಹಸಿವು, ಅಸಮಾನತೆ, ಕ್ರೌರ್ಯ ಮುಂತಾದವುಗಳನ್ನು ಅಭಿವ್ಯಕ್ತಿಸಲು ಮುಂದಾದರು. ಈ ಕಾಲದಲ್ಲಿ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆಗಳು ಹೆಚ್ಚಾಗಿ ಕಾಣಿಸಿಕೊಂಡವು.

ಜಾಗತೀಕರಣ ಸಂದರ್ಭದಲ್ಲಿ ಬದಲಾಗುತ್ತಿರುವ ಸಮಾಜ

ಜಾಗತೀಕರಣವನ್ನು ೧೯೯೧ರಲ್ಲಿ ಸರ್ಕಾರವು ಅಧಿಕೃತವಾಗಿ ಜಾರಿಗೆ ತಂದ ಮೇಲೆ ಆಗಿರುವ ಅದರ ಒಳಿತು ಕೆಡುಕುಗಳ ಕುರಿತು ೨೫ ವರ್ಷಗಳಲ್ಲಿ ಎಲ್ಲಾ ಜ್ಞಾನಶಿಸ್ತುಗಳು ಅದನ್ನು ತಿಳಿಯುವ ಪ್ರಯತ್ನವನ್ನು ಮಾಡಿವೆ. ಅಲ್ಲದೇ ಉದಾರೀಕರಣ, ಖಾಸಗೀಕರಣ, ಜಾಗತೀಕರಣದಂತಹ ನೀತಿಗಳು ಮುಂದುವರೆದ ರಾಷ್ಟ್ರಗಳ ಪಾಲಿಗೆ ಉತ್ತಮವಾಗಿದ್ದರೂ ಅದು ತೃತೀಯ ರಾಷ್ಟ್ರಗಳಿಗೆ ನುಂಗಲಾರದ ತುತ್ತಾಗಿದೆ. ಇದನ್ನು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಇತರೆ ಜ್ಞಾನಶಿಸ್ತುಗಳು ಅಧ್ಯಯನ ಮಾಡಿವೆ. ಅದರಂತೆಯೇ ಕನ್ನಡ ಸಾಹಿತ್ಯವು ಜಾಗತೀಕರಣವನ್ನು ಕುರಿತ ಅಭಿಪ್ರಾಯಗಳನ್ನು ಲೇಖನ, ಕೃತಿ, ಸಾಹಿತ್ಯ ಪ್ರಕಾರಗಳ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ಕುರಿತು ಅಭಿಪ್ರಾಯವನ್ನು ತಿಳಿಸಿದ್ದಾರೆ.

ತೊಂಭತ್ತರ ದಶಕದ ನಂತರದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ತೀವ್ರತರವಾದ ಪಲ್ಲಟಗಳು ಉಂಟಾದದ್ದನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣ ಜಾಗತೀಕರಣ, ಖಾಸಗಿಕರಣ ಮತ್ತು ಉದಾರೀಕರಣದ ನೀತಿಗಳು. "ಜಾಗತೀಕರಣವನ್ನು ಕೆಲವು ಭಾರಿ ವ್ಯಾಪಾರ, ವಿದೇಶೀ ಬಂಡವಾಳ, ಬಂಡವಾಳದ ಒಳಹರಿವು, ವಲಸೆ, ತಾಂತ್ರಿಕತೆಯ ವಿಸ್ತರಣೆಯ ಮೂಲಕ ರಾಷ್ಟ್ರೀಯ ಆರ್ಥಿಕತೆಯ ಜೊತೆಗೆ ಅಂತರರಾಷ್ಟ್ರೀಯ ಆರ್ಥಿಕ ಸಮನ್ವಯತೆ ಮುಂತಾದ ಅಂಶಗಳಿಂದ ಗುರುತಿಸಲಾಗುತ್ತದೆ. ಆದರೂ ಜಾಗತೀಕರಣವನ್ನು ಸಾಮಾನ್ಯವಾಗಿ ಆರ್ಥಿಕ, ರಾಜಕೀಯ ಮತ್ತು ಜೈವಿಕ ವಿಚಾರಗಳ ಸಂಯೋಗವೆಂದು ಪರಿಗಣಿಸಲಾಗುತ್ತದೆ. ಜನಪ್ರಿಯ ಸಂಸ್ಕೃತಿ ಅಥವಾ ಭಾಷೆ, ಕಲ್ಪನೆಗಳ ಅಂತರರಾಷ್ಟ್ರೀಯ ಮಟ್ಟದ ಹರಡುವಿಕೆಯನ್ನು ಸೂಚಿಸಲು ಈ ಪದವನ್ನು ಉಪಯೋಗಿಸಲಾಗುತ್ತದೆ."[೩]

"ಇಪ್ಪತ್ತನೇ ಶತಮಾನದಲ್ಲಿ ಕೊನೆಗೊಂಡ ವಸಾಹತೀಕರಣವು ಇಪ್ಪತ್ತೊಂದನೇ ಶತಮಾನಕ್ಕೆ ಕೊಟ್ಟಿರುವ ಕೊಡುಗೆಯೇ ಜಾಗತೀಕರಣ. ವಸಾಹತೀಕರಣ ಮತ್ತು ಜಾಗತೀಕರಣಗಳನ್ನು ಅಕ್ಕ–ತಂಗಿಯರೆಂದೇ ಪರಿಗಣಿಸಬೇಕು. ಮೊದಲು ಹುಟ್ಟಿದ

ಕಿವಿಗಳಿಗಿಂತ ನಂತರ ಮೂಡಿದ ಕೊಂಬುಗಳು ಗಟ್ಟಿಯಾಗಿ, ಮೊನಚಾಗಿರುತ್ತವೆಯೆಂಬ ಗಾದೆಯಂತೆ ವಸಾಹತೀಕರಣಕ್ಕಿಂತಲೂ ಜಾಗತೀಕರಣವು ಹೆಚ್ಚು ಆಕ್ರಮಣಕಾರಿಯಾಗಿದೆ.”[೪] ಎಂದು ಚಂದ್ರಶೇಖರ ನಂಗಲಿ ಅವರು ಜಾಗತೀಕರಣದ ಬಗೆಗಿನ ಅಭಿಪ್ರಾಯವನ್ನು ವಿಶ್ಲೇಷಿಸಿದ್ದಾರೆ. ಜಾಗತೀಕರಣದಿಂದ ಸಮಾಜದ ಬದಲಾವಣೆಯು ಆಗಿರುವುದಂತೂ ಸತ್ಯ. ಇದರ ಪರಿಣಾಮವನ್ನು ಬರಗೂರು ರಾಮಚಂದ್ರಪ್ಪ ಅವರು ಹೀಗೆ ಗ್ರಹಿಸಿದ್ದಾರೆ. “ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ದಶಕಗಳಲ್ಲಿ ಎರಡು ನೆಲೆಗಳು ಅತಿರೇಕಗಳ ಮೂಲಕ ದೇಶಕ್ಕೆ ದುರಂತದ ದಿಡ್ಡಿ ಬಾಗಿಲು ತೆರೆದವು. ಆ ಎರಡು ನೆಲೆಗಳು – ೧. ಕೋಮುವಾದದ ಕರಾಳತೆ, ೨. ಜಾಗತೀಕರಣದ ಆಕ್ರಮಣಶೀಲತೆ”[೫] ಎಂದು ತಿಳಿಸುತ್ತಾರೆ.

ಜಾಗತೀಕರಣವು ಬಂದ ನಂತರದಲ್ಲಿ ದೇಶದಲ್ಲಿ ಈ ಹಿಂದೆ ಇದ್ದ ‘ಮಿಶ್ರ ಆರ್ಥಿಕ ಪದ್ಧತಿ’ಯನ್ನು ಬಿಟ್ಟು ಖಾಸಗೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಯಿತು. ಇಲ್ಲಿ ಸರ್ಕಾರಿ, ಸ್ವದೇಶಿ ಅಥವಾ ವಿದೇಶಿ ಬಂಡವಾಳ ಸ್ವಾಮ್ಯ ಸ್ಥಾಪಿಸುವ ಪ್ರಮಾಣದಲ್ಲಿ ಸರ್ಕಾರದ ಅರ್ಧದಷ್ಟು ಬಂಡವಾಳ ಇರುತ್ತಿದ್ದರಿಂದ ಅದು ನಿಯಂತ್ರಣ ಸಾಮರ್ಥ್ಯವನ್ನು ಹೊಂದಿತ್ತು. ಜಾಗತೀಕರಣದಿಂದ ಜಾರಿಗೆ ಬಂದಂತಹ ಖಾಸಗೀಕರಣದಿಂದ ಇಂದು ಈ ಹಿಂದಿನ ನೀತಿಯು ಇಲ್ಲದಾಗಿ ದೇಶಕ್ಕೆ ದೊಡ್ಡ ಆರ್ಥಿಕ ದುರಂತವಾಗಿ ಪರಿಣಮಿಸಿರುವುದರ ಜೊತೆಗೆ ಅನೇಕ ಬಿಕ್ಕಟ್ಟುಗಳನ್ನು ಸೃಷ್ಟಿಸಿದೆ. ಆರ್ಥಿಕ ಸುಧಾರಣೆಯ ಹಿನ್ನೆಲೆಯಲ್ಲಿ ಬಂದ ಜಾಗತೀಕರಣವು ಸಂವಿಧಾನದ ಸಾರ್ವಭೌಮತ್ವಕ್ಕೆ ಧಕ್ಕೆಯನ್ನು ಉಂಟುಮಾಡುತ್ತಿರುವುದಲ್ಲದೇ ಮಿಶ್ರ ಆರ್ಥಿಕ ನೀತಿಯನ್ನು ಉಲ್ಲಂಘಿಸಿ ತನ್ನದೇ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಇದರಿಂದ ದೇಶದಲ್ಲಿ ಅನೇಕ ರೀತಿಯ ಸಮಸ್ಯೆಗಳು ಉಂಟಾಗುತ್ತಿರುವುದಲ್ಲದೇ ಅಸಮಾನತೆಯನ್ನು ಸೃಷ್ಟಿಸುವುದಕ್ಕೆ ಕಾರಣವಾಗುತ್ತಿದೆ. “ಜಾಗತೀಕರಣದ ಇಂದಿನ ಮಜಲನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ವಿಸ್ತರಣೆಗೆ, ಹಣಕಾಸು ಮಾರುಕಟ್ಟೆಗಳ ಶಕ್ತಿಗೆ, ಬಂಡವಾಳಶಾಹಿ ಸಾಮಾಜಿಕ ಸಂಬಂಧಗಳ ಹರಡುವಿಕೆಗೆ, ಶೋಷಣೆಯ ತೀವ್ರತೆಗೆ, ಸಾಮಾಜಿಕ ಅಸಮಾನತೆಯ ಬೃಹತ್ ಬೆಳವಣಿಗೆಗೆ ಮತ್ತೊಂದು ಪದವನ್ನಾಗಿ ವ್ಯಾಪಕವಾಗಿ ಕಾಣಲಾಗಿದೆ.”[೬] ಎನ್ನುವುದು ಪ್ರಕಾಶ್ ಸಿ ರಾವ್ ಅವರ ಅಭಿಮತವಾಗಿದೆ.

ತೊಂಭತ್ತರ ದಶಕದಲ್ಲಿ ಪೂರ್ವ ದೇಶಗಳ ಮೇಲೆ ವಸಾಹತುಶಾಹಿಯ ಪ್ರಭಾವ ಕಡಿಮೆಯಾಗಿತ್ತು. ಜಾಗತಿಕ ಮಟ್ಟದಲ್ಲಿ ಹೊಸ ಆಲೋಚನೆಗಳ ಹಾಗೂ ಚಿಂತನೆಗಳ

ಫಲವಾಗಿ ಗ್ಯಾಟ್, ಎಸ್.ಇ.ಝಡ್ ಮುಂತಾದ ಒಪ್ಪಂದಗಳಾದವು. ಅಷ್ಟೇ ಅಲ್ಲದೇ ಎನ್.ಎ.ಪಿ., ಎಸ್.ಎ.ಪಿ., ಎಲ್.ಪಿ.ಜಿ.ಯಂತಹ ಕಾರ್ಯಕ್ರಮಗಳ ಜೊತೆಗೆ ವಿಶ್ವಬ್ಯಾಂಕ್ ಹಾಗೂ ವಿಶ್ವವ್ಯಾಪಾರ ಸಂಸ್ಥೆಗಳು ಇಂತಹ ಕಾರ್ಯಕ್ರಮಗಳ ಮೇಲೆ ಹಾಕಿರುವ ಷರತ್ತುಗಳ ಸ್ವರೂಪ ಜನಜೀವನದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿವೆ. ಅಲ್ಲದೇ "ಹೊಸ ತಂತ್ರಜ್ಞಾನ ಪಡೆಯುವ ಅಭಿಲಾಷೆ, ಸಾಲದ ಒತ್ತಡ ಮುಂತಾದವುಗಳಿಂದ ಈ ದೇಶಗಳು ಜಾಗತೀಕರಣ ನೀತಿಯನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಜಾಗತೀಕರಣ ನೀತಿಯನ್ನು ಒಪ್ಪಿಕೊಳ್ಳದಿದ್ದರೆ ತಾವು ಮೂಲೆಗುಂಪಾಗುತ್ತೇವೆಂಬ ಭಯದಿಂದ, ಅನೇಕ ರಾಷ್ಟ್ರಗಳು ಈ ನೀತಿಯನ್ನು ಒಪ್ಪಿಕೊಂಡಿವೆ. ಜಾಗತೀಕರಣ ನೀತಿ ಸರ್ಕಾರದ ಪ್ರಭುತ್ವವನ್ನು ಕಡಿಮೆ ಮಾಡಿ, ಖಾಸಗೀ ಕ್ಷೇತ್ರವನ್ನು ಬಲಪಡಿಸಿ, ಬೃಹತ್ ದೇಶಗಳ ಸರಕುಗಳನ್ನು ಈ ದೇಶಗಳಲ್ಲಿ ಮಾರುವ ಹಾಗೂ ಮಾರುಕಟ್ಟೆಯ ಹತೋಟಿ ಪಡೆಯುವ ಹುನ್ನಾರ ಹಾಕಿದೆ."[೭] ಎಂದು ಪ್ರಕಾಶ್ ಸಿ ರಾವ್ ಅವರು ಜಾಗತೀಕರಣದ ಯಾಜಮಾನ್ಯತೆಯನ್ನು ತಿಳಿಸುತ್ತಾರೆ. ಆರ್ಥಿಕ ಅಭಿವೃದ್ಧಿಯ ಮೂಲಕ ದೇಶದೊಳಕ್ಕೆ ಬಂದಿರುವ ಜಾಗತೀಕರಣವು ಇಂದು

- ಶ್ರೀಮಂತ ಮತ್ತು ಬಡವರ ನಡುವೆ ದೊಡ್ಡ ಕಂದರವನ್ನು ಸೃಷ್ಟಿ ಮಾಡಿದೆ.
- ಅಸಮಾನ ಭೂವಿತರಣೆಯನ್ನು ಮಾಡುತ್ತಿದೆ.
- ಸಂಪತ್ತನ್ನು ಕೆಲವೇ ಜನರಲ್ಲಿ ಕೇಂದ್ರೀಕರಿಸುವ ನೆಲೆಯನ್ನು ಹೊಂದಿದೆ.
- ಬಡತನ ಮತ್ತು ನಿರುದ್ಯೋಗ ಹೆಚ್ಚಾಗುತ್ತಿದೆ.
- ಆಂತರಿಕ ಸ್ಥಳೀಯ ಮಾರುಕಟ್ಟೆಗಳ ನಷ್ಟ.
- ಪ್ರಾದೇಶಿಕ ಅಸಮತೋಲನ ಮತ್ತು ಸಾಮಾಜಿಕ ಅತೃಪ್ತಿಯನ್ನು ಉಂಟು ಮಾಡುತ್ತಿದೆ.
- ರೂಪಾಯಿ ಅಪಮೌಲ್ಯ ಮತ್ತು ಹೆಚ್ಚುತ್ತಿರುವ ವಿದೇಶಿ ಸಾಲ.
- ಮೂಲರಚನೆಗಳಿಗೆ, ಸಾರ್ವಜನಿಕ ಕ್ಷೇತ್ರಕ್ಕೆ, ಜನಕಲ್ಯಾಣಕ್ಕೆ ಸರ್ಕಾರದ ವೆಚ್ಚದಲ್ಲಿ ಕಡಿಗೊಳಿಸುವುದು.
- ನಿಲ್ಲದ ಹಣದುಬ್ಬರ ಮತ್ತು ಬೆಲೆಯೇರಿಕೆ
- ಖಾಸಗೀಕರಣ ನೀತಿಯನ್ನು ಅನುಸರಿಸಿ ಜನರ ಸಂಕಷ್ಟಗಳಿಂದ ಲಾಭ ಗಳಿಕೆ ಮಾಡಿಕೊಳ್ಳುವುದು.
- ಹಗರಣಗಳು ಮತ್ತು ಭ್ರಷ್ಟಾಚಾರಗಳು

ಇಷ್ಟೇ ಅಲ್ಲದೇ ಜಾಗತೀಕರಣವು ತಂದೊಡ್ಡಿರುವ ಇನ್ನು ಹಲವಾರು ಸಮಸ್ಯೆಗಳು ನಮ್ಮೆದುರಿಗಿವೆ.

ಬಹುರಾಷ್ಟ್ರೀಯ ಕಂಪೆನಿಗಳನ್ನು ದೇಶದಲ್ಲಿ ಮುಕ್ತ ವ್ಯಾಪಾರ, ವ್ಯವಹಾರದ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು ಎನ್ನುವ ನಂಬಿಕೆಯನ್ನು ಭಿತ್ತಲಾಯಿತು. ಆದರೆ "ಈ ಕಂಪೆನಿಗಳು ತಮ್ಮೊಂದಿಗೆ ಬಂಡವಾಳವನ್ನು ತೂರುತ್ತವೆ, ಆಧುನಿಕ ತಂತ್ರಜ್ಞಾನವನ್ನೊದಗಿಸುತ್ತವೆ, ನಮ್ಮ ಜನರಿಗೆ ಕೆಲಸ ಕೊಡುತ್ತವೆ, ಇದರಿಂದ ನಮ್ಮ ದೇಶದ ರಫ್ತು ವ್ಯಾಪಾರ ಹೆಚ್ಚಾಗುತ್ತದೆಯೆಂಬ ಭ್ರಮೆಗಳು ನಮ್ಮ ಸರಕಾರಗಳಿರುವುದರಿಂದಲೇ ಇಂದು ದೇಶದಾದ್ಯಂತ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಬೀಡುಬಿಟ್ಟಿವೆ. ಆದರೆ ಇವೆಲ್ಲ ಹುಸಿಭ್ರಮೆಗಳೆಂಬುದು ಈಗಾಗಲೇ ಸಾಬೀತಾಗಿದೆ. ಈ ಕಂಪನಿಗಳ ಆಗಮನದಿಂದ ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಬೆಳೆದುಬಂದಿರುವ ಗುಡಿಕೈಗಾರಿಕೆಗಳು, ದೇಶೀಯ ಕಸುಬುಗಳು ನಾಶವಾಗತೊಡಗಿವೆ. ಇವುಗಳನ್ನೇ ಆಶ್ರಯಿಸಿಕೊಂಡಿದ್ದ ಕೋಟ್ಯಾಂತರ ಜನ ಬೀದಿ ಪಾಲಾಗಿದ್ದಾರೆ."[೮] ಎಂದು ಬಸವರಾಜ ಸಬರದ ಅವರು ಜಾಗತೀಕರಣದಿಂದ ದೇಶದ ಪ್ರಗತಿ ಎನ್ನುವುದು ದೇಶದಲ್ಲಿ ಮಾಡುತ್ತಿರುವ ಅನೇಕ ಪಲ್ಲಟಗಳ ಕುರಿತು ಮಾತನಾಡುತ್ತಾರೆ.

ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಸಾಲವನ್ನು ಒದಗಿಸುವುದರ ಮೂಲಕ ಆ ದೇಶಗಳನ್ನು ಅಧೀನತೆಗೆ ಒಳಪಡಿಸಿಕೊಂಡು ಆ ರಾಷ್ಟ್ರಗಳ ಮೇಲೆ ಅಧಿನಾಯಕತ್ವವನ್ನು ಸ್ಥಾಪಿಸುವುದು ಈ ಜಾಗತೀಕರಣದಿಂದ ಉಂಟಾಗುತ್ತಿರುವ ಬಹುಮುಖ್ಯ ಪರಿಣಾಮ ಮತ್ತು ಉದ್ದೇಶವಾಗಿದೆ. ನವವಸಾಹತುಶಾಹಿ ನೀತಿಯನ್ನು ಅನುಸರಿಸಿ ತೃತೀಯ ರಾಷ್ಟ್ರಗಳನ್ನು ಮತ್ತೆ ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳುವ ಹುನ್ನಾರವನ್ನು ಕಾಣುತ್ತಿದ್ದೇವೆ. "ಜಾಗತೀಕರಣದಿಂದಾಗಿ, ತೃತೀಯ ಜಗತ್ತಿನ ಎಲ್ಲಾ ದೇಶಗಳು ಈಗ ತಮ್ಮ ಉತ್ಪನ್ನಗಳನ್ನು ಅಗ್ಗಕ್ಕೆ ಮಾರಿ, ತಮ್ಮ ಅವಶ್ಯಕತೆಗಳನ್ನು ದುಬಾರಿ ಬೆಲೆಗೆ ಕೊಳ್ಳುವ ಕಷ್ಟಕ್ಕೆ ಸಿಲುಕಿವೆ. ಈ ಅರ್ಥದಲ್ಲಿ ಮೂರನೆಯ ಜಗತ್ತಿನ ದೇಶಗಳು ಅನುಭವಿಸಿದ ವಸಾಹತುಶಾಹಿಯ ಮುಂದುವರಿಕೆಯೇ ಆಗಿದೆ. ಆದರೆ ವಸಾಹತುಶಾಹಿಯಲ್ಲಿ ತೃತೀಯ ಜಗತ್ತಿನ ಮೇಲೆ ಯಜಮಾನಿಕೆ ನಡೆಸಿದ್ದು ಐರೋಪ್ಯ ದೇಶಗಳಾದರೆ, ಜಾಗತೀಕರಣದಲ್ಲಿ ಯಜಮಾನಿಕೆ ಅಮೇರಿಕದಲ್ಲಿ ಕೇಂದ್ರೀಕೃತವಾಗಿದೆ."[೯] ಎಂದು ಜಿ.ರಾಜಶೇಖರ ಅವರು ತಿಳಿಸುತ್ತಾರೆ. ಇದರಿಂದ ಮೂರನೇ ದೇಶದ ಪ್ರಜೆಗಳನ್ನು ಗ್ರಾಹಕರನ್ನಾಗಿ ಮಾಡುವುದರ ಮೂಲಕ ಸಮಾಜದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಲಯಗಳು ಬಹುಬೇಗ ಬದಲಾವಣೆಗೆ ಒಳಗಾಗುತ್ತಿವೆ.

“ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಮನೋಭಾವದಲ್ಲೇ ಆದ ಮೂಲಭೂತ ಬದಲಾವಣೆ, ಇದು ಆತನನ್ನು ವರ್ತಮಾನದಲ್ಲಿ ಬದುಕುವ ಮನುಷ್ಯನ ಸಾಮಾನ್ಯ ನೆಲೆಯಿಂದ; ಕೇವಲ ಭವಿಷ್ಯದ ಭದ್ರತೆಗಾಗಿ ಹಪಹಪಿಸುವ ಕೊಳ್ಳುಬಾಕ ಆರ್ಥಿಕ ಮನುಷ್ಯನನ್ನಾಗಿ ಪರಿವರ್ತಿಸಿದ್ದು, ಇದು ಹುಟ್ಟುಹಾಕಿದ ದುರಾಸೆ, ಈ ದುರಾಸೆಯನ್ನು ಪೋಷಿಸುವ ನಿರ್ದಿಷ್ಟ ಮಾದರಿಯ ಅನಿರ್ಬಂಧಿತ ಅಭಿವೃದ್ಧಿ ಮೀಮಾಂಸೆ – ಇವೆಲ್ಲವೂ ಮನುಷ್ಯನನ್ನು ಅತ್ಯಂತ ಕೌರ್ಯ ತುಂಬಿದ ಜೀವ ವಿರೋಧಿ ನೆಲೆಗಳಿಗೆ ಕೊಂಡೊಯ್ದು ಹಿಂಸೆಯನ್ನು ಶಾಶ್ವತೀಕರಿಸಿ ನ್ಯಾಯ ಸಮ್ಮತಿಗೊಳಿಸಿಬಿಟ್ಟಿದೆ.”[೧೦] ಎಂದು ಮುರಾರಿ ಬಲ್ಲಾಳ ಅವರು ಜಾಗತೀಕರಣವು ಮನುಷ್ಯನ ಬದುಕಿನ ಮೇಲೆ ಮಾಡುತ್ತಿರುವ ಪರಿಣಾಮಗಳನ್ನು, ಪಲ್ಲಟಗಳನ್ನು ತಿಳಿಸಿದ್ದಾರೆ.

ಈ ಜಾಗತೀಕರಣ ವ್ಯವಸ್ಥೆಯಿಂದ ಅಧಿಕ ಉತ್ಪಾದನೆ ಮತ್ತು ಗ್ರಾಹಕ ಶಕ್ತಿಯ ಅಭಾವದಿಂದ ಮಾರುಕಟ್ಟೆಯ ಕುಸಿತದಂತಹ ವೈರುಧ್ಯಗಳು ಸಂಭವಿಸುತ್ತವೆ. ಪರಿಣಾಮವಾಗಿ ಕೃಷಿ, ಕೈಗಾರಿಕೆ, ವ್ಯಾಪಾರೋದ್ಯಮಗಳು ಕುಸಿದು ನಿರುದ್ಯೋಗ ಉಂಟಾಗುತ್ತದೆ. ಮಾರುಕಟ್ಟೆಯ ಮೂಲಕ ರೈತರು ಇದುವರೆಗೂ ಬಳಸಿಕೊಂಡು ಬಂದಿದ್ದ ದೇಶೀ ತಳಿಗಳನ್ನು ಮೂಲೆಗುಂಪು ಮಾಡಿ ಹೈಬ್ರಿಡ್ ತಳಿಗಳನ್ನು ಕಂಪೆನಿಗಳು ಸೃಷ್ಟಿಸುವುದರ ಮೂಲಕ ಅದಕ್ಕೆ ಔಷಧಿ, ಮತ್ತಿತರ ಸಲಕರಣೆಗಳಿಗಾಗಿ ಸಾಲವನ್ನು ಮಾಡಬೇಕಾದ ಅನಿವಾರ್ಯತೆ ಇಂದಿದೆ. ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ರೈತರು ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆ ದೊರೆಯದೇ ಆತ್ಯಹತ್ಯೆ ಶರಣಾಗುವಂತಹ ಪರಿಸ್ಥಿತಿ ಎದುರಾಗಿದೆ.

ಅಲ್ಲದೇ ಇಂದಿನ ಗುಡಿಕೈಗಾರಿಕೆಗಳು ಜಾಗತೀಕರಣದ ಸಂದರ್ಭದಲ್ಲಿ ಕಳೆದುಹೋಗಿ ಆ ಸ್ಥಾನದಲ್ಲಿ ಖಾಸಗೀ ಬಂಡವಾಳಶಾಹಿಗಳು ಕಾರ್ಖಾನೆಗಳನ್ನು ನಿರ್ಮಿಸಿ ತಮ್ಮ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಕುಶಲಕೈಗಾರಿಕೆಗಳು ಸಮಾಜದಿಂದ ಕಳೆದುಹೋಗುತ್ತಿವೆ ಎನ್ನುವುದನ್ನು ಅಮರೇಶ ನುಗಡೋಣಿ ಅವರು ಹೀಗೆ ತಿಳಿಸುತ್ತಾರೆ. “ನಮ್ಮ ಮೂಲ ಕಸುಬುಗಳಲ್ಲಿ ಒಂದಾದ ವ್ಯವಸಾಯ ದಿವಾಳಿಯಾಗಿ ಹೋಗಿದೆ. ರೈತರು, ರೈತರನ್ನು ನಂಬಿ ದುಡಿಯುವ ವರ್ಗಗಳು ದಿಕ್ಕುಗೇಡಿಯಾಗಿವೆ. ಪಟ್ಟಣ–ನಗರಗಳ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಯಾವುದೇ ಕುಲಕಸುಬು ಇಲ್ಲದಂತಾಗಿಬಿಟ್ಟಿದೆ. ಸರಕಾರದ ನೌಕರರು ಜೀವ ಹಿಡಿದು ಉಸಿರಿಗಾಗಿ

ಹೆಣಗುವಂತಾಗಿದೆ. ನೆಲ-ಜಲ-ಗಾಳಿ ಖಾಸಗೀಕರಣದಿಂದ ಬರಡಾಗಿದೆ. ಇದೆಲ್ಲವನ್ನು ನೋಡಿದರೆ ಜಾಗತೀಕರಣವು ನಮ್ಮ ಸಾಂಸ್ಕೃತಿಕ ಬದುಕಿನ ಎಲ್ಲ ಆಯಾಮಗಳಿಗೆ ಮಾರಣಾಂತಿಕ ಪೆಟ್ಟು ನೀಡುತ್ತಿದೆ."[೧೧] ಎಂದಿದ್ದಾರೆ.

ಬಹುರಾಷ್ಟ್ರೀಯ ಕಂಪೆನಿಗಳ ಅಡಿಯಲ್ಲಿ ಬೇಕಾದ ಅನೇಕ ರೀತಿಯ ತಾಂತ್ರಿಕ ವಿದ್ಯಾಭ್ಯಾಸವನ್ನು ಮಾತ್ರ ಪರಿಗಣಿಸಿ ಕಲೆ, ಸಾಹಿತ್ಯ, ಸಂಸ್ಕೃತಿಯ ಭಾಗಗಳಾದ ಇನ್ನಿತರೆ ಕ್ಷೇತ್ರಗಳನ್ನು ಜಾಗತೀಕರಣವನ್ನು ಹಿಂದೆ ಸರಿಯುವಂತೆ ಮಾಡಿದೆ. ಇದನ್ನೇ ದಸ್ತಗೀರ್‌ಸಾಬ್ ದಿನ್ನಿ ಅವರು "ಜಾಗತೀಕರಣದ ಕಳ್ಳಬೆಕ್ಕಿನ ಹೆಜ್ಜೆಯಿಂದಾಗಿ ಶಿಕ್ಷಣ, ಕಲೆ, ಸಾಹಿತ್ಯ, ಸಂಸ್ಕೃತಿ, ದೇಶೀಯತೆ, ಭಾಷೆ, ಕೃಷಿ, ಉದ್ಯೋಗ, ಸಮೂಹ ಮಾಧ್ಯಮಗಳಂತಹ ಕ್ಷೇತ್ರಗಳ ಮೇಲೆ ಗಾಢವಾದ ಪ್ರಭಾವ ಬೀರಿದ್ದರಿಂದ ಕಂಡರಿಯದ ಅನೇಕ ಸ್ಥಿತ್ಯಂತರಗಳು ಸಂಭವಿಸಿವೆ. ನಿರುಮ್ಮಳವಾಗಿ ಉಸಿರಾಡಬೇಕಾದ ನಮ್ಮ ಸಮುದಾಯ ಹಲವು ಬಗೆಯ ಬಿಕ್ಕಟ್ಟು, ಆತಂಕ, ತವಕ, ತಲ್ಲಣಗಳನ್ನು ಎದುರಿಸುವಂತಾಗಿದೆ."[೧೩] ಎಂದಿದ್ದಾರೆ.

ಅಲ್ಲದೇ ಉತ್ಪಾದನಾ ಸಾಮರ್ಥ್ಯವನ್ನು ಸೃಷ್ಟಿಸುವ ಕ್ಷೇತ್ರಗಳೆಂದು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಮೂಲ ಎಂದು ಪರಿಗಣಿಸಿ ಇನ್ನುಳಿದ ಕ್ಷೇತ್ರಗಳನ್ನು ಅನುತ್ಪಾದಕಗಳೆಂದು ಮೂಲೆಗುಂಪು ಮಾಡಲಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾಗಿ ಶಿಕ್ಷಣ ಜ್ಞಾನಕ್ಕಾಗಿ ಅಲ್ಲ, ಅದು ಉದ್ಯೋಗಕ್ಕಾಗಿ ಎಂಬ ಆಶಯವನ್ನಿಟ್ಟುಕೊಂಡು ಬೆಳೆಯುತ್ತಿದೆ. ಇದನ್ನೇ "ಇಂಗ್ಲೀಷ್ ಮಾದರಿಯ ಶಿಕ್ಷಣ ಕ್ರಮದಿಂದ ನಮ್ಮಲ್ಲಿ ಭಾಷೆಯ ಬಗೆಗಿನ ಕಲ್ಪನೆಗಳು ಬೇರೆಯೇ ಆದುವು. ಭಾಷೆಯ ಕಲಿಕೆ ಮತ್ತು ಉದ್ಯೋಗಕ್ಕೆ ಒಂದು ಸಂಬಂಧವು ಕಲ್ಪಿತವಾಯಿತು."[೧೪] ಎಂದು ಕೇಶವಶರ್ಮ ಅವರು ತಿಳಿಸುತ್ತಾರೆ. ಜಾಗತೀಕರಣವು ವಿಭಿನ್ನ ಪ್ರಾದೇಶಿಕ ಭಾಷೆಗಳ ಮೇಲೆ ಇಂಗ್ಲೀಷ್ ಭಾಷೆಯು ಪ್ರಭಾವವನ್ನು ಬೀರುವುದರ ಮೂಲಕ ಆ ಭಾಷೆಗಳ ಅಳಿವಿಗೆ ಕಾರಣವಾಗುತ್ತಿದೆ.

"ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಕೃತಿಯ ಭಾಗವಲ್ಲ ಎಂಬ ಒಡೆದು ನೋಡುವ ಛಿದ್ರ ಮನೋಭಾವವನ್ನು ಇಂದಿನ ತಂತ್ರಜ್ಞಾನದ ವಿದ್ಯಾಭ್ಯಾಸ ಮನದಟ್ಟು ಮಾಡುತ್ತಿದೆ. ಇಂಜಿನಿಯರಿಂಗ್ ಹಾಗೂ ಇನ್ನಿತರ ವಿಜ್ಞಾನ ವಿಷಯಗಳಲ್ಲಿ ಪರಿಣತರಾಗುವವರು ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಬಗ್ಗೆ ಸಂಬಂಧವಿಲ್ಲದಂತೆ ವರ್ತಿಸುವುದು ನಮ್ಮ ಕಣ್ಣ ಮುಂದೆಯೇ ಇದೆ. ಇವರೆಲ್ಲರ ದೃಷ್ಟಿ ಒಂದೇ: ಇಂಜಿನಿಯರಾಗುವುದು, ಅನಂತರ ಅಮೆರಿಕದ ಯಾವುದೋ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಉದ್ಯೋಗ ದೊರಕಿಸಿಕೊಳ್ಳುವುದು.

ಬಹುರಾಷ್ಟ್ರೀಯ ಕಂಪನಿಗಳೂ ಇಂಥ ಮನೋಭಾವವನ್ನೇ ಇನ್ನೂ ಹೆಚ್ಚು ಮಾಡಿ ಬುದ್ಧಿವಂತಿಕೆಯನ್ನು, ಅರ್ಥಾತ್ ತಂತ್ರಜ್ಞಾನವನ್ನು ಹಣದ ಆಕರ್ಷಣೆ ಒಡ್ಡಿ ತಮ್ಮ ಕಂಪೆನಿಗಳಿಗೆ ಸ್ಥಳಾಂತರಿಸುತ್ತವೆ. ಪ್ರತಿಭಾ ಪಲಾಯನವೂ ಜಾಗತೀಕರಣದ ಒಂದು ಫಲ."[೧೫] ಎಂದು ರಂಗಾರೆಡ್ಡಿ ಕೋಡಿರಾಂಪುರ ಅವರು ತಿಳಿಸುತ್ತಾರೆ. ಅಂದರೆ ಇಂದಿನ ಶಿಕ್ಷಣವು ಮಕ್ಕಳನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಉದ್ಯೋಗವನ್ನು ಮಾಡಲು ಕಲಿಸುವ ಶಿಕ್ಷಣದಂತಿದೆ. ಅಲ್ಲದೇ ಉದ್ಯೋಗವೆನ್ನುವುದು ಕೇವಲ ಆರ್ಥಿಕ ಸಂಪಾದನೆಗಾಗಿ ಎನ್ನುವ ಮನೋಭಾವನೆಯನ್ನು ರೂಪಿಸುತ್ತಿರುವುದು ಜಾಗತೀಕರಣವು ಸೃಷ್ಟಿಸಿರುವ ಕಂದರವಾಗಿದೆ.

ಅಲ್ಲದೇ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವು ಇಂದು ಸಮಾಜದ ಮೇಲೆ ಮಾಡುತ್ತಿರುವ ಪರಿಣಾಮಗಳನ್ನು ಮನುಚಕ್ರವರ್ತಿ ಅವರು ಹೀಗೆ ವಿಶ್ಲೇಷಿಸುತ್ತಾರೆ. "ಆಧುನಿಕ ತಂತ್ರಜ್ಞಾನವು ಅಂತರ್ಜಾಲ ಮತ್ತು ಈಮೇಲ್‌ದ ಮೊದಲಾದವುಗಳ ಪ್ರಯೋಜನದ ಬಗ್ಗೆ ನಾವು ಎಷ್ಟೇ ಮಾತನಾಡಿದರೂ ಅವೆಲ್ಲ ಮೂಲಭೂತವಾದ ಕಾರ್ಪೋರೇಟ್ ಪ್ರಪಂಚದ ಅಸ್ತ್ರಗಳೆಂಬುದನ್ನು ನಾವು ಮರೆಯಬಾರದು. ಜತೆಗೆ, ಅಂತರ್ಜಾಲ ಮತ್ತು ಈಮೇಲ್‌ಗಳನ್ನು ಕ್ರಮೇಣ ಉಪಭೋಗ ಸಂಸ್ಕೃತಿಗೆ ಸೀಮಿತಗೊಳಿಸುವ ಕಾರ್ಪೋರೇಟ್ ಪ್ರಪಂಚದ ತತ್ವವನ್ನು ಕೂಡಾ ನಾವು ಅರಿಯಬೇಕಾದ ಅಗತ್ಯವಿದೆ."[೧೬] ಎನ್ನುತ್ತಾರೆ. ಅಂದರೆ ಇಂತಹ ಕಾರ್ಪೋರೇಟ್ ಜಗತ್ತು ಆಧುನಿಕ ಉಪಕರಣಗಳ ಸಾಧನಗಳ ಮೂಲಕ ತನ್ನ ಹಿಡಿತವನ್ನು ಸಾಧಿಸುತ್ತಿರುವುದನ್ನು ಸೂಕ್ಷ್ಮವಾಗಿ ವಿವರಿಸುತ್ತಾರೆ.

ಜಾಗತೀಕರಣ ದಲಿತರ, ಹಿಂದುಳಿದವರ, ಮಹಿಳೆಯರ ಅಲ್ಪಸಂಖ್ಯಾತರ, ಬುಡಕಟ್ಟುಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿದೆ. ಮಾನವ ಸಂಬಂಧಗಳ ಮೌಲ್ಯಗಳನ್ನು ಇಂದಿನ ತಂತ್ರಜ್ಞಾನದ ಯುಗದಲ್ಲಿ ಕಳೆದುಕೊಳ್ಳುತ್ತಿರುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಜಾಗತೀಕರಣವು ಇಂದು ಮಾನವರಲ್ಲಿ ಇರುವ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುವುದರ ಜೊತೆಗೆ ಎಲ್ಲಾ ಕ್ಷೇತ್ರಗಳನ್ನು ಮಾರುಕಟ್ಟೆಯ ಹಿನ್ನೆಲೆಯಲ್ಲಿಯೇ ನೋಡುವ ಪರಿಪಾಠವನ್ನು ಬೆಳೆಸುತ್ತಿದೆ. ಅಲ್ಲದೇ "ಜಾಗತೀಕರಣಕ್ಕೆ ಮನುಷ್ಯ ಸಂಬಂಧವು ಮುಖ್ಯವಲ್ಲ. ಲಾಭದ ದುರಾಸೆಯೇ ಹೆಚ್ಚು."[೧೭] ಎಂದು ಕೇಶವಶರ್ಮ ಅವರ ಮಾತಿನ ಅರ್ಥವೂ ಇದೇ ನೆಲೆಯಲ್ಲಿದೆ.

ಜಾಗತೀಕರಣ ಸಂದರ್ಭದಲ್ಲಿ ನೆಲಮೂಲ ಸಂಸ್ಕೃತಿಯು ಅವನತಿಯ ಪಾಲಿಗೆ ಎದುರಾಳಿಯಾಗಿ ಪರಿಣಿಮಿಸಿದೆ ಎನ್ನುವ ಚಿಂತನೆಗೆ ಯಶವಂತ ಡೊಂಗ್ರೆ ಅವರು "ಜಾಗತೀಕರಣವನ್ನು 'ನಿಮ್ಮ ಸಂಸ್ಕೃತಿ ಮೇಲಿನ ದಬ್ಬಾಳಿಕೆ' ಎನ್ನುವ ಅರ್ಥದಲ್ಲಿ ನೋಡುವುದಕ್ಕಿಂತಲೂ ಇದು 'ನಮ್ಮ ಈಗಿನ ಆರ್ಥಿಕ ಚೌಕಟ್ಟನ್ನು ಮತ್ತು ಜನರ ಒಟ್ಟಾರೆ ಏಳಿಗೆಯ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಪ್ರಶ್ನಿಸುವ ಪ್ರಕ್ರಿಯೆ ಎಂದು ನೋಡುವುದು ಹೆಚ್ಚು ಮುಖ್ಯ."[೧೮] ಎನ್ನುತ್ತಾರೆ. ಆದರೆ ಬಹುತ್ವದ ಭಾರತದ ಮೇಲೆ ಜಾಗತೀಕರಣವು ಮಾಡುತ್ತಿರುವ ಏಕತ್ವದ ಮಾರುಕಟ್ಟೆಯು ಬಹುತ್ವವನ್ನು ನಾಶ ಮಾಡುವುದರ ಸಂಕೇತವಾಗುತ್ತಿರುವುದನ್ನು ರಂಗಾರೆಡ್ಡಿ ಕೋಡಿರಾಂಪುರ ಅವರು ಹೀಗೆ ತಿಳಿಸುತ್ತಾರೆ. "ಸರಕು ಸಂಸ್ಕೃತಿ ಜಾಗತೀಕರಣದ ಕಾಲಘಟ್ಟದಲ್ಲಿ ಜಗತ್ತನ್ನೇ ಒಂದು ಹಳ್ಳಿಯನ್ನಾಗಿಸಿ ವಿಶ್ವವನ್ನೇ ಒಂದು ಏಕರೂಪದ ಮಾರುಕಟ್ಟೆಯನ್ನಾಗಿಸಿದೆ. ಜಗತ್ತಿನಾದ್ಯಂತ ಒಂದೇ ಮಾದರಿಯ ವಸ್ತುಗಳು ಚಲಾವಣೆಗೆ ಬಂದಂತೆ ನೆಲದ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಭಿನ್ನಮಾದರಿಯ ವಸ್ತುಗಳು ಮೂಲೆಗುಂಪಾಗುತ್ತವೆ. ಸರಕು ಸಂಸ್ಕೃತಿಯು ನೆಲದ ಸಂಸ್ಕೃತಿಯ ಜೊತೆ ಪೈಪೋಟಿಗಿಳಿಯುತ್ತದೆ. ಬಹುಮುಖತೆಯುಳ್ಳ ನೆಲದ ಸಂಸ್ಕೃತಿ ಅದನ್ನು ಎದುರಿಸಲಾಗದೆ ತಾನೇ ಹಿಂದಕ್ಕೆ ಸರಿಯುತ್ತದೆ."[೧೯]

ಅಲ್ಲದೇ ಇದು ದೇಶೀಯ ನೆಲಮೂಲ ಸಂಸ್ಕೃತಿಯನ್ನು ನಾಶ ಮಾಡುವುದರ ಜೊತೆಗೆ ತನ್ನ ಸಂಸ್ಕೃತಿಯನ್ನು ಹೇರುತ್ತಿರುವುದನ್ನು ಕೆ. ಫಣಿರಾಜ್ ಅವರು ಹೀಗೆ ವಿವರಿಸಿದ್ದಾರೆ. "ಜಾಗತೀಕರಣವು ಮುಕ್ತ ವ್ಯಾಪಾರ-ವ್ಯವಹಾರಗಳ ನೆಪ ಮಾಡಿಕೊಂಡು, ದೈಹಿಕ ಲೋಲುಪತೆಯನ್ನೇ ಮುಖ್ಯ ಪ್ರಾಣವಾಗಿಸಿಕೊಂಡಿರುವ ಕೀಳಾದ 'ಪಾಶ್ಚಾತ್ಯ ಸಂಸ್ಕೃತಿ'ಯನ್ನು ನಮ್ಮ ಮೇಲೆ ಹರಿಬಿಡುತ್ತದೆ. ಈ ಪ್ರಕ್ರಿಯೆಯಿಂದ ಶ್ರೇಷ್ಠವೂ ಅನನ್ಯವೂ ಆದ 'ನಮ್ಮ ಸಂಸ್ಕೃತಿ'ಯು ಅಪಾಯದಲ್ಲಿ ಸಿಲುಕಿಬಿಟ್ಟಿದೆ. ಈ ರೀತಿಯಲ್ಲಿ 'ಜಾಗತೀಕರಣ'ವು 'ದೇಶೀಯ ಸಂಸ್ಕೃತಿ'ಯ ಮೇಲೆ 'ಪರಕೀಯ ಸಂಸ್ಕೃತಿ'ಯು ನಡೆಸುತ್ತಿರುವ ಆಕ್ರಮಣವಾಗಿದೆ."[೨೦] ಎನ್ನುತ್ತಾರೆ. ಅಂದರೆ ಇಲ್ಲಿ ಜಾಗತೀಕರಣವು ದೇಶೀಯ ಪರಂಪರೆಯನ್ನು, ಸಂಸ್ಕೃತಿಯನ್ನು ಪಲ್ಲಟಗೊಳಿಸುವುದರ ಮೂಲಕ ಆ ಜಾಗದಲ್ಲಿ ತನ್ನ ಸಂಸ್ಕೃತಿಯನ್ನು ಇಲ್ಲವೇ ಪಾಶ್ಚಾತ್ಯ ಸಂಸ್ಕೃತಿಯನ್ನು ಹೇರುವ ಕೆಲಸವನ್ನು ಮಾಡುತ್ತಿದೆ ಎನ್ನುವ ಅಭಿಪ್ರಾಯವಿದೆ.

ಜಾಗತೀಕರಣದಿಂದಾಗಿ ಕುಟುಂಬಗಳು ಇಂದು ಆರ್ಥಿಕವಾಗಿ ಸಬಲವಾಗಿದ್ದರೂ ಕೂಡ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅಲ್ಲದೇ ಭಾರತದ ಸಂದರ್ಭದಲ್ಲಿ

ಅವಿಭಕ್ತ ಕುಟುಂಬಗಳು ಇಂದು ಒಡೆದುಹೋಗಿ ವಿಭಕ್ತ ಕುಟುಂಬ ವ್ಯವಸ್ಥೆಯು ಇದ್ದಿತು. ಆದರೆ ಜಾಗತೀಕರಣದ ಈ ಸಂದರ್ಭದಲ್ಲಿ ಕುಟುಂಬ ಎನ್ನುವುದು ಸ್ಥಿತ್ಯಂತರವನ್ನು ಪಡೆದುಕೊಂಡಿರುವುದನ್ನು ನಾವು ನೋಡಬಹುದು. ಅಲ್ಲದೇ ಆರ್ಥಿಕತೆಯು ಇಂದು ಮುಖ್ಯಪಾತ್ರವನ್ನು ವಹಿಸಿದ್ದು, ಹಣವೇ ಇಂದು ಮಾರುಕಟ್ಟೆಯ ಮುಖ್ಯ ಭಾಗ ಆಗಿರುವುದರಿಂದ ಸಮಾಜವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿದೆ. ಶ್ರೀಮಂತರು ಮತ್ತು ಬಡವರ ನಡುವೆ ಕಂದರವು ಹೆಚ್ಚಿದ್ದು ಅಸಮಾನತೆಯು ಹೆಚ್ಚಾಗಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

"ಜಾಗತೀಕರಣ ಬಯಸುವ ಜಾಗತಿಕ ಏಕತೆ ಎಂಬುದು ಜಾಗತಿಕ ಶ್ರೀಮಂತರ ಏಕತೆಯಾಗಿದೆ ಅಷ್ಟೇ. ಏಕೆಂದರೆ ಇದು ಮಾಡುತ್ತಿರುವುದು ಆರ್ಥಿಕ ಬಲಾಢ್ಯರನ್ನು ಇನ್ನಷ್ಟು ಬಲಪಡಿಸುವ ಕೆಲಸವೇ ಹೊರತು ಆರ್ಥಿಕ ಬಲಾಢ್ಯತೆಯ ಮೂಲಕ ಸಾಮಾಜಿಕ ಬಲವರ್ಧನೆ ಮಾಡುವ ಕೆಲಸವಲ್ಲ. ಲೌಕಿಕವಾದ ದೃಷ್ಟಿಯಲ್ಲಿ ಹೇಳುವುದಾದರೆ ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತಿರುವುದೇ ಜಾಗತೀಕರಣ."[೨೧] ಎಂದು ಅರವಿಂದ ಚೊಕ್ಕಾಡಿ ಅವರು ಜಾಗತೀಕರಣವು ಉಂಟು ಮಾಡುತ್ತಿರುವ ಸಮಾಜದಲ್ಲಿನ ಅಸಮಾನತೆಯನ್ನು ತಿಳಿಸುತ್ತಾರೆ.

ಮಹಿಳೆಯರು ಜಾಗತೀಕರಣ ಸಂದರ್ಭದಲ್ಲಿ ಈ ಹಿಂದಿಗಿಂತ ಹೆಚ್ಚು ಆರ್ಥಿಕವಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸದೃಢವಾಗಿದ್ದಾರೆ. ಆದರೆ ಜಾಗತೀಕರಣವು ಅವರಿಗೆ ಮಾರುಕಟ್ಟೆಯಲ್ಲಿ ಒಂದು ಸರಕು ಎಂಬಂತೆ ಅನೇಕ ಜಾಹಿರಾತುಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಅಲ್ಲದೇ ಲಿಂಗತಾರತಮ್ಯವು ಹೆಚ್ಚಾಗಿದ್ದು ಅಸಂಘಟಿತ ವಲಯದಲ್ಲಿ ಮಹಿಳೆಯರಿಗೆ ಕಡಿಮೆ ವೇತನದ ಜೊತೆಗೆ ದೈಹಿಕವಾದ ಮತ್ತು ಮಾನಸಿಕವಾದ ಶೋಷಣೆಯನ್ನು ಮಾಡಲಾಗುತ್ತಿದೆ. "ಮಹಿಳೆಯರಿಗೆ ಸಂಬಂಧಿಸಿದಂತೆ ಈಗಾಗಲೇ ನಮ್ಮ ಅನುಭವಕ್ಕೆ ಬಂದಿರುವ ಸಂದರ್ಭಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜಾಗತೀಕರಣದ ತತ್ವಗಳು, ಸಿದ್ಧಾಂತಗಳು, ನೀತಿಗಳು ಪುರುಷಪ್ರಧಾನ ಮೌಲ್ಯಗಳನ್ನೇ ಹೊಂದಿವೆ. ಹಾಗಾಗಿ ಮೂಲಭೂತವಾಗಿ ಬಹುತೇಕ ಪುರುಷಪ್ರಧಾನ ಮೌಲ್ಯಗಳನ್ನೇ ಹೊಂದಿರುವ ಪ್ರಭುತ್ವದ ಯೋಜನೆಗಳನ್ನು ಮತ್ತೆ ಹೊರಗಿನಿಂದ ನಿರ್ದೇಶಿಸುವ ಶಕ್ತಿಗಳೂ ಅವೇ ಮೌಲ್ಯಗಳನ್ನು ಆಧರಿಸುವುದು ಈಗಾಗಲೇ ಇರುವ ಯಜಮಾನ್ಯವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ."[೨೨] ಎನ್ನುವ ಶೈಲಜ ಅವರ ಅಭಿಪ್ರಾಯವನ್ನು ಒಪ್ಪಬೇಕಾಗುತ್ತದೆ.

"ಇಂದು ಜಾಗತೀಕರಣದ ವಿರುದ್ಧ ಹುಟ್ಟಿಕೊಂಡಿರುವ ಪ್ರತಿಭಟನೆ, ಮುಷ್ಕರ, ಸಿಟ್ಟು, ದುಃಖ, ದುಮ್ಮಾನ ಇವೆಲ್ಲಾ ದಿಢೀರನೆ ಉದ್ಭವಿಸಿದ ಪ್ರತಿಕ್ರಿಯೆ ಅಲ್ಲ. ಕಳೆದ ಎರಡು ದಶಕಗಳಿಂದ ಏಕಮುಖ ನೀತಿಯನ್ನು ಮೂಲಮಂತ್ರವಾಗಿಟ್ಟುಕೊಂಡ ನಯವಂಚಕರೂಪಿನ ಅಮೆರಿಕಾ ನೇತೃತ್ವದ ಮೈತ್ರಿಕೂಟ ರೂಪಿಸಿರುವ ವಿಧಿ-ವಿಧಾನಗಳಿಗೆ ತೃತೀಯ ಜಗತ್ತಿನ ಬಡರಾಷ್ಟ್ರಗಳು ನೀಡುತ್ತಿರುವ ಉತ್ತರ ಅಷ್ಟೇ. ಈ ಪ್ರತಿರೋಧ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮಾತ್ರ ಹೊಸದು. ಏಕೆಂದರೆ ಶತಮಾನಗಳ ಕಾಲ ಶೋಷಣೆಯನ್ನೇ ಬದುಕುವ ಮಾರ್ಗವಾಗಿ ಅನುಸರಿಸುತ್ತಾ ಬಂದವರಿಗೆ ಪ್ರತಿಭಟನೆಯ ತಿರುಗೇಟು ಅನಿರೀಕ್ಷಿತವಾಗಿದೆ."[೨] ಎಂದು ಜಗದೀಶ್ ಕೊಪ್ಪ ಅವರ ಅಭಿಪ್ರಾಯವಾಗಿದೆ.

ಜಾಗತೀಕರಣದಿಂದ ಶಿಕ್ಷಣದ ಖಾಸಗೀಕರಣ, ಭೂಸ್ವಾದೀನ, ರೈತರ ಆತ್ಮಹತ್ಯೆ, ಅಸಮಾನತೆಯ ಸೃಷ್ಟಿ, ನಿರುದ್ಯೋಗ, ವಲಸೆ ಪ್ರವೃತ್ತಿ, ಪ್ರಾದೇಶಿಕ ಭಾಷೆಗಳ ನಾಶ, ಜ್ಞಾನದ ನಿಲುವನ್ನು ಏಕಮುಖವಾಗಿ ಪ್ರಕಟಿಸುವುದು ಇನ್ನೂ ಮುಂತಾದ ಸಾಮಾಜಿಕವಾದ ಬದಲಾವಣೆಗಳನ್ನು ಮಾಡುತ್ತಿದೆ. ಅಲ್ಲದೇ ನಗರೀಕರಣವು ಹೆಚ್ಚಾಗುತ್ತಿದ್ದು, ವಲಸೆ ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಇದರಿಂದ ಅನೇಕ ನೈಸರ್ಗಿಕ ವಿಕೋಪಗಳು ಸಂಭವಿಸಲು ಕಾರಣವಾಗುತ್ತಿವೆ. ಒಟ್ಟಿನಲ್ಲಿ ಜಾಗತೀಕರಣದ ಸಂದರ್ಭದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ, ಭಾಷಿಕ ಕ್ಷೇತ್ರದಲ್ಲಿ, ಸಂವಹನ ಮಾಧ್ಯಮದ ಕ್ಷೇತ್ರದಲ್ಲಿ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಚ್ಚಿನ ಬದಲಾವಣೆಗಳು ಉಂಟಾಗುತ್ತಿರುವುದನ್ನು ಜಾಗತೀಕರಣದ ಸಂದರ್ಭದಲ್ಲಿ ಬದಲಾಗುತ್ತಿರುವ ಸಮಾಜದ ಹಿನ್ನೆಲೆಯಲ್ಲಿ ಜಾಗತೀಕರಣದ ಪರಿಕಲ್ಪನೆಯನ್ನು ಹೀಗೆ ಗ್ರಹಿಸಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿ

೧. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೧೫೧

೨. ಶೇಷಗಿರಿರಾವ್.ಎಲ್.ಎಸ್., **ಹೊಸಗನ್ನಡ ಸಾಹಿತ್ಯ ಚರಿತ್ರೆ,** ಪು.ಸಂ-೬೪

೩. ಜಾಗತೀಕರಣ-**ಕಣಜ(ಅಂತರ್ಜಾಲ)**

೪. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೬೯

೫. ಬರಗೂರು ರಾಮಚಂದ್ರಪ್ಪ, **ಜಾಗತೀಕರಣ ಜಾರುಬಂಡೆ,** ಪು.ಸಂ-೧

೬. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೧೦೮

೭. ಅದೇ ಪುಸ್ತಕ, ಪು.ಸಂ-೯೮

೮. ಅದೇ ಪುಸ್ತಕ, ಪು.ಸಂ-೧೨೦

೯. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ-೮೧

೧೦. ಅದೇ ಪುಸ್ತಕ, ಪು.ಸಂ-೩೧

೧೨. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೧೪೯

೧೩. ಅದೇ ಪುಸ್ತಕ, (ಮುನ್ನುಡಿ), ಪು.ಸಂ-IV

೧೪. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೧೫

೧೫. ಅದೇ ಪುಸ್ತಕ, ಪು.ಸಂ-೫೧

೧೬. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ-೩೧

೧೭. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೭

೧೮. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ-೮೧

೧೯. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೪೮

೨೦. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ-೮೧

೨೧. ದಸ್ತಗೀರ್‌ಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ-೮೦

೨೨. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ-೧೧೪

೨೩. ಜಗದೀಶ್ ಕೊಪ್ಪ, **ಜಾಗತೀಕರಣ ಮತ್ತು ಗ್ರಾಮಭಾರತ,** ಪು.ಸಂ-೫

ಅಧ್ಯಾಯ : ನಾಲ್ಕು

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜದ ಸ್ವರೂಪ

ಅಧ್ಯಾಯ : ನಾಲ್ಕು

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಬದಲಾಗುತ್ತಿರುವ ಸಮಾಜ

ತೊಂಭತ್ತರ ದಶಕದ ನಂತರದಲ್ಲಿ ಉಂಟಾದ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ಪರಿಣಾಮವಾಗಿ ಅನೇಕ ಪಲ್ಲಟಗಳನ್ನು ಸಾಮಾಜಿಕ ಪರಿಸರದಲ್ಲಿ ಮಾತ್ರವಲ್ಲದೇ ಸಾಂಸ್ಕೃತಿಕ ಪರಿಸರದಲ್ಲೂ ಕಾಣಲು ಸಾಧ್ಯವಾಗಿದೆ. ಇಡೀ ಕನ್ನಡ ಸಾಹಿತ್ಯವು ಪ್ರಾಚೀನ ಕಾಲ ಅಂದರೆ ಪಂಪನ ಆದಿಯಾಗಿ ಇಂದಿನವರೆಗೂ ಸಮಾಜದಲ್ಲಿನ ವಿಷಯಗಳನ್ನೇ ತನ್ನ ಮೂಲಭೂತ ವಸ್ತುವಿಷಯವನ್ನಾಗಿ ಆಯ್ದುಕೊಂಡು ಸಾಹಿತ್ಯ ರಚನೆ ಮಾಡಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಅಲ್ಲದೇ ಕಾಲಘಟ್ಟಗಳ ಆಧಾರದಲ್ಲಿ ಕನ್ನಡ ಸಾಹಿತ್ಯವು ರಚನೆಯಾಗಿದೆ ಎನ್ನುವುದನ್ನು ಅನೇಕ ಅಧ್ಯಯನಗಳ ಮೂಲಕ ತಿಳಿಯಲಾಗಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯವು ಕೇವಲ 'ಆನಂದದಾಯತ್' ಎಂಬಂತೆ ಆಗದೇ ಅದು ಸಮಾಜವನ್ನು ತಿದ್ದುವ ಕೆಲಸವನ್ನು ಸೂಕ್ಷ್ಮ ನೆಲೆಯಲ್ಲಿ ಮಾಡುತ್ತಲೇ ಬಂದಿದೆ.

ಕನ್ನಡ ಸಾಹಿತ್ಯ ಕ್ಷೇತ್ರವು ಪ್ರಾಚೀನ ಕಾಲದಲ್ಲಿ ಗದ್ಯ ಪ್ರಕಾರದ ಜೊತೆಗೆ ಪದ್ಯವನ್ನು ಸೇರಿಸಿಕೊಂಡು ಚಂಪೂ ಪ್ರಕಾರವನ್ನು ಹುಟ್ಟುಹಾಕಿತು. ಅಲ್ಲಬೇ ನಂತರ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ಸಂಸ್ಕೃತ ಅಲ್ಲದೇ ದೇಸಿ ಮಟ್ಟುಗಳನ್ನು ತನ್ನ ಸಾಹಿತ್ಯ ರಚನೆಯಲ್ಲಿ ಬಳಸಿಕೊಂಡಿತು. ಚಂಪೂ ಪ್ರಕಾರವನ್ನು ಬಿಟ್ಟು ಹೊಸ ನೆಲೆಯ ಜನಸಾಮಾನ್ಯರಿಗೆ ಅರ್ಥವಾಗುವಂತೆ ಹುಟ್ಟಿಕೊಂಡ ವಚನ ಸಾಹಿತ್ಯವು ಕನ್ನಡದ/ಕರ್ನಾಟಕದ ಸಾಂಸ್ಕೃತಿಕ ಪರಿಸರದಲ್ಲಿ ಇದ್ದ ಅನೇಕ ಸಮಸ್ಯೆಗಳನ್ನು ಅರಿತು ಸಾಹಿತ್ಯದ ಮೂಲಕ ಅಕ್ಷರ ಕ್ರಾಂತಿಯ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಕ್ರಾಂತಿಯು ಉಂಟಾಗಲು ಕಾರಣವಾಯಿತು. ಅಲ್ಲದೇ ವಚನ ಸಾಹಿತ್ಯದ ಪೂರ್ವದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇದ್ದ ಅಷ್ಟಾದಶ ವರ್ಣನೆಗಳು, ರಾಜ, ಧರ್ಮ, ಪಂಡಿತ ಇನ್ನೂ ಅನೇಕ ರೀತಿಯ

ರಾಜಪ್ರಭುತ್ವದ ಅಡಿಯಲ್ಲಿಯೇ ಕಾವ್ಯದ ವಸ್ತು-ವಿಷಯ ನಿರ್ಣಯಗೊಳ್ಳುತ್ತಿತ್ತು. ಜನಸಾಮಾನ್ಯರನ್ನು ನಿರ್ಲಕ್ಷಿಸಿ ಕೇವಲ ರಾಜಪ್ರಭುತ್ವದ ವಿಷಯವನ್ನು ಆಯ್ಕೆ ಮಾಡಿಕೊಂಡ ಬಗೆಯನ್ನು ವಚನಕಾರರು ವಿರೋಧಿಸಿದ್ದಲ್ಲದೇ ಇಂತಹ ಸಾಹಿತ್ಯದ ಬದಲಿಗೆ ವಚನ ಸಾಹಿತ್ಯದಂತಹ ಸೃಷ್ಟಿಯಲ್ಲಿ ತೊಡಗಿದರು. ಸಮಾಜದಲ್ಲಿ ಇದ್ದಂತಹ ಅನೇಕ ಸಮಸ್ಯೆಗಳಾದ ಜಾತಿವ್ಯವಸ್ಥೆಯನ್ನು, ಅಸಮಾನತೆಯನ್ನು ಮುಂತಾದವುಗಳನ್ನು ಕಂಡ ವಚನ ಚಳುವಳಿಯು ಸಾಹಿತ್ಯ ಕ್ರಾಂತಿಯ ಜೊತೆಜೊತೆಗೆ ಸಾಮಾಜಿಕ ಕ್ರಾಂತಿಯನ್ನು ಕಾಣಬಹುದಾಗಿದೆ.

ಆನಂತರ ಬಂದ ಕೀರ್ತನಾ ಸಾಹಿತ್ಯ, ತತ್ವಪದ ಸಾಹಿತ್ಯಗಳೆಲ್ಲವೂ ಸಮಾಜದ ಬದಲಾವಣೆಗಳನ್ನು ಚರಿತ್ರೆಯ ರೂಪದಲ್ಲಿ ಆಕರಗಳಾಗಿ ಸಾಹಿತ್ಯ ವಲಯದಲ್ಲಿ ತಂದಿರುವುದನ್ನು ಕಾಣಬಹುದಾಗಿದೆ. ಆದರೆ ಹದಿನೆಂಟನೇ ಶತಮಾನದಲ್ಲಿ ಬ್ರಿಟೀಷರು ಭಾರತವನ್ನು ವಸಾಹತುಶಾಹಿಯನ್ನಾಗಿ ಮಾಡಿಕೊಂಡ ನಂತರದಲ್ಲಿ ಸಾಹಿತ್ಯದಲ್ಲಿ ಅನೇಕ ಬದಲಾವಣೆಗಳು ಉಂಟಾದದ್ದನ್ನು ಗಮನಿಸಬೇಕಾಗುತ್ತದೆ. ಇಂಗ್ಲೀಷ್ ಸಾಹಿತ್ಯದಿಂದ ಕೇವಲ ವಸ್ತು-ವಿಷಯ ಮಾತ್ರವಲ್ಲದೇ, ಅಲ್ಲಿನ ಸಾಹಿತ್ಯ ಪ್ರಕಾರಗಳಾದ ಭಾವಗೀತೆ, ಕಾದಂಬರಿ, ಸಣ್ಣಕತೆಯಂತಹ ಹಲವು ಸಾಹಿತ್ಯ ಪ್ರಕಾರಗಳನ್ನು ಕನ್ನಡ ಸಾಹಿತ್ಯವು ಎರವಲಾಗಿ ಪಡೆದುಕೊಂಡಿತು. ಕನ್ನಡ ಸಾಹಿತ್ಯದಲ್ಲಿ ಪಶ್ಚಿಮದ ಅನೇಕ ಪ್ರಕಾರಗಳನ್ನು ತೆಗೆದುಕೊಂಡ ಪರಿಣಾಮವಾಗಿ ಕನ್ನಡ ಸಾಹಿತ್ಯದಲ್ಲಿ ಇಲ್ಲಿಯವರೆಗೂ ಇದ್ದ ಸಾಹಿತ್ಯಿಕ ರೂಪ ಮತ್ತು ವಸ್ತುವಿನ ಆಯ್ಕೆ, ಆಶಯಗಳ ಹಿನ್ನೆಲೆಯಲ್ಲಿಯೂ ಅನೇಕ ಬದಲಾವಣೆಗಳು ಉಂಟಾಗಿ ಸಾಹಿತ್ಯದಲ್ಲಿ ಉದಾರವಾದ ಮಾನವತಾವಾದದ ನವೋದಯ ಸಾಹಿತ್ಯವು ರೂಪುಗೊಂಡಿತು. ಆದರೆ ಇಲ್ಲಿ ಮನುಷ್ಯ ಕೇಂದ್ರಿತವಾದ ಸಾಹಿತ್ಯ ರಚನೆಗೆ ನವೋದಯ ಕವಿಗಳು ಕೈ ಹಾಕಿದರೂ; ಸಮಾಜದಲ್ಲಿನ ಪ್ರಮುಖ ಸಮಸ್ಯೆಗಳಾದ ಜಾತಿವ್ಯವಸ್ಥೆ, ವರದಕ್ಷಿಣೆ, ವೇಶ್ಯಾಗಾರಿಕೆ, ಅಸಮಾನತೆ, ನಿರುದ್ಯೋಗ, ಬಡತನ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ರಚನೆಗೆ ತೊಡಗಲಿಲ್ಲ.

ಮುಂದೆ ಬಂದ ಪ್ರಗತಿಶೀಲ ಸಾಹಿತ್ಯವೂ ಇಂತಹ ಸಾಮಾಜಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸಾಹಿತ್ಯ ರಚನೆ ಮಾಡಿತು. ಆದರೆ ನಂತರದಲ್ಲಿ ಬಂದ ನವ್ಯ ಸಾಹಿತ್ಯವು ವ್ಯಕ್ತಿವಾದ, ಅಸ್ತಿತ್ವವಾದ, ಲೈಂಗಿಕತೆ ಮುಂತಾದ ನೆಲೆಯಲ್ಲಿ ಸಾಹಿತ್ಯ ರಚನೆಯಾಯಿತು. ಆದರೆ ನಂತರದಲ್ಲಿ ಕರ್ನಾಟಕದಾದ್ಯಂತ ಕೇಳಿ ಬಂದ ದಲಿತರ, ಅಲ್ಪಸಂಖ್ಯಾತರ, ನಿರ್ಗತಿಕರ ಕೂಗಾಗಿ ದಲಿತ-ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು. ದಲಿತ-ಬಂಡಾಯ ಸಾಹಿತ್ಯದ ಧ್ಯೇಯ ವಾಕ್ಯವಾದ 'ಖಡ್ಗವಾಗಲಿ ಕಾವ್ಯ ಜನರ

ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಆಶಯದಿಂದ ಸಾಹಿತ್ಯವು ರಚನೆಗೊಂಡಿತು. ಅಂದರೆ ಇಡೀ ಕನ್ನಡ ಸಾಹಿತ್ಯವು ಕಾಲಕಾಲಕ್ಕೆ ತಕ್ಕಂತೆ ಸಮಾಜದಲ್ಲಿ ಉಂಟಾಗುತ್ತಿರುವ ಸ್ಥಿತ್ಯಂತರಗಳನ್ನು ಸಾಹಿತ್ಯದ ಮೂಲಕ ಗುರ್ತಿಸಿದೆ.

ಸಮಾಜವು ನಿಂತ ನೀರಲ್ಲ. ಕಾಲದಿಂದ ಕಾಲಕ್ಕೆ ಸಮಾಜದಲ್ಲಿನ ಜನರ ಆಸೆ-ಆಕಾಂಕ್ಷೆಗಳಿಗೆ ಅನುಗುಣವಾಗಿ ಸಮಾಜದಲ್ಲಿ ಬದಲಾವಣೆಗಳು ಉಂಟಾಗುತ್ತಿರುತ್ತವೆ. ಅಂತೆಯೇ ಇದು ಕೆಲವು ಬಾರಿ ಸಮಾಜ ಒಪ್ಪಿತ ಜನರಿಂದಲೇ ಆಗುತ್ತದೆ ಇಲ್ಲವೇ ಪ್ರಭುತ್ವ ಇಂತಹ ನಿರ್ಧಾರಗಳನ್ನು ಹೇರಿದಾಗ ಇಡೀ ವ್ಯವಸ್ಥೆಯನ್ನೇ ಪಲ್ಲಟಿಸಬಹುದಾದ ಬದಲಾವಣೆಗಳು ಆಗುತ್ತವೆ. ಇಂತಹ ಬದಲಾವಣೆಗಳನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದು. ಅರಸರ ಪ್ರಭುತ್ವದಲ್ಲಿ ಇಂತಹ ಬದಲಾವಣೆಗಳನ್ನು ಇತಿಹಾಸದಿಂದ ಕಂಡುಕೊಳ್ಳಲು ಸಾಧ್ಯವಾಗಿದೆ. ನಂತರ ಭಾರತವನ್ನು ವಸಾಹತು ರಾಷ್ಟ್ರವನ್ನಾಗಿ ಮಾಡಿಕೊಂಡ ಬ್ರಿಟೀಷರು ಭಾರತಕ್ಕೆ ಬಂದ ಪರಿಣಾಮವಾಗಿ ಭಾರತದಲ್ಲಿ ಅನೇಕ ಪಲ್ಲಟಗಳಿಗೆ ಆಗುಮಾಡಿತು. ವಸಾಹತುಶಾಹಿಯು ಭಾರತಕ್ಕೆ ಬಂದ ನಂತರದಲ್ಲಿ ಇಲ್ಲಿ ಇತಿಹಾಸವಿಲ್ಲ ಎಂಬ ಕಾರಣವನ್ನು ಸಂಸ್ಕೃತಿ ಅಥವಾ ನಾಗರೀಕತೆ ಇಲ್ಲ ಎನ್ನುವ ಭ್ರಮೆಯನ್ನು ಮೂಡಿಸುವ ಮೂಲಕ ಜನರಲ್ಲಿ ಆತ್ಮಸ್ಥೈರ್ಯವನ್ನು ಕುಂದಿಸಿ ಇಲ್ಲಿ ಆಳ್ವಿಕೆಗೆ ಮುಂದಾದರು.

"ವಸಾಹತುಶಾಹಿಗೊಳಗಾದ ದೇಶಗಳಲ್ಲಿ ಇನ್ನೊಂದು ಗಂಭೀರವಾದ ಸಮಸ್ಯೆ ಇದೆ. ಇಂಥ ದೇಶಗಳು ತಮ್ಮ ಸ್ವತಂತ್ರ ವಿಚಾರಶಕ್ತಿ, ವಿವೇಚನೆಗಳನ್ನೇ ಕಳೆದುಕೊಂಡು ಆಳುವ ಜನಾಂಗದ ಸಂಸ್ಕೃತಿಗೆ ದಾಸರಾಗುತ್ತಾರೆ. ಆಳುವ, ಆರ್ಥಿಕವಾಗಿ ಮುಂದುವರೆದ ದೇಶಗಳ ಆಧುನಿಕತೆ, ವೈಚಾರಿಕತೆ, ಜೀವನವಿಧಾನ ತಮಗೆ ಒಗ್ಗುವವೋ ಇಲ್ಲವೋ ಎಂಬ ವಿವೇಚನೆಯೇ ಇಲ್ಲದೇ ಕಣ್ಣುಮುಚ್ಚಿ ಅನುಕರಿಸುತ್ತವೆ. ಔದ್ಯೋಗಿಕರಣ, ಯಂತ್ರಗಳ ವ್ಯಾಪಕ ಬಳಕೆಯಲ್ಲಿ ಮೂರನೆಯ ಜಗತ್ತಿನ ದೇಶಗಳು ಅನುಸರಿಸಿದ ಅಂಧಾನುಕರಣದ ನೀತಿಯ ಪರಿಣಾಮಗಳು ನಮಗಿಂದು ಸ್ಪಷ್ಟವಾಗಿ ಕಾಣತೊಡಗಿವೆ. ನಮ್ಮ ಗೃಹ್ಯೋದ್ಯಮಗಳೆಲ್ಲ ಹಾಳಾಗಿವೆ. ಗ್ರಾಮೀಣ ಭಾಗದ ಕುಶಲಕರ್ಮಿಗಳು ನಿರುದ್ಯೋಗಿಗಳಾಗುತ್ತಿದ್ದಾರೆ. ಆರ್ಥಿಕ ವ್ಯವಸ್ಥೆಯೇ ಏರುಪೇರಾಗಿದೆ"[೧] ಎಂದು ಗಿರಡ್ಡಿ ಗೋವಿಂದರಾಜರು ತಿಳಿಸುತ್ತಾರೆ.

ಅಂದರೆ ಗಿರಡ್ಡಿಯವರು ವಸಾಹತುಶಾಹಿಯಿಂದಾಗಿ ನಮ್ಮ ಸಮಾಜದ ಮೇಲಾಗಿರುವ ಪರಿಣಾಮಗಳನ್ನು ತಿಳಿಸಿದ್ದಾರೆ. ಆದಾಗ್ಯೂ ನಮ್ಮ ಸಮಾಜವು ವಸಾಹತು ನೀತಿಯನ್ನು ಒಪ್ಪಿಕೊಂಡು ಅನುಸರಿಸಿಕೊಂಡು ಬಂದಿತು. ವಸಾಹತುಶಾಹಿಯ ಪರಿಣಾಮವಾಗಿ ಆದ

ಬದಲಾವಣೆಗಳ ಸಾಧಕ-ಬಾಧಕಗಳೇನೆ ಇದ್ದರೂ ಅದರಿಂದ ಸಮಾಜವು ಅನೇಕ ಪಲ್ಲಟಗಳನ್ನು ಕಂಡುಕೊಂಡಿತು ಎಂಬುದಂತೂ ಸತ್ಯ. ಅಲ್ಲದೇ ಇದುವರೆಗೂ ಸಮಾಜವು ಸಾಂಪ್ರದಾಯಿಕ ಮೌಲ್ಯಗಳನ್ನು, ನಂಬಿಕೆಗಳನ್ನು, ಆಚರಣೆಗಳನ್ನು ಹೊಂದಿದ್ದಿತು. ಬ್ರಿಟೀಷರ ಆಗಮನದ ನಂತರದಲ್ಲಿ ಸಮಾಜದಲ್ಲಿ ಶಿಕ್ಷಣ, ವಿಜ್ಞಾನ-ತಂತ್ರಜ್ಞಾನದ ಮೂಲಕ ಔದ್ಯೋಗಿಕರಣವನ್ನು ಇಲ್ಲಿ ನೆಲೆಯೂರುವಂತೆ ಮಾಡಿದರು. ಅಲ್ಲದೇ ಇಲ್ಲಿಯವರೆಗೆ ಸಮಾಜದಲ್ಲಿ ಇದ್ದ ಅನೇಕ ಮೂಢನಂಬಿಕೆಗಳನ್ನು ಬಿಟ್ಟು ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವ ಅವಕಾಶವು ಭಾರತೀಯರಿಗೆ ಲಭ್ಯವಾಯಿತು. ಜೊತೆಗೆ ಶಿಕ್ಷಣದ ಪರಿಣಾಮವಾಗಿ ಸಮಾಜದಲ್ಲಿದ್ದ ಅನೇಕ ಅನಿಷ್ಠ ಪದ್ಧತಿಗಳ ವಿರುದ್ಧ ಸಾಮಾಜಿಕವಾದ ಸುಧಾರಣೆಗಾಗಿ ಪ್ರತಿಭಟನೆಗಳನ್ನು ನಡೆಸಿದರು. ಇದರಿಂದ ಸಮಾಜದಲ್ಲಿ ಬದಲಾವಣೆಗಳು ಉಂಟಾದವು. ಮುಖ್ಯವಾಗಿ ದಲಿತರಲ್ಲಿ, ಶೋಷಣೆಗೊಳಪಟ್ಟವರಲ್ಲಿ, ಬಡವರಲ್ಲಿ, ಹಿಂದುಳಿದವರಲ್ಲಿ, ಮಹಿಳೆಯರಲ್ಲಿ ಇದರ ಬದಲಾವಣೆಗಳು ಕಂಡುಬಂದವು.

ಆ ನಂತರ ಮೊದಲನೇ ಮತ್ತು ಎರಡನೇ ಮಹಾಯುದ್ಧದ ಸಂದರ್ಭಗಳು ಇಡೀ ಜಗತ್ತನ್ನು ಭಯಭೀತಿಯಿಂದ ಇರುವಂತೆ ಮಾಡಿದವು. ಅನೇಕ ಸಾವು-ನೋವು, ಅಪಾರ ಆಸ್ತಿ ನಷ್ಟ, ಜೀವಹಾನಿ ಮುಂತಾದವುಗಳ ಹಿನ್ನೆಲೆಯಲ್ಲಿ ಸಮಾಜದಲ್ಲಿ ಶಾಂತಿ ಬೇಕೆನ್ನುವ ಕೂಗು ಜಗತ್ತಿನಾದ್ಯಂತ ಕೇಳಿಬಂದಿತು. ಇದರ ಪರಿಣಾಮವಾಗಿ ವಿಶ್ವಸಂಸ್ಥೆಯು ಹುಟ್ಟಿಕೊಂಡಿತು. ಈ ಸಂಸ್ಥೆಯ ಮೂಲಕ ಎಲ್ಲಾ ರಾಷ್ಟ್ರಗಳು ಕೂಡಾ ಏಕಮುಖವಾದ ಹಲವು ನಿರ್ಣಯಗಳಿಗೆ ಬರಲು ಅನುಕೂಲವಾಗುವುದರ ಜೊತೆಗೆ ಹಲವು ಅನಾನುಕೂಲಗಳೂ ಉಂಟಾದವು. ಮುಂದುವರೆದ ರಾಷ್ಟ್ರಗಳು ವಿಶ್ವಸಂಸ್ಥೆ, ವಿಶ್ವಬ್ಯಾಂಕ್ ಮುಂತಾದ ಸಂಸ್ಥೆಗಳ ಮೂಲಕ ಅನೇಕ ನಿಯಮಗಳನ್ನು ಜಾರಿಗೆ ತರುವುದರ ಮೂಲಕ ತೃತೀಯ ರಾಷ್ಟ್ರಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ತಂತ್ರವನ್ನು ಹೂಡಿದವು. ಇದೊಂದು ನವವಸಾಹತುಶಾಹಿ ನೀತಿಯಾಗಿ ಪರಿಣಮಿಸಿದೆ ಎಂದು ಅನೇಕ ತೃತೀಯ ರಾಷ್ಟ್ರಗಳು ಬಹಿರಂಗವಾಗಿಯೇ ಹೇಳಿಕೊಂಡವು.

ಇದರ ಮುಂದುವರೆದ ಭಾಗವಾಗಿ ವಿಶ್ವಸಂಸ್ಥೆ, ವಿಶ್ವಬ್ಯಾಂಕ್, W.T.O. ಮುಂತಾದ ಅಂತರರಾಷ್ಟ್ರೀಯ ಸಂಸ್ಥೆಗಳು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ನೀತಿಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದವು. ಭಾರತದಲ್ಲೂ ಇದು ೧೯೯೧ರಲ್ಲಿ ಭಾರತ ಸರ್ಕಾರವು ಜಾರಿಗೆ ತಂದಿತು. ಇದರ ಬಹುಮುಖ್ಯ ಪರಿಣಾಮಗಳನ್ನು ತೃತೀಯ ರಾಷ್ಟ್ರಗಳು ಎದುರಿಸಬೇಕಾಯಿತು. ಇದು ಜನಜೀವನದ

ಮೇಲೆ ಸಮಾಜದ ಮೇಲೆ ಅನೇಕ ದುಷ್ಪರಿಣಾಮಗಳನ್ನು ಬೀರಿತು. ಅಲ್ಲದೇ ತೃತೀಯ ರಾಷ್ಟ್ರಗಳು ಆರ್ಥಿಕವಾಗಿ ದುರ್ಬಲತೆಯಿಂದ ಕೂಡಿದ್ದರಿಂದ ಅವುಗಳ ಮೇಲೆ ಜಾಗತೀಕರಣ ನೀತಿಯನ್ನು ಪರಿಣಾಮಕಾರಿಯಾಗಿ ತರುವುದರ ಮೂಲಕ ಆ ರಾಷ್ಟ್ರಗಳನ್ನು ಮುಕ್ತಮಾರುಕಟ್ಟೆಗೆ ಶ್ರೀಮಂತ ರಾಷ್ಟ್ರಗಳು ಒಳಪಡುವಂತೆ ಮಾಡಿ ಆರ್ಥಿಕವಾಗಿ ದಿವಾಳಿಯಾಗುವಂತೆ ಮಾಡಿದವು. ಮುಂದುವರೆದ ರಾಷ್ಟ್ರಗಳಿಗೆ ಆ ತೃತೀಯ ರಾಷ್ಟ್ರಗಳು ಕಚ್ಚಾವಸ್ತುಗಳನ್ನು ಪೂರೈಸುವ, ಆ ಮೂಲಕ ಮುಂದುವರೆದ ರಾಷ್ಟ್ರಗಳು ವಸ್ತುಗಳನ್ನು ಉತ್ಪಾದಿಸಿ, ಮತ್ತೆ ತೃತೀಯ ರಾಷ್ಟ್ರಗಳಿಗೆ ಆ ವಸ್ತುಗಳನ್ನು ತಂದು ಮಾರಾಟ ಮಾಡುವುದಕ್ಕಾಗಿ ಮುಕ್ತ ಮಾರುಕಟ್ಟೆಯನ್ನು ನಿರ್ಮಿಸಿ ನವವಸಾಹತುಶಾಹಿಯ ಧೋರಣೆಯನ್ನು ಜಾಗತೀಕರಣದ ಹೆಸರಿನಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡವು.

ಇಂತಹ ಸಂದರ್ಭದಲ್ಲಿ ಜಾಗತೀಕರಣ ನೀತಿಯು ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ನಂತರದಲ್ಲಿ ಮಾಡಿರುವ ಅನೇಕ ಸಮಸ್ಯೆಗಳನ್ನು ಕನ್ನಡ ಸಾಹಿತ್ಯವು ಕತೆಗಳ ಮೂಲಕ ಸೂಚ್ಯವಾಗಿ ಅಭಿವ್ಯಕ್ತಿಪಡಿಸಿರುವ ಹಿನ್ನೆಲೆಯನ್ನು ಮತ್ತು ಅದರ ಸ್ವರೂಪವನ್ನು ಅರಿಯುವುದು ಮುಖ್ಯ. ಅಲ್ಲದೇ ಇಂತಹ ಸಂದರ್ಭದಲ್ಲಿ ಬರೆಯುತ್ತಿರುವ ಲೇಖಕರುಗಳಿಗೆ ಮುಖ್ಯವಾಗಿ ಈ ಹಿಂದಿನಂತೆ ಯಾವುದೇ ಸಾಹಿತ್ಯಕ ಚಳುವಳಿಗಳಾಗಲಿ ಅಥವಾ ಸಾಹಿತ್ಯ ಕಾಲಘಟ್ಟಗಳಾಗಲಿ ಇಲ್ಲದಿದ್ದ ಕಾರಣದಿಂದಾಗಿ ಅವರು ತಮ್ಮ ನಿತ್ಯ ಜೀವನದಲ್ಲಿ ಕಾಣುತ್ತಿರುವ ಅನುಭವಗಳನ್ನೇ ಕೇಂದ್ರವಾಗಿಟ್ಟುಕೊಂಡು ಕತೆಗಳ ರಚನೆಗೆ ಕೈ ಹಾಕಿದ್ದಾರೆ. ಅಲ್ಲದೇ ಕೇವಲ ಸಾಹಿತ್ಯದ ಅಭಿರುಚಿ, ಆಸಕ್ತಿ ಇದ್ದವರು ಸಾಹಿತ್ಯದ ವಿದ್ಯಾರ್ಥಿಗಳು ಮಾತ್ರವಲ್ಲದೇ; ಬೇರೆ–ಬೇರೆ ಜ್ಞಾನಶಿಸ್ತುಗಳನ್ನು ಅರಿತವರು ಕನ್ನಡದ ಸಂದರ್ಭದಲ್ಲಿ ಕತೆಗಳನ್ನು ರಚಿಸುತ್ತಿರುವುದು ಕಥಾಸಾಹಿತ್ಯಕ್ಕೆ ಭಿನ್ನವಾದ ಆಲೋಚನಾ ಕ್ರಮವನ್ನು ಸಹ ನೀಡಿದೆ.

ಈ ಹಿನ್ನೆಲೆಯಲ್ಲಿ ರಹಮತ್ ತರೀಕೆರೆ ಅವರ ಮಾತು ಬಹಳ ಅರ್ಥಪೂರ್ಣವಾಗಿದೆ. "ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬ ಸಾಹಿತ್ಯಕ ಪಂಥಗಳು ಆಗಿ ಹೋದವು. ಅವೀಗ ಕ್ರಿಯಾಶೀಲವಾಗಿಲ್ಲ. ಈಗ ಹೊಸದಾಗಿ ಯಾವ ಸಾಹಿತ್ಯಕ ಪಂಥ ಅಥವಾ ಚಳುವಳಿಯೂ ಒಡೆದು ಕಾಣಿಸುತ್ತಿಲ್ಲ. ಬಹಳಷ್ಟು ಹೊಸ ಲೇಖಕರು ಬರೆಯುತ್ತಿದ್ದಾರೆ. ಆದರೆ ಅವರ ಬರವಣಿಗೆಯಿಂದ ಹೊಸದೊಂದು ಮಾರ್ಗವು ಮೂಡುವ ಲಕ್ಷಣ ಗೋಚರಿಸುತ್ತಿಲ್ಲ; ಇದಕ್ಕೆ ಮುಖ್ಯ

ಕಾರಣ, ನವ್ಯ ಇಲ್ಲವೇ ಬಂಡಾಯದವರಿಗೆ ಇದ್ದಂತೆ ತಮ್ಮೆದುರಿಗಿನ ಲೋಕವನ್ನು ಬರೆಯಲು ಮತ್ತು ಮುಖಾಮುಖಿ ಮಾಡಲು ಒಂದು ತಾತ್ವಿಕ ಚಳುವಳಿ ರೂಪದ ಪರಿಸರ ಇಲ್ಲದಿರುವುದು. ಇದೊಂದು ಬಗೆಯ ಶೂನ್ಯಕಾಲ"[೨] ಎಂದಿದ್ದಾರೆ.

ಅಂದರೆ ಹೊಸ ಲೇಖಕರ ಅನೇಕ ತಾತ್ವಿಕ ನಿಲುವುಗಳು, ಯಾವುದೇ ತತ್ವ-ಸಿದ್ಧಾಂತಕ್ಕೆ ಕಟಿಬದ್ಧರಾಗದೇ ತಮ್ಮದೇ ಅನುಭವ ಕೇಂದ್ರಿತ ಹಿನ್ನೆಲೆಯಲ್ಲಿ ಸಮಾಜವನ್ನು ಕಾಣುವ; ಆ ಮೂಲಕ ಸಮಾಜದ ಸಮಸ್ಯೆಗಳನ್ನು ಗುರ್ತಿಸುವ ಕೆಲಸವನ್ನು ಸಾಹಿತ್ಯದ ಮೂಲಕ ಮಾಡುತ್ತಿದ್ದಾರೆ. ಜಾಗತೀಕರಣವು ಪ್ರಭುತ್ವ, ಬಂಡವಾಳಶಾಹಿಗಳ ಹಿತವನ್ನು ಕಾಯ್ದುಕೊಳ್ಳುವ ಮೂಲಕ ದಲಿತರ, ಬಡವರ, ಶೋಷಿತರ, ಮಹಿಳೆಯರ, ರೈತರ, ಕೂಲಿ-ಕಾರ್ಮಿಕರ ಮೇಲೆ ಆಕ್ರಮಣಶಾಲಿ ಧೋರಣೆಯನ್ನು ತಾಳುತ್ತಿದೆ ಎನ್ನುವ ನಿಲುವನ್ನು ಅನೇಕ ವಿದ್ವಾಂಸರು ವ್ಯಕ್ತಿಪಡಿಸಿದ್ದಾರೆ. "ಜಾಗತೀಕರಣವು ಒಂದು ರೀತಿಯಲ್ಲಿ ಅಮೀಬಾ ಇದ್ದ ಹಾಗೆ. ಅದಕ್ಕೆ ಮೈಯೆಲ್ಲಾ ಬಾಯಿ. ಅದು ಮೂಗು ತೂರಿಸದ ಒಂದೂ ಕ್ಷೇತ್ರಗಳಿಲ್ಲ. ರಾಜಕೀಯ, ಆರ್ಥಿಕ, ಪರಿಸರ, ವಿಜ್ಞಾನ, ಆರೋಗ್ಯ, ಕೃಷಿ, ಸಾಹಿತ್ಯ, ಸಂಸ್ಕೃತಿಗಳ ಮೇಲೆ ಅದು ಗಾಢ ಪ್ರಭಾವ ಬೀರುತ್ತದೆ.. ನಿಧಾನಗತಿಯ, ಸ್ವಾವಲಂಬಿಯಾದ... ಪರಿಸರ ಸ್ನೇಹಿಯಾದ ಸಮುದಾಯಿಕ ಬಾಳ್ವೆ ನಡೆಸುತ್ತಿದ್ದ ನಮ್ಮ ಗ್ರಾಮಗಳು ಮತ್ತು ಗ್ರಾಮೀಣ ಸಂಸ್ಕೃತಿಗಳು ಜಾಗತೀಕರಣದ ಒತ್ತಡಕ್ಕೆ ಸಿಲುಕಿ ತಮ್ಮ ಪರಂಪರಾನುಗತ ಬದುಕಿಗೆ ವಿದಾಯ ಹೇಳುತ್ತಿವೆ."[೩] ಎಂದು ಪ್ರಹ್ಲಾದ ಅಗಸನಕಟ್ಟೆ ಅವರು ಜಾಗತೀಕರಣದ ಪರಿಣಾಮಗಳನ್ನು ವಿಶ್ಲೇಷಿಸುತ್ತಾರೆ.

ಅಂದರೆ ಜಾಗತೀಕರಣವು ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ತಂದಿದ್ದರೂ ಕನ್ನಡದ ಕತೆಗಾರರು ದನಿಯೆತ್ತಿರುವ ನೆಲೆ ಯಾವುದು, ಅದರ ಸ್ವರೂಪ ಎಂತಹುದು ಎನ್ನುವುದರ ಜೊತೆಗೆ; ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಕತೆಗಳಲ್ಲಿ ಬದಲಾಗುತ್ತಿರುವ ಸಮಾಜದ ಸ್ವರೂಪವನ್ನು ಅನೇಕ ನೆಲೆಗಳಲ್ಲಿ ಈ ಕೆಳಕಂಡಂತೆ ಗುರುತಿಸಲಾಗಿದೆ.

೪.೧ ಕೌಟುಂಬಿಕ ನೆಲೆ

ಸಮಾಜದ ಮುಖ್ಯ ಭಾಗ ಎಂದರೆ ಕುಟುಂಬ. ಪ್ರಾಚೀನ ಕಾಲದಿಂದಲೂ ಮನುಷ್ಯ ಕುಟುಂಬ ಎಂಬ ಸಾಮಾಜಿಕ ಸಂಸ್ಥೆಯೊಳಗೆ ಬದುಕುವ ಮೂಲಕ ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದಾನೆ. ಇಂತಹ ಕುಟುಂಬ ವ್ಯವಸ್ಥೆಯು ವ್ಯಕ್ತಿಯ ಸಾಮಾಜಿಕ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಇಂತಹ ಕುಟುಂಬವು ಕಾಲದಿಂದ ಕಾಲಕ್ಕೆ ಅನೇಕ ಪರಿವರ್ತನೆಗಳನ್ನು ಕಂಡುಕೊಂಡಿದೆ. ಕುಟುಂಬದ ಮೂಲ ಆಶಯಗಳು ಅನೇಕ ಕಾರಣದಿಂದ ಇಂದು ಕಳೆದುಹೋಗುತ್ತಿವೆ ಇಲ್ಲವೇ ಬದಲಾಗುತ್ತಿವೆ.

ಕುಟುಂಬವು ಸಮಾಜದ ಮಾನವನ ಅವಿಭಾಜ್ಯ ಅಂಗ ಎಂದರೆ ತಪ್ಪಾಗಲಾರದು. ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿನ ಮುಖ್ಯ ಭಾಗವಾಗಿ ಕುಟುಂಬದ ಪಾತ್ರ ದೊಡ್ಡದು. ಈ ಹಿನ್ನೆಲೆಯಲ್ಲಿ ಕುಟುಂಬ ಎನ್ನುವ ಶಬ್ಧವು ಆಂಗ್ಲ ಭಾಷೆಯ 'ಫ್ಯಾಮಿಲಿ'(Family) ಎಂಬರ್ಥದ ಲ್ಯಾಟಿನ್‌ನ 'ಫ್ಯಾಮುಲಸ್'(Famulus) ಎಂಬ ಮೂಲ ಶಬ್ಧದಿಂದ ಬಂದಿದೆ. 'ಫ್ಯಾಮುಲಸ್' ಎಂದರೆ 'ಆಳು' (Servant) ಎಂದರ್ಥ. ಈ ಪರಿಕಲ್ಪನೆಯಲ್ಲಿ ರೂಢಿಗೆ ಬಂದಿರುವಂತಹದ್ದು ಕುಟುಂಬ. ಆದರೆ 'ಆಳು' ಎನ್ನುವ ಪರಿಕಲ್ಪನೆಯನ್ನು ಸಮಾಜಶಾಸ್ತ್ರೀಯ ಅಧ್ಯಯನಗಳು ತಿರಸ್ಕರಿಸಿ ಅದಕ್ಕೆ ಕುಟುಂಬ ಎನ್ನುವ ಅರ್ಥವನ್ನು ಹೀಗೆ ಕಂಡುಕೊಂಡಿವೆ.

ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರ ಪ್ರಕಾರ 'ಕುಟುಂಬವು ಹಲವು ಜನರ ಒಂದು ಸಮೂಹ. ಕುಟುಂಬದ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯೊಂದಿಗೆ ಒಂದಿಲ್ಲೊಂದು ಬಗೆಯ ಸಂಬಂಧ ಹೊಂದಿರುತ್ತಾನೆ. ಅದು ರಕ್ತ ಸಂಬಂಧ ಆಗಿರಬಹುದು, ವಿವಾಹ ಸಂಬಂಧವಾಗಿರಬಹುದು ಅಥವಾ ದತ್ತು ಸಂಬಂಧವಾಗಿರಬಹುದು. ಈ ಸಂಬಂಧಗಳ ಮೂಲಕ ಒಬ್ಬರನ್ನೊಬ್ಬರು ಅವಲಂಬಿಸಿರುತ್ತಾರೆ' ಎಂದು ವಿಲಿಯಮ್ಸ್ ಅವರು ತಿಳಿಸುತ್ತಾರೆ.

ಮೆಕೈವರ್ ಮತ್ತು ಪೇಜ್ ಪ್ರಕಾರ "ಸಂತತಿ ಸಹಿತವಾಗಿ ಇಲ್ಲವೇ ಸಂತತಿರಹಿತವಾಗಿ ಗಂಡ ಹೆಂಡಿರು ಕೂಡಿ ಆಗಿರುವ ಅಥವಾ ಸ್ತ್ರೀ ಅಥವಾ ಪುರುಷನೋರ್ವನೇ ಮಕ್ಕಳಿಂದೊಡಗೂಡಿ ಆಗಿರುವ ಮತ್ತು ಹೆಚ್ಚು-ಕಡಿಮೆ ಬಹುಕಾಲ ಬಾಳುವ ಸಂಘವೇ ಕುಟುಂಬ"[೪] ಎನ್ನುವುದಾಗಿ ತಿಳಿಸಿದ್ದಾನೆ.

ಸಮ್ನರ್ ಮತ್ತು ಕೆಲ್ಲರ್ ಪ್ರಕಾರ "ರಕ್ತ ಸಂಬಂಧಗಳಿಂದ ಕೂಡಿದ ಮತ್ತು ಕನಿಷ್ಟ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ"[೫] ಎನ್ನುವುದಾಗಿ ವಿವರಿಸಿದ್ದಾರೆ.

ಕುಟುಂಬದ ವ್ಯಾಖ್ಯಾನಗಳನ್ನು ಸಮಾಜಶಾಸ್ತ್ರವು ಹೀಗೆ ವಿವರಿಸುತ್ತದೆ. ಅಲ್ಲದೇ ಕುಟುಂಬವು ಸಂಗಾತಿ, ವಿವಾಹ, ವಂಶಾವಳಿ, ಒಂದೆಡೆ ವಾಸ ಮುಂತಾದ ಸಾಮಾನ್ಯ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಸಮಾಜಶಾಸ್ತ್ರದ ಪರಿಕಲ್ಪನೆಯಲ್ಲಿ ಕುಟುಂಬವು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು, ಅದು ತನ್ನ ಸಂಘಟನೆಯ ಮೂಲಕ ಕುಟುಂಬದ ಸದಸ್ಯರ ರಕ್ಷಣೆ, ಆರೈಕೆ, ಆರ್ಥಿಕತೆ, ಮಕ್ಕಳ ಲಾಲನೆ-ಪಾಲನೆ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತದೆ ಎಂಬ ತಿಳುವಳಿಕೆಯಿದೆ. ಕುಟುಂಬ ವ್ಯವಸ್ಥೆಯು ಪರಂಪರೆಯಿಂದ ಬಂದಿರುವ ತನ್ನ ಧಾರ್ಮಿಕ ಆಚರಣೆಗಳನ್ನು, ನಂಬಿಕೆಗಳನ್ನು, ಸಂಪ್ರದಾಯಗಳನ್ನು,

ರೀತಿ-ರಿವಾಜುಗಳನ್ನು ಮುನ್ನೆಡೆಸಿಕೊಂಡು ಬರುತ್ತಿರುತ್ತದೆ. ಇಂತಹ ಕುಟುಂಬದಲ್ಲಿ ಪ್ರೀತಿ, ವಿಶ್ವಾಸ, ಸಹಾಯ, ಸಹಕಾರದಂತಹ ಭಾವನಾತ್ಮಕ ವಿಷಯಗಳು ಕಾಲದಿಂದ ಕಾಲಕ್ಕೆ ಮುನ್ನೆಡೆದು ಸಾಗುತ್ತಿರುತ್ತವೆ.

ಕುಟುಂಬ ವ್ಯವಸ್ಥೆಯು ಕುಟುಂಬದ ಒಳಗಿನ ಇಲ್ಲವೇ ಹೊರಗಿನ ಅನೇಕ ಪರಿಣಾಮಗಳಿಂದಾಗಿ ಇಂದು ಪಲ್ಲಟಗಳನ್ನು ಕಂಡುಕೊಳ್ಳುತ್ತಿದೆ. ಭಾರತದಂತಹ ಹಳ್ಳಿಗಳಿಂದಲೇ ತುಂಬಿಕೊಂಡಿರುವ ದೇಶದಲ್ಲಿ ಕುಟುಂಬದ ಪ್ರಭಾವವು ಯಥೇಚ್ಛವಾಗಿತ್ತು. ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಪುರುಷಪ್ರಧಾನ ನಿಯಂತ್ರಣವು ಯಾಜಮಾನ್ಯದ ಸ್ಥಿತಿಯನ್ನು ಹೊಂದಿತ್ತು. ಅಲ್ಲದೇ ಇಲ್ಲಿ ಏಕವ್ಯಕ್ತಿ ಪ್ರಾಧಾನ್ಯತೆಯಿಂದ ಈ ಯಜಮಾನಿಕೆಯು ಕೂಡಿದ್ದು, ಕುಟುಂಬದ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸಲಾಗುತ್ತಿದ್ದಿತು. ಕುಟುಂಬದ ಸ್ವರೂಪವನ್ನು ಪಲ್ಲಟಗೊಳಿಸಿದ್ದು ಭಾರತದ ಮೇಲೆ ಬ್ರಿಟೀಷರ ವಸಾಹತುಶಾಹಿ ನೀತಿಯ ಪರಿಣಾಮ. ಅಲ್ಲದೇ ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಕುಟುಂಬಗಳು ಕಣ್ಮರೆಯಾಗುತ್ತಿದ್ದು, ಏಕವ್ಯಕ್ತಿ ಪ್ರಾಧ್ಯಾನ್ಯತೆಯನ್ನು ಇಲ್ಲವೇ ಏಕವ್ಯಕ್ತಿ ಕುಟುಂಬಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿದೆ.

ಇಂತಹ ಪರಿಸ್ಥಿತಿಯು ಸೃಷ್ಟಿಯಾಗಲು ಅನೇಕ ಕಾರಣಗಳಿವೆ. ಮಾನವ ಏಕಕಾಲದಲ್ಲಿ ಇಷ್ಟೆಲ್ಲಾ ಬದಲಾವಣೆಗಳಿಗೆ ಒಳಗಾಗಲು ಸಾಧ್ಯವಿಲ್ಲ. ಕುಟುಂಬದ ಮೂಲಭೂತ ಸಾಮರಸ್ಯವೇ ಒಗಟ್ಟು. ಇಂದಿನ ದಿನಮಾನಗಳಲ್ಲಿ ಆ ಒಗ್ಗಟ್ಟು ಕುಸಿಯುತ್ತಿರುವುದಕ್ಕೆ ಆಧುನಿಕ ಮನಸ್ಥಿತಿಯು ಕಾರಣವಾಗಿದೆ. ಮೌಲ್ಯಯುತ ಜೀವನ ವಿಧಾನವು ಕಳೆದುಹೋಗಿ ಇಂದಿನ ಯಾಂತ್ರಿಕ ಜೀವನ ವಿಧಾನವು ಕಣ್ಣೆದುರಿಗಿದೆ. ಇದಕ್ಕೆಲ್ಲ ಮೂಲಭೂತವಾದ ಕಾರಣವೆಂದರೆ ಶಿಕ್ಷಣ ಪದ್ಧತಿ, ಆಧುನಿಕತೆ, ನಶಿಸುತ್ತಿರುವ ಸಾಮಾಜಿಕ ಮೌಲ್ಯಗಳು, ಹಿರಿಯರ ಬಗ್ಗೆ ಅಸಡ್ಡೆ, ಆರ್ಥಿಕ ಕಾರಣಕ್ಕಾಗಿ ಉದ್ಯೋಗವನ್ನು ಅರಸಿಕೊಂಡು ಹೋಗುತ್ತಿರುವುದು ಒಂದು ನೆಲೆಯಾದರೆ, ಮನುಷ್ಯನ ಸ್ವಾರ್ಥಗುಣ, ಆಸೆ ಪ್ರವೃತ್ತಿ, ಸಂಪತ್ತಿಗಾಗಿ ಕುಟುಂಬದಿಂದ ದೂರ ಉಳಿಯುತ್ತಿರುವುದು ಇನ್ನೂ ಮುಂತಾದ ಕಾರಣಗಳನ್ನು ನಾವು ಗುರ್ತಿಸಬಹುದು.

"ಜಾಗತೀಕರಣವು ಒಂದು ಜಗತ್ತನ್ನು, ಸಾವಿರಾರು ವರ್ಷದವರೆಗೆ ತಾಳಿಕೊಂಡು ಬಂದಿರುವ ಜೀವನವಿಧಾನ ಹಾಗೂ ಮೌಲ್ಯಗಳನ್ನು, ಎಲ್ಲಾ ಬಗೆಯ ಆಕ್ರಮಣಗಳ ಮಧ್ಯೆಯೂ ಉಳಿದುಕೊಂಡು ಬಂದಿರುವ ನೈಸರ್ಗಿಕ ಪರಿಸರ ಇವೆಲ್ಲವನ್ನು ಸಂಪೂರ್ಣ ಬುಡಮೇಲು ಮಾಡುವ ವಿರಾಟ್‌ಶಕ್ತಿ ಇರುವುದರಿಂದಲೇ ಅದನ್ನು ಪ್ರತಿರೋಧಿಸುವ

ವೈಚಾರಿಕ ಪ್ರಯತ್ನಗಳು ಕೂಡ ಅತ್ಯಂತ ಸೂಕ್ಷ್ಮವೂ, ಪ್ರಬಲವೂ ಆದ ವೈಚಾರಿಕತೆಯನ್ನು ಬಳಸಿಕೊಳ್ಳಬೇಕಾಗುತ್ತದೆ."[೬] ಎಂದು ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮ್ಮದ್ ಅವರು ಜಾಗತೀಕರಣವು ಇಂದಿನ ದಿನಗಳಲ್ಲಿ ಮಾಡುತ್ತಿರುವ ಪರಿಣಾಮವನ್ನು ವಿವರಿಸುತ್ತಾರೆ. ಇದನ್ನು ಕುಟುಂಬದ ವಿಷಯುದಲ್ಲೂ ಕೂಡಾ ನಾವು ಅನ್ವಯಿಸಿಕೊಳ್ಳಬಹುದು. ಜಾಗತೀಕರಣವು 'ಕೊಳ್ಳುಬಾಕ' ಸಂಸ್ಕೃತಿಯಾದ್ದರಿಂದ ಅದು ಜನರ ಜೀವನದ ವಿಧಾನದಲ್ಲಿ ಅನೇಕ ಸ್ಥಿತ್ಯಂತರಗಳನ್ನು ಮಾಡಿದೆ. ಕುಟುಂಬಗಳು ಇಂದು ಏಕವ್ಯಕ್ತಿ ಪ್ರಧಾನವಾಗಿ ಕುಟುಂಬದಿಂದ ವಿಮುಖರಾಗುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಕತೆಗಳು ಜಾಗತೀಕರಣದ ಸಂದರ್ಭದಲ್ಲಿ ಕುಟುಂಬದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಹೀಗೆ ಚಿತ್ರಿಸಲಾಗಿದೆ.

ಸಡಿಲಗೊಳ್ಳುತ್ತಿರುವ ಸಂಬಂಧಗಳು

ಆಧುನಿಕತೆಯ ಪರಿಣಾಮವಾಗಿ ಮನುಷ್ಯನು ಇಂದು ಮನುಷ್ಯರೊಂದಿಗೆ ಸಂಬಂಧಗಳನ್ನು ಉಳಿಸುವ, ಬೆಳೆಸುವ ಮನೋಭಾವನೆಯನ್ನು ಮರೆತು ಅವರೊಂದಿಗೆ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಸಂಬಂಧಗಳನ್ನು ಜಾಗತೀಕರಣ ವ್ಯವಸ್ಥೆಯಲ್ಲಿ ಮಾರುಕಟ್ಟೆಯ ಉದ್ದೇಶಗಳಲ್ಲಿನ ಸರಕುಗಳಂತೆ ಬಳಸಿಕೊಂಡು ಬಿಸಾಡುವ ಮನಃಸ್ಥಿತಿಯನ್ನು ತಲುಪಿದ್ದಾನೆ. ಅಲ್ಲದೇ ಸಂಬಂಧಗಳನ್ನು ಮುಖ್ಯವಾಗಿ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವ ಉದ್ದೇಶಕ್ಕಾಗಿ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವ ಮಾರುಕಟ್ಟೆಯ ಮನಸ್ಥಿತಿಯನ್ನು ರೂಪಿಸಿಕೊಂಡುದ್ದರ ಹಿನ್ನೆಲೆಯಲ್ಲಿ ಇಂದು ಸಂಬಂಧಗಳು ಅಸ್ತಿತ್ವದ ನೆಲೆಯನ್ನು ಕಳೆದುಕೊಂಡು ಬದುಕುತ್ತಿವೆ. ಇಲ್ಲಿ ಮುಖ್ಯವಾಗಿ ಸಂಬಂಧಗಳನ್ನು ಎರಡು ನೆಲೆಗಳಲ್ಲಿ ಗುರ್ತಿಸಿಕೊಳ್ಳಲಾಗಿದೆ.

೧. ಕುಟುಂಬದಲ್ಲಿ ಸಡಿಲಗೊಳ್ಳುತ್ತಿರುವ ಸಂಬಂಧಗಳು

ಭಾರತವು ಮೂಲತಃ ಗ್ರಾಮೀಣ ಪ್ರದೇಶಗಳನ್ನು ಹೊಂದಿರುವ ದೇಶವಾಗಿದೆ. ಇಲ್ಲಿ ಮುಖ್ಯವಾಗಿ ಕುಟುಂಬ ವ್ಯವಸ್ಥೆಯು ನಿರಂತರವಾಗಿ ನಡೆದುಕೊಂಡು ಬಂದಿದೆ. ಪ್ರಾಚೀನ ಕಾಲದಿಂದಲೂ ಅವಿಭಕ್ತ ಕುಟುಂಬ ಪರಂಪರೆಯು ಭಾರತದಂತಹ ರಾಷ್ಟ್ರಗಳಲ್ಲಿ ಪ್ರಬಲವಾಗಿ ಬೇರುಬಿಟ್ಟಿದ್ದಿತು. ಇಂತಹ ಅವಿಭಕ್ತ ಕುಟುಂಬದಲ್ಲಿ ಅಪ್ಪ-ಅಮ್ಮ, ಅಜ್ಜ-ಅಜ್ಜಿ, ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ, ಅಣ್ಣ-ತಂಗಿ, ಮಾವ, ಅತ್ತಿಗೆ, ನಾದಿಗೆ ಹೀಗೆ ಅನೇಕ ಸಂಬಂಧಗಳನ್ನು ಕಾಣಲು ಸಾಧ್ಯವಾಗುತ್ತಿತ್ತು. ಆದರೆ ಬದಲಾದ ಕಾಲದಲ್ಲಿ ಇಂತಹ ಅವಿಭಕ್ತ ಕುಟುಂಬವು ಅನೇಕ ಸಮಸ್ಯೆಗಳನ್ನು ಎದುರಿಸುವ ಸ್ಥಿತಿಗೆ ಬಂದು

ತಲುಪಿತು. ಭಾರತದಲ್ಲಿ ಬೇರು ಬಿಟ್ಟಿದ್ದ ಇಂತಹ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಮೊಟ್ಟಮೊದಲು ವಿಭಜಿಸುವ ಪ್ರಯತ್ನ ಆಗಿದ್ದು ಎಂದರೆ ಅದು ವಸಾಹತುಶಾಹಿಯ ಆಗಮನದಿಂದ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಆಧುನಿಕತೆಯ ಆಗಮನದ ನಂತರದಲ್ಲಿ ಮಧ್ಯಮವರ್ಗ ಉದಯಿಸಿಕೊಂಡು ಇದುವರೆಗೂ ಬೆಳೆದುಬಂದಿದ್ದ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಅನೇಕರು ಶಿಕ್ಷಣದ ಕಾರಣಕ್ಕಾಗಿ ಇಲ್ಲವೇ ಉದ್ಯೋಗದ ಕಾರಣಕ್ಕಾಗಿ ಕುಟುಂಬವನ್ನು ಬಿಟ್ಟು ನಗರಗಳಲ್ಲಿ ವಾಸ ಮಾಡುವ ಪ್ರಸಂಗ ಬಂದಿತು. ಇದಕ್ಕೆಲ್ಲಾ ಮೂಲ ಕಾರಣವೆಂದರೆ ಆಧುನಿಕತೆಯ ನಗರೀಕರಣ ವ್ಯವಸ್ಥೆ. ಕೃಷಿ ವ್ಯವಸ್ಥೆಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿ ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಕುಟುಂಬ ವ್ಯವಸ್ಥೆಯು ಇಂತಹ ಔದ್ಯೋಗಿಕರಣದ ಫಲವಾಗಿ ಕುಟುಂಬವನ್ನು ತೊರೆದು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ರೂಪಿಸಿಕೊಳ್ಳತೊಡಗಿದವು. ಅಂದರೆ ಈ ಹಿಂದೆ ಇದ್ದ ಎಲ್ಲಾ ಸಂಬಂಧಗಳನ್ನು ತೊರೆದು ತಂದೆ-ತಾಯಿ, ಮಕ್ಕಳು ಮಾತ್ರ ಒಂದೆಡೆ ನೆಲೆಸಲು ಪ್ರಾರಂಭಿಸಿದರು. ಇದು ವಸಾಹತುಶಾಹಿಯ ಆಗಮನದ ಆಧುನೀಕರಣವು ಕುಟುಂಬ ವ್ಯವಸ್ಥೆಗೆ ತಂದಿಟ್ಟ ಬಹುದೊಡ್ಡ ಪಲ್ಲಟವಾಗಿದೆ.

ಇದರ ನಂತರದಲ್ಲಿ ಜಾಗತೀಕರಣದ ಈ ಸಂದರ್ಭದಲ್ಲಿ ಕುಟುಂಬ ವ್ಯವಸ್ಥೆಯ ಪರಿಕಲ್ಪನೆಯು ಅನೇಕ ಸ್ಥಿತ್ಯಂತರಗಳನ್ನು ಕಂಡುಕೊಂಡಿದೆ. ಕುಟುಂಬ ಎನ್ನುವುದಕ್ಕೆ ಈ ಹಿಂದೆ ಸಮಾಜಶಾಸ್ತ್ರಜ್ಞರು ರೂಪಿಸಿದ್ದ ವ್ಯಾಖ್ಯಾನವನ್ನು ಪುನರ್ವಿಮರ್ಶಿಸುವ ನಿಟ್ಟಿನಲ್ಲಿ ಇಂದಿನ ಕುಟುಂಬ ವ್ಯವಸ್ಥೆಗಳು ಕಂಡುಬರುತ್ತಿರುವುದನ್ನು ಕನ್ನಡ ಕತೆಗಳು ಮುಖ್ಯವಾಗಿ ಗಮನಿಸಿವೆ. ಇಂದು ತಂದೆ-ತಾಯಿ ಮತ್ತು ಮಕ್ಕಳು ಒಂದೆಡೆ ಇರದೇ ಶಿಕ್ಷಣದ ಕಾರಣಕ್ಕಾಗಿ ಇಲ್ಲವೇ ಉದ್ಯೋಗದ ಕಾರಣಕ್ಕಾಗಿ ಮಕ್ಕಳು ವಿದೇಶದಲ್ಲಿ, ತಂದೆ-ತಾಯಿ ಹಳ್ಳಿ ಇಲ್ಲವೇ ನಗರಗಳಲ್ಲಿ ಬೇರೆ-ಬೇರೆಯಾಗಿ ವಾಸಿಸುವ ಪ್ರಸಂಗಗಳನ್ನು ಕತೆಗಳು ಕಟ್ಟಿಕೊಟ್ಟಿವೆ. ಉದಾಹರಣೆಗೆ ಅಮರೇಶ ನುಗಡೋಣಿ ಅವರ 'ಪಕ್ವಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಶರಭನಗೌಡನ ಪಾತ್ರದ ಮೂಲಕ ವಿಭಕ್ತ ಕುಟುಂಬವು ನಂತರದಲ್ಲಿ ಎಲ್ಲರೂ ತಮ್ಮ ತಮ್ಮ ಶಿಕ್ಷಣದ ಕಾರಣಕ್ಕಾಗಿ; ನಂತರದಲ್ಲಿ ಉದ್ಯೋಗದ ಕಾರಣಕ್ಕಾಗಿ ಹಳ್ಳಿಯನ್ನು ಬಿಟ್ಟು ನಗರವನ್ನು ಸೇರುವ ಚಿತ್ರಣವಿದೆ.

ಕುಟುಂಬದಿಂದ ಇಂದು ಮಕ್ಕಳು ಉದ್ಯೋಗ, ಶಿಕ್ಷಣದ ಕಾರಣಕ್ಕಾಗಿ ಏಕಾಂಗಿಯಾಗಿ ನೆಲೆಸುವ/ವಾಸಿಸುವ ಪರಿಸ್ಥಿತಿಯನ್ನು ಇಂದು ಕಾಣಲು ಸಾಧ್ಯ. ಇಲ್ಲಿ ಶರಭನಗೌಡ ಊರಿನ ಗೌಡನಾಗಿದ್ದು ಅವನ ಹೆಂಡತಿ ಮಕ್ಕಳ ಜೊತೆ ಜಮೀನನ್ನು ಮಾಡಿಕೊಂಡಿದ್ದ.

ಮಕ್ಕಳ ಶಿಕ್ಷಣದ ಕಾರಣಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದಲ್ಲಿ ಇರುವಂತೆ ವ್ಯವಸ್ಥೆ ಮಾಡಿದ್ದ. ಮಕ್ಕಳನ್ನು ಬಿಟ್ಟಿರದ ತಾಯಿಯೂ ತಾನು ಸಹ ಮಕ್ಕಳೊಂದಿಗೆ ಇರುವುದಾಗಿ ಮಕ್ಕಳೊಂದಿಗೆ ಹೋಗಿ ವಾಸಿಸತೊಡಗಿದಳು. ಹೀಗಾಗಿ ಗೌಡನು ಒಬ್ಬನೇ ಏಕಾಂಗಿಯಾಗಿ ಬದುಕಬೇಕಾದ ಪರಿಸ್ಥಿತಿ ಬಂದಿತು. ಅಂದರೆ ಕತೆಯಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ಜಾಗತೀಕರಣದ ಉದ್ಯೋಗದ ಅವಕಾಶಗಳು ಕೂಡುಕುಟುಂಬಗಳನ್ನು ಒಂದೆಡೆ ಇರದಂತೆ ಅವರನ್ನು ಬೇರೆ ಇಡುವ ವ್ಯವಸ್ಥೆಯನ್ನು ಜಾಗೃತ ದೃಷ್ಟಿಕೋನದಿಂದ ರೂಪಿಸತೊಡಗಿವೆ. ಇಲ್ಲಿ ಶರಭನಗೌಡನ ಪಾತ್ರವೂ ಏಕಾಂಗಿಯಾಗಿ ಕುಟುಂಬದ ಪರಿಕಲ್ಪನೆಯೇ ಬೇರೆ ಆಗಿಬಿಡುವ ಸಂದರ್ಭವನ್ನು ಸೂಚಿಸುತ್ತಿದೆ. ಅಲ್ಲದೇ ಕುಟುಂಬವು ಇಲ್ಲಿ ಮುಖ್ಯವಾಗಿ ಎರಡು ಕಾರಣಕ್ಕಾಗಿ ಬೇರೆಯಾಗುತ್ತಿದೆ.

೧. ಶಿಕ್ಷಣ

೨. ಉದ್ಯೋಗ

ಅಂದರೆ ಕುಟುಂಬಗಳು ಇದ್ದರೂ ಅವರೆಲ್ಲಾ ಒಂದೆಡೆ ವಾಸಿಸದೇ ಮಕ್ಕಳೇ ಬೇರೆಡೆ, ತಂದೆಯೇ ಬೇರೆಡೆ ವಾಸಿಸುವ ಪ್ರಸಂಗಗಳನ್ನು ಕತೆಯು ಸೂಕ್ಷ್ಮವಾಗಿ ಬಿಚ್ಚಿಡುತ್ತಿದೆ. ಜಾಗತೀಕರಣ ಸಂದರ್ಭವು ಇಂದು ಕುಟುಂಬಗಳಿಗೆ ಹೆಚ್ಚಿನ ಪ್ರಾಧ್ಯಾನ್ಯತೆ ಕೊಡುವುದನ್ನು ಬಿಟ್ಟು ಕೇವಲ ಶೈಕ್ಷಣಿಕ ಹಾಗೂ ಆರ್ಥಿಕ ಉದ್ದೇಶಗಳಿಗಾಗಿ ಬೇರೆಯಾಗಿ ಬದುಕಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಿದೆ.

ಇನ್ನೂ ಕುಟುಂಬದಲ್ಲಿ ಮಕ್ಕಳಾಗಲಿಲ್ಲ ಎನ್ನುವ ಸಮಸ್ಯೆಗೆ ಕುಟುಂಬವೇ ಹೇಗೆ ಅವನತಿಯನ್ನು ಹೊಂದುತ್ತಿದೆ ಎನ್ನುವುದನ್ನು ವಸುಧೇಂದ್ರ ಅವರ 'ಚೇಳು' ಕತೆಯ ಹಿನ್ನೆಲೆಯಲ್ಲಿ ಗುರುತಿಸಬಹುದು. ಮಕ್ಕಳಾಗಲಿಲ್ಲ ಎನ್ನುವುದಕ್ಕೆ ದೈಹಿಕವಾದ ಅನೇಕ ಸಮಸ್ಯೆಗಳಿರುತ್ತವೆ. ಆದರೆ ನಮ್ಮ ಸಮಾಜದಲ್ಲಿರುವ ಮೂಢನಂಬಿಕೆಯಿಂದಾಗಿ ಮಹಿಳೆಯೊಬ್ಬಳನ್ನು ಈ ಪುರುಷವಾದಿ ಸಮಾಜವು ಲೈಂಗಿಕವಾಗಿ ಬಳಸಿಕೊಂಡು ಶೋಷಣೆಯನ್ನು ಮಾಡುತ್ತಿದೆ ಎನ್ನುವುದನ್ನು ಕತೆಯಲ್ಲಿ ವಿವರಿಸಲಾಗಿದೆ. ಕತೆಯಲ್ಲಿ ಮುಖ್ಯ ಪಾತ್ರವಾದ ವೆಂಕಮ್ಮ ಮತ್ತು ಕೊಮ್ಮಣ್ಣರು ಮದುವೆಯಾಗಿ ಕೊಮ್ಮಣ್ಣರ ತಂದೆ-ತಾಯಿಯ ಜೊತೆಗೆ ವಾಸವಿರುತ್ತಾರೆ. ಇವರಿಗೆ ಮದುವೆಯಾಗಿ ಬಹಳ ವರ್ಷಗಳಾದರೂ ಮಕ್ಕಳಾಗದಿದ್ದರಿಂದ ವೆಂಕಮ್ಮಳನ್ನು ಕೊಮ್ಮಣ್ಣನು ಊರಿಗೆ ಬಂದ ಸಾಧು-ಸಂತರಿಗೆಲ್ಲಾ ತೋರಿಸಿ ತಮಗೆ ಒಂದು ಮಗುವಾಗುವಂತೆ ಕೇಳಿಕೊಳ್ಳುತ್ತಿದ್ದ.

ಅಲ್ಲದೇ ಊರಿಗೆ ಬಂದಿದ್ದ ಭೈರವ ಬಾಬಾನಿಗೆ ಕೊಮ್ಮಣ್ಣ ಬಿಡದೇ ದಿನನಿತ್ಯ ದುರ್ಗಮ್ಮನ ಗುಡಿಗೆ ಹೋಗಿ ಸೇವೆ ಮಾಡಿ ಬರುತ್ತಿದ್ದ. ಆದರೆ ಅವರು ಮೌನವ್ರತ ಹಿಡಿದ್ದಾದರೆಂಬ ನಂಬಿಕೆ ಅವನಲ್ಲಿ ಹೆಚ್ಚಾಯಿತು. ಇವನ ಸೇವೆಯನ್ನು ಕಂಡು ಬಾಬಾ ಒಂದು ದಿನ ಮಣಿದು ಇವನ ಸಮಸ್ಯೆಯನ್ನು ಕೇಳಿ "ಮೂರು ದಿನ ರಾತ್ರಿ ಹನ್ನೆರಡಕ್ಕೆ ವೆಂಕಮ್ಮನೊಬ್ಬಳೇ ಪೂಜೆಗೆ ಬರಬೇಕೆಂದು ಬರೆದು ತೋರಿಸಿದರು."[೭] ಮೊದಲ ದಿನ ಪೂಜೆಗೆ ಹೋಗಿ ಬೆಳಗಾಗುವುದರಲ್ಲಿ ಸುಸ್ತಾಗಿ ಬಂದ ವೆಂಕಮ್ಮ ಮತ್ತೆ ತಾನು ಅಲ್ಲಿಗೆ ಹೋಗುವುದಿಲ್ಲವೆಂದು ಹಠ ಹಿಡಿದಳು. ಆದರೆ ಕೊಮ್ಮಣ್ಣ ಅವಳ ಮೇಲೆ ರೇಗಾಡಿ ಪುನಃ ಅವಳನ್ನು ಬಾಬಾನಲ್ಲಿಗೆ ಪೂಜೆಗೆ ಹೋಗಬೇಕೆಂದು ಪೀಡಿಸಿದ. ಅವಳ ಮಾತಿನಿಂದ ಸಂದೇಹಿತನಾದ ಕೊಮ್ಮಣ್ಣ ಅವಳನ್ನು ಹಿಂಬಾಲಿಸಿಕೊಂಡು ಗುಡಿಯ ಹತ್ತಿರ ಹೋದಾಗ ಗರ್ಭಗುಡಿಯಲ್ಲಿ ಬೆತ್ತಲೆಯ ದೇಹ ಉರುಳಾಡುತ್ತಿದ್ದವು. ಸಣ್ಣ ಸಂಶಯ ಬಂದು ನೋಡಿದಾಗ ಕೊಮ್ಮಣ್ಣ ನಡುಗಿದ. ಓಣಿ–ಓಣಿಗಳಲ್ಲಿ ಕೂಗಾಡಿ ನನ್ನ ಹೆಂಡತಿ ಮೋಸ ಮಾಡಿದ್ದಾಳೆ ಎಂದು ರೇಗಾಡಿದ.

ಕೊನೆಗೆ ಬಾಬಾನನ್ನು ಹೊಡೆಯಲು ಹೋಗಿ ನೂಕಿಸಿಕೊಂಡ. ಆದರೂ ಇಡೀ ಊರು ಬಾಬಾನಿಗೆ ಕೈ ಮುಗಿದುಕೊಂಡು ನಿಂತಿತು. ಕೊಮ್ಮಣ್ಣ "ಈವೊತ್ತಿಗೆ ಈಕಿ ನನ್ನ ಹೆಂಡತಿ ಅಲ್ಲ, ನಾನು ಆಕಿ ಗಂಡ ಅಲ್ಲ"[೮] ಎಂದ. ವೆಂಕಮ್ಮನ ಅಪ್ಪ–ಅಮ್ಮ ಮರುದಿನ ಬಂದು ವೆಂಕಮ್ಮಳಿಗೆ 'ಯಾಕೆ ಇಂಥಾ ಹೇಲು ತಿನ್ನೋ ಕೆಲಸ ಮಾಡಿದೆ' ಎಂದಿದ್ದಕ್ಕೆ ವೆಂಕಮ್ಮನಿಂದ ಬಂದ ಉತ್ತರ ಇಡೀ ಸಮಾಜವನ್ನೇ ಪ್ರಶ್ನಿಸುವಂತಿತ್ತು. "ಹೆಂಗೋ ಏನೋ ನಂಗೂ ಮಕ್ಕಳು ಆದರೆ ಸಾಕು ಅಂತ ಅನ್ನಿಸಿತ್ತವ್ವಾ"[೯] ಎಂದಳು. ಇಡೀ ಕುಟುಂಬ ವೆಂಕಮ್ಮನನ್ನು ಒಬ್ಬಂಟಿಯನ್ನಾಗಿ ಬದುಕುವಂತೆ ಮಾಡಿತು.

ಅಂದರೆ ಕುಟುಂಬವೊಂದನ್ನು ಹೇಗೆ ಮೂಢನಂಬಿಕೆ, ಆಚರಣೆಗಳು ಹಾಳುಗೆಡವುತ್ತವೆ ಎನ್ನುವುದನ್ನು ಪ್ರಸ್ತುತ 'ಚೇಳು' ಕತೆಯಲ್ಲಿ ಕಾಣಬಹುದು. ಅಲ್ಲದೇ ಮಕ್ಕಳಾಗಲಿಲ್ಲ ಎನ್ನುವುದನ್ನು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ನೋಡಿದಾಗ ಅದರಿಂದ ಹೇಗೆ ಮಹಿಳೆಯನ್ನು ಗುರಿ ಮಾಡಿಕೊಂಡು ಪುರುಷವಾದಿ ಸಮಾಜ ನಡೆದುಕೊಳ್ಳುತ್ತದೆ ಎನ್ನುವ ಅಂಶವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಒಂದು ಸಮಾಜವು ಹೇಗೆ ಕುಟುಂಬವನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುನ್ನಡೆಸಬೇಕಾದರೆ ಅದಕ್ಕೆ ತನ್ನದೇ ಆದ ಮಕ್ಕಳು, ವಂಶಾವಳಿಯನ್ನು ರೂಪಿಸಿಕೊಳ್ಳಬೇಕು ಎನ್ನುವ ಹಂಬಲವನ್ನು ಹೊಂದಿರುತ್ತದೆ. ಆದರೆ ಅಂತಹ ಅತಿಯಾದ ಹಂಬಲವೇ ಈ ಕತೆಯಲ್ಲಿ ಇದ್ದು ಕುಟುಂಬವನ್ನು ಅವನತಿಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ವಿಶ್ಲೇಷಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಟಿ.ಎಸ್.ಗೊರವರ ಅವರ 'ಕುದುರಿ ಮಾಸ್ತರ' ಕತೆಯಲ್ಲಿ ಬರುವ ಒಂದು ಪ್ರಸಂಗವು ಸಹ ಇದೇ ರೀತಿಯಲ್ಲಿ ತಂದೆ-ತಾಯಿಯ ಮಾತನ್ನು ಕೇಳದೇ ಮಗನೊಬ್ಬ ಅಪಪೋಲಿಯಾಗುವ ಪ್ರಸಂಗವನ್ನು ಒಳಗೊಂಡಿದೆ. ಬಸ್ಸಿನಲ್ಲಿ ಪ್ರಯತ್ನಿಸುತ್ತಿದ್ದ ಸ್ವಗತ ಪಾತ್ರದ ನಿರೂಪಣೆಯಲ್ಲಿ ತೊಡಗಿರುವ ಲೇಖಕರು ಪಕ್ಕದ ಸೀಟಿನಲ್ಲಿ ಟಿಕೆಟ್ ತೆಗೆದುಕೊಂಡು ಕುಳಿತ ವ್ಯಕ್ತಿಯೊಬ್ಬ ಕಂಡಕ್ಟರನನ್ನು ನೋಡಿ ಅಳತೊಡಗಿದ. ಅಲ್ಲಿಯೇ ಇದ್ದ ಲೇಡಿ ಪೋಲಿಸ್ ಒಬ್ಬಳು ಯಾಕೆ ಅಳ್ತೀರಿ ಎಂದು ಆತನನ್ನು ಕೇಳಿದಳು. ಆಗ ವ್ಯಕ್ತಿ "ರೊಕ್ಕ-ಗಿಕ್ಕ ಏನ್ ಕಳ್ತನ ಆಗಿಲ್ರೀ ಬಾಯಾರ. ನನ್ ಮಗನೂ ಈ ಕಂಡಕ್ಟರ್‌ನಂತೇ ಇದ್ದ. ಇವನು ಕಂಡಕ್ಟರ್ ಆಗಿ ನಮ್ಮ ಮನೆತನ ನೋಡಿಕೊಂಡು ಹೋಗ್ಬೇಕು ಅನ್ನೋದು ನನ್ನ ಕನಸು ಆಗಿತ್ತು. ಆದ್ರ ಆ ಸೂಳೆಮಗ ನಮ್ಮ ಮಾತು ಕೇಳಲಿಲ್ಲ. ಉಣಿಸಿ ತಿನಿಸಿ ಉಪವಾಸ ವನವಾಸ ಮಾಡಿ ಇಟು ಇದ್ದವನ್ನ ಇಷ್ಟು ದೊಡ್ಡಾವನ್ನ ಮಾಡಿದೆ. ನಾಕು ಅಕ್ಷರ ಕಲಿತು ನೌಕರಿ ಮಾಡ್ಲಿ ಅಂತ ಸಾಲಿ ಕಲಿಸಿದೆ. ಆದ್ರ ಅಂವ ಉಡಾಳತನಕ್ಕೆ ಬಿದ್ದು ಹಾಳಾಗ್ತಾನ..."[೧೦] ಅಂತ ಒದ್ದೆ ಮಾತುಗಳಲ್ಲಿ ಹೇಳಿದ.

ಅಂದರೆ ಕತೆಯನ್ನು ಸ್ವಗತ ಪಾತ್ರದಲ್ಲಿಯೇ ಚಿತ್ರಿಸುವ ಲೇಖಕರು ತಂದೆಯೊಬ್ಬ ತನ್ನ ಮಗನು ಹಾಳಾಗುತ್ತಿರುವ ಸಂಗತಿಯನ್ನು ಕುರಿತು ದುಃಖತಪ್ತ ಮನಸ್ಸಿನಿಂದ ತನ್ನ ಅಳಲನ್ನು ತೋಡಿಕೊಳ್ಳುವ ವಿವರಣೆಯನ್ನು ನೀಡುತ್ತಾನೆ. ಅಲ್ಲದೇ ಅವನ ದುಃಖವನ್ನು ಕಂಡು ಲೇಖಕರು ಅವನನ್ನು ಮಾತನಾಡಿಸಬೇಕೆಂದು ಪ್ರಯತ್ನಿಸಿದರೂ ಅದು ಸಾಧ್ಯವಾಗದೇ ಸುಮ್ಮನಾಗುತ್ತಾರೆ. ಲೇಖಕರು ಆ ತಂದೆಯನ್ನು ಮಾತನಾಡಿಸಿದಾಗ ತನ್ನ ಮಗ ಏತಕ್ಕಾಗಿ ಹೀಗಾದನೆಂದು ತಂದೆಯು ವಿವರಿಸುತ್ತಾರೆ. "ಎಲ್ಲಾ ಸಾಕಾಗೇತ್ರಿ. ಅವೇನು ಸಂಭಾಳ್ಸಿಕೊಳ್ರೀ. ಇರು ಒಬ್ಬ ಮಗ ನೌಕರಿ ತಗೊಂಡು ನಾಕು ಮಂದಿ ಹೌದೆನ್ನುವಂಗ ಬಾಳೆ ಮಾಡ್ತಾನಂತ ಉಪವಾಸ ವನವಾಸ ಬಿಟ್ಟಯ ಸಾಲಿ ಕಲಿಸಿದೆ. ಹನ್ನೆರಡನೆತ್ತದ ತನಕ ಓದಿದ. ಮುಂದೆ ಓಣಿ ಹುಡುಗರ ಜೊತೆ ಉಡಾಳ ತನಕ ಬಿದ್ದ. ಇಸ್ಪೀಟ್ ಆಡಾಕತ್ಯಾನ. ಹೀಂಗ ಜೂಜಾಡ್ತನಂತ ಅಂವನ ನಯಾಪೈಸೆ ರೊಕ್ಕ ಕೊಡಲಿಲ್ಲ ಹೀಂಗರ ಆಗಿ ಅಂವ ಇಸ್ಪೀಟ್ ಆಡೋದು ಬಿಡ್ಲಿ ಅಂತ ನಾ ಮಾಡಿದ್ದೆ. ಆದ್ರ ಆ ಸೂಳೆಮಗ ಊರಾಗ ಕಳ್ಳತನ ಮಾಡಕತ್ತಾನಂತೆ. ನನ್ನಂತವರ ಹೊಟ್ಯಾಗ ಎಂತಾ ಮಗ ಹುಟ್ಯಾನ ಎಂತಾ ಮಗ ಹುಟ್ಯಾನ ನೋಡ್ರಿ. ನನ್ಗ ಅಂವನ ಮುಖ ನೋಡಾಕ ಹೇಸ್ಗಿ ಆಗೇತಿ"[೧೧] ಎಂದು ಹೇಳುತ್ತಾನೆ.

ಅಂದರೆ ಮಗನೊಬ್ಬನ ಇಂತಹ ಕೃತ್ಯಗಳಿಂದ ಕುಟುಂಬವೊಂದು ಒಡೆದುಹೋಗುವ ಕುಟುಂಬಕ್ಕೆ ಕೆಟ್ಟ ಹೆಸರು ಬರುವ ಸಂಗತಿಯೊಂದನ್ನು ಕತೆಯು ಪ್ರಸ್ತಾಪಿಸುತ್ತದೆ. ಅಂದರೆ ತಂದೆಯೊಬ್ಬ ಮಗನ ಕೆಟ್ಟ ಸಂಗತಿಗಳನ್ನು ತಿಳಿದು ನೊಂದುಕೊಳ್ಳುವ ವಿಚಾರವು ಕುರಿತು ಕತೆಯ ಮುಖ್ಯ ಕೇಂದ್ರವಾಗಿದೆ. ಕುಟುಂಬವೊಂದು ಸಮಾಜದಲ್ಲಿ ಕಂಡುಬರುವ ವ್ಯವಸ್ಥೆಯಿಂದ ಕೂಡಿದ್ದು, ಅದರ ಮುಖ್ಯ ಅಂಶವಾದ ವಂಶಾವಳಿಯೊಂದು ಸಮಾಜದಲ್ಲಿ ಗೌರವವನ್ನು ಕಾಪಾಡಿಕೊಂಡಿರುತ್ತದೆ. ಅಲ್ಲದೇ ಮಗನೊಬ್ಬ ಹಾಳಾಗುತ್ತಿರುವುದನ್ನು ಕಂಡು ತಂದೆಯೊಬ್ಬ ಮರುಗುವ ಸ್ಥಿತಿಯನ್ನು ಕುರಿತದ್ದಾಗಿದೆ.

ಎಂ.ಎಸ್.ವೇದಾ ಅವರ 'ಪಾಲು' ಕತೆಯು ತಾಯಿಯೊಬ್ಬಳು ಹೆತ್ತು ಹೊತ್ತು ಬೆಳೆಸಿದ ಮಕ್ಕಳು ವಯಸ್ಸಿಗೆ ಬಂದ ನಂತರದಲ್ಲಿ ಅವರ ಕುಟುಂಬ, ಅವರ ಹೆಂಡತಿ–ಮಕ್ಕಳು ಎಂದು ಹೆತ್ತವರನ್ನು ಬಿಟ್ಟು ಬೇರೆಯಾಗುವ ಚಿತ್ರಣವು ಕತೆಯಲ್ಲಿದೆ. ಮಕ್ಕಳು ತಾಯಿಯ ಮೇಲಿನ ಪ್ರೀತಿಯನ್ನು ಬಿಟ್ಟು ಆಸ್ತಿಯನ್ನು ಕೇಳುವ ಚಿತ್ರಣ ಈ ಕತೆಯದ್ದಾಗಿದೆ. ತಾಯವ್ವನಿಗೆ ಎರಡು ಗಂಡು ಒಂದು ಹೆಣ್ಣು ಮಗಳು. ದೊಡ್ಡಮಗ ಹೆಂಡತಿಯೊಂದಿಗೆ ಬೇರೆ ವಾಸವಾಗಿದ್ದ. ಚಿಕ್ಕಮಗ ಸಿದ್ಲಿಂಗುವಿಗೆ ಚಂದವ್ವನ ಜೊತೆ ಮದುವೆ ಮಾಡಿ ತಂದ ನಂತರದಲ್ಲಿ ಅವನೂ ತಾಯಿಯಿಂದ ನಿಧಾನವಾಗಿ ದೂರವಾಗುತ್ತಿದ್ದಾನೆ ಎಂಬ ಭಾವನೆಯು ತಾಯವ್ವನದು. ಇದಕ್ಕೆ ಚಂದವ್ವನೂ ಅವನಿಗೆ ಹೇಳಿಕೊಡುತ್ತಿದ್ದಾಳೆ ಎನ್ನುವ ನೋವು ತಾಯವ್ವನನ್ನು ಕಾಡುತ್ತಿತ್ತು. ಇದೇ ಕಾರಣಕ್ಕೆ ಮಗ ಸಿದ್ಲಿಂಗು ಮತ್ತು ಚಂದವ್ವನ ಮೇಲೆ ತಾಯವ್ವ ಕೋಪವನ್ನು ತೋರ್ಪಡಿಸುತ್ತಿದ್ದರೂ ಸಿದ್ಲಿಂಗುವಿನ ಮೇಲಿನ ಪ್ರೀತಿ ಕಡಿಮೆಯಾಗಿರಲಿಲ್ಲ.

"ಮಗನನ್ನು ಒಂದು ವಾರದಿಂದ ನೋಡಲು ಆಗದಿದ್ದ ತಾಯವ್ವ ಈಗ ಮಗ ವಾರದಲ್ಲಿಯೇ ಅರ್ಧಕ್ಕಿಂತ ಹೆಚ್ಚು ಇಳಿದುಹೋಗುತ್ತಾನೆಂದು ಭಾವಿಸಿ, ಮಗನನ್ನು ಸೊಸೆಯ ಸುಪರ್ಧಿಗೆ ಪೂರ್ಣ ವಹಿಸಿಕೊಟ್ಟರೆ ಅವಳು ಅವನ ಸೂತ್ರದ ಬೊಂಬೆಯ ಮಾಡಿ ಊರೂರ ಸಂತೇಲಿ ಆಟ ಆಡಿಸದೇ ಬಿಟ್ಟಾಳೇ ಎಂಬ ಆತಂಕ ತಾಯವ್ವನದು"[೧೨] ಮಕ್ಕಳು ತಮಗೆ ಏನೇ ಮಾಡಿದರೂ ಅವಳ ಸೌಖ್ಯವನ್ನೇ ಬಯಸುವ ತಾಯಿಯ ಪ್ರೀತಿ, ಕಾಳಜಿಯನ್ನು ಮರೆತು ಮಕ್ಕಳಾದ ಸಿದ್ಲಿಂಗು, ಹಿರಿಮಗ ಶಿವಲಿಂಗ ಅದನ್ನು ಮರೆತು ತಮ್ಮ ವೈಯಕ್ತಿಕ ಕಾಳಜಿಯನ್ನು ಮುನ್ನೆಲೆಗೆ ತರುತ್ತಾರೆ.

"ಆಹಾ ನಾಯಕ್‌ಸಾನ್ ಬಡ್ಡೀರು. ಅವ್ರವುರ ಮಕ್ಳು ಅವ್ರವ್ರ ತಾವೇ ಇರಬೇಕಂತೆ. ನನ್ನ ಮಕ್ಳು ನನ್ನ ಕಣ್ಣಿಂದ ದೂರಾಗಂಗೆ ಅಡ್ಡಗ್ವಾಡೆ ಮಾತ್ರ ನೆಡಬೇಕು ಅಂತರಾಲ್ಲಪ್ಪ ಗ್ರಾಸ್ತರು. ಅವ್ರ ಹಟ್ಟಿ ಹಾಳಾಗ ಅವ್ರಗ್ ಮರಣ ಬರಾ. ಆಪತ್ ಬಂದ್ ಚಾಪೇಲಿ

ಸುತ್‌ಕಂಡ್ ಹ್ವಾಗ. ಅಪ್ಪಾ ಸತ್ ಮಕ್ಳಾ ಯೆಮ್ಮೆ ಮೇಯ್ವ ಮೈಸೂರಾ ಬೀದಿಬೀದಿ ಅಲ್ದು ಮೊಸ್ರ, ಬೆಣ್ಣೆ ಮಾರಿ ಮಾರಿ ಸಾಕೀವ್ನಿ ಕಣ್ರೆಲೆ ಭೊಸುಡಿರಾ. ಆನೆಸೂರರರಿಗೆ ಇರಾ ನನ್ನ ಮಕ್ಳ ನನ್ನಿಂದ ದೂರ ಮಾಡಾರಂತೆ. ಅವ್ರವ್ರ ಮಕ್ಳು ಅವ್ರವ್ರ ತಾವೇ ಇರಬೈಕಂತೆ ಅವ್ರಗೊಂದು ನ್ಯಾಯ,, ನನಗೊಂದು ನ್ಯಾಯ. ಸ್ರೀಕಂತೇಸ್ವರಾ ನೀನೆ ಕಂಡಕಪ್ಪಾ"[೧೩] ಎಂದು ತಾಯಿಯು ಹೇಳುವ ಮಾತು ಇಂದು ಕುಟುಂಬದಲ್ಲಿ ಮಕ್ಕಳು ಹೆಂಡತಿ ಬಂದ ನಂತರ ಸೊಸೆಯಂದಿರು ಮಕ್ಕಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಿರುವ ರೀತಿಯನ್ನು ಚಿತ್ರಿಸುತ್ತಿದೆ.

ಅಲ್ಲದೇ ತಾಯಿಯಿಂದ ಬೇರೆಯಾಗುವ ಸನ್ನಿವೇಶ ಬಂದಾಗ ಆಸ್ತಿಯ ವಿಚಾರಕ್ಕೆ ತಾನು ದುಡಿದು ಸಂಪಾದಿಸಿ ಗಳಿಸಿದ ಆಸ್ತಿಯನ್ನು ಅವಳು ಭಾಗ ಮಾಡಲು ಸಿದ್ಧ. ಆದರೆ ಅವಳು ತಲೆಬಾಗಿಲಿನ ವಿಚಾರಕ್ಕೆ ಬಂದಾಗ ಮಾತ್ರ ಅವಳದ್ದು ತಕರಾರು. ಆದರೆ ಅವಳ ಮಾತನ್ನು ಕೇಳದೇ ಅದಕ್ಕೆ ಖರ್ಚಾಗಿರುವ ದುಡ್ಡನ್ನು ಕೊಡುತ್ತೇವೆಂದು ಹೇಳುವ ಮಕ್ಕಳನ್ನು ಕಂಡಾಗ ನಿಜಕ್ಕೂ ಅವಳಿಗೆ ಅರಗಿಸಿಕೊಳ್ಳಲಾಗಲಿಲ್ಲ. ಮಾನವೀಯತೆಯನ್ನು ಮರೆತ ಮಕ್ಕಳು ಕೆಲವು ಮನುಷ್ಯ ಸಹಜವಾಗಿ ವಸ್ತುಗಳ ಮೇಲೆ ಇಟ್ಟಿರಬಹುದಾದ ಪ್ರೀತಿಯನ್ನು ಅರ್ಥಮಾಡಿಕೊಳ್ಳಲಾರದ ಅವರ ಮೇಲೆ ತಾಯವ್ವಳಿಗೆ ಅಸಹ್ಯವೆನಿಸಿಬಿಡುತ್ತದೆ. ಇಲ್ಲಿ ಪ್ರಮುಖವಾಗಿ ಆಸ್ತಿಯ ಹಂಚಿಕೆಯಲ್ಲಿ ಮಾದೇವಿಗೆ ಏಕೆ ಕೊಡಬೇಕು? ಅವಳಿಗೆ ಮದುವೆಯನ್ನು ಮಾಡಿಲ್ಲವಾ? ಎಂಬ ಪ್ರಶ್ನೆಯನ್ನು ಈ ಮಕ್ಕಳು ಕೇಳುತ್ತಾರೆ. ಈ ಹಿನ್ನೆಲೆಯಲ್ಲಿ ಆಸ್ತಿಯನ್ನು ಪಡೆಯುವಲ್ಲಿ ಗಂಡುಮಕ್ಕಳಿಗೆ ಮಾತ್ರ ಹಕ್ಕಿದೆ ಎಂಬ ಸಂಪ್ರದಾಯವಾದಿ ನಿಲುವನ್ನು ತಾಯವ್ವ ಪ್ರಶ್ನಿಸುತ್ತಾಳೆ.

ಇಡೀ ಕುಟುಂಬವು ಇಂದು ಗ್ರಾಮೀಣ ಪ್ರದೇಶಗಳಲ್ಲೂ ಛಿದ್ರಛಿದ್ರವಾಗುತ್ತಿರುವುದನ್ನು ಕತೆಯ ಮೂಲಕ ಗುರ್ತಿಸಲಾಗಿದೆ. ಹೆತ್ತು ಹೊತ್ತು ಸಾಕಿದವರನ್ನು ಬಿಟ್ಟು ಹೆಂಡತಿಯ ಮಾತನ್ನು ಕೇಳುವ ಮಗನ ಕಾರಣಕ್ಕಾಗಿ ಬೇರೆಯಾಗುವ ಕುಟುಂಬ ವ್ಯವಸ್ಥೆಯು ವೈಯಕ್ತಿಕ ಸ್ವಾರ್ಥಕ್ಕೆ ಬಲಿಯಾಗುತ್ತಿರುವುದನ್ನು ಚಿತ್ರಿಸುತ್ತಿದೆ. ಮಾದೇವಿಯು ತಂಗಿ ಎನ್ನುವ ಭಾವನೆಯನ್ನು ಮರೆತು ಗಂಡನನ್ನು ಬಿಟ್ಟು ಬಂದಿದ್ದರೂ ಅವಳ ಮೇಲೆ ಅವರು ತೋರದಿರುವ ಕಾಳಜಿಯನ್ನು ತಾಯವ್ವ ಪ್ರಶ್ನಿಸುತ್ತಾಳೆ. ಮುಖ್ಯವಾಗಿ ಆಸ್ತಿಯೆನ್ನುವುದು ಪುರುಷನ ಸ್ವತ್ತು ಎನ್ನುವುದನ್ನು ಮಾದೇವಿಯ ಮೂಲಕ ಕತೆಯಲ್ಲಿ ನಿರೂಪಿಸಲಾಗಿದೆ. ವೈಯಕ್ತಿಕ ಹಿತಾಸಕ್ತಿ, ಲಾಭ, ಆಸ್ತಿಗಾಗಿ ಕುಟುಂಬವು ಒಡೆದುಹೋಗುತ್ತಿರುವುದನ್ನು ಕತೆಯು ವಿವರಿಸುತ್ತಿದೆ.

೨. ಕುಟುಂಬೇತರ ಸಂಬಂಧಗಳಲ್ಲಿನ ಸಡಿಲಿಕೆ

ಮಾನವ ತನ್ನ ಸಮಾಜದಲ್ಲಿ ಬದುಕಲು ಹೊರಟ ನಂತರದಲ್ಲಿ ಅವನಿಗೆ ಅನೇಕ ಸಮಸ್ಯೆಗಳು ಕಾಡಿರಬಹುದು. ಕುಟುಂಬ ಎಂಬ ಸಂಸ್ಥೆಯನ್ನು ಮಾಡಿಕೊಂಡ ನಂತರದಲ್ಲಿ ಅವನು ಸಮಾಜದಲ್ಲಿ ಬದುಕಬೇಕಾದಾಗ ಅವನಿಗೆ ಸ್ನೇಹಿತರು, ಬಂಧುಗಳು ಮುಂತಾದವರು ಅವನಿಗೆ ಅವಶ್ಯವೆನಿಸಿದೆ. ಜೊತೆಗೆ ಅವನು ವಾಸಿಸುತ್ತಿರುವ ಸುತ್ತಮುತ್ತಲಿನ ಪರಿಸರದ ಜೊತೆಗೂ ಭಾವನಾತ್ಮಕವಾದ ಸಂಬಂಧವನ್ನು ಬೆಳೆಸಿಕೊಂಡಿರುತ್ತಾನೆ. ಇಂತಹ ತನ್ನ ಅಕ್ಕಪಕ್ಕದ ನೆರೆಹೊರೆಯ ಸ್ನೇಹಿತರ, ಬಂಧುಗಳ, ಸಮಾಜದಲ್ಲಿರುವ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಇಲ್ಲಿ ಕುಟುಂಬೇತರ ಸಂಬಂಧಗಳನ್ನಾಗಿ ಗುರ್ತಿಸಿಕೊಳ್ಳಲಾಗಿದೆ. ಹಿಂದೆ ಜನರು ತಮ್ಮ ಅಕ್ಕಪಕ್ಕದ ಜನರೊಂದಿಗೆ ಅನ್ಯೋನ್ಯತಾಭಾವವನ್ನು ಹೊಂದಿದ್ದನ್ನು ನಾವು ಅನೇಕ ಜನಪದರ ಹಿನ್ನೆಲೆಯಿಂದ ಗುರ್ತಿಸಿಕೊಳ್ಳಬಹುದು. ಅಷ್ಟೆಂದ ಮಾತ್ರಕ್ಕೆ ಅವರಲ್ಲಿ ಮನುಷ್ಯ ಸಹಜ ಗುಣಗಳಿರಲಿಲ್ಲ ಎಂದಲ್ಲ. ಆದರೆ ಅವರು ಅದೆಲ್ಲದರ ಹೊರತಾಗಿಯೂ ಇಂದಿನ ಜಾಗತೀಕರಣ ಸಂದರ್ಭದ ಹೊತ್ತಿನಲ್ಲಿ ಕಾಣುತ್ತಿರುವ ಪರಿಣಾಮಗಳ ದೃಷ್ಟಿಯಿಂದ ಸಂಬಂಧಗಳನ್ನು ಹಾಳುಮಾಡಿಕೊಂಡಿರಲಿಲ್ಲ. ಅಲ್ಲದೇ ಸಂಬಂಧಗಳಲ್ಲಿ ಬಿರುಕುಗಳನ್ನು ಕಂಡರೆ ಅದನ್ನು ಹಬ್ಬಗಳಲ್ಲಿ, ಜಾತ್ರೆಗಳಲ್ಲಿ, ಉತ್ಸವಗಳಲ್ಲಿ ಅದನ್ನು ಮರೆಯುವ ಮತ್ತೆ ಒಂದಾಗುವ ಮನೋಧೋರಣೆಯನ್ನು ಹೊಂದಿರುತ್ತಿದ್ದರು.

ಆದರೆ ಇಂದು ಜಾಗತೀಕರಣ ಸಂದರ್ಭದಲ್ಲಿ ಮನುಷ್ಯರ ಸಂಬಂಧಗಳಲ್ಲಿ ಅಷ್ಟೇ ಅಲ್ಲದೇ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೂಡಾ ಅನೇಕ ಬದಲಾವಣೆಗಳು ಉಂಟಾಗುತ್ತಿವೆ. ಕುಟುಂಬಗಳನ್ನೇ ಮರೆತು ಯಾಂತ್ರಿಕ ಜೀವನದ ಭಾಗವಾಗಿ ಬದಲಾಗುತ್ತಿರುವ ಇಂತಹ ಅತಂತ್ರ ಪರಿಸ್ಥಿತಿಯಲ್ಲಿ ಮನುಷ್ಯ ಕುಟುಂಬೇತರ ಸಂಬಂಧಗಳಲ್ಲಿ ಕೂಡಾ ಅವನ ಬದಲಾವಣೆಗಳನ್ನು ಗುರ್ತಿಸುವುದು ಇಲ್ಲಿ ಮುಖ್ಯವಾಗುತ್ತದೆ. ಇಂತಹ ಬದಲಾವಣೆಗಳನ್ನು ಸಮಾಜದ ಮೂಲಕ ನಾನಾ ರೀತಿಯಲ್ಲಿ ಗ್ರಹಿಸಲು ಸಾಧ್ಯವಾಗಿದೆ. ಆದರೆ ಕನ್ನಡದ ಜಾಗತೀಕರಣ ಸಂದರ್ಭದ ಹಿನ್ನೆಲೆಯಲ್ಲಿ ಕುಟುಂಬೇತರ ಸಂಬಂಧಗಳನ್ನು ಹೀಗೆ ಗುರ್ತಿಸಲಾಗಿದೆ.

ಜಯಂತ್ ಕಾಯ್ಕಿಣಿ ಅವರ 'ಕನ್ನಡಿ ಇಲ್ಲದ ಊರಲ್ಲಿ' ಕತೆಯು ಇಂತಹದ್ದೇ ಒಂದು ಪ್ರಸಂಗ ಬರುತ್ತದೆ. ಮುಖ್ಯ ಪಾತ್ರವಾದ ಸತ್ಯಜಿತನಿಗೆ ಮದುವೆಯಾಗಿಲ್ಲ ಎನ್ನುವ ಕಾರಣದಿಂದ ಇಡೀ ಸಮಾಜವೇ ಅವನನ್ನು ಇನ್ನೂ ಏಕೆ ಮದುವೆಯಾಗಿಲ್ಲ

ಎಂಬ ಪ್ರಶ್ನೆಯೊಂದನ್ನು ಕೇಳುತ್ತಿರುತ್ತದೆ. ಈ ಜಂಜಾಟದಿಂದ ತಪ್ಪಿಸಿಕೊಳ್ಳಲು ಸತ್ಯಜಿತನಿಗೆ ಸಾಧ್ಯವಾಗದೇ ದಾರಿಯಲ್ಲಿ ಬರುತ್ತಿರುವಾಗ ದೂರದ ಊರುಗಳಿಗೆ ಹೋಗುವ ಖಾಸಗೀ ಲಕ್ಸುರಿ ಬಸ್ಸುಗಳ ನಿಲ್ದಾಣ ಕಾಣುತ್ತದೆ. ಅಲ್ಲಿ ಒಬ್ಬ ಹುಡುಗ ನಿಂತು ಬರುವ ಬಸ್ಸುಗಳಿಗೆ 'ಕಡಪಾ ಜಾತಾ ಹೈ ಕ್ಯಾ?' ಅಂತ ಕೇಳುತ್ತಿದ್ದ. ಆದರೆ ಬಸ್ಸಿನಲ್ಲಿದ್ದ ಕ್ಲೀನರ್ ಇವನನ್ನು ಅಪಹಾಸ್ಯ ಮಾಡುತ್ತಾ ಹಂಗಿಸುತ್ತಾ 'ಹೌದು ಬರ್ತೀಯಾ? ಕಾಸಿದೆಯಾ? ಎಂದು ಗಹಗಹಿಸಿ ನಗುತ್ತಿದ್ದರು. "ಬಸ್ಸಿನ ಡ್ರೈವರು ಮಾತ್ರ ವಿಚಿತ್ರವಾದ ಲೇವಡಿಯ ಪ್ರಶ್ನೆ ಕೂಗಿದ–'ಇಲ್ಲಿ ಮಣ್ಣು ತಿಂತೀಯಲ್ಲಾ ಬಚ್ಚೂ... ನಿನ್ನ ಆ ಕಡಪಾದಲ್ಲಿ ಏನಿದೆ? ಚಿನ್ನದ ಅರಮನೆ? ಏನಿದೆ ನಿನ್ನ ಕಡಪಾದಲ್ಲಿ?' ಬಸ್ಸಿನ ಎಡಬದಿಯಲ್ಲಿ ಕೂತವರಿಂದ ಹಿಡಿದು ಫುಟಪಾತಿನ ಮೇಲೆ ನಿಂತವರೆಲ್ಲ ಈಗ ಆ ಪೋರನನ್ನೇ ನೋಡುತ್ತಿದ್ದರು. ಅವನು ತನ್ನ ಸರಳ ಗತ್ತಿನಲ್ಲೇ 'ಮೇರಾ ಬಾಪ್ ಹೈ... ವಹಾಂ' ಎಂದು ಕ್ಯಾನನ್ನು ಕಾಲಿಂದ ಮುಂದುವರೆಸಿಕೊಂಡು ಬೇರೆ ದಿಕ್ಕಿನಲ್ಲಿ ಹೊರಟುಹೋದ."[೧೪]

ಅಂದರೆ ಇಲ್ಲಿ ಸತ್ಯಜಿತ ಆ ಹುಡುಗನನ್ನು ಕಂಡು ಅವನಲ್ಲಿರಬಹುದಾದ ಆ ಶಕ್ತಿಯನ್ನು ಹೀಗೆ ಗುರ್ತಿಸುತ್ತಾನೆ. ಅದನ್ನು ಅವನದೇ ಮಾತಿನಲ್ಲಿ ಅದನ್ನು ನೋಡುವುದಾದರೆ "ಬೀದಿ ಹುಡುಗನಾದರೇನಾಯಿತು. ನಿಮ್ಮೆಲ್ಲರಂತೆ ನನ್ನದೂ ಒಂದು ಊರು ಇದೆ, ಅಪ್ಪ ಇದ್ದಾನೆ ಎಂಬ ವರಸೆಯಲ್ಲಿದ್ದ 'ಮೇರಾ ಬಾಪ್ ಹೈ ವಹಾಂ' ಕೇಳಿ ಸತ್ಯಜಿತನ ಮೈ ಜುಮ್ಮೆಂದಿತು. ಎಲ್ಲಾ ಆಟಗಳನ್ನು ದಾಟಿಸುವಂತಿತ್ತು ಆ ಉತ್ತರ. ಇದು ಸುಳ್ಳಾಗಿದ್ದರೂ ದಾರುಣವಾಗಿತ್ತು. ನಿಜವಾಗಿದ್ದರೂ ದಾರುಣವಾಗಿತ್ತು. ಅಪ್ಪನನ್ನು ಎಂದೋ ಬಿಡುಗಡೆ ಮಾಡಿದಂತಿತ್ತು."[೧೫] ಎನ್ನುವ ಮಾತುಗಳು ಕುಟುಂಬದ ಪರಿಕಲ್ಪನೆಯೇ ಇಲ್ಲದಿರುವ ಅನಾಥನೊಬ್ಬ ಇಂದಿನ ವರ್ತಮಾನದಲ್ಲಿ ತನ್ನ ಅಪ್ಪ ಅಲ್ಲಿರಬಹುದು ಎನ್ನುವ ಆತ್ಮವಿಶ್ವಾಸವನ್ನು ಹೊಂದಿ ಅದಕ್ಕಾಗಿ ಹೋರಾಡುವ ಇಡೀ ಸಮಾಜಕ್ಕೊಂದು ಪ್ರತಿಕ್ರಿಯೆಯನ್ನು ತೋರುವ ಮೂಲಕ ತಾನು ಕುಟುಂಬವಿಲ್ಲದ ಅನಾಥನಲ್ಲ ಎನ್ನುವುದನ್ನು ಕತೆಯ ಮೂಲಕ ವ್ಯಕ್ತಪಡಿಸಲಾಗಿದೆ.

ಅಲ್ಲದೇ ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಶರಭನಗೌಡ ತನ್ನ ಕುಟುಂಬವನ್ನು ಮಾತ್ರ ಕಳೆದುಕೊಂಡು ಒಂಟಿಯಾಗಿಲ್ಲ. ಅವನಿಗೆ ಇಡೀ ತನ್ನ ಬದುಕಿನ ಭಾಗಗಳನ್ನು ಅನೇಕ ಕಾರಣಗಳಿಂದ ಕಳೆದುಕೊಂಡು ಒಂಟಿಯಾಗಿದ್ದಾನೆ. ಅಲ್ಲದೇ ಕುಟುಂಬೇತರ ಸಂಬಂಧಗಳ ಮೌಲ್ಯವನ್ನು ಈ ಶರಭನಗೌಡ ಪಾತ್ರದ ಮೂಲಕ ಚಿತ್ರಿಸಲಾಗಿದೆ. ನಾವು ಕುಟುಂಬ ಅಥವಾ ಕುಟುಂಬೇತರ ಸಂಬಂಧಗಳು

ಅಂದರೆ ಕೇವಲ ಹೆಂಡತಿ, ಮಕ್ಕಳು, ಅಕ್ಕಪಕ್ಕದವರು, ಬಂಧುಗಳು ಎಂದು ತಿಳಿದಿದ್ದೇವೆ. ಆದರೆ ಕತೆಯಲ್ಲಿ ಶರಭನಗೌಡ ಇಂತಹ ಸಂಬಂಧಗಳ ಜೊತೆಗೆ ಅವನು ಬಾಳಿ ಬದುಕುತ್ತಿರುವ ಮನೆ, ದನ, ಕರು, ಅವನ ಜಮೀನಿನಲ್ಲಿ ಕೆಲಸ ಮಾಡುವ ಆಳುಗಳೊಂದಿಗೆ ಅವನ ಜೀವನಕ್ರಮವಿದೆ.

ಆದರೆ ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಬದಲಾವಣೆಗೆ ಒಳಪಡುತ್ತಿದೆ ಎಂಬುದನ್ನು ಕತೆಯ ಮೂಲಕ ನೊಡುವುದಾದರೆ "ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು"[೧೬] ಎಂಬ ಮಾತುಗಳು ಬದಲಾವಣೆಯ ಮೂಲಕ ವಸ್ತು, ಪ್ರಾಣಿ, ಮನುಷ್ಯರೊಂದಿಗೆ ಸಂಬಂಧ ಹೊಂದಿದ್ದ ಗೌಡನು ಇಂತಹ ಅನುಭವಗಳಿಂದ ಏಕಾಂಗಿಯಾದೆ ಎನ್ನುವ ಮನೋಭಾವನೆಯನ್ನು ತೋರುತ್ತಾನೆ. ಅಲ್ಲದೇ ಗೌಡನಿಗೆ ಈ ನೆಲೆಯ ಯಾಂತ್ರಿಕವಾದ ಬದುಕು ಅವನಿಗೆ ಸರಿಹೊಂದುತ್ತಿರಲಿಲ್ಲ. "ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ."[೧೭] ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಹೆಂಡತಿ, ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದಾಗ ಇರದ ಈ ರೀತಿಯ ಏಕಾಂಗಿಭಾವ ತನ್ನ ದಿನನಿತ್ಯದ ಬದುಕಿನಲ್ಲಾದ ಬದಲಾವಣೆಗಳಿಂದ ಅವನನ್ನು ಕಾಡಲು ಶುರುಮಾಡಿತು ಎನ್ನುವ ಮಾತುಗಳು ನಿಜಕ್ಕೂ ಕುಟುಂಬದಾಚೆಗೂ ಗೌಡನು ಬದುಕಿನಲ್ಲಿ ಹೊಂದಿದ್ದ ಸಂಬಂಧಗಳ ಪರಿಚಯವನ್ನು ಮತ್ತು ಅದು ಜೀವನಕ್ರಮವನ್ನು ತಿಳಿಸುವ ನೆಲೆಯಾಗಿ ವಿಸ್ತರಿಸಿಕೊಳ್ಳುತ್ತದೆ.

ಅಲ್ಲದೇ 'ತಮಂಧದ ಕೇಡು' ಕತೆಯಲ್ಲೂ ಸಹ ಇಂತಹದ್ದೇ ಆದ ಸನ್ನಿವೇಷವಿದೆ. ಆದರೆ ಅದರ ಸ್ವರೂಪ ಬೇರೆಯದ್ದಾಗಿದೆ. ಇಲ್ಲಿ ಗೌಡನಾದ ಶಾಂತಗೌಡ ತನ್ನ ಆಳಾದ ದುರುಗನ ಮೇಲೆ ಬಹಳ ಪ್ರೀತಿ, ವಿಶ್ವಾಸವನ್ನು ಇಟ್ಟುಕೊಂಡಿರುತ್ತಾನೆ. ಗೌಡನ ಜೀವನದ ಒಂದು ಭಾಗವಾದ ದುರುಗನು ತನ್ನ ಮಗನಾದ ಚೆನ್ನನು ಗೌಡನ ಮಗಳಾದ ಅಕ್ಕಮ್ಮನ ಬಗ್ಗೆ ತೋರುವ ಪ್ರೀತಿಯ ಮೂಲಕ ಸಂಬಂಧಗಳ ಹೊರತಾಗಿಯೂ ನಿಷ್ಠೆಯನ್ನು ತೋರಬೇಕೆಂದು ಚೆನ್ನನಿಂದ ದುರುಗ ಬಯಸುತ್ತಾನೆ. ಚೆನ್ನ ಮಾಡಿದ ಕುತ್ತು ಯಾರಿಗೆ ಉರುಲಾದೀತೋ ಎಂಬ ಭಯದಿಂದ ದುರುಗ ಹೆದರಿದ್ದ. ಅಲ್ಲದೇ

ಈ ವಿಷಯವನ್ನು ಊರಿನ ಬಸಣ್ಣ ದೇವರ ಗುಡಿ ಪೂಜಾರಿ ಆದ ಬೂದೆಣ್ಣನು 'ಏನು ದುರುಗಣ್ಣ ನಿನ್ನ ಮಗ ದೊಡ್ಡದ್ಕ ಕೈಯಾಕ್ಯಾನ ಬುಡು' ಎಂದ ಮಾತುಗಳು ದುರುಗನನ್ನು ಚಿಂತೆಗೀಡು ಮಾಡಿತ್ತು.

ಶಾಂತಗೌಡನು ದುರುಗನ ಹೆಂಡತಿಯ ಮೇಲೆ ವ್ಯಾಮೋಹವನ್ನು ಜೊತೆಗೆ ಪ್ರೀತಿಯನ್ನು ಇಟ್ಟುಕೊಂಡಿದ್ದನು. ಆದರೆ ದುರುಗನ ಮಗ ಚೆನ್ನನು ಗೌಡನ ಮಗಳಾದ ಅಕ್ಕಮ್ಮನ ಮೇಲೆ ಪ್ರೀತಿಯನ್ನು ಹೊಂದಿದ್ದಾನೆ ಎನ್ನುವ ಕಾರಣಕ್ಕೆ ಗೌಡನು ಆಲೋಚಿಸುವ ಕ್ರಮವೇ ಭಿನ್ನವಾಗಿದೆ. ಇಲ್ಲಿ ಜಾತಿಯ ಪ್ರಶ್ನೆ, ಆಸ್ತಿಯ ಅಂತರದ ಪ್ರಶ್ನೆ ಮುಖ್ಯವೆನಿಸಿಬಿಡುತ್ತದೆ. ಏಕೆಂದರೆ ಗೌಡನದು ಮೂಲತಃ ಊಳಿಗಮಾನ್ಯ ವ್ಯವಸ್ಥೆಯ ಅಧಿಕಾರಶಾಹಿ ತಂತ್ರ. ತನ್ನ ಆಳಾದ ದುರುಗನ ಹೆಂಡತಿಯನ್ನು ಗೌಡನು ವ್ಯಾಮೋಹಿಸಬಹುದಾದರೆ ಚೆನ್ನನು ತನ್ನ ಮಗಳನ್ನು ನೋಡಬಾರದೆಂದು ಪ್ರತಿಪಾದಿಸುವ ಗೌಡನ ಮನೋಭಾವನೆಯನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

ಅಲ್ಲದೇ ಅವನು ದುರುಗನು ಪ್ರೀತಿಯಿಂದ ಬೆಳೆಸಿದ್ದ ಎರಡು ಮರಗಳನ್ನು ಕಡಿಸಲು ಕಟಗಿ ಅಡ್ಡೆ ರಸೂಲ್ಸಾಬುನ್ನ ಕರೆಸಿದ್ದ. ಅವನು ಈ ಎರಡೂ ಮರಗಳನ್ನು ಕಡಿದರೆ ನಿಮಗೆ ಮತ್ತು ನಿಮ್ಮಕ್ಕ ಗೌಡ್ಸಾನಿಗೆ ಎರಡು ಎತ್ತಿನ ಬಂಡಿಯಾಕ್ಕಾದ ಎನ್ನುತ್ತಾನೆ. ಈ ಎರಡೂ ಕಾರಣಗಳಿಗೂ ಗೌಡ ದುರುಗನ ಮೇಲೆ ತನ್ನ ಆಕ್ರಮಣಶೀಲತೆಯನ್ನು ಪ್ರದರ್ಶನ ಮಾಡುತ್ತಾನೆ. ಚೆನ್ನನ ಮೇಲೆ ಅವನಿಗಿರುವ ಕೋಪವನ್ನು ದುರುಗ ತನ್ನ ಹೆಂಡತಿ ಚಂದವ್ವನನ್ನು ನೆನಸಿಕೊಂಡು ಸುಮ್ಮನಾಗುತ್ತಿರುತ್ತಾನೆ. ಆದರೆ ಮರಗಳನ್ನು ಕಡಿಸಬೇಕೆಂದು ಗೌಡ ತಿಳಿಸಿದಾಗ ದುರುಗನಿಗೆ ತಾನು ಮತ್ತು ಚಂದವ್ವ ಪ್ರೀತಿಯಿಂದ ಸಾಕಿ ಬೆಳೆಸಿದ ಮರಗಳನ್ನು ಕಡಿಯುವುದು ಬೇಡ ಎಂದು ತಿಳಿಸುತ್ತಾನೆ. ಚಂದವ್ವನ ನೆನಪು ಈ ಮರಗಳ ಮೂಲಕ ಕಾಡುತ್ತಿರುತ್ತದೆ ಎನ್ನುವುದನ್ನು ಗೌಡನಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿ ಸೋಲುತ್ತಾನೆ. ಆದರೆ ಗೌಡನ ಸ್ವಭಾವವು ಇಲ್ಲೂ ಕೂಡ ವ್ಯಕ್ತವಾಗುತ್ತದೆ. ದುರುಗನ ಮಾತನ್ನು ಕೇಳದೇ ಅವನು ರಸೂಲ್‌ಸಾಬನಿಗೆ ಮರಗಳನ್ನು ಕಡಿಯಲು ಒಪ್ಪಿಗೆ ನೀಡುತ್ತಾನೆ.

ಈ ಎಲ್ಲಾ ಹಂತದಲ್ಲೂ ಗೌಡ ಏಕಾಂಗಿಯಾಗಿ ಉಳಿಯುವ ಪರಿಸ್ಥಿತಿಯನ್ನು ಹೀಗೆ ವಿವರಿಸುತ್ತಾನೆ. "ಹೆಣ್ತಿ ಹಂಪಮ್ಮ ನೆಪ್ಪಾದಳು; ಚಂದವ್ವ ಕಣ್ಣು ಮುಂದ ಬಂದಳು. ಅಕ್ಕ ರುದ್ರಮ್ಮ, ಮಗಳು ಕಣ್ಣ ಮುಂದೆ ನಿಂತರು. ಆದರೆ ಮನ್ಯಾಗ ಯಾರೂ ಇಲ್ಲ ಅಂಬದು ಅರುವಾದಾಗ 'ನಾನೆಂಗ ಇಷ್ಟುದಿನ ಒಂಟಿ ಬದುಕಿದೆ ಈ ಮನ್ಯಾಗ'

ಅಂದುಕೊಂಡ'. ಶಾಂತಗೌಡುಗ ಈ ಪ್ರಶ್ನೆ ಎಂದೂ ಎದ್ದಿರಲಿಲ್ಲ."[೧೮] ಗೌಡನು ತನ್ನ ಅಕ್ಕ ರುದ್ರಮ್ಮನ ಮನೆಗೆ ಬಂದಾಗ ಚೆನ್ನನನ್ನು ಕೊಲ್ಲಿಸುವ ನಿರ್ಧಾರವನ್ನು ಮಾಡಿರುತ್ತಾರೆ. ಈ ವಿಷಯವನ್ನು ಮುಟ್ಟಿಸುತ್ತಾಳೆ. ತುಂಗೆಯನ್ನು ದಾಟಲು ದುರುಗ ಗೌಡನನ್ನು ಎತ್ತಿಕೊಂಡವನು ಕಾಲಿಗೆ ನೀರು ಬಂದರೂ ಬಿಡದೇ ಮುನ್ನೆಡೆಯುತ್ತಾನೆ. ಗೌಡ ದುರುಗನನ್ನು ತಿರುಗಲೇ ಅಂದರೂ ಅದನ್ನು ಕೇಳದಿದ್ದಾಗ ದುರುಗನ ತಲೆಯನ್ನು ಜಜ್ಜುತ್ತಾನೆ. ಕಾಲು ಮುಗ್ಗರಿಸಿ ದುರುಗ ಕೆಳಗೆ ಬಿದ್ದು ಗೌಡನು ದುರಂತ ಅಂತ್ಯವನ್ನು ಕಾಣುತ್ತಾನೆ.

ಇಂತಹ ಕುಟುಂಬೇತರ ಸಂಬಂಧಗಳಲ್ಲಿ ನಡೆಯುವ ಅತಾಚುರ್ಯಗಳು, ಅವಸರದ ನಿರ್ಧಾರಗಳು ಬದುಕನ್ನೇ ಕಿತ್ತುಕೊಳ್ಳುತ್ತದೆ ಎನ್ನುವುದಕ್ಕೆ 'ತಮಂಧದ ಕೇಡು' ಕತೆಯು ಉತ್ತಮ ಉದಾಹರಣೆಯಾಗಿದೆ. ಅಲ್ಲದೇ ಶಾಂತಗೌಡನು ದುರುಗನ ಹೆಂಡತಿಯ ವಿಷಯದಲ್ಲಿ ಮಾಡಬಹುದಾದ ಸ್ವಾತಂತ್ರ್ಯವನ್ನು ಶಾಂತಗೌಡನ ಆಳು ದುರುಗನು ಎನ್ನುವ ಕಾರಣಕ್ಕೆ ಗೌಡನು ಹೊಂದಿರುತ್ತಾನೆ. ಚಂದವ್ವಗೆ ಗೌಡತಿ ಎನ್ನುವುದನ್ನು ಬಿಟ್ಟು ಇನ್ನುಳಿದುದೆಲ್ಲ ಅಧಿಕಾರವು ಇದ್ದಿತು. ಆದರೆ ಇದೇ ದುರುಗನ ಮಗ ಚೆನ್ನನು ಒಂದೇ ಊರಿನ ತನ್ನ ತಂದೆ ಕೆಲಸ ಮಾಡುವ ಗೌಡನ ಮಗಳು ಎನ್ನುವ ಕಾರಣಕ್ಕೆ ಮಾತನಾಡಿಸಿದ್ದು ನಿಜಕ್ಕೂ ಕುಟುಂಬೇತರ ಸಂಬಂಧಗಳ ವಸ್ತುಸ್ಥಿತಿಯನ್ನು ನಮ್ಮೆದುರಿಗಿಡುತ್ತದೆ. ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಆಳುಗಳ ನಡುವಿನ ಸಂಬಂಧ ಎಷ್ಟೇ ಪ್ರೀತಿಯಿಂದ ಉಳ್ಳದ್ದು ಎಂದು ಪರಿಭಾವಿಸಬಹುದಾದರೂ ಅದರ ನಡುವಿನ ಕಂದರವೊಂದು ಇದ್ದೇ ಇರುತ್ತದೆ. ಸಂಬಂಧಗಳ ವಿಚಾರದಲ್ಲಿ ಗೌಡನು ಚಂದವ್ವನ ಮೇಲೆ ತಾಳುವ ನಿಲುವು ಅವನಿಗೆ ತಪ್ಪನ್ನು ತರದಿದ್ದಾಗ ಚೆನ್ನನ ಮೇಲೆ ಅವನ ಕ್ರೌರ್ಯ ನಿಜಕ್ಕೂ ಊಳಿಗಮಾನ್ಯದ ಆಂತರ್ಯವನ್ನು ಬಿಚ್ಚಿಡುತ್ತಿದೆ.

ವಸುಧೇಂದ್ರ ಅವರ 'ಕ್ಷಮೆಯಿಲ್ಲದೂರಿನಲಿ' ಕತೆಯು ಇಂದಿನ ದಿನಮಾನಗಳಲ್ಲಿ ನಡೆಯುತ್ತಿರುವ ಐಟಿ-ಬಿಟಿಯಲ್ಲಿ ಕೆಲಸ ಮಾಡುವಂತಹ ಜನರ ಕುರಿತುದಾಗಿದೆ. ಅವರು ಅಪಾರ್ಟ್‌ಮೆಂಟೊಂದರಲ್ಲಿ ವಾಸಿಸುತ್ತಿದ್ದರೂ ಕೂಡ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಗುಣಗಳು ಇಲ್ಲದಾಗಿ, ಬದುಕನ್ನು ಜನರ ಜೊತೆ ಬೆರೆಯದೇ ಕೇವಲ ತಂತ್ರಜ್ಞಾನದ ಜೊತೆಯೇ ಕಾಲ ಕಳೆಯುವ ಮಾನವೀಯ ಮೌಲ್ಯಗಳನ್ನು ಮರೆತಿರುವ ಬಗೆಗೆ ಕತೆಯಲ್ಲಿ ಪ್ರಸ್ತಾಪಿಸುತ್ತಾರೆ. ಜಾಗತೀಕರಣದ ಪ್ರಭಾವದಿಂದಾಗಿ ಇಂದು ವ್ಯಕ್ತಿಗಳು ಪರಸ್ಪರ ತಮ್ಮನ್ನು ತಾವು ಇಂಟರ್‌ನೆಟ್, ಈ-ಮೇಲ್‌ಗಳ ಮೂಲಕವೇ ತಮ್ಮ ದಿನನಿತ್ಯದ

ಕೆಲಸಗಳನ್ನು ಮಾಡಿಕೊಳ್ಳುತ್ತಾ ತಮ್ಮ ದೈನಂದಿನ ಘಟನೆಗಳನ್ನು ಅಂತರ್ಜಾಲದ ಮೂಲಕ ಚರ್ಚಿಸುವ ಕುರಿತು ಕತೆಯಲ್ಲಿ ಚಿತ್ರಿಸಿದ್ದಾರೆ. ಮನುಷ್ಯರು ಇಂದು ಮಾನವೀಯತೆಯನ್ನು ಮರೆತು ತಮ್ಮ ತೀರಾ ವೈಯಕ್ತಿಕವಾದ ವಿಚಾರಗಳನ್ನು ಸಹ ಈ ಇಂಟರ್‌ನೆಟ್‌ನ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುವುದರ ಅಪಾಯವನ್ನು ಕತೆಯು ಹಿಡಿದಿಡುತ್ತದೆ.

ಮಗುವೊಂದು ಈಜುಕೊಳದಲ್ಲಿ ಒಂದ ಮಾಡಿಕೊಳ್ಳುವ ಘಟನೆಯನ್ನಿಟ್ಟುಕೊಂಡು ಶುರುವಾಗುವ ಈ ಚರ್ಚೆಯು ಒಂದು ಕುಟುಂಬದ ದುರಂತ್ಯ ಅಂತ್ಯವನ್ನು ಹೇಗೆ ಕಾಣಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಕ್ಷಮೆಯನ್ನು ನೇರವಾಗಿಯೇ ಕೇಳಬಹುದಾಗಿದ್ದಂತಹ ಸಂದರ್ಭಗಳು ನಮಗಿದ್ದರೂ ಸಹ ಅದನ್ನು ನಾಲ್ಕು ಜನರ ಮುಂದೆ ಪ್ರತಿಷ್ಠೆಯಂತೆ ಭಾವಿಸಿ ಇಂಟರ್‌ನೆಟ್ನ ಮೊರೆ ಹೋಗಿ ಅಲ್ಲಿ ಕ್ಷಮೆ ಕೇಳುವ ಪ್ರಸಂಗವು ಒಂದು ಕುಟುಂಬದ ಮಾನಸಿಕ ನೆಮ್ಮದಿಯನ್ನು ಹಾಳುಮಾಡುವ ಮೂಲಕ ಸುಜಾಳ ಗಂಡನಾದ ಶ್ರೀನಿವಾಸನ ಅಂತ್ಯವನ್ನು ಕಾಣುವ ಮಟ್ಟಕ್ಕೆ ಹೋಗುತ್ತದೆ. ಕತೆಯಲ್ಲಿ ಮುಖ್ಯವಾಗಿ ನಾವು ಕಾಣಬಹುದಾದ ಮುಖ್ಯ ಅಂಶವೆಂದರೆ ಇಂದಿನ ದಿನಗಳಲ್ಲಿ ತಂತ್ರಜ್ಞಾನದ ಬೆನ್ನುಹತ್ತಿ ಮನುಷ್ಯ ಸಂಬಂಧಗಳನ್ನು ಮರೆತು ಓಡುವ ಕುದುರೆಗಳಂತೆ ಪಯಣ ಮಾಡುತ್ತಿದ್ದೇವೆ. ಜನರ ಜೊತೆಗೆ ಬೆರೆಯದೇ ಏಕಾಂಗಿ ಭಾವವನ್ನು ಹೊಂದಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ಅಂತ್ಯವನ್ನು ನಾವೇ ಕಂಡುಕೊಳ್ಳುತ್ತಿದ್ದೇವೆ ಎಂಬುದನ್ನು ತಿಳಿಸುತ್ತದೆ.

ಸಾವಿನ ವಿಷಯವನ್ನು ತಿಳಿಸಿ ಸಹಾಯ ಮಾಡುವಂತೆ ಕೋರುವ ಸುಜಾಳ ಪರಿಸ್ಥಿತಿಯ ಅರಿವು ಆಕೃತಿ ಶರ್ಮಾಳಿಗೆ ಗೊತ್ತಿದ್ದರೂ ಅವಳ ಸಹಾಯಕ್ಕೆಂದು ಹೊರಟವಳು ಟೇಬಲ್ ಮೇಲಿದ್ದ ಕಂಪ್ಯೂಟರ್‌ನ್ನು ನೋಡಿ ಶ್ರೀನಿವಾಸನ್ ರೌಡಿಯಿಂದ ಸತ್ತ ವಿಷಯವನ್ನು ಯಾಹೂ ಐಡಿಯೊಳಗೆ ಲಾಗಿನ್ ಆಗಿ ಇಂಟರ್‌ನೆಟ್‌ನಲ್ಲಿ ಪ್ರಸ್ತಾಪಿಸಿ ಹೊರಡುತ್ತಾಳೆ. ಅದಕ್ಕೆ ಪ್ರತಿಕ್ರಿಯೆಯಾಗಿ ನಾಲ್ಕಾರು ಕಾಮೆಂಟ್‌ಗಳು ಬರುತ್ತವೆ ಎಂಬಲ್ಲಿ ಕತೆಯು ಮುಗಿಯುತ್ತದೆ. ಅಂದರೆ ಸಾವನ್ನು ಕೂಡ ನಾವು ಇಂದು ಗಂಭಿರವಾಗಿ ಪರಿಗಣಿಸುತ್ತಿಲ್ಲ ಎಂಬ ಸ್ಥಿತಿಯನ್ನು ಪ್ರಸ್ತುತ ಕತೆಯು ಜಾಗತೀಕರಣ ಪ್ರಭಾವವು ಇಂದು ಕುಟುಂಬದ ಹೊರತಾಗಿ ನೆರೆಹೊರೆಯವರೊಂದಿಗೆ ಇರಬೇಕಾದ ಸಹಜ ಗುಣಗಳನ್ನು ಕಳೆದುಕೊಳ್ಳುತ್ತಿರುವುದನ್ನು ಗುರುತಿಸುತ್ತದೆ.

ಎಚ್.ನಾಗವೇಣಿ ಅವರ 'ಮೀಯುವ ಆಟ' ಕತೆಯು ಕೂಡ ಇಂದು ಮನುಷ್ಯರನ್ನು ಮನುಷ್ಯರೇ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರುವ ನೆಲೆಯನ್ನು ಕತೆಯು ತಿಳಿಸುತ್ತದೆ.

ಆದರೆ ಇದೇ ಕಾಲಕ್ಕೆ ಮನುಷ್ಯ ಅಸಹಾಯಕನಾಗಿದ್ದು ಪ್ರಕೃತಿಯು ಕೂಡ ಅವನನ್ನು ಸಹಾಯ ಮಾಡಲಾಗದಂತೆ ತಡೆಯುತ್ತದೆ ಎನ್ನುವುದಕ್ಕೆ ಈ ಕತೆಯು ಉದಾಹರಣೆಯಾಗಿದೆ. ಇನ್ನೊಂದು ನೆಲೆಯಲ್ಲಿ ಕತೆಯ ಮುಖ್ಯ ಪಾತ್ರವಾದ ಖಾದ್ರಿಬ್ಯಾರಿಯು ತನ್ನ ಕೊನೆಯ ವಯಸ್ಸಿನಲ್ಲಿ 'ವಾತ' ರೋಗದಿಂದ ಬಳಲುತ್ತಿರುವವನು. ಇಡೀ ಕುಟುಂಬವನ್ನೆಲ್ಲಾ ಸಾಕಿ ಸಲಹಿ, ಇದ್ದ ಒಬ್ಬ ಮಗನಿಗೆ ತನ್ನ ವೃತ್ತಿಯನ್ನು ಹೇಳಿಕೊಟ್ಟು ಅವನಿಗೆ ಬದುಕನ್ನು ಕಲಿಸಿದನು. ಅವನಿಗೆ ನಫೀಸಮ್ಮ ಎನ್ನುವವಳೊಂದಿಗೆ ಮದುವೆ ಮಾಡಿದ ನಂತರ ಅವನಿಗೆ ತಂದೆ ಖಾದ್ರಿಬ್ಯಾರಿ ಮತ್ತು ತಾಯಿ ಮೈಮೂನಮ್ಮರ ಮೇಲೆ ಪ್ರೀತಿ ಕಡಿಮೆಯಾಗತೊಡಗಿತು. ಮೈಮೂನಮ್ಮ ಸತ್ತ ನಂತರ ಖಾದ್ರಿಬ್ಯಾರಿಯ ಜೀವನ ಅತ್ಯಂತ ಕಷ್ಟದಾಯಕವಾಯಿತು. ಅವನ ವಾತ ರೋಗದಿಂದ ಅವನಿಗೆ ಬಿಸಿನೀರನ್ನು ಕಾಯಿಸಿ ಕೊಡದೇ ಅವನನ್ನು ತುಂಬಾ ನಿಷ್ಠುರವಾಗಿ ನಡೆಸಿಕೊಳ್ಳುತ್ತಿದ್ದಳು.

ಕುಟುಂಬದಲ್ಲಿ ಖಾದ್ರಿಬ್ಯಾರಿಗೆ ಇಂತಹ ಸ್ಥಿತಿಯಾದರೆ; ಇನ್ನೂ ಸಮಾಜದಲ್ಲಿ ಅವನಿಗೆ ಸಿಗುತ್ತಿದ್ದ ಬೆಲೆ ಬೇರೆಯೇ ರೀತಿಯದಾಗಿತ್ತು. ಇಂತಹ ಸಂದರ್ಭದಲ್ಲಿ ಅವನಿಗೆ ವೆಂಕಪ್ಪಶೆಟ್ಟರು ಮಗಳು ಸುಮತಿಯ ಬಾಣಂತನಕ್ಕಾಗಿ ಬಿಸಿನೀರು ಕಾಯಿಸಲು ಊರಿನಲ್ಲೆಲ್ಲಾ ಆಳಿಗಾಗಿ ಹುಡುಕಾಟವನ್ನು ನಡೆಸುತ್ತಿರುತ್ತಾರೆ. ಆಗ ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರ ಮುಂದೆ ತಮ್ಮ ಅಳಲನ್ನು ತೋಡಿಕೊಂಡಾಗ "ಆ ಮಗು ಸುಮತಿ ಬೇರೆ ಅಲ್ಲ... ನಮ್ಮ ಮೊಮ್ಮಗಳು ಖೈರುನ್ನೀಸಾ ಬೇರೆ ಅಲ್ಲ..."[೯] ಎಂದು ಬಿಸಿನೀರನ್ನು ಕಾಯಿಸಿಕೊಡಲು ಒಪ್ಪಿಕೊಳ್ಳುತ್ತಾರೆ. ಇದಕ್ಕಾಗಿ ವೆಂಕಟಪ್ಪಶೆಟ್ಟರು ಖಾದ್ರಿಬ್ಯಾರಿಯವರ 'ವಾತ'ದ ಕಾಯಿಲೆಯನ್ನು ಅರಿತವರಾದ್ದರಿಂದ ಬಾಣಂತಿ ಮಿಂದಾದ ಮೇಲೆ ನೀವು ಬಿಸಿನೀರಲ್ಲಿ ಒಂದು ಗಡದ್ದ್ ಮಿಂದುಬಿಡಿ ಎಂದರು.

ಇಡೀ ಕತೆಯಲ್ಲಿ ಖಾದ್ರಿಬ್ಯಾರಿಯು ತನ್ನ ರೋಗದ ಹಿನ್ನೆಲೆಯಿಂದ ಮಾತ್ರವೇ ಅಷ್ಟೇ ಅಲ್ಲದೇ ವೆಂಕಪ್ಪಶೆಟ್ಟಿಯ ಮಗಳು ಸುಮತಿಯ ಬಾಣಂತನಕ್ಕೆ ಬಿಸಿನೀರು ಕಾಯಿಸುವ ಪ್ರಸಂಗವು ಕುಟುಂಬೇತರ ಸಂಬಂಧಗಳಲ್ಲಿ ಜಾತಿ, ಧರ್ಮವನ್ನು ಮೀರಿದ ಅನ್ಯೋನ್ಯತೆಗಳಿರುತ್ತವೆ ಎನ್ನುವುದನ್ನು ಸೂಚಿಸುತ್ತಿದೆ. ವೆಂಕಪ್ಪಶೆಟ್ಟಿಯ ಹೆಂಡತಿ ಉಮ್ಮಕ್ಕಶೆಡ್ತಿ ಖಾದ್ರಿಬ್ಯಾರಿಯನ್ನು ಚೆನ್ನಾಗಿ ಬಲ್ಲವಳು. ಪ್ರೀತಿ, ವಿಶ್ವಾಸವನ್ನು ಹೊಂದಿದವಳು. ಆದಾಗ್ಯೂ ಖಾದ್ರಿಬ್ಯಾರಿಯು ದಿನಂಪ್ರತಿ ಬಂದು ನೀರನ್ನು ಕಾಯಿಸುತ್ತಿದ್ದರು. ಆದರೆ ಇದೇ ಸಂದರ್ಭದಲ್ಲಿ ಮಳೆಗಾಲವಿದ್ದಿತು. ಉಮ್ಮಕ್ಕಶೆಡ್ತಿಯು "ನೀರು ಉಗುರುಬಿಸಿ ಆದ್ರೆ ಸಾಕು ಸ್ಯಾಬೆರೇ... ಇವತ್ತೇ ಎಲ್ಲ ಮರಮಟ್ಟನ್ನು ಆ ಒಲೆಗಂಟಲಿಗೆ ತುರುಕಿದರೆ ನಾಳೆ ಅದರ

ಬಾಯಿಗೆ ನಮ್ಮ ಕೈಕಾಲನ್ನು ತುರುಕಿಸುವುದಾ ಹೇಗೆ...?"[೨೦] ಎನ್ನುವ ಮಾತನ್ನು ನಾನಾ ರೀತಿಗಳಲ್ಲಿ ಹೇಳುತ್ತಿದ್ದಳು. ಅಲ್ಲದೇ ಖಾದ್ರಿಬ್ಯಾರಿಯವರು ಇದನ್ನೇ ಮುಂದುವರಿಸಿದಾಗ "ಅಲ್ಲಾ... ಸ್ಯಾಬೆರೇ, ನಿಮ್ಗೆ ಎಷ್ಟೂಂತ ಹೇಳುದು ಮಾರಾಯ್ರೇ! ಇದು ಮಗು-ಬಾಣಂತಿ ಮೀಯುವ ನೀರಾ ಅಥವಾ ಹೆಣ ಮೀಯಿಸುವ ನೀರಾ...? ಒಲೆಬಾಯಿಗೆ ಕಸಕಡ್ಡಿ ತಳ್ಳುವುದಕ್ಕೆ ನಿಮಗ್ಗೆ ಒಂದು ತಲೆಬುಡ ಯಾವ್ದೂ ಇಲ್ಲಾಂತ ಕಾಣಿಸುತ್ತೆ...?"[೨೧] ಎಂದಳು.

ಸುಮಾರು ನಲವತ್ತು ದಿನಗಳಿಂದ ಬಿಸಿನೀರು ಕಾಯಿಸಲು ಬರುತ್ತಿದ್ದ ಖಾದ್ರಿಬ್ಯಾರಿಯು ಉಮ್ಮಕ್ಕಶೆಡ್ತಿಯ ಇಂತಹ ಮಾತುಗಳನ್ನು ಕೇಳಿಸಿಕೊಂಡರೂ ಬೇಸರಗೊಳ್ಳದೇ ಸುಮತಿಗಾಗಿ ನೀರು ಕಾಯಿಸಲು ತನ್ನ ಮಗಳಂತೆ ಎಂದು ಭಾವಿಸಿ ಬರುತ್ತಿದ್ದರು. ಆದರೆ ಇಷ್ಟು ದಿನ ಶೆಡ್ತಿಯು ಮಾತಾಡುತ್ತಿದ್ದರೂ ಇಂದಿನ ಮಾತುಗಳು ಮಾತ್ರ ಖಾದ್ರಿಬ್ಯಾರಿಯನ್ನು ಮಾನಸಿಕವಾಗಿ ನೋವುಂಟು ಮಾಡಿದ್ದವು. ಖಾದ್ರಿಬ್ಯಾರಿಯು ಬಿಸಿನೀರಿಗಾಗಿ ಸುಮತಿಗೆ ನೀರನ್ನು ಕಾಯಿಸಿಕೊಡಲು ಬರುತ್ತಿರಲಿಲ್ಲ. ಅವನು ತನ್ನ ಮೊಮ್ಮಗಳಂತೆ ಸುಮತಿಯನ್ನು ಭಾವಿಸಿ ಅವಳನ್ನು ತನ್ನ ಮಗಳೆಂದು ತನ್ನ ಕುಟುಂಬದಂತೆಯೇ ಭಾವಿಸಿದ್ದನು. ಆದರೆ ಉಮ್ಮಕ್ಕಶೆಡ್ತಿಯ ಮಾತುಗಳಿಗೂ ಕೂಡಾ ಪ್ರಕೃತಿಯ ನೈಸರ್ಗಿಕ ಕಾರಣಗಳನ್ನು ಕತೆಯಲ್ಲಿ ವಿವರಿಸಲಾಗಿದೆ. ಮಳೆಗಾಲದಲ್ಲಿ ಕಟ್ಟಿಗೆಗಳು ಸಿಗುವುದು ದುರ್ಭರ. ಇಂತಹ ಸಂದರ್ಭದಲ್ಲಿ ನಡೆಯುವ ಪ್ರಸಂಗದಲ್ಲಿ ಕುಟುಂಬೇತರವಾದರೂ ಸುಮತಿಗಾಗಿ ಮಿಡಿಯುವ ಖಾದ್ರಿಬ್ಯಾರಿಯ ಅಂತರಂಗವನ್ನು ಕತೆಯಲ್ಲಿ ಸೂಚಿಸುತ್ತದೆ. ಅಲ್ಲದೇ ಧರ್ಮದ ಹಂಗಿಲ್ಲದೇ ಎಲ್ಲರನ್ನು ಒಳಗೊಳ್ಳಬಹುದಾದ ಖಾದ್ರಿಬ್ಯಾರಿಯು ಸತ್ತ ನಂತರ ಇಡೀ ಊರೇ ಜಾತಿ ಬೇಧ ಮರೆತು ಕಣ್ಣೀರು ಸುರಿಸಿದರು ಎನ್ನುವುದು ಕುಟುಂಬೇತರ ಸಂಬಂಧಗಳನ್ನು ಕುರಿತು ತಿಳಿಸುತ್ತಿದೆ.

ಖಾದ್ರಿಬ್ಯಾರಿಯ ಸತ್ತ ದೇಹವನ್ನು ತೊಳೆಯಲು ಬಿಸಿನೀರನ್ನು ಕಾಯಿಸಲು ಹೆಣಗಾಡುತ್ತಿದ್ದ ಮೊಮ್ಮಕ್ಕಳನ್ನು ಕಂಡ ವೆಂಕಪ್ಪಶೆಟ್ಟರು ಹಸಿಕಟ್ಟಿಗೆಯಿಂದ ಇದು ಸಾಧ್ಯವಿಲ್ಲ ಎಂಬುದನ್ನರಿತು ಮನೆಗೆ ಹೋಗಿ ಕಟ್ಟಿಗೆಯನ್ನು ತಂದು ತಾನೆ ನೀರನ್ನು ಕಾಯಿಸಲು ತೊಡಗಿದ. ಇವನ ಜೊತೆ ಊರೇ ಸಹಕರಿಸಲು ಮುಂದಾಯಿತು ಅಲ್ಲದೇ ಕೊನೆಗೆ ಬಂದ ಉಮ್ಮಕ್ಕ ತನ್ನ ಮಾತನ್ನು ನೆನೆಸಿಕೊಂಡು ಕಣ್ಣೀರನ್ನು ಸುರಿಸಿದಳು. ಸಂಬಂಧಗಳನ್ನು ಉಳಿಸಿಕೊಳ್ಳುವ ಸಂದರ್ಭಗಳನ್ನು ಪ್ರಕೃತಿಯ ಹಲವು ವೈರುಧ್ಯಗಳಿಂದ ಕಳೆದುಕೊಳ್ಳುವ ಇಲ್ಲವೇ ಅವರ ಬಗ್ಗೆ ತಾತ್ಸಾರವನ್ನು ಮೂಡಿಸುವ ನೆಲೆಯು ಕತೆಯಲ್ಲಿದೆ. ಹಲವು

ವೈರುಧ್ಯಗಳ ನಡುವೆಯೂ ಸಂಬಂಧಗಳನ್ನು ಉಳಿಸಿಕೊಳ್ಳುವುದಕ್ಕೆ ಪರದಾಡುವ ಖಾದ್ರಿಬ್ಯಾರಿಯ ಪಾತ್ರವೂ ಕತೆಯಲ್ಲಿ ಶಕ್ತವಾಗಿ ಮೂಡಿಬಂದಿದೆ. ಇದೇ ಸಂದರ್ಭದಲ್ಲಿ ಉಮ್ಮಕ್ಕನಿಗೆ ಖಾದ್ರಿಬ್ಯಾರಿಯ ಮೇಲೆ ಒಳ್ಳೆಯ ಅಭಿಪ್ರಾಯವಿದ್ದರೂ ಪ್ರಾಕೃತಿಕ ಸಮಸ್ಯೆ ಅವಳನ್ನು ಮಾತನಾಡುವಂತೆ ಮಾಡಿದ ನೆಲೆ ಕತೆಯಲ್ಲಿದೆ.

೪.೨ ಆರ್ಥಿಕ ನೆಲೆ

ಆರ್ಥಿಕತೆ ಎನ್ನುವುದು ಒಂದು ದೇಶದ ಅಥವಾ ರಾಷ್ಟ್ರದ ಪ್ರಗತಿಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಪ್ರಾಚೀನ ಕಾಲದಲ್ಲಿ ಅರ್ಥವ್ಯವಸ್ಥೆಯ ಪರಿಕಲ್ಪನೆಯು ಸೀಮಿತ ಅರ್ಥವ್ಯಾಪ್ತಿಗೆ ಒಳಪಟ್ಟಿತ್ತು. ಕಾಲಾನಂತರದಲ್ಲಿ ಬದಲಾದ ಮನುಷ್ಯನ ಬೇಡಿಕೆ, ಸಾಮರ್ಥ್ಯ, ಉತ್ಪಾದನೆಯ ಅಂಶಗಳು ಪ್ರಗತಿಯನ್ನು ಮುನ್ನೆಲೆಗೆ ತಂದುಕೊಂಡು ಆರ್ಥಿಕತೆಯನ್ನು ಪ್ರಧಾನ ವೇದಿಕೆಯನ್ನಾಗಿ ರೂಪಿಸಿಕೊಂಡಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇಶದ ಅರ್ಥ ವ್ಯವಸ್ಥೆಯು ಇಡೀ ದೇಶವನ್ನು ಮುನ್ನೆಡೆಸಲು ಬೇಕಾಗುವಂತಹ ಅತ್ಯಂತ ಅವಶ್ಯಕವಾದ ಅಂಶವಾಗಿದೆ. ಇಂತಹ ಅರ್ಥವ್ಯವಸ್ಥೆಯನ್ನು ಕಾಲದಿಂದ ಕಾಲಕ್ಕೆ ಬಂದಂತಹ ಪ್ರಭುತ್ವದ ನೀತಿಗಳು ಅನೇಕ ಬದಲಾವಣೆಗಳನ್ನು ತಂದಿದ್ದರ ಕಾರಣದಿಂದಾಗಿ ಸಮಾಜದ ಮೇಲೆ ಪರಿಣಾಮ ಬೀರಿ ಜನರ ಜೀವನದ ಮೇಲೆ ಅವು ವ್ಯತಿರಿಕ್ತವಾದ ಪ್ರಭಾವವನ್ನು ಬೀರಿವೆ.

ಆರ್ಥಿಕತೆಯು ಸಮಾಜ ವ್ಯವಸ್ಥೆಯ ಮೂಲತಳಹದಿಯಾಗಿ ರೂಪುಗೊಂಡಿದೆ. ಇಂತಹ ಆರ್ಥಿಕತೆಯು ಸಮಾಜದಲ್ಲಿ ಅನೇಕ ತರತಮಗಳನ್ನು, ಅಸಮಾನತೆಗಳನ್ನು ಸೃಷ್ಟಿಸಿದೆ. ಬಡವ–ಶ್ರೀಮಂತ, ಉಳ್ಳವರು–ಇಲ್ಲದವರು ಎಂಬಂತಹ ಅಂಶಗಳು ವರ್ಗ ಹಿನ್ನೆಲೆಯಲ್ಲಿ ಸಮಾಜದಲ್ಲಿ ಆಳವಾಗಿ ಬೇರೂರಿರುವುದನ್ನು ಗಮನಿಸಬೇಕಾಗುತ್ತದೆ. ಇದರ ಸ್ವರೂಪವನ್ನು ಅರ್ಥಶಾಸ್ತ್ರಜ್ಞರು ಅರ್ಥೈಸುವ ರೀತಿಯನ್ನು ಹೀಗೆ ಕಾಣಬಹುದು.

ಅರ್ಥಶಾಸ್ತ್ರದ ಪಿತಾಮಹನಾದ ಆಡಂ ಸ್ಮಿತ್ ಪ್ರಕಾರ "ಅರ್ಥಶಾಸ್ತ್ರವು ಸಂಪತ್ತನ್ನು ಅಭ್ಯಸಿಸುವ ಶಾಸ್ತ್ರವೆಂದು ವಿವರಿಸಿದನು. ಮಾನವನು ಸಂಪತ್ತನ್ನು ಹೇಗೆ ಉತ್ಪಾದಿಸುತ್ತಾನೆ. ಹೇಗೆ ಉಪಯೋಗಿಸುತ್ತಾನೆ. ಹೇಗೆ ವಿನಿಮಯ ಮಾಡುತ್ತಾನೆ ಮತ್ತು ಹೇಗೆ ಹಂಚುತ್ತಾನೆ ಎಂಬುದನ್ನು ಅರ್ಥಶಾಸ್ತ್ರವು ಅಭ್ಯಸಿಸುತ್ತದೆ ಎನ್ನುತ್ತಾನೆ."[೨೨]

ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞನಾದ ಮಾರ್ಶಲ್‌ನ ಪ್ರಕಾರ "ಅರ್ಥಶಾಸ್ತ್ರದಲ್ಲಿ ನಾವು ನಿಜವಾಗಿಯೂ ಅಭ್ಯಸಿಸುವುದು ಸಂಪತ್ತನ್ನಲ್ಲ ಆದರೆ ಮಾನವನನ್ನು. ಅರ್ಥಶಾಸ್ತ್ರದ

ಅಭ್ಯಾಸದಲ್ಲಿ ಸಂಪತ್ತು ಮುಖ್ಯವಾದರು ಅದು ಮಾನವನ ಯೋಗಕ್ಷೇಮಕ್ಕೆ ಅಥವಾ ಕಲ್ಯಾಣಕ್ಕೆ ಅಧೀನವಾಗಿರುವುದರಿಂದ ಮಾನವನ ಯೋಗಕ್ಷೇಮವೇ ಇಲ್ಲಿ ಮುಖ್ಯವಾಗಿದೆ. ಅರ್ಥಶಾಸ್ತ್ರವು ವ್ಯಕ್ತಿಯ ದೈನಂದಿನ ವ್ಯವಹಾರಿಕ ಜೀವನದ ಚಟುವಟಿಕೆಗಳನ್ನು ವಿವೇಚಿಸುತ್ತದೆ. ವ್ಯಕ್ತಿಯು ಸಂಪತ್ತನ್ನು ಹೇಗೆ ಗಳಿಸುತ್ತಾನೆ ಮತ್ತು ಅದನ್ನು ಹೇಗೆ ವ್ಯಯ ಮಾಡುತ್ತಾನೆ ಎಂಬುದನ್ನು ಅದು ಪರಿಶೀಲಿಸುತ್ತದೆ. ಈ ರೀತಿಯಾಗಿ ಅರ್ಥಶಾಸ್ತ್ರವು ಒಂದು ಕಡೆ ಸಂಪತ್ತನ್ನು ಅಭ್ಯಸಿಸುವ ಶಾಸ್ತ್ರವಾದರೆ ಇನ್ನೊಂದು ಕಡೆ ವ್ಯಕ್ತಿಯನ್ನು ಅಭ್ಯಸಿಸುವ ಶಾಸ್ತ್ರವಾಗಿದೆ”[೨೩] ಎಂದಿದ್ದಾರೆ.

ಅಂದರೆ ಈ ಅರ್ಥಶಾಸ್ತ್ರಜ್ಞರ ಪ್ರಕಾರ ಆರ್ಥಿಕತೆ ಅಥವಾ ಅರ್ಥವ್ಯವಸ್ಥೆ ಎನ್ನುವುದು ಸಂಪತ್ತಿನ ಮೇಲೆ ನಿಂತಿದೆ ಎನ್ನುವುದಂತೂ ಸ್ಪಷ್ಟವಾಗುತ್ತದೆ. ಇಂತಹ ಆರ್ಥಿಕತೆಯ ಮೇಲೆ ಹಲವು ಪ್ರಭಾವಗಳನ್ನು ಹಿಂದಿನಿಂದಲೂ ಕಾಣಲು ಸಾಧ್ಯ. ರಾಜಪ್ರಭುತ್ವದಲ್ಲಿ ರಾಜನೇ ಸರ್ವಾಧಿಕಾರಿಯಾಗಿದ್ದು ಅವನ ನಿಯಂತ್ರಣದಲ್ಲಿಯೇ ಆರ್ಥಿಕ ವ್ಯವಸ್ಥೆ ಇದ್ದಿತು. ಸಾಂಪ್ರದಾಯಿಕ ಮನೋಭಾವನೆಯನ್ನು, ಮನೋಭೂಮಿಕೆಯನ್ನು ಹೊಂದಿದ್ದ ಭಾರತದಂತಹ ರಾಷ್ಟ್ರವು ವಸಾಹತು ಆಳ್ವಿಕೆಗೆ ಒಳಪಡುವ ಮುನ್ನ ಊಳಿಗಮಾನ್ಯ ಪದ್ಧತಿಯ, ಪುರೋಹಿತಶಾಹಿಯ ಹಿಡಿತದಲ್ಲಿ ಸಿಲುಕಿದ್ದಿತು. ಬ್ರಿಟೀಷರು ಭಾರತವನ್ನು ವಸಾಹತುಶಾಹಿ ರಾಷ್ಟ್ರವನ್ನಾಗಿ ಮಾಡಿಕೊಂಡ ನಂತರದಲ್ಲಿ ಬಂಡವಾಳಶಾಹಿ ಉದ್ದಿಮೆಗಳು ಸ್ಥಾಪನೆಗೊಂಡವು. ಅಂದರೆ ಇಡೀ ದೇಶದ ಅರ್ಥವ್ಯವಸ್ಥೆಯನ್ನೇ ಪಲ್ಲಟಗೊಳಿಸಿದಂತಹ ಸಂದರ್ಭ ಅದು. ಮುಂದುವರೆಯುತ್ತಿರುವ ಭಾರತದಂತಹ ತೃತೀಯ ರಾಷ್ಟ್ರಗಳನ್ನು ಕೇವಲ ಕಚ್ಚಾವಸ್ತುಗಳ ಪೂರೈಕೆಗಾಗಿ ವಸಾಹತನ್ನಾಗಿ ರೂಪಿಸಿಕೊಂಡರು. ನಂತರ ಇಲ್ಲಿ ಆಧುನಿಕತೆಯ ಪರಿಚಯದಿಂದ ಅನೇಕ ಉದ್ಯಮಗಳನ್ನು ಪರಿಚಯಿಸುವುದರ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ತಂದಿದ್ದರ ಪರಿಣಾಮ ಭಾರತದ ಅರ್ಥವ್ಯವಸ್ಥೆಯೇ ಬದಲಾಗತೊಡಗಿತು.

ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಆರ್ಥಿಕತೆಯ ಮೇಲೆ ಸಮಾಜದ ಪ್ರತಿಯೊಂದು ಘಟಕಗಳೂ ಕಾರ್ಯವನ್ನು ನಿರ್ವಹಿಸುತ್ತಿವೆ. ಇದಕ್ಕೆ ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳೂ ಕೂಡಾ ಹೊರತಾಗಿಲ್ಲ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಇಂದಿನ ದಿನಗಳಲ್ಲಿ ಜಾಗತೀಕರಣದ ಅರ್ಥವ್ಯವಸ್ಥೆಯು ವ್ಯಕ್ತಿಯನ್ನು ಗೌಣವಾಗಿಸಿ, ಅವನ ಮೇಲೆ ನಿಂತಿರುವ ಸಂಪತ್ತನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡಿದೆ. ಅಲ್ಲದೇ ಸಂಪತ್ತಿಗೆ ಪ್ರಾಧಾನ್ಯತೆಯನ್ನು ನೀಡುವ ಮೂಲಕ ಮುಕ್ತ ಮಾರುಕಟ್ಟೆಯ

ಧೋರಣೆಯನ್ನು ಇಡೀ ಸಮಾಜವು ಒಪ್ಪಿಕೊಂಡಿದೆ ಎನ್ನುವ ಅಂಶಗಳನ್ನು ಕತೆಗಳ ಮೂಲಕ ಗ್ರಹಿಸಲು ಸಾಧ್ಯವಾಗುತ್ತಿದೆ. ಅಲ್ಲದೇ ಮನುಷ್ಯ ಸಂಬಂಧಗಳು, ಆರೋಗ್ಯ, ಶಿಕ್ಷಣ, ಕಲೆ, ಸಾಹಿತ್ಯ, ಸಂಸ್ಕೃತಿಯ ಮೇಲೂ ಆರ್ಥಿಕ ಅಂಶಗಳು ಪ್ರಭಾವವನ್ನು ಬೀರುತ್ತಿರುವುದನ್ನು ನೋಡಬಹುದಾಗಿದೆ. ಇಂದಿನ ಪ್ರಭುತ್ವ ವ್ಯವಸ್ಥೆಯು ಜಾಗತೀಕರಣವನ್ನು ತಂದ ಪರಿಣಾಮವಾಗಿ ಅರ್ಥಶಾಸ್ತ್ರಜ್ಞರಾದ ಬಾರ್ಬರಿಯವರು ಹೀಗೆ ವಿವರಿಸುತ್ತಾರೆ. "ಇಂದಿನ ಜಗತ್ತಿನ ಆರ್ಥಿಕ ಆಧಾರಸ್ತಂಭಗಳಾದ ವ್ಯಾಪಾರ, ಹಣಕಾಸು, ತಂತ್ರಜ್ಞಾನ, ವ್ಯಕ್ತಿ ಮತ್ತು ಸಮಾಜದ ಅನುಭೋಗ ಪ್ರವೃತ್ತಿ. ಈ ವಲಯಗಳಲ್ಲಿ ಬದಲಾವಣೆಯ ಮಹಾಪೂರವೇ ಹರಿದಿದೆ. ಪ್ರಪಂಚ ಕಳೆದೆರಡು ದಶಕಗಳಿಂದ ಈ ಪ್ರಕ್ರಿಯೆಯ ಪ್ರಭಾವದಿಂದ ಆರ್ಥಿಕ ಬದಲಾವಣೆಯ ಉನ್ಮಾದದಲ್ಲಿ ಸಿಲುಕಿದೆ"[೨೪] ಎನ್ನುತ್ತಾರೆ.

ಜಾಗತೀಕರಣದ ಹಿನ್ನೆಲೆಯಲ್ಲಿ ತಂದಂತಹ ಆರ್ಥಿಕ ಸುಧಾರಣೆಗಳು ಕೇವಲ ಅಭಿವೃದ್ಧಿಯ ಹೆಸರನ್ನೇಳಿಕೊಂಡು ಜನರನ್ನು ಅತಂತ್ರ ಸ್ಥಿತಿಗೆ ತಂದೊಡ್ಡಿವೆ ಎನ್ನುವುದನ್ನು ಮುರಾರಿ ಬಲ್ಲಾಳ ಅವರು ಹೀಗೆ ತಿಳಿಸಿದ್ದಾರೆ. "ತಂತ್ರಜ್ಞಾನದ ಆರಂಭದ ಹಂತದಲ್ಲೇ ಯಾವಾಗ ಅರ್ಥಶಾಸ್ತ್ರಕ್ಕೆ ಇರಬೇಕಾದ ಮನುಷ್ಯನ ಸಮಗ್ರಹಿತಕ್ಕೆ ಪೂರಕವಾದ ನೈತಿಕ ಅನುಶಾಸನ(normative aspect) ದ ಅಗತ್ಯವಿಲ್ಲವೆಂದು ತೀರ್ಮಾನವಾಯಿತೋ ಅಂದೇ ಅರ್ಥಶಾಸ್ತ್ರದ ದಾರಿ ನಿರ್ಣಾಯಕ ಬದುಕಿನ ಅವಶ್ಯಕತೆಯಿಂದ ತಣಿಯದ ಬಯಕೆ-ಭೋಗಗಳತ್ತ ಸರಿಯಿತು. ಅನೈತಿಕ ವ್ಯಾಪಾರ, ಲಾಭ, ಜಾಹೀರಾತು ಪ್ರಣೀತ ಮಾರುಕಟ್ಟೆ ಯುದ್ಧ, ನಿಸರ್ಗದ ಅಸಹ್ಯ ಲೂಟಿ, ಸುಖ-ಯೋಗದ ರಾವುಗಳೆಲ್ಲವೂ ನ್ಯಾಯಸಮ್ಮತವಾಗಿಬಿಟ್ಟಿತು. ಇವೆಲ್ಲದರ ವಿಕೃತ ಅಭಿವ್ಯಕ್ತಿಯೇ ಜಾಗತೀಕರಣ"[೨೫] ಎಂದಿದ್ದಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಜಾಗತೀಕರಣ ಸಂದರ್ಭದಲ್ಲಿನ ಕನ್ನಡ ಕತೆಗಳಲ್ಲಿ ಆರ್ಥಿಕತೆಯನ್ನು ಹೀಗೆ ಗ್ರಹಿಸಲಾಗಿದೆ.

೧. ಹೆಚ್ಚಿದ ಸಂಪತ್ತಿನ ಪ್ರಾಧ್ಯಾನ್ಯತೆ

ಬದಲಾದ ಆರ್ಥಿಕ ವಿದ್ಯಮಾನಗಳಿಂದ ಸಮಾಜದಲ್ಲಿ ಸಂಪತ್ತಿಗೆ ಹೆಚ್ಚಿನ ಪ್ರಾಧಾನ್ಯತೆಯು ಬಂದಿತು. ಸಂಪತ್ತು ಎಂದಾಗ ಇಲ್ಲಿ ಹಣ, ಆಸ್ತಿ, ವ್ಯಾಪಾರ, ವ್ಯವಹಾರ ಎಂಬ ಪರಿಕಲ್ಪನೆಗಳಿಂದ ಕತೆಗಳನ್ನು ಗ್ರಹಿಸಲಾಗಿದೆ. ಅಲ್ಲದೇ ಆರ್ಥಿಕ ಅಂಶಗಳು ಇಡೀ ಸಮಾಜದ ಜನಜೀವನದ ಜೀವನವಿಧಾನವನ್ನೇ ಬದಲಿಸುವ ಸ್ಥಿತ್ಯಂತರಗಳನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿಯೂ

ಗುರ್ತಿಸಿಕೊಳ್ಳಲು ಸಾಧ್ಯವಾಗುತ್ತದೆ. ವರ್ತಮಾನದ ಅರ್ಥವ್ಯವಸ್ಥೆಯು ಎಲ್ಲಾ ದಿನನಿತ್ಯದ ಸಂಬಂಧಗಳನ್ನು, ಭಾವನಾತ್ಮಕ ವಿಷಯಗಳನ್ನು ಆರ್ಥಿಕತೆಯ ಹಿನ್ನೆಲೆಯಲ್ಲಿ ವ್ಯವಹರಿಸುವುದನ್ನು ಕತೆಗಳು ವ್ಯಕ್ತಪಡಿಸಿವೆ. ಮನುಷ್ಯ ಸಂಬಂಧಗಳನ್ನು ಮರೆತು ಯಾಂತ್ರಿಕ ವಸ್ತುವಾಗಿ, ಯಂತ್ರವಾಗಿ ಬದುಕುತ್ತಿರುವ ಮಾನವನ ಇಡೀ ಬದುಕೇ ಪಲ್ಲಟಗೊಂಡಿರುವ ಸ್ಥಿತಿಯನ್ನು ಕತೆಗಳು ಹೀಗೆ ವ್ಯಕ್ತಪಡಿಸಿವೆ.

ಕುಟುಂಬದ ಒಳಗೆ ನಡೆಯುವ ಆಸ್ತಿಯ ಹಕ್ಕಿನ ವಿಚಾರದಲ್ಲಿ ಮಕ್ಕಳು ಹಾಗೂ ತಂದೆ ತಾಯಿಯ ನಡುವಿನ ಬಾಂಧವ್ಯವು ಕಡಿದುಹೋಗುತ್ತಿರುವುದನ್ನು ಎಂ.ಎಸ್.ವೇದಾ ಅವರ 'ಪಾಲು' ಕತೆಯ ಮೂಲಕ ಗ್ರಹಿಸಬಹುದಾಗಿದೆ. ಕತೆಯ ಮುಖ್ಯ ಪಾತ್ರವಾದ 'ತಾಯವ್ವ'ಳಿಗೆ ಇಬ್ಬರು ಮಕ್ಕಳು ಹಾಗೂ ಒಬ್ಬಳು ಮಗಳು. ಇಡೀ ಕತೆಯು ಆಸ್ತಿಯ ಹಕ್ಕಿಗಾಗಿ ಪಾಲನ್ನು ಕೇಳುವ ಮೂಲಕ ಒಬ್ಬರನ್ನೊಬ್ಬರು ಕಳೆದುಕೊಳ್ಳುವ ಸನ್ನಿವೇಶವನ್ನು ತಿಳಿಸುತ್ತದೆ. ಗಂಡ ಮಾರಪ್ಪ ಹಾಗೂ ತಾಯವ್ವರು ಕಷ್ಟಪಟ್ಟು ಮಕ್ಕಳನ್ನು ಸಾಕಿರುತ್ತಾರೆ. ಮೊದಲ ಮಗ ಶಿವಲಿಂಗನಿಗೆ ಮದುವೆ ಮಾಡಿದ ನಂತರದ ಅವನ ನಡವಳಿಕೆಯನ್ನು ಕುರಿತು ಎರಡನೇ ಮಗನಾದ ಸಿದ್ಲಿಂಗು(ವಕ್ಕಣ್ಣ)ನ ಮುಂದೆ ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ. ಆದರೆ ಸಿದ್ಲಿಂಗುವಿಗೆ ಚಂದವ್ವನೊಟ್ಟಿಗೆ ಮದುವೆ ಮಾಡಿದ ನಂತರ ಸೊಸೆಯು ಮಗನನ್ನು ತನ್ನಿಂದ ದೂರ ಮಾಡುತ್ತಿರುವಳು ಎಂಬ ಭಾವನೆ ತಾಯವ್ವನನ್ನು ಕಾಡುತ್ತದೆ.

ಈ ನಡುವೆ ತನ್ನ ದ್ವಂದ್ವ ಮನಸ್ಸಿನಿಂದ ತೊಳಲಾಡುತ್ತಿದ್ದ ಸಿದ್ಲಿಂಗುವನ್ನು ಚಂದಮ್ಮಳು ತನ್ನ ಗಂಡನನ್ನು ಪಾಲು ಕೇಳಿ, ಬರುವ ಪಾಲನ್ನು ಮಾರಿ ಬರುವ ಕಾಸಿನಲ್ಲಿ ಮೈಸೂರು ಪ್ಯಾಟೆಯ ಫುಟ್‌ಪಾತಿನಲ್ಲೊಂದು ತಳ್ಳೋ ಗಾಡಿಯ ನೈಟ್ ಹೋಟೆಲನ್ನು ಮಾಡಿ ಸುಖವಾಗಿ ಕಣ್ಣಿಗೆ ಕಂಡ ಸೀರೆ, ಪವುಡರು ಹಾಕಿ, ಸಿನಿಮಾದಲ್ಲಿ ನೋಡುವ ರೂಪುರೇಷೆಗಳನ್ನು ಹಾಕಿಕೊಳ್ಳಬಹುದು ಎಂಬ ಸಲಹೆಯನ್ನು ನೀಡಿದಳು.

ಆಸ್ತಿ ಪಾಲಿನ ವಿಚಾರದಲ್ಲಿ ನಡೆಯುವ ಇಂತಹ ಪ್ರಸಂಗವನ್ನು ಮುಖ್ಯವಾಗಿ ನೋಡುವುದಾದರೆ ಸಿದ್ಲಿಂಗು ಮತ್ತು ಶಿವಲಿಂಗ ಇಬ್ಬರೂ ಕೂಡಿಕೊಂಡು ಆಸ್ತಿ ಭಾಗ ಮಾಡಲೇಬೇಕೆಂದು ಹೇಳುತ್ತಾರೆ. ತಾಯವ್ವ ತನ್ನ ಮಗಳನ್ನು ಇದೇ ಸಮಯದಲ್ಲಿ ಮನೆಗೆ ಕರೆದುಕೊಂಡು ಬಂದು ಅವಳಿಗೂ ಸಹ ಆಸ್ತಿಯಲ್ಲಿ ಪಾಲನ್ನು ಕೊಡಬೇಕೆಂದು ತಿಳಿಸುತ್ತಾಳೆ. ಆದರೆ ಸಿದ್ಲಿಂಗು ಮತ್ತು ಶಿವಲಿಂಗ ಇಬ್ಬರೂ ಇದಕ್ಕೆ ಅನುಮತಿ ನೀಡದೇ ಪುರುಷವಾದಿ ಧೋರಣೆಯನ್ನು ತಾಳುತ್ತಾರೆ. ಅಲ್ಲದೇ ಮನೆಯನ್ನು ಪಾಲು ಮಾಡುವ

ವಿಚಾರಕ್ಕೆ ಒಪ್ಪಿದ ತಾಯವ್ವ ಮನೆ ಬಾಗಿಲಿನ ಪಾಲನ್ನು ಮಾಡಬೇಕಾದ ಸಂದರ್ಭ ಬಂದಾಗ ಇದಕ್ಕೆ ಒಪ್ಪದೇ ತನ್ನ ಅಸಹನೆಯನ್ನು ವ್ಯಕ್ತಪಡಿಸುತ್ತಾಳೆ. ಇಡೀ ಕುಟುಂಬವು ಸಂಪತ್ತಿನ ಆಸೆಗಾಗಿ ಎಲ್ಲರನ್ನು ಕಳೆದುಕೊಳ್ಳುತ್ತಿರುವುದರ ಜೊತೆಗೆ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಸಂಪತ್ತನ್ನು ತನ್ನ ವೈಯಕ್ತಿಕ ಆಸೆ, ಆಮಿಷಗಳಿಗೆ ಬಳಸಿಕೊಳ್ಳುವ ಮೂಲಕ ತಾನು, ತನ್ನ ಹೆಂಡತಿ ಎನ್ನುವ ಪರಿಕಲ್ಪನೆಯಲ್ಲಿಯೇ ಇಡೀ ಕುಟುಂಬವು ಛಿದ್ರವಾಗುತ್ತಿದೆ.

ತಲೆಬಾಗಿಲಿನ ವಿಚಾರದಲ್ಲಿ ತಾಯವ್ವ ತನ್ನ ನಿಲುವನ್ನು ಸಡಿಲಸದೇ ಇದ್ದಾಗ ಮಕ್ಕಳಿಬ್ಬರೂ ತಲೆಬಾಗಿಲಿಗೆ ದುಡ್ಡನ್ನು ಕೊಡುತ್ತೇವೆ ಎನ್ನುವ ಮಾತನ್ನು ಆಡುತ್ತಾರೆ. ಈ ಸಂದರ್ಭದಲ್ಲಿ ತಾಯವ್ವ ತನ್ನ ಇಡೀ ಬದುಕನ್ನು ಕಂಡ ಇಂತಹ ಬಾಗಿಲನ್ನು ಸಂಪತ್ತಿನ ಹಿನ್ನೆಲೆಯ ಅಳತೆಗೋಲನ್ನಾಗಿ ಮಾಡಿಕೊಂಡದ್ದು ಇಡೀ ವ್ಯವಸ್ಥೆಯನ್ನು ಆರ್ಥಿಕ ಅಂಶಗಳು ಮಾರಾಟಕ್ಕಿಡುತ್ತಿರುವುದನ್ನು ಸ್ಪಷ್ಟೀಕರಿಸುತ್ತಿದೆ. ಅಲ್ಲದೇ ತಾಯವ್ವ ಕೊನೆಗೆ "ಸಿವಾಸಿವಾ ಯಂಥಾ ಕಲಿಗಾಲ ಬಂದೋಯ್ತಪ್ಪಾ ಯೋಳ್ಮಲೆ ಮಾದೇಸ್ವರ. ತಾನು ಸಂಪಾದಿಸಿದ ಆಸ್ತಿಯ ಮ್ಯಾಲೆ ತನಗೆ ಅಕ್ಕಿಲ್ಲ."[೨೬] ಎನ್ನುವ ಮಾತುಗಳು ಇದಕ್ಕೆ ಪೂರಕ ಉದಾಹರಣೆಯಾಗಿದೆ. ಇಡೀ ವ್ಯವಸ್ಥೆಯು ನಿಂತಿರುವುದು ನಂಬಿಕೆಯ ಮೇಲೆ ಎನ್ನುವ ಮಾತುಗಳು ಸುಳ್ಳಾಗುತ್ತಿವೆ. ಇಂದಿನ ದಿನಗಳಲ್ಲಿ ಆರ್ಥಿಕವಾದ ಅಂಶಗಳು ಅನೇಕ ಪಲ್ಲಟಗಳಿಗೆ ಕಾರಣವಾಗಿ ಬದಲಾಗುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಇನ್ನು ಅಣ್ಣ-ತಮ್ಮಂದಿರ ನಡುವೆ ಇದ್ದಂತಹ ಬಾಂಧವ್ಯವು ಕಡಿದುಹೋಗಿ ಅವರ ನಡುವೆ ಆಸ್ತಿಗಾಗಿ ಕಲಹವು ನಡೆಯುವುದನ್ನು ಎಸ್.ಬಿ.ಜೋಗೂರ ಅವರ 'ಹೊತ್ತಿಗೊದಗದ ಮಾತು' ಕತೆಯ ಮೂಲಕ ನೋಡಬಹುದು. ಗ್ರಾಮೀಣ ಸಂದರ್ಭದ ಕತೆಯಾಗಿರುವ ಇಲ್ಲಿ ಅಣ್ಣ ತಮ್ಮಂದಿರ ನಡುವೆ ಮದುವೆಯಾದ ಬಳಿಕ ನಡೆಯುವ ಅನೇಕ ಪ್ರಸಂಗಗಳು ಹೇಗೆ ವ್ಯವಸ್ಥಿತವಾಗಿ ದ್ರೋಹವನ್ನು ಮಾಡಲು ಮನಸ್ಸು ಹಿಂಜರಿಯುವುದಿಲ್ಲ ಎನ್ನುವುದನ್ನು ತಿಳಿಸುತ್ತದೆ. ಇಡೀ ವ್ಯವಸ್ಥೆಯೇ ಆರ್ಥಿಕ ನೆಲೆಗಟ್ಟಿನ ಮೇಲೆ ನಿಂತಿರುವಾಗ ಕುಟುಂಬದಲ್ಲಿ ನಡೆಯುವ ಕ್ಷುಲ್ಲಕ ಕಲಹ, ಗಲಾಟೆಗಳಿಂದ, ಹಗೆಗಳಿಂದ ಆಸ್ತಿಯನ್ನು ಕಬಳಿಸುವ ಮೂಲಕ ಕುತಂತ್ರವನ್ನು ಸಮಾಜದಲ್ಲಿ ಮೆರೆಯಲಾಗುತ್ತಿದೆ ಎನ್ನುವುದನ್ನು ಗಮನಿಸಲು ಸಾಧ್ಯ. ಆರ್ಥಿಕ ಕಾರಣಗಳಿಗಾಗಿಯೇ ಎಷ್ಟೋ ಯುದ್ಧ, ಕದನಗಳು ಜಗತ್ತಿನಲ್ಲಿ ನಡೆದಿರುವುದನ್ನು ಮುಖ್ಯವಾಗಿ ಗಮನಿಸಬೇಕಾದ ಸಂಗತಿ. ಇಂತಹ ಸನ್ನಿವೇಶದಿಂದ

ಹೊರಗೆ ಬರಲು ಸಾಧ್ಯವಾಗದೇ ಇರುವಂತಹ ಪರಿಸ್ಥಿತಿಯನ್ನು ಆರ್ಥಿಕ ಮಾರುಕಟ್ಟೆಯ ವ್ಯವಸ್ಥೆಗಳು ಜಾಗತೀಕರಣದ ಮೂಲಕ ಸಮಾಜದಲ್ಲಿ ತಂದೊಡ್ಡಿವೆ. ಇವೆಲ್ಲದರ ಪರಿಣಾಮ ಸಮಾಜದಲ್ಲಿ ಇಂದು ಇಂತಹ ಕುಟುಂಬಗಳಲ್ಲಿ ಆಸ್ತಿ ಕಲಹ, ಕೊಲೆ, ಮೋಸ ಮುಂತಾದವುಗಳನ್ನು ಕಾಣುತ್ತಿದ್ದೇವೆ.

ವಿದ್ಯೆಯು ನಮಗೆ ಜ್ಞಾನವನ್ನು, ನೈತಿಕ ಪ್ರಜ್ಞೆಯನ್ನು ನೀಡುವುದಲ್ಲದೇ ಸಮಾಜದಲ್ಲಿನ ಸರಿ, ತಪ್ಪುಗಳನ್ನು ತಿದ್ದುವ ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಕತೆಯ ಮುಖ್ಯ ಪಾತ್ರವಾದ ಚಂದ್ರಕಾಂತ ತನ್ನ ಅಣ್ಣ ಯಮನಪ್ಪನಿಗೆ ಮಾಡುವ ಮೋಸವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇವರ ತಂದೆ ಮೆಕಾಲಜಿ ತೀರಿದ ಬಳಿಕ ಆಸ್ತಿಯನ್ನು ಯಮನಪ್ಪನೇ ನೋಡಿಕೊಳ್ಳುತ್ತಿದ್ದ. ಇಲ್ಲಿ ಎರಡು ಕಾರಣಗಳಿಂದಾಗಿ ಯಮನಪ್ಪನನ್ನು ಚಂದ್ರಕಾಂತ ಮತ್ತು ಅವನ ಹೆಂಡತಿ ಶಂಕ್ರಮ್ಮ ಮೋಸಗೊಳಿಸಿ ಆಸ್ತಿಯನ್ನು ಪಡೆಯುತ್ತಾರೆ. ಚಂದ್ರಕಾಂತ ಮತ್ತು ಶಂಕ್ರಮ್ಮನಿಗೆ ಮಕ್ಕಳಾಗಲಿಲ್ಲ ಆದರೆ ಯಮನಪ್ಪನಿಗೆ ಎರಡು ಮಕ್ಕಳಾದವು ಎನ್ನುವುದು ಒಂದು ಕಾರಣವಾದರೆ; ಶಂಕ್ರಮ್ಮ ಗಂಡನ ಅಣ್ಣನಾದ ಯಮನಪ್ಪ ವ್ಯವಸಾಯದಲ್ಲಿ ಉದ್ಧಾರವಾಗುತ್ತಿರುವುದನ್ನು ಮತ್ತು ಮಕ್ಕಳಾದ್ದರಿಂದ ಅವರನ್ನು ಶಿಕ್ಷಣಕ್ಕೆ ಸೇರಿಸಬೇಕೆಂದು ಚಂದ್ರಕಾಂತನಲ್ಲಿ ಯಮನಪ್ಪ ಬಂದದ್ದು ಅವನ ಮೇಲೆ ದ್ವೇಷವನ್ನು ಸಾಧಿಸಲು ಎರಡನೇ ಕಾರಣವಾಗಿದೆ. ಈ ಎರಡೂ ನೆಲೆಗಳು ಅಣ್ಣನ ಆಸ್ತಿಯನ್ನು ನುಂಗಿಹಾಕಲು ಪ್ರಮುಖ ಕಾರಣವಾಗಿ ಕತೆಯಲ್ಲಿ ಕಂಡುಬರುತ್ತದೆ.

ಮನುಷ್ಯನ ಆಲೋಚನೆಗಳು ಎಂತಹ ವಿಕೃತಿಯನ್ನು ಆಳದಲ್ಲಿ ಒಳಗೊಂಡಿರುತ್ತದೆ ಎನ್ನುವುದಕ್ಕೆ ಚಂದ್ರಕಾಂತನ ಈ ಮಾತುಗಳೇ ಸಾಕ್ಷಿಯಾಗಿವೆ. "ಆ ಹುಡುಗರು ಕಲತು ನಾಳೆ ದೊಡ್ಡೂ ಆಗಿ ಕಲತು ತಮ್ಮಪ್ಪನೇ ಎಲ್ಲಾ ಕೆಲಸಾ ಮಾಡೂದು ಅಂತ ಅವರಪ್ಪಗ ಏನ್ನೆನರೇ ತಿಳುವಳಿಕಿ ನೀಡಿ ತನ್ನ ಮರ್ಯಾದೆ ಕಾಸಿನ ಕಿಮ್ಮತ್ತಿಗೂ ಉಳಿದಂಗ ಮಾಡದರ...? ಅನ್ನೋ ಲೆಕ್ಕಾಚಾರದೊಳಗ ಕೆಟ್ಟಬುದ್ಧಿ ಹೊಕ್ಕೊಂಡಿತ್ತು."[೨೭] ಯಮನಪ್ಪಗೆ ತನ್ನ ಮಕ್ಕಳಿಗೆ ಉದ್ಯೋಗ ಕೊಡಿಸೋದಾಗಿ ಹೇಳಿ ಬಿಳಿ ಹಾಳಿ ಮೇಲೆ ಚಂದ್ರಕಾಂತ ಸಹಿ ಮಾಡಿಸಿಕೊಂಡನು. ಯಮನಪ್ಪನಿಗೆ ತಾನು ಮೋಸ ಹೋಗಿರುವ ಸಂಗತಿಯು ಪೋಲಿಸರು ಬಂದು ಜಾಗ ಖಾಲಿ ಮಾಡ್ರಿ ಅಂದಾಗ ತಿಳಿಯಿತು. ಇಂತಹ ಇನ್ನೊಂದು ಪ್ರಸಂಗದಲ್ಲಿ ಯಮನಪ್ಪ ಮತ್ತೆ ಮೋಸ ಹೋಗುವ ಪ್ರಸಂಗವನ್ನು ಕತೆಯಲ್ಲಿ ನಿರೂಪಿಸಲಾಗಿದೆ.

ಇನ್ನೂ ಆಸ್ತಿಯನ್ನು ಕಳೆದುಕೊಂಡ ಯಮನಪ್ಪ ತನ್ನ ಹೆಂಡತಿಯ ತವರುಮನೆ ಬಾಗೇವಾಡಿಯಲ್ಲಿ ಅಣ್ಣ ರಾಚಪ್ಪನಲ್ಲಿಗೆ ಹೋಗಿ 'ಬಸವೇಶ್ವರ ಖಾನಾವಳಿ'ಯನ್ನು

ಇಟ್ಟುಕೊಂಡರು. ಇಡೀ ವ್ಯವಸ್ಥೆಯಲ್ಲಿ ಕುಟುಂಬ, ವ್ಯಕ್ತಿ, ಸಹೋದರ, ಸ್ನೇಹಿತ ಮುಂತಾ ಸಂಬಂಧಗಳೆಲ್ಲವೂ ಕೂಡಾ ಸಂಪತ್ತಿನ ಹಿನ್ನೆಲೆಯಲ್ಲಿ ನೋಡಿದಾಗ ಆಗುತ್ತಿರುವ ಪಲ್ಲಟಗಳನ್ನು ಈ ಮೂಲಕ ವ್ಯಕ್ತಪಡಿಸಲಾಗಿದೆ. ಸ್ವಂತ ತಮ್ಮನಿಂದ ಮೋಸ ಹೋಗಿ ಹೆಂಡತಿಯ ಅಣ್ಣನ ಹತ್ತಿರ ಬಂದು ಇಲ್ಲಿ ವ್ಯಾಪಾರಕ್ಕೆ ನಿಂತಾಗಲೂ ರಾಚಪ್ಪನ ಹೆಂಡತಿ ಕುಸುಮವ್ವನಿಗೆ ತಡೆಯಲಾಗಲಿಲ್ಲ.

"ಅವತ್ತೊಂದಿನ ಊಟಕ್ಕ ಬಡಸೋ ಮುಂದ 'ಖಾನಾವಳಿ ಯಾಪಾರ ಜೋರ್ ಐತಿ ಅಂತೀರಿ. ಲಾಭದೊಳಗ ನೀವೂ ಪಾಲು ಕೇಳ್ರಲ್ಲ' ಅಂತ ಗಂಡನ ಬೆನ್ನಿಗೆ ಬಿದ್ದಳು. ಅಂವಾ 'ಅಲ್ವೆ ಪಾಪ ದುಡಿಯೂದೆಲ್ಲ ಅವರು, ನಾ ಪಾಲ ಕೇಳಿದರ....? 'ಹೌದು ನೀವು ಬಂಡವಾಳ ಹಾಕಿ ಕೊಟ್ಟೀಲ್ಲನೂ...' 'ಅದನ್ನ ಬ್ಯಾಂಕಿಗೆ ಕಟ್ಟಾಕತ್ತಾರ."[೨೮] ಎನ್ನುವ ಅವಳ ಮಾತುಗಳು ನಿಜಕ್ಕೂ ಅರ್ಥವ್ಯವಸ್ಥೆಯು ಮನುಷ್ಯನ ಗುಣಸ್ವಭಾವಗಳನ್ನು ಪಲ್ಲಟಿಸಿರುವ ಬಗೆಯನ್ನು ಕತೆಯು ನಿರೂಪಿಸುತ್ತದೆ. ಇಡೀ ವ್ಯವಸ್ಥೆಯು ಸಂಪತ್ತನ್ನು ಗ್ರಹಿಸುತ್ತಿರುವ ರೀತಿಯನ್ನು ಪ್ರಸ್ತುತ ಆರ್ಥಿಕ ನೀತಿಗಳಿಂದ ರೂಪಿಸಿಕೊಂಡಂತಿದೆ. ಅಲ್ಲದೇ ಮನುಷ್ಯ ಸಂಬಂಧಗಳಿಗೆ ಬೆಲೆಯಿಲ್ಲದೇ ಕೇವಲ ಆರ್ಥಿಕ ವಿಷಯಗಳೇ ಇಲ್ಲಿ ಮುಖ್ಯವಾಗಿವೆ ಎನ್ನುವುದನ್ನು ಕತೆಯ ಮೂಲಕ ನಿರೂಪಿಸಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

೨. ಬಂಡವಾಳಶಾಹಿಗಳ ಪಾತ್ರ

ಸರ್ಕಾರಗಳು ಜಾಗತೀಕರಣದ ಪರಿಣಾಮವಾಗಿ ತಂದಂತಹ ಅನೇಕ ನೀತಿಗಳು ಇಡೀ ವ್ಯವಸ್ಥೆಯನ್ನು ಮಾರುಕಟ್ಟೆಯ ಸರಕನ್ನಾಗಿ ರೂಪಿಸುತ್ತಿವೆ. ಇದರಲ್ಲಿ ಬಂಡವಾಳಶಾಹಿಗಳು ಕೈಗಾರಿಕೆಗಳಲ್ಲಿ ಮಾತ್ರ ಅಲ್ಲದೇ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಹಸ್ತವನ್ನು ಚಾಚುತ್ತಿದ್ದಾರೆ. ಇದರ ಪರಿಣಾಮವನ್ನು ನಾವು ಕೃಷಿ, ಶಿಕ್ಷಣ, ಸಾಹಿತ್ಯ, ಸಂಗೀತ ಮುಂತಾದ ಕ್ಷೇತ್ರಗಳಲ್ಲೂ ನಾವು ಬಂಡವಾಳಶಾಹಿಗಳ ಪಾತ್ರವನ್ನು ಕಾಣಲು ಸಾಧ್ಯವಾಗುತ್ತಿದೆ. ಬಂಡವಾಳಶಾಹಿಗಳು ಹಣಕ್ಕೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡುವುದರ ಹಿನ್ನೆಲೆಯಲ್ಲಿ ಸಮಾಜದಲ್ಲಿ ಅಸಮಾನತೆ ತಾರತಮ್ಯ ನೀತಿ, ಮೇಲು-ಕೀಲು ಎಂದು ಸೃಷ್ಟಿಸುತ್ತಿರುವ ಹಿನ್ನೆಲೆಯನ್ನು ಗಮನಿಸಬಹುದಾಗಿದೆ. ಬಂಡವಾಳಶಾಹಿಗಳು ಅಭಿವೃದ್ಧಿ, ಪ್ರಗತಿಯ ಹೆಸರಿನಲ್ಲಿ ಜನರನ್ನು ವಂಚಿಸುವ, ಅವರನ್ನು ಮಾನಸಿಕವಾಗಿ ದೈಹಿಕವಾಗಿ ಶೋಷಣೆಗೊಳಪಡಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಅಲ್ಲದೇ ಖಾಸಗೀಕರಣದ ನೀತಿಯು ಇಂದು ಹೆಚ್ಚಾಗುತ್ತಿದ್ದು ಶ್ರಮವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿವೆ. ಆದರೆ ಅದಕ್ಕೆ ತಕ್ಕ

ಪ್ರತಿಫಲಗಳನ್ನು ನೀಡಲಾಗುತ್ತಿಲ್ಲ. ಉತ್ಪಾದನೆಗಳನ್ನು ಹೆಚ್ಚು ಮಾಡುವುದರ ಜೊತೆಗೆ ಅದನ್ನು ಜನರು ಹೆಚ್ಚಾಗಿ ಕೊಳ್ಳುವಂತೆ ಮಾಡುವ ಹುನ್ನಾರವು ಇದರ ಹಿಂದೆ ಅಡಗಿದೆ.

ಬಹುರಾಷ್ಟ್ರೀಯ ಕಂಪೆನಿಗಳನ್ನು ಸ್ಥಾಪಿಸುವುದರ ಹಿಂದಿನ ಉದ್ದೇಶವನ್ನು ಇಂದಿನ ದಿನಮಾನಗಳನ್ನು ಗಮನಿಸಿದರೆ ಸ್ಪಷ್ಟವಾಗಿ ನಮಗೆ ಅರ್ಥವಾಗುತ್ತಿರುವುದು ಇದರ ಹಿಂದಿರುವ ಆರ್ಥಿಕ ಅಂಶಗಳೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಮೇಲ್ಮಾತಿಗೆ ಇಲ್ಲಿ ಅಭಿವೃದ್ಧಿ, ಪ್ರಗತಿ ಎಂದೆಲ್ಲಾ ಹೇಳಿಕೊಂಡರೂ ಆಂತರ್ಯದಲ್ಲಿ ಇದು ಮಾಡುತ್ತಿರುವ ಪರಿಣಾಮಗಳನ್ನು ಎದುರಿಸುತ್ತಿರುವುದು ಸಮಾಜದಲ್ಲಿರುವ ಮಧ್ಯಮ ಇಲ್ಲವೇ ತಳವರ್ಗದವರಾಗಿರುತ್ತಾರೆ.

ಮಹಾಂತೇಶ ನವಲಕಲ್ ಅವರ 'ಭಾರತ ಭಾಗ್ಯವಿಧಾತ' ಕತೆಯಲ್ಲಿನ ಬಹುರಾಷ್ಟ್ರೀಯ ಕಂಪೆನಿಗಳು ರೈತಾಪಿ ವರ್ಗದ ಮೇಲೆ ಮಾಡುತ್ತಿರುವ ಇಂತಹ ನೀತಿಗಳನ್ನು ಕುರಿತು ತಿಳಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ಇಡೀ ಸಮಾಜದ ಅಭಿವೃದ್ಧಿಯನ್ನು ಮಾಡುತ್ತೇವೆಂದು ಘೋಷಣೆಗಳನ್ನು, ಜಾಹೀರಾತುಗಳನ್ನು ಹಾಕಿಕೊಂಡು ಜನರನ್ನು ವಂಚಿಸಿ, ರೈತರನ್ನು ಸಾಲದ ಬಾಧೆಗೆ ಸಿಲುಕುವಂತೆ ಮಾಡಿ ಅವರ ಆತ್ಮಹತ್ಯೆಗೆ ಕಾರಣವಾಗುತ್ತಿವೆ. ಇಂದು ಬಹುರಾಷ್ಟ್ರೀಯ ಕಂಪೆನಿಗಳು ಮಾಡುತ್ತಿರುವ ಅನೇಕ ಕೀಟನಾಶಕಗಳು ರೈತರ ಬದುಕನ್ನು ಬೆಂಕಿಗೆ ತಳ್ಳಲ್ಪಡುತ್ತಿವೆ. ಕತೆಯ ಮುಖ್ಯ ಪಾತ್ರವಾದ 'ರಮೇಶ'ನ ತಂದೆ ತಾಯಿಯು ಇಂತಹ ಮಾರುಕಟ್ಟೆಯ ಬಹುರಾಷ್ಟ್ರೀಯ ಕಂಪೆನಿಗಳ ಹುನ್ನಾರದಿಂದ ಆತ್ಮಹತ್ಯೆಯನ್ನು ಮಾಡಿಕೊಂಡವರು. ಹತ್ತಿ ಬೆಳೆಯನ್ನು ಬೆಳೆಯುವ ರಮೇಶನ ತಂದೆ ವೀರಭದ್ರಪ್ಪನವರು ಭತ್ತದ ಔಷಧಿಯನ್ನು ಸಹ ಜೊತೆಯಲ್ಲಿ ಮನೆಗೆ ತಂದಿದ್ದರು. ಏಕೆಂದರೆ ಈ ಬಹುರಾಷ್ಟ್ರೀಯ ಕಂಪೆನಿಗಳು ರೈತರಿಗೆ ಹತ್ತಿಯ ಕೀಟನಾಶಕವನ್ನು ಕೊಳ್ಳಬೇಕಾದರೆ; ಜೊತೆಗೆ ಭತ್ತದ ಔಷಧಿಯನ್ನು ಕೊಂಡುಕೊಳ್ಳಬೇಕು ಎಂಬ ನಿಯಮಗಳನ್ನು ರೈತರ ಮೇಲೆ ಹೇರತೊಡಗಿವೆ. ಇದರ ಪರಿಣಾಮವಾಗಿ ರೈತ ಇಂದು ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ ಎನ್ನುವುದನ್ನು ಕತೆಯ ಮೂಲಕ ಚಿತ್ರಿಸಲಾಗಿದೆ.

ಈ ಕಂಪೆನಿಗಳು ತಮ್ಮ ಪ್ರಚಾರವನ್ನು ಹೇಗೆ ಮಾಡಿಕೊಳ್ಳುತ್ತವೆ ಎಂದರೆ 'ಶ್ರೀ ತಿರುಪತಿ ತಿರುಮಲ ಟ್ರೇಡಿಂಗ್ ಕಂಪೆನಿ' ಎಂಬ ಹೆಸರಿನ ಮೂಲಕ ಜನರಲ್ಲಿರುವ ನಂಬಿಕೆಯನ್ನು ತಿಳಿದುಕೊಂಡು ಅದನ್ನು ತಮ್ಮ ಕಂಪೆನಿಗಳ ಹೆಸರನ್ನಾಗಿ ಮಾಡಿಕೊಳ್ಳುವ ಮುಖವನ್ನು ಚಿತ್ರಿಸಲಾಗಿದೆ. ಕಂಪೆನಿಯಲ್ಲಿ ದೊಡ್ಡದಾದ ಕೀಟದ ಚಿತ್ರದ ಜೊತೆಗೆ

ಸೈಪರ್‌ಮೈಡ್ರಿನ್ ಸಿಂಪಡಿಸಿ, ಹಿಲಿಯೋಥಿಸ್ ನಾಶಪಡಿಸಿ ಎಂದು ಕೆಳಗೆ ಬರೆಸಿಡಲಾಗಿತ್ತು. ರಾಮಚಂದ್ರಪ್ಪನ ಬಳಿ ರಮೇಶ ಮಾತನಾಡುತ್ತಾ ತನ್ನ ತಂದಗೆ ಹತ್ತಿ ಬೆಳೆಯುವವರಿಗೆ ಭತ್ತದ ಕೀಟನಾಶಕ ಕೊಟ್ಟಿದ್ದೀರಿ ಇದು ಮೋಸವಲ್ಲವೇ ಎಂದು ಪ್ರಶ್ನಿಸುತ್ತಾನೆ. ಇದಕ್ಕೆ ರಾಮಚಂದ್ರಪ್ಪ "ಒಂದು ಕಂಪೆನಿಯಲ್ಲಿ ಕೆಲಸ ಮಾಡ್ತಿದಿ. ನಾವು ಹತ್ತು ಕಂಪೆನಿಗಳ ಜೊತೆ ಒಪ್ಪಂದ ಮಾಡಿಕೊಂಡಿರ್ತಿವಿ. ಎಲ್ಲವೂ ನಿನಗೆ ತಿಳಿದದ್ದೆ ಇದೆ ಎಂದ."[೨೯] ಮುಂದುವರೆದು "ನಾವು ಮಾರುವ ಗುರಿಗೆ ಅನುಗುಣವಾಗಿ ಕಂಪೆನಿಗಳು ವರ್ಷ ವರ್ಷವೂ ಸರಪಳಿ ಟಾರ್ಗೆಟ್ ಕೊಡ್ತಾವ. ಅಂದರೆ ನಮಗೆ ಬೇಕಾಗಿರುವ ಹತ್ತಿಯ ಕೀಟನಾಶಕ ಮಾರಬೇಕಾದರೆ ಭತ್ತದ ಕೀಟನಾಶಕ ಕೊಳ್ಳಬೇಕು. ಭತ್ತದ ಕೀಟನಾಶಕ ಮಾರಲು ಇದು ಭತ್ತದ ಏರಿಯಾ ಅಲ್ಲ. ಆದರೂ ಒಂದು ತಗೊಂಡ್ರ ಇನ್ನೊಂದು ತೆಗೆದುಕೊಳ್ಳಬೇಕು. ಅದಕ್ಕಾಗಿಯೇ ಈ ತೊಗರಿ ಹತ್ತಿ ಬೆಳೆಯುವ ಏರಿಯಾದಲ್ಲೂ ನಾವು ಭತ್ತದ ಕೀಟನಾಶಕ ಮಾರುವುದು. ನಮಗೆ ಕಂಪೆನಿಗಳು ವಿಧಿಸುವ ಅನ್ವಯವನ್ನು ನಾವು ರೈತರಿಗೂ ಹಾಕುತ್ತೇವೆ"[೩೦] ಎಂದರು.

ರಮೇಶ ರೈತರ ಪರವಾಗಿ ಮಾತನಾಡುತ್ತಾ ಇದು ರೈತರಿಗೆ ಅನ್ಯಾಯ ಮಾಡಿದ ಹಾಗೆ ಸರ್ ಎಂದು ರೈತಪರವಾಗಿ ಮಾತನಾಡುತ್ತಾನೆ. ಇದಕ್ಕೆ ಶ್ರೀನಿವಾಸ "ಯೂಸ್‌ಲೆಸ್‌ಫೆಲೋ ಯು ಆರ್ ಈಟಿಂಗ್ ಕಂಪೆನಿ ಮನಿ, ಡೋಂಟ್ ಥಿಂಕ್ ಅಬೌಂಟ್ ಫಾರ್ಮರ್. ಯು ಥಿಂಕ್ ಓನ್ಲಿ ಸೇಲ್ಸ್ ಅಂಡ್ ಕಂಪೆನಿ"[೩೧] ಎಂದು ಗದರುತ್ತಾನೆ. ಅಲ್ಲದೇ ರಮೇಶ ರಾಜೀನಾಮೆಯನ್ನು ನೀಡಿದಾಗ ಅವನನ್ನು ಸಂತೈಸಲು ಅವನಿಗೆ 'ಮೌಲ್ಡಿನ್ ಇನ್ ಆರ್ಗ್ಯಾನಿಕ್ ಡಿವಿಜನ್ನಿ'ನ ಗೊಬ್ಬರ ವಿಭಾಗಕ್ಕೆ ವರ್ಗಾವಣೆ ಮಾಡುತ್ತಾರೆ. ಅಲ್ಲಿಯೂ ಇದೇ ರೀತಿಯಲ್ಲಿ ಕಂಪೆನಿಯು ರೈತರಿಗೆ ಬಂಡವಾಳಶಾಹಿಗಳು ಅನ್ಯಾಯ ಎಸಗುತ್ತಿರುವುದನ್ನು ರಮೇಶ ಕಾಣುತ್ತಾನೆ. ಅಂದರೆ ಕಂಪೆನಿಗಳು ಆರ್ಥಿಕ ಹುನ್ನಾರಕ್ಕಾಗಿ ಮಾಡುವ ಕೌರ್ಯವನ್ನು ಕತೆಯಲ್ಲಿ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

ಇನ್ನೂ ಸಿನಿಮಾ ಕ್ಷೇತ್ರದಲ್ಲಿ ಬಂಡವಾಳವನ್ನು ಹೂಡುವ ಬಂಡವಾಳಶಾಹಿಗಳು ಆರ್ಥಿಕ ಕಾರಣಗಳಿಗಾಗಿ ಜನರನ್ನು ಬಳಸಿಕೊಳ್ಳುತ್ತಿರುವ ಉದ್ದೇಶವನ್ನು ಹೊಂದಿರುವುದನ್ನು ಜಯಂತ್ ಕಾಯ್ಕಿಣಿ ಅವರ 'ತೂಫಾನ್ ಮೇಲ್' ಕತೆಯ ಮೂಲಕ ನೋಡಬಹುದಾಗಿದೆ. ಕತೆಯ ಮೂಲ ಪಾತ್ರವಾದ 'ಮುನ್ನಾ/ತೂಫಾನ್' ತನ್ನ ಜೀವನ ನಿರ್ವಹಣೆಗಾಗಿ ಸಿನಿಮಾ ಕ್ಷೇತ್ರದಲ್ಲಿ ಸ್ಟಂಟ್ ಮಾಡುವ ಕೆಲಸದಲ್ಲಿ ತೊಡಗಿರುತ್ತಾನೆ. ಸಿನಿಮಾ ಕ್ಷೇತ್ರದಲ್ಲಿ ಸ್ಟಂಟ್ ಮಾಡುವುದನ್ನು ತೂಫಾನ್ ತುಂಬಾ ಆಕರ್ಷಿತನಾಗಿ ಮಾಡುತ್ತಿದ್ದನು. ಅನೇಕ

ಬಾರಿ ತನ್ನ ಜೀವನವನ್ನೇ ಪಣಕಿಟ್ಟು ಸ್ಟಂಟ್ ಮಾಡುತ್ತಿದ್ದರೂ ಅವನನ್ನು ತೆರೆಯ ಮೇಲೆ ಮೂಡಿಸದೇ ತೆರೆಯ ಹಿಂದೆ ಉಳಿಸುವ ಪ್ರಯತ್ನವನ್ನು ನಿರ್ದೇಶಕರು ಮತ್ತು ನಿರ್ಮಾಪಕರು ಮಾಡುತ್ತಿದ್ದರು. ಅಲ್ಲದೇ ಇಂದಿನ ಸಿನಿಮಾಗಳು ಮನುಷ್ಯರಲ್ಲಿ ನೈತಿಕ ಮೌಲ್ಯಗಳನ್ನು ತುಂಬುವ ಕೆಲಸವನ್ನು ಬಿಟ್ಟು; ಸಿನಿಮಾವನ್ನು ಮನೋರಂಜನೆಯ ದೃಷ್ಟಿಯಿಂದ ಫೈಟಿಂಗ್, ಬಿಕನಿ ಮುಂತಾದವುಗಳ ಮೂಲಕ ಜನರನ್ನು ಆಕರ್ಷಿಸಲು ಪ್ರಯತ್ನಿಸುತ್ತಿರುವ ಹಿನ್ನೆಲೆಗಳೂ ಕೂಡಾ ಬಂಡವಾಳಶಾಹಿಗಳ ಆರ್ಥಿಕ ಕಾರಣಗಳ ಮನಸ್ಥಿತಿಯಿಂದಲೇ ಕೂಡಿವೆ.

ಇದಲ್ಲದೇ ಮಧುವಂತಿ ಪಾತ್ರವನ್ನು ಮಹಿಳಾ ಹಿನ್ನೆಲೆಯಲ್ಲಿ ಗಮನಿಸಿದಾಗ ಜಾಗತೀಕರಣದಿಂದ ಬಂಡವಾಳಶಾಹಿಗಳು ಹೇಗೆ ತಮ್ಮ ಆರ್ಥಿಕ ಉದ್ದೇಶಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎನ್ನುವ ಹಿನ್ನೆಲೆಯನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ಈ ಎರಡೂ ಅಂದರೆ ತೂಫಾನ್ ಮತ್ತು ಮಧುವಂತಿ ಪಾತ್ರಗಳು ಮನುಷ್ಯನ ಜೀವನದಲ್ಲಿ ಆರ್ಥಿಕ ನೀತಿಯು ಮನುಷ್ಯನನ್ನು ಎಂತಹ ಸ್ಥಿತಿಗೆ ತಂದಿದೆ ಎನ್ನುವುದನ್ನು ಚಿತ್ರಿಸಲಾಗಿದೆ. ಇಂತಹ ಪ್ರಸಂಗವನ್ನು ತೂಫಾನ್ ಮಾತುಗಳ ಮೂಲಕ ಹೀಗೆ ನೋಡಬಹುದು. "ಏನೇ ಪ್ರೊಡಕ್ಷನ್ ನಂಬರ್ ಟೂನಾ? ಫೈಟಿಂಗ್ ಬಿಟ್ಟು ಬಲದೇವ ಮನೇಲಿ ಬೆಡ್‌ರೂಂ ಸೀನ್ ಶುರು ಮಾಡಿದಾನೇನೆ? ಎಂದ. ತೂಫಾನ್‌ನನ್ನು ತಿವಿದು 'ಥೂ ಈ ಬಿಸಿಲಿನಲ್ಲಿ ಬೇರೆ ಕೆಲ್ಸ ಇಲ್ವಾ ನನಗೆ? ಇರೋ ಒಂದು ಮರೀನ ಬೆಳೆಸೋಕೆ ಈ ಮಧ್ಯ ವಯಸ್ಸಿನಲ್ಲಿ ಈ ಬಿಸಿಲಿನಲ್ಲಿ ಈ ಹಗಲುವೇಷ ಹಾಕ್ಕೊಂಡು ದಿನಕ್ಕೊಂದು ಸೊಲ್ಲಿಗೆ ನೂರು ಸಲ ಕುಂಡೆ ಅಲ್ಲಾಡಿಸ್ತಿದ್ದೀನಿ."[೩] ಎಂದಳು. ಅಂದರೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಮನುಷ್ಯನನ್ನು ಬಂಡವಾಳಶಾಹಿಗಳು ಉಪಯೋಗಿಸಿಕೊಳ್ಳುತ್ತಿರುವ ನೀತಿಯನ್ನು ಪ್ರಸ್ತುತ ಕತೆಯು ಚಿತ್ರಿಸುತ್ತಿದೆ. ತೂಫಾನ್ ಮತ್ತು ಮಧುವಂತಿ ಅವರ ಜೀವನದ ಎಲ್ಲಾ ಸಂಕಟಗಳನ್ನು ಆರ್ಥಿಕ ಉದ್ದೇಶಕ್ಕಾಗಿ ಜೀವವನ್ನು ಮತ್ತು ಜೀವನವನ್ನು ಬಲಿ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬಂಡವಾಳಶಾಹಿಯು ಸಿನಿಮಾ ಕ್ಷೇತ್ರದಲ್ಲಿ ತನ್ನ ನೆಲೆಯನ್ನು ರೂಪಿಸಿಕೊಂಡಿದೆ ಎನ್ನುವುದನ್ನು ಕತೆಯ ಮೂಲಕ ಗ್ರಹಿಸಬಹುದು.

ಹನುಮಂತ ಹಾಲಿಗೇರಿ ಅವರ 'ದೇವಸಗ್ಗ' ಕತೆಯಲ್ಲಿ ಸಂಪತ್ತನ್ನು ವೈಯಕ್ತಿಕ ಹಿತಾಸಕ್ತಿಗಾಗಿ ಬಂಡವಾಳಶಾಹಿಗಳು ಜನರನ್ನು ಬಳಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಚಿತ್ರಿಸಲಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಜೊತೆಗೆ ಸೇರಿಕೊಂಡು ಆರ್ಥಿಕ, ರಾಜಕೀಯ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಕತೆಯಲ್ಲಿ ತಿಳಿಸಲಾಗಿದೆ.

ಅಲ್ಲದೇ ಸರ್ಕಾರಕ್ಕೆ ದೇವಸಗ್ಗ ಎನ್ನುವ ಹಳ್ಳಿಯನ್ನು ತನ್ನ ಯೋಜನೆಗೆ ಬಳಸಿಕೊಳ್ಳಬೇಕು ಎನ್ನುವ ಯೋಚನೆಯೇ ಇಲ್ಲದಿರುವಾಗ ಊರಿನ ಶ್ರೀಮಂತರಾದ ಹೆಗಡೇರು ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರುವುದರ ಮೂಲಕ ಯೋಜನೆಯ ಭಾಗವನ್ನಾಗಿ ದೇವಸಗ್ಗವನ್ನು ಸೇರಿಸಿ ಇಡೀ ಊರಿನ ಆಸ್ತಿಯನ್ನು ಖರೀದಿಸುವ ಹುನ್ನಾರವನ್ನು ಕತೆಯಲ್ಲಿ ತಿಳಿಸಲಾಗಿದೆ.

ದೇವಸಗ್ಗದಲ್ಲಿ ಹುಲಿಯೋಜನೆ, ಡ್ಯಾಂ ಯೋಜನೆ ಮುಂತಾದ ಅಭಿವೃದ್ಧಿ ಯೋಜನೆಗಳನ್ನು ತರುವ ಪ್ರಯತ್ನವನ್ನು ಸರ್ಕಾರದ ಮೂಲಕ ಹೆಗಡೇರು ಮಾಡಿಸುತ್ತಿದ್ದರು. ಇಂತಹ ಹೆಗಡೇರು ಜನರನ್ನು "ನೀವು ಹೋಗದಿದ್ದರೂ ಸರಕಾರದವರು ಬೇರೆ ಕಡೆ ಒಕ್ಕಲೆಬ್ಬಿಸುತ್ತಾರೆ ನೋಡ್ತಿರಿ ಅಂತ ಹೆದರಿಸತೊಡಗಿದರು. ಊರಿನ ಅರ್ಧಕ್ಕರ್ಧದಷ್ಟು ಜಮೀನು ಹೊರಗಡೆಯಿಂದ ಬಂದ ಹೆಗಡೇರ ಮಂದಿ ಪಾಲಾದ್ವು. ಮೊದಲು ನಮ್ಮೂರಲ್ಲಿ ನಾಲ್ಕೈದು ಮನೆಗಳಷ್ಟೇ ಇದ್ದ ಹೆಗಡೇರ ಮಂದಿ ಮನೆಗಳು ಕ್ರಮೇಣ ಅಲ್ಲಲ್ಲಿ ನಾಯಿಕೊಡೆಗಳಂತೆ ಮೇಲೇಳತೊಡಗದವು. ತಾವು ಕೊಂಡ ಜಮೀನನೊಳಗ ಹೆಗಡೇರು ಒಂದರ ಮೇಲೊಂದು ಮಹಡಿ ಮನಿ ಕಟ್ಟಿಸಿದ್ರು."[೩೩] ಇಂತಹ ಹೆಗ್ಗಡೇರು ಊರಿನಲ್ಲಿ ಅಲ್ಪಸಲ್ಪ ಹಣಕ್ಕೆ ಹೊಲವನ್ನು, ಮನೆಯನ್ನು ಕೊಳ್ಳುವುದರ ಮೂಲಕ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಸಾಧಿಸಿಕೊಳ್ಳುತ್ತಾರೆ ಎನ್ನುವುದನ್ನು ಕತೆಯ ಮೂಲಕ ಚಿತ್ರಿಸಲಾಗಿದೆ.

ಇದನ್ನು ಕತೆಯಲ್ಲಿ ಬರುವ ಪಾತ್ರವೊಂದರ ಮೂಲಕ ಹೀಗೆ ತಿಳಿಸಲಾಗಿದೆ. "ಆಸ್ತಿಗಾಗಿ ಮಕ್ಕಳೆ ಹೆತ್ತ ತಂದೆ–ತಾಯಿನ ಕೊಲ್ಲೋರು. ಹರಿಯೋ ನೀರಿಗೆ ಡ್ಯಾಂ ಕಟ್ಟಿ ಕಡೆ ಹಳ್ಳಿ ಮುಳುಗಿಸೋ ಅಭಿವೃದ್ಧಿಯ ಹರಿಕಾರರು. ತಮ್ಮಲ್ಲಿರೋದನ್ನು ಪ್ರದರ್ಶಿಸಲು ಮಹಲಿನ ಮ್ಯಾಲ ಕಟ್ಟಿಸಿ ಅದರೊಳಗಿನ ಬಿಸಿ ಹೊರಗ ಹೊರಗಿನ ಅಷ್ಟು ಇಷ್ಟು ತಂಪು ಎಳ್ಕೊಂಡು ಮಜಾ ಮಾಡೋ ಶ್ರೀಮಂತರು."[೩೪] ಎಂದು ಬಂಡವಾಳಶಾಹಿಗಳ ನಡೆಯನ್ನು ಕತೆಯಲ್ಲಿ ವಿವರಿಸಲಾಗಿದೆ.

ಶಿಕ್ಷಣದಲ್ಲಿ ಬಂಡವಾಳಶಾಹಿಗಳು ಮಾಡುತ್ತಿರುವ ಪಾತ್ರವನ್ನು ಮುಖ್ಯವಾಗಿ ವಿವೇಕ ಶಾನಭಾಗ ಅವರ 'ಕೆಲವು ತತ್ವಗಳ ಸಲುವಾಗಿ' ಕತೆಯ ಮೂಲಕ ಗ್ರಹಿಸಬಹುದಾಗಿದೆ. ಕತೆಯ ಮುಖ್ಯ ಪಾತ್ರ 'ಘನಶ್ಯಾಮ' ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. ೬೦ರಷ್ಟು ಅಂಕಗಳನ್ನು ಪಡೆದು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಆಗಿದ್ದರೂ ಅವನ ತಂದೆಯ ಆಸೆಯಂತೆ ವಿಜ್ಞಾನ ವಿಷಯಕ್ಕೆ ಸೀಟು ಸಿಗದೇ ಹೊರಗುಳಿಯುವ ಪ್ರಸಂಗ ಬರುತ್ತದೆ. ಅಲ್ಲದೇ

ಘನಶ್ಯಾಮನು ಅನೇಕ ಕಾಲೇಜುಗಳಿಗೂ ಭೇಟಿ ಕೊಟ್ಟಾಗಲೂ ಕಾಲೇಜು ಮಂಡಳಿಯವರು ಅವನನ್ನು ನಡೆಸಿಕೊಳ್ಳುವ ರೀತಿ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ನಡೆಸುತ್ತಿರುವ ದೌರ್ಜನ್ಯಗಳ ಸ್ಥಿತಿಗತಿಗಳನ್ನು ಕತೆಯು ನಮ್ಮ ಕಣ್ಣೆದುರಿಗೆ ಚಿತ್ರಿಸುತ್ತದೆ.

ಘನಶ್ಯಾಮ ಕಡಿಮೆ ಅಂಕ ಗಳಿಸಿ ಸಾಯನ್ಸಿಗೆ(ವಿಜ್ಞಾನ ವಿಷಯಕ್ಕೆ) ಸೀಟು ಕೇಳಲು ಬಂದವನಿಗೆ ಕಾಲೇಜುಗಳಲ್ಲಿ ಗುಮಾಸ್ತರಿಂದ ಹಿಡಿದು ಆಡಳಿತ ಮಂಡಳಿಯವರೆಗೆ ನಡೆಸಿಕೊಂಡ ರೀತಿ ಅವನನ್ನು ಕೋಪಕ್ಕೆ ಒಳಗಾಗುವಂತೆ ಮಾಡಿತು. ಇವನು ಕಾಲೇಜಿನಲ್ಲಿ ಅರ್ಜಿ ಪಡೆಯಲು ಬಂದಾಗ ಗುಮಾಸ್ತನು ಇವನನ್ನು ನಿಕೃಷ್ಟ ಹುಳವೆಂಬಂತೆ ಭಾವಿಸಿ "ಹೋಗ್ರೀ... ಹೋಗ್ರೀ... ಯಾಕೆ ಎಲ್ಲರ ಸಮಯ ಹಾಳು ಮಾಡ್ತೀರಿ? ಹೊರಗೆ ಬೋರ್ಡು ಓದಿ ಬನ್ನಿ ಎಂದು ಎಷ್ಟು ಸಲ ಬಡಕೊಂಡರೂ ಹಾಗೇ ಬರುತ್ತೀರಲ್ಲ. ಅಲ್ಲಿ ಸ್ಪಷ್ಟವಾಗಿ ಹಾಕಿಲ್ಲೇನು – ಸಾಯನ್ಸಿಗೆ ಇಲ್ಲಿ ತೊಂಬತ್ತೆರೆಡು ಪರ್ಸೆಂಟಿಗೇ ಕೊನೆ ಸೀಟು. ಜಾತಿ ಪರಿಜಾತಿ ಕುಂಟ ಕಿವುಡ ಎಬಡ ಏನೂ ಇಲ್ಲದೇ, ಕೈಕಾಲು ನೆಟ್ಟಗಿದ್ದರೆ ತೊಂಬತ್ತೆರಡಕ್ಕಿಂತ ಹೆಚ್ಚಿಗೆ ಬೇಕೆ ಬೇಕು. ಬರೇ ಅರವೊತ್ತೊಂದು ಪರ್ಸೆಂಟ್ ತಗೊಂಡು ಬಂದಿದ್ದಾರೆ ಸುಮ್ಮನೇ ಎಲ್ಲರ ಸಮಯ ಹಾಳು ಮಾಡಲು..."[೩೫] ಎನ್ನುವುದು ಇಡೀ ಸಮಾಜದಲ್ಲಿನ ಬಂಡವಾಳಶಾಹಿಗಳ ನಡೆಯನ್ನು ವಿವರಿಸುತ್ತಿದೆ. ಅಲ್ಲದೇ ಶಿಕ್ಷಣವನ್ನು ಖಾಸಗೀಕರಣ ನೀತಿಯಿಂದ ಆರ್ಥಿಕ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಉದ್ದೇಶವನ್ನು ಕಾಣುತ್ತಿದ್ದೇವೆ.

ಅಲ್ಲದೇ ಶಿಕ್ಷಣ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಹೇಗೆ ಶೈಕ್ಷಣಿಕ ಸಂಸ್ಥೆಗಳ ಮೇಲೆ ತಮ್ಮ ಪ್ರಭಾವವನ್ನು ಬೀರುವ ಮೂಲಕ ಕೆಲಸವನ್ನು ಕೆಲವರು ಸಾಧಿಸಿಕೊಳ್ಳಬಹುದು ಎನ್ನುವುದನ್ನು ಘನಶ್ಯಾಮನಿಗೆ ವಿಜ್ಞಾನದ ಸೀಟನ್ನು ಕೊಡಿಸುವ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಶ್ಯಾಮನ ಅಪ್ಪನ ಸ್ನೇಹಿತರೊಬ್ಬರು "ಅಯ್ಯೋ ಅದೇನು ಮಹಾ, ಈ ಕಾಲೇಜಿನಲ್ಲಿ ಆದೀತೋ ಎಂದು ಘನಶ್ಯಾಮ ಮೊದಲ ದಿನ ಹೋದ ಕಾಲೇಜಿನ ಹೆಸರು ಹೇಳಿದರು."[೩೬] ಘನಶ್ಯಾಮನಿಗೆ ಅಂದು ಕಾಲೇಜಿನಲ್ಲಿ ನಡೆದ ಘಟನೆ ನೆನಪಾಗಿ ತಡವರಿಸುತ್ತಿರುವಾಗ ತಂದೆಯ ಸ್ನೇಹಿತರು "ಕೊಡುತ್ತಾರೆ ಕೊಡುತ್ತಾರೆ.... ಕೊಡದೇ ಏನು? ನಮ್ಮ ಜೊತೆ ಮುರಕೊಳ್ಳವಷ್ಟು ಮೂರ್ಖರೇನು?"[೩೭] ಎಂದು ಗರ್ವದಿಂದ ಹೇಳುತ್ತಾರೆ.

ಅಂದರೆ ಇಲ್ಲಿ ಮುಖ್ಯವಾಗಿ ಮೊದಲು ಶಿಕ್ಷಣದಲ್ಲಿ ಗುಣಮಟ್ಟ ಇರಲೆಂದು ವಿಜ್ಞಾನದ ವಿಭಾಗಕ್ಕೆ ತೊಂಬತ್ತೆರಡು ಪರ್ಸೆಂಟ್‌ಗೆ ನಿಲ್ಲಿಸಿದ್ದ ಸೀಟನ್ನು ತಂದೆಯ ಸ್ನೇಹಿತರು ಹೇಳಿದ ನಂತರ ಕೊಡುತ್ತಾರೆ. ಇಲ್ಲಿ ಆ ವ್ಯಕ್ತಿ ಪ್ರಬಲನಾಗಿರುವುದರಿಂದಲೇ

ಅವನು ತನ್ನ ವರ್ಚಸ್ಸನ್ನು ಬಳಸಿ ಶ್ಯಾಮನಿಗೆ ಸೀಟನ್ನು ಕೊಡಿಸಿರುತ್ತಾನೆ. ಅಂದರೆ ಈ ಶಿಕ್ಷಣ ವ್ಯವಸ್ಥೆಯಲ್ಲಿನ ಕಾಲೇಜು ಮಂಡಳಿಯು ಬಂಡವಾಳಶಾಹಿಗಳ ಹಿಡಿತದಲ್ಲಿ ಕೆಲಸ ಮಾಡುವ ಮೂಲಕ ಶಿಕ್ಷಣ ವ್ಯವಸ್ಥೆಯ ಮೇಲೆ ಬಂಡವಾಳಶಾಹಿಯ ಹಿಡಿತದ ಇರುವಿಕೆಯನ್ನು ಸೂಕ್ಷ್ಮವಾಗಿ ತೆರೆದಿಡುತ್ತಿದೆ. ಅಲ್ಲದೇ ಘನಶ್ಯಾಮನು ಕಾಲೇಜಿಗೆ ಹೋದ ನಂತರ ಅಲ್ಲೂ ಇವನ ತರಹ ಅಥವಾ ಇವನ ಹಾಗೆಯೇ ಬಂದ ಅನೇಕ ಹುಡುಗರಿದ್ದರು ಎನ್ನುವ ಮಾತುಗಳು ಶಿಕ್ಷಣ ವ್ಯವಸ್ಥೆಯು ಹೇಗೆ ಬಂಡವಾಳಶಾಹಿಗಳ ಹಿಡಿತದಲ್ಲಿದೆ ಎನ್ನುವುದನ್ನು ಪ್ರತಿಪಾದಿಸುತ್ತದೆ.

೪.೩ ಶೈಕ್ಷಣಿಕ ನೆಲೆ

ಶಿಕ್ಷಣದ ಪರಿಕಲ್ಪನೆಯು ಬದಲಾದ ಸಂದರ್ಭದಲ್ಲಿ ಅನೇಕ ಸ್ಥಿತ್ಯಂತರಗಳನ್ನು ಕಾಣುತ್ತಿರುವುದನ್ನು ಮುಖ್ಯವಾಗಿ ಗಮನಿಸಬಹುದು. ಶಿಕ್ಷಣವು ಹಿಂದೆ ಇದ್ದ ಗುರುಕುಲಗಳಿಗೆ ಹೋಲಿಸಿದಾಗ ಅನೇಕ ಸ್ಥಿತ್ಯಂತರಗಳನ್ನು ಕಂಡು ಇಂದು ಎಲ್ಲರಿಗೂ ಕಡ್ಡಾಯ ಶಿಕ್ಷಣ ಜಾರಿಯಾಗಿರುವುದನ್ನು ಮುಖ್ಯವಾಗಿ ಗಮನಿಸಲಾಗಿದೆ. ಆದರೆ ಇಂತಹ ಶಿಕ್ಷಣ ವ್ಯವಸ್ಥೆಯ ಮೇಲೆ ಆಗುತ್ತಿರುವ ಬಂಡವಾಳಶಾಹಿಯಗಳ ಹಿಡಿತ ಮತ್ತು ಸರ್ಕಾರವು ಮಾಡುತ್ತಿರುವ ಖಾಸಗೀಕರಣದ ನೀತಿಗಳು ಶಿಕ್ಷಣದ ನಿಜವಾದ ಅರ್ಥವನ್ನು ಮೂಡಿಸುತ್ತಿವೆಯೇ ಎಂಬ ಪ್ರಶ್ನೆಯನ್ನು ಇಂದು ಎಲ್ಲರ ಮುಂದಿಟ್ಟಿದೆ. ಜಾಗತೀಕರಣದ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳ ಮೇಲೂ ಬಂಡವಾಳಶಾಹಿಯು ಪ್ರಭುತ್ವವನ್ನು, ಯಜಮಾನಿಕೆಯನ್ನು ಹೊಂದುತ್ತಿರುವ ಹಿನ್ನೆಲೆಯಲ್ಲಿ ಶಿಕ್ಷಣ ಮಾಧ್ಯಮವು ಇಂಗ್ಲೀಷ್ ಭಾಷೆಯಲ್ಲಿ ಏಕೀಕೃತಗೊಳ್ಳುತ್ತಿರುವುದು ಆತಂಕಕಾರಿ ವಿಷಯವಾಗಿದೆ.

ಅಲ್ಲದೇ "೧೯೮೬ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸುವಾಗ ಸಹ ಶಿಕ್ಷಣವೆಂಬುದು ವರ್ತಮಾನ ಮತ್ತು ಭವಿಷ್ಯದ ನಿರ್ಮಾಣಕ್ಕಾಗಿ ಹೂಡಲಾಗುವ ಬೆಲೆ ಕಟ್ಟಲಾಗದ ಅಪರಿಮಿತ ಬಂಡವಾಳ ಎಂದೇ ವಿಶ್ಲೇಷಿಸಲಾಗಿದೆ. ಆದರೆ ಇಂದು ಶಿಕ್ಷಣ ವ್ಯಾಪಾರೀಕರಣಗೊಂಡು ಈ ಎಲ್ಲಾ ಆಶೋತ್ತರಗಳನ್ನು, ಗುರಿಗಳನ್ನು ಈಡೇರಿಸುವಲ್ಲಿ ವಿಫಲವಾಗುತ್ತಿರುವುದನ್ನು ನಾವು ಎಲ್ಲೆಡೆ ಕಾಣುತ್ತಿದ್ದೇವೆ."[೩೮] ಎಂದು ಜಗದೀಶ್ ಕೊಪ್ಪ ಅವರು ಶಿಕ್ಷಣ ನೀತಿಯ ಅಭಿಪ್ರಾಯವನ್ನು ವಿವರಿಸುತ್ತಾರೆ. ಮುಂದುವರೆದು "ಇಂದು ಕಂಪ್ಯೂಟರ್‌ನಿಂದ ಪ್ರಪಂಚದ ಸಾಂಸ್ಕೃತಿಕ ವೈವಿಧ್ಯತೆಗೆ ಧಕ್ಕೆ ಉಂಟಾಗುತ್ತಿದೆ. ಭಾರತದ ಅನೇಕ ಸ್ಥಳೀಯ ಭಾಷೆಗಳನ್ನು ಇಂಗ್ಲೀಷ್ ಭಾಷೆ ಅದರಲ್ಲೂ ಅಮೆರಿಕನ್ ಇಂಗ್ಲೀಷ್ ಭಾಷೆ ನುಂಗಿ ಹಾಕುತ್ತದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ತತ್ ಕ್ಷಣದಿಂದಲೇ

ಸ್ಥಳೀಯ ಭಾಷೆಗಳಲ್ಲಿ ಸಾಫ್ಟ್‌ವೇರ್‌ಗಳನ್ನು ರೂಪಿಸದಿದ್ದರೆ ಶಕ್ತರು, ಅಶಕ್ತರು ಎಂಬ ಕಂದರ ವಿಸ್ತಾರವಾಗುವುದಲ್ಲದೇ ಸ್ಥಳೀಯ ಭಾಷೆಗಳ ಸಂಸ್ಕೃತಿಗಳು ಅಪಮೌಲ್ಯಗೊಳ್ಳುತ್ತವೆ."[೩೯] ಎಂದಿದ್ದಾರೆ.

ಅಂದರೆ ಇಡೀ ವ್ಯವಸ್ಥೆಯು ಜಾಗತೀಕರಣ ಸಂದರ್ಭದಲ್ಲಿ ಬಂಡವಾಳಶಾಹಿಗಳು ಬಯಸುವ ಏಕರೂಪದ ಶಿಕ್ಷಣ ಮತ್ತು ಭಾಷೆಯನ್ನು ವ್ಯವಸ್ಥಿತವಾಗಿ ರೂಪುಗೊಳಿಸುವುದರ ಮೂಲಕ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿ, ಇತಿಹಾಸ, ಭಾಷಿಕ ಸಂವೇದನೆಗಳನ್ನು ನಾಶ ಮಾಡುವ ಪರಿಸ್ಥಿತಿಯನ್ನು ರೂಪಿಸುತ್ತಿರುವುದನ್ನು ಕಾಣಬಹುದು. ಅಲ್ಲದೇ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್ ಭಾಷೆ ಮತ್ತು ಇಂಗ್ಲೀಷ್ ಶಿಕ್ಷಣವನ್ನು ಮಾಧ್ಯಮವನ್ನಾಗಿ ರೂಪಿಸುವುದರ ಮೂಲಕ ಜ್ಞಾನದ ಧಿಕ್ಕನ್ನು ಇಂಗ್ಲೀಷ್ ಭಾಷೆ ಮಾತ್ರವೇ ಹೊಂದಿದೆ ಎನ್ನುವಂತೆ ನಂಬಿಸಲಾಗಿದೆ. ಅಲ್ಲದೇ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಪ್ರಸರಿಸುವ ಮೂಲಕ ಸ್ಥಳೀಯ ಭಾಷೆಗಳನ್ನು ಮೂಲೆಗುಂಪು ಮಾಡುವ ಹುನ್ನಾರವೂ ಇದರ ಹಿಂದಿದೆ. ಜ್ಞಾನದ ಭಾಷೆಯಾಗಿ ಇಂಗ್ಲೀಷ್ ರೂಪುಗೊಂಡ ನಂತರ ಶಿಕ್ಷಣದಲ್ಲಿ ಇನ್ನಿತರ ಜ್ಞಾನಶಿಸ್ತುಗಳನ್ನು ಕಡೆಗಣಿಸುವಂತೆ ಮಾಡಿ ಇಡೀ ಶಿಕ್ಷಣ ಎಂದರೆ ಅದು ವಿಜ್ಞಾನ ಮತ್ತು ತಂತ್ರಜ್ಞಾನದ ಹಿನ್ನೆಲೆಯನ್ನು ಹೊಂದಿರಬೇಕು ಎನ್ನುವ ಮನೋಭಾವವು ಜನರಲ್ಲಿ ಮೂಡುವಂತೆ ಮಾಡಲಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಮಕ್ಕಳಿಗೆ ಜ್ಞಾನವನ್ನು ನೀಡುವ, ಬದುಕನ್ನು ರೂಪಿಸಿಕೊಳ್ಳಲು ಇರುವ ಸಾಧನವೆನ್ನುವುದನ್ನು ಮರೆತು ಉದ್ಯೋಗಕ್ಕಾಗಿ ಶಿಕ್ಷಣ ಎನ್ನುವಂತಹ ಪರಿಸ್ಥಿತಿಯನ್ನು ಬಂಡವಾಳಶಾಹಿ ವ್ಯವಸ್ಥೆ, ಬಹುರಾಷ್ಟ್ರೀಯ ಕಂಪೆನಿಗಳು ತಮಗೆ ಉದ್ಯೋಗಕ್ಕೆ ಬೇಕಾದ ಮಕ್ಕಳನ್ನು ಸೃಷ್ಟಿ ಮಾಡುವ ಸರಕು ಎನ್ನುವುದಾಗಿ ಪ್ರತಿಬಿಂಬಿಸುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಇಂದು ನಾವು ವ್ಯಾಪಾರೀಕರಣ ಮಾಡಿರುವುದರಿಂದ ಅದರಿಂದ ಮುಖ್ಯವಾಗಿ ಅನೇಕ ನೆಲೆಗಳಲ್ಲಿ ಬದಲಾವಣೆಗಳನ್ನು ಕಾಣಲಾಗುತ್ತಿದೆ.

೪.೩.೧ ಭಾಷೆ

ಜಾಗತೀಕರಣ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಯೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದರ ಜೊತೆಗೆ ಪ್ರಾದೇಶಿಕ ದೇಶೀಯ ಭಾಷೆಗಳ ಅಸ್ತಿತ್ವಕ್ಕೆ ಧಕ್ಕೆಯನ್ನು ತರುತ್ತಿರುವುದನ್ನು ಇಂದಿನ ದಿನಗಳಲ್ಲಿ ಕಾಣುತ್ತಿದ್ದೇವೆ. ಪ್ರಾದೇಶಿಕ ಭಾಷೆಗಳ ಸೀಮಿತ ವ್ಯಾಪ್ತಿಯನ್ನು ಮೀರಿ ಇಂದು ಇಂಗ್ಲೀಷ್ ಭಾಷೆಯೂ ವಾಣಿಜ್ಯ ಭಾಷೆಯಾಗಿ, ವ್ಯವಹಾರದ

ಭಾಷೆಯಾಗಿ ಅಲ್ಲದೇ ಪ್ರಭುತ್ವದ ಭಾಷೆಯಾಗಿಯೂ ರೂಪುಗೊಳ್ಳುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಕೋರ್ಟುಗಳು ಸಹ ಇಂಗ್ಲೀಷ್ ಭಾಷೆಯಲ್ಲಿಯೇ ತೀರ್ಪನ್ನು ವಿವರವನ್ನಾಗಿ ನೀಡುತ್ತಿರುವುದು, ನಮ್ಮ ಶಾಸನ ಸಭೆಗಳಲ್ಲಿ ಮಂಡಿತವಾಗುವ ಮಸೂದೆಗಳೆಲ್ಲವೂ ಇಂಗ್ಲೀಷ್ ಭಾಷೆಯಲ್ಲಿ ಇರುವುದು ಇಂತಹ ದೃಷ್ಟಿಕೋನದಿಂದಲೇ. ಅಲ್ಲದೇ ಭಾಷೆಯನ್ನು ವಾಣಿಜ್ಯದ ದೃಷ್ಟಿಯಿಂದ ಬಹುರಾಷ್ಟ್ರೀಯ ಕಂಪೆನಿಗಳು ಬಳಸಿಕೊಳ್ಳುತ್ತಿರುವುದು ಸಹ ಇದೇ ದೃಷ್ಟಿಕೋನದಿಂದಲೇ. ಅಲ್ಲದೇ ಇದನ್ನು ವ್ಯವಸ್ಥಿತವಾಗಿ ಶಿಕ್ಷಣ ಕ್ರಮದಲ್ಲಿ ಬಳಸಿಕೊಳ್ಳುವುದರ ಮೂಲಕ ಪ್ರಾದೇಶಿಕ ಭಾಷೆಗಳನ್ನು ತುಳಿಯುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇಂದು ಕನ್ನಡದಂತಹ ಪ್ರಾದೇಶಿಕ ಭಾಷೆಗೆ ಇಂಗ್ಲೀಷ್‌ನಂತಹ ವಾಣಿಜ್ಯ ಭಾಷೆಯು ತಂದಿರುವ ಅಪಾಯವನ್ನು ಸಹ ಕನ್ನಡದ ಕತೆಗಳು ಕಟ್ಟಿಕೊಟ್ಟಿರುವುದನ್ನು ಗುರ್ತಿಸಬಹುದಾಗಿದೆ.

ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಇಂದು ಹೇಗೆ ವ್ಯವಸ್ಥಿತವಾಗಿ ಇಂಗ್ಲೀಷನ್ನು ಬಳಸಲಾಗುತ್ತದೆ ಎನ್ನುವುದನ್ನು ಶಾಂತಿ ಕೆ. ಅಪ್ಪಣ್ಣ ಅವರ 'ಬಾಹುಗಳು' ಎಂಬ ಕತೆಯ ಮೂಲಕ ತಿಳಿಯಬಹುದು. ಐಟಿಬಿಟಿ ಕಂಪೆನಿಗಳಲ್ಲಿ ಅಕೌಂಟೆಟ್ ಆಗಿ ಕೆಲಸಕ್ಕೆ ಸೇರಿದ್ದ ಹುಡುಗನೊಬ್ಬನ ಅಕೌಂಟಿನಲ್ಲಿ ಆಗಿದ್ದ ತಪ್ಪನ್ನು ಕಂಡ ಬಾಸ್ ಅವನನ್ನು ಇಂಗ್ಲೀಷ್‌ನಲ್ಲಿ ಬೈಯತೊಡಗಿದನು. ಎಲ್ಲವನ್ನು ಕೇಳಿಸಿಕೊಂಡ ಆ ಹುಡುಗ ಬಾಸ್ ಹೊರಡುವ ಮುನ್ನ ಕತೆಯ ಮುಖ್ಯ ಪಾತ್ರವನ್ನು ಸ್ವಗತದಲ್ಲಿ ನಿರ್ವಹಿಸುತ್ತಿರುವ ಲೇಖಕರನ್ನು 'ಕರೆಕ್ಷನ್ ಏನಂದ್ರು ಸರ್?' ಅಂತ ಕೇಳಿದನು. ಆಗ ಲೇಖಕರು ಸಹಜವಾಗಿ ಸ್ವಲ್ಪ ಬಂದೆ ಇರು ಎಂದಾಗ ಅಲ್ಲಿಯೇ ಇದ್ದ ಬಾಸ್ ಸಿಟ್ಟಿನಿಂದ "ಹೌ ಡೇರ್ ಟು ಸ್ಪೀಕ್ ಅ ಲ್ಯಾಂಗ್ವೇಜ್ ವಿಚ್ ಈಸ್ ನಾಟ್ ನೋನ್ ಟು ಮೀ! ಡೋಂಟು ಯು ಹ್ಯಾವ್ ಪಬ್ಲಿಕ್ ಡೀಸೆನ್ಸಿ? ಐ ವಿಲ್ ಫೈರ್ ಯು ಔಟ್ ಆಫ್ ಮೈ ಆಫೀಸ್"[೪೦] ಎಂದು ಕನ್ನಡದಲ್ಲಿ ಮಾತನಾಡಿದಕ್ಕೆ ಕೆಂಡಾಮಂಡಲನಾದ.

ಅಂದರೆ ಕನ್ನಡವನ್ನು ಮಾತನಾಡಿದ ತಪ್ಪಿಗೆ ಆ ಹುಡುಗ ಕಂಗಾಲಾಗಿ 'ಸ್ಸಾರಿ ಸರ್, ಸ್ಸಾರಿ ಸರ್ ವಿಲ್ ನಾಟ್ ರಿಪೀಟ್' ಅಂದದ್ದನ್ನು ನೋಡಿ ಲೇಖಕರು 'ಏ ತಮ್ಮಾ ನೀನ್ಯಾಕೋ ಇದಕೆ ಸ್ಸಾರಿ ಕೇಳ್ತಿದೀಯಾ? ಏನಂಥ ಅಪರಾಧ ಆಯ್ತೂಂತ?' ಅಂದವರೇ ಸರಕ್ಕನೇ ಬಾಸ್ ಕಡೆ ತಿರುಗಿ "ನೀವ್ಯಾರ್ರೀ ಇದ್ನ ಕೇಳೋಕೆ? ಇದು ನಮ್ ರಾಜ್ಯಾರಿ, ನಿಮಗೆ ಕನ್ನಡ ಗೊತ್ತಿಲ್ಲಾಂದ್ರೆ ನೀವು ಕಲಿತ್ಕೊಳ್ಳೀ, ಇದು ಸೆಕ್ಯುಲರ್ ಕಂಟ್ರಿ, ನಮಗೆ ಫ್ರೀಡಂ ಆಫ್ ಎಕ್ಸ್‌ಪ್ರೆಶನ್ ಇದೆ. ಭಾಷೆ ಅನ್ನೋದು ಹೃದಯಕ್ಕೆ

ಹತ್ತಿರವಾದ್ದಂಥದ್ದು ಇದ್ನ ತಪ್ಪೂಂದ್ರೆ ಹೇಗೆ? ಅದೂ ಅಲ್ದೆ ಅಷ್ಟು ಸಣ್ಣ ತಪ್ಪಿಗೆ ಅವ್ನಿಗೆ ಅಷ್ಟೊಂದು ಬಯ್ತಿದೀರ! ನಾವೇನು ನಿನ್ ಸರ್ವೆಂಟ್ಸಾ?"[೪೧] ಎಂದು ಬಾಸ್‌ನ ಇಂತಹ ವರ್ತನೆಯನ್ನು ವಿರೋಧಿಸಿ ಮಾತನಾಡಿದರು.

ಅಂದರೆ ಇಡೀ ವ್ಯವಸ್ಥೆಯು ಇಂಗ್ಲೀಷ್ ಭಾಷೆಯನ್ನು ವಾಣಿಜ್ಯ ಭಾಷೆಯನ್ನಾಗಿ ರೂಪುಗೊಳಿಸಿಕೊಂಡಿದೆ. ಅಲ್ಲದೇ ಬಂಡವಾಳಶಾಹಿಗಳ ಹಿಡಿತದಲ್ಲಿ ಇರುವ ಇಂತಹ ಬಹುರಾಷ್ಟ್ರೀಯ ಕಂಪೆನಿಗಳು ಮಾರುಕಟ್ಟೆಗೆ ಬೇಕಾದ ಅಂತತರಾಷ್ಟ್ರೀಯ ಸಂವಹನ ಭಾಷೆಯನ್ನಾಗಿ ಇಂಗ್ಲೀಷ್ ಭಾಷೆಯನ್ನು ರೂಪಿಸಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಇಡೀ ಕತೆಯಲ್ಲಿ ಇಂಗ್ಲೀಷ್‌ನಲ್ಲಿಯೇ ವ್ಯವಹರಿಸುವ ಕಂಪೆನಿಗಳು ತಮ್ಮ ಕೆಳಗೆ ಕೆಲಸ ಮಾಡುವ ಕೆಲಸಗಾರರನ್ನು ಸಹ ಇದೇ ರೀತಿಯಲ್ಲಿ ಮಾತನಾಡುವಂತೆ ಒತ್ತಾಯಿಸಲಾಗುತ್ತದೆ. ಅಲ್ಲದೇ ಪ್ರಾದೇಶಿಕ ಭಾಷೆಗಳನ್ನು ಹೇಗೆ ಎರಡನೇ ಅಥವಾ ಮೂರನೇ ದರ್ಜೆಗೆ ಇಳಿಸಲಾಗುತ್ತಿದೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಕರ್ನಾಟಕದಲ್ಲಿಯೇ ಇದ್ದರೂ ಕನ್ನಡವನ್ನು ಕಲಿಯದೇ, ಇಲ್ಲಿಯವರನ್ನು ಕನ್ನಡ ಮಾತನಾಡದಂತೆ ವಿರೋಧಿಸುವ ಇಂತಹ ಬಂಡವಾಳಶಾಹಿಯ ಖಾಸಗೀಕರಣ ನೀತಿಯ ಬಗ್ಗೆ ಕತೆಯು ಪ್ರಸ್ತಾಪಿಸುತ್ತಿದೆ.

ಇನ್ನೂ ಕನ್ನಡ ಭಾಷೆಯು ಅಳಿವಿನ ಅಂಚಿನಲ್ಲಿದೆ ಎನ್ನುವ ಮಾತನ್ನು ಮಹಾಂತೇಶ ನವಲಕಲ್ ಅವರ 'ಡಿಪ್ರೆಶನ್' ಕತೆಯಲ್ಲಿ ಚಿತ್ರಿಸಿದ್ದಾರೆ. ಭೂಮಿಕಾ ಡಿಪ್ರೆಶನ್‌ನಿಂದ ಬಳಲುತ್ತಿರುವುದರಿಂದ ಅವಳನ್ನು ನೋಡಿಕೊಂಡು ಹೋಗಲು ಆಫೀಸಿನಿಂದ ಮಲ್ಲಿಕಾ ಮತ್ತು ಸಂಸ್ಥೆಯ ಕಾರ್ಯದರ್ಶಿ ಮಾಲತಿ ಮಡಬೋಲೆ ಬಂದಿರುತ್ತಾರೆ. ಆಗ ಮಲ್ಲಿಕಾಳು ಭೂಮಿಕಾಳ ಸಾಧನೆಯನ್ನು ಕುರಿತು ಅವಳಿಗೆ ನೀವೊಂದು ಆತ್ಮಕತೆಯನ್ನು ತರಬೇಕೆನ್ನುತ್ತಾಳೆ. ಇದಕ್ಕೆ 'ದಿಗ್ವಿಜಯ' ಎನ್ನುವ ಹೆಸರಿಡಬೇಕು ಎನ್ನುತ್ತಿರುವಾಗಲೇ ಮಲ್ಲಿಕಾ "ಮೇಡಂ ನಿಮ್ಮ ಕನ್ನಡ ಅಷ್ಟು ಸರಿಯಾಗಿಲ್ಲ, ಇಂಗ್ಲೀಷ್ ಆದರೆ ನಿಮ್ಮನ್ನು ಮೀರಿಸುವವರಿಲ್ಲ. ಅದಕ್ಕೆ ನಿಮ್ಮ ಆತ್ಮಚರಿತ್ರೆ ಬರೆಯಲು ಒಬ್ಬನನ್ನು ನಿಯಮಿಸಿದ್ದೇನೆ"[೪೨] ಎಂದಳು.

ಇಲ್ಲಿ ಕನ್ನಡ ಭಾಷೆಯ ಚರ್ಚೆಯನ್ನು ಮಾಡಲಾಗಿದೆ. ಇಂಗ್ಲೀಷ್ ಭಾಷೆಯು ಹೆಚ್ಚು ವ್ಯಾಪಕವಾಗಿ ಸಮಾಜದಲ್ಲಿ ಬಳಕೆಗೆ ತರುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಕನ್ನಡ ಭಾಷೆಯನ್ನು ಇಂಗ್ಲೀಷ್ ಭಾಷೆಯು ಇಂದು ಮೂಲೆಗುಂಪು ಮಾಡುತ್ತಿದೆ ಎನ್ನುವುದನ್ನು ಸೂಚ್ಯವಾಗಿ ತಿಳಿಸಲಾಗಿದೆ. ಇಂಗ್ಲೀಷ್ ವ್ಯವಹಾರ ಭಾಷೆಯಾಗಿ, ವಾಣಿಜ್ಯ ಭಾಷೆಯಾಗಿ ಇಂದು ಜಗತ್ತಿಗೆ ತೆರೆದುಕೊಳ್ಳುತ್ತಿರುವ ಮುನ್ನೋಟವನ್ನು ಭೂಮಿಕಾಳ ಮೂಲಕ ತಿಳಿಸಲಾಗಿದೆ. ಕರ್ನಾಟಕದ ಸಂದರ್ಭದಲ್ಲಿ ಇಲ್ಲಿಯೇ ವಾಸವಿದ್ದರೂ ಇಲ್ಲಿಯೇ

ಕೆಲಸ ಮಾಡಿಕೊಂಡು ಇಲ್ಲಿಯ ಗಾಳಿ, ನೀರು, ಆಹಾರ, ಹಣವನ್ನು ಸಂಪಾದಿಸುತ್ತಿದ್ದರೂ ಕನ್ನಡ ಓದಲು, ಬರೆಯಲು ಬರದೇ ಇರುವ ಪಾತ್ರವಾಗಿ ಭೂಮಿಕಾಳನ್ನು ಚಿತ್ರಿಸಲಾಗಿದೆ. ಇನ್ನೂ ಕನ್ನಡ ಭಾಷೆಯಲ್ಲಿ ಓದಿ, ಅದರಲ್ಲಿ ಸಾಹಿತ್ಯವನ್ನು ರಚಿಸುವವರ ಪರಿಸ್ಥಿತಿಯು ಇಂದು ಏನಾಗಿದೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

ಭೂಮಿಕಾಳ ಆತ್ಮಕತೆಯನ್ನು ಬರೆಯಲು ಮಲ್ಲಿಕಾ ಮತ್ತು ಮಾಲತಿ ಹೇಳಿದಾಗ ಭೂಮಿಕಾಳಿಗೆ ಕನ್ನಡ ಅಷ್ಟು ಸರಿಯಾಗಿಲ್ಲ ಎಂದು ಹೇಳಿ ಅದನ್ನು ಬರೆಯಲು ಒಬ್ಬ ಕನ್ನಡದ ಖ್ಯಾತ ಉದಯೋನ್ಮುಖ ಕತೆಗಾರರನ್ನು ನೇಮಿಸಲಾಗುತ್ತದೆ. ಮಲ್ಲಿಕಾ ಇವನ ಪರಿಸ್ಥಿತಿಯನ್ನು ವಿವರಿಸುತ್ತಾ "ಆತ ಕನ್ನಡದ ಖ್ಯಾತ ಉದಯೋನ್ಮುಖ ಕಥೆಗಾರ. ಪಾಪ ಕೆಲಸವಿಲ್ಲ. ಹತ್ತು ಸಾವಿರ ಕೊಡುತ್ತೇವೆ ಎಂದು ಹೇಳಿದ್ದೇವೆ. ನಾಳೆಯೇ ಬರುತ್ತಾನೆ."[೪೩] ಎಂದು ಹೇಳುತ್ತಾರೆ. ಇದು ಇಂದಿನ ಸಾಹಿತಿಗಳ ಪರಿಸ್ಥಿತಿಯು ವಾಣಿಜ್ಯ ಭಾಷೆಯಾದ ಇಂಗ್ಲೀಷ್ ತನ್ನ ಪ್ರಭಾವವನ್ನು ಯಜಮಾನ್ಯದ ರೀತಿಯಲ್ಲಿ ಬಳಸುತ್ತಿರುವುದರ ಪರಿಣಾಮವನ್ನು ಸೂಚಿಸುತ್ತದೆ.

ಕತೆಯಲ್ಲಿ ಭೂಮಿಕಾ ಹತ್ತಿರ ಬಂದ ಕತೆಗಾರರನ ಬಗ್ಗೆ ಯೋಚಿಸುತ್ತಾ ಅವನು ರಚಿಸಿದ ಪುಸ್ತಕವೊಂದನ್ನು ತಂದಿರುವುದನ್ನು ನೆನೆಸಿಕೊಂಡಳು. "ಒಂದು ದಿನ ವಾಹನಗಳ ದಟ್ಟಣೆಯಿಂದ ತನ್ನ ಕಾರು ಗಾಂಧೀ ಸರ್ಕಲ್ಲಿನಲ್ಲಿ ನಿಂತಾಗ ಒಬ್ಬ ಪಾಪದ ಹುಡುಗ ಬಿರುಬಿಸಿಲಿನಲ್ಲಿ ಈ ಪುಸ್ತಕವನ್ನು ಮಾರುತ್ತಿದ್ದ. ಗುಜರಿ ಪುಸ್ತಕ ಮಾರುವವ ಆತನ ಕಂಗಳಲ್ಲಿದ್ದ ಹಸಿವನ್ನು ನೋಡಿ ಕರೆದಾಗ ಆತನೇ ಹೇಳಿದ್ದ. ಎರಡು ವರ್ಷದಿಂದ ನನ್ನಲ್ಲಿ ಒಂದು ಪುಸ್ತಕ ಬಂದಿದೆ. ಯಾರೂ ತೆಗೆದುಕೊಳ್ಳುತ್ತಿಲ್ಲ. ನೀವಾದರೂ ತೆಗೆದುಕೊಳ್ಳಿ ಮೇಡಂ ಪ್ಲೀಸ್. ಇದರ ಬೆಲೆ ಐವತ್ತು ೫೦ ರೂಪಾಯಿ ಇದೆ. ನೀವು ೫ ರೂಪಾಯಿ ಕೊಟ್ಟರು ಸಾಕು ಎಂದಿದ್ದ."[೪೪]

ಕತೆಯಲ್ಲಿ ಕನ್ನಡದ ಕತೆಗಾರರ ಇಲ್ಲವೇ ಸಾಹಿತಿಗಳ ಜೀವನವನ್ನು ಅವರ ಸಾಹಿತ್ಯದ ಮೂಲಕ ಭಾಷೆಯಲ್ಲಿ ಅವರು ರಚಿಸುವ ಸಾಹಿತ್ಯ ಕೃತಿಗಳಿಗೆ ಸಿಗುತ್ತಿರುವ ಬೆಲೆಯನ್ನು ತಿಳಿಸಲಾಗಿದೆ. ಅಲ್ಲದೇ ಅವರು ಹತ್ತು ಸಾವಿರಕ್ಕೆ ಆತ್ಮಕತೆಯನ್ನು ಬರೆಯಲು ಒಪ್ಪಿ ಬರುತ್ತಾರೆ ಎಂದಿರುವುದು ಸಹ ಸಾಹಿತಿಗಳ ದುಸ್ಥಿತಿಯನ್ನು ಕತೆಯು ತಿಳಿಸುತ್ತಿದೆ. ಇದೇ ಸಂದರ್ಭದಲ್ಲಿ ಕವಿ ಚಕ್ರವರ್ತಿಗೆ ಭೂಮಿಕಾಳು ಪ್ರಶ್ನಿಸುತ್ತಾ "ಜಗತ್ತಿನಲ್ಲಿ ೧೦೦ ವರ್ಷಗಳಲ್ಲಿ ಸಾಯುವ ಭಾಷೆಗಳಲ್ಲಿ ಕನ್ನಡವೂ ಒಂದು ಎಂದು ಪಟ್ಟಿ ಮಾಡಿದ್ದಾರೆ. ಅದಕ್ಕೆ ತಮ್ಮ ಅಭಿಪ್ರಾಯ ಎಂದಳು."[೪೫] ಇದಕ್ಕೆ ಅವನು ಅಷ್ಟು ದೂರ ಯೋಚಿಸಿದ್ದಲ್ಲ.

ನನಗೆ ಗೊತ್ತಿಲ್ಲ ಎನ್ನುತ್ತಾನೆ. ಭಾಷೆಯ ಬಗೆಗಿನ ಇಲ್ಲಿನ ಚರ್ಚೆ ಮುಖ್ಯವಾಗಿ ಕನ್ನಡದ ಸಾಹಿತಿಯೊಬ್ಬನನ್ನು ಕೇಳಿದಾಗ ಅದರ ಅಂದರೆ ಕನ್ನಡ ಭಾಷೆಯ ಮೇಲಿರುವ ಅವನ ನಿಷ್ಠೆಯು ಅದರ ಬಗ್ಗೆ ಯೋಚಿಸುವ ಪ್ರಯತ್ನವನ್ನೇ ಮಾಡಿಲ್ಲ. ಅಲ್ಲದೇ ಇಂತಹ ಹೇಳಿಕೆಗಳು ಮೇಲ್ಮೈ ಹೇಳಿಕೆಗಳಾಗಿರುತ್ತವೆ ಎನ್ನುವ ಉದಾಸೀನ ಭಾವವನ್ನು ಕತೆಯಲ್ಲಿ ವ್ಯಕ್ತಪಡಿಸಿದಂತಿದೆ. ಒಟ್ಟಿನಲ್ಲಿ ಭಾಷೆಯ ಕುರಿತಾದ ಹಲವಾರು ಚರ್ಚೆಯನ್ನು ಕತೆಯಲ್ಲಿ ಭೂಮಿಕಾ ಪಾತ್ರದ ಮೂಲಕ ಮಾಡಿರುವುದನ್ನು ನೋಡಬಹುದು.

೪.೩.೨ ಶಿಕ್ಷಣ

ಶಿಕ್ಷಣ ಎನ್ನುವುದು ಹೇಗೆ ಇಂಗ್ಲೀಷ್ ಎಂಬ ವಾಣಿಜ್ಯ ಭಾಷೆಗೆ ತೆರೆದುಕೊಂಡಿದೆ ಎನ್ನುವುದನ್ನು ಜಯಂತ್ ಕಾಯ್ಕಿಣಿ ಅವರ 'ತೂಫಾನ್ ಮೇಲ್' ಎನ್ನುವ ಕತೆಯಲ್ಲಿ ಮಧುವಂತಿಯ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಇಂದಿನ ನಗರೀಕರಣ ವ್ಯವಸ್ಥೆಯಲ್ಲಿ ಇರುವ ಕುಟುಂಬದಲ್ಲಿ ಗಂಡ-ಹೆಂಡತಿರಿಬ್ಬರೂ ಹೊರಗೆ ದುಡಿಯುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಇಂದಿನ ದಿನಗಳಲ್ಲಿ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯೂ ಒಂದು ಕಾರಣವನ್ನಾಗಿ ಗುರುತಿಸಬಹುದಾಗಿದೆ.

ಕತೆಯಲ್ಲಿ ಬರುವ ಮಧುವಂತಿ ಮತ್ತು ಆತನ ಗಂಡ ಬಲದೇವ ಇಬ್ಬರದೂ ನಗರಜೀವನ ವ್ಯವಸ್ಥೆಯಲ್ಲಿ ಬದುಕುತ್ತಿರುವ ಕುಟುಂಬ ಜೀವನ. ಇವರೀರ್ವರು ಹೊರಗೆ ದುಡಿದು ಜೀವನವನ್ನು ನಿರ್ವಹಣೆ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಇವರದ್ದು. ಇಂದು ಇಂಗ್ಲೀಷ್ ಭಾಷೆಯೂ ಹೇಗೆ ವ್ಯಾಪಾರ, ವ್ಯವಹಾರದ ವಾಣಿಜ್ಯ ಭಾಷೆಯಾಗಿ ರೂಪುಗೊಳ್ಳುವ ಮೂಲಕ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ ನೀಡಲೇಬೇಕು ಎನ್ನುವ ಉದ್ದೇಶವನ್ನು ಹೊಂದಿದೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇಂಗ್ಲೀಷ್ ಮಾಧ್ಯಮ ಶಾಲೆಗೆ ಕಳುಹಿಸಲೇಬೇಕೆಂಬ ಹಂಬಲದಿಂದ ಕುಟುಂಬವೊಂದು ತಮ್ಮ ವೈಯಕ್ತಿಕ ಜೀವನವನ್ನು ಹಾಳುಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕತೆಯು ಚಿತ್ರಿತವಾಗಿದೆ. ಮಧುವಂತಿಯು "ಎಲ್ಲಿತನಕ ಅಲ್ಲಾಡ್ಲೋಕೆ ಆಗುತ್ತೋ ಅಲ್ಲೀತನಕ ನಡೀಲಿ. ಊಟಿಗೀಟಿ ಔಟ್‌ಡೋರ್ ಇದ್ರೂ ಈಗ ರೆಡಿ ನಾನು. ಬಲದೇವ ಮನೆ ನೋಡ್ಕೋಳ್ಳಲಿ. ಸೋನಿಗೆ ಇಂಗ್ಲೀಷ್ ಮೀಡಿಯಂಗೆ ಹಾಕಬೇಕು"[೬೬] ಎನ್ನುವ ಮಾತುಗಳು ಇಂಗ್ಲೀಷ್ ಮಾಧ್ಯಮವೂ ಇಂದು ಶಿಕ್ಷಣ ವ್ಯವಸ್ಥೆಯಲ್ಲಿ ಬೀರುತ್ತಿರುವ ಪ್ರಭಾವವನ್ನು ತಿಳಿಸುತ್ತಿದೆ. ಮುಂಬೈ ಜೀವನದಲ್ಲಿ ನೆಡೆಯುತ್ತಿರುವ ಈ ಕತೆಯು ಮುಖ್ಯವಾಗಿ ದೇಶೀಯ ಭಾಷೆಗಳನ್ನು ಇಂಗ್ಲೀಷ್ ಭಾಷೆಯ ಶಿಕ್ಷಣ ಕ್ರಮವು ದುರ್ಬಲಗೊಳಿಸುತ್ತಿರುವುದನ್ನು ತಿಳಿಸುತ್ತದೆ.

ಅಲ್ಲದೇ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳನ್ನು ಮಾನದಂಡ ಮಾಡಿಕೊಂಡು ಅದನ್ನೇ ಮುಖ್ಯವಾಗಿ ಪರಿಗಣಿಸಲಾಗುತ್ತಿದೆ. ಅಲ್ಲದೇ ಶಿಕ್ಷಣವನ್ನು ಖಾಸಗೀಕರಣ ಮಾಡಲಾಗಿರುವ ಹಿನ್ನೆಲೆಯಲ್ಲಿ ಶಿಕ್ಷಣವು ಔದ್ಯೋಗಿಕ ವಲಯವಾಗಿ ರೂಪುಗೊಳ್ಳುತ್ತಿದೆ ಎನ್ನುವುದನ್ನು ವಿವೇಕ ಶಾನಭಾಗ ಅವರ 'ಕೆಲವು ತತ್ವಗಳ ಸಲುವಾಗಿ' ಎಂಬ ಕತೆಯಲ್ಲಿ ಚಿತ್ರಿಸಲಾಗಿದೆ. ಶಿಕ್ಷಣದ ಬಗ್ಗೆ ಜನರಲ್ಲಿರುವ ಅನೇಕ ನಂಬಿಕೆಗಳು ಇಂದಿನ ಜಾಗತೀಕರಣದ ದಿನಗಳಲ್ಲಿ ಪಲ್ಲಟಗೊಂಡಿವೆ ಎನ್ನುವ ಅಂಶಗಳನ್ನು ಕತೆಯ ಮುಖ್ಯ ಪಾತ್ರವಾದ ಘನಶ್ಯಾಮನ ಮೂಲಕ ಚಿತ್ರಿಸಲಾಗಿದೆ. ಘನಶ್ಯಾಮನ ಮೂಲಕ ಇಡೀ ಶಿಕ್ಷಣ ವ್ಯವಸ್ಥೆಯು ಬಡವರಿಗೆ ದೂರದ ಬೆಟ್ಟವಾಗಿ ಪರಿಣಮಿಸಿದೆ; ಅಲ್ಲದೇ ವಿಜ್ಞಾನ ವಿಷಯವೂ ಶಿಕ್ಷಣ ವಲಯದಲ್ಲಿ ತನ್ನ ಪ್ರಭಾವವನ್ನು ಬೀರುತ್ತಾ ಉಳಿದ ಜ್ಞಾನಶಿಸ್ತುಗಳನ್ನು ಅಂಚಿಗೆ ತಳ್ಳಲ್ಪಡುತ್ತಿದೆ ಎನ್ನುವುದನ್ನು ತಿಳಿಸಲಾಗಿದೆ.

ಘನಶ್ಯಾಮನ ಅಪ್ಪನ ಮಾತುಗಳಲ್ಲಿ ಶಿಕ್ಷಣವೆಂಬುದು ಬಡವರ, ದಲಿತರ, ಅಲ್ಪಸಂಖ್ಯಾತರ ಪಾಲಿಗೆ ಮುಖ್ಯವಾಗಿದೆ ಎಂಬುದನ್ನು ಹೀಗೆ ಚಿತ್ರಿಸಲಾಗಿದೆ. ಶಿಕ್ಷಣ ಎಷ್ಟು ಮುಖ್ಯ ಎಂದರೆ ಘನಶ್ಯಾಮನಿಗೆ "ಅವನ ಅಪ್ಪನಿಂದ ಶುರುಮಾಡಿ ಎಲ್ಲರ ಒತ್ತಾಯ ಎಷ್ಟಾಯಿತೆಂದರೆ ಇದಲ್ಲದೇ ಬೇರೆ ಯಾವ ದಾರಿಯೂ ಇಲ್ಲವೇನೋ ಎಂಬಂತಾಗಿತ್ತು. ನಮಗೆಲ್ಲಾ ಶಿಕ್ಷಣವೇ ಆಸ್ತಿ ಎಂಬ ಧಮಕಿಯ ಮಾತುಗಳು ಅವನಲ್ಲಿ ಹುಟ್ಟಿಸಿದ ರೇಜಿಗೆಯನ್ನವನು ಯಾರಿಗೂ ಹೇಳಲಾರ"[೪೭] ಅಂದರೆ ಶಿಕ್ಷಣವು ಎಲ್ಲರ ಏಳ್ಗೆಗಾಗಿ ಎನ್ನುವ ಕಲ್ಪನೆಯನ್ನು ಈ ಮೂಲಕ ತಿಳಿಸಲಾಗಿದೆ.

ಕತೆಯಲ್ಲಿ ಘನಶ್ಯಾಮನು ಯೋಚಿಸುವ ರೀತಿ ಇದಾಗಿದೆ. ಕೇವಲ ಶಿಕ್ಷಣವನ್ನು ಕಲಿತರೆ ಸಾಕೇನು? ಇದರಲ್ಲಿ ನಡೆಯುವ ಅಂಕಗಳ ಮೂಲಕ ಮುಂದೆ ನಾನು ಏನನ್ನು ಓದಬೇಕು ಎಂಬ ನಿರ್ಣಯವನ್ನು ಮಾಡುವುದರ ಜೊತೆಗೆ ಅಷ್ಟೇ ಪ್ರಮಾಣದಲ್ಲಿ ಸ್ಪರ್ಧೆಯನ್ನು ಇದು ಉಂಟುಮಾಡುತ್ತದೆ. "ಅಷ್ಟೇ ಆಯಿತೇನು? ಇದೀಗ ಶುರುವಾಗಿದೆ. ಅಷ್ಟೇ. ಈವತ್ತಿನ ಕಾಲದಲ್ಲಿ ಎಷ್ಟೊಂದು ಸ್ಪರ್ಧೆ. ಎಷ್ಟು ತಗೊಂಡರೂ ಸಾಲದು. ನಮಗೇನು ಆಸ್ತಿಯೇ ಪಾಸ್ತಿಯೇ ಜಾತಿಯೇ? ಇರುವುದು ವಿದ್ಯೆಯೊಂದೆ ಎಂದೆಲ್ಲ ಮಾತಾಡಿಕೊಳ್ಳುತ್ತಿದ್ದರು."[೪೮] ಇಲ್ಲಿ ಮುಖ್ಯವಾಗಿ ಶಿಕ್ಷಣದಿಂದ ಏಳ್ಗೆ ಸಾಧ್ಯ ಎನ್ನುವುದನ್ನು ನಂಬಿರುವ ಘನಶ್ಯಾಮನ ಅಪ್ಪ ಮತ್ತು ಇನ್ನಿತರರು ಇಂದಿನ ದಿನಗಳಲ್ಲಿ ನಡೆಯುತ್ತಿರುವ ರಾಜಕೀಯವನ್ನು ಜಾತಿ ಮತ್ತು ಸಂಪತ್ತಿನ ಮೂಲಕ ಚರ್ಚಿಸುತ್ತಾರೆ. ಏನೂ ಇಲ್ಲದವರೂ

ಕೂಡಾ ಇಂದು ಶಿಕ್ಷಣವನ್ನೇ ನಂಬಿಕೊಂಡು ಬದುಕುತ್ತಿರುವ ಈ ಹೊತ್ತಿನಲ್ಲೊ ಜಾಗತೀಕರಣದಿಂದ ಶಿಕ್ಷಣದ ಕ್ಷೇತ್ರದಲ್ಲಿ ಆಗುತ್ತಿರುವ ಅನೇಕ ಪಲ್ಲಟಗಳನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

ಘನಶ್ಯಾಮನು ಎಸ್.ಎಸ್.ಎಲ್.ಸಿ.ಯಲ್ಲಿ ಫಸ್ಟ್‌ಕ್ಲಾಸ್ ಬಂದು ಅವನಿಗೆ ೬೦% ಅಂಕಗಳು ಬಂದಿವೆ. ಆದರೆ ಅವನು ಕಾಲೇಜಿಗೆ ಸೇರಲು ಹೋದಾಗ ೯೨% ಅಂಕಗಳು ಬಂದಿದ್ದರೆ ಮಾತ್ರ ವಿಜ್ಞಾನ ವಿಷಯಕ್ಕೆ ಸೀಟ್ ಸಿಗುವುದು ಎಂದು ಕಾಲೇಜಿನಲ್ಲಿ ತಿಳಿಸಲಾಗುತ್ತದೆ. ಅವನ ಆಸೆ–ಆಕಾಂಕ್ಷೆಗೆ ವಿರುದ್ಧವಾಗಿ ಅವನನ್ನು ವಿಜ್ಞಾನ ವಿಷಯ ತೆಗೆದುಕೊಳ್ಳಬೇಕು ಎನ್ನುವ ತಂದೆಯ ಹಂಬಲ ಅವನನ್ನು ಕಲಾ ವಿಭಾಗಕ್ಕೆ ಸೇರಬೇಕು ಎನ್ನುವ ಆಸೆಯನ್ನು ಇನ್ನೂ ಹೆಚ್ಚಾಗುವಂತೆ ಮಾಡುತ್ತದೆ. "ಮೂವತ್ತೈದು ಪರ್ಸೆಂಟಿನ ಯಾವ ಗೊಂದಲವೂ ಇಲ್ಲದೇ ಆರ್ಟ್ಸ್‌ಗೆ ಸೇರಬಹುದಿತ್ತು. ಯಶಸ್ಸಿಲ್ಲದಿದ್ದರೆ ಆಯ್ಕೆಯ ಸಂಕಟಗಳಿರುತ್ತಿರಲಿಲ್ಲ."[೪೯] ಎನ್ನುವುದು ಇಂದಿನ ಶಿಕ್ಷಣದ ಕುರಿತು ಘನಶ್ಯಾಮನಿಗಿರುವ ಅಭಿಪ್ರಾಯವಾಗಿತ್ತು.

ಅಲ್ಲದೇ ಶಿಕ್ಷಣವನ್ನು ಕುರಿತು ತಂದೆಗಿರುವ ಅಭಿಪ್ರಾಯವನ್ನು ಕಾಲದ ಅಂತರವನ್ನಿಟ್ಟು ಇಲ್ಲಿ ಆಲೋಚಿಸಬೇಕಾದ ಅನಿವಾರ್ಯತೆಯಿದೆ. ಏಕೆಂದರೆ ಕತೆಯಲ್ಲಿ ತಂದೆಯು ಇಂದಿನ ದಿನಗಳಲ್ಲಿ ಶಿಕ್ಷಣವು ನಿರೂಪಿಸುತ್ತಿರುವ ಅಂತರವನ್ನು ಕಂಡುಕೊಳ್ಳದ ಶ್ಯಾಮನ ತಂದೆಗೆ "ಫಸ್ಟ್‌ಕ್ಲಾಸ್ ಬಂದ ಮಗನನ್ನು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಾರೆಂದು ಭಾವಿಸಿದ ಅವನ ಅಪ್ಪನಿಗೆ ಇದೆಲ್ಲ ಗೊತ್ತೇ ಇರಲಿಲ್ಲ. ಅವರ ಕಾಲದಲ್ಲಿ ಫಸ್ಟ್‌ಕ್ಲಾಸ್ ಅಂದರೆ ಮುಂದಿನ ಜೀವನ ಸಂಗಮವಾಯಿತೆಂದೇ ಅರ್ಥ."[೫೦] ಎನ್ನುವ ಸೂಚ್ಯ ಅರ್ಥವು ಶಿಕ್ಷಣದಲ್ಲಿ ಆಗುತ್ತಿರುವ ಪಲ್ಲಟಗಳನ್ನು ಕುರಿತದ್ದಾಗಿದೆ. ಇಂದಿನ ವರ್ತಮಾನದಲ್ಲಿ ಕಾಲೇಜುಗಳ ಸೇರುವಿಕೆಯಲ್ಲಿ ಆಗುತ್ತಿರುವ ಮಾನಸಿಕ ಹಿಂಸೆ ಮತ್ತು ಕಾಲೇಜು ಮಂಡಳಿಗಳ ವರ್ತನೆಗಳನ್ನು ಕತೆಯು ಬಿಚ್ಚಿಡುತ್ತಿದೆ.

ಕಾಲೇಜಿಗೆ ಸೇರುವಾಗ ನಡೆದ ಎಲ್ಲಾ ಘಟನೆಗಳು ಶ್ಯಾಮನ ಮನಸ್ಸಿನಲ್ಲಿ ವಿಜ್ಞಾನ ವಿಷಯದ ಬಗ್ಗೆ ತಾತ್ಸಾರ ಮೂಡಿಸಿದ್ದವು. ತನ್ನ ಓದಿಗೆ ಸಿಗದಿದ್ದ ವಿಜ್ಞಾನ ಸೀಟು ತಂದೆಯ ಸ್ನೇಹಿತರೊಬ್ಬರು ಹೇಳಿದಾಗ ಅವನಿಗೆ ಆ ಸೀಟು ದೊರಕಿತ್ತು. ಆದರೆ ಅವನು ಸರಿಯಾಗಿ ಕಾಲೇಜಿಗೆ ಹೋಗದೆ ಹೊರಗೆ ಉಳಿಯತೊಡಗಿದ. ಅವನಿಗೆ ಪರೀಕ್ಷೆಯಲ್ಲಿ ಫೇಲಾಗುವ ಭಯದಿಂದ ವಿಜ್ಞಾನದ ವಿಷಯಗಳು ಸುಲಭವಾಗಿ

ಅರ್ಥವಾಗದದ್ದರಿಂದ ಅವನು ಕಲಾವಿಭಾಗಕ್ಕೆ ತನ್ನನ್ನು ಬದಲಾಯಿಸಿಕೊಂಡ. ಅವನಿಗೆ ಕೆಲವರು ಟ್ಯೂಶನ್‌ಗೆ ಹೋಗುವಂತೆ ಸಲಹೆಯನ್ನು ನೀಡಿದರೂ ಅವನಿಗೆ ಆ ವಿಷಯದ ಮೇಲೆ ಆಸಕ್ತಿ ಉಳಿದಿರಲಿಲ್ಲ.

ಇಂತಹ ಒತ್ತಾಯದ ಶಿಕ್ಷಣ ಕ್ರಮಗಳು, ಶಿಕ್ಷಣದಲ್ಲಿ ಅಂಕಗಳು ಅದರ ಮೇಲೆ ನೆಡೆಯುತ್ತಿರುವ ಸೀಟುಗಳ ಹಂಚಿಕೆ, ಅಂಕಗಳೇ ವಿದ್ಯಾರ್ಥಿಯನ್ನು ಅವನ ಓದನ್ನು ನಿರ್ಣಯಿಸುವ ಹಂತಕ್ಕೆ ತಲುಪಿರುವುದು. ವಿಜ್ಞಾನದ ವಿಷಯಕ್ಕೆ ಇರುವಷ್ಟು ಸ್ಪರ್ಧೆ ಕಲಾ ವಿಭಾಗಕ್ಕೆ ಇಲ್ಲದಿರುವುದು ಇಂದಿನ ವರ್ತಮಾನಗಳಲ್ಲಿ ಕಾಣುತ್ತಿರುವ ಮುಖ್ಯವಾದ ಶಿಕ್ಷಣದ ಮೇಲಿನ ಜಾಗತೀಕರಣದ ಒಂದು ನೆಲೆಯಾದರೆ; ಮತ್ತೊಂದು ಶಿಕ್ಷಣ ಇರುವುದು ಬದುಕನ್ನು ರೂಪಿಸಿಕೊಳ್ಳಲು, ಸುಶಿಕ್ಷಿತರಾಗಲು ಎನ್ನುವ ಆಲೋಚನೆಗಳನ್ನು ದೂರತಳ್ಳಿವೆ. ಇದೇ ಹೊತ್ತಿನಲ್ಲಿ ಶಿಕ್ಷಣವು ಜೀವನದಲ್ಲಿ ಉದ್ಯೋಗವನ್ನು ನೀಡುವ ಆ ಮೂಲಕ ಜೀವನಕ್ಕೆ ಶಿಕ್ಷಣವು ಆಧಾರವಾಗಿರುವ ನೆಲೆಯನ್ನು ಈ ಮೂಲಕ ತಿಳಿಸುತ್ತಿದೆ. ಅಲ್ಲದೇ ವಿಜ್ಞಾನವನ್ನು ಇಂದು ಹೆಚ್ಚು ಚಾಲ್ತಿಗೆ ತರುವುದರ ಮೂಲಕ ಉಳಿದ ಜ್ಞಾನಶಿಸ್ತುಗಳನ್ನು ಕಡೆಗಣಿಸಿರುವುದನ್ನು ಈ ಕತೆಯ ಮೂಲಕ ಗ್ರಹಿಸಲಾಗಿದೆ.

ಇದೇ ರೀತಿಯ ಇನ್ನೊಂದು ಪರಿಸ್ಥಿತಿಯನ್ನು ಹನುಮಂತ ಹಾಲಿಗೇರಿ ಅವರ 'ಕರ್ಕಿ ಬೇರು' ಎನ್ನುವ ಕತೆಯಲ್ಲಿ ಶಿಕ್ಷಣವನ್ನು ಕುರಿತಾದ ಧೋರಣೆಯನ್ನು ಕಾಣಬಹುದಾಗಿದೆ. ತುಳಸಮ್ಮನ ಮಗಳು ಸ್ಲಂನ ಹುಡುಗಿಯರೊಂದಿಗೆ ಹೋಗಿ ಬಸುರಿಯಾಗಿ ಬಂದಿದ್ದಳು. ಅವಳ ಹೊಟ್ಟೆ ಮುಂದೆ ಬಲೂನಿನ ತರಹ ಊದಿಕೊಂಡು ಮೂರು ನಾಲ್ಕು ತಿಂಗಳಿಂದ ಹೊರಗಾಗದಿರುವುದು ತುಳಸಿ ಗಮನಕ್ಕೆ ಬಂದಿರಲಿಲ್ಲ. ರೇಣುಕಾಂಬಾ ಮತ್ತು ಹನುಮಪ್ಪ ಎಂಬ ಎರಡು ಅವಳಿ-ಜವಳಿ ಧಿಕ್ಕಿಲ್ಲದ ಮಕ್ಕಳನ್ನು ಹೆತ್ತಳು.

ಈ ಮಕ್ಕಳನ್ನು ಸಾಕಲು ಮತ್ತು ಅವರ ಶಿಕ್ಷಣವನ್ನು ಮಾದೇವಿ ಮತ್ತು ತುಳಸಮ್ಮನವರು ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸಬೇಕೆಂದು ಹೆಣಗಾಡುವ ಮತ್ತು ತನ್ನ ದೇಹವನ್ನು ಒಡ್ಡಿಕೊಂಡು ಮಕ್ಕಳನ್ನು ಸಾಕುವುದಷ್ಟೇ ಅಲ್ಲದೇ ಅವರನ್ನು ಕಾನ್ವೆಂಟ್‌ಗೆ ಸೇರಿಸಬೇಕೆನ್ನುವ ಹಂಬಲ ಇಂದಿನ ವರ್ತಮಾನದಲ್ಲಿ ಶಿಕ್ಷಣ ವ್ಯವಸ್ಥೆಯು ರೂಪುಗೊಳ್ಳುತ್ತಿರುವ ಬಗೆಯನ್ನು ಕುರಿತು ಕತೆಯಲ್ಲಿ ಚಿತ್ರಿಸಿದೆ. ಮಾದೇವಿಯೂ ಇದೇ ವೃತ್ತಿಯಲ್ಲಿ ಸತ್ತ ನಂತರ ಅವರನ್ನು ನೋಡಿಕೊಳ್ಳುವ ಸ್ಥಿತಿಯು ತುಳಸಮ್ಮನ ಮೇಲೆ ಬೀಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅವಳು ಮಕ್ಕಳನ್ನು ಸಾಕಲು ಬದಲಾದ ಪರಿಸರದಲ್ಲಿ ಮೊಮ್ಮಕ್ಕಳ ಸಾಲಿ

ಖರ್ಚನ್ನು ಭರಿಸಲು ಅವಳೂ ಸಹ ಮಗಳ ಮಾದೇವಿಯ ವೃತ್ತಿಯನ್ನು ಅನುಸರಿಸುವುದನ್ನು ನೋಡಿದಾಗ ಬಡತನದ ಕ್ರೌರ್ಯತೆಯು ಅರಿವಿಗೆ ಬರುತ್ತದೆ. ಅಂದರೆ ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರಿ ಶಾಲೆಗಳನ್ನು ಹಿಂದೆ ಮಾಡಿ ಬಂಡವಾಳಶಾಹಿ ವ್ಯವಸ್ಥೆಯು ಮಾಡುತ್ತಿರುವ ಇಂತಹ ಕಾನ್ವೆಂಟ್‌ನ ಸಂಸ್ಕೃತಿಗಾಗಿ ಬಡವರು, ನಿರ್ಗತಿಕರು ಕಷ್ಟಪಡುವ ಪರಿಸ್ಥಿತಿಯನ್ನು ವಿವರಿಸುತ್ತದೆ.

ಇಂದಿನ ಶಿಕ್ಷಣ ವ್ಯವಸ್ಥೆಯು ಇಂತಹ ಜಾಗತೀಕರಣದ ನೀತಿಗಳಿಂದ ಯುವಕರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿದೆ ಎನ್ನುವುದನ್ನು ಎಂ.ಎಸ್.ವೇದಾ ಅವರ 'ಪಾಲು' ಕತೆಯಲ್ಲಿ ಚಿತ್ರಿಸಲಾಗಿದೆ. ತಾಯವ್ವನ ಮಗ ಸಿದ್ಲಿಂಗು(ವಕ್ಕಣ್ಣ)ನಿಗೆ ಶಾಲೆಯಲ್ಲಿ ಮೇಸ್ಟ್ರು ವಕ್ಕಣ್ಣ ಎಂದು ಕರೆದಾಗ ತಾಯವ್ವ ಆಡುವ ಮಾತುಗಳು ಶಿಕ್ಷಣ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಶಿಕ್ಷಕರಾದವರು ಮಕ್ಕಳನ್ನು ಹೀಗೆ ಹೀಗಳೆಯುವ ರೀತಿಯನ್ನು ಕಂಡಾಗ ತಾಯವ್ವಳಿಗೆ ಶಿಕ್ಷಣ ವ್ಯವಸ್ಥೆಯ ಕುರಿತಾದ ಅಭಿಪ್ರಾಯವನ್ನು ತಿಳಿಸುತ್ತಾಳೆ.

ಮಗ ಸಿದ್ಲಿಂಗುವಿಗೆ ಕಣ್ಣಿನ ಸಮಸ್ಯೆ ಇದ್ದದ್ದರಿಂದ ಅವನನ್ನು ಎಲ್ಲರೂ ವಕ್ಕಣ್ಣ ಎಂದು ಹುಡುಗರೆಲ್ಲ ಅವನನ್ನು ರೇಗಿಸುತ್ತಿದ್ದರು. ಇದನ್ನು ಕಂಡ ಮೇಸ್ಟ್ರು ಕೂಡ ಅವನನ್ನು ಹೀಗೆ ಕರೆದಾಗ ತಾಯವ್ವ ಮಗನಿಗೆ ಹೀಗೆ ಬುದ್ಧಿವಾದ ಮಾಡಿದಳು. "ತಕ್ಕಾ ಕೂಸು ವಾದ್‌ಬುಟ್ರೆ ನಿಂಗೇನ್ ದಿವಾನ್‌ಗಿರಿ ಕಾದಿದ್ದದಾ? ನಾ ಮೈಸೂರ್ನಾಗೆ ನೋಡಿಲ್ಲವಾ ಬೀಯೇ ವಾದಿರೋರೆಲ್ಲಾ ಬೀದೀಲಿ ನಿಂತಿರಾದಾ, ಯೆಮ್ಮೆ ವಾದ್ದೋರೆಲ್ಲಾ ಯೆಮ್ಮೆ ಕಾಯ್ತಿರಾದಾ.... ನೀ ಯೆಮ್ಮೆ ವಾದ್ಕಂಡು ಯೆಮ್ಮೆ ಕಾಯಾದ್ಯಾಕೆ. ಈಗ್ಲೆ ಯೆಮ್ಮೆ ಕಾಯ್ಯಾಕ ಅನ್ನುಕ್ ವಂದ್ ದಾರಿ ಆಯ್ತದೆ."[೫೧] ಎಂದು ಮಗನಿಗೆ ತಾಯವ್ವ ಸಮಾಧಾನ ಮಾಡಿದ್ದಳು.

ಇಂದಿನ ಶಿಕ್ಷಣ ವ್ಯವಸ್ಥೆಯ ದುರವಸ್ಥೆಯನ್ನು ತಾಯವ್ವನು ಮಾರ್ಮಿಕವಾಗಿ ಹೇಳುತ್ತಿದ್ದಾಳೆ. ಇಂದು ಶಿಕ್ಷಣವು ಮಕ್ಕಳಿಗೆ ಜ್ಞಾನವನ್ನು ನೀಡುತ್ತಿರುವುದು ಸರಿಯಷ್ಟೇ. ಅದರ ಪರಿಣಾಮ ಮಕ್ಕಳು ಇಂದು ವಿದ್ಯಾವಂತರಾದರೂ ಅವರಿಗೆ ಉದ್ಯೋಗವಿಲ್ಲದೇ ನಿರುದ್ಯೋಗದಿಂದ ಬಳಲುತ್ತಿರುವುದನ್ನು ತಾಯವ್ವನ ಪಾತ್ರ ಸೂಕ್ಷ್ಮವಾಗಿ ವಿವರಿಸುತ್ತಿದೆ. ಅಲ್ಲದೇ ಮಕ್ಕಳು ಇಂದು ಶಿಕ್ಷಣದ ಕಾರಣಕ್ಕಾಗಿ ಬೇರೆ ಕೆಲಸಗಳನ್ನು ಕಲಿಯದೇ ಅರುವ ಪರಿಣಾಮ ಅವರು ಇಂದು ಯಾವ ಕೆಲಸವನ್ನೂ ಮಾಡಲಾರದೇ ನಿರುದ್ಯೋಗಿಗಳಾಗುತ್ತಿರುವ ಸ್ಥಿತಿಯನ್ನು ಕತೆಯು ವಿವರಿಸುತ್ತಿದೆ.

೪.೪ ರಾಜಕೀಯ ನೆಲೆ

ರಾಜಕೀಯ ಅಂಶಗಳು ತರುವ ಅನೇಕ ನೀತಿ–ನಿಯಮಗಳು ಸಮಾಜದ ಮೇಲೆ ಪರಿಣಾಮಗಳನ್ನು ಬೀರುತ್ತಿರುವುದನ್ನು ನೋಡಬಹುದು. ಭಾರತದ ಸಂದರ್ಭದಲ್ಲಿ ಜಾರಿಗೆ ಬಂದತಂಹ ಕೈಗಾರೀಕರಣ ನೀತಿಗಳು ಹದಿನೆಂಟನೇ ಶತಮಾನದಲ್ಲಿ ತಂದ ಅನೇಕ ನಿಯಮಗಳು ಸಮಾಜದಲ್ಲಿ ಅನೇಕ ಪರಿಣಾಮಗಳನ್ನು ಬೀರಿದವು. ರಾಜಕೀಯ ನಿರ್ಧಾರಗಳು ಸಮಾಜದಲ್ಲಿರುವ ಜನರ ಮೇಲೆ ಬೀರುತ್ತಿರುವ ಅನೇಕ ಪರಿಣಾಮಗಳು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೂ ಪ್ರಭಾವವನ್ನು ಬೀರುತ್ತವೆ. ಕೈಗಾರೀಕರಣದಿಂದ ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳು ಆದರೂ ನಮ್ಮ ಶಿಕ್ಷಣ, ಕುಟುಂಬ ಇನ್ನಿತರ ಕ್ಷೇತ್ರಗಳ ಮೇಲೆ ಪ್ರಭಾವವನ್ನು ಬೀರಿದ್ದನ್ನು ಅದರ ಪರಿಣಾಮಗಳಾಗಿ ಅವಿಭಕ್ತ ಕುಟುಂಬ ಅಂತ್ಯವಾಗುತ್ತಿರುವುದು, ಇಂಗ್ಲೀಷ್ ಶಿಕ್ಷಣವನ್ನು ಜಾರಿಗೆ ತಂದದ್ದು, ಅನೇಕ ಆರ್ಥಿಕ ಅಂಶಗಳನ್ನು ಜಾರಿಗೆ ತರುವಲ್ಲಿ ರಾಜಕೀಯ ಅಂಶಗಳು ಮುಖ್ಯ ಪಾತ್ರ ವಹಿಸಿವೆ.

ಆದರೆ ಜಾಗತೀಕರಣವನ್ನು ಜಾರಿಗೆ ತಂದ ನಂತರದಲ್ಲಿ ಪ್ರಭುತ್ವವು ತನ್ನ ನೆಲೆಯನ್ನು ಅನೇಕ ಕಾರಣಗಳಿಗೆ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿದ್ದನ್ನು ನೋಡಬಹುದು. ಪ್ರಭುತ್ವವು ಯಜಮಾನಿಕೆಯ ಅಂಶಗಳನ್ನು ಹೊಂದಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತಿರುವುದನ್ನು ಕಾಣಬಹುದು. "ಆಧುನಿಕ ಪೂರ್ವದಲ್ಲಿನ ಸಮಾಜದಲ್ಲಿ ಪ್ರಭುತ್ವದ ರಚನೆಯಾಗಿರಲಿಲ್ಲ. ಆದರೆ ನಂತರದ ಕಾಲಗಳಲ್ಲಿ ರೂಪಿತವಾದ ಪ್ರಭುತ್ವ ವ್ಯವಸ್ಥೆಗಳಲ್ಲಿ ರಾಜಕೀಯ ಧ್ರುವೀಕರಣ, ಅಧಿಕಾರದ ಶ್ರೇಣೀಕರಣ, ಸಾಮಾಜಿಕ ಅಸಮಾನತೆಗಳ ವ್ಯವಸ್ಥೀಕರಣ, ವೈಚಾರಿಕ ನಿಲುವುಗಳ ವಿಶಿಷ್ಟೀಕರಣ ಇನ್ನೂ ಹೆಚ್ಚುತ್ತಾ ಬಂದಿವೆ. ಪ್ರಭುತ್ವದ ಸಂಕೀರ್ಣತೆ ಹೆಚ್ಚಿದಂತೆ ಇವುಗಳ ಸಂಕೀರ್ಣತೆಯೂ ಹೆಚ್ಚುತ್ತದೆ."[೫೨] ಎಂದು ಎಚ್.ಎಸ್.ಶಿವಪ್ರಕಾಶ್ ಅವರು ಪ್ರಭುತ್ವವನ್ನು ವ್ಯಾಖ್ಯಾನಿಸುತ್ತಾರೆ.

ಜಾಗತೀಕರಣದ ನಂತರದಲ್ಲಿ ಸರ್ಕಾರವು ಒಪ್ಪಿಕೊಂಡ ಅನೇಕ ಒಪ್ಪಂದಗಳು ಅನಿವಾರ್ಯವಾಗಿ ಬಂಡವಾಳಶಾಹಿಗಳನ್ನು ರಾಜಕೀಯದೊಳಗೆ ಪ್ರವೇಶ ಪಡೆಯುವಂತೆ ಮಾಡಿದೆ. ಯಾವುದೇ ಜನಪರ ನೀತಿಯನ್ನು ತರುವಾಗ ಅದಕ್ಕೆ ಬಂಡವಾಳಶಾಹಿಯು ಅಡ್ಡಗಾಲು ಹಾಕುತ್ತಿರುವುದನ್ನು ಕಾಣಬಹುದು. ಅಲ್ಲದೇ ಸರ್ಕಾರವು ತರುವ ಅನೇಕ ಯೋಜನೆಗಳು ಜನರ ಪರವಾಗಿ ಇರದಿದ್ದರೂ ಬಂಡವಾಳಶಾಹಿಗಳ ಹಿನ್ನೆಲೆಯಲ್ಲಿ ಅದನ್ನು ಜಾರಿ ಮಾಡಬೇಕಾದ ಸ್ಥಿತಿಯನ್ನು ಕನ್ನಡ ಕತೆಗಳಲ್ಲಿ ಚಿತ್ರಿಸಲಾಗಿದೆ. ಈ

ಸರ್ಕಾರದ ಯೋಜನೆಗಳಿಂದ ಆಗುತ್ತಿರುವ ಅನೇಕ ದುಷ್ಪರಿಣಾಮಗಳು ಇಂದು ಜನರ ಜೀವನ ವಿಧಾನ, ಸಂಸ್ಕೃತಿ, ಭಾಷೆ, ಕಲೆ, ಸಾಹಿತ್ಯದ ಮೇಲೂ ಪರಿಣಾಮ ಬೀರುತ್ತಿರುವುದನ್ನು ಕತೆಗಳಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೇ ಪ್ರಭುತ್ವವು ಬಂಡವಾಳಶಾಹಿಗಳ ಹುನ್ನಾರದಂತೆ ನಡೆಸುಕೊಳ್ಳುವ ಮೂಲಕ ಜನರ ಜೀವನವನ್ನು ಹಾಳುಗೆಡವುತ್ತಿರುವುದನ್ನು ಕತೆಗಳಲ್ಲಿ ವಿಶ್ಲೇಷಿಸಲಾಗಿದೆ.

೧. ಸರ್ಕಾರದ ಯೋಜನೆಗಳು

ಸಮಾಜವು ಮುಂದುವರೆಯುತ್ತಾ ಹೋದಂತೆ ಜನರಿಗೆ ಸವಲತ್ತುಗಳು ಹೆಚ್ಚಾಗಿ ಬೇಕಾಗುತ್ತವೆ. ಅಲ್ಲದೇ ಜನರಿಗೆ ಮೂಲಭೂತ ಅವಶ್ಯಕಗಳಾದ ರಸ್ತೆ, ಸಾರಿಗೆ, ನೀರಿನ ವ್ಯವಸ್ಥೆ ಮುಂತಾದವುಗಳನ್ನು ನೀಡಲು ಸರ್ಕಾರಗಳು ಅನೇಕ ಯೋಜನೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೆ ತರುವುದನ್ನು ನೋಡಬಹುದಾಗಿದೆ. ಇಂತಹ ಯೋಜನೆಗಳು ಬಡವರನ್ನು, ರೈತರನ್ನು ಅಷ್ಟೇ ಅಲ್ಲದೇ ಇಡೀ ಸಮಾಜದ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ ಎನ್ನುವುದು ಪ್ರಭುತ್ವದ ನಿಲುವು. ಅಲ್ಲದೇ ದೇಶದ ಏಳ್ಗೆಯೂ ಸಹ ಇಂತಹ ಯೋಜನೆಗಳಿಂದ ಸಾಧ್ಯವಾಗುತ್ತದೆ ಎನ್ನುವ ಅಂಶಗಳನ್ನು ಜನರ ಮುಂದೆ ಪ್ರತಿಪಾದಿಸುತ್ತಿರುತ್ತವೆ. ಆದರೆ ಸರ್ಕಾರವು ಇಂತಹ ಯೋಜನೆಗಳ ನೆಪದಲ್ಲಿ ಜನರ ಇಡೀ ಸಮುದಾಯವನ್ನು ಅವರ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಅಷ್ಟೇ ಅಲ್ಲದೇ ಅವರ ಇಡೀ ಜೀವನವಿಧಾನವನ್ನು ಮೂಲೆಗುಂಪು ಮಾಡುವ ನೆಲೆಯಲ್ಲಿ ಕನ್ನಡದ ಅನೇಕ ಕತೆಗಳು ವಿವರಿಸಿವೆ.

ಇಂತಹ ಕತೆಗಳಲ್ಲಿ ಹನುಮಂತ ಹಾಲಗೇರಿ ಅವರ 'ದೇವಸಗ್ಗ' ಕತೆಯಲ್ಲಿ ಇಂತಹ ಸರ್ಕಾರದ ಯೋಜನೆಗಳು ಇಡೀ ಊರನ್ನು, ಬುಡಕಟ್ಟು ಸಮುದಾಯಗಳನ್ನು ಒಕ್ಕಲೆಬ್ಬಿಸುವ ಮೂಲಕ ಅವರ ಬದುಕನ್ನು ಬೀದಿಪಾಲು ಮಾಡುತ್ತವೆ ಎನ್ನುವ ಅಂಶಗಳನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ದೇವಸಗ್ಗ ಎಂಬ ಊರು ಕಾರವಾರದ ಸಮೀಪದಲ್ಲಿದೆ. ಕತೆಯ ಮುಖ್ಯ ಪಾತ್ರವಾದ ಲೇಖಕರು ಆ ಗ್ರಾಮಕ್ಕೆ ಆದಿವಾಸಿಗಳು ನುಗ್ಗಿದ್ದಾರೆ ಎನ್ನುವ ಸುದ್ದಿಯನ್ನು ತಿಳಿದು ದೇವಸಗ್ಗಕ್ಕೆ ಬರುತ್ತಾರೆ.

ಕಾರವಾರದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯ ಮತ್ತು ದೇಶಿ ಹಳ್ಳಿಗಳು ಕಂಗೊಳಿಸುತ್ತಿರುವುದನ್ನು ಲೇಖಕರು ಈ ಹಿಂದೆ ಇಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಬಂದಾಗ ನೋಡಿದ್ದರು. ಕಾಳಿ ನದಿಯ ಸೊಬಗು ಎಂತಹವರನ್ನು ಹೊಟ್ಟೆಕಿಚ್ಚು ತರಿಸುವಂತಿತ್ತು ಎಂದು ಲೇಖಕರು ತಿಳಿಸುತ್ತಾರೆ. ಇಂತಹ ಸಂದರ್ಭದಲ್ಲಿ ಆ ಕಾಲ

ಹೇಗಿತ್ತು. ಜನ ಕಾಡಿನಲ್ಲಿ ನಗರದಿಂದ ಬಂದ ಜನರನ್ನು ಹೇಗೆ ನೋಡುತ್ತಿದ್ದರು ಎನ್ನುವುದನ್ನು ಹೀಗೆ ವರ್ಣಿಸುತ್ತಾರೆ. "ಏನೇನೋ ಯೋಜನೆಗಳನ್ನು ತರುವ ಪ್ಯಾಂಟಿನವರು ಹಳ್ಳಿ ಜನರನ್ನು ಒಕ್ಕಲೆಬ್ಬಿಸುವುದಕ್ಕಾಗಿಯೇ ಬರುತ್ತಾರೆ ಎಂದು ಬಲವಾಗಿ ನಂಬಿದ ಕಾಲವದು"[೫೩] ಎನ್ನುತ್ತಾರೆ.

ಗಡಿ ಪ್ರದೇಶವಾದ್ದರಿಂದ ಅಲ್ಲಿ ಮೂಲಭೂತ ಸೌಕರ್ಯಗಳಾವುವೂ ಇರಲಿಲ್ಲ. ಸರ್ಕಾರಿ ಶಾಲೆಯೊಂದನ್ನು ಬಿಟ್ಟರೆ ಇನ್ನಾವುದೇ ಸೌಕರ್ಯಗಳಿರಲಿಲ್ಲ. ಇಲ್ಲಿ ಸರ್ಕಾರವು ಹುಲಿ ಯೋಜನೆಯನ್ನು ಮಾಡಬೇಕೆಂದು ನಿರ್ಣಯಿಸಿರುತ್ತದೆ. ಇದನ್ನು ಗಣಗೌಡರು ಮಾಸ್ತರರಿಗೆ ಹೀಗೆ ತಿಳಿಸುತ್ತಾರೆ. "ಈ ಊರಿನ ಕಥಿ ಗೊತ್ತಿಲ್ಲಂತ ಕಾಣತ್ತ ಮಾಸ್ತ್ರೆ. ಇದೊಂದು ಮುಳುಗೋ ಹಡಗಿದ್ದಂಗ. ನಮ್ಮವರ ನಮ್ಮನ್ನು ಮುಳುಗಿಸಲಾಕ ಹತ್ಯಾರ. ಮುಳುಗಿಸಬೇಕಂತ ಕಾಳವ್ವ ಬಂದು ಊರ ಅಗಸಿ ಬಾಕಲದಾಗ ಕುಂತಾಳ. ಹುಲಿ ಯೋಜನೆ ಹೆಸರಲ್ಲಿ ಈ ಕತ್ತಲು ಕಗ್ಗಾಡ ನಮ್ಮೂರು ಮ್ಯಾರ ಮುರಕೊಂಡ ಬಿಳಾಕ ಕಾಯ್ಕೊಂಡ ಕುಂತದ."[೫೪] ಅಂದರೆ ಸರ್ಕಾರದ ಯೋಜನೆಯು ಕಾಡಿನಲ್ಲಿರುವ ಊರನ್ನು ತನ್ನ ಅಭಿವೃದ್ಧಿಯ ಹೆಸರಿನಲ್ಲಿ ತೆರವುಗೊಳಿಸುವುದನ್ನು ಇಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಇಡೀ ಊರನ್ನು ಬಿಟ್ಟು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಸರ್ಕಾರವು ಜನರ ಮೇಲೆ ಹೇರಿದೆ.

ಗೌಡರು ಮುಂದುವರೆದು "ನಿಮ್ಗೆ ಗೊತ್ತಲ್ಲ ಮಾಸ್ತ್ರೇ. ಇನ್ನು ಸ್ವಲ್ಪ ದಿನಕ್ಕೆ ಈ ಊರು ಇರಲ್ಲ. ಯಾವಾಗ ಹ್ಯಾಂಗ ಮುಳುಗುತ್ತೋ ಅಂತ ಚಿಂತಿ ಆಗಿಬಿಟ್ಟೈತಿ. ಹಗಲು ರಾತ್ರಿ ಅದೆ ಕೆಟ್ಟ ಕನಸು. ನಮ್ಮ ಬದುಕೆ ಆಗಿದ್ದ, ನಮ್ಮೆಲ್ಲ ಕಿರಿಕಿರಿಗಳನ್ನು ಸಹಿಸಿಕೊಂಡು ಸಾಕಿ ಸಲುಹಿದ್ದ ಈ ಊರು, ಹೊಲ, ಮನೆ, ದನ, ಬಾಲ್ಯದ ದೋಸ್ತು ಎಲ್ಲವೂ ನಾಳೆ ಇರೋದಿಲ್ಲ ಅನ್ನೋದನ್ನ ಹ್ಯಾಂಗ ಸಹಿಸಕ್ಕಾಗತ್ತೆ ಮಾಸ್ತ್ರೇ ಅಂತ ಒಮ್ಮಿಂದೊಮ್ಮಲೇ ಗಳಗಳನೆ ಅಳತೊಡಗಿದರು."[೫೫] ಇಂತಹ ಸಂದರ್ಭದಲ್ಲಿ ಊರಿನಲ್ಲಿ ಕದ್ರಾ ಡ್ಯಾಂ, ಹುಲಿದಾಮ ಯೋಜನೆ, ಕೊರಸಳ್ಳಿ ಡ್ಯಾಂಗಳನ್ನು ನಿರ್ಮಾಣ ಮಾಡಲು ಊರನ್ನು ತೆರವುಗೊಳಿಸಬೇಕು ಎನ್ನುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿತು.

ಸರ್ಕಾರ ಗ್ರಾಮದ ಸ್ಥಳಾಂತರಕ್ಕೆ ಒಪ್ಪಿಗೆ ನೀಡಿದಾಗ ಜನರು "ನನ್ನ ಮನೆ ಸಾಹೇಬ್ರ ಇದು. ತಲೆಮಾರಿನಿಂದ ನಮ್ಮ ವಂಶದ ಕುಡಿಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡು ಕಾಪಾಡಿಕೊಂಡು ಬಂದೈತಿ. ನಮ್ಮ ಅಜ್ಜ, ಮುತ್ತಜ್ಜರಿಂದ ಹಿಡಿದು ನನ್ನ ಮಕ್ಕಳವರೆಗೂ ಇದ ಮನೆಯೊಳಗ ಹುಟ್ಟು ಬಾಳೆವೆ ಮಾಡಿವಿ ಸಾಹೇಬ್ರ. ನನ್ನ ಸೋಬ್ನ ಸೈತ ಇಲ್ಲೆ

ಅಟ್ಟದ ಮೇಲೆ ಆಗಿತ್ತು ಸಾಹೇಬ್ರ. ಈ ಜಾಗ ಬಿಟ್ಟು ಹೋಗೋದು ನನ್ನ ಕುತ್ತಿಗಿಗಿ ಬಂದೈತಿ ಸಾಹೇಬ್ರ ಎಂದು ಊರಿನ ಜನ ಅಂಗಲಾಚುತ್ತ ಅಧಿಕಾರಿಗಳ ಹಿಂದ್ಲಿಂದ ಕಾಲಾಡುತ್ತಿದ್ದರು."[೫೬]

ಇಡೀ ಕತೆಯಲ್ಲಿ ಸರ್ಕಾರದ ಯೋಜನೆಗಳು ಜನರನ್ನು ಒಕ್ಕಲೆಬ್ಬಿಸುತ್ತಿವೆ ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಸುತ್ತಿದೆ. ಅಲ್ಲದೇ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಇಡೀ ಜನರ ಬದುಕನ್ನು ಅವರ ಸಂಸ್ಕೃತಿಯನ್ನು ನಾಶಮಾಡುತ್ತಿದೆ ಎನ್ನುವುದನ್ನು ತಿಳಿಸಲಾಗಿದೆ. ಯೋಜನೆಗಳ ಹೆಸರಿನಲ್ಲಿ ಪರಂಪರೆಯಿಂದ ಬದುಕಿಬಂದ ಅವರನ್ನು ಸರ್ಕಾರವು ದೌರ್ಜನ್ಯದಿಂದ ನಡೆಸಿಕೊಳ್ಳುವ ಕ್ರೂರತೆಯನ್ನು ಕತೆಯಲ್ಲಿ ವಿಶ್ಲೇಷಿಸಲಾಗಿದೆ.

೨. ಅಧಿಕಾರದ ದಾಹ

ಹನುಮಂತ ಹಾಲಿಗೇರಿ ಅವರ 'ದೇವಸಗ್ಗ' ಕತೆಯಲ್ಲಿ ಊರಿನಲ್ಲಿ ಆಗುವ ಅನೇಕ ಸರ್ಕಾರದ ಯೋಜನೆಗಳಿಗಾಗಿ ಇಡೀ ಊರನ್ನು ಕೊಡಬೇಕೆಂದು ಅದಕ್ಕೆ ಸರ್ಕಾರವು ಪರಿಹಾರ ಹಣವನ್ನು ನೀಡುವುದಾಗಿ ಸೂಚಿಸುತ್ತದೆ. ಈ ಸಂದರ್ಭದಲ್ಲಿ ಇಡೀ ಊರನ್ನು ಈವರೆಗೆ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಹೆಗಡೇರು ರಾಜಕೀಯದವರ ಜೊತೆ ಸೇರಿ ತಮ್ಮ ಲಾಭವನ್ನು ಪಡೆಯಲು ಹವಣಿಸುತ್ತಿದ್ದರು. ಇಂತಹ ಹೆಗಡೇರು ಊರು ಯೋಜನೆಗಳ ಮೂಲಕ ಮುಳುಗುತ್ತದೆ ಎನ್ನುವುದನ್ನು ಅರಿತು ಆ ಯೋಜನೆಗಳಿಗೆ ಭೂಮಿಯನ್ನು ಮಾರಬೇಕದದ್ದನ್ನು ತಾವೇ ಸರ್ಕಾರದ ಜೊತೆ ಸೇರಿಕೊಂಡು ಹೊಲಕ್ಕ ರೇಟ್ ಎಷ್ಟು ಅಂತ ಕೇಳತೊಡಗಿದರು.

"ಇದೆಲ್ಲ ಆಗುವುದೊಳ್ರಗ ನಮ್ಮೂರು ಮುಳುಗತದ ಅಂತ ಹೊಸಾ ಸುದ್ದಿ ಹಬ್ತು. ಆದ್ರ ಕರೇವಂದ್ರ ನಮ್ಮೂರು ಮುಳುಗಿಸಬೇಕೆಂಬೂದು ಸರಕಾರದ ತಲಿಯೊಳಗ ಇರಲೇ ಇಲ್ಲ. ಹೊಸದಾಗಿ ಹೊಲ ಮನಿ ಕೊಂಡುಕೊಂಡಿದ್ದ ಹೆಗಡೇರು ಬೆಂಗಳೂರು, ದೆಹಲಿ ಅಂತ ಅಡ್ಡಾಡಿಕೊಂಡೋ ವಸೂಲಿ ಬಾಜಿ ಹಿಡಿದುಕೊಂಡೋ, ಅಥವಾ ಹಳ್ಳಿಯಿಂದ ದಿಲ್ಲಿಯವರೆಗಿನ ಆಯಕಟ್ಟಿನ ಸ್ಥಳಗಳಲ್ಲಿ ಕುಳಿತು ರಾಜಕೀಯ ಮಾಡುತ್ತಿದ್ದ ತಮ್ಮ ಸಮುದಾಯದವರ, ಅಧಿಕಾರಿಗಳ ಘುಡಾರಿಗಳ ಸಂಪರ್ಕ ಪಡೆದು ದೇವಸಗ್ಗದ ಪುರ್ನವಸತಿಗಾಗಿ ಪ್ರತಿಭಟನೆಗಳು ನಡೆಸತೊಡಗಿದರು"[೫೭] ಇಲ್ಲಿ ರಾಜಕೀಯದ ಹಿನ್ನೆಲೆಯನ್ನು ಬಳಸಿಕೊಂಡು ಮೇಲ್ವರ್ಗದವರಾದ ಹೆಗಡೇರು ತಮ್ಮ ಸ್ವಹಿತಸಕ್ತಿಗಾಗಿ ಇಡೀ ಊರನ್ನು ಯೋಜನೆಯ ಭಾಗವಾಗಿ ಮಾಡುವ ಹುನ್ನಾರವನ್ನು ಮಾಡಲಾಗಿದೆ. ಅಲ್ಲದೇ ಅಧಿಕಾರಕ್ಕಾಗಿ ಹೆಗಡೇರು ಮಾಡಿದ ಇಂತಹ ವರ್ತನೆಗಳು ಇಡೀ ಊರನ್ನೇ ಬಲಿ ತೆಗೆದುಕೊಂಡಿದ್ದನ್ನು ಕತೆಯು ಸೂಕ್ಷ್ಮವಾಗಿ ಚಿತ್ರಿಸುತ್ತದೆ.

ಅಧಿಕಾರದ ದಾಹಕ್ಕಾಗಿ ಇಂದಿನ ದಿನಗಳಲ್ಲಿ ರಾಜಕಾರಣಿಗಳು ಹೇಗೆ ಜನರನ್ನು ಶೋಷಣೆಗೆ ಒಳಗುಮಾಡಿ ತಮ್ಮ ಅಧಿಕಾರವನ್ನು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ ಎನ್ನುವುದನ್ನು ಅಮರೇಶ ನುಗಡೋಣಿ ಅವರ 'ಧರೆ ಉರಿದರೆ' ಕತೆಯಲ್ಲಿ ತಿಳಿಸಲಾಗಿದೆ. ಕತೆಯ ಮುಖ್ಯ ಪಾತ್ರ ಅನಾಥೆಯಾದ ಪರಕ್ಕಳನ್ನು ಮನುಷ್ಯಳೆಂದೇ ಭಾವಿಸದ ಊರಿನ ಜನರು ಅವಳ ದೇಹವನ್ನು ಮಾತ್ರ ಬಳಸಿಕೊಂಡು ಅವಳನ್ನು ಶೋಷಣೆಗೆ ಈಡುಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಅವಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದ ಮಲ್ಕರೆಡ್ಡಪ್ಪನ ಮೇಲೆ ಇಂತಹ ಒಂದು ಕೇಸನ್ನು ದಲಿತರ ನಾಯಕನಾದ ದೇವರಾಜು 'ರೇಪ್' ಮಾಡಲಾಗಿದೆ ಎಂದು ಮಲ್ಕರೆಡ್ಡಪ್ಪನ ಮೇಲೆ ಕಂಪ್ಲೇಂಟ್‌ನ್ನು ಕೊಟ್ಟುಬರುತ್ತಾನೆ.

"ರೆಡ್ಡಿ ಪರಕ್ಕನಿಂದ ತನ್ನ ಮಂಡಲ ಪ್ರಧಾನನಾಗುವುದು ತಪ್ಪುವುದೆಂದು ಹುಲುಗಯ್ಯಾ ಮತ್ತು ಲಿಂಗೇಶನನ್ನು ಕರೆದು 'ಆ ಕಜ್ಜಿ ಚಿನ್ನಯ್ಯನನ್ನು ಒದ್ದು ಹಿಡಕಂಡು ಬರ್ರಿ, ಆ ಪರಕ್ಕನ್ನ ಅವುನಿಗೆ ಒಪ್ಪಿಸಿ, ತಾಸೊತ್ತಿನೊಳಗ ಊರು ಬುಡಬೇಕಂತ ಹೇಳ್ರಿ ಹೋಗಿ ಪರಕ್ಕನ ಮೊದ್ಲು ಹೊರಗ ಹಾಕ್ರಿ" ಎಂದು ಮಲ್ಕರೆಡ್ಡನು ಹೇಳುವ ಮಾತುಗಳು ಅಧಿಕಾರಕ್ಕಾಗಿ ಅವನು ನಡೆದುಕೊಳ್ಳುತ್ತಿರುವ ರೀತಿಯನ್ನು ತಿಳಿಸುತ್ತಿದೆ. ಅಲ್ಲದೇ ಆಪಾದನೆ ತನ್ನ ಮೇಲೆ ಬಂದಿರುವುದನ್ನು ಅವನು ತಪ್ಪು ತನ್ನದಲ್ಲ ಎಂದು ಹೇಳದೇ ತನ್ನ ಅಧಿಕಾರ ತಪ್ಪುತ್ತದೆಂದು ಯೋಚಿಸುವ ರೀತಿಯನ್ನು ಕತೆಯಲ್ಲಿ ವಿವರಿಸಲಾಗಿದೆ.

ಅಲ್ಲದೇ ಪೋಲಿಸರು ತನಿಖೆಗೆ ಬಂದಾಗ ಎಸ್.ಐ. ಅವರು ರೆಡ್ಡಿ ಬಳಿ ಬಂದು ಇದು ದಲಿತರ ಕೇಸು, ಕೆಲವರನ್ನು ಹಿಡಿದುಕೊಂಡು ತನಿಖೆ ಮಾಡ್ತಿದ್ದೇವೆ ಎಂದು ತೋರಿಸುತ್ತೇವೆ ನಂತರ ಬಿಡ್ತೇವೆ, ಆಮೇಲೆ ಬಂದು ನನ್ನ ಕಾಣಿ ಎನ್ನುವ ಮಾತುಗಳು ಸಹ ಅಧಿಕಾರವನ್ನು ಹಿಡಯಲೋಸುಗ ಮಲ್ಕರೆಡ್ಡಿಯು ಮಾಡುತ್ತಿರುವ ರಾಜಕೀಯ ಹುನ್ನಾರವನ್ನು ತಿಳಿಸುತ್ತಿದೆ. ಅಂದರೆ ರಾಜಕೀಯದ ಅಧಿಕಾರಕ್ಕಾಗಿ ಅನಾಥ ಹೆಣ್ಣಾದ ಪರಕ್ಕಳನ್ನು ತನ್ನ ಮಂಡಲ ಪಂಚಾಯಿತಿಯ ಚುನಾವಣೆಗೆ ಅಡ್ಡಿ ಬರುತ್ತದೆಂದು ಮಲ್ಕರೆಡ್ಡಿಯು ತಾಳುವ ನಿಲುವನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

೩. ಬಂಡವಾಳಶಾಹಿಗಳ ಹಿಡಿತದಲ್ಲಿ ಪ್ರಭುತ್ವ

ಇನ್ನೂ ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕತೆಯಲ್ಲಿ ಊರಿನ ಜನರು ಖಾಸಗೀಕರಣದ ಬಗ್ಗೆ ಮಾತನಾಡುತ್ತಾ ವ್ಯವಸ್ಥೆಯನ್ನು ಹಾಳುಗೆಡವಲಾಗಿದೆ ಎನ್ನುವುದನ್ನು ಚರ್ಚಿಸುತ್ತಾರೆ. ಇಡೀ ವ್ಯವಸ್ಥೆಯಲ್ಲಿ ಪ್ರತಿಯೊಂದನ್ನು ಖಾಸಗಿಯವರಿಗೆ ನೀಡುತ್ತಾ ಹೋದರೆ ಆಗುವ ದುಷ್ಪರಿಣಾಮಗಳ ಕುರಿತಾಗಿ

ಮಾತನಾಡುತ್ತಾ ಸರ್ಕಾರದ ಪ್ರತಿನಿಧಿಯಾದ ನಾಗಲಕ್ಷ್ಮಿಯನ್ನು ಜನರು ಪ್ರಶ್ನಿಸುತ್ತಾರೆ. ನಾಗಲಕ್ಷಿಯು ಸರ್ಕಾರದ ಪರವಾಗಿ ಮಾತನಾಡುತ್ತಾ ಸರ್ಕಾರದ ಆರ್ಥಿಕ ನೀತಿಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾಳೆ. ಇಡೀ ವ್ಯವಸ್ಥೆಯಲ್ಲಿ ಸರ್ಕಾರವು ಖಾಸಗೀಕರಣವನ್ನು ಮಾಡುವ ಮೂಲಕ ಕೆಲಸಗಳು ತೀವ್ರಗತಿಯಲ್ಲಿ ನಡೆದು ಅಭಿವೃದ್ಧಿಯನ್ನು ಸಾಧಿಸಲು ಇಂತಹ ಪ್ರಯತ್ನಗಳು ಹೆಚ್ಚಾಗಬೇಕು. ಅಲ್ಲದೇ ಸರ್ಕಾರ ಯಾವುದನ್ನು ಸರಿಯಾಗಿ ಮಾಡುತ್ತಿದೆ ಎಂದು ಪ್ರಶ್ನಿಸುತ್ತಾ ಖಾಸಗಿಯವರಿಗೆ ಇಂತಹ ವಲಯಗಳ ಉಸ್ತುವಾರಿಯನ್ನು ನೀಡಿದರೆ ಅವರಾದರೂ ಸರಿಯಾಗಿ ಕೆಲಸವನ್ನು ನಿರ್ವಹಿಸುವುದರ ಮೂಲಕ ಸಮಾಜವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎನ್ನುವ ನಿಲುವನ್ನು ನಾಗಲಕ್ಷ್ಮಿಯು ಜನರ ಮುಂದಿಡುತ್ತಾಳೆ.

ನಾಗಲಕ್ಷ್ಮಿಯು ಜನರನ್ನು ಕುರಿತಂತೆ ಮಾತನಾಡುತ್ತಾ ಸರ್ಕಾರವು ತರುವ ಆರ್ಥಿಕ ನೀತಿಗಳು ಜನರ ಕ್ಷೇಮಾಭಿವೃದ್ಧಿಯನ್ನು ಬಯಸುತ್ತವೆ. ಸರ್ಕಾರವು ಜಾರಿಗೆ ತಂದಿರುವ ಅಧಿಕಾರ ವಿಕೇಂದ್ರೀಕರಣದ ನೀತಿಯ ಬಗ್ಗೆ ವಿವರಿಸುತ್ತಾಳೆ. ಸರ್ಕಾರ ಮತ್ತು ಜನರ ನಡುವೆ ಇರಬಹುದಾದ ಅಧಿಕಾರಿಗಳು ಜನಪ್ರತಿನಿಧಿಗಳ ಮಾತನ್ನು ಕೇಳದೇ ತಮ್ಮ ಮೂಗಿನ ನೇರಕ್ಕೆ ಕೆಲಸಗಳನ್ನು ಮಾಡುತ್ತಿರುತ್ತಾರೆ. ಇದಕ್ಕೆ ಉದಾಹರಣೆಯಾಗಿ ನಾಗಲಕ್ಮಿಯು ಪಕ್ಕದ ಊರಿನ ಸೇತುವೆ ಕುಸಿದು ಬಿದ್ದು ನಾಲ್ಕು ವರ್ಷ ಆಯ್ತು. ಈ ವರ್ಷ ಮಳೆ ಬೀಳುವುದರ ಒಳಗೆ ದುರಸ್ತಿ ಮಾಡಿಸಬೇಕಂತ ಎಷ್ಟು ಪ್ರಯತ್ನಿಸಿದ್ರೂ ಆಗಲಿಲ್ಲ! ನಮ್ಮ ಸರ್ಕಾರ ಅದ್ಕೆ ಖಾಸಗೀಕರಣ ಆಗಬೇಕಂತ ಮ್ಯಾಲಿಂದ ಮ್ಯಾಲೆ ಹೇಳ್ತಾದ. ಖಾಸಗೀ ಮಂದಿಗೆ ಕೊಟ್ಟರೆ ನಿಗಾ ವಹಿಸಿ ಮಾಡ್ತಾರ ಎನ್ನುವುದು ಖಾಸಗೀಕರಣವನ್ನು ಸಮರ್ಥಿಸಲು ನಾಗಲಕ್ಷಿಯು ಕೊಡುವ ಉದಾಹರಣೆಯಾಗಿದೆ.

ನಾಗಲಕ್ಷಿಯ ಜಾಗತೀಕರಣದ ಸಮರ್ಥನೆಗೆ ಪ್ರತಿರೋಧವಾಗಿ ಖಾಸಗೀಕರಣವನ್ನು ವಿರೋಧಿಸುತ್ತಿರುವ ಜನಸಮುದಾಯವು ಖಾಸಗಿಯವರು ಜನರ ಮೇಲೆ ಎರಗುತ್ತಿರುವ ಕೌರ್ಯವನ್ನು ವಿವರಿಸುತ್ತಾರೆ. ಖಾಸಗಿ ನಾಗೇಂದ್ರಪ್ಪನ ಬಸ್ಸುಗಳು ಮೂರು ಮಂದಿಗೆ ಸೀಟುಕೊಡುವ ಜಾಗದಲ್ಲಿ ಐದು ಮಂದಿನ್ನ ಕೂಡಿಸಿ ರೊಕ್ಕ ಸುಲಿತಾರ. ಚಿಕ್ಕವರಿಗೂ ಫುಲ್ ಟಿಕೇಟು ಕೇಳ್ತಾರ. ಟೈಮಿಗೆ ಸರಿಯಾಗಿ ಬರದಿಲ್ಲ. ಯಾಕ ಬರದಿಲ್ಲ? ಅಂತ ಕೇಳಾಕ ನಮ್ಗ ಹಕ್ಕಿಲ್ಲ! ಇದಕ್ಕೇನಂತೀರಿ? ಅಂತೆಯೇ ಸರ್ಕಾರಿ ಶಾಲೆಗಳಲ್ಲಿ ಮಾಸ್ತರರು ಇಲ್ಲದಿರುವ ಬಗ್ಗೆ ಜನರು ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಿರುವ ನಾಗಲಕ್ಷ್ಮಿಯನ್ನು ಪ್ರಶ್ನಿಸುತ್ತಾರೆ.

ಅಂದರೆ ಪ್ರಭುತ್ವವು ಬಂಡವಾಳಶಾಹಿಗಳನ್ನು ಖಾಸಗೀಕರಣದ ಹೆಸರಿನಲ್ಲಿ ಇಡೀ ಸಮಾಜದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುವಂತೆ ಮಾಡುತ್ತಿದೆ ಎನ್ನುವುದನ್ನು ಕತೆಯ ಮೂಲಕ ಚಿತ್ರಿಸಲಾಗಿದೆ. ಸರ್ಕಾರವೇ ಖಾಸಗೀಕರಣಕ್ಕೆ ಒತ್ತನ್ನು ನೀಡುವುದರ ಮೂಲಕ ಬಂಡವಾಳಶಾಹಿಗಳು ಜನಸಾಮಾನ್ಯರ ಮೇಲೆ ಮಾಡುತ್ತಿರುವ ಪರಿಣಾಮಗಳನ್ನು ಚರ್ಚಿಸಲಾಗಿದೆ. ಪ್ರಜಾಪ್ರಭುತ್ವವು ಜನಸಾಮಾನ್ಯರಿಗೋಸ್ಕರ ಕೆಲಸವನ್ನು ಮಾಡಬೇಕಿತ್ತು, ಮಾಡಬೇಕಾಗಿದೆ. ಆದರೆ ಇದು ಖಾಸಗೀಕರಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಜನಸಾಮಾನ್ಯರ ಮೂಲಭೂತ ಹಕ್ಕುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಮುಂತಾದವುಗಳನ್ನು ಖಾಸಗೀಕರಣಕ್ಕೆ ಒಳಪಡಿಸಿ ಅಭಿವೃದ್ಧಿ ಹೆಸರಿನಲ್ಲಿ ಬಂಡವಾಳಶಾಹಿಗಳು ಹಿಡಿತವನ್ನು ಸಾಧಿಸಿದ್ದಾರೆ.

ಸರ್ಕಾರದ ಪರವಾಗಿ ಕೆಲಸ ಮಾಡುವ ರಾಜಕಾರಣಿಗಳು, ಸಚಿವರು, ಶಾಸಕರುಗಳು ಬಂಡವಾಳಶಾಹಿಗಳಿಂದ ಕೋಟ್ಯಾಂತರ ರೂಪಾಯಿ ಹಣವನ್ನು ಪಡೆದು ಜನರ ಮೇಲೆ ತಮ್ಮ ದೌರ್ಜನ್ಯವನ್ನು ಮರೆಯುತ್ತಿದ್ದಾರೆ ಮತ್ತು ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿದ್ದಾರೆ ಎನ್ನುವುದನ್ನು ಹನುಮಂತ ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲಿ ಚಿತ್ರಿಸಲಾಗಿದೆ. ಬೈಪಾಸ್ ರಸ್ತೆಗಾಗಿ ಹಾವೂರನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿದ ಸರ್ಕಾರವು ಅದನ್ನು ವಿದೇಶೀ ಕಂಪೆನಿಗಳಿಗೆ ಸಾವಿರಾರು ಕೋಟಿಗಳಿಗೆ ಅದನ್ನು ಈಗಾಗಲೇ ಗುತ್ತಿಗೆಯನ್ನು ನೀಡಿದೆ. ಆದರೆ ಅಲ್ಲಿನ ರೈತರು, ಹೋರಾಟಗಾರರ ನಡುವಿನ ಸಂಘರ್ಷದಿಂದಾಗಿ ಸಚಿವರು ಜನರನ್ನು ಓಲೈಸಲು ಅಲ್ಲಿಗೆ ಬಂದಾಗ ಅವರು ಬಂಡವಾಳಶಾಹಿಗಳ ಪರವಾಗಿ ಕೆಲಸ ಮಾಡುತ್ತಿರುವ ಮೂಲಕ ಸರ್ಕಾರ ಅಥವಾ ಸರ್ಕಾರದ ಪ್ರತಿನಿಧಿಗಳು ಹೇಗೆ ಬಂಡವಾಳಶಾಹಿಗಳ ಹಿಡಿತದಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಕಟ್ಟಿಕೊಡಲಾಗಿದೆ.

"ಒಂದು ಸಣ್ಣ ಕಾಡುಗುಡಿ ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ ಹೀಗೆ ಅಡ್ಡಗಾಲಾಯಿತೆಂದರೆ ಈ ನಾಗಪ್ಪನ ಪಾವರ್ ಪಸಂದ್ ಇದ್ದಾಂಗದೆ ಸರ್ ಎಂದು ಪಿಎ ತಡೆದುಕೊಳ್ಳಲಾಗದೇ ಸಚಿವರ ಕಿವಿಯಲ್ಲಿ ಉಸುರಿದ. ಸಚಿವರಿಗೆ ಧಿಕ್ಕೇ ತೋಚದಾಯಿತು. ಕಳೆದ ಚುನಾವಣೆಯಲ್ಲಿ ಮಾಡಿದ ಸಾಲಸೋಲ ಎಲ್ಲವೂ ನೆನಪಿಗೆ ಬಂತು. ಗುತ್ತಿಗೆದಾರರಿಂದ ಬರುವ ಸೂಟ್‌ಕೇಸನ್ನು ಸಾಲಸೋಲಕ್ಕೆ ಟ್ಯಾಲಿ ಮಾಡಬಹುದು ಎಂದುಕೊಂಡಿದ್ದರು."[೫೯] ಅಂದರೆ ಸರ್ಕಾರದ ಪ್ರತಿನಿಧಿಗಳು ತಮ್ಮ ಚುನಾವಣೆಯನ್ನು ಗೆಲ್ಲಲು ಮಾಡಿರುವ ಅನೇಕ ಖರ್ಚು ವೆಚ್ಚಗಳನ್ನು ಪಡೆಯಬೇಕು ಎನ್ನುವ ಹಂಬಲ

ಇಲ್ಲಿ ಕಾಣುತ್ತದೆ. ಅಲ್ಲದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಜನರಿಗಾಗಿ ಜನರಿಗೋಸ್ಕರವೇ ಇರುವ ಸರ್ಕಾರ ಎಂಬ ಆಶಯವು ಇಂದಿನ ದಿನಗಳಲ್ಲಿ ಮರೆಯುತ್ತಿರುವುದನ್ನು ಕತೆಯು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತಿದೆ. ಅಲ್ಲದೇ ರಾಜಕೀಯ ಮುಖಂಡರು ಜನರ ಸೇವೆಗಾಗಿ ರಾಜಕೀಯಕ್ಕೆ ಬಂದು ಇಂತಹ ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ಭ್ರಷ್ಟರಾಗುತ್ತಿರುವುದನ್ನು ನೋಡಿದರೆ ಬದಲಾಗುತ್ತಿರುವ ರಾಜಕೀಯ ಕ್ಷೇತ್ರವನ್ನು ಅರಿಯಬಹುದಾಗಿದೆ. ಅಲ್ಲದೇ ರಾಜಕೀಯ ಎನ್ನುವುದು ಇಂದು ಕೇವಲ ರಾಜಕೀಯವಾಗಿ ಉಳಿಯದೇ ಅದು ಬಂಡವಾಳಶಾಹಿಗಳ ಹಿಡಿತದಲ್ಲಿ ಸಿಲುಕಿ ದೀನರ, ಬಡವರ, ಶೋಷಿತರ ಮೇಲೆ ತನ್ನ ಯಜಮಾನಿಕೆಯನ್ನು ಸ್ಥಾಪಿಸುತ್ತಿರುವುದನ್ನು ತಿಳಿಯಲಾಗಿದೆ.

ಮೊಗಳ್ಳಿ ಗಣೇಶ್ ಅವರ 'ಗಣಿ ನಿಲ್ದಾಣ' ಕತೆಯಲ್ಲಿ ಮುಖ್ಯವಾಗಿ ಬಂಡವಾಳಶಾಹಿಗಳು ಪ್ರಭುತ್ವದೊಂದಿಗೆ/ಸರ್ಕಾರದೊಂದಿಗೆ ಕೂಡಿಕೊಂಡು ನಿರ್ಗತಿಕರನ್ನು, ಅನಾಥರನ್ನು, ಬಡವರನ್ನು ಶೋಷಣೆಗೆ ಒಳಗು ಮಾಡುತ್ತಾರೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಪ್ರಭುತ್ವವು ಬಂಡವಾಳಶಾಹಿಗಳ ಬೆನ್ನಿಗೆ ನಿಂತು ಜನರನ್ನು ಕಾಪಾಡಬೇಕಾದ ಸಂದರ್ಭದಲ್ಲಿ ಪ್ರಭುತ್ವವೇ ಜನರನ್ನು ಹಿಂಸಿಸುವ ಪ್ರವೃತ್ತಿಯನ್ನು ಹೊಂದಿರುವುದನ್ನು ಕತೆಯ ಮೂಲಕ ತಿಳಿಸಲಾಗಿದೆ. ಕತೆಯ ಮುಖ್ಯ ಪಾತ್ರವಾದ ಮುರುಗೇಶ ಇಂತಹ ನಿಲ್ದಾಣದಲ್ಲಿ ವಾಸಿಸುವ ದೀನರು, ದಲಿತರು, ಬಡವರು, ಅನಾಥರು, ಕಳ್ಳಕಾನರು, ವೇಶ್ಯೆಯರು ಮುಂತಾದವರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಅಲ್ಲಿಯೇ ಬದುಕಿದ್ದವನು.

ಗಣಿ ಉದ್ಯಮವೇ ಮುಖ್ಯವಾಗಿದ್ದ ಬಯಲು ಪ್ರದೇಶವಾದ ಅಲ್ಲಿ ಜನರಿಂದ, ಪ್ರಾಣಿ ಪಕ್ಷಿಗಳಿಂದ ಇಡೀ ವಾತಾವರಣವೇ ಒಂದು ರೀತಿಯ ಮಣ್ಣಿನಿಂದ ಎದ್ದು ಬಂದಂತಿತ್ತು. ಇಲ್ಲಿ ಮುರುಗೇಶನನ್ನು ಕಂಡು ಸ್ಟೇಷನ್ ಮಾಸ್ಟರ್ ಇಲ್ಲಿಂದ ಇವರನ್ನೆಲ್ಲಾ ಕರೆದುಕೊಂಡು ಹೋಗು ಎಂದಾಗ ಮುರುಗೇಶ "ಈ ಭೂಮಿ ಬಿಟ್ಟು ಎಲ್ಲಿಗೆ ಹೋಗೋದು ಸ್ವಾಮಿ, ಗಾಂಧಿ ಮಹಾತ್ಮರು ಬಂದು ಹೋಗಿರುವ ರೈಲು ನಿಲ್ದಾಣ ಇದು. ಬಡಪಾಯಿಗಳೇ ಈ ದೇಶದ ತಾಯಿಬೇರು ಎಂದು ಇದೇ ನಿಲ್ದಾಣದಲ್ಲಿ ನಿಂತು ಬಡವರಿಗೆ ಹೇಳಿ ಹೋದರು ಎಂಬುದನ್ನು ಮರೆಯಬೇಡಿ"[೬೦] ಎಂದು ಗತಕಾಲದ ಅಸ್ತ್ರವೊಂದನ್ನು ಅವರತ್ತ ಬಿಟ್ಟನು. ಅಂದರೆ ಮುರುಗೇಶನು ಈ ಮೂಲಕ ಗಾಂಧೀಜಿಯವರ ಕನಸನ್ನು ಇಂದಿನ ದಿನಗಳಲ್ಲಿ ಪ್ರಭುತ್ವವು ಮರೆತಿರುವುದನ್ನು ವಿಮರ್ಶೆ ಮಾಡಲಾಗಿದೆ. ಅಲ್ಲದೇ ಸ್ಟೇಷನ್ ಮಾಸ್ಟರ್ "ಅಲ್ಲಲೇ ಮುರುಗೇಶ; ಗಾಂಧಿ ಏನ್ ನಿಮ್ಮಪ್ಪನೋ, ನಿಮ್ ತಾತನೋ,

ಇಲ್ಲಾ ನಿಮ್ ವಂಶದವನೇನಲೇ. ಏನೀ ದೇಶಾನಾ ನಿಮ್ಮಂತಾ ಬಿಕನಾಸಿಗಳಿಗೆ ಬರ್ದು ಕೊಟ್ಟು ಆ ಗಾಂಧಿ ಹೋಗಿದ್ದಾನೇನಲೇ. ನಿಮ್ಮಂತಾ ಕಳ್ಳಕಾಕರನ್ನೆಲ್ಲಾ ಈ ದೇಶದಿಂದಲೇ ಗಡಿಪಾರು ಮಾಡಿ ಗುಂಡು ಹೊಡೆದು ಸಾಯಿಸಬೇಕಾಗಿದೆ. ಅಲ್ಲೀತನಕ ಈ ದೇಶ ಉದ್ಧಾರ ಆಗೋದಿಲ್ಲಲೇ. ಆ ದಿನ ಬಂದೇ ಬರ್ತಾದಲೇ; ಬರೋತನಕ ಕಾಯ್ತಿನಲೇ"[೬೧] ಎಂದರು.

ಇಂತಹ ನಿಲ್ದಾಣದಲ್ಲಿ ಮೊನ್ನೆ "ಮುರುಗೇಶನಿಗೆ ಸೂತಕದ ಯಾವುದೋ ವಾಸನೆ ಅವನ ಮೂಗಿಗೆ ಬಡಿದಿತ್ತು. ಇಡೀ ಆ ಗಣಿ ನಿಲ್ದಾಣವನ್ನು ಖಾಸಗೀಯವರಿಗೆ ಕೊಟ್ಟುಬಿಡುವ ಮಾತುಗಳು ಸರ್ಕಾರದ ಮಟ್ಟದಲ್ಲಿ ಗುಪ್ತವಾಗಿ ನೆಡೆದಿದ್ದವು. ರೈಲ್ವೆ ಪೇದೆಗಳು ಆ ಗುಟ್ಟನ್ನು ಹಿತವಾಗಿ ನೆನೆಯುತ್ತ ನಾಳಿನ ಬೃಹತ್ ರೈಲು ನಿಲ್ದಾಣದ ನೀಲಿನಕ್ಷೆಯ ಮಾತುಗಳನ್ನು ಕುಡಿದ ನಶೆಯಲ್ಲಿ ಆಡಿಕೊಳ್ಳುತ್ತಿದ್ದರು."[೬೨] ಅಂದರೆ ಇಡೀ ವ್ಯವಸ್ಥೆಯು ಖಾಸಗೀಕರಣವನ್ನು ಒಪ್ಪಿಕೊಂಡು ಅವರಿಗಾಗಿ ಬಡವರನ್ನು, ನಿರ್ಗತಿಕರನ್ನು ಸಮಾಜದಲ್ಲಿ ಬದುಕುವಂತರ ವಾತಾವರಣವನ್ನು ಸೃಷ್ಟಿಸದೇ ಅವರನ್ನು ಕೊಲ್ಲುವಂತೆ ಮಾಡಬೇಕು ಎನ್ನುವ ಧೋರಣೆಯನ್ನು ಹೊಂದಿರುವುದನ್ನು ಕತೆಯಲ್ಲಿ ತಿಳಿಸಲಾಗಿದೆ.

ಇದೇ ಸಂದರ್ಭದಲ್ಲಿ ಕೇಂದ್ರ ಮಂತ್ರಿಗಳು ಸ್ಥಳಿಯ ಗಣಿ ಉದ್ಯಮಿಗಳ ಪರವಾಗಿ ಗಣಿ ಕೆಲಸವನ್ನು ಮಾಡಬಹುದು ಎನ್ನುವ ಹಸಿರು ನಿಶಾನೆಯನ್ನು ತೋರಿದ್ದರು. "ರಾಜ್ಯ ಸರ್ಕಾರವೇ ತನ್ನ ಗಣಿಗಳಲ್ಲಿ ಬಂದು ಬಿದ್ದಿದೆ ಎಂದು ಬಹಿರಂಗವಾಗಿಯೇ ಸರ್ಕಾರದ ಹರಾಜು ಮಾತುಗಳ ವರ್ಗಾಯಿಸುವ ಗಣಿ ಉದ್ಯಮಿಗಳ ಆ ಗಣಿ ನಿಲ್ದಾಣವನ್ನು ಹೇಗಾದರೂ ಮಾಡಿ ತನ್ನ ಗಣಿ ಉದ್ಯಮಕ್ಕೆ ಬೇಕಾದಂತೆ ನವೀಕರಿಸಿಕೊಂಡು ಸ್ವಂತ ನಿಲ್ದಾಣದಂತೆ ಮಾಡಿಕೊಳ್ಳಲು ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರು."[೬೩] ಇದೇ ಸಂದರ್ಭದಲ್ಲಿ ಅಲ್ಲಿನ ಭೂಮಿಗಳೆಲ್ಲಾ ನಿಲ್ದಾಣದ ಸುತ್ತಮುತ್ತಲಿನಲ್ಲಿ ಬೆಲೆಗಳು ಗಗನಕ್ಕೇರಿದ್ದವು. ಅಲ್ಲದೇ ಪ್ರಭುತ್ವವೂ ಕೂಡ ಬಂಡವಾಳಶಾಹಿಗಳು ಹೇಳಿದಂತೆ ಅವರುಗಳಿಗೆ ಬೆಂಬಲವನ್ನು ನೀಡುತ್ತಾ ಬಂದಿದ್ದು ಅಲ್ಲಿ ವಾಸಿಸುತ್ತಿದ್ದ ಇಂತಹ ಅಮಾಯಕರನ್ನು, ಮುಗ್ಧರನ್ನು ನಾಶ ಮಾಡುವಂತೆ ಮಾಡಿತು.

ಆ ಪ್ರದೇಶದಲ್ಲಿ "ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರವೇ ಖಾಸಗೀಕರಣವನ್ನು ಜಾರಿಗೊಳಿಸಿ ಅದರಲ್ಲಿ ತನ್ನ ಪಾಲುದಾರಿಕೆಯ ಲೂಟಿಗಾಗಿ ಪ್ರಜಾಪ್ರಭುತ್ವೀಯ ಸಂಚನ್ನು ಯಾವಾಗಲೋ ಸಾಂಗವಾಗಿ ರೂಪಿಸಿ ಉದ್ಧಾರದ ಮಾತುಗಳ ಮೂಲಕ ಜನರಿಗೆ ಮಂಕು ಬೂದಿ ಎರಚುತ್ತಿದ್ದು, ಅಲ್ಲಿ ಸರ್ಕಾರದ ಯೋಜನೆ ಯಾವುದು? ಖಾಸಗೀ

ಉದ್ಯಮದ ವ್ಯವಹಾರ ಯಾವುದು? ಜನಪ್ರತಿನಿಧಿಗಳು ಯಾರು? ಬಹುಕೋಟಿ ಬಂಡವಾಳಿಗರು ಯಾರು? ಕಳ್ಳಖದೀಮರು ಯಾರು? ಸಾಮಾನ್ಯ ನಾಗರೀಕರು ಯಾರು? ಎಂಬ ವ್ಯತ್ಯಾಸವೇ ಅಳಿಸಿಹೋಗಿದ್ದು ನೆಪಮಾತ್ರದ ಸರ್ಕಾರವು ಅಭಿವೃದ್ಧಿಯ ನಾಟಕದಲ್ಲಿ ವಿಜೃಂಭಿಸುವ ಬಣ್ಣದ ಬೆಳಕಿನಲ್ಲಿ ಕುಣಿಯುತ್ತಿತ್ತು."[೬೪] ಎನ್ನುವ ಮಾತುಗಳಲ್ಲಿ ನಿಜವಾದ ಅಭಿವೃದ್ಧಿ ಎನ್ನುವುದು ಯಾರ ಪಾಲಿಗೆ ಆಗುತ್ತಿದೆ ಎನ್ನುವುದನ್ನು ಕತೆಯಲ್ಲಿ ವಿಮರ್ಶೆಗೊಳಪಡಿಸಲಾಗಿದೆ.

ಈ ನಿಲ್ದಾಣದಲ್ಲಿ ಅಧಿಕಾರಿಗಳು ಕೇಂದ್ರದಿಂದ ಗಣಿ ನಿಲ್ದಾಣದ ಬಹುಕೋಟಿ ಯೋಜನೆಗೆ ಪೂರ್ವಪರಿಶೀಲನೆಗೆ ಬಂದಾಗ ಅಲ್ಲಿ ಇದ್ದ ಹಂದಿ, ದನ, ನಾಯಿಗಳು ಇವರ ಮೇಲೆ ಓಡಾಡಿದ್ದು ಮುಂತಾದವುಗಳನ್ನು ಕಂಡು ಅಧಿಕಾರಿಗಳು "ಭೂಮಿಯ ಮೇಲಿನ ಅತ್ಯಂತ ಹೊಲಸು ನರಕ ಇದೊಂದೇ. ಇದಕ್ಕೆ ತಕ್ಕ ಕ್ರಮವಹಿಸಿ ಎಂದು ಆದೇಶಿಸಿ ಬಂದಿದ್ದ ಅಧಿಕಾರಿಗಳು ಹೊರಟುಹೋದರು."[೬೫] ಇದನ್ನೇ ಕಾಯ್ದುಕೊಂಡಿದ್ದ ಅಧಿಕಾರಿಗಳಾದ ಪೇದೆಗಳು ರಾತ್ರಿ ಬಂದು ಎಲ್ಲರನ್ನು ಅಲ್ಲಿಂದ ಗಂಟುಮೂಟೆ ಕಟ್ಟಿಸಿ ರೈಲಿನಲ್ಲಿ ತುಂಬಿದರು. ಮುರುಗೇಶ ಎಷ್ಟೇ ಕೂಗಿಕೊಂಡರೂ ಅವನನ್ನು ಬಿಡದೇ "ಇವನೇ ಕಣ್ರೋ ಆ ಮಿಕಾಗಳ ನಾಯಕಾ. ಎತ್ತಿ ಒಳಾಕೆ ಎಸಿರೋ ಈ ಮಿಕಾವ ಎಂದು ಮುರುಗೇಶನನ್ನು ಹಿಡಿದು ಬೋಗಿಯ ಒಳಕ್ಕೆ ಎಸೆದರು. ಮಿಸುಕಾಡಿದವರನ್ನು ನೆಲಕ್ಕೆ ಎತ್ತಿ ಹಾಕಿ ತುಳಿದು ರಕ್ತ ಹರಿಸಿದರು. ಮತ್ತು ಎಗರಾಡಿದವರನ್ನು ಬಂದೂಕಿನ ತುದಿಯಿಂದ ತಿವಿದು ಸದ್ದಡಗಿಸಿದರು."[೬೬] ಎನ್ನುವಲ್ಲಿ ಪ್ರಭುತ್ವವು ಬಂಡವಾಳಶಾಹಿಗಳ ಜೊತೆ ಕೂಡಿಕೊಂಡು ಜನರನ್ನು ಹಿಂಸಿಸುವ ಆ ಮೂಲಕ ಅವರನ್ನು ಬೇರೊಂದೆಡೆಗೆ ಸಾಗಿಸುವ ಕೆಲಸವನ್ನು ಮಾಡುತ್ತದೆ. ನಿರ್ಗತಿಕರನ್ನು ಉಳಿಸಿ ಕಾಪಾಡಬೇಕಾದ ಸರ್ಕಾರಗಳೇ ಜನರನ್ನು ಹಿಂಸಿಸುವ ಅವರನ್ನು ಕೊಲ್ಲುವ ಮನಸ್ಥಿತಿಯನ್ನು ಹೊಂದಿರುವುದು ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿದೆ ಎನ್ನುವುದನ್ನು ಕತೆಯು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದೆ.

೪.೫ ಸಾಂಸ್ಕೃತಿಕ ನೆಲೆ

ಸಂಸ್ಕೃತಿ ಎನ್ನುವುದು ಇಡೀ ಒಂದು ಜನಾಂಗ ಅಥವಾ ಸಮುದಾಯದ ಜೀವನ ವಿಧಾನದಲ್ಲಿ ಅಡಕಗೊಂಡಿರುತ್ತದೆ. ಇಂತಹ ಸಾಂಸ್ಕೃತಿಕ ಅಂಶಗಳಾದ ನಂಬಿಕೆ, ಆಚರಣೆ, ಭಾಷೆ, ಜನರ ರೀತಿ–ನೀತಿಗಳು, ನಡವಳಿಕೆಗಳು ಮುಂತಾದವುಗಳನ್ನು ಒಳಗೊಂಡಿರುತ್ತದೆ. ಪರಂಪರೆಯಿಂದ ಬಂದಿರುವ ಸಂಸ್ಕೃತಿಯು ಅನೇಕ ಕಾರಣಗಳಿಂದಾಗಿ ಬದಲಾವಣೆಗಳನ್ನು

ಪಡೆದುಕೊಳ್ಳುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಮೂಢನಂಬಿಕೆ, ಅಂಧ ಆಚರಣೆಗಳನ್ನು ನಿರ್ಬಂಧಿಸುವುದು ನಿಜವಾಗಿಯೂ ಒಳ್ಳೆಯ ಕ್ರಮವೇ. ಆದರೆ ಇಡೀ ಒಂದು ಸಮುದಾಯದ ಜ್ಞಾನ ಪರಂಪರೆಯನ್ನು, ಜೀವನ ವಿಧಾನವನ್ನು ನಾಶ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಬ್ರಿಟೀಷರು ಭಾರತಕ್ಕೆ ಬಂದ ಹೊಸದರಲ್ಲಿ ಇಲ್ಲಿ ಇದ್ದ ಅನೇಕ ಮೂಢನಂಬಿಕೆಗಳನ್ನು, ಅಂಧ ಆಚರಣೆಗಳನ್ನು ವೈಚಾರಿಕ ನಿಲುವುಗಳ ಮೂಲಕ ಪಾಶ್ಚಾತ್ಯ ಶಿಕ್ಷಣದಿಂದ ವಿರೋಧಿಸುವ ಕೆಲಸವನ್ನು ಮಾಡಿದ್ದನ್ನು ನಾವು ಇಲ್ಲಿ ಗಮನಿಸಬಹುದು.

ಆದರೆ ಜಾಗತೀಕರಣ ಸಂದರ್ಭವು ಅನೇಕ ಜನಸಮುದಾಯದ, ಬುಡಕಟ್ಟು ಜನಾಂಗಗಳ, ದಲಿತರ, ತಳಸಮುದಾಯಗಳ ಇಡೀ ಜೀವನ ಕ್ರಮವನ್ನು ಪಲ್ಲಟಗೊಳಿಸಿರುವುದನ್ನು ಮುಖ್ಯವಾಗಿ ಕತೆಗಳ ಮೂಲಕ ಕಟ್ಟಿಕೊಡಲಾಗಿದೆ. ಅಲ್ಲದೇ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಣೆ ಮಾಡುವುದರ ಮೂಲಕ ಸ್ಥಳೀಯ ಭಾಷೆ, ಸಂಸ್ಕೃತಿಯ ಜೊತೆಗೆ ಇಡೀ ಅವರ ಜೀವನವಿಧಾನವನ್ನೇ ಬದಲಿಸುವಂತಹ ಪರಿಸ್ಥಿತಿಯನ್ನು ತಂದೊಡ್ಡಿರುವುದನ್ನು ಕತೆಗಳಲ್ಲಿ ಕಾಣಲಾಗಿದೆ. "ಜಾಗತೀಕರಣ ವ್ಯವಸ್ಥೆಯಲ್ಲಿನ ಮುಕ್ತ ವ್ಯಾಪಾರವನ್ನು ನೆಪವಾಗಿರಿಸಿಕೊಂಡು, ಉಪಭೋಗ ಸಂಸ್ಕೃತಿಯನ್ನು ಏಷ್ಯಾ ರಾಷ್ಟ್ರಗಳ ಸಂಸ್ಕೃತಿಯ ಮೇಲೆ ಹೇರತೊಡಗಿರುವುದು ಸಾಂಸ್ಕೃತಿಕ ಆಕ್ರಮಣವಲ್ಲದೇ ಬೇರೇನಲ್ಲ. ಈ ಸಾಂಸ್ಕೃತಿಕ ದಾಳಿಯಿಂದ ಅನೇಕ ಸಮುದಾಯ, ಬುಡಕಟ್ಟು ಜನಾಂಗ, ನಮ್ಮ ಪೂರ್ವಿಕರು ಪರಂಪರಾಗತವಾಗಿ ಪೋಷಿಸಿಕೊಂಡು ಬಂದಿದ್ದ ಲೋಕಜ್ಞಾನ, ಅವಿಭಕ್ತ ಕುಟುಂಬ ಪದ್ಧತಿ – ಸಮುದಾಯಿಕ ಪ್ರಜ್ಞೆ, ಸಾಮರಸ್ಯ ಮತ್ತು ಮಾನವೀಯ ಸಂಬಂಧಗಳು ನಶಿಸುತ್ತಾ ನೆಲ–ಜಲ–ಪರಿಸರ ಮಾಲಿನ್ಯಗೊಂಡು ಜಗತ್ತೇ ಒಂದು ಹಳ್ಳಿಯೆಂಬ ಪರಿಕಲ್ಪನೆಯ ಹೆಸರಿನಲ್ಲಿ ಗೊಂದಲದ ಗೂಡಾಗಿದೆ."[೬೭] ಎನ್ನುವುದಾಗಿ ಜಗದೀಶ್ ಕೊಪ್ಪ ಅವರು ತಿಳಿಸುತ್ತಾರೆ.

೪.೫.೧ ಸಂಸ್ಕೃತಿಯ ಮೇಲೆ ಹೊಡೆತ

ಹನುಮಂತ ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲಿ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಹಾವೂರಿನ ಜನರನ್ನು ಒಕ್ಕಲೆಬ್ಬಿಸುವ ಮೂಲಕ ರಸ್ತೆಯನ್ನು ನಿರ್ಮಿಸುವುದು ಸರ್ಕಾರದ ಯೋಜನೆಯ ಭಾಗ. ಇಡೀ ಊರಿನ ನಂಬಿಕೆ, ಆಚರಣೆಗಳನ್ನು ತಲೆಮಾರಿನಿಂದ ಆಚರಿಸಿಕೊಂಡು ಬರುತ್ತಿರುವವರಿಗೆ ಇದು ಆಘಾತಕಾರಿ ವಿಷಯವಾಗಿದ್ದಿತು. ಇದನ್ನು ಮಾಡಿದರೆ ತಮ್ಮ ಬದುಕು ಹಾಳಾಗುವುದೆಂದು ಡಿಸಿಯ ಮುಂದೆ ಜನರು ಹೆದ್ದಾರಿಯಲ್ಲಿ

ಪ್ರತಿಭಟನೆಯನ್ನು ಮಾಡುತ್ತಿದ್ದರು. ಸರ್ಕಾರವು ಇಂತಹ ಬೈಪಾಸ್ ಯೋಜನೆಗಳನ್ನು ತರುವುದರ ಮೂಲಕ ಇಡೀ ಒಂದು ಊರನ್ನು ಅಲ್ಲಿನ ಅನೇಕ ಜನಸಮುದಾಯಗಳ ಸಂಸ್ಕೃತಿಗಳನ್ನು ನಾಶ ಮಾಡುತ್ತಿರುವುದನ್ನು ಪ್ರಸ್ತುತ ಕತೆಯ ಮೂಲಕ ಕಟ್ಟಿಕೊಡಲಾಗಿದೆ.

ಪರಂಪರೆಯಿಂದ ಬಂದ ಅಲ್ಲಿನ ದೈವವಾದ ನಾಗಗುಡಿಯ ಜೊತೆಗೆ ಇಡೀ ಊರು ಬೈಪಾಸ್ ರಸ್ತೆಗಾಗಿ ನಾಶವಾಗುತ್ತಿರುವುದನ್ನು ಅಲ್ಲಿನ ಜನರು ಪ್ರತಿಭಟಿಸುತ್ತಿದ್ದಾರೆ. ಜನರ ಪರವಾಗಿ ಕೆಲಸ ಮಾಡಬೇಕಾದ ಸಚಿವರು, ಅಧಿಕಾರಿಗಳು ಯೋಜನೆಗಳ ಮೂಲಕ ಬಂಡವಾಳಶಾಹಿಗಳ ಪರವಾಗಿ ಕೆಲಸ ಮಾಡುತ್ತಿರುವ ಸನ್ನಿವೇಶವನ್ನು ಕತೆಯಲ್ಲಿ ತಿಳಿಸಲಾಗುತ್ತಿದೆ. ಅಲ್ಲದೇ ಈ ಊರನ್ನು ಬೈಪಾಸ್ ರಸ್ತೆಯ ನಿಮಿತ್ತ ನಾಗದೈವವಾದ ಹುತ್ತವನ್ನು ಇಲ್ಲಿನ ಜನರು, ಬುಡಕಟ್ಟು ಸಮುದಾಯಗಳು ನಂಬಿಕೊಂಡು ಬಂದದ್ದನ್ನು ಇಲ್ಲಿ ನಾಶಗೊಳಿಸುತ್ತಿರುವುಸನ್ನು ಸಮರ್ಥಿಸುತ್ತಿರುವ ಸರ್ಕಾರವು ಯೋಜನೆಯ ಮೂಲಕ ಅಭಿವೃದ್ಧಿ ಸಾಧ್ಯ ಮತ್ತು ಈ ಮೂಲಕ ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರವನ್ನು ನೀಡಲಾಗುವುದು ಎಂದು ತಿಳಿಸುತ್ತಿದೆ.

ನಾಗದೈವದ ವಾರ್ಷಿಕೋತ್ಸವವನ್ನು ಆಚರಿಸಬೇಕೆನ್ನುವ ಉದ್ದೇಶವು ಕಾಡಿನ ಜನರಿಗೆ ಬಂದಿದ್ದು ಏಕೆಂದರೆ ಅದು ಬೈಪಾಸ್ ರಸ್ತೆಯನ್ನು ನಿರ್ಮಿಸಬೇಕೆಂದು ನಿಂತಿರುವ ಸರ್ಕಾರದ ಮೇಲೆ ಪರಿಣಾಮವನ್ನು ಬೀರಬಹುದು ಎನ್ನುವ ಆಶಯದಿಂದ ಆಚರಿಸಲಾಯಿತು. "ಸಿದ್ಧಿ, ಕುಣಬಿ, ಹಾಲಕ್ಕಿಗಳು ಸಹಸ್ರ ಶತಮಾನಗಳ ಹಿಂದಿನ ತಮ್ಮ ಪೂರ್ವಜರ ವೇಷ-ಭೂಷಣಗಳನ್ನು ಧರಿಸುವ ಮೂಲಕ ಆ ಕಾಲದ ಇತಿಹಾಸಕ್ಕೆ ಜಗಿದು ಪುಳಕಿತಗೊಳ್ಳುತ್ತಿದ್ದರು."[೩೮] ಅಂದರೆ ಇಂತಹ ಅನೇಕ ಬಹುತ್ವಗಳನ್ನುಳ್ಳ ಹಾವೂರನ್ನು ಸರ್ಕಾರವು ಯೋಜನೆಗಳ, ಅಭಿವೃದ್ಧಿಯ ಹೆಸರಿನಲ್ಲಿ ನಾಶಗೊಳಿಸುತ್ತಿರುವುದು ಇಡೀ ಒಂದು ಜನಾಂಗದ ಸಂಸ್ಕೃತಿ ಮತ್ತು ಅವರ ಜೀವನ ವಿಧಾನವನ್ನು ಕಳೆದುಕೊಳ್ಳುವುದರ ಮೂಲಕ ನಾಶಮಾಡುತ್ತಿರುವುದನ್ನು ಕತೆಯು ತಿಳಿಸುತ್ತಿದೆ.

ಹಾಲಿಗೇರಿ ಅವರ 'ದೇವಸಗ್ಗ' ಕತೆಯಲ್ಲೂ ಇಂತಹ ಪ್ರಸಂಗವನ್ನು ಚಿತ್ರಿಸಲಾಗಿದೆ. ಸರ್ಕಾರವು ಹುಲಿಯೋಜನೆ, ಕಾಳಿ ನದಿಗೆ ಅಡ್ಡಲಾಗಿ ಡ್ಯಾಂನ್ನು ಕಟ್ಟುವ ಸಂದರ್ಭದಲ್ಲಿ ಅಲ್ಲಿ ಜನರ ಜೀವನ ವಿಧಾನ, ಅವರ ಆಚರಣೆ, ನಂಬಿಕೆ, ಸಂಪ್ರದಾಯ, ಪರಂಪರೆಯಿಂದ ಆಚರಿಸಲ್ಪಟ್ಟ ಕಲೆಗಳು, ವಿವಿಧ ವೇಷಭೂಷಣಗಳು ನಾಶವಾಗುತ್ತಿರುವುದನ್ನು ವಿಶ್ಲೇಷಿಸಲಾಗಿದೆ. ಪರಂಪರೆಯಿಂದ ತಮ್ಮ ಜೀವನವಿಧಾನವನ್ನು ನಂಬಿಕೊಂಡು ಬಂದ ದಿನನಿತ್ಯದ ಜೀವನವನ್ನು ಕಳೆಯುತ್ತಿದ್ದ ಹಳ್ಳಿಯ ಜನರ ಸಂಸ್ಕೃತಿಯೊಂದು ಇಂತಹ

ಯೋಜನೆಗಳಿಂದ ನಾಶವಾಗುತ್ತಿರುವುದನ್ನು ಇಲ್ಲಿ ಚಿತ್ರಿಸಲಾಗಿದೆ. ಶಿಕ್ಷಕರಾಗಿ ಹೋಗುವ ಸ್ವಗತ ಪಾತ್ರದ ಲೇಖಕರು ಇಲ್ಲಿನ "ಪ್ರತಿ ಮನೆಗಳ ಅಂಗಳದೊಳಗೆ ಕೆಂಡದ ಕಟ್ಟೆ ಕಾಣಬಹುದಿತ್ತು. ಅದರ ಪಕ್ಕದಲ್ಲೊಂದು ಕಟ್ಟಿಗೆ ಗೂಡು, ಹಂಡೆ ಒಲೆ, ಬಚ್ಚಲುಗಟ್ಟೆಗಳು ಹೀಗೆ ಅದೊಂದು ತಾನಾಗಿಯೇ ಅಭಿವೃದ್ಧಿಗೊಂಡ ಸಂಸ್ಕೃತಿ."[೧೯] ಎಂದು ತಿಳಿಸುತ್ತಾರೆ.

ಇಂತಹ ಹಳ್ಳಿಯಲ್ಲಿ "ಮನೆಯ ಅಂಗಳದೊಳಗೆ ಇತ್ತ ಬೆಂಕಿ ಜಗಮಗಿಸತೊಡಗಿದ್ದರೆ, ಅತ್ತ ಅದರ ಸುತ್ತಲೂ ಇದ್ದ, ಕಾನಜ್ಜಿ, ಉಪ್ಲಜ್ಜಿ, ಕೇರೋಳಜ್ಜಿ, ಬಳ್ಳೂರಕ್ಕ, ಹಿರೆಹಿತ್ಲು ನಾಗಕ್ಕ, ಗಣಪೂ ಕಾಕಾ, ಮಾದಜ್ಜ, ಬ್ರಹ್ಮ ಕಾಕಾ ಮುಂತಾದವರ ಬಾಯಲ್ಲಿ ಜಾನಪದ ಹಾಡುಗಳು, ಕತೆಗಳು, ಪೋಲಿ ಒಗಟುಗಳು, ತನ್ನಿಂದ ತಾನೆ ಉದುರುತ್ತಿದ್ದವು. ಹಾಡಿಗೇನೂ ಕೊರತೆಯೇ? ಬಲೀಂದ್ರನ ಹಾಡು, ಗಂಟಿಬೆಚ್ಚುವ ಹಾಡು, ತುಳಸಿ ತಿಮ್ಮಪ್ಪನ ಹಾಡು, ಗದ್ದನೆಟ್ಟಿ ಹಾಡು, ಬತ್ತ ಮೆರಿವ ಹಾಡು, ಯಕ್ಷಗಾನದ ಮಟ್ಟುಗಳು ಹೀಗೆ ಕಾಳಿ ನದಿಯ ಜುಳು ಜುಳು ಸದ್ದಿಗೆ ಸ್ಪರ್ಧೆಯೊಡ್ಡುವಂತೆ ಹಾಡುಗಳು ಹೊಮ್ಮುತ್ತಿದ್ದವು."[೨೦] ಎನ್ನುವಲ್ಲಿ ಪರಂಪರೆಯ ಅನೇಕ ಕಲಾ ಪ್ರಕಾರಗಳನ್ನು ಇನ್ನೂ ಹಳ್ಳಿಗಳಲ್ಲಿ ಉಳಿಸಿಕೊಂಡದ್ದನ್ನು ಇಂತಹ ಸರ್ಕಾರದ ಯೋಜನೆಗಳು ಬಂದು ಅವರನ್ನು ಧಿಕ್ಕಾಪಾಲಾಗಿಸುವ, ಒಕ್ಕಲೆಬ್ಬಿಸುವ ಮೂಲಕ ಆ ಪರಂಪರೆಯ ಸಂಸ್ಕೃತಿಯನ್ನು ನಾಶ ಮಾಡುತ್ತಿರುವುದನ್ನು ಗಮನಿಸಲಾಗಿದೆ.

ಊರನ್ನು ಖಾಲಿ ಮಾಡುವಂತೆ ಜಿಲ್ಲಾಡಳಿತವೂ ಆದೇಶವನ್ನು ಮಾಡಿದಾಗ ಊರಿಗೆ ಊರೇ ತನ್ನನ್ನು ಕಳೆದುಕೊಂಡಿತು. 'ಆದರೆ ಬೇಡ್ವೋ ಅಂತ ಅತ್ತು ಕರೆದು ಮಾಡಿದರೂ ಭೋಗ ಸಲಕರಣೆಗಳು ಬಾ ಎಂದು ಕರೆಯುತ್ತಿರುವಾಗ ಈ ನಮ್ಮ ಹರೆಯದ ಮಕ್ಕಳಿಗೆ ನಮ್ಮ ಅಳು ತಾಕಬೇಕೆಲ್ಲಿ? ನಾನು ಈ ಊರು ಬಿಟ್ಟು ಕದಲುವುದಿಲ್ಲ ಎಂದು ಹಟ ತೊಟ್ಟೆ.' ಎಂದು ಗಜಗೌಡರ ಮಾತು ಇಡೀ ಊರೊಂದಿಗೆ ನಾಶವಾಗುತ್ತಿರುವ ನಮ್ಮ ಸಂಪ್ರದಾಯ, ಹಾಡು, ಒಗಟು, ಆಚರಣೆಗಳು ಸಂಸ್ಕೃತಿಯ ಭಾಗವಾಗಿದ್ದವು ಇಂದು ಕಣ್ಮರೆಯಾಗುತ್ತಿರುವುದು ಇಂತಹ ಅಭಿವೃದ್ಧಿ ಕಾರಣಗಳಿಂದ ಎನ್ನುವುದನ್ನು ಕತೆಯು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತಿದೆ.

ಮಂಜುನಾಥಲತಾ ಅವರ 'ಮಂಟೇದರನೊಕ್ಕಲು ಲೋಕರೂಢಿಗೊಳಗಾದುದು' ಎಂಬ ಕತೆಯು ಇಂದಿನ ಜಾನಪದ ಪ್ರಕಾರದ ಹಾಡುಗಳನ್ನು ಬಂಡವಾಳಶಾಹಿಗಳು ತಮ್ಮ ಆರ್ಥಿಕ ಲಾಭಕ್ಕೆ ಬಳಸಿಕೊಳ್ಳುವುದರ ಮೂಲಕ ಮೂಲ ಹಾಡುಗಳನ್ನು ಮರೆಸುತ್ತಿದ್ದಾರೆ. ಆ ಮೂಲಕ ಒಂದು ಜನಾಂಗದ ಸಂಸ್ಕೃತಿಯ ಆಚರಣೆಗಳನ್ನು

ಮಾರುಕಟ್ಟೆಯ ಸರಕನ್ನಾಗಿ ಬಳಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ಈ ಕತೆಯಲ್ಲಿ ತಿಳಿಸಲಾಗಿದೆ. ಇಲ್ಲಿ ಪ್ರಮುಖವಾಗಿ ಚೆನ್ನಮಲ್ಲ ಮತ್ತು ಕುಮಾರಸ್ವಾಮಿಯ ನಡುವೆ ನಡೆಯುವ ದೇಸಿ ಮತ್ತು ಆಧುನಿಕತೆಯ ನಡುವಿನ ಅಂತರಗಳನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಅಲ್ಲದೇ ಆಧುನಿಕತೆ ಎನ್ನುವುದು ದೇಸಿ ಪರಂಪರೆಗೆ ಒಡ್ಡುತ್ತಿರುವ ಸವಾಲುಗಳನ್ನು ಕತೆಯಲ್ಲಿ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

ಈ ಚೆನ್ನಮಲ್ಲ, ಕುಮಾರಸ್ವಾಮಿಯ ಜೊತೆಗೆ ಶಿವರಾಜ, ಮುದ್ದುರಂಗ ಮತ್ತು ಗೌರಿಪುಟ್ಟ ಎನ್ನುವವರು ಸಾವಿನ ಮನೆಯಲ್ಲಿ ರಾತ್ರಿಯೆಲ್ಲ ಭಜನೆ ಮಾಡಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿರುವವರು. ಭಜನೆಯನ್ನು ಹಾಡಿಕೊಂಡೇ ಜೀವನವನ್ನು ಸಾಗಿಸುತ್ತಿದ್ದ ಇಂತಹ ನೀಲಗಾರ ಪರಂಪರೆಯ ಚೆನ್ನಮಲ್ಲ ಮತ್ತು ಕುಮಾರಸ್ವಾಮಿ ನಡುವೆ ನಡೆದ ಜಗಳ ಚೆನ್ನಮಲ್ಲನಿಗೆ ಆತಂಕವನ್ನು ಉಂಟುಮಾಡಿತ್ತು. ಉಪ್ಪಾರ ಕೇರಿಯ ತಾಲ್ಲೂಕಾಫೀಸಿನಲ್ಲಿ ಅಟೆಂಡರ್ ಆಗಿದ್ದ ಲಿಂಗಶೆಟ್ಟಿ ಸಾವನ್ನಪ್ಪಿದ್ದ ಸಂದರ್ಭದಲ್ಲಿ ನಡೆದ ಗಲಾಟೆಯೇ ಚೆನ್ನಮಲ್ಲನ ಜೀವನಕ್ಕೆ ಕುತ್ತಾಗಿತ್ತು.

ಲಿಂಗಶೆಟ್ಟಿಯ ಮಗನಿಗೆ ಭಜನೆಗಾಗಿ ನಾಲ್ಕು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಚೆನ್ನಮಲ್ಲ ಕೇಳಿದನು. ಇದಕ್ಕೆ ಕುಮಾರಸ್ವಾಮಿ "ಇವ್ರಗ್ಯಾಕೆ ಅಷ್ಟು ದುಡ್ಡು? ಮೂರು ಪದ ಹಾಡಿ ಹನ್ನೆರೆಡು ಗಂಟೆಗೇ ಎಣ್ಣೆ ಹೊಡ್ದು, ಭಂಗಿ ಕುಡ್ದು ಮಲಗಿಬಿಡೋಕಾ? ಹಂಗಾಗೋದಾದ್ರ ನಾನು ಮಳವಳ್ಳಿ ಮಾದುಸ್ವಾಮಿನೇ ಕರಿಸ್ತೀನಿ... ಇನ್ನೊಂದ್ಯೆದು ಸಾವಿರವಾಗ್ಲಿ... ಜನನೂ ಕೂತು ಕಥೆ ಕೇಳ್ತಾರ.... ನೀನು ಒಪ್ಕಬೇಡ ನಾಗೇಂದ್ರ..."[೭೧] ಎಂದು ನಾಗೇಂದ್ರನ ಕೈಯಿಂದ ಹಣ ಕಿತ್ತುಕೊಳ್ಳಲನುವಾದನು.

ಆಗ ಚೆನ್ನಮಲ್ಲನು ಹೇಳುವ ಮಾತುಗಳು ಒಂದು ಪರಂಪರೆಯನ್ನು ನಂಬಿಕೊಂಡು ಬಂದ ನೀಲಗಾರ ಪರಂಪರೆಯು ಪಾಶ್ಚಾತ್ಯೀಕರಣದ ಪ್ರಭಾವಕ್ಕೆ ಒಳಗಾಗುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಸಿನಿಮಾ ಪದವನ್ನು ಕುಮಾರಸ್ವಾಮಿಯೇ ಹಾಡುತ್ತಾನೆ ಅವನಿಗೆ ದುಡ್ಡನ್ನು ಕೊಡುಬೇಕೆನ್ನುವ ಚೆನ್ನಮಲ್ಲನನ್ನು ಕುರಿತು ಕುಮಾರಸ್ವಾಮಿ 'ಇಲ್ಲ ನಿನ್ನನ್ನ ಕಟ್ಟಕೊಂಡ್ರ ಐವತ್ತು ವರ್ಷದಿಂದ ಹಾಡ್ತಿದ್ದ ಪದನೇ ಹಾಡಬೇಕಾಯ್ತದ... ಜನ ಎದ್ದು ಹೋಯ್ತರ್ ಅಷ್ಟೇ... ಜನ ಸೇರಬೇಕು ಅಂದ್ರ ಸಿನಿಮಾ ಪದನ್ನು ಹಾಡಬೇಕಾಯ್ತದ, ಇನ್ನೊಂದ್ ಪದನೂ ಹಾಡಬೇಕಾಯ್ತದ..' ಎನ್ನುತ್ತಾನೆ.

ಇಂದಿನ ಪಾಶ್ಚಾತ್ಯೀಕರಣದ ಪರಿಣಾಮ ಸಂಸ್ಕೃತಿಯ ಪ್ರತೀಕದಂತಿರುವ ಇಂತಹ ಆಚರಣೆಗಳಾದ ಭಜನೆ ಮುಂತಾದವುಗಳನ್ನು ಬಿಟ್ಟು ಸಿನಿಮಾ ಕ್ಷೇತ್ರದಲ್ಲಿನ ಹಾಡುಗಳನ್ನು

ಹೆಚ್ಚಾಗಿ ಒಪ್ಪಿಕೊಳ್ಳುತ್ತಿದ್ದಾರೆ ಎನ್ನುವುದನ್ನು ತಿಳಿಸಲಾಗಿದೆ. ಆದರೆ ಚೆನ್ನಮಲ್ಲ ತನ್ನ ಪರಂಪರೆಯನ್ನು ವಿವರಿಸುತ್ತಾ "ನಾನು ಮಂಟೇದರನ ಗುಡ್ಡನಾದ ಕಾಲದಿಂದಲೂ ಯಾವೊಂದು ಸಾವಿನ ಮನೆಯಲ್ಲೂ ಭಂಗಿ ಸೇದದೆ ಸಾರಾಯಿ ಕುಡಿಯದೇ ಹಾಡಿದ್ದಿಲ್ಲ. ಹಾಡಲಾಗುವುದೂ ಇಲ್ಲ. ಬೇಕಾದರೆ ಒಂದೊಳ್ಳೆಯ ಕಾರ್ಯವಾದರೆ ನಾನು ಹಾಗೇ ಮಾಡ್ತೀನಿ... ಸಾವಿಗಲ್ಲ."[೨೨] ಎನ್ನುತ್ತಾನೆ.

ಭಜನೆಯನ್ನು ಹಾಡಲು ಶುರುಮಾಡಿದಾಗ ಕುಮಾರಸ್ವಾಮಿಯು ಇತ್ತೀಚಿನ ಭಜನೆಯಲ್ಲಿ "ಮಂಟೇದರನನ್ನೂ, ಸಿದ್ಧಪ್ಪಾಜಿಯನ್ನೂ, ದೊಡ್ಡಮ್ಮತಾಯಿಯನ್ನೂ ರಾಚಪ್ಪಾಜಿಯನ್ನು ನೀಡಿ ಕ್ಯಾಸೆಟ್ಟಿನಲ್ಲಿ ಕೇಳಿ ಕಲಿತಿದ್ದ; ಅದಾಗಲೇ ಆ ಫಾಸಲೆಯಲ್ಲೆಲ್ಲಾ ಫೇಮಸ್ಸಾಗಿದ್ದ ಮಳವಳ್ಳಿ ಮಾದೇಸ್ವಾಮಿಯ 'ತಾಳಿ ತಾಳಿ ಚಿನ್ನದ ತಾಳಿ.... ಹೆಣ್ಣಿನ ಬಾಳಿಗೆ ಇದುವೆ ಬೇಲಿ ಹಾಗೂ ಮಾದೇಶ್ವರ ದಯ ಬಾರದೇ...' ಎಂಬ ಹಾಡುಗಳನ್ನು ಹಾಡಲು ಮುಂದಾದನು. ಇದರಿಂದ ಚೆನ್ನಮಲ್ಲನು ಕನಲಿ ಕೆಂಡವಾದನು."[೨೩] ಅಲ್ಲದೇ ಚೆನ್ನಮಲ್ಲನು ಸ್ವಾಮಿಗೆ "ಸ್ವಾಮಿ ನಿಂಗೆ ನಾನು ಎಷ್ಟು ಸಲ ಹೇಳಿದಿನಿ ಈ ಕ್ಯಾಸೆಟ್ ಪದಗಳನ್ನೆಲ್ಲ ಹಾಡಬೇಡ ಅಂತ... ಸುರುವಿಗೇ ಧರೆಗುರುವನ್ನು ಮರ್ತು ಇಂದೆಂಥದು ನಿಂದು? ಅದ್ಯಾಕೆ ನಿಂಗೆ ಮೂಲಪದಗಳು ಮರೆತುಹೋದವಾ?"[೨೪] ಎಂದು ಜೋರಾಗಿಯೇ ಗದರಿಕೊಂಡನು ಚೆನ್ನಮಲ್ಲನು.

ಬದಲಾಗುತ್ತಿರುವ ಸಮಾಜದಲ್ಲಿ ಮೂಲಪದವನ್ನಾಗಲಿ, ಆಚರಣೆಗಳನ್ನಾಗಲೀ ಇಲ್ಲಿ ಜನರು ಕೇಳುವುದಿಲ್ಲ ಎನ್ನುವುದನ್ನು ಕುಮಾರಸ್ವಾಮಿ ಹೀಗೆ ಹೇಳುತ್ತಾನೆ. "ನಿನ್ನ ಮೂಲಪದವ ಕೇಳೋಕೆ ಇಲ್ಲಿ ಯಾರಿದ್ದಾರು? ಜನಕ್ಕೆ ನಾ ಹೇಳೋ ಪದಗಳೇ ಹಿಡಿಸೋದು... ನೀನು ಬೇಕಾದ್ರೆ ಮಧ್ಯೆ ಮಧ್ಯೆ ನಿನ್ನ ಹಳೆಯ ಕಾಲದವುಗಳನ್ನು ಹಾಡ್ಕೋ... ಅದು ನಿನ್ನ ತೀಟೆ... ನಾನು ಹೊಸಪದಗಳನ್ನು ಹಾಡ್ತೀನಿ..."[೨೫] ಎನ್ನುತ್ತಾನೆ. ಆದರೆ ಗುರುಪರಂಪರೆಯಿಂದ ಬಂದ ಇಂತಹ ಹಾಡುಗಳನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಬಾರದೆನ್ನುವುದು ಚೆನ್ನಮಲ್ಲನ ನಿಲುವು.

ಕತೆಯ ಎರಡನೇ ಮುಖ್ಯಘಟ್ಟ ಎಂದರೆ ಮಳವಳ್ಳಿ ಮಾದೇಸ್ವಾಮಿಯದು. ಕುಮಾರಸ್ವಾಮಿಗೆ ಮಳವಳ್ಳಿ ಮಾದೇಸ್ವಾಮಿಯ ರೀತಿಯಲ್ಲಿ "ನಾನು ಆ ಮಳವಳ್ಳಿ ಮಾದೇವಸ್ವಾಮಿಯ ಹಾಗೆಯೇ ಹಾಡಿ ರೆಕಾರ್ಡ್ ಮಾಡಿ ಈ ಕನ್ನಡ ನಾಡಿಗೆ ಕೀರ್ತಿ ತರಬೇಕು. ಅವನ ಹಾಗೆಯೇ ಸರ್ಕಾರದಿಂದ ಬೆಂಗಳೂರಿನಲ್ಲೊಂದು ಸೈಟು

ಗಿಟ್ಟಿಸಿಕೊಳ್ಳಬೇಕು."[೭೬] ಎನ್ನುವ ಮಾತುಗಳು ಇಂದು ಜನಪದರ ಹಾಡುಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ಅರಿಯಲು ಸಾಧ್ಯ. ಅಲ್ಲದೇ ಇದರ ಹಿಂದಿರುವ ಆಧುನಿಕ ಮನಸ್ಥಿತಿಯನ್ನು ಕಂಡುಕೊಳ್ಳಬಹುದು.

ಮಳವಳ್ಳಿ ಮಾದೇಸ್ವಾಮಿ ನಂಜನಗೂಡಿನಲ್ಲಿ ಜಾತ್ರೆಯಲ್ಲಿ ಮಾತನಾಡುತ್ತಾ ಸರ್ಕಾರವು ನೀಡಿದ ಬಹುಮಾನಗಳನ್ನು, ಸೈಟ್‌ನ್ನು, ಅನೇಕ ಸನ್ಮಾನಗಳನ್ನು ಹೇಳಿಕೊಳ್ಳುತ್ತಾ ನನ್ನ ಹಾಡುಗಳನ್ನು ಸಿನಿಮಾಗಳಿಗೂ ಬಳಸಿಕೊಳ್ಳುವುದಾಗಿ ನಿರ್ದೇಶಕರು ಹೇಳಿದ್ದಾರೆ ಎಂದಾಗ ಅಲ್ಲಿಯೇ ಇದ್ದ ಜನಪದ ಪ್ರೊಫೆಸರ್ ಒಬ್ಬರು 'ಸ್ವಾಮಿ ಮಾದೇಸ್ವಾಮಿಯವರೇ ನಿಮ್ಮ ಹಾಡುಗಾರಿಕೆಯನ್ನು ಮೆಚ್ಚಿ ಘನ ಸರ್ಕಾರವು ತಮಗೆ ಸೈಟು, ಪ್ರಶಸ್ತಿಗಳನ್ನೆಲ್ಲ ದಯಪಾಲಿಸಿರುವುದು ಸರಿಯಷ್ಟೇ. ಆದರೆ ಅದು ನಿಮ್ಮ ಹಳೆಯ ಮೂಲ ಹಾಡುಗಾರಿಕೆಗೆ ಸಂದ ಬೆಲೆಯಲ್ಲವೇ ಈಗ ನೀವು ಹಾಡಲು ಹೊರಡುತ್ತಿರುವ ಕ್ಯಾಸೆಟ್ ಹಾಡುಗಳಿಗೆ ಸಿಕ್ಕಿದ್ದಲ್ಲ... ನೀವು ನಿಮ್ಮ ಮೂಲವನ್ನು ಮರೆತಂತೆ ಮಾತಾಡುತ್ತಿರುವುದು ಸರಿಯಲ್ಲ. ಇಂಥ ನಿಮ್ಮ ಧೋರಣೆಗೆ ನನ್ನ ಧಿಕ್ಕಾರವಿದೆ. ನೀವು ನಿಮ್ಮ ಮೂಲ ಕತೆಯನ್ನೇ ಹಾಡಿರಿ.... ನಮಗೆ ಬೇಕಿರುವುದು ನಿಮ್ಮ ಸಿನಿಮಾ ಹಾಡುಗಳಲ್ಲ....' ಎಂದಾಗ ಅಲ್ಲಿದ್ದ ಜನರು ಪ್ರೊಫೆಸರ್ ಅವರ ಮೇಲೆ ರೊಚ್ಚಿಗೆದ್ದರು.

ಮಾದುಸ್ವಾಮಿ ಆಗ "ಸ್ವಾಮಿ ಪ್ರೊಫೆಸರರೇ ನಿಮ್ಮ ಮಾತು ನಿಜ. ಆದರೆ ನಾನು ಹಾಡಿದ ನನ್ನ ಮೂಲದ ಪದಗಳನ್ನು ಹಾಡಿದರೆ ಕೇಳುವ ಕಾಲವಿದಲ್ಲ.... ನಾನು ಎಂದೋ ಒಮ್ಮೆ ಆಗೀಗ ನಾಲಗೆ ರುಚಿಗೆಂದು ಹಾಡಿದ ಜನಪ್ರಿಯ ಹಾಡುಗಳೇ ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿವೆ..."[೭೭] ಎನ್ನುವ ಮಾತುಗಳು ಬದಲಾಗುತ್ತಿರುವ ಜನರ ಅಭಿಪ್ರಾಯಗಳು, ಆಸೆ-ಆಕಾಂಕ್ಷೆಗಳನ್ನು ಪಾಶ್ಚಾತ್ಯೀಕರಣದ ಪ್ರಭಾವವನ್ನು ತಿಳಿಸುತ್ತದೆ.

"ನನಗೆ ಅನ್ನ, ಬಟ್ಟೆ, ವಸತಿ, ಕೀರ್ತಿಯನ್ನೆಲ್ಲ ಕೊಟ್ಟದೆ. ನೀವೊಮ್ಮೆ ನನ್ನನ್ನು ಸನ್ಮಾನಿಸಿ 'ನಮ್ಮ ಸಾಂಸ್ಕೃತಿಕ ಪರಂಪರೆ', 'ಮೂಲ ಸಂಸ್ಕೃತಿ, ತಳ ಸಂಸ್ಕೃತಿ, ಒಳ ಸಂಸ್ಕೃತಿ' ಎಂದೆಲ್ಲ ಹೇಳಿದ್ದು ನನಗೆ ಚೆನ್ನಾಗಿ ನೆನಪಿದೆ. ಆದರೆ ನೀವು ಹೇಳುತ್ತಿರುವ ಆ ಹಾಡುಗಳನ್ನು ಹಾಡಲೆಂದೇ ನನ್ನ ಒಳನಾಲಗೆ ಒಕ್ಕರಿಸಿ ಬರುತ್ತಿದ್ದರೂ ನಾನು ಹೋದಲೆಲ್ಲಾ ಈ ಜನ ನಾನು ಹಾಡಿದ ಜನಪ್ರಿಯ ರಾಗಗಳ ಹಾಡುಗಳೇ ಬೇಕೆಂದು ಚಂಡಿ ಹಿಡಿಯುತ್ತಾರೆ. ಅಂಥ ಹಾಡುಗಳನ್ನು ಹಾಡುವುದಾದರೆ ಮಾತ್ರ ನನ್ನನ್ನು ಕಥೆ ಮಾಡಲು ಕಾಸುಕೊಟ್ಟು ಕರೆಯುತ್ತಾರೆ.... ಇಲ್ಲದಿದ್ದರೆ ಇಂದು ನಾನೆಲ್ಲಿ ಇರುತ್ತಿದ್ದೆ!"[೭೮] ಎಂದು ಪ್ರೊಫೆಸರ್‌ನ್ನು ಪ್ರಶ್ನಿಸುತ್ತಾನೆ.

ಇಡೀ ಕತೆಯಲ್ಲಿ ಒಂದು ಪರಂಪರೆಯು ನಂಬಿಕೊಂಡು ಬಂದ ಹಾಡುವ ಸಂಪ್ರದಾಯವನ್ನು ಪಾಶ್ಚಾತ್ಯೀಕರಣವು ಆಧುನಿಕತೆಯ ಭಾಗವಾಗಿ ಮಾಡಿಕೊಂಡು ಮೂಲವನ್ನೇ ಮರೆಸುವ ತಂತ್ರವನ್ನು ಇಂದಿನ ದಿನಗಳಲ್ಲಿ ಮಾಡುತ್ತಿದೆ ಎನ್ನುವುದನ್ನು ಚಿತ್ರಿಸುತ್ತಿದೆ. ಚೆನ್ನನ ಸಂದಿಗ್ಧ ಪರಿಸ್ಥಿತಿಯಲ್ಲಿ ಮೂಲವನ್ನು ಬಿಟ್ಟು ತಾನು ಮಾದುಸ್ವಾಮಿಯ ರೀತಿಯಲ್ಲಿಯೇ ಸಿನಿಮಾ ಹಾಡುಗಳನ್ನು ಹಾಡಬೇಕು ಎನ್ನುವ ಧೋರಣೆಯನ್ನು ತಾಳಿದರೂ ಗುರು ಪ್ರತ್ಯಕ್ಷನಾಗುವ ಮೂಲಕ ಚೆನ್ನಮಲ್ಲನು ಸಾವನ್ನಪ್ಪುತ್ತಾನೆ. ಇಡೀ ಪರಂಪರೆಯೊಂದು ಇಂದಿನ ಜಾಗತೀಕರಣದ ಸುಳಿಯಲ್ಲಿ ಸಿಲುಕಿಕೊಳ್ಳುತ್ತಿರುವ ರೀತಿಯನ್ನು ಕತೆಯು ಪ್ರಸ್ತಾಪಿಸುತ್ತದೆ. ಅಲ್ಲದೇ ಇಡೀ ಆಧುನಿಕತೆಯ ಹೊಸ ಹೊಸ ಸಾಮಾಗ್ರಿಗಳನ್ನು ಇಟ್ಟುಕೊಂಡು ಸಂಗೀತ ಕ್ಷೇತ್ರದಲ್ಲಿ ಜನರನ್ನು ಆಕರ್ಷಿತರಾಗುವಂತೆ ಮಾಡಿ ಮೂಲ ಪರಂಪರೆಯ ಹಾಡುಗಳನ್ನು ಮೂಲೆಗುಂಪು ಮಾಡುವ ಪರಿಣಾಮವನ್ನು ಇಂದಿನ ವರ್ತಮಾನದಲ್ಲಿ ಕಾಣುತ್ತಿದ್ದೇವೆ.

ಇಡೀ ಬದುಕನ್ನು ಹಾಡಿಕೊಂಡು ಬಂದ ಸಮುದಾಯವೊಂದು ಎದುರಿಸುತ್ತಿರುವ ಸವಾಲುಗಳನ್ನು ಚೆನ್ನಮಲ್ಲ, ಮಾದುಸ್ವಾಮಿಯ ಮೂಲಕ ತಿಳಿಸುತ್ತಾ ಯುವಪೀಳಿಗೆ ಇಂತಹ ಸಂದರ್ಭದಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕು ಎನ್ನುವ ದ್ವಂದ್ವವನ್ನು ಚರ್ಚಿಸಲಾಗಿದೆ. ಇಡೀ ಸಮಾಜದಲ್ಲಿ ಆಧುನಿಕತೆಯ ಭರಾಟೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯನ್ನು ಸಾರಾಸಗಟಾಗಿ ನಡೆಸುತ್ತಿರುವುದನ್ನು ಹಾಡುಗಳ ಮೂಲಕ ವಿಶ್ಲೇಷಿಸಲಾಗಿದೆ.

೪.೫.೨ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ

ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲಿ ಜನರ ಜೀವನ ವಿಧಾನ ಮತ್ತು ಅವರ ಪರಂರಾನುಗತವಾದ ಸಂಸ್ಕೃತಿಯನ್ನು ಬೈಪಾಸ್ ರಸ್ತೆಗಾಗಿ ಕಳೆದುಕೊಳ್ಳುವ ಹಾವೂರಿನ ಜನರು, ಬುಡಕಟ್ಟು ಸಮುದಾಯಗಳು ನಂತರದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಒಪ್ಪಬೇಕಾದ ಅನಿವಾರ್ಯತೆಯನ್ನು ಜಾಗತೀಕರಣ ಸಂದರ್ಭದಲ್ಲಿ ಹೇರುತ್ತಿರುವುದನ್ನು ಹೀಗೆ ನೋಡಬಹುದು. "ಮೊನ್ನೆ ಬಂದಾಗ ತುಂಡುಡುಗೆಯಲ್ಲಿ ಕಂಡು ಬಂದ ಕಾಡುಜೀವಿಗಳು ಈಗ ಆಶ್ಚರ್ಯವೆಂಬಂತೆ ತಮ್ಮ ಅಕರಾಳ ವಿಕರಾಳ ದೇಹಗಳಿಗೆ ಒಗ್ಗದ ಜೀನ್ಸ್, ಶರ್ಟ್, ಟೀಶರ್ಟ್‌ಗಳಲ್ಲಿ ಮಿಂಚುತ್ತಿರುವುದನ್ನು ನೋಡಿದರೆ ಅವರು ನಾಗರೀಕತೆಗಾಗಿ ಹಪಹಪಿಸುತ್ತಿರುವುದನ್ನು ಗಮನಿಸಬಹುದಾಗಿತ್ತು"[೬೭] ಎಂದು ಸರ್ವೇಯರ್ ಆಗಿದ್ದ ಕೆಲಸ ಮಾಡಿದ್ದ ಮುಖ್ಯ ಪಾತ್ರವು ವಿಶ್ಲೇಷಿಸುತ್ತದೆ.

ಮೂಲ ಸಂಸ್ಕೃತಿಯನ್ನು ನಾಗರಿಕತೆ ಎಂದು ಒಪ್ಪಿಕೊಳ್ಳದ ಈ ಪಾತ್ರವು ನಾಗರೀಕತೆ ಎಂದರೆ ಅದು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಎಂಬ ಧೋರಣೆಯನ್ನು ಇಲ್ಲಿ ತಾಳಿದಂತಿದೆ. ನಿಸರ್ಗದತ್ತವಾಗಿ ರೂಪುಗೊಂಡಿದ್ದ ನಾಗದೈವದ ದೇವಸ್ಥಾನವನ್ನು ಒಡೆದುಹಾಕಿ ಇಲ್ಲವೇ ನಾಶಗೊಳಿಸಿ ಆ ಸ್ಥಾನದಲ್ಲಿ ಈಗ ಹೊಸದಾದ ಆಧುನಿಕ ಕಾಲದ ದೇವಸ್ಥಾನವನ್ನು ನಿರ್ಮಿಸಲಾಗಿತ್ತು. ಇದನ್ನು ಕಂಡ ಲೇಖಕರಿಗೆ ಈಗ ಮಾಡಿರುವ ಆಧುನಿಕತೆಯಿಂದ ಇದು ನಿಜವಾಗಿಯೂ ನಾಗರೀಕತೆಯಲ್ಲ ಎಂದು ಅನ್ನಿಸಿತ್ತು. ಅಲ್ಲದೇ "ಆಡಂಬರದ ಮಂದಿರದಲ್ಲಿ ಉತ್ಸವ ಮೂರ್ತಿಯೇ ಕಾಣೆಯಾದಂತೆ ಭಾಸವಾಗಿತ್ತು."[೮೦] ಎನ್ನುವಲ್ಲಿ ಮೂಲದೇವಸ್ಥಾನದ ಜಾಗದಲ್ಲಿ ಹೊಸದೊಂದು ದೇವಸ್ಥಾನವನ್ನು ಕಟ್ಟಲಾಗಿತ್ತು.

ಹಿಂದೆ 'ಹಾವೂರು' ಎಂದ ಜಾಗದಲ್ಲಿ ಈಗ ಬಂದು ಸರ್ವೇಯರ್ ಆಗಿ ಕೆಲಸ ಮಾಡಿದ್ದ ಲೇಖಕರು ಬಂದಾಗ ಹಾವೂರು ಎಲ್ಲಿದೆ ಎಂದು ಕೇಳಿದಾಗ ಹಾವೂರು ಅನ್ನುವುದು ಯಾವುದೂ ಇಲ್ಲ ಎನ್ನುತ್ತಾರೆ. ನಂತರ ಅಲ್ಲಿಯೇ ಇದ್ದ ವ್ಯಕ್ತಿಯೊಬ್ಬ ಹಾವೂರನ್ನು ಈಗ 'ಸ್ನೇಕ್ ಟೆಂಪಲ್' ಎಂಬ ಹೊಸ ಹೆಸರನ್ನು ಪಡೆದುಕೊಂಡಿತ್ತು. ದೇವಸ್ಥಾನದ ಬಲಗಡೆ ಸ್ನೇಕ್ ಪಾರ್ಕ್ ಮಾಡಿ ಭಾರತದಲ್ಲಿ ಕಂಡುಬರುವ ವಿವಿಧ ಜಾತಿಗಳ ಹಾವುಗಳ ಕಲಾಕೃತಿಗಳನ್ನು ಗಾಜಿನ ಪೆಟ್ಟಿಗೆಗಳಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಅಲ್ಲದೇ ಅಲ್ಲೊಬ್ಬ ಭಿಕ್ಷುಕ "ಹೆದ್ದಾರಿ ಅಕ್ಕಪಕ್ಕ ಬಿದ್ದಿದ್ದ ಪ್ಲಾಸ್ಟಿಕ್ ಹಾಳೆಗಳನ್ನು ಗುಳೆ ಹಾಕಿಕೊಂಡು ರಸ್ತೆಯಲ್ಲಿದ್ದ ಒಂದೆರೆಡು ಬೀದಿ ದನಗಳು ಕೊರಳು ಹಿಡಿದು ತಿನ್ರಿ ತಿನ್ರಿ ಅಂತ ಪೀಡಿಸತೊಡಗಿದ್ದ. ಹಗಲೆಲ್ಲಾ ಉಳುಮಿ ಮಾಡಿ ದಣಕೊಂಡಿರಿ. ಈಗ್ಯಾಕ ಮೇವು ತಿನ್ನುವಲ್ರಿ? ಎಂದು ಗೋಳೋ ಅಂತ ಅಳ್ಳಾಕ ಹತ್ತಿದ ಬಿಜುಗೌಡ."[೮೧] ಇಡೀ ಊರಿನ ನಾಶದ ಜೊತೆಗೆ ಜನಾಂಗ, ಅವರ ಆಚರಣೆ, ನಂಬಿಕೆ, ಕೃಷಿ ಜೀವನ, ಸಂಸ್ಕೃತಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಹಾವೂರಿನಲ್ಲಿ ಮಾಡಿದ್ದನ್ನು ಇಲ್ಲಿ ಕಾಣಬಹುದು.

ಅಲ್ಲದೇ ಹಳ್ಳಿಯಲ್ಲಿನ ಪರಂಪರಾನುಗತವಾಗಿ ಬಂದ ಅನೇಕ ನಂಬಿಕೆ, ಆಚರಣೆಗಳನ್ನು ಮರೆತು ಭೋಗ ಸಂಸ್ಕೃತಿಗೆ ಒಳಗಾಗುತ್ತಿರುವುದನ್ನು ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕತೆಯಲ್ಲಿ ತಿಳಿಸಿರುವುದನ್ನು ಕಾಣಬಹುದು. ಬದಲಾದ ಹಳ್ಳಿಚಿತ್ರಣವನ್ನು ಕತೆಯಲ್ಲಿ ಕಟ್ಟಿಕೊಡಲಾಗಿದೆ. ಇಲ್ಲಿ ಪಾಶ್ಚಾತ್ಯೀಕರಣಗೊಳ್ಳುತ್ತಿರುವ ಹಳ್ಳಿ ವ್ಯವಸ್ಥೆಯಲ್ಲಿ ಅನೇಕ ಬಗೆಯ ಹೊಸ ಹೊಸ ಜೀವನ ಕ್ರಮಗಳು ಪ್ರವೇಶ ಪಡೆಯುತ್ತಿರುವುದನ್ನು ಕಾಣಲಾಗಿದೆ. ನಗರಜೀವನ ಪದ್ಧತಿಯು ನಿಧಾನವಾಗಿ ಜಾಗತೀಕರಣ ಸಂದರ್ಭದಲ್ಲಿ ಪ್ರವೇಶವನ್ನು ಪಡೆಯುವುದರ ಮೂಲಕ ಹಳ್ಳಿಗಳ ಜೀವನಕ್ರಮವು ಬದಲಾವಣೆ ಹೊಂದುತ್ತಿರುವುದನ್ನು ಕತೆಯ ಮೂಲಕ ಅರಿಯಬಹುದಾಗಿದೆ.

ಹಿಂದೂ-ಮುಸ್ಲಿಂ ಎರಡೂ ಧರ್ಮದ ಜನಗಳು ವಾಸ ಮಾಡುವ ಸಿರಿವಾರ ಪಟ್ಟಣ ಸಮೀಪದ ಹಳ್ಳಿ. ಇಲ್ಲಿ ಹುಸೇನಮ್ಮ ಹೋಟೆಲನ್ನು ಇಟ್ಟುಕೊಂಡಿರುತ್ತಾಳೆ. ಅಲ್ಲದೇ ಇಂದು ಆಧುನಿಕ ತಂತ್ರಜ್ಞಾನವು ಟಿ.ವಿ. ಸಿನಿಮಾ, ಮಾಧ್ಯಮಗಳು ಕೇವಲ ಮನೋರಂಜನೆಗಾಗಿ ಮಾತ್ರ ಅದು ಬಳಕೆಯಾಗುತ್ತಿಲ್ಲ. ಪಾಶ್ಚಾತ್ಯೀಕರಣನ್ನು ಅನುಕರಿಸುವಂತೆ ಮಾಡುತ್ತಿರುವುದನ್ನು ಕತೆಯಲ್ಲಿ ತಿಳಿಸಲಾಗುತ್ತಿದೆ. ನಗರೀಕರಣದ ಪ್ರಭಾವವು ಇಂದು ಹಳ್ಳಿಗಳ ಮೇಲಾಗುತ್ತಿರುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಹೋಟೆಲ್‌ನಲ್ಲಿ ಚಿದಾನಂದನ ಮೂಲಕ ನಡೆಯುವ ಬೆಟ್ಟಿಂಗ್ ದಂಧೆಯೂ ಇಡೀ ಹಳ್ಳಿಯನ್ನು ಯಾವ ಧಿಕ್ಕಿನತ್ತ ಸಾಗಿಸುತ್ತಿದೆ ಎನ್ನುವುದನ್ನು ಕತೆಯಲ್ಲಿ ವಿಶ್ಲೇಷಿಸಲಾಗಿದೆ. ಪಾಶ್ಚಾತ್ಯೀಕರಣವು ಉಡುಗೆ-ತೊಡುಗೆಗಳ ಮೇಲೆ ಪ್ರಭಾವವನ್ನು ಬೀರುವುದರ ಜೊತೆಗೆ ಮನೋರಂಜನೆಯ ಮೇಲೂ ಪ್ರಭಾವವನ್ನು ಬೀರುತ್ತಿರುವುದನ್ನು ಬಂಡವಾಳಶಾಹಿ ಹಿನ್ನೆಲೆಯಿಂದ ಕಾಣಬೇಕಾಗುತ್ತದೆ. ಹಳ್ಳಿಗಳಲ್ಲಿ ಹಿಂದೆ ಇದ್ದ ಆಹಾರ ಪದ್ಧತಿಗಳು ಇಂದು ಕಳೆದುಹೋಗುತ್ತಾ ಅಲ್ಲಿ ಕೋಕೋ ಕೋಲಾ ಮುಂತಾದ ತಂಪು ಪಾನೀಯಗಳು ಬಂದು ಸೇರುತ್ತಿರುವುದನ್ನು ಕತೆಯು ತಿಳಿಸುತ್ತದೆ. ಅಲ್ಲದೇ ಹಳ್ಳಿಗಳಲ್ಲಿ ಸಹಕಾರ, ಸಹಬಾಳ್ವೆಯನ್ನು ಹೊಂದಬೇಕಾಗಿದ್ದ ಜನಗಳ ನಡುವೆ ಕಾರ್ಗಿಲ್ ಯುದ್ಧಕ್ಕೂ ಹಾಗೂ ಕ್ರಿಕೆಟ್‌ನ ಆಟಕ್ಕೂ ಸಂಬಂಧವನ್ನು ಕಲ್ಪಿಸುತ್ತಿರುವುದು ಧರ್ಮದ ಹಿನ್ನೆಲೆಯಲ್ಲಿ ಕೋಮುವಾದವನ್ನು ಸೃಷ್ಟಿಸುವ ಮೂಲಕ ಧರ್ಮ-ಧರ್ಮಗಳ ನಡುವೆ ವೈಮನಸ್ಸನ್ನು ರೂಪಿಸುತ್ತಿರುವುದನ್ನು ಕಾಣಬಹುದು.

ಇಡೀ ಕತೆಯಲ್ಲಿ ಮುಖ್ಯವಾಗಿ ಹಳ್ಳಿ ವ್ಯವಸ್ಥೆಯೊಂದು ಹೇಗೆ ನಗರೀಕರಣದತ್ತ ಹೊರಳುತ್ತಾ ಪಾಶ್ಚಾತ್ಯ ಸಂಸ್ಕೃತಿಯನ್ನು ಒಪ್ಪಿಕೊಳ್ಳುತ್ತಿದೆ ಎನ್ನುವುದನ್ನು ತಿಳಿಸುತ್ತಿದೆ. ಹಳ್ಳಿಗಳ ಗ್ರಾಮೀಣ ಆಟಗಳು ಸೌಹಾರ್ದಯುತ ಸಂಬಂಧವನ್ನು ಬೆಸೆದು ಎಲ್ಲರೂ ಒಂದೆಂಬ ನೀತಿಯನ್ನು ಸಾರುತ್ತಿದ್ದವು. ಇಂದಿನ ಪಾಶ್ಚಾತ್ಯ ಆಟಗಳು ಬೆಟ್ಟಿಂಗ್ ಹೆಸರಿನಲ್ಲಿ ದಂಧೆಯನ್ನು ಸೃಷ್ಟಿಸುತ್ತಿರುವುದನ್ನು ಕತೆಯು ತಿಳಿಸುತ್ತಿದೆ. ಅಲ್ಲದೇ ಹಳ್ಳಿಗಳಲ್ಲಿ ಜಾತಿಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದದ್ದನ್ನು ಇಂದು ಮಾಧ್ಯಮಗಳ ಮೂಲಕ ಧರ್ಮ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿರುವುದನ್ನು ಕಾರ್ಗಿಲ್ ಯುದ್ಧ ಮತ್ತು ಕ್ರಿಕೆಟ್ ಬೆಟ್ಟಿಂಗ್ ಮೂಲಕ ತಿಳಿಸಲಾಗಿದೆ.

ಶ್ರೀಧರ ಬಳಗಾರ ಅವರ 'ಒಂದು ಫೋಟೋದ ನೆಗೆಟಿವ್' ಕತೆಯಲ್ಲಿ ನೈಸರ್ಗಿಕವಾದ ಜಲಪಾತವೊಂದನ್ನು ಸರ್ಕಾರವು ಪ್ರವಾಸೋದ್ಯಮ ತಾಣವನ್ನಾಗಿ ಮಾಡಿದ್ದರ ಪರಿಣಾಮವಾಗಿ ಆಗುತ್ತಿರುವ ಬದಲಾವಣೆಗಳನ್ನು ತಿಳಿಸುತ್ತಿದೆ. ಅಲ್ಲದೇ ಹಳ್ಳಿಯ ಜನರು

ನದಿ, ಜಲಪಾತ, ಪ್ರಕೃತಿಯೊಂದಿನ ಭಾವನಾತ್ಮಕ ಸಂಬಂಧವನ್ನು ಇಂದಿನ ಪಾಶ್ಚಿಮಾತ್ಯ ಸಂಸ್ಕೃತಿಯು ನಾಶ ಮಾಡುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇಡೀ ಜಲಪಾತವೇ ಊರಿನ ಅಥವಾ ಸಂಸ್ಕೃತಿಯ ನಾಗರೀಕತೆಯನ್ನು ಹಾಳು ಮಾಡುತ್ತಿದೆ ಎನ್ನುವುದನ್ನು ಕತೆಯು ವಿವರಿಸಲಾಗಿದೆ. ಇಡೀ ಕತೆಯು ಮುಖ್ಯವಾಗಿ ಜಲಪಾತವನ್ನೇ ತಮ್ಮ ಬದುಕಿನ ಒಂದು ಭಾಗ ಎಂದುಕೊಂಡಿದ್ದ ಜನರ ನಡುವೆ ಪ್ರವಾಸೋದ್ಯಮಕ್ಕೆ ಬಂದ ಪ್ರವಾಸಿಗರ ಪಾಶ್ಚಿಮಾತ್ಯ ಸಂಸ್ಕೃತಿಯ ಎಳೆಗಳು ಹೇಗೆ ಬದುಕಿನ ಭಾವನೆಗಳನ್ನು ತುಳಿಯಲ್ಪಡುತ್ತವೆ ಎನ್ನುವುದನ್ನು ತಿಳಿಸುತ್ತಿದೆ.

ವೆಂಕಟಪ್ಪ ಮಾನಸಿಕವಾಗಿ ಅಸ್ವಸ್ಥರಾಗಿರುವುದಕ್ಕೆ ಮುಖ್ಯ ಕಾರಣವನ್ನು ವಾಸುದೇವನಿಗೆ ಲಾಲಗುಳಿ ರಾಜಾರಾಮನು ತಿಳಿಸುತ್ತಾನೆ. ವೆಂಕಟಪ್ಪನ ಮನೆ ಲಾಲಗುಳಿ ಜಲಪಾತದ ಬಳಿಯಿದೆ. "ಈ ಹೊಸ ಊರಿಗೆ ಇತಿಹಾಸವಿರಲಿಲ್ಲ. ಮನೆತನಗಳ ನೆನಪಿರಲಿಲ್ಲ. ಅಲ್ಲಿ ಯಾರೂ ಹುಟ್ಟಿರಲಿಲ್ಲ; ಸತ್ತಿರಲಿಲ್ಲ. ಸ್ಥಾಪಿತ ದೇವರೂ ಇದ್ದಿರಲಿಲ್ಲ. ಆದರೆ ಅಲ್ಲಿಯ ಜನ-ನೆಲ-ಮರಗಳಲ್ಲಿ ತನ್ನ ದೈವ ಜಾಗೃತವಾಗಿದೆ ಎಂದು ಅವರಿಗೆ ಅನಿಸುತ್ತಿತ್ತು. ತೋಟ-ಗದ್ದೆ-ಮನೆ ಮಾಡಿದ ಮೇಲೆ ಅವರ ಕರೆಯನ್ನು ಅನುಸರಿಸಿ ಅನೇಕ ಕುಟುಂಬಗಳು ಬಂದವು. ನದಿ ನೋಡಲು ರಸ್ತೆ ಬಂತು. ಅದರ ಮೇಲೆ ನಾಗಾಲೋಟದ ನಾಗರೀಕತೆಯ ಅಂಬಾರಿ ಬಂತು. ಕಳೆದ ವರ್ಷ ರಾತ್ರಿ ವಸತಿ ಬಸ್ಸು ತಾಲೂಕಿನಿಂದ ಬಂದು ಹೋಗುವ ವ್ಯವಸ್ಥೆಯಾಯಿತು. ಇವೆಲ್ಲ ಕಳೆದ ಐವತ್ತು ವರ್ಷಗಳಲ್ಲಿ ನಿಧಾನಗತಿಯ ನಡೆದ ಘಟನೆಗಳು...."[೨೨] ಎಂದು ರಾಜಾರಾಮ ವಾಸುದೇವನಿಗೆ ಕತೆಯನ್ನು ವಿವರಿಸಿದನು. ಅಂದರೆ ನಿಸರ್ಗದತ್ತವಾದ ಪ್ರದೇಶವೊಂದನ್ನು ಹೇಗೆ ನಗರೀಕರಣಕ್ಕೆ ಒಳಪಡಿಸಲಾಯಿತು ಎನ್ನುವುದನ್ನು ತಿಳಿಸಲಾಗಿದೆ.

ಆದರೆ ಜಲಪಾತದ ಬಗ್ಗೆ ತಿಳಿದ ಅನೇಕ ಜನರು ಊರಿಗೆ ಬರುವುದು, ಅಲ್ಲದೇ ಪ್ರವಾಸಿತಾಣವೆಂದು ಇದರ ಕುರಿತು ವಾಸುದೇವನೇ ಪತ್ರಿಕೆಯಲ್ಲಿ ಪ್ರಕಟಿಸಿದ್ದ. "ಆರಂಭದಲ್ಲಿ ವೆಂಕಟಪ್ಪನವರಿಗೆ ಪ್ರವಾಸಿಗರನ್ನು ಸ್ವಾಗತಿಸಿ, ಜಲಪಾತವನ್ನು ತೋರಿಸಿ, ಮನೆಗೆ ಕರೆದೊಯ್ದು ಸತ್ಕರಿಸಿ ಕಳುಹಿಸಿಕೊಡುವುದರಲ್ಲಿ ಉತ್ಸಾಹ ಆಸಕ್ತಿಗಳಿದ್ದವು. ಬಯಲು ಸೀಮೆಯ ಕಡೆಯಿಂದ ಶಾಲಾ ಮಕ್ಕಳು ಟೆಂಪೋದಲ್ಲಿ ಬಂದಿಳಿದು ಕೇಕೆ, ಚಪ್ಪಾಳೆಗಳಿಂದ ಕುಣಿದು ತಮ್ಮ ಹಾಡುಗಳಲ್ಲಿ ಜಲಪಾತವನ್ನು ಕಲ್ಪಿಸಿಕೊಂಡು ಹಾರಿಹೋಗುವಂತೆ ಮೆರೆದಾಡುತ್ತಿದ್ದರು. ದೂರದ ನಗರವಾಸಿಗಳು ಸ್ವರ್ಗ ಕಂಡಂತೆ ಬೆರಗಿನಿಂದ ತನ್ಮಯರಾಗಿ

ವರ್ತಿಸುತ್ತಿದ್ದರು."[೮೩] ನಗರೀಕರಣದಿಂದಾಗಿ ಆಗುತ್ತಿರುವ ಬದಲಾವಣೆಗಳ ಜೊತೆಗೆ ನಮ್ಮ ವರ್ತನೆಗಳು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುವುದರ ಮೂಲಕ ಪ್ರಕೃತಿಯನ್ನು ಹಾಳು ಮಾಡುತ್ತಿರುವುದನ್ನು ಕತೆಯಲ್ಲಿ ವಿವರಿಸಲಾಗಿದೆ.

ಜಲಪಾತವನ್ನು ವೀಕ್ಷಿಸಲು ಬರುವವರ ಸಂಖ್ಯೆಯೂ ಹೆಚ್ಚಾಯಿತು. ಸಿನಿಮಾದವರು ಇಲ್ಲಿಗೆ ಬಂದು ಎರಡು ದಿನ ಶೂಟಿಂಗ್ ಮುಗಿಸಿಕೊಂಡು ಹೋದರು. ಇಂತಹ ಸಂದರ್ಭದಲ್ಲಿ ಹುಡುಗನೊಬ್ಬ ಜಲಪಾತದ ಸನಿಹದ ಕಲ್ಲ ಮೇಲೆ ಕುಳಿತು ಫೋಟೋ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿಂದ ಅವನನ್ನು ಕಾಪಾಡಿಕೊಂಡು ಬಂದ ವೆಂಕಟಪ್ಪನವರಿಗೆ ಇವರ ಇಂತಹ ನಡವಳಿಕೆಗಳು ಆತಂಕವನ್ನು ಸೃಷ್ಟಿಸಿತ್ತು. ಅಲ್ಲದೇ "ವಿವಿಧ ರೀತಿಯ ವ್ಯಸನಗಳು, ರೌಡಿಗಳೂ ಬಂದು ವಿಕೃತ ಮನರಂಜನೆಗೆ ತೊಡಗುತ್ತಿದ್ದರು. ಜಲಪಾತದಂಚಿನ ಹಾಸುಗಲ್ಲುಗಳ ಮೇಲೆ ಪ್ರೀತಿಯ ಸಂಕೇತ, ಅಶ್ಲೀಲ ಚಿತ್ರ, ಪ್ರೇಮಿಗಳ ಹೆಸರು, ಅವಾಚ್ಯ ಸಾಲುಗಳನ್ನು ಬರೆದು ಹೋಗುತ್ತಿದ್ದರು. ಒಮ್ಮೆ ವೆಂಕಟಪ್ಪನವರಿಗೆ ತಮ್ಮ ಮನೆಯ ಮೇಲೆ ಗೋವಾದ ಹುಡುಗರಿಗೆ ರಾತ್ರಿ ವಸತಿಗೆ ಅನುಕೂಲ ಮಾಡಿಕೊಟ್ಟು, ಮಧ್ಯರಾತ್ರಿ ಅವರ ಕುಡಿತ, ಹೊಡೆದಾಟಗಳನ್ನು ನಿಯಂತ್ರಿಸುವುದರಲ್ಲಿ ಸೋತು ಹೋಗಿದ್ದರು. ನೀರಿನಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆದು ಊರವರು 'ನಾವು ಈ ನೀರನ್ನು ಕುಡಿಯೋದು ಹೇಗೆ?' ದೇವರ ಪೂಜೆಗೆ ಬಳಸೋದು ಹೇಗೆ? ಎಂದು ತಕರಾರಿಗೆ ತೊಡಗಿದರು. ಹೀಗೆ ನೀರಿನ ಪಾವಿತ್ರ್ಯಕ್ಕೆ ಮನೆಯ ಖಾಸಗೀತನಕ್ಕೆ ಭಂಗ ಉಂಟಾಯಿತು."[೮೪]

ಪಾಶ್ಚಾತ್ಯ ಸಂಸ್ಕೃತಿಯು ಹೇರಿರಬಹುದಾದ ಇಂತಹ ಅಸಭ್ಯ ವರ್ತನೆಗಳನ್ನು ವೆಂಕಟಪ್ಪನವರ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಅಲ್ಲದೇ ನೀರನ್ನು ಕುಡಿಯಲು ಬಳಸುವುದರ ಜೊತೆಗೆ ದೇವರೆಂದು ಪೂಜಿಸುವ ಜನರ ಮೇಲೆ ಕೌರ್ಯವನ್ನು ಎರಗುತ್ತಿರುವುದನ್ನು ಕತೆಯಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೇ ಕತೆಯಲ್ಲಿ ಇನ್ನೊಂದು ಮುಖ್ಯ ಸಂಗತಿಯೆಂದರೆ ಜಲಪಾತದ ಮೇಲೆ ಆಧುನಿಕ ನಾಗರೀಕತೆಯ ಅನೇಕ ಪರಿಣಾಮಗಳು ಉಂಟಾದವು. ಇದರ ಪರಿಣಾಮ ಜಲಪಾತವು ಬರಿದಾಯಿತು, ನೀರು ಇಲ್ಲದಾಯಿತು. ಇದನ್ನು ವಾಸುದೇವ "ಜಲಾಶಯದ ಮೇಲೆ ದೋಣಿಯಲ್ಲಿ ತೇಲುತ್ತಾ, ತುಸುವೇ ಕಾಣುತ್ತಿದ್ದ ತೆಂಗಿನ ಮರಗಳ ಚೆಂಡುಗಳಿಂದ ತೆಂಗಿನಕಾಯಿಗಳನ್ನು ತೆಗೆಯುತ್ತಿದ್ದ ಸಾಹಸಿಯೊಬ್ಬನ ಫೋಟೋ ಹೊಡೆದು ಅದಕ್ಕೆ ರಾಷ್ಟ್ರಮಟ್ಟದ ಛಾಯಾಚಿತ್ರ ಪ್ರಶಸ್ತಿ ದೊರಕಿತ್ತು. ತನ್ನಳಿವಿನ ಸಂದರ್ಭದಲ್ಲಿ ಪ್ರಕೃತಿ ತನ್ನ ಅಸ್ತಿತ್ವವನ್ನು ಕಲೆಯಲ್ಲಿ

ಪ್ರತಿಷ್ಠಾಪಿಸಿಕೊಳ್ಳುತ್ತದೆ ಎಂಬುದಕ್ಕೆ ವಾಸುದೇವರ ಛಾಯಾಚಿತ್ರಗಳು ಅತ್ಯುತ್ತಮ ನಿದರ್ಶನಗಳು ಎಂದು ಪ್ರಶಸ್ತಿ ಪುರಸ್ಕೃತ ಚಿತ್ರಣ ಕುರಿತು ಪತ್ರಿಕೆಗಳಲ್ಲಿ ವರದಿ ಮಾಡಿದ್ದರು."[೮೫]

ಇಡೀ ಕತೆಯು ನಗರೀಕರಣಕ್ಕೆ ಒಳಗಾಗಿ ಹಳ್ಳಿಯ ಜೊತೆಗೆ ಪ್ರಕೃತಿಯು ತನ್ನ ಮೂಲ ಅಂಶಗಳನ್ನು ಕಳೆದುಕೊಳ್ಳುತ್ತಿರುವುದನ್ನು ತಿಳಿಸಲಾಗಿದೆ. ಬದಲಾದ ಸಾಂಸ್ಕೃತಿಕ ಜಗತ್ತಿನಲ್ಲಿ ಪಾಶ್ಚಾತ್ಯೀಕರಣದ ಪ್ರಭಾವ ಕೇವಲ ಮನುಷ್ಯನ ಮೇಲೆ ಮಾತ್ರ ಆಗದೇ ಅದು ಪ್ರಕೃತಿಯನ್ನು ಅಳಿವಿನಂಚಿಗೆ ಒಯ್ಯುತ್ತಿದೆ ಎನ್ನುವುದನ್ನು ಕತೆಯು ಕಟ್ಟಿಕೊಡುತ್ತಿದೆ. ಅಲ್ಲದೇ ಪ್ರಕೃತಿಯನ್ನು ಉಳಿಸಬೇಕಾದ ಸರ್ಕಾರಗಳು ಪ್ರವಾಸೋದ್ಯಮದ ಹೆಸರಿನಲ್ಲಿ ಮಾಡುತ್ತಿರುವ ಜನರ ಕೌರ್ಯವನ್ನು ತಿಳಿಸುತ್ತಿದೆ. ಅಲ್ಲದೇ ಹಳ್ಳಿ ಜನರು ಪ್ರಕೃತಿಯೊಂದಿಗಿನ ಭಾವನಾತ್ಮಕ ನಂಟನ್ನು ನಗರ ಪ್ರದೇಶದ ಜನರು ಪಾಶ್ಚಿಮಾತ್ಯ ಸಂಸ್ಕೃತಿಯ ದಾಳಿಯಿಂದ ಹಾನಿಗೊಳಗಾಗುತ್ತಿರುವುದನ್ನು ಕತೆಯಲ್ಲಿ ವಿಶ್ಲೇಷಿಸಲಾಗಿದೆ.

೪.೬ ಮಹಿಳೆ

ಮಹಿಳೆಯನ್ನು ಪ್ರಾಚೀನ ಕಾಲದಿಂದಲೂ ಭಾರತೀಯ ಸಾಂಪ್ರದಾಯಿಕ ಸಮಾಜವು ಶೋಷಣೆಗೀಡು ಮಾಡಿಕೊಂಡು ಬರುತ್ತಿರುವುದನ್ನು ನೋಡಬಹುದಾಗಿದೆ. ಇಂತಹ ಸಮಾಜದಲ್ಲಿ ಮಹಿಳೆಯನ್ನು ಕೇವಲ ನಾಲ್ಕು ಗೋಡೆಯ ನಡುವೆ ಇರುವಂತೆ ನಡೆಸಿಕೊಂಡು ಬಂದಿರುವ ಸ್ಥಿತಿಯನ್ನು ನೋಡಿದರೆ ನಿಜಕ್ಕೂ ಅಸಮಾನತೆಯನ್ನು ಮಹಿಳೆಯ ವಿಷಯದಲ್ಲಿ ಆಗುತ್ತಿರುವ ಹಿನ್ನೆಲೆಯನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ಹೆಣ್ಣನ್ನು ಕೇವಲ ಮನೆಯ ಒಳಗಡೆ ಮಾತ್ರ ಕೆಲಸವನ್ನು ಮಾಡುವ ಸ್ಥಿತಿಯನ್ನು ನಿರ್ಮಿಸಲಾಗಿತ್ತು. ಇದನ್ನು ವಸಾಹತುಶಾಹಿಯು ಭಾರತದಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದ ನಂತರದಲ್ಲಿ ಅವರು ಪ್ರಾರಂಭಿಸಿದ ಶಿಕ್ಷಣ ವ್ಯವಸ್ಥೆಯಿಂದ ಅನೇಕ ಸಮಾಜ ಸುಧಾರಕರು ಹುಟ್ಟಿಕೊಂಡರು. ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿದ್ದ ಶೋಷಣೆಗಳನ್ನು, ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ನಿವಾರಿಸುವಲ್ಲಿ ಅನೇಕ ಸುಧಾರಕರು ಹೋರಾಟಗಳನ್ನು ಮಾಡಿಕೊಂಡದ್ದನ್ನು ಕಾಣಬಹುದಾಗಿದೆ.

ಅಲ್ಲದೇ ಕನ್ನಡ ಸಾಹಿತ್ಯದಲ್ಲಿಯೂ ಇಂತಹ ಮಹಿಳಾ ಪರವಾದ ನೆಲೆಯನ್ನು ಸಾಹಿತ್ಯದಲ್ಲಿ ಮೊದಲ ಬಾರಿಗೆ ವಚನಸಾಹಿತ್ಯದ ಮೂಲಕ ನೋಡಬಹುದು. ಪುರುಷವಾದಿ ಸಮಾಜದ ಅನೇಕ ಮಹಿಳಾ ಶೋಷಣೆಯನ್ನು ಅಕ್ಕಮಹಾದೇವಿ, ಸೂಳೆ ಸಂಕವ್ವ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ ಮುಂತಾದವರು ಮಹಿಳಾಪರವಾದ ಧ್ವನಿಗಳನ್ನು ಎತ್ತಿದ್ದನ್ನು

ವಚನಗಳ ಮೂಲಕ ತಿಳಿಯಬಹುದು. ಅಲ್ಲದೇ ಎಪ್ಪತ್ತರ ಕೊನೆಯ ದಶಕದಲ್ಲಿ ಹುಟ್ಟಿಕೊಂಡ ಸ್ತ್ರೀವಾದಿ ಚಿಂತನೆಯು ಮಹಿಳಾ ಸಾಹಿತ್ಯದ ಹಿನ್ನೆಲೆಯಲ್ಲಿ ಅನೇಕ ಪರಿಣಾಮಕಾರಿ ಬದಲಾವಣೆಗಳನ್ನು ಮಾಡಿರುವುದನ್ನು ಕಾಣಬಹುದು.

ಇನ್ನೂ ಜಾಗತೀಕರಣ ಸಂದರ್ಭದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ನೋಡುವುದಾದರೆ ಕತೆಗಳಲ್ಲಿ ಇನ್ನೂ ಪುರುಷವಾದಿ ಮನೋಧೋರಣೆ, ಆಯ್ಕೆಯ ಸ್ವಾತಂತ್ರ್ಯ ಇಲ್ಲದಿರುವುದು, ದೌರ್ಜನ್ಯ, ಅತ್ಯಾಚಾರ, ಪುರುಷರ ಇಂತಹ ಧೋರಣೆಗೆ ಪ್ರತಿರೋಧವಾಗಿ ಮಹಿಳೆಯರು ತಾಳುವ ನಿಲುವನ್ನು ಚರ್ಚಿಸಲಾಗಿದೆ. "ಜಾಗತೀಕರಣ ಸಂಸ್ಕೃತಿಯು ಮಹಿಳೆಯರನ್ನು ಕೇವಲ ಮಾರುಕಟ್ಟೆಯ ವಸ್ತುವಾಗಿ, ಸರಕನ್ನಾಗಿಸಿದೆ. ಜಾಗತೀಕರಣದಲ್ಲಿ ಎಲ್ಲವೂ ಮಾರುಕಟ್ಟೆಯ ಮೂಲಕವೇ ನಿರ್ಧಾರವಾಗಬೇಕು. ಇಲ್ಲಿ ಮಾರುಕಟ್ಟೆಯ ಮೂಲಕವೇ ಸ್ತ್ರೀಯರ ದುಡಿಮೆ ಅಧಿಕೃತತೆಯನ್ನು ಪಡೆಯಬೇಕಿದೆ. ಹೆಣ್ಣು ಇಲ್ಲಿ ಕೇವಲ ಮಾರಾಟದ ಇಲ್ಲವೇ ಕೊಳ್ಳುವ ಸರಕು ಮಾತ್ರ"[೮೬] ಎನ್ನುವುದಾಗಿ ಕೆ. ಷರೀಫಾ ಅವರು ಮಹಿಳೆಯನ್ನು ಸಮಾಜವು ನೋಡುತ್ತಿರುವ ದೃಷ್ಟಿಕೋನವನ್ನು ಕುರಿತಾಗಿ ಚರ್ಚಿಸುತ್ತಾರೆ.

೪.೬.೧ ಪುರುಷವಾದಿ ಧೋರಣೆ

ಮಹಿಳೆಗೆ ಆಯ್ಕೆಯ ಸ್ವಾತಂತ್ರ್ಯ ಇಲ್ಲ ಎನ್ನುವ ಉದ್ದೇಶವನ್ನು ಪುರುಷವಾದಿ ಸಮಾಜವು ಹೇಗೆ ಬೇರೆಯದೇ ನೆಲೆಯಲ್ಲಿ ಬದಲಾದ ಸಮಾಜದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಆಲೋಚಿಸುತ್ತದೆ ಎನ್ನುವುದನ್ನು ಜಯಂತ್ ಕಾಯ್ಕಿಣಿ ಅವರ 'ತೂಫಾನ್ ಮೇಲ್' ಕತೆಯ ಮೂಲಕ ನೋಡಬಹುದು. ಕತೆಯ ಪಾತ್ರವಾದ ಮಧುವಂತಿ ತನ್ನ ಮಗಳಾದ ಸೋನಿಯ ಜೀವನ ಮತ್ತು ಅವಳ ಭವಿಷ್ಯದ ದೃಷ್ಟಿಯಿಂದ ಸಿನಿಮಾ ಕ್ಷೇತ್ರದಲ್ಲಿ ಉದ್ಯೋಗವನ್ನು ಮಾಡುತ್ತಿರುತ್ತಾಳೆ. ಇಂತಹ ಆರ್ಥಿಕ ಸ್ಥಿತಿಯ ದುಃಸ್ಥಿತಿಯ ನಡುವೆಯು ಅವಳ ಗಂಡ ಬಲರಾಮ ಅವಳನ್ನು ಮಾನಸಿಕವಾಗಿ ಅಲ್ಲದೇ ದೈಹಿಕವಾಗಿ ಹಿಂಸಿಸುವ ಮೂಲಕ ಪುರುಷವಾದಿ ಮನೋಧೋರಣೆಯನ್ನು ಹೊಂದಿದ್ದಾನೆ.

ಮಧುವಂತಿಯು ತನ್ನ ಮಗುವನ್ನು ಮತ್ತು ಮನೆಯ ಕಷ್ಟಕ್ಕಾಗಿ ಉದ್ಯೋಗದ ದಾರಿಯನ್ನಾಗಿ ಸಿನಿಮಾ ಕ್ಷೇತ್ರದಲ್ಲಿ ಡ್ಯಾನ್ಸರ್ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದಾಳೆ. ಆದರೆ ಇದನ್ನು ಗಂಡನಾದ ಬಲದೇವನು ಆಕ್ಷೇಪಿಸುತ್ತಾನೆ. ಬಲದೇವನನ್ನು ಕುರಿತಂತೆ ಮಧುವಂತಿ "ಈ ಮುಠ್ಠಾಳ ನನ್ನ ಡ್ಯಾನ್ಸ್ ರಿಹರ್ಸಲ್ಸನ್ನು ಅಲ್ಲಿ ಅಡಗಿ ಕುಳಿತು ನೋಡುತ್ತಿದ್ದ. ಹೇಳು, ಕಳ್ಳತನಾ ಮಾಡ್ತಿದ್ದೀನಾ ಇಲ್ಲಿ ನಾನು? ಹೀಗೆ ಅವನು ಕದ್ದು ಹೊಂಚು ಹಾಕಿ ನನ್ನ ಮೇಲೆ ನಿಗಾ ಇಡಲಿಕ್ಕೆ?"[೮೭] ಎಂದು ಗಂಡನ ಅನುಮಾನದ ಬಗ್ಗೆ ತೂಫಾನನ್ನು ಪ್ರಶ್ನಿಸುತ್ತಾಳೆ.

ಅವಳ ಬಗ್ಗೆ ಬಲದೇವನಿಗೆ ಇರುವ ಆಕ್ಷೇಪವೆಂದರೆ "ತೂಫಾನ್... ನಿನಗೆ ಗೊತ್ತಿಲ್ಲ. ಪ್ರತಿದಿನ ನನ್ನೆದುರು ನಾಟಕ ಆಡ್ತಾಳೆ ಇವಳು. ನಾನು ಇವಳನ್ನು ಮುಟ್ಟಿ ಸಮೀಪ ಎಳಕೊಂಡರೆ ನಾಚಿದಂತೆ ನಾಟಕ ಮಾಡ್ತಾಳೆ. ಹೇಗೆ ನಾಚಿದಂತೆ ಮಾಡ್ತಿ ಅಂತಿ. ಪಿಕ್ಚರಲ್ಲಿ ಪ್ರಥಮರಾತ್ರಿ ತಲೆಯ ಮೇಲೆ ಸೆರಗನ್ನು ಹೀರೋ ಸರಿಸುವಾಗ ಹೀರೋಯಿನ್ ಲಜ್ಜೆಯಿಂದ ಕಣ್ಮುಚ್ತಾಳಲ್ಲ ಹಾಗೆ. ಸುಳ್ಳು, ಎಲ್ಲಾ ಸುಳ್ಳು. ನನಗೇನೂ ತಿಳಿದಿಲ್ಲ ಅಂದ್‌ಕೊಂಡಿದಾಳೆ. ಸುಳ್ಳು ಲಜ್ಜೆ ಅದು. ಹೀರೋಯಿನ್ ಆಗೋ ಕನಸು ಅದು. ಹೀರೋಯಿನ್ ಆಗೋದಂತೂ ಹಣೇಲಿ ಬರೆದಿಲ್ಲಾ ಮೂರು ಕಾಸಿನ ಎಕ್‌ಸ್ಟ್ರಾ ಆಗಿದಾಳೆ. ಗಂಡನ ಕಣ್ಣಿಗೆ ಮಣ್ಣೆರೆಚ್ತಾಳೆ, ನಾಚ್ತಾಳೆ...."[೮೮] ಎಂದು ತೂಫಾನ್‌ನ ಮುಂದೆ ಹೇಳುತ್ತಾನೆ.

ಬಲದೇವ ಮತ್ತೊಂದು ಹೆಣ್ಣಿನ ಬಗ್ಗೆ ಮಾತನಾಡುವ ಮಾತುಗಳು ಇವನ ಪುರುಷವಾದಿ ಮನೋಧೋರಣೆಯ ಯಜಮಾನಿಕೆಯನ್ನು ನಿರೂಪಿಸುತ್ತವೆ. ಹೆಣ್ಣನ್ನು ಹತ್ತಿಕ್ಕುವ ಅವನ ಆಲೋಚನೆಯನ್ನು ಮಧುವಂತಿಯ ಮೇಲೆ ಬಲವಂತವಾಗಿ ಹೇರುವ ಕೆಲಸವನ್ನು ಅವಳನ್ನು ಮಾನಸಿಕವಾಗಿ ಹಿಂಸೆ ನೀಡುವ ಮೂಲಕ ತನ್ನ ಕೌರ್ಯವನ್ನು ಮೆರೆಯುತ್ತಾನೆ. ಮಧುವಂತಿ ಉದ್ಯೋಗಕ್ಕೆ ಹೋಗುವುದನ್ನು ಅಲ್ಲಿನ ಇವಳ ವರ್ತನೆಯನ್ನು ಅವನು ಸಹಿಸದವನಾಗಿದ್ದಾನೆ. "ಆಗಿನಿಂದ ನೋಡ್ತಿದೇನೆ ಇಲ್ಲಿ, ಆ ಡುಮ್ಮಿ ಡಾನ್ಸ್ ಮಾಸ್ಟರ್ ರಿಪೀಟ್ ಎಂದು ಸೀಟಿ ಹೊಡೆದಾಗೆಲ್ಲ ಎಲ್ಲರ ದುಪ್ಪಟ್ಟ ಇಲ್ಲದ ಎದೆಯನ್ನಷ್ಟೇ ಹಿಂದು ಮುಂದೆ ಜೋರಾಗು ಕುಲುಕಿಸುತ್ತಿದ್ದೀ. ಸ್ಟಾಪ್ ಅಂದಾಗ ನಿಲ್ಲಿಸ್ತೀ. ಮತ್ತೆ ಸೀಟಿ ಹೊಡೆದದ್ದೇ ಮತ್ತೆ ವನ್ ಟು ಥ್ರೀ ಫೂರ್ ಎದೆ ಕುಲುಕೋದು, 'ಇನ್ನೂ ಜೋರಾಗಿ' ಅಂತ ಡುಮ್ಮಿ ಹೇಳಿದರೆ ಶ್ವಾಸ ಬಿಟ್ಟು ಬಿಟ್ಟು ಜೋರಾಗಿ ಕುಲುಕೋದು."[೮೯]

ಇಂತಹ ಬಲದೇವನ ಮನಸ್ಥಿತಿಯು ಮಧುವಂತಿಯ ಬಗ್ಗೆ ಕೀಳಾಗಿ ಯೋಚಿಸುವ ಅವಳು ಉದ್ಯೋಗಕ್ಕೆ ತೊಡಗುವ ರೀತಿಯನ್ನು ತನ್ನ ನಿಲುವಿಗೆ ತಕ್ಕಂತೆ ಬಳಸಿಕೊಳ್ಳುವ ಅವಳ ಮೇಲೆ ತನ್ನ ಹಿಡತವನ್ನು ಸಾಧಿಸಬೇಕೆನ್ನುವ ಅವನ ಹಂಬಲವನ್ನು ಕತೆಯಲ್ಲಿ ನಿರೂಪಿಸಲಾಗಿದೆ. ಅಲ್ಲದೇ ಮಧುವಂತಿ ಬಲದೇವನ ಈ ವಿಚಿತ್ರ ನಿಲುವನ್ನು ಕಂಡು ಹೆಂಡತಿ ಮೇಲೆ ಸಂಶಯ ಪಡುವ ಅವನ ಮನಸ್ಥಿತಿಯನ್ನು "ಹೆಂತಿ ಮೇಲೆ ಕದ್ದು ನಿಗಾ ಇಡಲಿಕ್ಕೆ ಬಂದಿದ್ದ. ಗಂಡ್ಸಂತೆ ಗಂಡ್ಸು. ಅಳ್ತಾನೆ ನೊಡು ಹೇಗೆ ಮೀನಾಕುಮಾರಿ ಥರಾ"[೯೦] ಎಂದು ಅವನಿಗೆ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ.

ಮಹಿಳೆಯು ತನ್ನ ಕುಟುಂಬದ ನಿರ್ವಹಣೆಗಾಗಿ ಹೆಣ್ಣೊಬ್ಬಳ ಕೆಲಸವನ್ನು ತನ್ನ ಬದುಕಿನ ಬವಣೆಗಳನ್ನು ನಿರ್ವಹಿಸುತ್ತಿರುವ ಮಹಿಳೆಯನ್ನು ಪುರುಷ ಸಮಾಜವು ನೋಡುವ

ಪರಿಯನ್ನು ಕುರಿತು ಹನುಮಂತ ಹಾಲಿಗೇರಿ ಅವರ 'ಪಿಡುಗು' ಕತೆಯಲ್ಲಿ ಚಿತ್ರಿಸಲಾಗಿದೆ. ಕತೆಯ ಮುಖ್ಯ ಪಾತ್ರವಾದ 'ಲತಾ' ಎನ್ನುವ ಮಹಿಳೆಯೊಬ್ಬರು ತಮ್ಮ ಕುಟುಂಬದ ನಿರ್ವಹಣೆಗಾಗಿ ವೇಶ್ಯೆಯ ವೃತ್ತಿಯನ್ನು ಮಾಡುತ್ತಿರುವುದನ್ನು ಕತೆಯ ಮುಖ್ಯ ಪಾತ್ರ ಆಪ್ತ ಸಹಾಯರು ತಿಳಿಸುತ್ತಾರೆ. ಅವಳ ಕೌಟುಂಬಿಕ ಆರ್ಥಿಕ ಪರಿಸ್ಥಿತಿಯನ್ನು ಅರಿಯದ ಲೇಖಕರು ತಾಲೂಕಾಸ್ಪತ್ರೆಯೊಂದರಲ್ಲಿ ವಿಸಿಟಿಸಿ ಕೇಂದ್ರದಲ್ಲಿ ಆಪ್ತ ಸಮಾಲೋಚಕರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಲತಾ ಎನ್ನುವವರ ಗಂಡನು ಕುಡುಕನೂ, ಹೆಣ್ಣುಬಾಕನೂ ಆಗಿದ್ದ ಆಕಿ ಗಂಡ ಇವುಗಳ ವಿಪರೀತದಿಂದಾಗಿ ನೌಕರಿ ಕಳೆದುಕೊಂಡು ಮನೆಗೆ ಮೂಲವಾಗಿದ್ದಾನಂತೆ.

ಮಗಳು ಪಿಯುಸಿ ಸೈನ್ಸ್ ಅನ್ನು ಓದುತ್ತಿದ್ದು ಅವಳನ್ನು ದೊಡ್ಡ ನೌಕರಿಯೊಂದಕ್ಕೆ ಸೇರಿಸುವ ಆಸೆಯಿಂದ ಲತಾ ಇಂತಹ ದಂಧೆಗೆ ಇಳಿದಿದ್ದಾಳೆ. ಇದೇ ರೀತಿಯ ನೂರಾರು ಮಧ್ಯವಯಸ್ಕ ಸುಸಂಸ್ಕೃತ ಸದ್ಗಹಸ್ರ ಗೃಹಿಣಿಯರೇ ಇಂತಹ ಕೆಲಸ ಮಾಡುತ್ತಿರುವುದು ಆಪ್ತ ಸಲಹೆಗಾರರಾಗಿ ಎರಡು ಮೂರು ತಿಂಗಳಿನಿಂದ ನೋಡಿ ಲೇಖಕರಿಗೆ ಹೇಸಿಗೆ ಅನಿಸಿತ್ತು. ಅಲ್ಲದೇ ಲತಾಳ ಬದುಕನ್ನು ಅವಳ ಕೆಲಸವನ್ನು ಕಂಡ ಲೇಖಕರು ಇಂತಹ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವ ರೀತಿ ಹೀಗಿದೆ. ಇವರ ಈ ಕೆಲಸಕ್ಕೆ "ತಮ್ಮೊಳಗಿನ ಹೇಸಿಗೆಗೆ, ಮೈಮನದ ಹಸಿವಿಗೆ, ಮಕ್ಕಳ ಓದು, ಗಂಡನ ಕುಡಿತ, ಅತ್ತೆ ಮಾವಂದಿರಿಗೆ ಔಷ್ಧಿ....... ಎಂಥೆಂತಹ ಸಬೂಬುಗಳು"[೧೧] ಅಂದರೆ ಆಪ್ತ ಸಹಾಯಕರು ತಾಳುವ ನಿಲುವು ಇಲ್ಲಿ ಮುಖ್ಯವಾಗುತ್ತದೆ. ಹೆಣ್ಣಿಗೂ ಅವಳದೇ ಆದ ಅಸ್ಮಿತೆಯೊಂದಿರುತ್ತದೆ. ತನ್ನತನವನ್ನು ಬಿಟ್ಟು ಹೆಣ್ಣು ಇಂತಹ ಕೆಲಸಕ್ಕೆ ಇಳಿಯುತ್ತಿರುವುದರ ಹಿಂದಿನ ಕಾರಣ ಸತ್ಯವನ್ನು ಹುಡುಕದೇ ಮುಖ್ಯ ಪಾತ್ರದ ಆಪ್ತ ಸಹಾಯಕರು ಕತೆಯಲ್ಲಿ ಪುರುಷವಾದಿ ಮನೋಸ್ಥಿತಿಯನ್ನು ತಾಳಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಕತೆಯಲ್ಲಿ ಲತಾಳು ತನ್ನ ಗಂಡನಿಗೆ ಆಸ್ಪತ್ರೆಯ ಕ್ಯಾಂಟೀನ್‌ನಲ್ಲಿ ಕರೆದುದೊಂಡು ಬಂದು ತುತ್ತು ಮಾಡಿ ತಿನ್ನಿಸಿದ್ದನ್ನು ಕಂಡು ಯಾವನೋ ಮಿಂಡನಿರಬೇಕು ಎಂದು ತಿಳಿಯುವ ಸಹಾಯಕ ಪಾತ್ರದ ಲೇಖಕರ ಮನಸ್ಥಿತಿಯನ್ನು ಇಲ್ಲಿ ಕಾಣಲು ಸಾಧ್ಯ. ಆದರೆ ಲತಾಳ ಗಂಡನ ಆರೋಗ್ಯ ಸರಿಯಿಲ್ಲವೆಂದು ಅವನನ್ನು ಆಸ್ಪತ್ರೆಗೆ ಕರೆದು ತಂದು ಅವನ ಸೇವೆಯನ್ನು ಮಾಡಿದರೂ ಅವನು ಅವಳನ್ನು ಮೋಟ್ಟಡೆ ಹಿಡ್ಕೊಂಡು ಗಂಡ ಎಳೆದಾಡ್ತಿದ್ದ. "ನಿಮ್ಮೌನ, ಮಿಂಡ ಕೊಡೋ ರೊಕ್ಕದಾಗ ನೀ ಒಬ್ಬಾಕೆ ಚೈನಿ

ಮಾಡಬೇಕಂತಿ? ತೆಗಿ ರೊಕ್ಕಾ? ಅಂತ ಅವಳ ಎದೆಗೆ ಕೈಹಾಕಿ ಯಶಸ್ವಿಯಾದ. ಮರುಕ್ಷಣ ಅವನ ಕೈಯಲ್ಲಿ ಒಂದೆರೆಡು ನೋಟುಗಳ ಜೊತೆಗೆ ಆಕೆ ತನ್ನ ಬತ್ತಿದ ಮೊಲೆಗಳು ದುಂಡುಂಗೆ ಕಾಣುಲೆಂತ ತುರುಕಿಕೊಂಡಿದ್ದ. ಹತ್ತಿ ಉಂಡೆಯೂ ಹೊರಬಂತು!"[೨]

ಅಂದರೆ ಪುರುಷವ್ಯವಸ್ಥೆಯು ಹೆಣ್ಣನ್ನು ನೆಡೆಸಿಕೊಳ್ಳುತ್ತಿರುವ ರೀತಿಯನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಗಂಡನಾದವನು ದುಡಿಯದೇ ಇದ್ದಾಗ ಅವಳು ತನ್ನ ದೇಹವನ್ನು ಒಡ್ಡಿ ಮಾಡಿದ ಸಂಪಾದನೆಯನ್ನು ಗಂಡನು ಹೀಗೆ ಒಪ್ಪಿಕೊಂಡು ಅವಳಿಂದ ಹಣವನ್ನು ಪಡೆದುಕೊಳ್ಳುವ ಪ್ರಸಂಗವು ಪುರುಷವಾದಿ ಧೋರಣೆಯ ಮನಸ್ಥಿತಿಯನ್ನು ಕತೆಯು ವಿವರಿಸುತ್ತಿದೆ. ಆದರೆ ಮೊದಲು ಆಸ್ಪತ್ರೆಗೆ ಬಂದಿದ್ದ ಲತಾಳು ನಂತರ ಮಗಳನ್ನು ಕರೆದುಕೊಂಡು ಬಂದಾಗ ನೋಡಿದ್ದ ಆಪ್ತ ಸಹಾಯಕರು ನಂತರದಲ್ಲಿ ಅವಳು ಆಸ್ಪತ್ರೆಗೆ ಬಂದಾಗ ಅವಳು ಸಹ ರಕ್ತ ಪರೀಕ್ಷೆಯನ್ನು ಮಾಡಿಸಿಬೇಕು ಎಂದಾಗ ಇಡೀ ಸಮಾಜದ ವ್ಯವಸ್ಥೆಯು ಮಹಿಳೆಯನ್ನು ಕಾಣುತ್ತಿರುವ ದೃಷ್ಟಿಕೋನವನ್ನು ಕತೆಯಲ್ಲಿ ವ್ಯಕ್ತಪಡಿಸಲಾಗಿದೆ.

ಇದೇ ರೀತಿಯಲ್ಲಿ ಇನ್ನೊಂದು ಕತೆಯಾದ ಹನುಮಂತ ಹಾಲಿಗೇರಿ ಅವರ 'ಕರ್ಕಿಬೇರು' ಕತೆಯಲ್ಲಿ ತುಳಸಮ್ಮನ ಪಾತ್ರದ ಮೂಲಕ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯವನ್ನು ತಿಳಿಸಲಾಗಿದೆ. ಅವಳು ಹಾಲಿಗೇರಿಯಿಂದ ಬಾಗಲಕ್ವಾಟಿಯ ರೈಲು ಹಳಿಯ ಪಕ್ಕದ ಸ್ಲಂಗೆ ಜೋಗಾರ ಪಕ್ರುನ ಜೊತೆಗೆ ಓಡಿ ಬಂದು ಇಲ್ಲಿ ಸೇರಿದ್ದಳು. ಇವಳ ಮಗಳು ಮೂಕಿ ಮಾದೇವಿಗೆ ಸ್ಲಂ ಹುಡುಗಿಯರ ಜೊತೆ ಸೇರಿ ಅವಳ ಹೊಟ್ಟೆ ಮುಂದೆ ಬರುವಂತಾಯಿತು. ಇದು ತುಳಸಿಯ ಗಮನಕ್ಕೆ ಬಂದು ಅವಳಿಗೆ ಎರಡು ಮಕ್ಕಳು ರೇಣುಕಾಂಬಾ ಮತ್ತು ಹನುಮಪ್ಪ ಹುಟ್ಟಿದರು. ಆದರೆ ಮುಂದೆ ಇದೇ ವೃತ್ತಿಯನ್ನು ದಂಧೆಯನ್ನಾಗಿಸಿ ರೂಪಿಸಿಕೊಂಡ ಮೂಕಿ ಮಾದೇವಿಯೂ ಇಂತಹ ಪರಿಸ್ಥಿತಿಯಿಂದ ಬಸುರಿಯಾಗದಂತೆ ಪಳಗಿದ್ದಳು.

ಒಂದು ದಿನ ಮೂಕಿ ಮನೆಗೆ ಬರದೇ ಮರುದಿನ ಬಂದಾಗ ಮೈಮೇಲೆಲ್ಲ ಸಿಗರೇಟಿನ ಸುಟ್ಟ ಗಾಯದಿಂದ ತುಂಬಿತ್ತು. ನಂತರ ಅವಳು ಸಾವನ್ನಪ್ಪಿದ್ದರಿಂದ ಮುನ್ಸಿಪಾಲ್ಟಿ ಗಾಡಿಯೊಂದು ಹೇರಿಕೊಂಡು ವಿಲೇವಾರಿ ಮಾಡಬೇಕಾದ ತ್ಯಾಜ್ಯವೆಂಬಂತೆ ವಿದ್ಯುತ್ ಚಿತಾಗಾರದ ಮುಂದಿಳಿಸಿ ವಿಸರ್ಜನಾ ಪ್ರಕ್ರಿಯೆ ಮುಗಿಸಿತು. ಅಲ್ಲದೇ ಇಡೀ ವ್ಯವಸ್ಥೆಯು ಮಹಿಳೆಯ ಮೇಲೆ ಅಥವಾ ಅನಾಥರ ಮೇಲೆ ಇರುವ ಕ್ರೌರ್ಯವನ್ನು

ಚಿತ್ರಿಸುತ್ತಿದೆ. "ಈ ಕೈಚೀಲದ ಸಹವಾಸದಿಂದ ಮೊಮ್ಮಕ್ಕಳ ಸಾಲಿ ಖರ್ಚು ಭರಿಸುವುದಿರಲಿ, ದಿನದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದು ಕಷ್ಟ ಎಂಬುದು ಅರಿವಿಗೆ ಬಂದಿತು. ಕಾಲ ಬದಲಾವಣೆಯಾಗಿತ್ತು. ಹಳ್ಳಿಗಳಲ್ಲೂ ಸಹ ಫ್ಯಾನ್ಸಿ ಸ್ಟೋರ್ಸ್ ಜಮಾನಾ ಶುರುವಾಗಿತ್ತು."[೯೩]

ಇಂತಹ ಆರ್ಥಿಕ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿರುವ ತುಳಸಮ್ಮನು ಮಗಳ ವೃತ್ತಿಯಲ್ಲಿಯೇ ಮುಂದುವರೆದು ಬದುಕನ್ನು ಸಾಗಿಸಬೇಕಾದ ಅನಿವಾರ್ಯತೆ ಉಂಟಾಯಿತು. ಒಂದು ದಿನ ಹೊರ ಹೋದವಳು "ಅವತ್ತೊಂದಿನ ಅವಳು ಬರಲೇ ಇಲ್ಲ. ರೇಣಿ ಮತ್ತು ಹನ್ಮ್ಯಾ ಹುಡುಕುತ್ತಾ ಅಂಕಲ್‌ಗಳ(ಶೆಡ್) ಬಳಿ ಕೇಳಿಕೊಂಡರು. ಅಂಕಲ್‌ಗಳ ಹೆಂಡತಿಯರು ಬಂದು ಆ ಕೊಳಕು ಹಾಳಾಗಿ ಹೋದದ್ದೇ ಒಳ್ಳೆದಾತು"[೯೪] ಎಂದು ಶಪಿಸುತ್ತಾ ಇವರನ್ನು ಓಡಿಸಿದರು. ಅಂದರೆ ವ್ಯವಸ್ಥೆಯಲ್ಲಿ ಹೆಣ್ಣೊಂದನ್ನು ಸಮಾಜದ ಪುರುಷ ವ್ಯವಸ್ಥೆಯು ನಡೆಸುತ್ತಿರುವ ದೌರ್ಜನ್ಯವನ್ನು ತುಳಸಮ್ಮನ ಪಾತ್ರದ ಮೂಲಕ ತಿಳಿಸಲಾಗಿದೆ.

ಎಚ್.ಎಸ್.ಅನುಪಮಾ ಅವರ 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ' ಎಂಬ ಕತೆಯಲ್ಲಿ ಬದುಕಿನ ಅಂತಿಮ ಹಂತವಾದ ಸಾವನ್ನು ಕುರಿತಂತೆ ಎರಡು ಮಹಿಳಾ ಪಾತ್ರಗಳು ತಳೆಯಬಹುದಾದ ನಿಲುವುಗಳನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತಾರೆ. ಒಂದು ಬಡ ಕುಟಂಬದ ಮಹಿಳೆ ತನ್ನ ಗಂಡ ಮತ್ತು ನಾಲ್ಕು ಮಕ್ಕಳನ್ನು ಹೊಂದಿದ್ದರೆ ಮತ್ತೊಂದೆಡೆ ಶ್ರೀಮಂತ ಕುಟುಂಬದ ಮಹಿಳೆ, ಅವಳ ಗಂಡ ಮತ್ತು ಮಗನ ಚಿತ್ರಣವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಈ ಎರಡೂ ಕುಟುಂಬಗಳಲ್ಲಿಯ ಗಂಡಂದಿರೂ ಕಾಯಿಲೆಯಿಂದ ನರಳುತ್ತಿರುವವರು. ಮಹಿಳೆಯರಿಗೆ ತಮ್ಮದೇ ಆದ ನೋವು-ನಲಿವುಗಳಿದ್ದರೂ ಅವನ್ನು ಸಮಾಜದ ಮುಂದೆ ತೋರ್ಪಡಿಸಿಕೊಳ್ಳಲಾಗದಂತಹ ಪರಿಸ್ಥಿತಿ. ಏಕೆಂದರೆ ಇಂತಹ ಸಂದರ್ಭವನ್ನು ಸೃಷ್ಟಿಸಿರುವುದು ಅವರ ಗಂಡಂದಿರೇ. ಕತೆಯ ಕೊನೆಯಲ್ಲಿ ಈ ಎರಡೂ ಸ್ತ್ರೀ ಪಾತ್ರಗಳು ಸಹ ತಮ್ಮ ಗಂಡಂದಿರನ್ನು ಬದುಕಿಸಲು ಸಕ್ಕರೆ ನೀರನ್ನು ಕೊಟ್ಟು ಇನ್ನೂ ಸ್ವಲ್ಪ ದಿನಗಳ ಕಾಲ ಅವರನ್ನು ಬದುಕಿಸಬಹುದಾದರೂ ಅವರಿಗೆ ಸಕ್ಕರೆ ನೀರನ್ನು ಕೊಡದೆ ಇವರಿಂದಲೇ ನಮ್ಮ ಜೀವನದಲ್ಲಿ ನರಕ ಸೃಷ್ಟಿಯಾಗುತ್ತಿರುವುದು ಎಂಬ ನಿಲುವಿನಿಂದ ಅವರ ಜೀವನವನ್ನು ಮುಕ್ತಿಯತ್ತ ಕೊಂಡೊಯ್ಯುತ್ತಾರೆ ಎಂಬಲ್ಲಿಗೆ ಕತೆಯು ಮುಕ್ತಾಯವಾಗುತ್ತದೆ.

ಕತೆಗಾರ್ತಿಯ ಸೂಕ್ಷ್ಮ ಒಳನೋಟವನ್ನು ಈ ಹಂತದಲ್ಲಿ ಗುರುತಿಸಬಹುದು. ಅವರಿಗೆ ಸಕ್ಕರೆ ನೀರನ್ನು ಕೊಟ್ಟು ಬದುಕಿಸಲು ಸಾಧ್ಯವಿದ್ದರೂ 'ಮುಕ್ತಿ' ನೀಡುತ್ತಿದ್ದೇವೆ

ಎಂಬುದರ ಮೂಲಕ ಇಲ್ಲಿನ ಪರಿಸರದಲ್ಲಿ ದಿನನಿತ್ಯ ನರಕವನ್ನು ತಾವು ಅನುಭವಿಸುತ್ತಿರುವುದಲ್ಲದೇ ತಮ್ಮ ಸುತ್ತಮುತ್ತಲಿನವರಿಗೂ ಈ ನರಕವನ್ನು ಉಂಟುಮಾಡುತ್ತಿರುವುದು ಅತ್ಯಂತ ಹೇಯಕರ ಎಂಬುದನ್ನು ಸರೋಜಮ್ಮ ಎಂಬ ಪಾತ್ರದಿಂದಲೇ ಹೇಳಿಸುತ್ತಾರೆ. ಕತೆಯು ಈ ಎರಡು ಸಾವನ್ನು 'ಮುಕ್ತಿ' ಎಂಬುದಾಗಿ ಗ್ರಹಿಸುವ ಮೂಲಕ ಉಳಿದವರ ಪಾಲಿಗೆ ಅದು ಬದುಕನ್ನು ಸುಂದರಗೊಳಿಸುವ ಪ್ರಯತ್ನವನ್ನು ಮಾಡುತ್ತಿದೆ. ಅಂದರೆ ಇಲ್ಲಿ ಸಾವು ಕೂಡ ಈ ಇಬ್ಬರೂ ಮಹಿಳೆಯರ ಬದುಕಿಗೆ ಸ್ಫೂರ್ತಿಯಾಗಿ ನಿಲ್ಲಬೇಕೆಂಬ ಆಶಯವನ್ನು ಕತೆಯಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣು ಕೇವಲ ಗಂಡಿನ ಅಡಿಯಾಳು, ಅವಳು ಸತಿಸಾವಿತ್ರಿಯರಂತೆ ಗಂಡನ ಸೇವೆಯಲ್ಲಿಯೇ ಬಾಳಬೇಕೆಂಬ ಪುರುಷವಾದಿ ಮನೋಧೋರಣೆಯನ್ನು ಮುರಿಯುವ ಮೂಲಕ ಅವಳಿಗೆ ತನ್ನದೇ ಆದ ಅಸ್ತಿತ್ವವೊಂದಿದೆ, ತನಗೂ ತನ್ನ ಬದುಕು ಮುಖ್ಯ ಎಂಬ ಆಶಯವನ್ನು ಬಡ ಮಹಿಳೆಯು ಮಲ್ಲಿಗೆ ಹೂವನ್ನು ತಂದು ನೆಡುವ ಪ್ರಕ್ರಿಯೆಯ ಮೂಲಕ ತಮ್ಮ ಆಶಯವನ್ನು ಕತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಸುಮಂಗಲ ಅವರ 'ಮುತ್ತಿನ ಬುಗಡಿ' ಕತೆಯಲ್ಲಿ ಬರುವ ಮುಖ್ಯ ಪಾತ್ರಗಳು ಮಧುಕರ, ವಿನುತ(ಮಧುಕರನ ಹೆಂಡತಿ), ಅಮಿತ(ಮಧುಕರ ಮತ್ತು ವಿನುತನ ಮಗ), ಶಿವಾನಿ(ಮಧೂಕರನ ಗೆಳತಿ), ಮಧುಕರನ ಅಣ್ಣ, ಶಿವಾನಿ ಗಂಡ, ಮಧುಕರನ 'ಅವ್ವ'ನ ಪಾತ್ರಗಳಿವೆ. ಮಧುಕರ ತನ್ನ ಸಂಸಾರದೊಂದಿಗೆ ಉದ್ಯೋಗದ ದೃಷ್ಟಿಯಿಂದ ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾನೆ. ಇವನ ತಾಯಿಯ ಆರೋಗ್ಯ ಸರಿಯಿಲ್ಲದ್ದರಿಂದ ಇವನ ಅಣ್ಣ ತಮ್ಮ ತಾಯಿಯ ಕಾಯಿಲೆಯಾದ ಕ್ಯಾನ್ಸರ್ ವಿಚಾರವಾಗಿ ಬೆಂಗಳೂರಲ್ಲಿ ಆಸ್ಪತ್ರೆಗೆ ಸೇರಿಸುವ ವಿಚಾರ ತಿಳಿಸಿ ತೋರಿಸುವ ವ್ಯವಸ್ಥೆ ಮಾಡುತ್ತಾರೆ. ಹಳ್ಳಿಯಿಂದ ಬಂದಿದ್ದ ತನ್ನವ್ವ ಪಟ್ಟಣದವರ ಎದುರಿಗೆ ಮುಜುಗರವಾಗುವಂತೆ ಎಲ್ಲಿ ನಡೆದುಕೊಳ್ಳುತ್ತಾಳೆಂಬ ಗೀಳು ಮಧುಕರನಲ್ಲಿ ಆವರಿಸಿಕೊಂಡಿರುತ್ತದೆ. ಬೆಂಗಳೂರಿನ ನಗರ ಜೀವನ, ಶಾಪಿಂಗ್ ವಿಚಾರಗಳು ಶಿವಾನಿಯ ಪಾತ್ರದೊಂದಿಗೆ ಬಿಚ್ಚಿಕೊಳ್ಳುತ್ತವೆ. ಜಾಗತೀಕರಣದ ಪರಿಣಾಮವಾಗಿ ಇಂದು ಹೇಗೆ ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಾವು ಮಾರುಕಟ್ಟೆಯ ವ್ಯವಸ್ಥೆಗೆ ಅಂಟಿಕೊಂಡಿದ್ದೇವೆ ಎಂಬುದನ್ನು ಕತೆಯು ವಿಮರ್ಶಿಸುತ್ತದೆ. ಅಲ್ಲದೇ ಕತೆಯು ಈ ಎಲ್ಲಾ ಸಂಕೀರ್ಣ ಪರಿಸ್ಥಿತಿಯೊಂದಿಗೆ ಭಾಷೆಯ ಸಮಸ್ಯೆಯನ್ನು ಎತ್ತಿ ಹಿಡಿಯುತ್ತಿದೆ. ಜಾಗತೀಕರಣದ ಮಾರುಕಟ್ಟೆ ವ್ಯವಸ್ಥೆಯಲ್ಲಿ ಆಂಗ್ಲಭಾಷೆಯ ಪ್ರಭಾವದಿಂದ ಇಂದು ಕನ್ನಡ ಭಾಷೆಯ ಬಳಕೆ ಹೇಗೆ ಕಣ್ಮರೆಯಾಗುತ್ತಿದೆ ಎಂಬುದನ್ನು ಶಿವಾನಿ ಪಾತ್ರದ ಮೂಲಕ ಅಭಿವ್ಯಕ್ತಿಸಿದ್ದಾರೆ.

ಕತೆಯ ಮೂಲ ಅಂಶವಾದ ಕಿವಿಯ ಓಲೆಯನ್ನು ಧರಿಸುವ ವಿಚಾರವಾಗಿ ಹಳೆಯ ಸಂಪ್ರದಾಯ ಮರುಕಳಿಸಿ ಇಂದಿನ ಮಹಿಳೆ ಮತ್ತು ಪುರುಷರ ಫ್ಯಾಷನ್ ಆಗಿರುವುದನ್ನು ಮುಖ್ಯವಾಗಿ ಗುರುತಿಸಿ ಭಿತ್ತರಿಸಲಾಗಿದೆ. ತನ್ನ ಕುಟುಂಬದವರಿಗೆ ಪರಂಪರಾಗತ ಬಂದ ಓಲೆಗಳನ್ನು ಶಿವಾನಿಗೆ ತಾಯಿ ಕೊಟ್ಟಿದ್ದರಿಂದ ಕಸಿವಿಸಿಗೊಂಡ ಮಧುಕರ, ಹೆಂಡತಿ ತನ್ನವ್ವ ಶಿವಾನಿಯೊಂದಿಗೆ ಚರ್ಚಿಸುವ ವಿಷಯಗಳು ಪುರುಷ ಪ್ರಧಾನ ನೆಲೆಯಲ್ಲಿ ತೋರುವ ಮನೋಧೋರಣೆಯನ್ನು ಮಧುಕರನ ಮೂಲಕ ಚಿತ್ರಿಸುತ್ತಾರೆ. ಈ ವಿಚಾರವಾಗಿ 'ಅವ್ವ ಒಂದು ಸ್ವತಂತ್ರ ವ್ಯಕ್ತಿತ್ವ ಅನ್ನೋದನ್ನ ನಮ್ಮ ಮನಸ್ಸು ಎಷ್ಟರ ಮಟ್ಟಿಗೆ ಒಪ್ಪಲ್ಲ ಎಂದು ಹಾಗೆಂದು ನಾವು ಒಂದು ಅಪರಿಚಿತ ಭಾವವನ್ನೇ ಬೆಳೆಸಿಕೊಳ್ತೀವಿ. ಕಿರಿಕಿರಿ ಅನಿಸುತ್ತೆ ಅಲ್ವಾ' ಎಂದು ವಿನುತಾ ಕೇಳುವ ಮಾತು ಹೆಣ್ಣು ಹೆಣ್ಣನ್ನು ಅರಿತುಕೊಂಡ ನೆಲೆಯನ್ನು ಭಿತ್ತರಿಸಿದೆ.

ಕತೆಯಲ್ಲಿ ತಾಯಿಯು ತನ್ನ ಸಾವಿನ ಮುಂಚೆ ಎಲ್ಲವನ್ನು ಅಂದರೆ ಆಸ್ತಿ, ಒಡವೆ, ಸೀರೆ ಹಂಚಿಹೋಗುತ್ತಾಳೆ. ಮಧುಕರನಿಗೆ ತನಗೇನೂ ತನ್ನ ತಾಯಿ ನೀಡಿಲ್ಲವೆಂಬ ಚಿಂತೆ ಕಾಡಿದ್ದು ಕಂಡುಬರುತ್ತದೆ. ಶಿವಾನಿಗೆ ತನ್ನವ್ವ ಕೊಟ್ಟಿದ್ದ ಬುಗುಡಿ ತನ್ನ ಬಳಿ ಇದ್ದರೆ ಸಮಾಧಾನವಾದೀತು ಎಂದು ಅದನ್ನು ಕೇಳಲು ಹೋದಾಗ ಅವಳೇ ಪೋನ್ ಮಾಡಿ ತನ್ನ ಗಂಡ ಶಂಕರನೊಂದಿಗೆ ಈ ವಿಚಾರವಾಗಿ ಜಗಳವಾಡಿದರೂ ಅದನ್ನು ಬಿಚ್ಚಿಡಲ್ಲ ಎನ್ನುತ್ತಾಳೆ. ಕೊನೆಗೆ ತನ್ನ ಗಂಡ ಅವಳಿಗೆ ಅವು ಭೂಷಣವಾಗಿವೆ ಎಂದು ಹೇಳಿದ ಮಾತನ್ನು ಮಧುಕರನೊಂದಿಗೆ ಹಂಚಿಕೊಂಡಾಗ ಆ ಬುಗುಡಿಗಳನ್ನು ಅವಳು ನಿಶ್ಚಿತವಾಗಿ ಕೊಡುವುದಿಲ್ಲ ಎಂದು ತಿಳಿದು ಅಲ್ಲಿಯೇ ಮಾತನಾಡುತ್ತಾ ಒಂದು ಮರಕ್ಕೆ ವಾಲಿಕೊಳ್ಳುತ್ತಾನೆ. ಇಲ್ಲಿಗೆ ಕತೆ ಮುಕ್ತಾಯವಾಗುತ್ತದೆ.

ಒಟ್ಟಾರೆಯಾಗಿ ಪುರುಷಪ್ರಧಾನ ಧೋರಣೆ ಹಿನ್ನೆಲೆಯಲ್ಲಿ ಸ್ತ್ರೀಗೆ ತನ್ನದೇ ವಸ್ತುಗಳ ಮೇಲೆ ಸ್ವಾತಂತ್ರ್ಯ ಇಲ್ಲದೇ ಅದು ಪುರುಷನ ಕೈಲಿದೆ ಎನ್ನುವುದನ್ನು ಪ್ರಸ್ತುತ ಕತೆಯು ನಿರಾಕರಿಸುತ್ತದೆ. ಪುರುಷವಾದಿ ಮನೋಸ್ಥಿತಿಯು ಕೇವಲ ಹೆಣ್ಣಿನ ದೇಹದ ಮೇಲೆ ಅಲ್ಲದೇ ಅವಳ ಉಡುಗೆ-ತೊಡುಗೆ, ಆಚಾರ ವಿಚಾರ, ಒಡವೆ ಮುಂತಾದ ಅವಳ ಮೂಲಭೂತ ವಸ್ತುಗಳ ಮೇಲೂ ತನ್ನ ಹಕ್ಕನ್ನು ಸ್ಥಾಪಿಸಿದ್ದೇವೆ ಎಂಬ ಹಂಬಲವನ್ನು ಈ ಕತೆಯು ನಿರಾಕರಿಸಿ ತನಗೂ ತನ್ನದೇ ಆದ ಮೂಲಭೂತ ಹಕ್ಕುಗಳಿವೆ. ತನಗೂ ತನ್ನ ವಸ್ತುಗಳ ಮೇಲೆ ಸ್ವಾಮ್ಯವಿದೆ ಎಂಬುದನ್ನು ನಿರೂಪಿಸುತ್ತದೆ.

೪.೬.೨ ಉತ್ಪಾದನಾ ಕ್ಷೇತ್ರದಲ್ಲಿ ಮಹಿಳೆ

ಉತ್ಪಾದನಾ ಕ್ಷೇತ್ರದಲ್ಲಿ ಇಂದು ಮಹಿಳೆಯರು ಉದ್ಯೋಗವನ್ನು ನಗರಜೀವನ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವುದನ್ನು ಮುಖ್ಯವಾಗಿ ಗುರ್ತಿಸಬೇಕಾಗುತ್ತದೆ. ಆದರೆ ಈ ನೆಲೆಯು ಮಹಿಳೆಯನ್ನು ಕೇವಲ ಪುರುಷವಾದಿ ಧೋರಣೆಯನ್ನು ಮಾತ್ರ ಪ್ರತಿಪಾದಿಸದೇ ಅವಳನ್ನು ಉತ್ಪಾದನಾ ಕ್ಷೇತ್ರದಲ್ಲಿ ಇಲ್ಲವೆನ್ನುವಂತೆ, ನಗಣ್ಯವೆನ್ನುವಂತೆ ಅಭಿಪ್ರಾಯವನ್ನು ರೂಪಿಸಲಾಗಿತ್ತು. ಪುರುಷನು ಮನೆಯಿಂದ ಹೊರಗೆ ದಿನಕ್ಕೆ ೮ ರಿಂದ ೧೦ ಗಂಟೆಗಳು ದುಡಿಯುವ ದುಡಿಮೆ ಮಾತ್ರ ಉತ್ಪಾದನೆ ಎನ್ನುವುದಾಗಿ ತಿಳಿಸಲಾಗಿತ್ತು. ಆದರೆ ಇಂದು ಇಂತಹ ತಿಳುವಳಿಕೆಗಳ ನೆಲೆಯು ಬದಲಾಗಿದೆ. ಸಮಾಜದ ಆರ್ಥಿಕ ವ್ಯವಸ್ಥೆಯಲ್ಲಿ ಪುರುಷರಷ್ಟೇ ಮಹಿಳೆಯೂ ಕೂಡ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕಳು ಎನ್ನುವುದನ್ನು ಮನಗಾಣಲಾಗಿದೆ.

ಪರಂಪರಾನುಗತವಾಗಿ ಮಹಿಳೆಯನ್ನು ನಾಲ್ಕು ಗೋಡೆಯ ನಡುವೆ ಇಟ್ಟು ಮನೆಯ ಹೊರಗೆ ಕೆಲಸಕ್ಕೆ ಹೋಗಲು ಆಗದಿದ್ದ ಪರಿಸ್ಥಿತಿಯು ಇಂದು ಇಲ್ಲ. ಆದರೆ ಅವರ ಉತ್ಪಾದನೆಯನ್ನು ಹೀಗಳೆಯುವ ಅವರನ್ನು ಕೆಲಸಕ್ಕೆ ಬಾರದವರು ಎನ್ನುವ ಮನೋಭಾವನೆಯು ಕಡಿಮೆಯಾಗಿದೆ ಎನ್ನಬಹುದು. ಅಲ್ಲದೇ ಮನೆಯಲ್ಲಿ ದಿನಕ್ಕೆ ೧೨ ಗಂಟೆ ಹಾಗೂ ಮನೆಯ ಹೊರಗೆ ೮ ಗಂಟೆ ಕೆಲಸ ಮಾಡುವ ಮಹಿಳೆಯರ ಉತ್ಪಾದನಾ ಸಾಮರ್ಥ್ಯವು ಪುರುಷರಿಗಿಂತ ಹೆಚ್ಚಿನದ್ದು ಎಂದು ತಿಳಿಯಲಾಗಿದೆ. "ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಪ್ರವೇಶಿಸುವ, ವಿನಿಮಯ ಗುಣವುಳ್ಳ ಚಟುವಟಿಕೆಗಳಿಗೆ ಮಾತ್ರವೇ ಆರ್ಥಿಕ ಮನ್ನಣೆ ಮತ್ತು ಮಾಪನದ ಗುಣವಿರುವುದು. ಇಂಥಾ ಕೆಲಸವನ್ನು ಎಂಟು ಗಂಟೆಗಳಷ್ಟು ಮಾಡಿದರೆ ಅದು ಒಂದು ದಿನದ 'ದುಡಿಮೆ' ಎನಿಸುತ್ತದೆ."[೫] ಎಂದು ಮಹಿಳೆಯರ ಮನೆಕೆಲಸವನ್ನು ಸಹ ದುಡಿಮೆ ಎಂಬುದಾಗಿ ಎಚ್.ಎಸ್.ಶ್ರೀಮತಿಯವರ ಅಭಿಪ್ರಾಯವಾಗಿದೆ.

ಮಹಿಳೆಯು ಇಂದು ನಗರಜೀವನ ವ್ಯವಸ್ಥೆಯಲ್ಲಿ ಅನುಭವಿಸುತ್ತಿರುವ ಅನೇಕ ಸಮಸ್ಯೆಗಳ ಮಧ್ಯೆಯೂ ಪುರುಷರಂತೆ ತಾನು ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಅವಳನ್ನು ಸಮಾಜದಲ್ಲಿ ಎಲ್ಲಾ ಕೆಲಸಗಳಿಗೆ ಬಳಸಿಕೊಂಡರೂ ಅವಳನ್ನು ಮಾರುಕಟ್ಟೆಯ ಸರಕನ್ನಾಗಿ ನೋಡಲಾಗುತ್ತಿದೆ ಎನ್ನುವುದನ್ನು ಜಯಂತ್ ಕಾಯ್ಕಿಣಿ ಅವರ 'ತೂಫಾನ್ ಮೇಲ್' ಕತೆಯಲ್ಲಿ ಚಿತ್ರಿಸಲಾಗಿದೆ. ಮಧುವಂತಿಯು ಮುಂಬೈನಲ್ಲಿ ಸಿನಿಮಾ ಕ್ಷೇತ್ರದಲ್ಲಿ ಡ್ಯಾನ್ಸರ್ ಆಗಿ ಕೆಲಸವನ್ನು

ನಿರ್ವಹಿಸುತ್ತಿದ್ದಾಳೆ. ಪುರುಷವಾದಿ ವ್ಯವಸ್ಥೆಯು ಮಹಿಳೆಯನ್ನು ಸಿನಿಮಾದಲ್ಲಿ ಬಳಸಿಕೊಳ್ಳುತ್ತಿರುವ ರೀತಿಯನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಮಾರುಕಟ್ಟೆಯ ವಸ್ತುವಿನಂತೆ ಮಹಿಳೆಯ ದೇಹವನ್ನು ಪ್ರದರ್ಶಿಸುವ, ಅವಳನ್ನು ಕುಣಿಸುವ ಸಿನಿಮಾ ಕ್ಷೇತ್ರದ ವಾಸ್ತವವನ್ನು ಮಧುವಂತಿ ಪಾತ್ರದ ಮೂಲಕ ಕಟ್ಟಿಕೊಡಲಾಗಿದೆ.

ಅವಳಿಗೆ ಡ್ಯಾನ್ಸರ್ ಆಗಲು ಅನೇಕ ಕಾರಣಗಳಿವೆ. ತನ್ನ ಗಂಡ ಬಲರಾಮನ ಮಾನಸಿಕ ಹಿಂಸೆಯ ಮಧ್ಯೆಯೂ ಅವಳು ತನಗಿರುವ ಮಗುವನ್ನು ಬೆಳೆಸಲು, ಆ ಮಗುವಿಗೆ ಒಳ್ಳೆಯ ಶಿಕ್ಷಣವನ್ನು ನೀಡಲು ಇಂತಹ ಕೆಲಸವನ್ನು ಮಾಡಲೇಬೇಕಾದ ಅನಿವಾರ್ಯತೆ ಅವಳಿಗಿದೆ. “ಇರೋ ಒಂದು ಮರೀನ ಬೆಳೆಸೋಕೆ ಈ ಮಧ್ಯ ವಯಸ್ಸಿನಲ್ಲಿ ಈ ಬಿಸಿಲಿನಲ್ಲಿ ಈ ಹಗಲುವೇಷ ಹಾಕ್ಕೊಂಡು ದಿನಕ್ಕೊಂದು ಸೊಲ್ಲಿಗೆ ನೂರು ಸಲ ಕುಂಡೆ ಅಲ್ಲಾಡಿಸ್ತಿದ್ದೀನಿ”[೯೧] ಎನ್ನುವ ಅವಳ ಮಾತುಗಳು ನಿಜಕ್ಕೂ ವ್ಯವಸ್ಥೆಯು ಹೆಣ್ಣನ್ನು ನೆಡೆಸಿಕೊಳ್ಳುತ್ತಿರುವ ದೃಷ್ಟಿಕೋನವನ್ನು ಚಿತ್ರಿಸುತ್ತಿದೆ. ಇದರ ಹಿಂದೆ ಮಾರುಕಟ್ಟೆಯ ಉದ್ದೇಶವೂ ಕೆಲಸ ಮಾಡುತ್ತಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅರಿವಾಗುತ್ತದೆ.

ಅಲ್ಲದೇ ಮಧುವಂತಿಯು ತನ್ನ ಮಗುವಿನ ಶಿಕ್ಷಣಕ್ಕಾಗಿ “ಎಲ್ಲಿತನಕ ಅಲ್ಲಾಡ್ಸೋಕೆ ಆಗುತ್ತೋ ಅಲ್ಲೀತನಕ ನಡೀಲಿ. ಊಟಿಗೀಟಿ ಔಟ್‌ಡೋರ್ ಇದ್ರೂ ಈಗ ರೆಡಿ ನಾನು. ಬಲದೇವ ಮನೆ ನೋಡ್ಕೋಳ್ಳಲಿ. ಸೋನಿಗೆ ಇಂಗ್ಲೀಷ್ ಮೀಡಿಯಂಗೆ ಹಾಕಬೇಕು”[೯೨] ಎನ್ನುವಲ್ಲಿ ಅವಳೊಳಗಿನ ಮಗುವಿನ ಸಾಮಾಜೀಕರಣಕ್ಕೆ ಮಹಿಳೆಯರ ಪಾತ್ರವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಮಗುವೊಂದನ್ನು ಬೆಳೆಸುವ ಮೂಲಕ ಸಮಾಜಕ್ಕೆ ಅವಳನ್ನು ಉತ್ತಮ ಪ್ರಜೆಯನ್ನಾಗಿ ನೀಡಬೇಕು ಎನ್ನುವ ಅವಳ ಹಂಬಲವನ್ನು ಕತೆಯು ತಿಳಿಸುತ್ತದೆ.

೪.೬.೩ ಅಸಹಾಯಕತೆ

ಅಮರೇಶ ನುಗಡೋಣಿ ಅವರ ‘ಧರೆ ಉರಿದರೆ’ ಎನ್ನುವ ಕತೆಯ ಮೂಲಕ ನೋಡಬಹುದು. ಅಸಮಾನತೆಯು ಸೃಷ್ಟಿಸಿರುವ ಬಿಕ್ಕಟ್ಟುಗಳನ್ನು ಕತೆಯು ಬಿಚ್ಚಿಡುತ್ತಿದೆ. ಅದು ಕೇವಲ ಊರನ್ನು ಮಾತ್ರವಲ್ಲದೇ ಅಲ್ಲಿನ ಜನರು, ಅವರ ನಡುವಿನ ಜಾತಿ ವೈಷಮ್ಯ, ಕೊನೆಗೆ ಮಹಿಳೆಯರನ್ನು ಬಿಟ್ಟಿಲ್ಲ ಎನ್ನುವುದು ವಾಸ್ತವ ಹಳ್ಳಿ ಜಗತ್ತಿನ ಚಿತ್ರಣವನ್ನು ಕಟ್ಟಿಕೊಡುತ್ತಿದೆ. ಸಮಾನತೆಯ ಆಶಯವನ್ನು ಹೊತ್ತಿರುವ ಸಂವಿಧಾನವು

ಇಂತಹ ಅನೇಕ ಕ್ರೌರ್ಯಗಳನ್ನು ನೀಗಿಸುವ ಶಕ್ತಿಯನ್ನು ಹೊಂದಿದ್ದರೂ ನಮ್ಮ ಸಾಂಪ್ರದಾಯಿಕ ಸಮಾಜದ ಕಟ್ಟುಪಾಡುಗಳನ್ನು ಮೀರಲು ಸಾಧ್ಯವಾಗುತ್ತಿಲ್ಲ ಎನ್ನುವುದೇ ವಿಷಾಧಕರ.

ಊರು-ಕೇರಿಯಲ್ಲಿ ಇರುವ ಅಸಮಾನತೆಯ ಚಿತ್ರಣವನ್ನು ಪರಕ್ಕ ಎನ್ನುವ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಊರಿನಲ್ಲಿ ಕಂಡುಬರಬಹುದಾದ ಜಾತಿಯ ಅಸಮಾನತೆಗೆ ಹೆಣ್ಣಿನ ಬದುಕನ್ನು ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಳ್ಳಲಾಗಿದೆ ಎನ್ನುವುದನ್ನು ಪರಕ್ಕನ ಪಾತ್ರದಲ್ಲಿ ಕಟ್ಟಿಕೊಡಲಾಗಿದೆ. ಮಲ್ಕರೆಡ್ಡಪ್ಪನ ಮನೆಯಲ್ಲಿ ಪರಕ್ಕನನ್ನು ಇಟ್ಟುಕೊಂಡಿದ್ದರು. ಆದರೆ ಇದ್ದಕ್ಕಿದ್ದಂತೆ ಪರಕ್ಕ ವಾಂತಿ ಮಾಡಿಕೊಂಡ ಸುದ್ದಿ ಇಡೀ ಊರಿಗೆ ಹಬ್ಬಿತಲ್ಲದೇ ಇದು ರಾಜಕೀಯ ಆಯಾಮವನ್ನು ಪಡೆದುಕೊಂಡಿತು. ಚುನಾವಣೆಯಲ್ಲಿ ಗೆದ್ದು ಊರಪಂಚಾಯಿತಿಯಲ್ಲಿ ಪ್ರಧಾನನಾಗಬೇಕಂತ ಮಲ್ಕರೆಡ್ಡಪ್ಪನು ಉಳಿದ ಸದಸ್ಯರನ್ನು ತನ್ನೆಡೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಇಂತಹ ಘಟನೆಯೊಂದು ಊರಲ್ಲೆಲ್ಲಾ ಗುಲ್ಲೆಬ್ಬಿಸಿತು.

ಪರಕ್ಕನನ್ನು ಹೊರಗೆ ಕಳುಹಿಸಬೇಕೆಂದು ಮಾತನಾಡುತ್ತಿರುವಾಗಲೇ "ಆ ಕಡೆ ದಲಿತರ ಲೀಡರ್ ಆಗಿದ್ದ ದೇವರಾಜ ಮಲ್ಕರೆಡ್ಡಪ್ಪನ ಮನ್ಯಾಗಿರ್‍ತಿದ್ದ ದಲಿತ ಹುಡುಗಿ ಪರಕ್ಕನ ಮ್ಯಾಲೆ ಮ್ಯಾಲಿಂದ ಮ್ಯಾಲೆ 'ರೇಪು' ನಡದಾದ. ಈಗ ಅದು ಬಸುರಾಗ್ಯಾದ. ಅದ್ಕ ಮಲ್ಕರೆಡ್ಡಪ್ಪನೇ ಕಾರಣ ಅಂತ ಎಸ್ಐಗೆ ಕಂಪ್ಲೇಂಟ್ ಕೊಟ್ಟು ಬಂದಾರಂತ."[೮] ಎನ್ನುವ ಸುದ್ದಿ ಮಲ್ಕರೆಡ್ಡನ ಕಿವಿಗೆ ಮುಟ್ಟುತ್ತದೆ.

ಇಲ್ಲಿ ಊರಿನಲ್ಲಿ ಕಂಡುಬರುವ ಜಾತಿವ್ಯವಸ್ಥೆಯ ಕ್ರೌರ್ಯವು ಹೇಗೆ ಅಸಮಾನತೆಯನ್ನು ಸೃಷ್ಟಿಸಿದೆ ಎನ್ನುವುದನ್ನು ಕಾಣಬಹುದು. ಅಲ್ಲದೇ ಪರಕ್ಕನ ಹೆಸರನ್ನು ಬಳಸಿಕೊಂಡು ನಡೆಯುವ ರಾಜಕೀಯದ ಜೊತೆಗೆ ಪರಕ್ಕನನ್ನು ಮನುಷ್ಯಳು ಎಂದು ಪರಿಭಾವಿಸುವ ಕಲ್ಪನೆಯೇ ಇಲ್ಲದಿರುವ ಪರಿಸ್ಥಿತಿಯನ್ನು ಕತೆಯಲ್ಲಿ ತಿಳಿಸಲಾಗಿದೆ. ಅಲ್ಲದೇ ಪರಕ್ಕನನ್ನು ನೆಡೆಸಿಕೊಳ್ಳುತ್ತಿರುವ ರೀತಿ ನಿಜಕ್ಕೂ ಮಾನವೀಯ ಸಂಬಂಧವನ್ನು ಕಳೆದುಕೊಳ್ಳುತ್ತಿರುವ ಅಧೋಸ್ಥಿತಿಯನ್ನು ಕತೆಯ ಮೂಲಕ ಅರಿಯಬಹುದು. ಪರಕ್ಕ ಹೆಣ್ಣು ಎನ್ನುವುದನ್ನು ಮರೆತು ಅವಳನ್ನು 'ಅದು', 'ಇದು' ಎನ್ನುವ ವಸ್ತುವಿನ ರೀತಿ ಕರೆಯುವುದನ್ನು ನೋಡಿದಾಗ ಅವಳನ್ನು ಹೆಣ್ಣೆಂದು ಆಗಲಿ ಅಥವಾ ಎಲ್ಲರಂತೆ ಮನುಷ್ಯಳು ಎನ್ನುವ ಭಾವವನ್ನು ಹೊಂದಿಲ್ಲದಿರುವುದನ್ನು ಕಾಣಬಹುದು.

ಇಡೀ ಕತೆಯಲ್ಲಿ ಕಜ್ಜಿ ಚೆನ್ನನ ಮೇಲೆ ಈ ಆರೋಪವನ್ನು ಹೊರಿಸಿ ಇಬ್ಬರನ್ನು ಮನೆಯಿಂದ ಹೊರಹಾಕುವಂತೆ ಮಲ್ಕರೆಡ್ಡಪ್ಪನು ಹುಲುಗಯ್ಯ ಮತ್ತು ಲಿಂಗೇಶನಿಗೆ ಹೇಳುತ್ತಾನೆ. ಅಲ್ಲದೇ ವ್ಯವಸ್ಥೆಯಲ್ಲಿ ಹೆಣ್ಣನ್ನು ನೆಡೆಸಿಕೊಳ್ಳುತ್ತಿರುವ ಇಂತಹ ಅಸಮಾನತೆಯನ್ನು ಕತೆಯು ನಿರೂಪಿಸುತ್ತದೆ. ಅಲ್ಲದೇ ಮಲ್ಕರೆಡ್ಡಪ್ಪನು ಗುರೆಡಪ್ಪನನ ಸಂಸಾರವನ್ನು ಚಾಕಣ್ಯತನದಿಂದ ಹಾಳು ಮಾಡಿ ಅವನ ಹೆಂಡತಿಯ ಮೇಲೆ ವ್ಯಭಿಚಾರ ಹೊರಿಸಿ ಅವಳು ಸಾಯುವಂತೆ ಮಾಡಿ ಅವನು ಕೆಟ್ಟು ಕುಲಗೆಡುವಂತೆ ಮಾಡಿದ್ದ. ಇಂತಹ ವ್ಯಕ್ತಿಗಳು ಸ್ವಾರ್ಥಕ್ಕಾಗಿ ಹೆಣ್ಣನ್ನು ಆಸ್ತಿಗಾಗಿ ಅವಳ ಜೀವನವನ್ನು ಹಾಳು ಮಾಡುತ್ತಿರುವುದನ್ನು ಇಲ್ಲಿ ವಿವರಿಸಲಾಗಿದೆ.

ಬದಲಾಗುತ್ತಿರುವ ಸಮಾಜದಲ್ಲಿ ಹೆಣ್ಣಿನ ಮೇಲೆ ಆಗುತ್ತಿರುವ ಅತ್ಯಾಚಾರ, ದೌರ್ಜನ್ಯಗಳನ್ನು ಕುರಿತು ಶಾಂತಿ ಕೆ. ಅಪ್ಪಣ್ಣ ಅವರ 'ಮುಳ್ಳುಗಳು' ಕತೆಯ ಮೂಲಕ ಅರಿಯಬಹುದು. ಕತೆಯ ಮುಖ್ಯ ಪಾತ್ರ 'ಟಿಪ್ಪು' ತನ್ನ ಅಪ್ಪನ ಮರಣದ ಕಾರಣದಿಂದಾಗಿ ಅನಿವಾರ್ಯವಾಗಿ ಊರು ಬಿಟ್ಟು ತನ್ನ ಅಪ್ಪ ಮಾಡುತ್ತಿದ್ದ ವೃತ್ತಿಯನ್ನು ಬಿಟ್ಟು ಹೊರಗೆ ಹೋಗಿ ದುಡಿಯಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಅವನ ಪರಿಸ್ಥಿತಿಯು ಹೇಗಿತ್ತೆಂದರೆ ಹೊಸದಾಗಿ ಮದುವೆಯಾಗಿ ಬಂದ ಸುಷ್ಮಾಳ ಕಾಲ್ಗುಣವೇ ಟಿಪ್ಪುವಿನ ತಂದೆ ರಿಕ್ಷಾಗೆ ಲಾರಿ ಢಿಕ್ಕಿ ಹೊಡೆದು ಸಾಯಲು ಕಾರಣ ಎಂಬ ತಿಳುವಳಿಕೆ ಟಿಪ್ಪುವಿನ ಮನೆಯಲ್ಲಿತ್ತು.

ಅಲ್ಲದೇ ರಿಕ್ಷಾ ಮುಟ್ಟಬಾರದೆಂದು ಅಮ್ಮ ತಿಳಿಸಿದ್ದರಿಂದ ಮನೆಯಲ್ಲಿ ಮದುವೆಯಾಗಬೇಕಿದ್ದ ತಂಗಿ ಮತ್ತು ಬಾಣಂತನವನ್ನು ಮಾಡಬೇಕಾಗಿದ್ದ ಅಕ್ಕನ ಸಲುವಾಗಿ ಟಿಪ್ಪು ಹೊಸದಾಗಿ ಮದುವೆಯಾಗಿದ್ದ ಹೆಂಡತಿಯನ್ನು ಬಿಟ್ಟು ಕಟ್ಟಡ ಕೆಲಸಕ್ಕೆ ಮದ್ರಾಸ್ ನಗರಕ್ಕೆ ದುಡಿಯಲು ಬಂದಿದ್ದ. ಇಲ್ಲಿ ತನ್ನ ಹೆಂಡತಿಯಾದ ಸುಷ್ಮಾಳು ತನ್ನ ಗಂಡನಾದ ಟಿಪ್ಪುವನ್ನು ನೋಡಲು ಬಂದಾಗ ಮದ್ರಾಸಿನಲ್ಲಿ ನಡೆಯುವ ಅವಳ ಮೇಲಿನ ಅತ್ಯಾಚಾರವು ಮಹಿಳೆಯನ್ನು ಶೋಷಿಸುತ್ತಿರುವ ಸಮಾಜವನ್ನು ಕುರಿತದ್ದಾಗಿದೆ. ಅಲ್ಲದೇ ಇದಕ್ಕೆ ಜೀಪ್ ಡ್ರೈವರ ಆದ ಸರವಣ, ಕಂಟ್ರಾಕ್ಟರ್ ರಾಸಯ್ಯ, ಹಾಗೂ ವರ್ಕ್ ಇಂಜಿನಿಯರ್ ಚಂಟಿರಾಜ ಟಿಪ್ಪು ಕೆಲಸಕ್ಕೆ ಹೋದ ಸಮಯದಲ್ಲಿ ಒಂಟಿಯಾಗಿದ್ದ ಸುಷ್ಮಾಳನ್ನು ಎಳೆದುಕೊಂಡು ಹೋಗಿ ಅತ್ಯಾಚಾರ ನೆಡೆಸಿ ಅವಳನ್ನು ಸಾಯಿಸುವುದಷ್ಟೇ ಅಲ್ಲದೇ ಕೆಲಸಕ್ಕೆ ಹೋಗಿದ್ದ ಟಿಪ್ಪುವನ್ನು ಅಲ್ಲಿಯೇ ಮುಗಿಸಬೇಕೆನ್ನುವಲ್ಲಿ ಹೆಣ್ಣಿನ ಮೇಲಾಗುತ್ತಿರುವ ಶೋಷಣೆಗಳು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿವೆ ಎನ್ನುವುದನ್ನು ಕತೆಯಲ್ಲಿ ತಿಳಿಸಿದೆ.

೪.೭ ವೃತ್ತಿಯಲ್ಲಿ ಬದಲಾವಣೆ

ವೃತ್ತಿಯಲ್ಲಿ ಕಾಲದಿಂದ ಕಾಲಕ್ಕೆ ಅನೇಕ ಕಾರಣಾಂತರಗಳಿಂದ ಬದಲಾವಣೆಗಳಾಗುವುದನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ಇಂತಹ ವೃತ್ತಿಯು ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಅದರಲ್ಲೂ ಅಭಿವೃದ್ಧಿಶೀಲ ಭಾರತದಂತಹ ರಾಷ್ಟ್ರಗಳಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅಲ್ಲದೇ ಯಾವುದೇ ದೇಶದ ಅಭಿವೃದ್ಧಿ ಅಲ್ಲಿನ ಜನರ ವೃತ್ತಿಯ ಮೂಲಕ ಗಳಿಸುವ ಆರ್ಥಿಕ ಆದಾಯದಿಂದಲೇ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕಾಗಿದೆ. ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದೆ ಎನ್ನುವುದು ತೀರಾ ಹಳತಾದ ವಿಷಯ. ಶ್ರೇಣಿಕೃತ ವರ್ಣ ವ್ಯವಸ್ಥೆಯಿಂದ ರೂಪುಗೊಂಡಿರುವ ಇಲ್ಲಿ ಪ್ರಾಚೀನ ಕಾಲದಲ್ಲಿ ಇಂತಹವರು ಇಂತಹದ್ದೇ ಕೆಲಸ ಮಾಡಬೇಕು ಎನ್ನುವ ಅಲಿಖಿತ ನಿಯಮವಿದ್ದದ್ದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ.

ವರ್ಣವ್ಯವಸ್ಥೆಯಲ್ಲಿ ನಿರ್ದಿಷ್ಟವಾದ ಕೆಲಸವನ್ನು ನಿರ್ದಿಷ್ಟ ಸಮುದಾಯಗಳು ಮಾಡಬೇಕಿತ್ತು. ಆದರೆ ಕಾಲಾ ನಂತರದಲ್ಲಿ ಜಾತಿವ್ಯವಸ್ಥೆಯು ಸೃಷ್ಟಿಯಾಗಿ ವೃತ್ತಿಯು ಕುಲಕಸುಬಾಗಿ ಮಾರ್ಪಾಟಾದದ್ದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಇಂತಹ ವೃತ್ತಿಗಳು ಸಾಂಪ್ರದಾಯಿಕ ಸಮಾಜದಲ್ಲಿ ಜಾತಿವ್ಯವಸ್ಥೆಯನ್ನು ಪ್ರತಿಬಿಂಬಿಸುವ ಪ್ರತಿರೂಪಗಳಾಗಿವೆ. ಈ ಕುಲಕಸುಬುಗಳ ವೃತ್ತಿಗಳನ್ನು ವಸಾಹತುಶಾಹಿಯ ಆಗಮನದ ಔದ್ಯೋಗಿಕ ಕ್ಷೇತ್ರವು ಪಲ್ಲಟಗೊಳಿಸಿದ್ದನ್ನು ನೋಡಬಹುದಾಗಿದೆ. ಅಲ್ಲದೇ ವೃತ್ತಿಯಲ್ಲಿ ಇದುವರೆಗೂ ಕೃಷಿಗೆ ಪ್ರಾಧಾನ್ಯತೆಯನ್ನು ನೀಡಲಾಗಿತ್ತು. ನಂತರ ಕೈಗಾರಿಕೆಗಳಿಗೂ ಪ್ರೋತ್ಸಾಹ ದೊರೆತದದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳಶಾಹಿಗಳು ಔದ್ಯೋಗಿಕರಣಕ್ಕೆ ಒಳಗಾಗಿ ಕೈಗಾರಿಕೆಗಳನ್ನು ಸ್ಥಾಪಿಸಿದರು. ಇದರ ಪರಿಣಾಮವಾಗಿ ಗ್ರಾಮ ಭಾರತದಲ್ಲಿ ಬಂಡವಾಳಶಾಹಿ ಕೈಗಾರಿಕೆಗಳು, ವಿಜ್ಞಾನ ತಂತ್ರಜ್ಞಾನದಿಂದಾದ ಅನೇಕ ಉಪಕರಣಗಳು ಬಂದು ಕೈಗಾರಿಕೆಗಳು ಬೆಳೆದವು.

ಜಾಗತೀಕರಣ ಸಂದರ್ಭದಲ್ಲಿ ಇಡೀ ಜಗತ್ತೇ ಮುಕ್ತ ಮಾರುಕಟ್ಟೆಗೆ ಸರಕಾಗಿ ತೆರೆದುಕೊಂಡಿರುವಾಗ ವೃತ್ತಿಯಲ್ಲಿ ಕ್ಷಿಪ್ರಗತಿಯಲ್ಲಿ ಅನೇಕ ಬದಲಾವಣೆಗಳು ಉಂಟಾಗಿರುವುದನ್ನು ಕಾಣಬಹುದು. ಅಲ್ಲದೇ ಭಾರತದಂತಹ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಕೃಷಿ ಪ್ರಧಾನ ದೇಶ ಎನ್ನುವುದು ಇಂದು ಮಾಯವಾಗಿ ಬಂಡವಾಳಶಾಹಿಗಳಿಗೆ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ರೈತರ ಜೀವನವನ್ನು ಅಲ್ಲೋಲ ಕಲ್ಲೋಲಗೊಳಿಸಿದೆ. ಈ ಮೂಲಕ ರೈತಾಪಿ ವರ್ಗವು ವೃತ್ತಿಯನ್ನು

ಅನಿವಾರ್ಯವಾಗಿ ಬದಲಿಸಿಕೊಳ್ಳಬೇಕಾದ ಸ್ಥಿತಿ ಬಂದೊದಗಿದೆ. ಶಿಕ್ಷಣದ ಕಾರಣಕ್ಕಾಗಿ ಇಂದು ವೃತ್ತಿಯು ಬದಲಾಗುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಅಲ್ಲದೇ ವಿಜ್ಞಾನ ಮತ್ತು ತಂತ್ರಜ್ಞಾನವು ಮಾಡಿರುವ ಅನೇಕ ಬದಲಾವಣೆಗಳು ಉದ್ಯೋಗದಲ್ಲಿ ಪಲ್ಲಟಗಳನ್ನು ತಂದಿರುವುದನ್ನು ನೋಡಬಹುದು. ಇನ್ನೂ ನಗರ ಪ್ರದೇಶಗಳಲ್ಲಿ ತಮ್ಮ ಕುಟುಂಬದ ಆರ್ಥಿಕ ಹಿತಾಸಕ್ತಿಯ ಕಾರಣಕ್ಕಾಗಿ ಗಂಡ-ಹೆಂಡತಿ ಮಕ್ಕಳು ವೃತ್ತಿಯನ್ನು ಮಾಡಲೇಬೇಕಾದ ಅನಿವಾರ್ಯತೆ ಇದೆ. ಇಂತಹ ಕಾರಣಗಳು ವೃತ್ತಿಯಲ್ಲಿ ಇಂದು ಅನೇಕ ಸ್ಥಿತ್ಯಂತರಗಳು ಉಂಟಾಗಲು ಕಾರಣವಾಗಿದೆ. ಇದನ್ನು ಕನ್ನಡದ ಕತೆಗಳಲ್ಲಿ ಹೀಗೆ ಚಿತ್ರಿಸಲಾಗಿದೆ.

೪.೭.೧ ವೃತ್ತಿಯಲ್ಲಿ ಆಗುತ್ತಿರುವ ಬದಲಾವಣೆಗಳು

ಇದಕ್ಕೆ ಉತ್ತಮ ಉದಾಹರಣೆಯನ್ನಾಗಿ ಹನುಮಂತ ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲಿ ಇಡೀ ಊರನ್ನು ಸರ್ಕಾರವು ಹಾವೂರಿನಲ್ಲಿ ಬೈಪಾಸ್ ರಸ್ತೆಯ ಕಾರಣಕ್ಕಾಗಿ ಒಕ್ಕಲೆಬ್ಬಿಸುವ ಕೆಲಸವನ್ನು ಮಾಡುತ್ತದೆ. ಇದೇ ಸಂದರ್ಭದಲ್ಲಿ ಊರಿನ ಜನರು ಅನಿವಾರ್ಯವಾಗಿ ಊರನ್ನು ಬಿಡಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗುತ್ತದೆ. ಇಲ್ಲಿ ಸರ್ಕಾರದ ರಸ್ತೆ ನಿರ್ಮಾಣ ಕೆಲಸದಲ್ಲಿ ಸರ್ವೇಯರ್ ಆಗಿ ಬಂದಿದ್ದ ಕತೆಯ ಮುಖ್ಯ ಪಾತ್ರವಾದ ಲೇಖಕರು ವರ್ತಮಾನದಲ್ಲಿ ಬದಲಾದ ಜೀವನ ಕ್ರಮವನ್ನು ನೋಡಲು ಹಾವೂರಿಗೆ ಬಂದಾಗ ಇಡೀ ಊರಿನ ಚಿತ್ರಣವೇ ಬದಲಾಗಿತ್ತು ಎನ್ನುವುದನ್ನು ಕತೆಯ ಮೂಲಕ ವಿವರಿಸುತ್ತಾರೆ.

ಅಲ್ಲದೇ ಇದೇ ಸಂದರ್ಭದಲ್ಲಿ ರೈತರು, ಬಡವರು, ಕೃಷಿ ಕೆಲಸ-ಕಾರ್ಮಿಕರು ಮತ್ತು ಜಮೀನನ್ನು ನಂಬಿಕೊಂಡಿದ್ದವರು ಈ ಯೋಜನೆಯಿಂದಾಗಿ ಆಸ್ತಿ, ಸಂಪತ್ತು ಅಲ್ಲದೇ ಇಡೀ ತಮ್ಮ ಜೀವನವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದರು. ಲೇಖಕರು ಊರಿಗೆ ಬಂದಾಗ ಆ ಊರಿನ ಹೆಸರಿನಿಂದ ಹಿಡಿದು ಇಡೀ ಊರೇ ಬದಲಾಗಿದ್ದನ್ನು ಗುರುತಿಸುತ್ತಾರೆ. ಕಾಡಿನ ನಡುವೆ ಜಮೀನನ್ನು ಮಾಡಿಕೊಂಡಿದ್ದ ಊರಿನ ಮಂದಿ ಈಗ ಊರನ್ನು ಬಿಟ್ಟು ಕೃಷಿಯನ್ನು ತೊರೆದು ಬೇರೆ ಬೇರೆ ಕೆಲಸದಲ್ಲಿ ತೊಡಗಿರುವುದನ್ನು ಮಾದನ ಮಾತುಗಳ ಮೂಲಕ ಹೀಗೆ ವಿವರಿಸಲಾಗಿದೆ. "ಹೊಲಮನಿ ಹೋದ ಮ್ಯಾಲ ಅಲ್ಯಾಕಿರಬೇಕೆಂದು ಇಲ್ಲೇ ಕಾರವಾರದ ಬಾಂಡಿಶಿಟ್ಟಾ, ಬಿನಗಾ, ಬೈತಕೂಲದಲ್ಲಿ ಬಾಡಿಗೆ ನೆಲದೊಳಗ ಗುಡಿಸಲ ಹಾಕ್ಕೊಂಡು ಇದ್ದಿವ್ರಿ ಸರ್. ಈಗ ಹ್ಯಾಂಗೂ ಸೀಬರ್ಡ್ ಎರಡನೇ ಯೋಜನಾದ ಕಾಮಗಾರಿ ಚಾಲೂ ಆಕೈತಂತ ಆಗಿದ್ದರಿಂದ ಕೈತುಂಬಾ

ಕೂಲಿನೂ ಸಿಗತೈತಿ."[೯೯] ಎಂದವನ ಮಾತು ಇಡೀ ವ್ಯವಸ್ಥೆಯು ಕೂಡ ಇಂತಹ ಅಭಿವೃದ್ಧಿ ಯೋಜನೆಗಳ ಮೂಲಕ ರೈತರ, ಬಡವರ ಜೀವನ ವಿಧಾನದಿಂದ ಹಿಡಿದು ಅವರ ವೃತ್ತಿಯನ್ನು ಬದಲಿಸಿರುವುದನ್ನು ಮುಖ್ಯವಾಗಿ ಗಮನಿಸಲಾಗಿದೆ.

ಅಲ್ಲದೇ ಇದೇ ಊರಿನಲ್ಲಿ ಯೋಜನೆಯಾದ ರಸ್ತೆ ಬೈಪಾಸ್ ಮುಗಿದ ನಂತರ ಅಲ್ಲಿ ಕೃಷಿ ಸಂಸ್ಕೃತಿಯು ನಶಿಸಿ ಅಲ್ಲಿ ದೇವಸ್ಥಾನದ ಬಳಿ "ನಾಗಮಹಿಮೆ ಸಾರುವ ಗ್ರಂಥಗಳು, ಸ್ತೋತ್ರಗಳು, ನಾಗಾ ಚಾಲೀಸ್, ನಾಗಶಿಲ್ಪ, ಫೋಟೋ ಮುಂತಾದವುಗಳನ್ನು ಮಾರುವ ಅಂಗಡಿಗಳಿದ್ದವು. ಇನ್ನೊಂದಿಷ್ಟು ದೂರದಲ್ಲಿ ಹೂ ತೆಂಗಿನಕಾಯಿಯಿಂದ ಹಿಡಿದು ಸಾರಾಯಿ ತೀರ್ಥ ಮಾರುವ ಎಲ್ಲಾ ಅಂಗಡಿಗಳು ಅಲ್ಲಿದ್ದವು."[೧೦೦] ಎನ್ನುವಲ್ಲಿ ಇಡೀ ವೃತ್ತಿಯು ಇಂದು ಬಂಡವಾಳಶಾಹಿಯ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತಿರುವುದನ್ನು ಕಾಣಬಹುದು. ಅಲ್ಲದೇ ಜಮೀನನ್ನು ಮಾಡಿಕೊಂಡಿದ್ದವರು ಈಗ ಅದೇ ಯೋಜನೆಗಳಲ್ಲಿ ಕೂಲಿ–ಕಾರ್ಮಿಕರಾಗಿ ಕೆಲಸ ಮಾಡುವ ಸ್ಥಿತಿಯು ಜಾಗತೀಕರಣ ಸಂದರ್ಭದ ಅಭಿವೃದ್ಧಿ ಹೆಸರಿನಲ್ಲಿ ಜನರ ಮೇಲೆ ನಡೆಸುತ್ತಿರುವ ಕ್ರೌರ್ಯವನ್ನು ಎತ್ತಿ ತೋರಿಸುತ್ತಿದೆ.

ವೃತ್ತಿಯಲ್ಲಿ ಆಗುತ್ತಿರುವ ಬದಲಾವಣೆಯನ್ನು ನೋಡುವುದಾದರೆ ಸರ್ಕಾರಗಳ ಯೋಜನೆಯ ಫಲವಾಗಿ ಊರನ್ನು ಜೊತೆಗೆ ತಮ್ಮ ಕೃಷಿ ಭೂಮಿಯನ್ನು ಕಳೆದುಕೊಳ್ಳುವ ಪ್ರಸಂಗವನ್ನು ಹಾಲಿಗೇರಿ ಅವರ 'ದೇವಸಗ್ಗ' ಕತೆಯಲ್ಲಿ ವಿವರಿಸಲಾಗಿದೆ. ದೇವಸಗ್ಗದಲ್ಲಿ ಹುಲಿ ಯೋಜನೆ, ಕಾಳಿ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಾಣಕ್ಕಾಗಿ ಸರ್ಕಾರವು ಇಂತಹ ಯೋಜನೆಗಾಗಿ ಊರನ್ನು ಒಕ್ಕಲೆಬ್ಬಿಸುವ ಕೆಲಸಕ್ಕೆ ಕೈ ಹಾಕುತ್ತದೆ. ಇಡೀ ಊರು ಕಾಡಿನೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ಬದುಕನ್ನು ರೂಪಿಸಿಕೊಂಡಿರುತ್ತದೆ. ಅಲ್ಲಿನ ಜನರು ನಿಸರ್ಗದೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡವರು. ಇಂತಹ ಊರಿನ ಜನರನ್ನು ಹುಲಿ ಯೋಜನೆ ಎಂದು ಕಾಡಿನೊಳಗೆ ಪ್ರವೇಶ ಮಾಡುವಂತಿಲ್ಲ ಎನ್ನುವ ನಿರ್ಬಂಧವನ್ನು ಸರ್ಕಾರದಿಂದ ಹೇರಲಾಯಿತು. "ಪಂಚಭೂತಗಳನ್ನು ನಂಬಿಕೊಂಡು ರೂಪುಗೊಂಡ ನಾಗರಿಕತೆ ಅದು ಎಂದರೆ ಉತ್ಪ್ರೇಕ್ಷೆಯ ಮಾತಲ್ಲ. ಅಂದರೆ ಈ ಕಡೆ ಕಾಳಿ ನದಿಯಲ್ಲಿ ಮೀನು, ಚಿಪ್ಪೆಗಲ್ಲು ಹಿಡಿದು ಗ್ರಾಮದ ಕಾಲುಭಾಗದಷ್ಟು ಜನ ಹೊಟ್ಟೆ ಹೊರೆಯುತ್ತಿದ್ದರೆ, ಇನ್ನು ಕಾಲಭಾಗದಷ್ಟು ಜನ, ಕಾಡಲ್ಲಿ ಅರಗು, ಅಂಟು, ಜೇನು ಇತ್ಯಾದಿ ಕಾಡಿನ ಉತ್ಪನ್ನಗಳನ್ನು ನಂಬಿಕೊಂಡೋ, ಕಾಡಿನ ಪ್ರದೇಶದಲ್ಲಿ ದನ ಸಾಕಿಕೊಂಡು ಹೊಟ್ಟೆ ಹೊರೆಯುತ್ತಿದ್ದರು."[೧೦೧] ಎನ್ನುವ ಮಾತುಗಳು ಇಡೀ ಊರು ಇಂತಹ ನಿಸರ್ಗವನ್ನು ನೆಚ್ಚಿಕೊಂಡು ಕೃಷಿಯನ್ನು ತಮ್ಮ

ಜೀವನವನ್ನಾಗಿ ರೂಪಿಸಿಕೊಂಡಿದ್ದರು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುತ್ತಿದೆ. ಅಲ್ಲದೇ ಇಂತಹ ಸ್ಥಿತಿಯಲ್ಲಿ ಸರ್ಕಾರವು ಹುಲಿಯೋಜನೆ ಮೂಲಕ ಊರ ಜನರು ಕಾಡಿಗೆ ಹೋಗಬಾರದೆಂದು ಆದೇಶವನ್ನು ನೀಡಿದ್ದು ಜನರ ಮೇಲೆ ಹೇರಿದ ನಿರ್ಬಂಧವಾಗಿತ್ತು.

ಅಲ್ಲದೇ "ಊರಿನ ಅರ್ಧದಷ್ಟು ಜನ ಮೀನುಗಾರಿಕೆ, ಉಪೋತ್ಪನ್ನಗಳ ಸಂಗ್ರಹ, ಪಶು ಸಂಗೋಪನೆಯನ್ನು ನೆಚ್ಚಿಕೊಂಡು, ಹಳ್ಳಕೊಳ್ಳ, ಕಾಡು ಮೇಡು ಅಲೆಯುತ್ತಿದ್ದರೆ, ಇನ್ನರ್ಧ ಜನ ಕೃಷಿಕರಾಗಿಯೋ ಕೃಷಿ ಕೂಲಿಕಾರರಾಗಿಯೂ ಊರಲ್ಲಿ ನೆಲೆ ನಿಂತಿದ್ದರು. ಈ ಎಲ್ಲ ವೃತ್ತಿಯವರ ಮಧ್ಯೆ ಸೌಹಾರ್ದಯುತವಾದ ಕೊಡುಕೊಳ್ಳುವಿಕೆ ಇದ್ದೇ ಇತ್ತು."[೧೦೨] ಎನ್ನುವಲ್ಲಿ ಇಡೀ ಊರಿನ ಚಿತ್ರಣವು ಇನ್ನೂ ಕೃಷಿ ಮತ್ತು ಅದರ ಉಪಉತ್ಪನ್ನಗಳ ಆಧಾರದ ಮೇಲೆ ತಮ್ಮ ಜೀವನವನ್ನು ನೆಡೆಸುತ್ತಿತ್ತು ಎನ್ನುವುದನ್ನು ತಿಳಿಸಲಾಗಿದೆ. ಇಂತಹ ವೃತ್ತಿಯನ್ನಾಧಾರಿಸಿ ಬದುಕುತ್ತಿದ್ದ ಊರಿನವರನ್ನು ಸರ್ಕಾರದ ಯೋಜನೆಗಳು ವೃತ್ತಿಯಲ್ಲಿ ಬದಲಾವಣೆಗೊಳಪಡಬೇಕಾದ ಅನಿವಾರ್ಯ ಸ್ಥಿತಿಯನ್ನು ತಂದೊಡ್ಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

೪.೭.೨ ಆಧುನಿಕ ವಿಜ್ಞಾನ–ತಂತ್ರಜ್ಞಾನದಿಂದ ಬದಲಾಗುತ್ತಿರುವ ವೃತ್ತಿ

ಆಧುನಿಕತೆ ಇಂದಿನ ದಿನಗಳಲ್ಲಿ ವೃತ್ತಿಯನ್ನು ಹೇಗೆ ಪ್ರಭಾವಿಸಿದೆ ಎನ್ನುವುದನ್ನು ಮಹಾಂತೇಶ ನವಲಕಲ್ ಅವರ 'ಗಾಂಧಿ..... ಬಂದಾನೆ?' ಎನ್ನುವ ಕತೆಯ ಮೂಲಕ ತಿಳಿಯಲಾಗಿದೆ. ಇಲ್ಲಿ ಮೂರು ತಲೆಮಾರುಗಳ ಮೂಲಕ ವೃತ್ತಿ ಎನ್ನುವುದು ಯಾವ ಹಂತದಲ್ಲಿ ಏನು ಪರಿಣಾಮ ಬೀರುತ್ತಿದೆ ಎನ್ನುವುದನ್ನು ಚಿತ್ರಿಸಲಾಗಿದೆ. ಅಲ್ಲದೇ ಒಂದು, ಎರಡು ಮತ್ತು ಮೂರನೇ ತಲೆಮಾರಿನ ವೃತ್ತಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಲಾಗಿದೆ. ಅಲ್ಲದೇ ಇದನ್ನು ಆರ್ಥಿಕ ನೆಲೆಯಿಂದ ವೃತ್ತಿಯನ್ನು ಪರಿಗಣಿಸುತ್ತಿರುವುದನ್ನು ಮುಖ್ಯವಾಗಿ ಗಮನಿಸಲಾಗಿದೆ. ಇಂತಹ ವೃತ್ತಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದನ್ನು ಇಲ್ಲಿ ವಿವರಿಸಲಾಗಿದೆ.

ಕತೆಯಲ್ಲಿ ಕುಂಬಾರ ಗುಂಡಯ್ಯ ಅವನ ಮಕ್ಕಳಾದ ಬಸವರಾಜ ಕುಂಬಾರ ಮತ್ತು ಅವನ ತಮ್ಮ ರುದ್ರೇಶ. ತಂದೆ ಕುಂಬಾರ ವೃತ್ತಿಯನ್ನು ಮಾಡಿಕೊಂಡು ಜೀವನ ಸಾಗಿಸಿ ಆಸ್ತಿಯನ್ನು ಮಾಡಿದ್ದ. ಜೊತೆಗೆ ಇಲ್ಲಿ ಮೊದಲ ಮಗನಾದ ಬಸವರಾಜನನ್ನು ಓದಿಸಿ ಅವನಿಗೆ ನೌಕರಿಯನ್ನು ಗುಂಡಯ್ಯ ಕೊಡಿಸಿದ್ದ. ಬಸವರಾಜ ಊರನ್ನು ಬಿಟ್ಟು ನೌಕರಿ ಸಿಕ್ಕ ನಂತರ ಪಟ್ಟಣಕ್ಕೆ ಬಂದು ಹೆಂಡತಿ ಮಕ್ಕಳೊಂದಿಗೆ ನೆಲೆಸಿದ್ದ. ಇನ್ನೂ ಎರಡನೇ ಮಗನಾದ ರುದ್ರೇಶನಿಗೆ ಓದು ತಲೆಗೆ ಹತ್ತದೇ ಅವನು ಊರಿನಲ್ಲಿ ಅಪ್ಪನ

ದುಡಿಮೆಯಲ್ಲಿ ಜೀವನ ಸಾಗಿಸುತ್ತಿದ್ದ ವೃತ್ತಿಯು ಕತೆಯಲ್ಲಿ ಮೂರು ತೆರನಾಗಿದೆ. ತಂದೆ ಗಡಗಿ ಕೆಲಸ ಮಾಡುವ ಕುಂಬಾರ, ಮಗ ಬಸವರಾಜ ಓದಿ ಇಂಜಿನಿಯರ್ ಆಗಿದ್ದವನು, ತಮ್ಮ ರುದ್ರೇಶ ಊರಿನಲ್ಲಿ ಕೆಲಸವಿಲ್ಲದೇ ಖಾಲಿ ಅಪ್ಪನ ದುಡಿಮೆಯನ್ನು ನೆಚ್ಚಿಕೊಂಡು ಬದುಕುತ್ತಿರುವವನು.

ಕತೆಯ ಎರಡನೇ ಹಂತದಲ್ಲಿ ಶುರುವಾಗುವುದು ಲೇಖಕರ ಬದುಕಿನ ಮತ್ತೊಂದು ವಾಸ್ತವ ಚಿತ್ರಣದಿಂದ. ವೃತ್ತಿಯಲ್ಲಿ ಲಂಚವನ್ನು ಮುಟ್ಟಬಾರದೆಂದು ಮಠದಯ್ಯನವರಿಂದ ಕಲಿತಿದ್ದವರು. ಕುಂಬಾರ ವೃತ್ತಿಯನ್ನು ಬಿಟ್ಟು ಶಿಕ್ಷಣವನ್ನು ಕಲಿತು ಈಗ ಇಂಜಿನಿಯರ್ ಆಗಿರುವವರು. ಇವರ ತಲೆಮಾರಿನಲ್ಲಿ ನ್ಯಾಯ, ನೀತಿ, ಸಾಮಾಜಿಕ ಕಳಕಳಿ ಮುಂತಾದವುಗಳ ಮೂಲಕ ಗಾಂಧೀಜಿಯನ್ನು ಹಿಂಬಾಲಿಸುವ ನೀತಿಯುಳ್ಳವರಾಗಿದ್ದರು. ಇಂತಹ ಇವರ ವೃತ್ತಿಯು ಇಂದಿನ ದಿನಗಳಲ್ಲಿ ಕಾಣುತ್ತಿರುವ ಭ್ರಷ್ಟಾಚಾರಕ್ಕೆ ತುತ್ತಾಗಿರುವುದನ್ನು ಅವನ ಆಫೀಸಿನ ಚಿತ್ರಣದಿಂದ ತಿಳಿಯಬಹುದು. ಇವನ ಇಂತಹ ಗಾಂಧಿಯ ವರ್ತನೆಯನ್ನು ಅವನ ಹೆಂಡತಿ ಮಕ್ಕಳು ಸಹಿಸರು.

ಕತೆಯ ಮುಂದಿನ ಘಟ್ಟ ಬಸವರಾಜ ಅವರ ಮಗನಾದ ಇಂದ್ರಜಿತ್‌ನು ಕೆಲಸಕ್ಕೆ ಸೇರಿಕೊಂಡ ನಂತರದಲ್ಲಿ ಆಗುವ ಮಾನಸಿಕ ತಳಮಳಗಳನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ವೃತ್ತಿಯ ಕಾರಣಕ್ಕಾಗಿ ಅಲ್ಲದೇ ಅವನ ಆರ್ಥಿಕ ಆದಾಯವನ್ನು ಸಹ ಪರಿಗಣಿಸಿ ಬಸವರಾಜನಿಗೆ ನಿಂದಿಸುವ ಅನೇಕ ಉದಾಹರಣೆಗಳು ಹಿಂದಿನ ವೃತ್ತಿಯಲ್ಲಿನ ಬದ್ಧತೆ ಹಾಗೂ ಪ್ರಾಮಾಣಿಕತೆಯನ್ನು ಇಂದಿನ ಯುಗದಲ್ಲಿ ಕಾಣಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಈ ಕಾಲದಲ್ಲಿ ವೃತ್ತಿಯಿರುವುದು ನಮ್ಮ ವೈಯಕ್ತಿಕ ಆರ್ಥಿಕ ಸಂಪಾದನೆಗಾಗಿ, ಸ್ವಾರ್ಥ ಭೋಗ ಜೀವನವನ್ನು ಕಳೆಯುವುದಕ್ಕೆ ಎನ್ನುವುದನ್ನು ತಿಳಿಸಲಾಗಿದೆ.

ಮಗ ಇಂದ್ರಜಿತ್ ಒಂದು ಸಾಫ್ಟ್‌ವೇರ್ ಕಂಪೆನಿಯಲ್ಲಿ ನೌಕರಿ ಸೇರಿ ತಿಂಗಳಿಗೆ ೩೫,೦೦೦ ರೂಪಾಯಿಗಳನ್ನು ತಂದದ್ದನ್ನು ಹೆಂಡತಿ ಮತ್ತು ಮಗಳು ಕಂಡು ಖುಷಿಪಟ್ಟರು. ಬಸವರಾಜ ಇಪ್ಪತ್ತೈದು ವರ್ಷಗಳಲ್ಲಿ ಸಂಪಾದಿಸಲಾಗದ್ದನ್ನು ಮಗ ಮೂರು ತಿಂಗಳಿನಲ್ಲೇ ಸಂಪಾದಿಸಿದ್ದನ್ನು ಮನೆಯವರೆಲ್ಲರೂ ಹೊಗಳಿ ಗಂಡನನ್ನು ತೆಗಳಿದರು. "ಆ ತಿಂಗಳು ನನ್ನ ದುಡಿಮೆಯ ಸಂಬಳಕ್ಕೆ ಏನೂ ಬೆಲೆ ಇರಲಿಲ್ಲ. ಯಾರೂ ಕೇಳಲೂ ಇಲ್ಲ. ಸಮುದ್ರದ ತೊರೆಗಳಂತೆ ಬಂದ ಕುಟುಂಬ ಸಂಪತ್ತಿನಲ್ಲಿ ನಾನೇ ತರಗೆಲೆಯಂತೆ ಕೊಚ್ಚಿ ಹೋಗುತ್ತಿದ್ದೇನೆ ಎಂದು ಅನಿಸಿತು. ಅಪ್ಪನ ಗಡಗಿ ಮಾಡುವ ಟಿಗ್ರಿ ಚಕ್ರದ ಬಗ್ಗೆ ಯೋಚಿಸಿದೆ. ಅದು ಇನ್ನೂ ರುದ್ರೇಶನಲ್ಲೇ ಇತ್ತು."[೧೦೩]

ಅಂದರೆ ಇಲ್ಲಿ ವೃತ್ತಿಗೆ ವೃತ್ತಿಯ ಮೂಲಕ ಬರುವ ಸಂಪಾದನೆಯೇ ಇಂದಿನ ದಿನಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿರುವುದನ್ನು ನಾವು ಕಾಣಬಹುದು. ಅಲ್ಲದೇ ತನ್ನ ಪೀಳಿಗೆಯಲ್ಲಿ ಇದ್ದ ಪ್ರಾಮಾಣಿಕತೆ, ಬದ್ಧತೆಗಳನ್ನು ಮೀರಿ ಆರ್ಥಿಕ ಕಾರಣಗಳೇ ಇಂದು ವೃತ್ತಿಯಲ್ಲಿ ಮುಖ್ಯವಾಗುತ್ತಿರುವುದನ್ನು ಇಲ್ಲಿ ತಿಳಿಯಲಾಗಿದೆ. ಬಸವರಾಜನಿಗೆ ಇಡೀ ತನ್ನ ಕುಟುಂಬವನ್ನು ಕಂಡು ಅವನಿಗೆ ಬೇಸರ ಮೂಡಿತ್ತು. ವೃತ್ತಿಯ ಹಿನ್ನೆಲೆಯಲ್ಲಿ ಅವನು ಸರ್ಕಾರದಿಂದ ಇಪ್ಪತ್ತು ವರ್ಷ ಸೇವೆಯನ್ನು ನೀಡಿದವರು ಸ್ವಯಂ ನಿವೃತ್ತಿಯೊಂದಿಗೆ ಕೆಲಸವನ್ನು ಬಿಡಬಹುದು ಎನ್ನುವ ಆದೇಶದಿಂದ ತನ್ನ ಕೆಲಸ ಬಿಟ್ಟು ತಮ್ಮನ ಜೀವನದ ಪ್ರಶ್ನೆಯೊಂದಿಗೆ ಮತ್ತೆ ಹಳ್ಳಿಗೆ ತೆರಳಿ ಗಡಗಿ ಮಾಡುವ ಬದುಕನ್ನು ತಮ್ಮನಿಗೆ ಹೇಳಿಕೊಡುವ ಮೂಲಕ ಹಳೆಯ ವೃತ್ತಿಯಲ್ಲಿ ನೆಮ್ಮದಿಯನ್ನು ಕಂಡುಕೊಂಡನು. ಇಂದಿನ ನಗರ ಬದುಕು ವೃತ್ತಿಯನ್ನು ಒತ್ತಡವನ್ನಾಗಿ ರೂಪಿಸುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಆರ್ಥಿಕ ಅಂಶಗಳಿಗೆ ಮಾತ್ರ ಪ್ರಾಮುಖ್ಯತೆ ಇದೆಯೋ ಹೊರತು ಮನುಷ್ಯ ಸಂಬಂಧಗಳಿಗೆ ಬದ್ಧತೆಗಳಿಗೆ ಬೆಲೆ ಇಲ್ಲದಿರುವುದನ್ನು ವೃತ್ತಿಯ ಮೂಲಕ ತಿಳಿಸಲಾಗಿದೆ.

ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆಯು ಮುಖ್ಯವಾಗಿ ಹಳ್ಳಿಯಲ್ಲಿ ಕಂಡುಬರುವ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧವಾಗಿ ಹಳ್ಳಿಯ ಕೆಳವರ್ಗಗಳು ತಳೆಯಬಹುದಾದ ನಿಲುವುಗಳನ್ನು ಇಂದಿನ ವರ್ತಮಾನದ ಸಂದರ್ಭದಲ್ಲಿ ಅವರ ಆಸೆ-ಆಕಾಂಕ್ಷೆಗಳು ಬೇರೆಯದೇ ಆಗಿವೆ ಎಂಬುದನ್ನು ಕತೆಯ ಮೂಲಕ ತಿಳಿಯಬಹುದಾಗಿದೆ. ಕತೆಯ ಪಾತ್ರಗಳಲ್ಲಿ ಶರಭನಗೌಡ ಊರಿನ ಗೌಡನಾಗಿದ್ದು ಸಾಕಷ್ಟು ಜಮೀನನ್ನು ಹೊಂದಿದವನಾಗಿರುತ್ತಾನೆ. ಶರಭನಗೌಡ ಏಕಾಂಗಿಯಾಗಿದ್ದು ಮಕ್ಕಳು ಮತ್ತು ಅವನ ಹೆಂಡತಿ ಗೌಡನನ್ನು ಬಿಟ್ಟು ದೂರದ ವಿದೇಶದಲ್ಲಿ ವಾಸವಾಗಿರುತ್ತಾರೆ. ಜಮೀನ್ದಾರರ ವಿರುದ್ಧವಾಗಿ ಚಳುವಳಿಗಾರರು ಹೂಡಿದ್ದ ಹೋರಾಟದ ಕಾರಣವಾಗಿ ಶರಭನಗೌಡ ಚಿಂತಾಕ್ರಾಂತನಾಗಿರುತ್ತಾನೆ.

ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಹೇಗೆ ಬದಲಾವಣೆಗೆ ಒಳಪಡುತ್ತಿದೆ ಎಂದರೆ "ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು"[೧೦೪] ಎಂಬ ಮಾತುಗಳು ವ್ಯವಸಾಯದಲ್ಲಿ ಆದ ಬದಲಾವಣೆಗಳನ್ನು ಕತೆಯ ಮೂಲಕವಾಗಿ ಗುರುತಿಸಲು ಸಾಧ್ಯವಾಗುತ್ತದೆ. "ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ

ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ."[೧೦೫] ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಹೆಂಡತಿ, ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದಾಗ ಇರದ ಈ ರೀತಿಯ ಏಕಾಂಗಿಭಾವ ತನ್ನ ದಿನನತ್ಯದ ಬದುಕಿನಲ್ಲಾದ ಬದಲಾವಣೆಗಳಿಂದ ಅವನನ್ನು ಕಾಡಲು ಶುರುಮಾಡಿತು. ಕಂಪೆನಿಗಳು ಇಂದು ಭೂಮಿಯನ್ನು ಕೊಳ್ಳಲು ಹೇಗೆ ಸಾಲು ಸಾಲಾಗಿ ನಿಂತಿವೆ ಎಂಬುದನ್ನು ಗೌಡನಿಗೆ ಮಗನು ತಿಳಿಸುವ ಮೂಲಕ ಭೂಮಿಯನ್ನು ಮಾರಿ ತಮ್ಮ ಜೊತೆಗೆ ವಿದೇಶಕ್ಕೆ ಬರುವಂತೆ ಹೇಳುತ್ತಾನೆ. ಆದರೆ ಗೌಡ ಭೂಮಿಯನ್ನು ನಂಬಿಕೊಂಡು ಬದುಕಿದಾತ, ಆತನಿಗೆ ಭೂಮಿಯ ಜೊತೆಗೆ ಬಿಡಿಸಲಾಗದ ಭಾವನಾತ್ಮಕ ನಂಟು ಅವನನ್ನು ಊರನ್ನು ಬಿಟ್ಟು ಹೋಗಲು ಬಿಡುವುದಿಲ್ಲ.

ಕೊನೆಗೆ ಕತೆಯು ಚಳುವಳಿಗಾರರು ಗೌಡನ ಮನಸ್ಸನ್ನು ಒಲಿಸಿ ಇದುವರೆಗೂ ತನ್ನ ಏಳ್ಗೆಗಾಗಿ ದುಡಿದ ಜನರಿಗೆ ಭೂಮಿಯನ್ನು ಹಂಚು ಎಂಬ ಸಲಹೆಯನ್ನು ನೀಡಿದ ಮೇಲೆ ಅವನು ತನ್ನ ಜಮೀನಿನಲ್ಲಿ ದುಡಿದವರಿಗೆ ಭೂಮಿಯನ್ನು ಹಂಚಲು ಹೋದಾಗ ಅವರು ಅವನ ಭೂಮಿಯನ್ನು ನಯವಾಗಿ ತಿರಸ್ಕರಿಸುತ್ತಾರೆ. ವಡ್ಡರಮಲ್ಲ ಗೌಡನಿಗೆ "ಈಗ ನೋಡ್ರಿ, ನನ್ನ ಮಗ ಓದ್ಯಾನ, ರಾಮನ ಮಗ್ಳು ಓದ್ಯಾಳ. ಕೇರ್ಯಾಗ ದುಡಕಂದು ತಿಂಬ ಮಂದಿ ಈಗೀಗ ಶಾಲಿ ಕಲತು ಕುಂತಾವ. ನಿಮ್ಮ ಮಕ್ಕಳು ದೊಡ್ಡ ದೊಡ್ಡ ಕೆಲ್ಸದಾಗರ ಅಂಬೋದು ಕೇಳೀವಿ. ಅವುರಿಗೆ ಹೇಳ್ರಿ. ನಮ್ಮ ಮಕ್ಕಳಿಗೆ ಒಂದು ಸಣ್ಣ ಚಾಕ್ರಿ ಕೊಡ್ಸಿದ್ರ, ತಿಂಗಳ ತಿಂಗಳ ಪಗಾರ ಬರುವಂತೆ ಆದ್ರ ನಮ್ಗ ಪಾಡ"[೧೦೬] ಎಂದು ಹೇಳುವ ಮಾತುಗಳು ಸಮಾಜದಲ್ಲಿ ಶಿಕ್ಷಣದ ಮೂಲಕ ಆಗುತ್ತಿರುವ ಬದಲಾವಣೆಗಳು ಹಾಗೂ ಜಾಗತೀಕರಣದ ಈ ಶತಮಾನದ ಅತಿದೊಡ್ಡದಾದ ಶಾಪವೆಂದರೆ ನಮ್ಮ ಮೂಲವೃತ್ತಿಗಳನ್ನು ಬಿಟ್ಟು ಆರ್ಥಿಕವಾದ ಸಬಲತೆಯು ಕಡೆಗೆ ಮುಖಮಾಡುತ್ತಿರುವುದನ್ನು ಕತೆಯು ಎತ್ತಿಹಿಡಿಯುತ್ತಿದೆ.

೪.೮ ಅಸಮಾನತೆ

ಸಮಾಜದಲ್ಲಿ ಅಸಮಾನತೆಯು ವರ್ಣಾಶ್ರಮ ಪದ್ಧತಿಯಿಂದಲೇ ಇದ್ದದ್ದನ್ನು ಚರಿತ್ರೆಯಿಂದ ತಿಳಿಯಬಹುದು. ವರ್ಣಾಶ್ರಮ ಪದ್ಧತಿಯ ನಂತರ ಹುಟ್ಟಿಕೊಂಡ ಜಾತಿಪದ್ಧತಿಯ ಕಾರಣದಿಂದ ಇಂತಹ ಅಸಮಾನತೆಗಳು ವ್ಯಾಪಕವಾಗಿ ಬೆಳೆದುನಿಂತಿದೆ. ಇಂತಹ ಅಸಮಾನತೆಯು ಅನೇಕ ಕಾರಣಗಳಿಗಾಗಿ ಹುಟ್ಟಿಕೊಂಡಿರುವುದನ್ನು ವರ್ತಮಾನದ ಕತೆಗಳ ಮೂಲಕ ಕಾಣಲು ಸಾಧ್ಯ. ಬಡವ–ಶ್ರೀಮಂತ, ಉಳ್ಳವರು–ಇಲ್ಲದವರು, ಪುರುಷ–

ಮಹಿಳೆ, ಶೋಷಣೆಗೆ –ಒಳಪಡುವವರು–ಶೋಷಣೆಯನ್ನು ನಡೆಸುವವರು ಹೀಗೆ ಹಲವು ಪ್ರಕಾರಗಳಲ್ಲಿ ಅಸಮಾನತೆಯನ್ನು ಗುರ್ತಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಅಲ್ಲದೇ ಅಸಮಾನತೆಯನ್ನು ವ್ಯವಸ್ಥಿತವಾಗಿ ಜಾಗತೀಕರಣ ಸಂದರ್ಭದ ನಂತರದಲ್ಲಿ ಹುಟ್ಟುಹಾಕುತ್ತಿರುವುದನ್ನು ಕತೆಗಳಲ್ಲಿ ನೋಡಬಹುದು.

ಮುಂದುವರೆದ ರಾಷ್ಟ್ರಗಳು ಅಭಿವೃದ್ಧಿಯನ್ನು ಹೊಂದುತ್ತಿರುವ ರಾಷ್ಟ್ರಗಳ ಮೇಲೆ ಹೇರುತ್ತಿರುವ ಅನೇಕ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನೀತಿ–ನಿಯಮಗಳೂ ಸಹ ಇಂತಹ ಅಸಮಾನತೆಯನ್ನು ಸೃಷ್ಟಿ ಮಾಡುವಲ್ಲಿ ಪೂರಕ ಪಾತ್ರವನ್ನು ವಹಿಸುತ್ತಿವೆ. ಬಡತನದ ಕಾರಣಕ್ಕಾಗಿ, ಜಾತಿಯ ಕಾರಣಕ್ಕಾಗಿ, ಮಹಿಳೆಯ ಕಾರಣಕ್ಕಾಗಿ ಅನೇಕ ಕಂದರಗಳು ಸಮಾಜದಲ್ಲಿ ಸಮಾನತೆ ಇಲ್ಲದಿರುವುದನ್ನು ಕಾಣಲು ಸಾಧ್ಯವಾಗುತ್ತಿದೆ. ಇಂತಹ ಅಸಮಾನತೆಯನ್ನು ಕತೆಗಳಲ್ಲಿ ನಿರ್ವಚಿಸಿರುವುದನ್ನು ಹೀಗೆ ನೋಡಬಹುದು. "ಜಾಗತಿಕ ಅಸಮಾನತೆ ಎಂಬುದು ೨೧ನೇ ಶತಮಾನದ ಸಂಕೇತದಂತಿದೆ. ಬಂಡವಾಳಶಾಹಿಗಳ ಆರ್ಥಿಕ ಸಿದ್ಧಾಂತದ ಕಬಂಧಬಾಹು ಅಭಿವೃದ್ಧಿಶೀಲ ರಾಷ್ಟ್ರಗಳ ಆದರ್ಶ ಮತ್ತು ರಾಜಕೀಯ ಸಿದ್ಧಾಂತಗಳನ್ನು ಹಾಗೂ ಅಭಿವೃದ್ಧಿಪರ ಯೋಜನೆಗಳನ್ನು ಅಳಿಸಿಹಾಕುತ್ತಿದೆ."[೧೦೭] ಎಂದು ಜಗದೀಶ್ ಕೊಪ್ಪ ಅವರ ಅಭಿಪ್ರಾಯವಾಗಿದೆ.

ಇಂತಹ ಅಸಮಾನತೆಯು ಗ್ರಾಮ ಮತ್ತು ನಗರ ಪ್ರದೇಶಗಳ ನಡುವೆ ಉಂಟುಮಾಡಿರುವ ಅನೇಕ ಭಿನ್ನಾಭಿಪ್ರಾಯಗಳನ್ನು ನೋಡಲು ಸಾಧ್ಯ. ಇದನ್ನೇ ಜಗದೀಶ್ ಕೊಪ್ಪ ಅವರು "ಕಳೆದ ೫೯ ವರ್ಷಗಳ ಇತಿಹಾಸವನ್ನು ಕೆದಕಿ ನೋಡಿದಾಗ, ನಗರ–ಗ್ರಾಮಗಳ ನಡುವೆ ಕಂದಕ ಇನ್ನೂ ಜೀವಂತವಾಗಿರುವುದು ನಮ್ಮ ಕಣ್ಣಿಗೆ ರಾಚುತ್ತದೆ. ಅಷ್ಟೇ ಅಲ್ಲ ಅಂತರ ಹೆಚ್ಚಾಗುತ್ತಲೇ ಸಾಗಿದೆ. ಆರ್ಥಿಕ ಸುಧಾರಣೆಯ ಫಲ ಎಲ್ಲಾ ವರ್ಗದ ಜನಕ್ಕೆ ತಲುಪಿದಾಗ ಮಾತ್ರ ಅಭಿವೃದ್ಧಿ ಪಥಕ್ಕೆ ಅರ್ಥ ಬರಲು ಸಾಧ್ಯ. ಆದರೆ ಈ ದೇಶದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇವತ್ತಿನ ಮೇಲ್ವರ್ಗದ ಜನತೆ ಎಲ್ಲಾ ಹಂತಗಳಲ್ಲೂ ಅಮೇರಿಕಾದ ಜೀವನ ಪದ್ಧತಿಯನ್ನು ಅನುಸರಿಸಲು ಹಾತೊರೆಯುತ್ತಿದೆ. ಭೋಗ ಸಂಸ್ಕೃತಿಗೆ ಮಾರುಹೋದ ಈ ಜನ ಅಮೇರಿಕಾದ ಕೃತಕ ಸಂಸ್ಕೃತಿಯ ಜೊತೆ ಗುರುತಿಸಿಕೊಂಡು ಈ ನೆಲದ ಸಂಸ್ಕೃತಿಯ ಬೇರುಗಳಿಂದ ದೂರವಾಗುತ್ತಿದ್ದಾರೆ."[೧೦೮] ಎಂದು ತಿಳಿಸಿದ್ದಾರೆ. ಅಂದರೆ ಅಸಮಾನತೆಯನ್ನು ಇಂದಿನ ಇಪ್ಪತ್ತೊಂದನೆಯ ಶತಮಾನದಲ್ಲಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ಆರ್ಥಿಕ ನೀತಿಗಳು ಸಮಾಜದ ಮೇಲೆ ಮಾಡಿರಬಹುದಾದ ಅತಿದೊಡ್ಡ ಪರಿಣಾಮವೆಂದರೆ

ಬಡವ–ಶ್ರೀಮಂತ, ಗ್ರಾಮ–ನಗರ, ಪುರುಷ–ಮಹಿಳೆ ಎನ್ನುವ ಅನೇಕ ನೆಲೆಗಳಲ್ಲಿ ಅಸಮಾನತೆಯನ್ನು ನೆಲೆನಿಲ್ಲುವಂತೆ ಮಾಡಿರುವುದನ್ನು ಸೂಕ್ಷ್ಮವಾಗಿ ಕನ್ನಡ ಕತೆಗಳಲ್ಲಿ ಸೆರೆಹಿಡಿಯಲಾಗಿದೆ. ಇಂತಹ ಅಸಮಾನತೆಯನ್ನು ಕನ್ನಡ ಸಣ್ಣಕತೆಗಳಲ್ಲಿ ಹೀಗೆ ನೋಡಬಹುದು.

ಶಾಂತಿ ಕೆ. ಅಪ್ಪಣ್ಣ ಅವರ 'ಮುಳ್ಳುಗಳು' ಕತೆಯಲ್ಲಿ ಸಮಾಜದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಕುರಿತ ಚಿತ್ರಣವಿದೆ. ಅಲ್ಲದೇ ಅಸಮಾನತೆ ಕೇವಲ ಆರ್ಥಿಕ ವಿಷಯಕ್ಕೆ ಮಾತ್ರವಲ್ಲದೇ ಮನುಷ್ಯನ ಪ್ರಾಣಕ್ಕೂ ಇಲ್ಲಿ ಬೆಲೆ ಇಲ್ಲ ಎನ್ನುವುದನ್ನು ಕತೆಯು ವಿವರಿಸುತ್ತದೆ. ಟಿಪ್ಪು ಕತೆಯ ಮುಖ್ಯ ಪಾತ್ರ. ಇವನು ತನ್ನ ಮದುವೆಯಾದ ಹೊಸದರಲ್ಲಿ ಹೆಂಡತಿ ಸುಷ್ಮಾ ಜೊತೆಗೆ ಸುಖದಿಂದ ಇರಬೇಕಿದ್ದವನು. ತಂದೆಯೇ ಮನೆಯನ್ನು ನೋಡಿಕೊಳ್ಳುತ್ತಿದ್ದರು. ರಿಕ್ಷಾ ಓಡಿಸುತ್ತಿದ್ದ ತಂದೆಗೆ ಲಾರಿ ಢಿಕ್ಕಿ ಹೊಡೆದು ಅವರು ಸಾವನ್ನಪ್ಪಿದರು. ಇದಕ್ಕೆ ಸುಷ್ಮಾಳ ಕಾಲ್ಗುಣವೇ ಕಾರಣ ಎನ್ನುವುದು ಮನೆಯವರ ವಾದ. ಇಂತಹ ಸಂದರ್ಭದಲ್ಲಿ ಟಿಪ್ಪು ರಿಕ್ಷಾವನ್ನು ಓಡಿಸಲು ಬಿಡದೇ ಅವನನ್ನು ಕಟ್ಟಡ ನಿರ್ಮಾಣದ ಕೆಲಸಕ್ಕಾಗಿ ಮದ್ರಾಸಿಗೆ ಕಳುಹಿಸಲಾಯಿತು.

ತಂಗಿಯ ಮದುವೆಯ ಖರ್ಚು, ಅಕ್ಕನ ಬಾಣಂತನದ ಎಲ್ಲಾ ಸಮಸ್ಯೆಗಳನ್ನು ಅರಿತು ಹೆಂಡತಿಯನ್ನು ಬಿಟ್ಟು ಕಟ್ಟಡ ನಿರ್ಮಾಣಕ್ಕೆ ಬಂದವನು ಇಲ್ಲಿನ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಕಂಡು ನಲುಗಿಹೋಗುತ್ತಾನೆ. ರಾಮಮೇಸ್ತ್ರಿಯ ಜೊತೆಗೆ ಕಟ್ಟಡ ನಿರ್ಮಾಣ ಕೆಲಸಕ್ಕೆ ಬಂದಿದ್ದ ಟಿಪ್ಪು ಒಮ್ಮೆ ಕೆಲಸ ಮಾಡುತ್ತಿದ್ದಾಗ ರಾವ್‌ಬಹದ್ದೂರ್ ಎಂಬ ಹುಡುಗ ಅಷ್ಟೆತ್ತರದ ಅಟ್ಟಣಿಗೆ ಕಳಚಿ ಮೇಲಿಂದ ಕೆಳಗೆ ಬಿದ್ದು ಅಲ್ಲೇ ಸತ್ತು ಹೋದ. ಆಗ ಅಲ್ಲಿಗೆ ಬಂದ ಪೋಲಿಸರಿಬ್ಬರನ್ನು "ಇಂಜಿನಿಯರ್‌ಗಳಿಬ್ಬರೂ ಪೋಲಿಸರೊಂದಿಗೆ ಅದೇನೋ ಸ್ವಲ್ಪ ಹೊತ್ತು ಗುಸುಗುಸು ಮಾತಾಡಿದರು. ಚಿಕ್ಕದಾಗಿ ವಾದವೂ ನಡೆದಂತೆ ಕಂಡಿತ್ತು. ಎಲ್ಲ ಸೇರಿ ಒಂದೆರೆಡು ಘಂಟೆ ಅಷ್ಟೇ. ಅತ್ತ ಅವನ ದೇಹ ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಒಯ್ಯುತ್ತಿದ್ದಂತೆ ಇತ್ತ ಕೆಲಸ ಮರಳಿ ಶುರುವಾಗಿತ್ತು. ಏನಿದು... ಈ ಇಂಜಿನಿಯರು ಮೇಸ್ತ್ರಿಗೆಲ್ಲ ಕರುಣೆಯೇ ಇಲ್ಲವೇ... ನಮ್ಮ ಹುಡುಗ ಸತ್ತು ಹೋಗಿದ್ದಾನೆ.... ಅವನ ಬಗ್ಗೆ ಒಂಚೂರು ಯೋಚಿಸದೇ ನಾವಿಲ್ಲಿ ಕೆಲಸ ಮುಂದುವರಿಸಬೇಕಾ..."[೧೦೯] ಎಂದು ಟಿಪ್ಪು ಮರುಗುತ್ತಾನೆ.

ಇಡೀ ವ್ಯವಸ್ಥೆಯು ಉಳ್ಳವರ ಪರವಾದ ಧೋರಣೆಯನ್ನು ಹೊಂದಿ ಇಲ್ಲದವರನ್ನು ನಿರ್ಲಕ್ಷಿಸಿರುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಅಲ್ಲದೇ ಸತ್ತ ವ್ಯಕ್ತಿಯನ್ನು ಯಾರೂ

ಸಹ ಪರಿಗಣಿಸದೇ ಪೋಲೀಸ್‌ರು ಇಂಜಿನಿಯರ್‌ಗಳೊಂದಿಗೆ ಮಾತಾಡಿಕೊಂಡು ಇಡೀ ಕೇಸನ್ನು ಮುಚ್ಚಿಹಾಕುವುದನ್ನು ಗಮನಿಸಿದ ರತ್ತು ಸಮಾಜದಲ್ಲಿನ ಅಸಮಾನತೆಯನ್ನು ಹೀಗೆ ವ್ಯಕ್ತಪಡಿಸುತ್ತಾನೆ. 'ನಾವು ನಮ್ಮ ಉಷಾರಲ್ಲಿರಬೇಕು. ನಾವು ಸತ್ತರೆ ಇವರೇನು ಪರಿಹಾರ ಕೊಡಲ್ಲ. ಬದಲಾಗಿ ಕೇಸು ಮುಚ್ಚಲಿಕ್ಕೆ ಪೋಲೀಸರಿಗೆ ಲಂಚ ಕೊಡ್ತಾರೆ ಅಷ್ಟೇ ಎನ್ನುತ್ತಾನೆ. ಅಂದರೆ ಇಡೀ ಸಮಾಜದಲ್ಲಿನ ವರ್ಗ ವ್ಯವಸ್ಥೆಯಲ್ಲಿನ ಅಸಮಾನತೆ ಕತೆಯಲ್ಲಿ ವ್ಯಕ್ತವಾಗಿದೆ. ಇಲ್ಲಿ ಬಡವರ, ಶೋಷಿತರ ಪರವಾಗಿ ಧ್ವನಿ ಇಲ್ಲದಿರುವುದನ್ನು ಕಂಡ ಟಿಪ್ಪು "ಈ ಜಗತ್ತು ಹುಟ್ಟಿ ಅದೆಷ್ಟು ವರ್ಷಗಳಾದವೋ.... ಅಂದಿನಿಂದ ಇಂದಿನವರೆಗೂ ಯಾವುದು ಬದಲಾಯಿತೋ, ಮನುಷ್ಯನ ಮನಸ್ಸು ಬದಲಾಗಿಲ್ಲ.... ಉಳ್ಳವರ ಕಣ್ಣುಗಳಲ್ಲಿ ಇಲ್ಲದವನು ಇಂದಿಗೂ ಒಂದು ಸರಕು..... ಕೇವಲ ಬಳಸಿ ಬಿಸಾಡಬಹುದಾದ ಸರಕು."[೧೧೦] ಎಂದು ಹೇಳುವುದು ಸಮಾಜದಲ್ಲಿನ ಅಸಮಾನತೆಯನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತದೆ.

ಇಂತಹ ಅಸಮಾನತೆಯ ನಿವಾರಣೆಯನ್ನು ಟಿಪ್ಪು ಹೀಗೆ ಯೋಚಿಸುತ್ತಾನೆ. "ಯಾರಾದರೊಬ್ಬ ಬರಬೇಕು, ಇಲ್ಲ ಹುಟ್ಟಬೇಕು.... ಎಲ್ಲರ ಸಂಪತ್ತನ್ನೂ ಗುಡ್ಡೆ ಹಾಕಿ ಎಲ್ಲರಿಗೂ ಸಮವಾಗಿ ಹಂಚಿಬಿಡಬೇಕು. ಮೇಲು-ಕೀಳು ಅಂತೆಲ್ಲ ಏನೆಂದರೆ ಏನೂ ಇರಬಾರದು."[೧೧೧] ಎನ್ನುವ ಮಾತುಗಳು ಸಮಾಜದಲ್ಲಿ ವರ್ಗ ವ್ಯವಸ್ಥೆಯು ಇರುವುದನ್ನು ಸೂಕ್ಷ್ಮವಾಗಿ ಚಿತ್ರಿಸುವುದರ ಜೊತೆಗೆ ಅದರ ಪರಿಹರಿಸಬೇಕಾದ ಮಾರ್ಗವೊಂದನ್ನು ವ್ಯಕ್ತಪಡಿಸುತ್ತದೆ. ಅಲ್ಲದೇ ಉಳ್ಳವರು ಇಲ್ಲದವರ ನಡುವಿನ ಅಂತರವನ್ನು ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇನ್ನೂ ವ್ಯಾಪಕವಾಗಿ ಹೆಚ್ಚಾಗುತ್ತಿರುವುದನ್ನು ತಿಳಿಸಲಾಗಿದೆ. ಜೊತೆಗೆ ಪ್ರಜಾಪ್ರಭುತ್ವದಲ್ಲಿ ದೀನರ, ದಲಿತರ, ಬಡವರ, ಶೋಷಿತರ ಎಂಬ ಸಂದೇಶಗಳು ಇನ್ನೂ ಆಗಿಲ್ಲವೆನ್ನುವುದನ್ನು ಕತೆಯಲ್ಲಿನ ಹಲವು ಘಟನೆಗಳು ಸಾಕ್ಷೀಕರಿಸಿವೆ. ಪ್ರಭುತ್ವದೊಂದಿಗೆ ಹೇಗೆ ಬಂಡವಾಳಶಾಹಿ ವ್ಯವಸ್ಥೆಯು ಕೂಡಿಕೊಂಡು ಬಡವರನ್ನು ಶೋಷಣೆಗೆ ಒಳಗು ಮಾಡಿದೆ ಎನ್ನುವುದನ್ನು ಸಹ ಚಿತ್ರಿಸಲಾಗಿದೆ.

ಅನುಪಮಾ ಪ್ರಸಾದ್ ಅವರ 'ಡೇಗೆ' ಕತೆಯು ಮುಖ್ಯವಾಗಿ ಆಧುನಿಕ ಪರಿಸರದಲ್ಲಿ ವಾಸಿಸುತ್ತಿರುವ ಜನರಲ್ಲಿ ಇರುವ ಸಾಮಾಜಿಕ ಅಸಮಾನತೆಯ ಕಾರಣಕ್ಕಾಗಿ ಬಡವರು ಹೇಗೆ ತಮ್ಮ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ತಿಳಿಸುತ್ತಿದೆ. ಇಂದಿನ ವರ್ತಮಾನದ ದಿನಗಳಲ್ಲಿ ಎಲ್ಲದಕ್ಕೂ ಮನುಷ್ಯ ವೈಜ್ಞಾನಿಕ ಸತ್ಯಗಳೊಂದಿಗೆ ಅದನ್ನು ನಿರ್ವಹಿಸುವ ಅನಿವಾರ್ಯತೆಯನ್ನು ಕಂಡುಕೊಂಡಿರುವುದನ್ನು ಗುರುತಿಸಲು ಸಾಧ್ಯವಾಗಿದೆ.

ದೈಹಿಕವಾದ ಕಾರಣಗಳಿಗಾಗಿ ಮನುಷ್ಯ ತಂತ್ರಜ್ಞಾನವನ್ನು ಬಳಸಿಕೊಂಡು ಇನ್ನೊಬ್ಬರನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಉದ್ದೇಶವನ್ನು ಕತೆಯು ನಿರೂಪಿಸುತ್ತದೆ. ಕತೆಯ ಮುಖ್ಯ ಪಾತ್ರವಾದ ನೀಲು ತನ್ನ ಆರ್ಥಿಕವಾಗಿ ಹಿಂದುಳಿದಿರುವ ಕಾರಣಕ್ಕಾಗಿ ಬಾಡಿಗೆ ತಾಯಿಯಾಗುವ ಪ್ರಕ್ರಿಯೆಗೆ ಒಳಪಡುತ್ತಾಳೆ. ಇದಕ್ಕೆ ಸಮಾಜದಲ್ಲಿ ಉನ್ನತ ಹುದ್ದೆಯಲ್ಲಿದ್ದು ಇದನ್ನು ನೈತಿಕವಾಗಿ ತಡೆಯಬೇಕಾಗಿದ್ದ ಡಾಕ್ಟರ್ ಕೂಡಾ ಈ ಬಾಡಿಗೆ ತಾಯಿಯಾಗುವ ನೀಲೂಗೆ ಸಹಕರಿಸುವ ಆ ಮೂಲಕ ಅವಳಲ್ಲಿರುವ ನೈತಿಕ ಪ್ರಜ್ಞೆಯನ್ನು ಮರೆತು ಗರ್ಭಧಾರಣೆಯ ಸಮಯದಲ್ಲಿ ಇರುವ ವಾಸ್ತವ ಸಂಗತಿಯನ್ನು ಕೇವಲ ಆರ್ಥಿಕ ಕಾರಣಕ್ಕಾಗಿ ಇಂತಹ ಪ್ರವೃತ್ತಿಯನ್ನು ರೂಢಿಸುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಿದೆ.

ಮನುಷ್ಯ ನೈಸರ್ಗಿಕ ಅಂಶಗಳನ್ನು ತನ್ನ ಆಸೆ-ಆಕಾಂಕ್ಷೆಗಳಿಗಾಗಿ ಯಂತ್ರದಂತೆ ಬದಲಾಸಿಕೊಳ್ಳುತ್ತಿರುವ ವಿವರಗಳನ್ನು ಕತೆಯಲ್ಲಿ ಕಾಣಬಹುದು. ಮಕ್ಕಳಾಗದಿದ್ದ ಶ್ರೀಮಂತ ದಂಪತಿಗಳಲ್ಲಿನ ವೀರ್ಯಾಣು ಮತ್ತು ಅಂಡಾಣುಗಳನ್ನು ಶಕ್ತವಾಗಿರುವ ಮಹಿಳೆಯ ದೇಹಕ್ಕೆ ಸೇರಿಸಿ ಆ ಮಗುವನ್ನು ಅವಳ ದೇಹದಲ್ಲಿ ಬೆಳೆಸುವ ಮೂಲಕ ಬಾಡಿಗೆ ತಾಯಿಯಾಗುವ ಪರಿಕಲ್ಪನೆಯನ್ನು ಆಧುನಿಕತೆಯ ವರ್ತಮಾನದ ದಿನಗಳಲ್ಲಿ ಕಾಣಲು ಸಾಧ್ಯವಾಗಿದೆ. ಈ ತೆರನಾದ ಬಾಡಿಗೆ ತಾಯಿಯಾಗುವ ಪರಿಕಲ್ಪನೆಯನ್ನು ನೀಲೂಳ ಗಂಡನು ಹೀಗೆ ಅರ್ಥೈಸಿಕೊಂಡಿದ್ದಾನೆ. "ತಾನು ತರಕಾರಿ ಮಾರುವ ಗಾಡಿಯನ್ನ ಬಾಡಿಗೆಗೆ ಪಡೆಯುತ್ತಿದ್ದ ನೀಲೂಳ ಗಂಡನಿಗೆ ಬಾಡಿಗೆ ಭಾಷೆಯಲ್ಲೇ ಡಾಕ್ಟ್ರಮ್ಮನೂ ಅಧಿಕಾರಿಯೂ ವಿವರಿಸಿದ್ದರಿಂದ ಬಾಡಿಗೆ ಗರ್ಭಾಶಯದ ವ್ಯವಹಾರವೆಂದರೆ ತಾನು ಗಾಡಿ ಬಾಡಿಗೆ ಪಡೆಯುವುದು ಎಷ್ಟು ವ್ಯವಹಾರಿಕವೋ ಇದೂ ಅಷ್ಟೇ ಅನಿಸಿತ್ತು".[೧೧೨]

ಡಾಕ್ಟರ್ ನೀಲಮ್ಮಳನ್ನು ಕುರಿತು "ಒಳ್ಳೆ ಕೆಲಸ ಮಾಡಿದೆ ನೀಲಮ್ಮ. ಮಕ್ಕಳನ್ನು ಹೆರಲಿಕ್ಕೆ ಆಗದಿದ್ದೋರ ಮಡಿಲು ತುಂಬಿದ ಪುಣ್ಯ ಬರ್ತದೆ ನಿಂಗೆ' ಎಂದಾಗ ನೀಲು ಮುಖ ಸಿಂಡರಿಸಿ 'ನಾವೇನ್ ಪುಣ್ಯ ಸಂಪಾದನೆ ಮಾಡಾಕ್ ಬಂದಿಲ್ಲ ಡಾಕ್ಟ್ರಮ್ಮ. ಅವ್ರಿಗೊಳ್ಳೆದಾಗ್ಲಿ ಅನ್ಕೊಂಡು ಬಂದ್ವಾ? ಮಗ ಹೆತ್ಕೊಟ್ರೆ ಕಾಸು ಬರುತ್ತೆ ಅದ್ಕೇ ಬಂದ್ವೀ"[೧೧೩] ಎನ್ನುವ ಮಾತುಗಳು ಮನುಷ್ಯ ಇಂದು ತನ್ನ ನೈತಿಕತೆಯನ್ನು ಮರೆತು ಆರ್ಥಿಕ ಕಾರಣಕ್ಕಾಗಿ ಅಧೋಗತಿಗೆ ಇಳಿದಿದ್ದಾನೆ ಎನ್ನುವುದನ್ನು ತೋರಿಸುತ್ತದೆ. ಸಹಜ ಜೀವನ ಕ್ರಮವನ್ನು ಅನುಸರಿಸುತ್ತಿದ್ದ ನೀಲಮ್ಮನಿಗೆ ಈ ಕೃತಕ ಗರ್ಭಧಾರಣೆ ಸಂದರ್ಭದಲ್ಲಿ ವೈಭವಯುತ ಜೀವನ ಸೃಷ್ಟಿಸಿತ್ತು. ಅವಳಲಿದ್ದಲ್ಲಿಯೇ ಎಲ್ಲವನ್ನು ತಂದು ಕೊಡುವುದು

ಅವಳಲ್ಲಿ ಒಂದು ಬಗೆಯ ನಿರಾಸಕ್ತಿಯನ್ನು ಉಂಟುಮಾಡಿತು. ಅವಳಿಗೆ ತನ್ನ ಗಂಡನ ಬಳಿಯಿದ್ದಾಗಿನ ಸುಖ ಇಲ್ಲಿ ಇಲ್ಲ ಎನಿಸುವುದು ಕೂಡಾ ಮನುಷ್ಯನ ಎಲ್ಲಾ ಆಸೆಗಳನ್ನು ಕೇವಲ ದುಡ್ಡಿನಿಂದ ತೀರಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತದೆ.

ಈ ರೀತಿಯ ವ್ಯವಹಾರವನ್ನು ಮೊಟ್ಟೆ ಕೇಸು ಎಂಬ ಹೊಸದಾದ ಹೆಸರಿನೊಂದಿಗೆ ಆಸ್ಪತ್ರೆಯಲ್ಲಿನ ನರ್ಸ್ ಮತ್ತು ಅಜ್ಜಿಯು ಗುರುತಿಸುವುದನ್ನು ಕಾಣಬಹುದು. ಇಂತಹದ್ದೇ ಒಂದು ಕೇಸನ್ನು ನರ್ಸಮ್ಮ ನೀಲುಗೆ ಹೇಳುತ್ತಾ ಒಂದು ಹುಡುಗಿ ಹೀಗೆ ಮಗುವನ್ನು ಹೆತ್ತುಕೊಟ್ಟು ಸತ್ತೇಹೋದದ್ದನ್ನು ತಿಳಿಸುತ್ತಾಳೆ. ನೀಲೂ ಮಗುವನ್ನು ಹೆತ್ತು ಕೊಟ್ಟು ಹೊರಗೆ ಬಂದಾಗ ಅವಳ ಬಿಗಿಯುತ್ತಿರುವ ಮೊಲೆಗಳಲ್ಲಿ ನೋವನ್ನು ತಡೆದುಕೊಳ್ಳಲು ಸಾಧ್ಯವಾಗದೇ ಇನ್ನೊಮ್ಮೆ ಇಂತಹ ಕೆಲಸಕ್ಕೆ ಹೋಗಬಾರದೆಂದುಕೊಂಡಳು. ಆದರೆ ಮನೆಯ ಆರ್ಥಿಕ ಪರಿಸ್ಥಿಯು ಅವಳಿಗೆ ಮತ್ತೆ ಬಾಡಿಗೆ ತಾಯಿಯಾಗಿ ಮುಂದಿನ ಬಾರಿ ಶೆಡ್ಡಿನ ಹಿಂದೆ ತಗಡಿನ ಗೋಡೆ ಮಾಡಿ ಒಂದು ಪಾಯಿಖಾನೆ ಕಟ್ಟಬೇಕು, ಹಾಗೆಯೇ ಶೆಡ್ಡಿಗೆ ಹಂಚು ಹಾಕಿದರಾಯ್ತು ಎಂದುಕೊಳ್ಳುವಲ್ಲಿ ಅವಳ ಅಸಹಾಯಕತೆಯನ್ನು ಕತೆಯು ಚಿತ್ರಿಸುತ್ತದೆ.

ಪ್ರಕೃತಿ ನಿಯಮಕ್ಕೆ ವಿರೋಧವಾಗಿ ಕೆಲಸ ಮಾಡುವ ಮನುಷ್ಯನು ತನ್ನ ಆಸೆ–ಆಕಾಂಕ್ಷೆಗಳಿಗಾಗಿ ಜೀವವನ್ನೇ ಒತ್ತೆ ಇಟ್ಟು ಇಂತಹ ಕೆಲಸಗಳಲ್ಲಿ ಭಾಗಿಯಾಗುವ ಪ್ರಕ್ರಿಯೆಯನ್ನು ಕಾಣಬಹುದು. ಸಮಾಜದಲ್ಲಿನ ಆರ್ಥಿಕವಾದ ಅಸಮಾನತೆಯು ಈ ರೀತಿಯ ಕೆಲಸಕ್ಕೆ ಅವರನ್ನು ಅಣಿಮಾಡುವ ದುಸ್ಥಿತಿಗೆ ತಂದಿರುವುದನ್ನು ಈ ಕತೆಯ ಮೂಲಕ ಕಾಣಲು ಸಾಧ್ಯವಾಗಿದೆ.

೪.೯ ಪ್ರತಿಭಟನೆ/ಹೋರಾಟ

ಪ್ರತಿಭಟನೆ, ಹೋರಾಟಗಳು ೮೦ರ ದಶಕದ ನಂತರ ಕಾಣೆಯಾಗುತ್ತಿರುವುದನ್ನು ಅಥವಾ ಅವು ಸತ್ವಹೀನವಾಗುತ್ತಿರುವುದರ ಚರ್ಚೆಯನ್ನು ಮಹಾಂತೇಶ ನವಲಕಲ್ ಅವರ 'ನಾಯಿ ಎಂಬ ಮನುಷ್ಯ' ಎಂಬ ಕತೆಯಲ್ಲಿ ಚಿತ್ರಸಲಾಗಿದೆ. ವೈಯಕ್ತಿಕ ಹಿತಾಸಕ್ತಿಗಾಗಿ, ಸ್ವಾರ್ಥ ಸಾಧನೆಗಾಗಿ ಇಂದು ಹೋರಾಟ ಮಾಡುತ್ತಿರುವ ಅನೇಕ ಮನಸ್ಸುಗಳು ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಚಳುವಳಿಯು ಯಶಸ್ವಿಯಾಗದೇ ನಾಶವಾಗುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಸೂರ್ಯನ ಪಾತ್ರವು ಇಡೀ ಕತೆಯಲ್ಲಿ ಅವನು ಭ್ರಷ್ಟನಾಗುವ ಮೂಲಕ ಹೋರಾಟವನ್ನೇ ಅತಂತ್ರಗೊಳಿಸುವ ಸ್ಥಿತಿಯನ್ನು

ಚರ್ಚಿಸಲಾಗಿದೆ. ಅಲ್ಲದೇ ಬಹುರಾಷ್ಟ್ರೀಯ ಕಂಪೆನಿಗಳ ಮೂಲಕ ಚಳುವಳಿಗಳನ್ನು ಯಾವ ನೆಲೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ಮುಖ್ಯವಾಗಿ ಪಿಂಕಿ ಪಾತ್ರದ ಮೂಲಕ ಚರ್ಚಿಸಲಾಗಿದೆ.

ಕತೆಯ ಮುಖ್ಯ ಪಾತ್ರವಾದ ಸ್ವಾಮಿ ಮತ್ತು ಸೂರ್ಯ ಇಬ್ಬರೂ ಸ್ನೇಹಿತರು. ಸೂರ್ಯನ ಮನೆಗೆ ಹೋದಾಗ ಅಲ್ಲಿಗೆ ಬಂದ ಪಿಂಕಿಯು "೮೦ರ ದಶಕದಲ್ಲಿದ್ದ ಹೋರಾಟ ಇಂದು ಮೂಲೆಗೆ ಹೋಗಲು ನಿಮ್ಮಂಥವರ ಸ್ವಾರ್ಥವು ಕಾರಣ. ಸಿದ್ಧಾಂತದ ಆಚೆ ವೈಯಕ್ತಿಕ ನೆಲೆಗಾಗಿ ನಿಮ್ಮ ಹೋರಾಟವಾಯ್ತು. ಅದಕ್ಕಾಗಿ ಹತ್ತೇ ವರ್ಷದಲ್ಲಿ ಚಳುವಳಿ ನಾಶವಾಯ್ತು. ಸ್ವಾರ್ಥ ಸಾಧನೆಗಾಗಿ ಯಾರು ಹೋರಾಟಕ್ಕೆ ಬರುತ್ತಾರೋ ಅವರು ಚಳುವಳಿಗಳನ್ನು ಒಳಗಿದ್ದುಕೊಂಡೇ ನಾಶ ಮಾಡುತ್ತಾರೆ. ಅದಕ್ಕೆ ಭಾರತ ದೇಶ ಕನ್ನಡಿ ಇದ್ದಂತೆ ಎಂದು ನೇರವಾಗಿ ನನ್ನ ಮೇಲೆ ಬಾಣ ಬಿಟ್ಟಳು."[೧೧೪] ಮುಖ್ಯವಾಗಿ ಇಲ್ಲಿ ಪಿಂಕಿಯು ೮೦ರ ದಶಕದಲ್ಲಿದ್ದ ರೈತ ಚಳುವಳಿಯು ಕಾಲಾನಂತರದಲ್ಲಿ ಪಡೆಯುತ್ತಿರುವ ಸ್ವರೂಪವನ್ನು ತಿಳಿಸುತ್ತಿದ್ದಾಳೆ. ಅಲ್ಲದೇ ರೈತ ಚಳುವಳಿಯನ್ನು ಇಲ್ಲಿನ ಹೋರಾಟಗಾರರಲ್ಲಿನ ಕೆಲವು ಜನರನ್ನು ಬಳಸಿಕೊಂಡು ಹೋರಾಟವನ್ನು ಹತ್ತಿಕ್ಕುತ್ತಿದ್ದಾರೆ ಎನ್ನುವುದನ್ನು ತನ್ನ ಗಂಡನಾದ ಸೂರ್ಯನನ್ನು ಹಿನ್ನೆಲೆಯಾಗಿರಿಸಿಕೊಂಡು ಮಾತನಾಡುತ್ತಾಳೆ.

ಇದಕ್ಕೆ ಲೇಖಕರು "ಚಳುವಳಿ ನಾಶ ಆದವು ಎನ್ನುವ ಭ್ರಮೆಯಲ್ಲಿ ಬದುಕುವುದಕ್ಕಿಂತ ಚಳುವಳಿಯನ್ನು ವ್ಯಕ್ತಿಯಿಂದ ಸಮಾಜ ಕೇಂದ್ರಿತ ಕಾರಣಗಳಿಗೆ ಒಯ್ಯುವುದು ಈಗಿನ ಜವಾಬ್ದಾರಿಯಾಗಿದೆ."[೧೧೫] ಎನ್ನುತ್ತಾರೆ. ಅಂದರೆ ಚಳುವಳಿಯ ಸ್ವರೂಪವನ್ನು ಸಂಘಟನಾತ್ಮಕವಾಗಿ ಜನರ ಮಟ್ಟಕ್ಕೆ ತಲುಪಿಸಬೇಕೆಂಬುದು ಲೇಖಕರ ಅಭಿಪ್ರಾಯ. ಇದಕ್ಕೆ ಪಿಂಕಿಯು ಭಾರತದಂತಹ ದೇಶದಲ್ಲಿ ಯಾಕೆ ಚಳುವಳಿಗಳು ಸಾಕಷ್ಟು ಪ್ರಮಾಣದಲ್ಲಿ ಗಟ್ಟಿಗೊಂಡು ಬೆಳೆಯುತ್ತಿಲ್ಲ ಎನ್ನುವುದಕ್ಕೆ ಕಾರಣವನ್ನು ಈ ರೀತಿ ವಿವರಿಸುತ್ತಾಳೆ. "ಭಾರತದಂತ ವ್ಯಕ್ತಿಪೂಜಿತ ಜಗತ್ತಿನಲ್ಲಿ ಚಳುವಳಿಗಳು ಸಮಾಜಮುಖಿಯಾಗಲು ಸಾಧ್ಯವಿಲ್ಲ. ಉದಾಹರಣೆಗೆ ತಮಿಳುನಾಡಿನ ರಾಜಕೀಯ, ಬಿಹಾರದ ರಾಜಕಾರಣ ಪ್ರಮುಖವಾಗಿ ಹೆಸರಿಸಬಹುದು. ನಿಮ್ಮ ಚಳುವಳಿಗಳು ಇಲ್ಲಿ ಕೊನೆಗೆ ವ್ಯಕ್ತಿಯ ನೆಲೆಗೆ ಸೇರಿಕೊಂಡು ಕೃತಾರ್ಥರಾಗುತ್ತವೆ. ನಿಮಗೆ ಒಂದು ಮೆಸೇಜ್ ಕೊಡಲು ಇಷ್ಟಪಡುತ್ತೇನೆ. ಗಾಂಧೀಜಿ ಇನ್ನು ಕೆಲವು ವರ್ಷಗಳಲ್ಲಿ ವಿಷ್ಣುವಿನ ಹನ್ನೊಂದನೆಯ ಅವತಾರಿ ಆಗೋ ಕಾಲ ದೂರವಿಲ್ಲ. ಇದು ಇಂಡಿಯಾ, ಇಲ್ಲಿ ಏನು ಬೇಕಾದರೂ ಆಗುತ್ತೇ..... ನೀವು

ಇತಿಹಾಸ ಮತ್ತಯ ಭವಿಷ್ಯತ್‌ಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ನಿಮ್ಮ ಚಳುವಳಿ ಧಿಕ್ಕು ತಪ್ಪಿಸಲು ಸಾಧ್ಯವಿಲ್ಲ."[೧೧೬] ಎಂದು ಚಳುವಳಿಗಳ ತಾತ್ವಿಕ ನೆಲೆಗಟ್ಟನ್ನು ವಿಮರ್ಶಾತ್ಮಕವಾಗಿ ಮಂಡಿಸುತ್ತಾಳೆ.

ಅಲ್ಲದೇ ಚಳುವಳಿಗಳು ಇಂದು ಯಾವ ಕಾರಣಕ್ಕೆ ನೆಡೆಯಬೇಕು, ಹೇಗೆ ನೆಡೆಯಬೇಕು, ಏತಕ್ಕಾಗಿ ನೆಡೆಯುಬೇಕು ಎನ್ನುವ ನಿರ್ದಿಷ್ಟ ಉದ್ದೇಶಗಳಿಲ್ಲದೇ ಅವು ಅಂತ್ಯವಾಗುತ್ತಿರುವುದನ್ನು ಪಿಂಕಿಯು ತಿಳಿಸುತ್ತಾಳೆ. "ನಿಮಗೆ ಹೋರಾಟ ಹೇಗೆ ಅಂದರೆ ಬರೀ ಡ್ಯೂಟಿ ಆಯಿತು, ಎಲ್ಲದಕ್ಕೂ ಹೋರಾಟ, ಎಲ್ಲಿಯಾದರೂ ರೈತ ಆತ್ಮಹತ್ಯೆ ಮಾಡಿಕೊಂಡು ಸತ್ತರೆ; ನಿಮಗೆ ಖುಷಿ ಯಾಕೆಂದರೆ, ಹೋರಾಟ ಮಾಡಲು ನಿಮಗೆ ಇಶ್ಯೂವ್ಸ್ ಬೇಕು. ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಗೆ ಬಂದರೆ ನಿಮಗೆ ಇಶ್ಯೂವ್ಸ್ ಸಮಸ್ಯೆಗಳು ಬೆಳೆದ ಹಾಗೆಲ್ಲ ನಮ್ಮ ಹೋರಾಟ ಮುಂಚೂಣೆಗೆ ಬರುತ್ತವೆ ಎನ್ನುವ ಸ್ವಾರ್ಥ ನಿಮ್ಮ ಹೋರಾಟಗಳ ಹಿಂದೆ."[೧೧೭]

ಪಿಂಕಿಯ ಈ ಮಾತನ್ನು ನಾವು ಮುಖ್ಯವಾಗಿ ಗಮನಿಸುವುದಾದರೆ ಹನುಮಂತ ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲಿ ಹಾವೂರಿನಲ್ಲಿ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಊರನ್ನು ಒಕ್ಕಲೆಬ್ಬಿಸುವ ಕೆಲಸ ನಡೆಸಿರುತ್ತದೆ. ಇದನ್ನು ವಿರೋಧಿಸಿ ಜನರು ರಸ್ತೆಯಲ್ಲಿ ಮಲಗಿ ಪ್ರತಿಭಟನೆಯನ್ನು ಮಾಡುತ್ತಿದ್ದರು. ಇಲ್ಲಿ ಮುಖ್ಯವಾಗಿ ಪ್ರತಿಭಟನೆಯನ್ನು ೨ ನೆಲೆಗಳಲ್ಲಿ ಮಾಡುತ್ತಿದ್ದವರನ್ನು ಕತೆಯಲ್ಲಿ ತಿಳಿಸಲಾಗಿದೆ.

೧. ಬೈಪಾಸ್ ರಸ್ತೆ ವಿರೋಧಿ ಸಮಿತಿ(ಬೈವಿಸಂ)

ಇವರ ಅಭಿಪ್ರಾಯವೆಂದರೆ ಹೆದ್ದಾರಿಯನ್ನೇ ಅಗಲೀಕರಣ ಮಾಡಿ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಬೇಕು ಎಂದು ಹೋರಾಟಕ್ಕಿಳಿದಿದ್ದರು.

೨. ಹೆದ್ದಾರಿ ಅಗಲೀಕರಣ ವಿರೋಧಿ ಸಮಿತಿ(ಅವಿಜಂ)

ಇವರು ರಸ್ತೆಯನ್ನು ಶಾರ್ಟ್‌ಕರ್ಟ್ ಮಾಡಲು ನೇರಗೊಳಿಸಲು ನಗರದ ಹೊರಗೆ ಬೈಪಾಸ್ ರಸ್ತೆ ಮಾಡಬೇಕೆಂದು ಪ್ರತಿಭಟನೆಗಿಳಿದಿದ್ದರು.

ಇಲ್ಲಿ ಮುಖ್ಯವಾಗಿ ಎರಡು ಸಮಿತಿಯವರಿಗೆ ಮುಖ್ಯವಾಗಿ ಪ್ರತಿಭಟನೆ ಮಾಡುತ್ತಿರುವ ಉದ್ದೇಶವನ್ನು ಕತೆಯಲ್ಲಿ ಹೀಗೆ ತಿಳಿಸಲಾಗಿದೆ. "ಹೆದ್ದಾರಿ ಅಗಲೀಕರಣ ಮಾಡಿದರೆ ಅಕ್ಕಪಕ್ಕದ ಶೇಟು ಅಂಗಡಿಗಳು ಹೋಗಲಿದ್ದು, ಆ ಶೇಟುಗಳಿಂದ ದುಡ್ಡು ತೆಗೆದುಕೊಂಡು

ಅವಿಸಂನವರು ಹೋರಾಡುತ್ತಿದ್ದಾರೆ ಎಂದೂ, ನಗರದ ಹೊರಗಿನ ಜಮೀನು ಕಳೆದುಕೊಳ್ಳಲಿರುವ ದೊಡ್ಡದೊಡ್ಡ ರೈತಕುಳಗಳಿಂದ ದುಡ್ಡು ತೆಗೆದುಕೊಂಡು ಬೈವಿಜಂನವರು ಹೋರಾಡುತ್ತಿದ್ದಾರೆ ಎಂದು ಜನರು ಅಲ್ಲಲ್ಲಿ ಮಾತಾಡಿಕೊಳ್ಳುತ್ತಿದ್ದರು."[೧೧೮]

ಅಂದರೆ ನವಲಕಲ್ ಅವರ ಕತೆಯಲ್ಲಿ ಪಿಂಕಿಯು ಹೇಳುವ ಮಾತುಗಳನ್ನು ಇಲ್ಲಿ ತೌಲನಿಕವಾಗಿ ಹಾಲಿಗೇರಿ ಅವರ ಕತೆಯೊಂದಿಗೆ ನೋಡಿದಾಗ ಹೋರಾಟಗಳು ಪಡೆಯುತ್ತಿರುವ ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ. ಅಲ್ಲದೇ ಪಿಂಕಿಯ ಗಂಡನಾದ ಸೂರ್ಯನು ಯೂನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದು, ನಂತರ ಮಲ್ಟಿನ್ಯಾಷನಲ್ ಸಿಡ್ಸ್‌ಕಂಪನಿಯಲ್ಲಿ ಎಂ.ಡಿ. ಆಗಿದ್ದ. ಅದಕ್ಕಾಗಿ ಅವನನ್ನು ಲೇಖಕರು ಹೋರಾಟಕ್ಕೆ ಟೆಕ್ನಿಕಲ್ ಆಗಿ ಸಹಾಯಕವಾಗುತ್ತದೆ ಎಂದು ಅವನೊಂದಿಗೆ ಇರುವುದಾಗಿ ಪಿಂಕಿಗೆ ಹೇಳುತ್ತಾರೆ. ಆದರೆ ಬಿ.ಟಿ. ಹತ್ತಿಯ ವಿಚಾರಕ್ಕೆ ಬ್ಯಾನ್ ಮಾಡಬೇಕೆಂದು ಲೇಖಕರು ಮತ್ತಿತರರು ಹೋರಾಟ ಮಾಡಿ ಸರ್ಕಾರವು ಅದರ ವಿರುದ್ಧ ತ್ರಿಸದಸ್ಯ ಪೀಠವನ್ನು ರೂಪಿಸಿತು.

ಅದರ ಸಮಿತಿಯಲ್ಲಿ ಸೂರ್ಯನು ಇದ್ದನೆಂದು ಪಿಂಕಿಯು ಹೇಳುತ್ತಾ, ಅವನು ಈ ಬಿ.ಟಿ. ಹತ್ತಿಯಿಂದ ಯಾವುದೇ ರೀತಿಯಿಂದ ಹಾನಿಯಿಲ್ಲ ಎಂದು ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಆಧಾರಸಹಿತವಾಗಿ ಕೊಟ್ಟು ಅದನ್ನು ಭಾರತದಲ್ಲಿ ಬೆಳೆಯುವಂತೆ ಮಾಡಿದ. ಅಲ್ಲದೇ ನೀವು ಅದಕ್ಕಾಗಿ ಮಾಡಿದ ಹೋರಾಟವು ಈ ರೀತಿಯಲ್ಲಿ ಅಂತ್ಯವನ್ನು ಕಂಡಿತು. ಅಲ್ಲದೇ ಸೂರ್ಯನು ಇದಕ್ಕಾಗಿ ಎರಡು ಬಿಲಿಯನ್ ರೂಪಾಯಿಗಳನ್ನು ಪಡೆದ ಎನ್ನುವಲ್ಲಿ ಹೋರಾಟಗಳ ಅಂತ್ಯಕ್ಕೆ ಕಾರಣವಾಗುತ್ತಿರುವ ಅನೇಕ ದೌರ್ಬಲ್ಯಗಳನ್ನು, ಸಂಘಟನಾಶಕ್ತಿಯ ಕೊರತೆಯನ್ನು ಮತ್ತು ಇಚ್ಛಾಶಕ್ತಿ ಇಲ್ಲದೇ ಸ್ವಾರ್ಥತೆಯಿಂದ ಕೂಡಿ ಹಾಳಾಗುತ್ತಿರುವುದನ್ನು ತಿಳಿಸಲಾಗಿದೆ.

ಹೋರಾಟಗಳು ನಡೆಯಬೇಕೆನ್ನುವ ಹಂಬಲವುಳ್ಳವರು ಕೆಲವು ತತ್ವಸಿದ್ಧಾಂತಗಳ ಹಿನ್ನೆಲೆಯನ್ನು ಖಂಡಿತವಾಗಿಯೂ ಒಪ್ಪಿಕೊಂಡು ಇಲ್ಲವೇ ಧಿಕ್ಕರಿಸುವ ಹಿನ್ನೆಲೆಯನ್ನು ಹೊಂದಿದವರೇ ಆಗಿರುತ್ತಾರೆ. ಆದರೆ ಇಂತಹ ಪ್ರತಿಭಟನೆ ಅಥವಾ ಹೋರಾಟಗಳನ್ನು ಆಯೋಜಿಸುವಲ್ಲಿ ಅನೇಕ ಮನಸ್ಸುಗಳನ್ನು ಕ್ರೋಢೀಕರಿಸಿ ತಮ್ಮ ಉದ್ದೇಶ, ಧ್ಯೇಯ, ಪ್ರತಿಫಲಗಳನ್ನು ಕುರಿತಾದ ರೂಪುರೇಷೆಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿರುತ್ತಾರೆ. ಆದರೆ ಇಂದಿನ ದಿನಗಳಲ್ಲಿ ಇಂತಹ ತತ್ವಸಿದ್ಧಾಂತಗಳು ಪರಿಣಾಮಕಾರಿಯಾಗದೇ ಸ್ವಾರ್ಥಕ್ಕಾಗಿ ಬಳಕೆಯಾಗುತ್ತಿರುವುದನ್ನು ವಿವೇಕ ಶಾನಭಾಗ ಅವರ 'ಕೆಲವು ತತ್ವಗಳ ಸಲುವಾಗಿ' ಕತೆಯ ಮೂಲಕ ಚರ್ಚಿಸಲಾಗಿದೆ.

ಘನಶ್ಯಾಮ ಶಿಕ್ಷಣ ವ್ಯವಸ್ಥೆಯಿಂದ ಬೇಸತ್ತು ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡವನು ತನ್ನ ಕೈಯಿಂದ ಅದು ಕಷ್ಟವಾದೀತು ಎನ್ನುವ ಮನೋಭಾವನೆಯಿಂದ ಕಲಾ ವಿಭಾಗಕ್ಕೆ ವರ್ಗಾಯಿಸಿಕೊಳ್ಳುತ್ತಾನೆ. ಆಗ ಅವನಿಗೆ ರಾಮದಾಸನ ಪರಿಚಯವಾಗುತ್ತದೆ. ಇಲ್ಲಿ ರಾಮದಾಸನ ಓದು ಅವನ ಚರ್ಚೆ, ಅಧ್ಯಾಪಕರ ಜೊತೆ ಅವನು ಚರ್ಚಿಸುತ್ತಿದ್ದ ರೀತಿಯನ್ನು ಕಂಡು ಶ್ಯಾಮನಿಗೆ "ಅವರೆಲ್ಲರ ಹಾವಭಾವ, ಅವರ ಮುಖದ ಮೇಲಿನ ಸಂಕಟದ ಗೆರೆಗಳು ಅವರ ಉದ್ವೇಗ ನೋಡಿದರೆ ಈಗಿಂದೀಗ ಮುಳುಗಿಹೋಗಲಿರುವ ಈ ಜಗತ್ತನ್ನು ಕಾಪಾಡುವಂಥಹ ಯಾವುದೋ ವಿಷಯವನ್ನು ಅವರು ಅತ್ಯಂತ ತುರ್ತಾಗಿ ಚರ್ಚಿಸುತ್ತಿರುವಂತೆ ಕಾಣತೊಡಗಿತು."[೧೯]

ಅಲ್ಲದೇ ಶ್ಯಾಮ ತಾನು ವಿಜ್ಞಾನದಿಂದ ಕಲಾವಿಭಾಗಕ್ಕೆ ಬದಲಾಯಿಸಿಕೊಂಡಿದ್ದರ ಬಗ್ಗೆ ರಾಮದಾಸನಿಗೆ ಸಲಹೆಯನ್ನು ಕೇಳಿದಾಗ "ಭದ್ರತೆಗೆ ಹಪಾಪಿಸುವ ಮಧ್ಯಮವರ್ಗದ ಮೌಲ್ಯಗಳು, ವರ್ಗೀಕೃತ ಶ್ರೇಣಿಯನ್ನು ಹುಟ್ಟುಹಾಕಿದ ಬಂಡವಾಳಶಾಹಿ ಎಂದೆಲ್ಲ ಮಾತನಾಡುವಾಗ ತನ್ನ ತೊಳಲಾಟವನ್ನೇ ಅವರು ಸರಿಯಾದ ಶಬ್ಧಗಳಲ್ಲಿಟ್ಟು ಹೇಳುತ್ತಿದ್ದಾನೆಂದು ಘನಶ್ಯಾಮನಿಗೆ ಅನಿಸತೊಡಗಿತು."[೨೦] ಮುಂದುವರೆದು ಘನಶ್ಯಾಮನಿಗೆ ತನ್ನ ನಿಲುವನ್ನು ರಾಮದಾಸ ಹೀಗೆ ಹೇಳುತ್ತಿರುವುದು ಸರಿಯೆನ್ನಿಸಿ "ಕೇವಲ ಪರೀಕ್ಷೆಯಲ್ಲಿ ಫೇಲಾಗುವ ಭಯದಿಂದ, ವಿಜ್ಞಾನದ ಕಗ್ಗಂಟನ್ನು ಬಿಡಿಸಲಾಗದ ತನ್ನ ದೌರ್ಬಲ್ಯದಿಂದಾಗಿ ತಾನು ಕಲಾವಿಭಾಗಕ್ಕೆ ಬದಲಾಯಿಸಿದ್ದಲ್ಲ, ಇದರ ಹಿಂದೆ ತನ್ನ ಕೈಮೀರಿದ ಬಲವಾದ ತಾತ್ವಿಕ ಕಾರಣಗಳೂ ಇವೆ"[೨೧] ಎನ್ನಿಸಿ ಅವನು ರಾಮದಾಸನ ಹೋರಾಟದ ಬದುಕನ್ನು ಒಪ್ಪಿಕೊಂಡಿದ್ದನು.

ಇಂತಹ ಶ್ಯಾಮನ ನಿಲುವನ್ನು ಕತೆಯಲ್ಲಿ ಪ್ರತಿರೋಧಿಸುವ ಪಾತ್ರವಾಗಿ 'ಅರ್ಚನಾ'ಳ ನಿಲುವನ್ನು ತಿಳಿಸಲಾಗಿದೆ. ಅಂದರೆ ಹೋರಾಟಗಳಲ್ಲಿ ಎರಡು ನೆಲೆಗಳಿರುತ್ತವೆ ಎನ್ನುವುದನ್ನು ಕತೆಯು ತಿಳಿಸುತ್ತಿದೆ. ಅಲ್ಲದೇ ಅವಳು ರಾಮದಾಸನ ಬಗ್ಗೆ ಕೃತಜ್ಞತೆಯನ್ನು ಇಟ್ಟುಕೊಂಡು ಮಾತನಾಡಿದ್ದನ್ನು ಕಂಡು ನಿನ್ನ ಈ ಸಮಯದಲ್ಲಿ ಭಯೋತ್ಪಾದಕ ಸಿಕ್ಕಿದ್ದರೂ ನೀನು ಒಪ್ಪಿಕೊಂಡುಬಿಡುತ್ತಿದ್ದೆ ಎನ್ನುವ ಮಾತುಗಳು ವ್ಯವಸ್ಥೆಯಿಂದ ನಿರುತ್ಸಾಹಿಯಾದ ಯುವಜನಾಂಗ ಯಾವುದನ್ನು ಆಲೋಚಿಸದೇ ಒಪ್ಪಿಕೊಂಡು ಹೋರಾಟ, ಪ್ರತಿಭಟನೆ ಮುಂತಾದವುಗಳಿಗೆ ಸರಿಯಾದ ಅರ್ಥವಿಲ್ಲದೇ ಇರುವುದನ್ನು ತಿಳಿಸುತ್ತಾಳೆ.

"ಈ ವಯಸ್ಸಲ್ಲಿ ಮೈಯಲ್ಲಿ ತಾರುಣ್ಯ ದುಸುಮುಸು ಅನ್ನುತ್ತಿರುತ್ತದೆ. ಎಲ್ಲರ ಮೇಲೂ ಕೋಪ. ಯಾಕೆಂದು ಅರ್ಥವಾಗದ ಕೋಪ. ಸ್ವಾತಂತ್ರ್ಯ ಚಳುವಳಿಗಳಂಥ

ಮಹಾತ್ಕಾರ್ಯಗಳನ್ನು ತಮ್ಮ ಹಿಂದಿನ ತಲೆಮಾರಿನವರೇ ಮಾಡಿ ಮುಗಿಸಿಬಿಟ್ಟಿದ್ದಾರೆಂದು ಅವಕಾಶವಂಚಿತ ಭಾವನೆ. ಏನಾದರೂ ಮಾಡಬೇಕು. ಬಹುದೊಡ್ಡ ಕ್ರಾಂತಿಕಾರೀ ಕೆಲಸ ಮಾಡಬೇಕು. ಎಲ್ಲವನ್ನೂ ದೊಡ್ಡ ಧ್ಯೇಯಕ್ಕಾಗಿ ಮುಡಿಪಿಡಬೇಕು ಎಂಬ ಭಾವನೆ ಉಕ್ಕುತ್ತಿರುತ್ತದೆ. ದೇಶಭಕ್ತಿ, ಸಮಾಜದ ಅಮೂಲಾಗ್ರ ಬದಲಾವಣೆ ಇಂಥ ವಿಷಯಗಳೇ ಅವರ ಭಾವುಕತೆಯನ್ನು ತಣಿಸಬಲ್ಲವು. ಆದರೆ ಸಣ್ಣ ಸಣ್ಣ ಸಂಗತಿಗಳೂ ಜೀವನದಲ್ಲಿ ಮಹತ್ವದ ಸ್ಥಾನ ಇದೆ ಎಂದು ಮನವರಿಕೆ ಮಾಡಿಕೊಡುವವರಾರು? ಇಂಥ ಎನರ್ಜಿಗೆ ಹರಿಯಲು ಒಂದು ದಾರಿ ಬೇಕು. ಅದು ಪ್ರೀತಿಸುತ್ತದೆ. ಅವಶ್ಯ ಬಿದ್ದಲ್ಲಿ ಇಲ್ಲಿಯ ಸಮಾಜವನ್ನೇ ಎದುರುಹಾಕಿಕೊಳ್ಳಲು ಹಿಂಜರಿಯುವುದಿಲ್ಲ. ಆದರೆ ಸರಿಯಾದ ಹಾದಿ ಹತ್ತದೇ ಹೋದರೆ ಏನೂ ತೋಚದೆ ವಿನಾಕಾರಣವಾಗಿಯಾದರೂ ಸರಿ, ಎದುರು ಹಾಕಿಕೊಳ್ಳುವುದನ್ನೇ ಅಭಿವ್ಯಕ್ತಿಯಾಗಿ ಮಾಡಿಕೊಳ್ಳುತ್ತದೆ...."[೧೨]

ಇಲ್ಲಿ ಘನಶ್ಯಾಮನ ಇಂತಹ ಹೋರಾಟದ ನಿಲುವನ್ನು ಹೊಂದಿರುವ ರಾಮದಾಸನಂತಹ ವ್ಯಕ್ತಿಗಳ ಮೇಲಿರುವ ಅವಳ ವಿಮರ್ಶೆಯನ್ನು ಮತ್ತು ನಿಲುವನ್ನು ಹೇಳುತ್ತಾಳೆ. ಮುಂದೆ ರಾಮದಾಸನ ಒಡನಾಡಿಯಾದ ಶ್ಯಾಮನು ಇತಿಹಾಸದಲ್ಲಿ ಆಗಿರುವ ಅನ್ಯಾಯಗಳು, ನಿರ್ದಯತೆ, ಕ್ರೌರ್ಯಗಳನ್ನು, ಅಧಿಕಾರವನ್ನೂ, ಧರ್ಮವನ್ನೂ ಕಲಸಿ ಗಬ್ಬೆಬ್ಬಿಸಿದ ಲಂಪಟರು ಮುಂತಾದವುಗಳ ಬಗ್ಗೆ ಇತಿಹಾಸ ತಾಳುವ ನಿಲುವನ್ನು ಚರ್ಚೆ ಮಾಡುತ್ತಾನೆ. ಇಂತಹ ಸಂದರ್ಭದಲ್ಲಿ ಕಾಲೇಜಿನ ಹತ್ತಿರ ಸೈಕಲ್ಲಿಗೂ ಕಾರಿಗೂ ಢಿಕ್ಕಿಯಾಗಿ ಸೈಕಲ್ ಸವಾರನಿಗೆ ಪೆಟ್ಟಾಗುತ್ತದೆ. ಕಾರಿನವನು ದುಡ್ಡು ಕೊಟ್ಟು ಸಂಭಾಳಿಸಲು ಪ್ರಯತ್ನಪಟ್ಟಿದ್ದನ್ನು ರಾಮದಾಸ ವರ್ಗಸಂಘರ್ಷ, ಅಸಮಾನತೆ ಮುಂತಾದವುಗಳನ್ನು ತಿಳಿಸುವ ಮೂಲಕ ಘನಶ್ಯಾಮನಿಗೂ ತನ್ನ ಒಳಗಿನ ಸಿಟ್ಟಿಗೆ ಅಸಮಾಧಾನಕ್ಕೆ ಇಂತಹ ಕಾರಣಗಳೇ ಇರಬಹುದು ಎಂದುಕೊಳ್ಳುತ್ತಾನೆ.

ರಾಮದಾಸನನ್ನು ಕೊಮಿ ಕೊಮಿ ಎಂದು ಕಾಲೇಜಿನ ಹುಡುಗರು ಮಾಡನಾಡುತ್ತಿದ್ದರೆ ಶ್ಯಾಮನಿಗೆ ಕೋಪ ಬರುತ್ತಿತ್ತು. "ಘೇರಾವುಗಳು ಸಂಘ ಮೆರವಣಿಗೆ ಘೋಷಣೆಗಳು ಯೂನಿಯನ್‌ಗಳ ಬಗ್ಗೆ ತಿರಸ್ಕಾರ ತುಂಬಿಕೊಂಡ ಮಧ್ಯಮವರ್ಗದ ಹುಡುಗರಿಗೆ ಆ ಬಗೆಯ ಭಾವನೆ ಬರಲು ಕಾರಣವೇನೂ ಎಂದು ರಾಮದಾಸ ವಿವರಿಸಿದ್ದ. ತಮ್ಮ ವ್ಯವಸ್ಥೆಯನ್ನು ಅಲ್ಲಾಡಿಸುವಂಥ ಯಾವುದನ್ನೂ ಅವರು ಸಹಿಸುವುದಿಲ್ಲ. ಆದರೂ ವ್ಯವಸ್ಥೆಯೂ ತನ್ನೊಳಗೆ ಈ ಬಂಡಾಯದ ಬೀಜಗಳನ್ನು ಇಟ್ಟುಕೊಂಡಿರುತ್ತದೆ. ಉದಾಹರಣೆಗೆ ಘನಶ್ಯಾಮನಂಥವರನ್ನು ರೂಪಿಸುತ್ತದೆ..."[೧೩] ಎನ್ನುವ ಮಾತುಗಳು

ಹೋರಾಟಗಳನ್ನು ವ್ಯವಸ್ಥೆಯ ವಿರುದ್ಧವಾಗಿ ನಡೆಯಬೇಕಾದ ಪ್ರಮುಖ ಉದ್ದೇಶ ಮತ್ತು ಅದಕ್ಕೆ ಕಾರಣವಾದ ಘಟನೆಗಳಿಂದ ಅನ್ಯಾಯಗಳಿಂದ ದೌರ್ಜನ್ಯಗಳಿಂದ ಉಂಟಾಗುತ್ತವೆ ಎನ್ನುವುದನ್ನು ರಾಮದಾಸ ತಿಳಿಸುತ್ತಾನೆ.

ಇಂತಹ ಇಡೀ ತನ್ನ ವ್ಯಕ್ತಿತ್ವವನ್ನು ಹೋರಾಟವನ್ನಾಗಿ ರೂಪಿಸಿಕೊಂಡ ಘನಶ್ಯಾಮ ಹೆಂಗಸೊಬ್ಬಳು ಮನೆಯೊಂದರಲ್ಲಿ ರಾತ್ರಿ ಹೊಕ್ಕಿದ್ದು ಅವನನ್ನು ಬೇರೊಂದು ಲೋಕವನ್ನು ತೆರೆದಂತಾಯಿತು. ಹೋರಾಟ ಪ್ರತಿಭಟನೆಗಳೇನೆ ಇದ್ದರೂ ಅಸಹಾಯಕತೆಯು ಆರ್ಥಿಕತೆಯು ಸಮಾಜದಲ್ಲಿ ನಡೆಯುತ್ತಲೇ ಇರುವುದನ್ನು ಕಂಡು ಅವನಿಗೆ ಅದರ ಅರ್ಥ ಮಾತ್ರ ಗೋಚರಿಸಲೊಲ್ಲದು. ಇದೇ ಸಂದರ್ಭದಲ್ಲಿ ಕಾಲೇಜಿನ ಪಕ್ಕದ ಸ್ಲಂಗಳ ಮೇಲೆ ಸರ್ಕಾರ ಬುಲ್‌ಡೋಜರ್‌ನಿಂದ ನೆಲಸಮ ಮಾಡುತ್ತಿತ್ತು. ಸ್ಲಂಮ್ಮನ್ನು ಉಳಿಸಿಲೆಂದು ಧರಣಿ ಕೂತಾಗ ಪೋಲಿಸರು ಲಾಠಿ ಚಾರ್ಜು ಮಾಡಿದರು. ಮೊದಲ ದಿನ ಬಂದ ವಿದ್ಯಾರ್ಥಿಗಳಾರೂ ಮತ್ತೆ ಬಂದಿರಲಿಲ್ಲ. ಇಡೀ ವ್ಯವಸ್ಥೆಯಲ್ಲಿನ ಹಸಿಸತ್ಯಗಳು ಆನಂತರ ನಡೆದ ಘಟನೆಗಳಿಂದ ಘನಶ್ಯಾಮನಿಗೆ ಅರಿವಾಯಿತು.

ಅಲ್ಲದೇ ಘನಶ್ಯಾಮ ಅರ್ಚನಾ ಶ್ರೀಮಂತ ಮನೆತನದ ಹುಡುಗಿ ಎಂದು ಅವಳು 'ತಾನು ಕ್ಯಾಪಿಟಲಿಸ್ಟ್' ಎಂದು ಒಪ್ಪಿಕೊಳ್ಳಲಿ ಎಂದು ಒಳಗೊಳಗೆ ಹುಡುಕುತ್ತಿದ್ದ. ಆದರೆ ಅವಳು 'ನಿನ್ನ ಕ್ಯಾಪಿಟಲಿಸ್ಟ್ ವ್ಯಾಖ್ಯೆಯನ್ನು ಮೊದಲು ಹೇಳು' ಎಂದು ನಗುವಳು. ಶ್ಯಾಮ ತನ್ನ ಗೆಳೆಯ ರಾಮದಾಸ ಅಮೇರಿಕಾದ ಪತ್ರಿಕೆಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅವನಿಗೆ ಈಗ ಹಳೆಯದರಂತೆ ಕ್ರಾಂತಿ ಇಲ್ಲವೇ ಇನ್ನೊಂದರ ಬಗ್ಗೆ ಅವನಲ್ಲಿ ಒಲವು ಕಡಿಮೆಯಾಗಿತ್ತು. "ಬದಲಾವಣೆ, ಆದರ್ಶದ ಹುಮ್ಮಸ್ಸು, ಜಗತ್ತಿನಾದ್ಯಂತ ಜರುಗಿದ ಪಲ್ಲಟಗಳು, ಮುಕ್ತಮಾರುಕಟ್ಟೆಗಳು, ಬಿದ್ದ ಗೋಡೆಗಳು, ಒಡೆದು ಚೆಲ್ಲಿಹೋದ ಸಂಕೀರ್ಣಗಳು, ಸತ್ಯಾನ್ವೇಷಣೆಯ ಹಂಬಲಗಳು, ಕುಟುಂಬದ ಒಳಬಿರುಕುಗಳು, ಹರಿದ ಮುಗ್ಧತೆ, ಭಂಗವಾದ ಕೌಮಾರ್ಯ.... ಯಾವುದು ಯಾವುದರಿಂದ ಯಾಕೆ ಪ್ರಭಾವಿತವಾಗಿದೆ ಎಂದೇ ತಿಳಿಯದಂತಿರುವ ಜಟಿಲ ಸಂಬಂಧಗಳು. ಇವುಗಳ ಸೂಕ್ಷ್ಮಗಳನ್ನೆಲ್ಲ ಬಿಟ್ಟು ಒಟ್ಟಾರೆಯಾಗಿ ನೋಡಿದರೆ ಭೋಳೆ ಅನಿಸುವುದು ಸಹಜ."[೧೨೪] ಎನ್ನುವಲ್ಲಿ ಕತೆಯ ಮೂಲಕವೇ ಜಾಗತೀಕರಣ ಸಂದರ್ಭವು ಇಂದು ನಿಶ್ಚಿತವಾದ ಹೋರಾಟಗಳನ್ನು ರೂಪಿಸಲಾಗದಂತೆ ಇಂದಿನ ಜನರ ಗುಣ ಸ್ವಭಾವಗಳನ್ನು ಪಲ್ಲಟಗೊಳಿಸಿದೆ ಎನ್ನುವುದನ್ನು ಗಟ್ಟಿಯಾಗಿ ಸ್ಪಷ್ಟಪಡಿಸುತ್ತಿದೆ.

೪.೧೦ ಭ್ರಷ್ಟಾಚಾರ

ಮಹಾಂತೇಶ ನವಲಕಲ್ ಅವರ 'ಗಾಂಧಿ.... ಬಂದಾನೆ?' ಕತೆಯಲ್ಲಿ ಮುಖ್ಯವಾಗಿ ಸರ್ಕಾರಿ ಅಧಿಕಾರಿಯೊಬ್ಬ ಪ್ರಾಮಾಣಿಕವಾಗಿ ಬದ್ಧತೆಯಿಂದ ಕೆಲಸ ಮಾಡುವುದನ್ನು ಕಂಡು ಅವನನ್ನು ಸಮಾಜವು ಕಾಣುವ ರೀತಿಯೇ ಭಿನ್ನವಾಗಿದೆ. ಇಂದಿನ ದಿನಗಳಲ್ಲಿ ಕಂಡುಬರುವ ಅನೇಕ ಬಗೆಯ ಮೌಲ್ಯಗಳು ಸ್ಥಿತ್ಯಂತರಗೊಳ್ಳುತ್ತಿರುವುದನ್ನು ಕತೆಯಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಲಾಗಿದೆ. ಇಡೀ ಸಮಾಜವು ಪ್ರಾಮಾಣಿಕನಾದ ವ್ಯಕ್ತಿಯೊಬ್ಬನನ್ನು ಕಾಣುವ ರೀತಿಯ ಜೊತೆಗೆ ಕುಟುಂಬದಲ್ಲಿ ಅವನನ್ನು ಕಾಣುವ ಪರಿಯು ಭಿನ್ನವಾಗಿದೆ ಎನ್ನುವುದನ್ನು ಕತೆಯು ವಿಶ್ಲೇಷಿಸುತ್ತದೆ.

ಬಸವರಾಜ ಎನ್ನುವ ಪಾತ್ರವು ಇಲ್ಲಿ ಸರ್ಕಾರದ ಪಿಡಬ್ಲ್ಯುಡಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುತ್ತಾನೆ. ಸರಳತೆ ಮತ್ತು ಪ್ರಾಮಾಣಿಕತೆಯನ್ನೇ ತನ್ನ ಧೋರಣೆಯನ್ನಾಗಿ ಹೊಂದಿರುವ ಬಸವರಾಜನು ಸಮಾಜ ಸೇರಿದಂತೆ ಕುಟುಂಬದ ಒಳಗೆಯೂ ಅವನಲ್ಲಿದ್ದ ಪ್ರಾಮಾಣಿಕತೆಯ ಕಾರಣಕ್ಕಾಗಿ ಅನೇಕ ತೆಗಳಿಕೆಗಳನ್ನು ಕೇಳಬೇಕಾಗುತ್ತದೆ. ಆಫೀಸಿನಲ್ಲಿ ಕೆಲಸ ಮಾಡುವ ಪಿವುನ್ ಮೋನೇಶ ಟೀ ತಂದು ಕೊಟ್ಟಾಗ ಹೊರಗೆ ಇಬ್ಬರೂ ಮಾತನಾಡುತ್ತಿರುವುದು ಬಸವರಾಜನಿಗೆ ಕೇಳಿಸಿತು. ಜಗದೀಶ ಮತ್ತು ಹಳೆಮನೆ ಇಬ್ಬರೂ "ಈ ಆಫೀಸಿಗೆ ಬಂದು ಎರಡು ವರ್ಷ ಆಯ್ತು. ಒಂದು ಪೈಸೆ ತಗೊಳ್ಳಿಲ್ಲ. ಇಂಜಿನಿಯರ್ ಅಂದರ ಲಕ್ಷ್ಮಿಪುತ್ರರೇ ಇರ್ತಾರ್. ನಮ್ಮ ಜೀವನ ಬಾಡಿಗೆ ಮನ್ಯಾಗ ಕಳೆಯೋದು ಬಂದಾದ. ಈ ದರಿದ್ರ ಗಾಂಧಿ ನನ್ಮಗ ಯಾವಾಗ ಟ್ರಾನ್ಸ್‌ಫರ್ ಆಗ್ತಾನೋ..... ಅಥವಾ ನಾವ್ ಕಾಲ್ ಕಿತ್ತವೋ... ಎಂದು ಮಾತಾಡುತ್ತಿರುವುದೆಲ್ಲಾ ನನ್ನ ಬಗ್ಗೆಯೇ ಎಂದು ತಿಳಿದುಕೊಳ್ಳಲು ಸಮಯ ಬೇಕಾಗಲಿಲ್ಲ."[೧೨೫] ಎಂದು ಬಸವರಾಜನಿಗೆ ತಿಳಿಯಿತು.

ಇದು ಆಫೀಸಿನಲ್ಲಿ ನಡೆದ ಘಟನೆಯಾದರೆ ಮನೆಯಲ್ಲಿ ನಡೆಯುವ ಇನ್ನೊಂದು ಘಟನೆ ತಾನು ಪ್ರಾಮಾಣಿಕವಾಗಿರುವುದೇ ಎಲ್ಲರಿಗೂ ತೊಂದರೆಯಾಗುತ್ತಿದೆಯೇ ಎಂದು ಬಸವರಾಜ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ. ರಾಜವೈಭವದ ಕನಸನ್ನು ಹೊತ್ತು ಬಂದ ಬಸವರಾಜನ ಹೆಂಡತಿ ರಾಣಿಯು ಇದು ಇಂಜಿನಿಯರ್ ಮನೆಯೋ ಅಥವಾ ಆಫೀಸ್ ಜವಾನನ ಕೆಲಸದವನ ಮನೆಯೋ ಎನ್ನುತ್ತಾಳೆ. ಮುಂದುವರೆದು ಎಂಟು ಮತ್ತು ಚಿಲ್ಲರೆ ಸಾವಿರ ಸಂಬಳದಲ್ಲೇ ಬದುಕನ್ನು ಸಾಗಿಸಬೇಕಾಗಿದೆ ಎನ್ನುವ ಮಾತುಗಳು ಬಸವರಾಜನ ಮನಸ್ಸಿಗೆ ನೋವನ್ನುಂಟು ಮಾಡುತ್ತವೆ. ಅಲ್ಲದೇ ಮಗ ಇಂದ್ರಜಿತ್

ಬೈಕಿನ ಡಿಮ್ಯಾಂಡ್, ಸಂತೆಯ ಲಿಸ್ಟ್‌ನ್ನು ಬಸವರಾಜನ ಮುಂದಿಟ್ಟರೆ ಜೊತೆಗೆ ಮಗಳು ಕೂಡ ತನಗೆ ಸೈಕಲ್ ಬೇಕೆಂದು ಕೇಳಿದಾಗ ಬಸವರಾಜ ತನ್ನ ಸಿದ್ಧಾಂತದ ಬದ್ಧತೆಯ ಹೊಣೆಗಾರಿಕೆಯನ್ನು ತಿಳಿಸಲೆತ್ನಿಸುತ್ತಾನೆ. ಆಗ ಇಂದ್ರಜಿತ್ನು "ಈಗಿನ ಕಾಲದಾಗ ಗಾಂಧಿ ಇದ್ದಾಂಗ ಇದ್ರ ಹೆಂಡ್ರು ಮಕ್ಕಳು ಉಪವಾಸ ಗ್ಯಾರೆಂಟಿ ಎನ್ನುವ ಮಾತನ್ನು ಮಗ ಇಂದ್ರ ಸೇರಿಸಿದ."[೧೨೬]

ಇಡೀ ವ್ಯವಸ್ಥೆಯು ಇಂದು ಪ್ರಾಮಾಣಿಕತೆಯಿಂದ ಬದುಕುತ್ತಿದ್ದ ಬಸವರಾಜನನ್ನು ಗಾಂಧಿಜಿಯವರಿಗೆ ಹೋಲಿಸುತ್ತಿರುವುದನ್ನು ಕಂಡರೆ ಇಡೀ ಸಮಾಜವು ಹೋಗುತ್ತಿರುವ ಇಲ್ಲವೇ ಆಲೋಚಿಸುತ್ತಿರುವ ಕ್ರಮವನ್ನು ವಿಮರ್ಶೆಗೆ ಒಳಪಡಿಸುತ್ತಿದೆ. ಅಲ್ಲದೇ ಗಾಂಧೀಜಿಯ ಸಿದ್ಧಾಂತಗಳನ್ನು ಇಂದಿನ ಸಮಾಜದಲ್ಲಿನ ಯುವಪೀಳಿಗೆಯು ಪರಿಗಣಿಸುತ್ತಿರುವ ರೀತಿಯನ್ನು ಕತೆಯಲ್ಲಿ ವಿಮರ್ಶೆಗೆ ಒಳಪಡಿಸಲಾಗಿದೆ. ಗಾಂಧೀಜಿಯ ಮುಖ್ಯ ಧೋರಣೆಯನ್ನು ಧಿಕ್ಕರಿಸುವ ನೆಲೆಯಲ್ಲಿ ಭ್ರಷ್ಟಾಚಾರವನ್ನು ನೆಲೆಗೊಳಿಸುತ್ತಿರುವ ಇಂದಿನ ಸಮಾಜವು ಅದನ್ನು ಅನೈತಿಕ ಮೌಲ್ಯ ಎಂದು ಭಾವಿಸದೇ ಇರುವುದು ದುರಂತದ ಸಂಗತಿಯಾಗಿದೆ. ಅಲ್ಲದೇ ವ್ಯವಸ್ಥೆಯನ್ನು, ಇಡೀ ಸಮಾಜವನ್ನು ಸರಿದಾರಿಗೆ ತರಬೇಕಾದ ಸ್ವಾಮಿಗಳು ಸಹ ಇಂದು ಭ್ರಷ್ಟಾಚಾರದಲ್ಲಿ ಮುಳುಗುತ್ತಿರುವುದನ್ನು ಕಂಡು ಬಸವರಾಜನಿಗೆ ಅಸಹ್ಯವೆನಿಸುತ್ತದೆ.

ವಿರಕ್ತಮಠದ ಪ್ರಭುಲಿಂಗ ಸ್ವಾಮಿಗಳು "ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗೆ ಉಂಟೆ ಅಯ್ಯಾ' ಎಂದು ಲಕ್ಕಮ್ಮ ಹೆಚ್ಚಿಗೆ ಸಂಗ್ರಹಿಸಿದ ಅಕ್ಕಿಯನ್ನು ಗಂಡ ಮಾರಯ್ಯನ ಮುಖಕ್ಕೆ ರಾಚುವ ಪ್ರಸಂಗದ ಬಗ್ಗೆ ತುಂಬಾ ಸುಂದರವಾಗಿ ವರ್ಣಿಸಿದರು. ಅವರ ಪೂಸಿಕೊಂಡ ಸೇಂಟ್ ಗಮ್ಮನೆ ಮಠದ ತುಂಬಾ ಹರಡಿತ್ತು. ಅವರ ನಾಲ್ಕು ಕಾರುಗಳು ಒಂದೊಂದು ಧಿಕ್ಕಿಗೆ ನಿಂತುಕೊಂಡಿದ್ದವು. ಮಠದಲ್ಲಿನ ವೈಭವಗಳು ಮತ್ತು ನನ್ನನ್ನು ಅಲ್ಲಿಂದ ಕಾಲು ಕೀಳುವಂತೆ ಮಾಡಿದ್ದವು. ಅವರು ಹೇಳುವ ಆಯ್ದಕ್ಕಿ ಲಕ್ಕಮ್ಮನ ಸಂಪತ್ತು ಸಂಗ್ರಹದ ವಿರುದ್ಧವಾದ ವಚನದ ಸಾಲಿಗೂ ಸ್ವಾಮಿಗಳ ಬದುಕಿನ ಬಗ್ಗೆ ಚಿಂತಿಸಿದೆ. ಪಕ್ಕದಲ್ಲಿದ್ದ ಒಬ್ಬ ಸ್ವಾಮೀಜಿಯ ಶಿಷ್ಯ ಗುರುಗಳ ರಾಜಕೀಯ ಲಿಂಕುಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಈಗಿನ ಮುಖ್ಯಮಂತ್ರಿಗಳು ಸ್ವಾಮಿಗಳ ಕರಕಮಲ ಸಂಜಾತರಂತೆ ಎಂದೂ ಹೇಳಿದ. ನನಗೆ ಈ ಮಠವೂ ನೆಮ್ಮದಿಯ ತಾಣ ಅಲ್ಲ ಎಂದೆನಿಸಿತು."[೧೨೭]

ಇಡೀ ಸಮಾಜವು ಭ್ರಷ್ಟಾಚಾರವನ್ನು ಒಳ್ಳೆದೆನ್ನುವಂತೆ ಒಪ್ಪಿಕೊಳ್ಳುವಂತೆ ಮಾಡುತ್ತಿರುವ ಪರಿಯನ್ನು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಮೇಲೆ ವಿಶ್ಲೇಷಿಸಲಾಗಿದೆ. ಅಲ್ಲದೇ

ವಚನಕಾರರ ಅನುಯಾಯಿಗಳಾದ ಸ್ವಾಮಿಗಳನ್ನು ಇಂತಹ ಆಸೆ-ಆಕಾಂಕ್ಷೆಗಳು ಭ್ರಷ್ಟಾಚಾರರನ್ನಾಗಿ ಮಾಡುತ್ತಿರುವ ಹಿನ್ನೆಲೆಯನ್ನು ಗುರ್ತಿಸಲಾಗಿದೆ. ಸರಳ ಬದುಕನ್ನು ಬದುಕಬೇಕಿದ್ದ ಸ್ವಾಮಿಯು ರಾಜಕಾರಣಿಯಂತೆ ಕಾರು, ಸೇಂಟ್ ಹಾಕಿಕೊಂಡು ಬದುಕುತ್ತಿರುವ ವೈಭವ ಬದುಕನ್ನು ಕುರಿತು ಬಸವರಾಜ ತಾಳುವ ಧೋರಣೆ ಸ್ವಾಮೀಜಿಯ ಬಗೆಗೆ ಅತ್ಯಂತ ಹೇಯವೆನಿಸುತ್ತದೆ. ಭ್ರಷ್ಟಾಚಾರ ಇಂದು ಎಲ್ಲಾ ವಲಯಗಳಲ್ಲೂ ತನ್ನ ಅಧಿಪತ್ಯವನ್ನು ಸಾಧಿಸುತ್ತಿರುವುದನ್ನು ಪ್ರಸ್ತುತ ಕತೆಯ ಮೂಲಕ ತಿಳಿಸಲಾಗಿದೆ. ಅಲ್ಲದೇ ಪ್ರಾಮಾಣಿಕರಿಗೂ ವರ್ತಮಾನದಲ್ಲಿ ಸಿಗುವ ಬೆಲೆಯನ್ನು ವಿಶ್ಲೇಷಿಸುವ ಮೂಲಕ ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳನ್ನು ವಿವೇಚನೆಗೊಳಪಡಿಸಲಾಗಿದೆ.

ಇದೇ ರೀತಿಯ ಇನ್ನೊಂದು ಕತೆಯಾದ ಹನುಮಂತ ಹಾಲಿಗೇರಿ ಅವರ 'ನಾಗಬಲಿ' ಕತೆಯಲ್ಲೂ ಇಂತಹ ವಸ್ತುವನ್ನು ಕತೆಯಲ್ಲಿ ನಿರೂಪಿಸಲಾಗಿದೆ. ಅಲ್ಲದೇ ಹಾವೂರಿನ ಈ ರಸ್ತೆಯಲ್ಲಿ ಬೈಪಾಸ್ ಮಾಡಬೇಕೆಂದು ಈಗಾಗಲೇ ಅನೇಕ ವಿದೇಶಿ ಕಂಪೆನಿಗಳಿಗೆ ಸರ್ಕಾರವು ಕೋಟ್ಯಾಂತರ ರೂಪಾಯಿಗಳನ್ನು ಲಂಚ ಪಡೆದು ಗುತ್ತಿಗೆ ನೀಡಿದೆ ಎಂಬ ಆರೋಪವೂ ಗುಟ್ಟಾಗಿ ಉಳಿದಿರಲಿಲ್ಲ. ಅಂದರೆ ಬಂಡವಾಳಶಾಹಿಗಳು ಸರ್ಕಾರಕ್ಕೆ ಲಂಚವನ್ನು ನೀಡುವುದರ ಮೂಲಕ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಇಡೀ ವ್ಯವಸ್ಥೆಯಲ್ಲಿ ರಾಜಕಾರಣಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಇಡೀ ವ್ಯವಸ್ಥೆಯನ್ನು ಭ್ರಷ್ಟಾಚಾರಕ್ಕೆ ಪ್ರೇರೇಪಿಸುತ್ತಿರುವುದನ್ನು ಕತೆಯಲ್ಲಿ ಗುರ್ತಿಸಲಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಚುನಾವಣೆಗಳು ಜನರನ್ನು ಒಳಗೊಂಡಿರುವ, ಆ ಮೂಲಕ ತಮ್ಮ ಹಿತಾಸಕ್ತಿಯನ್ನು ಕಾಪಾಡುವ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಲ್ಪಿಸಲಾಗಿದೆ. ಆದರೆ ಇದನ್ನು ಭ್ರಷ್ಟಗೊಳಿಸುತ್ತಿರುವ ರಾಜಕಾರಣಿಗಳು ಹೇಗೆ ಚುನಾವಣೆಯಲ್ಲಿ ಹಣವನ್ನು ಖರ್ಚು ಮಾಡಿಕೊಂಡು ಅಧಿಕಾರವನ್ನು ಹಿಡಿಯುವಲ್ಲಿ ಬಳಸಿಕೊಳ್ಳುತ್ತಾರೆ ಎನ್ನುವುದನ್ನು ಕತೆಯಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೇ ರಾಜಕಾರಣಿಗಳು ಚುನಾವಣೆಯಲ್ಲಿ ತಮ್ಮ ಖರ್ಚನ್ನು ಸಾಲವನ್ನಾಗಿ ಮಾಡಿಕೊಂಡಿರುವುದನ್ನು ಮರಳಿ ಪಡೆದುಕೊಳ್ಳಲು ಅನೇಕ ಸರ್ಕಾರಿ ಯೋಜನೆಗಳನ್ನು ಜಾರಿಗೆ ತಂದು, ಬಂಡವಾಳಶಾಹಿಗಳನ್ನು ಪಡೆದುಕೊಳ್ಳುವ ಹುನ್ನಾರವನ್ನು ಸಚಿವರ ಪಿ.ಎ. ಮಾತಿನ ಮೂಲಕ ಕತೆಯಲ್ಲಿ ಚಿತ್ರಿಸಲಾಗಿದೆ.

"ಒಂದು ಸಣ್ಣ ಕಾಡುಗುಡಿ ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ ಹೀಗೆ ಅಡ್ಡಗಾಲಾಯಿತೆಂದರೆ ಈ ನಾಗಪ್ಪನ ಪಾವರ್ ಪಸಂದ್ ಇದ್ದಾಂಗದೆ ಸರ್ ಎಂದು

ಪಿಎ ತಡೆದುಕೊಳ್ಳಲಾಗದೇ ಸಚಿವರ ಕಿವಿಯಲ್ಲಿ ಉಸುರಿದ. ಸಚಿವರಿಗೆ ಧಿಕ್ಕೇ ತೋಚದಾಯಿತು. ಕಳೆದ ಚುನಾವಣೆಯಲ್ಲಿ ಮಾಡಿದ ಸಾಲಸೋಲ ಎಲ್ಲವೂ ನೆನಪಿಗೆ ಬಂತು. ಗುತ್ತಿಗೆದಾರರಿಂದ ಬರುವ ಸೂಟ್‌ಕೇಸನ್ನು ಸಾಲಸೋಲಕ್ಕೆ ಟ್ಯಾಲಿ ಮಾಡಬಹುದು ಎಂದುಕೊಂಡಿದ್ದರು."[೧೨೮] ಇದನ್ನೆಲ್ಲಾ ಗಮನಿಸಿದಾಗ ಇಂದಿನ ರಾಜಕಾರಣವು ಬಂಡವಾಳಶಾಹಿಗಳ ಮೂಲಕ ಭ್ರಷ್ಟಾಚಾರವನ್ನು ಎಗ್ಗಿಲ್ಲದೇ ಅಧಿಕೃತಗೊಳಿಸುತ್ತಿರುವ ಪರಿಸ್ಥಿತಿಯನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ಅಲ್ಲದೇ ಇಡೀ ವ್ಯವಸ್ಥೆಯನ್ನು ಸರಿದೂಗಿಸುವ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಸರ್ಕಾರಗಳೇ ಇಂತಹ ಭ್ರಷ್ಟಾಚಾರವನ್ನು ಪ್ರತಿಪಾದಿಸುವುದನ್ನು ಕತೆಯು ವಿಶ್ಲೇಷಿಸುತ್ತದೆ.

ಭ್ರಷ್ಟಾಚಾರವೆನ್ನುವುದು ಇಂದು ಹಳ್ಳಿಯಿಂದ ನಗರದವರೆಗೆ ಹಬ್ಬುತ್ತಿದೆ ಮತ್ತು ನಗರದಿಂದ ಹಳ್ಳಿಗೆ ವ್ಯಾಪಕವಾಗುತ್ತಿದೆ ಎನ್ನುವುದನ್ನು ಮಂಜುನಾಥಲತಾ ಅವರ 'ಆರ್ಮುಗ, ಕುರುಜು ಮತ್ತು ಶ್ರೀಲಿಂಗಸ್ವಾಮಿ' ಕತೆಯ ಮೂಲಕ ನೋಡಬಹುದು. ಶ್ರೀಲಿಂಗಸ್ವಾಮಿ ಕತೆಯ ಮುಖ್ಯ ಪಾತ್ರ. ಕತೆಯಲ್ಲಿ ಈತನು ಮಾಡುವ ಭ್ರಷ್ಟತನ ಇವನನ್ನು ಊರು ಬಿಡುವಂತೆ ಮಾಡುತ್ತದೆ. ಅಲ್ಲಿಂದ ಮುಂದೆ ಊರನ್ನು ಬಿಟ್ಟು ಮೈಸೂರಿನಲ್ಲಿ 'ಮುತ್ತೂರು ಸ್ವಾಮಿಜಿ'ಯವರ ಬಳಿ ಆಶ್ರಯ ಪಡೆಯುತಾನೆ. ನಂತರ ಇವನು ಮಠದಲ್ಲಿಯೂ ತನ್ನ ಕೈಚಳಕವನ್ನು ತೋರಿಸಿದ್ದರಿಂದ ಅಲ್ಲಿಂದ ಮುಂದೆ ಆಧ್ಯಾತ್ಮ ಶಿಬಿರದಲ್ಲಿದ್ದ ಸಚಿವರ ಬಳಿ ಸೇರಿಕೊಂಡು ಮಂತ್ರಿಗಳಿಗೆ ಹತ್ತಿರವಾದನು.

ಹದಿನೈದು ವರ್ಷಗಳ ಹಿಂದೆ 'ಲಿಂಗಸ್ವಾಮಿ' ಅಂದರೆ ಈಗಿನ ಶ್ರೀಲಿಂಗಸ್ವಾಮಿಯನ್ನು "ಇದೀಗ ದೇವರ ಕಳಸವೋ ಎಂಬಂತೆ ತಲೆಯ ಮೇಲೆ ಹೊತ್ತು ಮೆರೆಯುತ್ತಿರುವ ಅವರ ಕುಲಬಾಂಧವರೇ ಹಾಲಿನ ಡೈರಿ ಹಣ ತಿಂದ ಕಾರ್ಯದರ್ಶಿ ಎಂದು ನ್ಯಾಯಾಂಗ ಪಂಚಾಯ್ತಿಗಳನ್ನು ಮಾಡಿ ಊರಿನಿಂದಾಚೆಗೆ ಕಳುಹಿಸುತ್ತಾರೆ."[೧೨೯] ಅವನನ್ನು ಅಲ್ಲದೇ ಇವನನ್ನು 'ಆದರೆ.... ಕತ್ತಲ್ಲಿ ಮಾತ್ರ ಲಿಂಗ.... ಹೆಸರಿಗೆ ಲಿಂಗಸ್ವಾಮಿ... ಮಾಡೋದು ನೋಡಿದ್ರೆ ರೈತರ ಹಾಲಿನ ದುಡ್ಡು ತಿನ್ನೋ ಹಲ್ಕಾ ಕೆಲಸ... ಇವನ್ಗೆ 'ನುಂಗಸ್ವಾಮಿ' ಅಂತ ಹೆಸರಿಡಬೇಕಿತ್ತು... ಈ ಲೋಫರ್ ಸೂಳೆ ಮಗನ್ಗೆ!' ಎಂದು ಇವನನ್ನು ಊರಿನಿಂದ ಆಚೆ ಹಾಕುತ್ತಾರೆ.

ವ್ಯಕ್ತಿಯೊಬ್ಬ ಪ್ರಾಮಾಣಿಕತೆಯನ್ನು ಕಳೆದುಕೊಂಡು ಬದುಕನ್ನು ನಡೆಸುವ ಸ್ಥಿತಿಯನ್ನು ಕತೆಯು ವಿವರಿಸುತ್ತದೆ. ಅಲ್ಲದೇ ಇವನಿಗೆ ಕತೆಯಲ್ಲಿ ಮೂರ್‍ನಾಲ್ಕು ಹೆಸರುಗಳನ್ನು ಇಟ್ಟಿರುವುದನ್ನು ನೋಡಿದಾಗ ವ್ಯಕ್ತಿಯೊಬ್ಬ ತನ್ನ ನೈತಿಕತೆಯುನ್ನು ಬಿಟ್ಟು

ಅಪ್ರಾಮಾಣಿಕನಾದಾಗ ಸಮಾಜವು ಅವನನ್ನು ಕಾಣುವ ಮತ್ತು ನಿಂದಿಸುವ ಚಿತ್ರಣವನ್ನು ಕತೆಯಲ್ಲಿ ತಿಳಿಸಲಾಗಿದೆ. ಅವನಿಗೆ 'ನುಂಗಸ್ವಾಮಿ', 'ಹೆಣ್ಣಿಗ', 'ತುರುಗಜ್ಜಿ ಲಿಂಗಸ್ವಾಮಿ', 'ಸ್ತ್ರೀಲಿಂಗಸ್ವಾಮಿ'ಯಾಗಿ ಕೊನೆಗೆ 'ಶ್ರೀ ಲಿಂಗಸ್ವಾಮಿ'ಯಾಗುವುದನ್ನು ಪ್ರಸ್ತಾಪಿಸಲಾಗಿದೆ. ವ್ಯಕ್ತಿಯು ಆರ್ಥಿಕವಾಗಿ ಸಬಲನಾದರೆ ಸಮಾಜವು ಅವನ ಎಲ್ಲಾ ತಪ್ಪುಗಳನ್ನು ಮನ್ನಿಸಿ ಭ್ರಷ್ಟ ಎನ್ನುವುದನ್ನು ಮರೆತು ಒಬ್ಬ ಉತ್ತಮ ಪುರುಷ ಎನ್ನುವುದಾಗಿ ಪರಿಗಣಿಸುತ್ತಿದೆ ಎನ್ನುವುದನ್ನು ಲಿಂಗಸ್ವಾಮಿಯು ಗೃಹಮಂತ್ರಿಗಳ ಜೊತೆಗೆ ಸೇರಿಕೊಂಡಾಗ ಬರುವ ಚಿತ್ರಣವು ತಿಳಿಸುತ್ತದೆ.

ವ್ಯಕ್ತಿಯು ಪ್ರಾಮಾಣಿಕತೆಯನ್ನು ಕಳೆದುಕೊಂಡಾಗ ಎಂತಹ ನೀಚ ಕೆಲಸಕ್ಕೂ ಇಳಿಯುತ್ತಾನೆ ಎನ್ನುವುದನ್ನು ಲಿಂಗಸ್ವಾಮಿಯು ಮಠಕ್ಕೆ ಸೇರಿಕೊಂಡ ನಂತರದಲ್ಲಿ ಅವನಿಗೆ ಉಂಟಾದ ತುರುಗು ಅವನನ್ನು ಪಾಕಶಾಲೆಯಿಂದ ಗೋಶಾಲೆಗೆ ಶಿಫ್ಟಾಗುವಂತೆ ಮಾಡುತ್ತದೆ. "ಅನಾಥಾಲಯದಿಂದ ಗೋಶಾಲೆಗೆ ಶಿಫ್ಟಾಗುತ್ತಲೇ ಸಿಟ್ಟಿಗೆದ್ದ ಲಿಂಗಸ್ವಾಮಿಯು ಪಾಕಶಾಲೆಯಲ್ಲಿ ತಟ್ಟೆ–ಲೋಟ, ಅಕ್ಕಿ–ಬೇಳೆ ಇತ್ಯಾದಿಗಳನ್ನೂ, ಗೋಶಾಲೆಯಲ್ಲಿ ಹೊಟ್ಟು–ಬೂಸಾ, ಹಾಲು–ಬೆಣ್ಣೆ–ವಗ್ಯೆರೆಗಳನ್ನು ಕಳವು ಮಾಡತೊಡಗಿದನು. ಪರಿಣಾಮ ಒಂದು ದಿನ ಸಿಕ್ಕಿಬಿದ್ದನು."[೧೩೦] ಅಷ್ಟೇ ಅಲ್ಲದೇ ಸ್ತ್ರೀಲಿಂಗದ ನಡವಳಿಕೆಗಳು ಅವನಲ್ಲಿದ್ದರಿಂದ ಅವನು ಅಲ್ಲಿ "ನಡುವಯಸ್ಸು ಮೀರಿದ ಅಲ್ಲಿನ ಎಷ್ಟೋ ಮಂದಿ ಸದಸ್ಯರಿಗೆ ರಾತ್ರಿಯ ವೇಳೆಯಲ್ಲಿ ಸಖ್ಯ ನೀಡುವವನಾಗಿದ್ದು 'ತುರುಗಜ್ಜಿ ಲಿಂಗಸ್ವಾಮಿ'ಯಾದ ನಂತರ ತನ್ನೆಲ್ಲ ಸಖರಿಂದ ದೂರ ಸರಿಯಲ್ಪಟ್ಟಿದ್ದನು."[೧೩೧]

ವ್ಯಕ್ತಿಯೊಬ್ಬನ ನೈತಿಕ ಅಧಃಪತನವನ್ನು ಕಳೆದುಕೊಂಡು ಬದುಕುವ ಚಿತ್ರಣವನ್ನು ಕತೆಯಲ್ಲಿ ತಿಳಿಸುತ್ತಿದೆ. ಅಲ್ಲದೇ ನಂತರ ಅವನು ಮಂತ್ರಿಯ ಜೊತೆ ಸೇರಿಕೊಂಡು ಮಂತ್ರಿಯು ಗೃಹಮಂತ್ರಿಯಾದಾಗ ಇವನೇ ಗೃಹಮಂತ್ರಿಯಾದನು ಎಂದು ವಿಶ್ಲೇಷಿಸಿರುವುದನ್ನು ನೋಡಿದಾಗ ತನ್ನ ಪ್ರಭಾವವನ್ನು ಅಲ್ಲೂ ಬೆಳೆಸಿಕೊಂಡದ್ದನ್ನು ಕತೆಯಲ್ಲಿ ತಿಳಿಸಲಾಗುತ್ತದೆ. ಅಲ್ಲದೇ ಶ್ರೀಲಿಂಗಸ್ವಾಮಿಯು ಊರಿಗೆ ಮರಳಿ ಬರುತ್ತಾನೆ ಎಂದಾಗ "ಐದಾರು ಕಾರುಗಳ ಪೈಕಿ ಮಧ್ಯದ ವಿಮಾನದಂಥ ಕಾರಿನ ಹಿಂಬದಿ ಸೀಟಿನಲ್ಲಿ ಒರಗಿದ್ದ ಶ್ರೀಲಿಂಗಸ್ವಾಮಿಗಳು ತಮ್ಮ ತೊಡೆಯ ಮೇಲೆ ತೆರೆದಿಟ್ಟುಕೊಂಡಿದ್ದ ಸೂಟುಕೇಸಿನಿಂದ ಐನೂರರ ನೋಟುಗಳನ್ನು ಎಡಗೈ ಮುಷ್ಟಿಯಲ್ಲಿ ತೆಗೆದು ಹಿಡಿದವನೇ ಕಾರಿನ ಕಿಟಕಿಯಾಚೆ ಕೈಚಾಚಿ ಗಾಳಿಗೆ ತೂರುತ್ತಲೇ.. ಓಹೋ ಇದೇನು ಕಲಿಗಾಲದ ಮಹಿಮೆ! ಈವರೆಗೆ ನಮ್ಮೂರಿಗೆ ಬಂದ ಯಾವ ಎಮ್ಮೆಲ್ಲೆ; ಎಂ.ಪಿಗಳ್ಯಾರೂ ನಾವು

ಹುಟ್ಟಿ ಬೆಳೆದ ಕಾಲದಿಂದಲೂ ಈ ತೆರನಾಗಿ ನೋಟುಗಳನ್ನು ಲಾಟರಿ ಟಿಕೆಟುಗಳ ಹಾಗೆ ಗಾಳಿಗೆ ತೂರಿಬಿಟ್ಟವರಲ್ಲ.... ಇದೇನು ಈ ಶ್ರೀಲಿಂಗ ಸ್ವಾಮಿಯವರ ಮಹಿಮೆ!”[೧೪೨] ಎನ್ನುವ ಮಾತುಗಳು ಭ್ರಷ್ಟಾಚಾರವನ್ನು ಮಾಡುತ್ತಿರುವ ರಾಜಕಾರಣಿಗಳನ್ನು ವಿಮರ್ಶೆಗೆ ಒಳಗುಮಾಡಿದಂತಿದೆ. ಅಲ್ಲದೇ ಜನರನ್ನು ಸಮಾಜಸೇವೆಯ ಹೆಸರಿನಲ್ಲಿ ರಾಜಕೀಯಕ್ಕೆ ಬರುವ ವ್ಯಕ್ತಿಗಳು ಈ ತೆರನಾಗಿ ಹಣವನ್ನು ಬೇಕಾಬಿಟ್ಟಿ ತೂರುತ್ತಿರುವುದು ಇಂದಿನ ದಿನಗಳಲ್ಲಿ ಆಗುತ್ತಿರುವ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಭ್ರಷ್ಟಚಾರ ಮಾಡಿ ಊರಿನಿಂದ ಹೊರಗೆ ಹಾಕಿಸಿಕೊಂಡಿದ್ದ ಲಿಂಗಸ್ವಾಮಿಯನ್ನು ಈಗ ಊರಿನಲ್ಲಿ ಅವರ ಕುಟುಂಬದವರು ಮತ್ತು ಜಾತಿಬಾಂಧವರು ನಡೆಸಿಕೊಳ್ಳುವ ರೀತಿ ನಿಜಕ್ಕೂ ಹಣಕ್ಕಿರುವ ಪ್ರಾಧಾನ್ಯತೆಯು ವ್ಯಕ್ತಿಯ ಪ್ರಾಮಾಣಿಕತೆ ಅಥವಾ ಅಪ್ರಾಮಾಣಿಕತೆಯ ಬಗೆಗಿನ ಮನೋಭಾವನೆಯನ್ನು ಮುಖ್ಯವಾಗಿ ಚಿಂತಿಸಬೇಕಾದ ಅಗತ್ಯವಿದೆ ಎನ್ನುವುದನ್ನು ಇಲ್ಲಿ ತಿಳಿಸಲಾಗಿದೆ. ಇಡೀ ಊರಿನ ತಲೆನೋವಾಗಿದ್ದ ‘ಕುರುಜು’ ರಥೋತ್ಸವವನ್ನು ಲಿಂಗಸ್ವಾಮಿಯು ಇಪ್ಪತ್ತು ಲಕ್ಷ ಖರ್ಚು ಮಾಡಿ ತಾನೇ ನಡೆಸಿಕೊಡಲು ತಯಾರು ಮಾಡಿಕೊಳ್ಳುವುದನ್ನು ಸಹ ಇಂತಹ ಭ್ರಷ್ಟಾಚಾರದ ಹಿನ್ನೆಲೆಯಲ್ಲಿಯೇ ಗುರ್ತಿಸಬೇಕಾದ ಅಗತ್ಯತೆ ಇದೆ.

ಒಟ್ಟಿನಲ್ಲಿ ಇಂದಿನ ದಿನಗಳಲ್ಲಿ ಭ್ರಷ್ಟಾಚಾರವು ನಡೆಯುತ್ತಿರುವುದನ್ನು ಕತೆಯು ವಿಮರ್ಶಾತ್ಮಕ ನೆಲೆಯಿಂದ ಅರಿಯುವ ಪ್ರಯತ್ನ ಮಾಡುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಿದೆ. ಮೊದಲು ಲಿಂಗಸ್ವಾಮಿಯ ಹಳ್ಳಿಯ ಭ್ರಷ್ಟಾಚಾರ ಅವನನ್ನು ಊರಿನಿಂದ ಹೊರಗೆ ತಳ್ಳುವಂತೆ ಮಾಡಿದರೆ; ಮಂತ್ರಿಗಳೊಂದಿಗೆ ಊರಿಗೆ ಬಂದ ಅವನ ಆರ್ಥಿಕ ಬಲವು ಅವನನ್ನು ಶ್ರೀಲಿಂಗಸ್ವಾಮಿಗಳು ಎನ್ನುವ ಗೌರವವನ್ನು ತಂದುಕೊಡುವುದರ ಹಿನ್ನೆಲೆಯಲ್ಲಿ ಇಂತಹ ವಿಷಯಗಳನ್ನು ಗಮನಿಸಿದಾಗ ಬದಲಾಗುತ್ತಿರುವ ಇಂತಹ ಸಮಾಜದಲ್ಲಿ ಭ್ರಷ್ಟಾಚಾರದಂತಹ ವಿಷಯಗಳನ್ನು ಹಣವು ಮರೆಸುವ ಪ್ರಯತ್ನವನ್ನು ಮಾಡುತ್ತಿದೆ ಎನ್ನುವ ಸಂಶಯವನ್ನು ಉಂಟುಮಾಡುತ್ತದೆ.

೪.೧೧ ನಗರೀಕರಣ ಮತ್ತು ವಲಸೆ ಪ್ರವೃತ್ತಿ

ನಗರ ಪ್ರದೇಶದ ಸಾಪೇಕ್ಷ ಬೆಳವಣಿಗೆಯ ಪ್ರಕ್ರಿಯೆಯೇ ನಗರೀಕರಣ. ನಗರಗಳು ಅಭಿವೃದ್ಧಿಯ ಯಂತ್ರಗಳೆಂದು ಸಾಂಪ್ರದಾಯಿಕ ಅರ್ಥಶಾಸ್ತ್ರದಲ್ಲಿ ಪರಿಗಣಿಸಲ್ಪಟ್ಟಿದ್ದು, ದೊಡ್ಡ ಪ್ರಮಾಣದ ಉತ್ಪಾದನೆಯ ಅವಕಾಶಗಳನ್ನು ಅವು ತೆರೆಯುತ್ತವೆ. ಆದರೆ ಈಗ ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಗರಗಳ ಅನಿಯಂತ್ರಿತ ಬೆಳವಣಿಗೆ ಹಲವಾರು

ಸಂಕಷ್ಟಗಳಿಗೆ ದಾರಿ ಮಾಡುತ್ತಿವೆ. ನಗರೀಕರಣದ ಲಾಭಗಳು ಮರೆಯಾಗಿ ಸಮಸ್ಯೆಗಳೇ ಮೆರೆಯುತ್ತಿವೆ. ನಗರೀಕರಣ ಅಭಿವೃದ್ಧಿಯ ಸಂಕೇತವೆನ್ನುವ ವಾದವನ್ನು ಅಪಾಯದ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಪರಿಸ್ಥಿತಿಯ ಒತ್ತಡದಿಂದ ಎಷ್ಟೋ ಗ್ರಾಮೀಣ ಯುವಕರು ನಗರಗಳತ್ತ ಮುಖ ಮಾಡುತ್ತಿದ್ದಾರೆ.

೧೯ನೇ ಶತಮಾನದಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಮತ್ತು ಹಸಿರು ಕ್ರಾಂತಿಯ ಪರಿಣಾಮವಾಗಿ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳವಣಿಗೆಯನ್ನು ಸಾಧಿಸಲಾಯಿತು. ಸಾಂಪ್ರದಾಯಿಕ ಪದ್ಧತಿಯನ್ನು ಬಿಟ್ಟು ಆಧುನಿಕ ಉಪಕರಣಗಳಾದ ಯಂತ್ರಗಳು, ಟ್ರಾಕ್ಟರುಗಳ ಬಳಕೆಯಿಂದ ರೈತರಿಗೆ ಕೃಷಿಯಲ್ಲಿ ಹೆಚ್ಚಿನ ಪ್ರಮಾಣದ ಅವಕಾಶವನ್ನು ಮಾಡಿಕೊಟ್ಟವು. ದೇಶದಲ್ಲಿ ಹೆಚ್ಚಿನ ಆರ್ಥಿಕ ಚಟುವಟಿಕೆಯು ಉದ್ಯಮ, ನಿರ್ಮಾಣ ಮತ್ತು ಸೇವಾ ವಲಯದಲ್ಲಿ ಕೇಂದ್ರೀಕೃತವಾಗಿದೆ. ಆರ್ಥಿಕತೆಯ ಹಿನ್ನೆಲೆಯಿಂದ ಕೈಗಾರಿಕಾ ಭಾಗಗಳು ಬೆಳೆದಂತೆ, ನಗರೀಕರಣದ ಮಟ್ಟವೂ ಹೆಚ್ಚಾಗುತ್ತದೆ. ಇದು ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯಾಗಿದ್ದು ಮುಖ್ಯವಾಗಿ ನಗರಗಳ ಬೆಳವಣಿಗೆ, ಅವುಗಳಲ್ಲಿ ಜನಸಂಖ್ಯೆಯ ಸಾಂದ್ರತೆ, ವಿಶೇಷವಾಗಿ ದೊಡ್ಡ ನಗರಗಳ ಬೆಳವಣಿಗೆಯು ನಗರೀಕರಣದಿಂದ ಹೆಚ್ಚಾಗುತ್ತಿದೆ.

ನಗರಗಳಲ್ಲಿ ವಾಸಿಸುವ ದೇಶದ ಜನಸಂಖ್ಯೆಯ ಪಾಲು ಹೆಚ್ಚಳವಾಗುತ್ತಿರುವುದು ಮುಖ್ಯವಾಗಿ ಕೈಗಾರಿಕೆಗಳ ಸ್ಥಾಪನೆಯಿಂದಾಗಿಯೇ ಆಗಿದೆ. ನಗರೀಕರಣವು ೧೯ನೇ ಶತಮಾನದಲ್ಲಿ ಮುಖ್ಯ ನೆಲೆಗೆ ಬಂದಿತು. ಬ್ರಿಟೀಷರು ಭಾರತದ ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ನಡೆದಂತಹ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಿಂದ ಜನಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ನಗರಗಳ ಕಡೆಗೆ ವಲಸೆ ಬಂದರು. ಇದಕ್ಕೆ ಮುಖ್ಯ ಕಾರಣವೆಂದರೆ ಇದುವರೆಗೂ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಹೊಂದಿ ಅನೇಕ ನಂಬಿಕೆ, ಆಚರಣೆ, ರೂಢಿ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಬಂದಿದ್ದ ಭಾರತೀಯ ಸಮಾಜದಲ್ಲಿದ್ದ ಜನರನ್ನು ಬ್ರಿಟೀಷ್ ವಸಾಹತು ಕ್ರಮವು ಶಿಕ್ಷಣ, ವೈಚಾರಿಕತೆ ಮತ್ತು ಉದ್ಯೋಗಗಳಂತ ಹೊಸ ಪರಿಕಲ್ಪನೆಗಳನ್ನು ಪರಿಚಯಿಸಿದ್ದರ ಪರಿಣಾಮವಾಗಿ ಮಧ್ಯಮ ವರ್ಗವು ಸೃಷ್ಟಿಯಾಯಿತು.

ಈ ಮಧ್ಯಮ ವರ್ಗವು ಸೃಷ್ಟಿಯಾದ ನಂತರ ಇವರು ಹಳ್ಳಿಗಳಲ್ಲಿ ಶಿಕ್ಷಣವನ್ನು ಪಡೆದು ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ ಬರಲಾರಂಭಿಸಿದರು. ನಂತರ ನಗರಗಳಲ್ಲಿಯೇ ತಮ್ಮ ಜೀವನವನ್ನು ಕಳೆಯಬೇಕಾದ ಸ್ಥಿತಿ ಬಂದಿದ್ದರಿಂದ ಅನೇಕರು

ಹಳ್ಳಿಗಳನ್ನು ಬಿಟ್ಟು ನಗರಗಳನ್ನು ಆಶ್ರಯಿಸತೊಡಗಿದರು. ಈ ಹಂತದಲ್ಲಿ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಲ್ಪಟ್ಟವು. ಕೃಷಿಯನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದ ಜನರು ನಂತರದಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಹಂತವನ್ನು ತಲುಪಿದರು. ರೈತರು, ಕೃಷಿ-ಕಾರ್ಮಿಕರು, ವಿದ್ಯೆಯನ್ನು ಕಲಿಯುವವರು ಹಾಗೂ ಉದ್ಯೋಗಕ್ಕಾಗಿ ನಗರಗಳನ್ನು ಆಶ್ರಯಿಸಿದವರು ಈ ಹಂತದಲ್ಲಿ ಹೆಚ್ಚಾದ ಕಾರಣದಿಂದಾಗಿ ಬಹುಬೇಗ ನಗರಪ್ರದೇಶಗಳಲ್ಲಿ ಜನಸಂಖ್ಯೆಯು ಹೆಚ್ಚಾಗತೊಡಗಿತು.

ಸರಳವಾಗಿ ಹೇಳುವುದಾದರೆ, ನಗರೀಕರಣ ಪ್ರಕ್ರಿಯೆಯು ಪ್ರಾರಂಭವಾಗುವ ಕಾರಣಗಳನ್ನು ಹೀಗೆ ಗ್ರಹಿಸಬಹುದು. ಉತ್ತಮ ಜೀವನಶೈಲಿಯ ಸುಧಾರಣೆ, ಅಭಿವೃದ್ಧಿ ಹೊಂದಿದ ಶಿಕ್ಷಣ ವ್ಯವಸ್ಥೆ, ಉದ್ಯೋಗದ ನಿರೀಕ್ಷೆಯಿಂದ, ನಗರಗಳಲ್ಲಿ ಸಿಗುವ ಅನೇಕ ಸೌಕರ್ಯಗಳಿಂದಾಗಿ ನಗರೀಕರಣಕ್ಕೆ ಒಳಗಾಗಿ ಹೆಚ್ಚಿನ ಜನರು ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ಹೆಚ್ಚಿನ ಉತ್ಪಾದನೆ ಮತ್ತು ಮೂಲ ಸೌಕರ್ಯಗಳನ್ನು ಹೆಚ್ಚಿಸುವುದು ಮತ್ತು ಸುಧಾರಿಸುತ್ತಿರುವುದು ನಗರೀಕರಣಕ್ಕೆ ಕಾರಣವಾಗಿದೆ.

ವಲಸೆ ಎನ್ನುವ ಪರಿಕಲ್ಪನೆಯನ್ನು ಪ್ರವಾಸ, ಪ್ರಯಾಣ, ಗುಳೆ, ಒಕ್ಕಲು ಎಂಬ ಶಬ್ಧಗಳು ಸಮಾನಾಂತರವಾಗಿ ಕನ್ನಡದಲ್ಲಿ ಬಳಕೆಯಾಗುತ್ತಿರುವುದನ್ನು ನಾವು ನೋಡಬಹುದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಲವಾರು ಕಾರಣಗಳಿಂದ ಹೋಗಿ ನೆಲೆ ನಿಲ್ಲುವುದನ್ನು ವಲಸೆ ಎನ್ನುವುದಾಗಿ ಕರೆಯಲಾಗಿದೆ. ಇಂತಹ ವಲಸೆಯನ್ನು ಗುಳೆ, ಒಕ್ಕಲು ಎಂಬಿತ್ಯಾದಿ ಅರ್ಥಗಳಿಂದ ಕರೆಯುತ್ತಿರುವುದನ್ನು ನೋಡಬಹುದು. ಪ್ರಾಕೃತಿಕ ವಿಕೋಪಗಳಾದ ಬರಗಾಲ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಸಂದರ್ಭಗಳಲ್ಲಿ ಜನರು ತಮ್ಮ ವಾಸಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗಿ ತಮಗೆ ಅನುಕೂಲಕರವಾದ ವಾತಾವರಣ ಸೃಷ್ಟಿಯಾದಾಗ ಹಳೆಯ ಸ್ಥಳಕ್ಕೆ ಹಿಂತಿರುಗುವುದನ್ನು ಗುಳೆ, ಒಕ್ಕಲು ಎಂಬುದಾಗಿ ಕರೆಯಲಾಗಿದೆ. ಆದರೆ ಬದಲಾದ ಸನ್ನಿವೇಷದಲ್ಲಿ ಇಂತಹ ಅರ್ಥಗಳನ್ನು ವಲಸೆ ಎಂಬ ಪದವೇ ನಿರ್ವಹಿಸುತ್ತಿರುವುದನ್ನು ಕಾಣಬಹುದು. ನಗರೀಕರಣ ಮತ್ತು ವಲಸೆಗೆ ಮುಖ್ಯವಾಗಿ ಈ ಕೆಳಗಿನ ಕಾರಣಗಳನ್ನು ಗುರ್ತಿಸಬಹುದು.

- ದೊಡ್ಡ ನಗರಗಳಲ್ಲಿ ಕೈಗಾರಿಕಾ ಉತ್ಪಾದನೆಯ ಅಭಿವೃದ್ಧಿ.
- ಕಡಿಮೆ ಶ್ರಮಕ್ಕೆ ಹೆಚ್ಚಿನ ಆರ್ಥಿಕ ಸೌಲಭ್ಯವನ್ನು ನೀಡುವುದು.
- ಅತೀ ಕಡಿಮೆ ಸಮಯದಲ್ಲಿ ತಾತ್ಕಾಲಿಕ ಉದ್ಯೋಗಗಳು ದೊರಕುವುದು.

- ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ದೊಡ್ಡ ನಗರಗಳಲ್ಲಿ ಹೆಚ್ಚು ಅನುಕೂಲಕರ ಜೀವನ ಪರಿಸ್ಥಿತಿ ನಿರ್ಮಾಣವಾಗಿರುವುದು.
- ಜನಜೀವನಕ್ಕೆ ಅವಶ್ಯವಿರುವ ಆರೋಗ್ಯ, ಶಿಕ್ಷಣ, ಉದ್ಯೋಗ ಮುಂತಾದ ಸೌಲಭ್ಯಗಳು ನಗರಗಳಲ್ಲಿರುವುದು.
- ವಿಶಾಲ ಉಪನಗರ ಪ್ರದೇಶಗಳ ರಚನೆ.

ನಗರೀಕರಣವು ವಸಾಹತುಶಾಹಿಯ ಆಳ್ವಿಕೆಯಿಂದಲೂ ಹೆಚ್ಚಾಗುತ್ತಾ ಬಂದಿರುವುದನ್ನು ಕಾಣಬಹುದು. ಹಳ್ಳಿಗಳು ಇಂದು ನಗರಕೇಂದ್ರಿತ ಪ್ರದೇಶಗಳಾಗಿ ರೂಪುಗೊಳ್ಳುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಹಳ್ಳಿಗಳು ಇಂದು ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಜನರು ಹಳ್ಳಿಗಳನ್ನು ಬಿಟ್ಟು ನಗರಗಳ ಕಡೆಗೆ ವಲಸೆ ಪ್ರವೃತ್ತಿಯನ್ನು ರೂಢಿಸಿಕೊಂಡಿರುವುದು ಒಂದು ನೆಲೆಯಾದರೆ, ನಗರೀಕರಣವೇ ಹಳ್ಳಿಗಳನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಆಕ್ರಮಿಸಿಕೊಳ್ಳುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಕೃಷಿ ಪ್ರಧಾನ ಭಾರತವು ಇಂದು ಅನೇಕ ಕಾರಣಗಳಿಗಾಗಿ ನಗರಕೇಂದ್ರಿತ ಬದುಕನ್ನು ಒಪ್ಪಿಕೊಂಡು ವಲಸೆ ಪ್ರವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಈ ಎಲ್ಲಾ ನಗರೀಕರಣದ ಅಂಶಗಳು ಸಾಮಾಜಿಕ ಮತ್ತು ಆರ್ಥಿಕ ಅಂಶಗಳಿಗೆ ಸಂಬಂಧಿಸಿವೆ. ವಾಣಿಜ್ಯ ಮತ್ತು ವ್ಯಾಪಾರ ಸಂಬಂಧಗಳ ಬೆಳವಣಿಗೆ, ಕೈಗಾರಿಕಾ ಕ್ಷೇತ್ರದ ಜಾಗತೀಕರಣ, ಕಾರ್ಮಿಕ ವಲಸೆ ಇತ್ಯಾದಿಗಳೂ ಗಮನಾರ್ಹ ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲಿ ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ನಗರೀಕರಣ ಮತ್ತು ವಲಸೆ ಪ್ರಕ್ರಿಯೆಯನ್ನು ಹೀಗೆ ಗುರ್ತಿಸಿದ್ದಾರೆ.

ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಹಳ್ಳಿಯಲ್ಲಿರುವ ಊಳಿಗಮಾನ್ಯ ಪದ್ಧತಿಯನ್ನು ಜೀತಧಾರಿಯಾದ ಪದ್ಧತಿಯ ಕುರಿತಾಗಿ ಚಿತ್ರಿಸಲಾಗಿದೆ. ಇಲ್ಲಿ ಕೇರಿಯ ಜನರು ಗೌಡನ ಜಮೀನನಲ್ಲಿ ದುಡಿದು ಬದುಕನ್ನು ಸಾಗಿಸುತ್ತಿದ್ದರೆ ಗೌಡ ತನ್ನ ಮಕ್ಕಳನ್ನು, ಹೆಂಡತಿಯನ್ನು ವಿದೇಶಕ್ಕೆ ಕಳುಹಿಸಿ ಏಕಾಂಗಿಯಾಗಿ ಜಮೀನನ್ನು ನೋಡಿಕೊಂಡು ಬದುಕುತ್ತಿದ್ದಾನೆ. ಪ್ರಜಾಪ್ರಭುತ್ವದ ಮೂಲ ಆಶಯವಾದ ಸರ್ವರಿಗೂ ಸಮಾನತೆಯನ್ನು ನೀಡಬಯಸದೇ ತನ್ನ ವೈಯಕ್ತಿಕವಾದ ಹಿತಾಸಕ್ತಿಯ ಕಡೆಗೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದಾನೆ. ಅಷ್ಟೇ ಅಲ್ಲದೇ ಕತೆಯು ಹಳ್ಳಿಗಳಲ್ಲಿ ಇಂದು ಕಂಡುಬರುತ್ತಿರುವ ವಲಸೆ ಪ್ರವೃತ್ತಿಯನ್ನು ಕೇರಿಯಲ್ಲಿರುವ ಮಂದಿಯೆಲ್ಲ ದುಡಿಯಲು ಸೊಲ್ಲಾಪುರ, ಪುಣೆ, ಮುಂಬಯಿ ಕಡೆ ಹೋಗುತ್ತಿದ್ದಾರೆ ಎಂಬುದು ಸಾಮಾಜಿಕ

ಸಮಾನತೆಯು ಇಲ್ಲದಿರುವಾಗ, ಆಸ್ತಿಯು ಕೆಲವೇ ಮಂದಿಯ ಕೈಯಲ್ಲಿ ಕ್ರೋಢಿಕರಣವಾಗಿರುವ ಕಾರಣದಿಂದ ವಲಸೆಯು ಇಂದು ಯಥೇಚ್ಛವಾಗಿದೆ ಎಂಬುದನ್ನು ಕತೆಯ ಮೂಲಕ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಕತೆಯ ಮುಖ್ಯಪಾತ್ರವಾದ ಶರಭನಗೌಡ ಊರಿನ ಜಮೀನ್ದಾರನಾಗಿದ್ದ. ಇವನ ಹೆಂಡತಿ ನೀಲಾಂಬಿಕೆ ಮತ್ತು ಮಕ್ಕಳಾದ ದೇವರಾಜ, ಶಶಿಧರ, ಮಗಳಾದ ಶಶಿಕಲಾ ಜೊತೆಯಲ್ಲಿದ್ದವರು. ಮಕ್ಕಳನ್ನು ಶಿಕ್ಷಣದ ಕಾರಣಕ್ಕಾಗಿ ಹತ್ತಿರದ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಕಳುಹಿಸಿ ಅಲ್ಲಿಯೇ ಮನೆಯನ್ನು ಮಾಡಿಕೊಟ್ಟನು. ಹೆಂಡತಿ ನೀಲಾಂಬಿಕೆಯೂ ಸಹ ಮಕ್ಕಳ ಸಲುವಾಗಿ ತಾನು ಅಲ್ಲಿಗೆ ಹೋಗುವುದಾಗಿ ತಿಳಿಸಿ ಹೊರಟುಹೋದಳು. ಅಂದರೆ ನಗರೀಕರಣದ ಪರಿಣಾಮವಾಗಿ ಶಿಕ್ಷಣವು ಇಂದು ನಗರಗಳಲ್ಲಿ ಬಹಳ ಸುಲಭವಾಗಿ ಕೈಗೆಟಕುತ್ತಿದೆ. ಆದರೆ ಹಳ್ಳಿಗರು ಇದರ ಪರಿಣಾಮವಾಗಿ ನಗರಗಳಿಗೆ ತೆರಳುವ ಪರಿಸ್ಥಿತಿಯಿರುವುದನ್ನು ಇಂದಿಗೂ ಕಾಣಲು ಸಾಧ್ಯವಿದೆ. ಇದೇ ಮುಂದುವರೆದು ಗೌಡನ ಮಕ್ಕಳು ಉದ್ಯೋಗದ ಕಾರಣಕ್ಕಾಗಿ ವಿದೇಶಗಳಿಗೆ ಹೋಗುವ ಪ್ರಸಂಗವು ಬರುತ್ತದೆ. ಈ ಎಲ್ಲಾ ಘಟನೆಗಳು ಸಹ ನಗರೀಕರಣದಿಂದ ಉಂಟಾದ ಪರಿಣಾಮಗಳಾಗಿ ಕಾಣಸಿಗುತ್ತವೆ.

ಅಲ್ಲದೇ ನಗರೀಕರಣದಿಂದಾಗಿ ವಲಸೆಯು ಇಂದು ಹಳ್ಳಿಗಳಲ್ಲಿ ಭೂಮಿಯನ್ನು ಹೊಂದದೇ ಇರುವ ಕೃಷಿಕಾರ್ಮಿಕರು, ಬಡವರು ಆರ್ಥಿಕ ಕಾರಣಕ್ಕಾಗಿ ಹಳ್ಳಿಗಳನ್ನು ಬಿಟ್ಟು ನಗರ ಪ್ರದೇಶಗಳ ಕಡೆಗೆ ಕೆಲಸಕ್ಕಾಗಿ ಹೋಗುತ್ತಿರುವುದನ್ನು ಕತೆಯು ವಿಶ್ಲೇಷಿಸುತ್ತದೆ. ಅಲ್ಲದೇ ಹಳ್ಳಿಯಲ್ಲಿನ ಅಸಮಾನತೆಯನ್ನು ಕುರಿತು ತಿಳಿಸುವ ಇಂತಹ ಊಳಿಗಮಾನ್ಯ ಪದ್ಧತಿಯಡಿಯಲ್ಲಿ ಬಡವರು ಬದುಕನ್ನು ಸಾಗಿಸುತ್ತಿರುವ ಪರಿಸ್ಥಿತಿಯನ್ನು ಅವಲೋಕಿಸಲು ಸಾಧ್ಯವಿದೆ. ವಲಸೆಯನ್ನು ತಮ್ಮ ಆದಾಯದ ಕಾರಣಕ್ಕಾಗಿ, ಸಾಲದ ಕಾರಣಕ್ಕಾಗಿ ಅಲ್ಲದೇ ಹಳ್ಳಿಯಲ್ಲಿ ನೀಡುವ ಸಂಬಳದ ಕಾರಣಕ್ಕಾಗಿ ಇಲ್ಲವೇ ನಗರ ಪ್ರದೇಶಗಳಲ್ಲಿ ಸಿಗುವ ಹೆಚ್ಚಿನ ಕೂಲಿಯ ಕಾರಣಕ್ಕಾಗಿ ಜನರು ವಲಸೆ ಹೋಗುತ್ತಿರುವುದನ್ನು ಕತೆಯ ಅನೇಕ ಪಾತ್ರಗಳಾದ ವಡ್ಡರಮಲ್ಲ ಮುಂತಾದವರ ಮೂಲಕ ಅರಿಯಬಹುದು. ಜೊತೆಗೆ ಇಂದು ಶಿಕ್ಷಣವು ಎಲ್ಲರನ್ನು ತಲುಪಿರುವ ಕಾರಣದಿಂದ ಎಲ್ಲರೂ ತಮ್ಮ ವೃತ್ತಿಯನ್ನು ಬದಲಿಸಿಕೊಳ್ಳುತ್ತಿರುವ ಹಿನ್ನೆಲೆಯನ್ನು ಗಮನಿಸಬಹುದಾಗಿದೆ. ಅಲ್ಲದೇ ಭೂಮಿಯ ಪ್ರಶ್ನೆಯು ಇಲ್ಲಿ ಮುಖ್ಯವಾಗುತ್ತದೆ. ನೂರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದರೂ ಗೌಡನು ಕೆಲಸದ ಆಳುಗಳನ್ನು ತನ್ನ ಭೂಮಿಯಲ್ಲಿ ಕೆಲಸ ಮಾಡಬೇಕು ಎನ್ನುವ ಆಳುವ

ಪ್ರಜ್ಞೆಯನ್ನು ಧಿಕ್ಕರಿಸಲು ಸಹ ವಲಸೆಯನ್ನು ಬಳಸಿಕೊಂಡಿರುವುದನ್ನು ಕಾಣಲು ಸಾಧ್ಯವಿದೆ. ಅಂದರೆ ನಗರೀಕರಣ ಪ್ರಕ್ರಿಯೆಯು ಅನೇಕ ಸಾಧ್ಯತೆಗಳನ್ನು ತೆರೆದಿಡುತ್ತಿದೆ ಜೊತೆಗೆ ವಲಸೆಯಿಂದಾಗಿ ಗ್ರಾಮಗಳಲ್ಲಿನ ಜನರ ಸ್ಥಿತಿಯು ಉತ್ತಮಗೊಳ್ಳುವುದರೊಂದಿಗೆ ಅನೇಕ ಸಾಂಸ್ಕೃತಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ.

ನಗರೀಕರಣ ಪ್ರಕ್ರಿಯೆಯಿಂದಾಗಿ ಗ್ರಾಮೀಣ ಪ್ರದೇಶವು ಹಾಳಾಗುತ್ತಿರುವುದನ್ನು ಶ್ರೀಧರ ಬಳಗಾರ ಅವರ 'ಒಂದು ಫೋಟೋದ ನೆಗೆಟಿವ್' ಕತೆಯ ಮೂಲಕ ನೋಡಬಹುದು. ಕತೆಯ ಮುಖ್ಯಪಾತ್ರವಾದ ರಾಜಾರಾಮನ ತಂದೆಯಾದ ವೆಂಕಟಪ್ಪನ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ. ವಾಸುದೇವನ ಬಳಿಗೆ ರಾಜಾರಾಮ ಬಂದಿರುವುದು ಸಹ ತನ್ನ ತಂದೆಯ ಹಳೆಯ ಫೋಟೋಗಳ ಮೂಲಕ ಅವರ ನೆನಪಿನ ಶಕ್ತಿಯನ್ನು ಮರಳಿ ಬರಬಹುದೆಂಬ ಆಸೆಯಿಂದ ಬಂದಿರುತ್ತಾನೆ. ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರವು ಇಂದು ಮಾಡುತ್ತಿರುವ ನಗರೀಕರಣದ ಪ್ರಕ್ರಿಯೆಗಳಲ್ಲಿ ಪ್ರವಾಸಿ ತಾಣವೂ ಸಹ ಒಂದು. ಇಲ್ಲಿ ವೆಂಕಟಪ್ಪನ ಮನೆಯ ಹತ್ತಿರ ಲಾಲಗುಳಿ ಜಲಪಾತವಿದೆ. "ಇತ್ತೀಚೆಗೆ ಈ ಜಲಪಾತ ಅತ್ಯಂತ ಮೋಹಕವಾದ ಪ್ರೇಕ್ಷಣೀಯ ಸ್ಥಳವೆಂದು ಪತ್ರಿಕೆಗಳಲ್ಲಿ ಚಿತ್ರ ಸುದ್ದಿ ಪ್ರಕಟವಾಗಿ ಪ್ರಚಾರವಾಗಿ ಪ್ರವಾಸಿಗರು ಬರತೊಡಗಿದ್ದರು. ಜಲಪಾತದ ಫೋಟೋ ಹೊಡೆದು ಪತ್ರಿಕೆಗಳಲ್ಲಿ ಹಾಕಿಸಿದವನು ವಾಸುದೇವನೇ."[೧೩೩]

ಇಂತಹ ಜಲಪಾತವನ್ನು ನೋಡಲು ದಿನದಿಂದ ದಿನಕ್ಕೆ ಜನರು ಬರತೊಡಗಿದ ನಂತರ ವೆಂಕಟಪ್ಪನವರಿಗೆ ಈ ಹಿಂದೆ ಇದ್ದಂತಹ ಉತ್ಸಾಹ ಹಾಗೂ ಅಭಿಮಾನ ಜಲಪಾತ ನೋಡಲು ಬರುವವರ ಮೇಲೆ ಈಗ ಉಳಿದಿರಲಿಲ್ಲ. ಇಲ್ಲಿಗೆ ಸಿನಿಮಾದವರು, ಶಾಲಾ ಮಕ್ಕಳು ಮುಂತಾದವರು ಬರುತ್ತಿದ್ದರು. "ವಿವಿಧ ರೀತಿಯ ವ್ಯಸನಗಳು, ರೌಡಿಗಳೂ ಬಂದು ವಿಕೃತ ಮನರಂಜನೆಗೆ ತೊಡಗುತ್ತಿದ್ದರು. ಜಲಪಾತದಂಚಿನ ಹಾಸುಗಲ್ಲುಗಳ ಮೇಲೆ ಪ್ರೀತಿಯ ಸಂಕೇತ, ಅಶ್ಲೀಲ ಚಿತ್ರ, ಪ್ರೇಮಿಗಳ ಹೆಸರು, ಅವಾಚ್ಯ ಸಾಲುಗಳನ್ನು ಬರೆದು ಹೋಗುತ್ತಿದ್ದರು. ಒಮ್ಮೆ ವೆಂಕಟಪ್ಪನವರಿಗೆ ತಮ್ಮ ಮನೆಯ ಮೇಲೆ ಗೋವಾದ ಹುಡುಗರಿಗೆ ರಾತ್ರಿ ವಸತಿಗೆ ಅನುಕೂಲ ಮಾಡಿಕೊಟ್ಟು, ಮಧ್ಯರಾತ್ರಿ ಅವರ ಕುಡಿತ, ಹೊಡೆದಾಟಗಳನ್ನು ನಿಯಂತ್ರಿಸುವುದರಲ್ಲಿ ಸೋತು ಹೋಗಿದ್ದರು. ನೀರಿನಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆದು ಊರವರು 'ನಾವು ಈ ನೀರನ್ನು ಕುಡಿಯೋದು ಹೇಗೆ?' ದೇವರ ಪೂಜೆಗೆ ಬಳಸೋದು ಹೇಗೆ? ಎಂದು ತಕರಾರಿಗೆ ತೊಡಗಿದರು. ಹೀಗೆ ನೀರಿನ ಪಾವಿತ್ರ್ಯಕ್ಕೆ ಮನೆಯ ಖಾಸಗೀತನಕ್ಕೆ ಭಂಗ ಉಂಟಾಯಿತು."[೧೩೪]

ಇಡೀ ಊರಿನ ಜನಕ್ಕೂ ಹಾಗೂ ವೆಂಕಟಪ್ಪನರಿಗೂ ಈ ಜಲಪಾತದ ವಿಷಯವಾಗಿ ಜಗಳ ಹತ್ತಿತು. ನಂತರ ಇದನ್ನು ವೆಂಕಟಪ್ಪನವರು "ಜಲಪಾತಕ್ಕೆ ಇದ್ದ ಒಂದು ದಾರಿಯ ಮೇಲೆ ಮದ್ದಾನೆಗಳಂತೆ ಅಡ್ಡಾಡತೊಡಗಿದ ಯುವಕರಿಗೆ ಸಂಯಮ ಮೀರಿ ವರ್ತಿಸದಿರಲು ವಿನಯದಿಂದ ಸೂಚಿಸಿದರು. 'ಜಲಪಾತ ನಿಮ್ಮ ಸ್ವಂತ ಆಸ್ತಿ ಎನ್ನುವ ಹಾಗೆ ಮಾತಾಡ್ತೀರಲ್ಲ' ಎಂದು ದಬಾಯಿಸಿದರು. ಛಲಕ್ಕೆ ಬಿದ್ದ ವೆಂಕಟಪ್ಪನವರು ದಾರಿಯನ್ನು ಮುಚ್ಚಿಸಿದರು."[೧೩೫] ಇದನ್ನು ಕಂಡ ಪ್ರಗತಿಪರರು ಜಲಪಾತದಿಂದ ಊರಿಗೆ ಕೀರ್ತಿ, ಕಾಲಾಂತರದಲ್ಲಿ ಊರಿನ ನಾಗರಿಕ ಸುಧಾರಣೆಯೂ ಸಾಧ್ಯವೆಂದು ವೆಂಕಟಪ್ಪನವರ ನಡೆಯನ್ನು ವಿರೋಧಿಸಿದರು. ಪ್ರವಾಸೋದ್ಯಮ ಅಧಿಕಾರಿಗಳು ಬಂದು ವೆಂಕಟಪ್ಪನವರ ಮನವೊಲಿಸಲು ಪ್ರಯತ್ನಿಸಿ ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿಹೋದರು. ನಂತರ ಇದು ಹೈಕೋರ್ಟ್‌ನಲ್ಲಿ ಕೇಸು ದಾಖಲಾಯಿತು. ಈ ಮಧ್ಯೆ ಮಳೆಯು ಕಡಿಮೆಯಾಗಿ ಜಲಪಾತದಲ್ಲಿ ನೀರು ಸ್ತಬ್ಧವಾಗಿ ಹೋಯಿತು.

ಅಂದರೆ ಪ್ರಸ್ತುತ ಕತೆಯಲ್ಲಿ ನಗರೀಕರಣದಿಂದ ನಾಗರೀಕತೆಯು ಬೆಳೆಯುವಂತೆಯೇ ಅದರ ಅಡ್ಡ ಪರಿಣಾಮಗಳನ್ನು ಜಲಪಾತದ ಮೂಲಕ ಸೂಕ್ಷ್ಮವಾಗಿ ಕತೆಯಲ್ಲಿ ತಿಳಿಸಲಾಗಿದೆ. ಕೇವಲ ಇಂತಹ ಯಾಂತ್ರಿಕ ಜೀವನದಿಂದ ನಾವು ನಾಗರೀಕತೆಯನ್ನು ಹೊಂದುವುದರ ಬದಲಾಗಿ ಅದಕ್ಕೆ ನೈತಿಕವಾದ ಇಚ್ಛಾಶಕ್ತಿಯಿಂದ ಸಂಘಟಿತರಾಗಿ ಅದನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ತೊಡಗಬೇಕಾದ ಸನ್ನಿವೇಶವನ್ನು ಕತೆಯು ಚಿತ್ರಿಸುತ್ತದೆ. ನಗರೀಕರಣದ ಪ್ರಯತ್ನಗಳು ಇಂದು ಹಳ್ಳಿಗಳಲ್ಲಿರುವ ಜನರ ಬದುಕನ್ನು ಅಷ್ಟೇ ಅಲ್ಲದೇ ಅವರ ನದಿ, ಜಲಪಾತ, ಸಂಸ್ಕೃತಿಗಳನ್ನು ದಿಕ್ಕು ತಪ್ಪಿಸುತ್ತಿರುವುದನ್ನು ಕತೆಯು ವಿಶ್ಲೇಷಿಸುತ್ತದೆ. ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ಅಪ್ಪಿಕೊಂಡು ಜಲಪಾತಗಳನ್ನು ನಾಶ ಮಾಡುತ್ತಿರುವುದನ್ನು ತಿಳಿಸಲಾಗುತ್ತಿದೆ.

ಇನ್ನೂ ನಗರೀಕರಣದಿಂದ ಹಳ್ಳಿಗಳಿಂದ ಶಿಕ್ಷಣದ ಕಾರಣಕ್ಕಾಗಿ ನಗರಕ್ಕೆ ತೆರಳಿ ಅಲ್ಲಿಯೇ ಉದ್ಯೋಗವನ್ನು ಪಡೆದು ಅಲ್ಲಿಯೇ ನೆಲೆನಿಲ್ಲುವ ಚಿತ್ರಣವನ್ನು ಮಹಾಂತೇಶ ನವಲಕಲ್ ಅವರ 'ಗಾಂಧಿ......ಬಂದಾನೆ?' ಕತೆಯ ಮೂಲಕ ನೋಡಬಹುದು. ಕತೆಯ ಮುಖ್ಯ ಪಾತ್ರವಾದ ಬಸವರಾಜ ಕುಂಬಾರ ತಂದೆ ಕುಂಬಾರ ಗುಂಡಯ್ಯನ ಮಗ. ಕುಂಬಾರ ಗುಂಡಯ್ಯನು ಮಗನನ್ನು ಸಾಕಷ್ಟು ಕಷ್ಟಪಟ್ಟು ಶಿಕ್ಷಣವನ್ನು ಕಲಿಯಲು ನಗರಕ್ಕೆ ಕಳುಹಿಸಿ ಅವನನ್ನು ಇಂಜಿನಿಯರ್ ಆಗಿ ಮಾಡುತ್ತಾನೆ. ಅಂದರೆ ಇಂದು ಹಳ್ಳಿಗಳಲ್ಲಿ ಶಿಕ್ಷಣದ ಕಾರಣದಿಂದಾಗಿ ಮಕ್ಕಳನ್ನು ನಗರಕ್ಕೆ ಕಳುಹಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಕತೆಯ ಮೂಲಕ ಮುಖ್ಯವಾಗಿ ಗುರ್ತಿಸಬಹುದಾಗಿದೆ.

ನಂತರ ಬಸವರಾಜನು ಮುಂದೆ ಸರ್ಕಾರಿ ಪಿ.ಡಬ್ಲ್ಯೂಡಿ. ಇಂಜಿನಿಯರ್ ಹುದ್ದೆಯನ್ನು ಪಡೆಯುತ್ತಾನೆ. ನಗರದಲ್ಲಿಯೇ ಮನೆ ಮಾಡಿಕೊಂಡು ತಂದೆ ಮತ್ತು ತಮ್ಮನಾದ ರುದ್ರೇಶನನ್ನು ಬಿಟ್ಟು ಹೆಂಡತಿ ಮಕ್ಕಳೊಂದಿಗೆ ವಾಸಿಸಬೇಕಾಗುತ್ತದೆ. ಈ ಹಂತದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳು ಇಂದು ನೀಡುತ್ತಿರುವ ಇಂತಹ ಜೀವನ ಕ್ರಮಗಳು ಕುಟುಂಬಗಳನ್ನು ಬಿಟ್ಟು ವೈಯಕ್ತಿಕವಾಗಿ ಬದುಕುವಂತೆ ಮಾಡುತ್ತಿರುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ನಗರಗಳ ಬೆಳವಣಿಗೆಯಿಂದ ಹಳ್ಳಿಗಳನ್ನು ಮರೆತಿರುವ ಜನಾಂಗವು ಸೌಲಭ್ಯಗಳಾದ ಶಿಕ್ಷಣ, ಉದ್ಯೋಗ, ಆರೋಗ್ಯ ಮುಂತಾದ ಕಾರಣಗಳಿಗಾಗಿ ನಗರಗಳತ್ತ ಮುಖ ಮಾಡಿರುವುದನ್ನು ಗಮನಿಸಬಹುದಾಗಿದೆ.

ಇದೇ ರೀತಿಯಲ್ಲಿ ಹನುಮಂತ ಹಾಲಿಗೇರಿ ಅವರ 'ದೇವಸಗ್ಗ' ಹಾಗೂ 'ನಾಗಬಲಿ' ಕತೆಗಳಲ್ಲಿ ನಗರೀಕರಣಕ್ಕಾಗಿ ಇಡೀ ಗ್ರಾಮಬದುಕನ್ನು ನಾಶ ಮಾಡಿ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರಗಳು ಮಾಡುತ್ತಿರುವ ದೌರ್ಜನ್ಯವನ್ನು ತಿಳಿಸಲಾಗಿದೆ. ದೇವಸಗ್ಗ ಕತೆಯಲ್ಲಿ ಇಡೀ ಊರನ್ನು ಬಲಿ ಕೊಟ್ಟು ಆ ಜಾಗದಲ್ಲಿ ಡ್ಯಾಂನ್ನು ನಿರ್ಮಾಣ ಮಾಡುವ ಹುನ್ನಾರದ ಮೂಲಕ ಜನರನ್ನು ಒಕ್ಕಲೆಬ್ಬಿಸಿದರೆ, ನಾಗಬಲಿ ಕತೆಯಲ್ಲಿ ಬೈಪಾಸ್ ರಸ್ತೆ ಮಾಡುವ ಕಾರಣದಿಂದಾಗಿ ಇಡೀ ಕಾಡಿನ ಜನರನ್ನು ಒಕ್ಕಲೆಬ್ಬಿಸುವುದನ್ನು ಕಾಣಬಹುದು. ಒಟ್ಟಿನಲ್ಲಿ ನಗರೀಕಣದಿಂದಾಗಿ ಇಂದು ಜನರು ಹಳ್ಳಿಗಳನ್ನು ಬಿಟ್ಟು ನಗರಗಳ ಕಡೆಗೆ ವಲಸೆ ಹೋಗುತ್ತಿರುವುದನ್ನು ಪ್ರಸ್ತುತ ಕತೆಗಳು ಗಮನಿಸಿವೆ. ಅಲ್ಲದೇ ಅಭಿವೃದ್ಧಿ ಹೆಸರಿನಲ್ಲಿ ನಗರಗಳಾಗಿ ಪರಿವರ್ತಿಸುವ ಮುಖಾಂತರ ಪರಂಪರೆಯ ಜೀವನಕ್ರಮವನ್ನು ಧಿಕ್ಕೆಡಿಸುತ್ತಿರುವ ಆತಂಕವನ್ನು ಕತೆಗಳ ಅನೇಕ ಪಾತ್ರಗಳು ತಿಳಿಸುತ್ತವೆ.

೪.೧೨ ಜಾತಿ ಮತ್ತು ಧರ್ಮ

ಜಾತಿಯು ಇಂದಿನ ದಿನಗಳಲ್ಲಿ ಪರಿಣಾಮಕಾರಿಯಾದ ಸ್ವರೂಪವನ್ನು ಪಡೆದುಕೊಂಡು ಬೆಳೆಯುತ್ತಿರುವುದನ್ನು ಮಹಾಂತೇಶ ನವಲ್‌ಕಲ್ ಅವರ 'ನೀರಿನ ನೆರಳು' ಕತೆಯ ಮೂಲಕ ಸೆರೆಹಿಡಿಯಲಾಗಿದೆ. ಊರಿನಲ್ಲಿ ಕತೆಯ ಸ್ವಾಮಿಯ ಪಾತ್ರವು ತನ್ನ ಗೆಳೆಯನಾದ ಕೇರಿಯ ಹುಡುಗನೊಂದಿಗೆ ಅತಿಯಾದ ಸ್ನೇಹವನ್ನು ಹೊಂದಿದವರು. ಅಲ್ಲದೇ ಕತೆಯಲ್ಲಿ ತಿಳಿಸುವ ಅಗಸರು, ಕೇರಿ ಎನ್ನುವ ಚಿತ್ರಣವು ಹಳ್ಳಿಗಳಲ್ಲಿ ಇರುವ ಜಾತಿಯ ಸ್ವರೂಪವನ್ನು ಚಿತ್ರಿಸುತ್ತಿದೆ.

ಈ ಜಾತಿಯು ಬೆಳೆದಂತೆಲ್ಲಾ ಹೇಗೆ ಅದು ಸಂಬಂಧಗಳನ್ನು ಮರೆಸಿಬಿಡುತ್ತದೆ ಎನ್ನುವುದನ್ನು ಕತೆಯು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಅಮರ್ಯಾ ಮತ್ತು ಲೇಖಕರು

ಹಳ್ಳಕ್ಕೆ ಹೋದಾಗ ಅಲ್ಲಿಗೆ ಅಗಸರು ಬಂದರು. ಅದರಲ್ಲಿ ಬಸಮ್ಮಾಯಪ್ಪಾಸ್ವಾಮಿ 'ಅಲ್ಲಿ ಮನ್ಯಾಗ ಅವ್ವ ಉಡುಕಾಕ ಹತ್ತ್ಯಾಳ. ಈ ದಾಸನ ಕೂಡ ಏನು ಮಾಡ್ತಿಯಪ್ಪೊ? ಜಲ್ದಿ ಹೋಗು' ಎಂದಳು. ಅಲ್ಲದೇ "ದಾಸರ ಮೂಳಾ ತಾತನ್ನ ಯಾಕ್ ಕಾಡು ಕಾಡು ತಿರುಗಿಸ್ತಿಯಲೇ? ಬುಲ್ಲಾಕಾಯಿ ಬುರುಗ್ಯಾದೇನು. ತಡಿ ಈವತ್ತು ನಿಮ್ಮೋಣ್ಯಾಗ ಬಂದು ನಿಮ್ಮಮ್ಮನ ಹತ್ರ ಹೇಳ್ತೀನಿ."[೧೩೬] ಎನ್ನುವ ಮಾತುಗಳು ಹಳ್ಳಿಗಳಲ್ಲಿರುವ ಜಾತಿವ್ಯವಸ್ಥೆಯ ಚಿತ್ರಣವನ್ನು ತಿಳಿಸುತ್ತಿದೆ. ಕತೆಯ ಕೊನೆಯಲ್ಲಿ ಅಮರ್‍ಯಾ ಮತ್ತು ಸ್ವಾಮಿಯ ನಡುವಿನ ಸ್ನೇಹವು ಬಹಳ ವರ್ಷಗಳ ನಂತರದಲ್ಲಿ ಮತ್ತೆ ಭೇಟಿಯಾದಾಗ ಈ ಹಿಂದೆ ಇದ್ದಂತೆ ಇರದಿದ್ದನ್ನು ಗುರ್ತಿಸಲಾಗಿದೆ. ಈ ಸಂದರ್ಭದಲ್ಲಿ ಅಮರ್‍ಯಾನು ಸ್ವಾಮಿಯನ್ನು ಗೊತ್ತಿದ್ದರೂ ಗೊತ್ತಿಲ್ಲದಂತೆ ಹೋರಾಟ, ಚಳುವಳಿ, ದಲಿತರ ಮೇಲೆ ಹಲ್ಲೆ ಮುಂತಾದ ರೀತಿಗಳಲ್ಲಿ ಮಾತನಾಡುತ್ತಿದ್ದುದ್ದನ್ನು ಕಂಡು ಸ್ವಾಮಿಗೆ ಆಶ್ಚರ್ಯವಾಗುತ್ತದೆ. ಅಲ್ಲದೇ ಅಮರ್‍ಯಾನು ಸಂಘದ ರಾಮಣ್ಣನ ಹಿಂದೆ ಹೋಗಿ ಪ್ರತಿ ಊರಿನಲ್ಲಿ ಸಂಘದ ಶಾಖೆಗಳನ್ನು ತೆರೆಯುತ್ತಿರುವುದನ್ನು ಸ್ವಾಮಿಗೆ ತಿಳಿಯಿತು. ಅಮರ್‍ಯಾನು ಒಂದು ದಿನ ಬಂದು ಹಿಂದುಳಿದ ವರ್ಗ ಮತ್ತು ದಲಿತ ಜಾತಿಗೆ ನೀಡುವ ಮೀಸಲಾತಿಯ ಬಗ್ಗೆ ವಿಚಾರಿಸಿದ. ಆಗ ಅವನು ಸ್ವಾಮಿಯನ್ನು ಸರಿಯಾಗಿ ಮಾತನಾಡಿಸದ್ದಕ್ಕೆ 'ನನ್ನ ಮತ್ತು ಅವನ ಸ್ನೇಹ ಅವನು ಪ್ರಮಾಣಪೂರ್ವಕವಾಗಿ ಮರೆಯುತ್ತಿದ್ದಾನೋ ಅಥವಾ ಯಾವ ಸಿದ್ಧಾಂತಗಳು ಅವನನ್ನು ಅಡ್ಡಿಪಡಿಸುತ್ತಿವೆಯೋ' ಎನ್ನುವ ಚಿಂತೆಯನ್ನು ಸ್ವಾಮಿಯಲ್ಲಿ ಹುಟ್ಟುಹಾಕುತ್ತದೆ.

ಅಂದರೆ ಕತೆಯಲ್ಲಿ ಇರುವ ಜಾತಿಯ ಆಳವಾದ ಬೇರುಗಳನ್ನು ಎರಡು ಹಂತಗಳಲ್ಲಿ ಚಿತ್ರಿಸಲಾಗಿದೆ. ಒಂದು ಚಿಕ್ಕ ವಯಸ್ಸಿನಲ್ಲಿ ಇದ್ದ ಸ್ನೇಹದ ನೆಲೆಯಾದರೆ; ಇನ್ನೊಂದು ಬೆಳೆದು ದೊಡ್ಡವರಾದ ಮೇಲೆ ಇಬ್ಬರಲ್ಲೂ ಆಗುವ ಹಲವು ಬದಲಾವಣೆಯ ನೆಲೆಯದು. ಚಿಕ್ಕ ವಯಸ್ಸಿನಲ್ಲಿ ಅಷ್ಟು ಸ್ನೇಹದಿಂದ ಇದ್ದ ಸ್ವಾಮಿ ಮತ್ತು ಅಮರ್‍ಯಾ ಬೆಳೆದು ದೊಡ್ಡವರಾದ ನಂತರದಲ್ಲಿ ಅವರ ನಡುವೆ ಏರ್ಪಟ್ಟಿರುವ ಇಂತಹ ಜಾತಿಯ ನಡುವಿನ ಅಂತರವನ್ನು ಸಮಾಜವೇ ಬಿತ್ತುತ್ತಿರುವುದನ್ನು ಅನೇಕ ಪಾತ್ರಗಳ ಮೂಲಕ ತಿಳಿಸಲಾಗಿದೆ. ಆದರೆ ಎರಡನೇ ಹಂತದಲ್ಲಿ ಇದರ ಪರಿಣಾಮವಾಗಿ ಅಮರ್‍ಯಾ ಮೀಸಲಾತಿಯ ಬಗ್ಗೆ ಕೇಳುವುದು ಅವನಲ್ಲಿ ಶೈಕ್ಷಣಿಕ ಮೂಡಿರಬಹುದಾದ ಅರಿವಿನಿಂದ ಇಂತಹ ಜಾಗ್ರತಿಯನ್ನು ಎತ್ತಿತೋರಿಸುತ್ತಿದೆ. ಅಲ್ಲದೇ ಅವನ ಹೋರಾಟದ ಪ್ರಭಾವದಿಂದಾಗಿ ಸ್ವಾಮಿಯನ್ನು

ಜಾತಿಯ ಹಿನ್ನೆಲೆಯಿಂದ ತಿರಸ್ಕರಿಸಿದನೋ ಎನ್ನುವ ಮನೋಭಾವನೆಯನ್ನು ಚಿತ್ರಿತವಾಗಿದೆ. ಆದರೆ ಜಾತಿಯ ಕಾರಣಕ್ಕಾಗಿ ಆಗುತ್ತಿರುವ ಹಿಂದಿನ ಮತ್ತು ಇಂದಿನ ಬದಲಾವಣೆಯನ್ನು ವ್ಯಕ್ತಿಯ ಸ್ನೇಹದ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ.

ಜಾತಿ ಮತ್ತು ಧರ್ಮಗಳು ಇಂದಿನ ಜಾಗತೀಕರಣ ಸಂದರ್ಭದಲ್ಲಿ ತಾಳುತ್ತಿರುವ ನಿಲುವುಗಳನ್ನು ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕತೆಯಲ್ಲಿ ತಿಳಿಸಲಾಗಿದೆ. ಇಡೀ ಕತೆಯು ನಡೆಯುವುದು ಇಲ್ಲಿ ಎರಡು ಕಾರಣಗಳಿಂದಾಗಿ. ಮೊದಲನೆಯದು ಹುಸೇನವ್ವನ ಹೋಟೆಲಿನಲ್ಲಿ ನಡೆಯುವ ಕ್ರಿಕೆಟ್ ಬೆಟ್ಟಿಂಗ್ ದಂಧೆ ಮತ್ತು ಕಾರ್ಗಿಲ್ ಯುದ್ಧದ ಮೇಲಿನ ಚರ್ಚೆ; ಮತ್ತೊಂದು ಸಾಂತಿ ಮತ್ತು ಖಾಜಾವಲಿ, ಗೋವಿಂದನ ನಡುವಿನ ಪ್ರಸಂಗ. ಈ ಎರಡೂ ಪ್ರಸಂಗಗಳು ಹಳ್ಳಿಗಳಲ್ಲಿ ಸೃಷ್ಟಿಸುತ್ತಿರುವ ಜಾತೀಯತೆ ಮತ್ತು ಧರ್ಮವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇಂತಹ ಜಾತಿಯತೆಗೆ ಆಧುನಿಕ ವಿಜ್ಞಾನ ತಂತ್ರಜ್ಞಾನದ ಕೊಡುಗೆಗಳು ಎಂತಹವು ಎನ್ನುವುದನ್ನು ವಿಮರ್ಶಿಸಲಾಗಿದೆ.

ಸಿರಿಯಾರ ಪಟ್ಟಣದ ಹಳ್ಳಿಯಲ್ಲಿ ಹಿಂದೂ ಮುಸ್ಲಿಂ ಎರಡೂ ಸಮುದಾಯದವರು ಒಟ್ಟಿಗೆ ಬಾಳ್ವೆಯನ್ನು ನಡೆಸುತ್ತಿರುವವರು. ಹುಸೇನಮ್ಮ ಹೋಟೆಲನ್ನು ಇಟ್ಟುಕೊಂಡಿದ್ದಳು. ಊರಿನ ಪೋಲಿ ಹುಡುಗರಾದ ಗಿರೀಶ್ ಮತ್ತು ಜಾಫರ್‌ನ ಎರಡು ಗುಂಪುಗಳು ಪಾಕಿಸ್ತಾನ ಮತ್ತು ಇಂಡಿಯಾ ನಡುವೆ ನಡೆಯುವ ಕ್ರಿಕೆಟ್ ಮ್ಯಾಚ್‌ಗೆ ಬೆಟ್ಟಿಂಗ್‌ನ್ನು ಕಟ್ಟುತ್ತಿರುತ್ತಾರೆ. ಇಡೀ ಹಳ್ಳಿಯ ಯುವಕರು ಇದಕ್ಕೆ ದಾಸರಾಗಿರುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಅಲ್ಲದೇ ಹುಸೇನಮ್ಮ ಸಾಕಿರುವ ಚಿದಾನಂದ ಚುರುಕು ಹುಡುಗನಾದ್ದರಿಂದ ಬೆಟ್ಟಿಂಗ್ ದಂಧೆಗೆ ಅವನ ಬುದ್ಧಿಶೀಲತೆಯೂ ಒಂದು ಕಾರಣವಾಗಿತ್ತು.

ಪ್ರಸ್ತುತ ರಾಜಕಾರಣವು ಜಾತಿವ್ಯವಸ್ಥೆಯನ್ನು ಬಳಸಿಕೊಂಡು ಊರು-ಕೇರಿಯನ್ನು ಒಡೆದು ಇಬ್ಬಾಗ ಮಾಡಿದೆ ಎನ್ನುವುದನ್ನು ಹುಸೇನಮ್ಮ ಹೀಗೆ ತಿಳಿಸುತ್ತಾಳೆ. "ರಾಜಕೀಯಕ್ಕೆ ಕೊಳ್ಳಿಯಿಡ! ಊರುಕೇರಿ ಮಂದಿ ಕಂಡಲ್ಲಿ ಕೂತಲ್ಲಿ ಒಂದೀಟು ಚೆಂದ ಮಾತಾಡದೇ ಕಾಣೆ! ಲಿಂಗಪ್ಪನದೊಂದು, ಭೀಮಪ್ಪನದೊಂದು, ಫಕೀರಪ್ಪನದೊಂದು ಅಂತ ತಲಿಗೊಂದು ಪಾರ್ಟಿ ಮಾಡಿಕೊಂಡು ಬರೀ ಕಚ್ಚಾಡ್ತಾವ! ಊರುಕೇರಿ ಮಂದಿ ಕೂಡಿ ಪಸಂದಾಗಿ ಮಾಡಾಡುವ ಕಾಲವೇ ಹೋಯ್ತು!"[೧೩೭] ಎನ್ನುತ್ತಾಳೆ. ಅಂದರೆ ರಾಜಕೀಯ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಇಂದು ಜಾತಿಯನ್ನು ನಿರ್ನಾಮ ಮಾಡದೇ ಹಳ್ಳಿಗಳಲ್ಲಿ ಜಾತಿ, ಜಾತಿಗಳ ನಡುವೆ ಒಡಕನ್ನು ಸೃಷ್ಟಿಸುತ್ತಿರುವುದನ್ನು ಹುಸೇನಮ್ಮಳ ಮಾತಿನಿಂದ ತಿಳಿಯಬಹುದು.

ಇನ್ನೂ ಊರಿನಲ್ಲಿ ನಡೆಯುವ ಮತ್ತೊಂದು ಪ್ರಸಂಗವಾದ ಅಂಬಮ್ಮ ಮತ್ತು ನಾಗಪ್ಪನ ಮಗಳು ಸಾಂತಿಯನ್ನು ಖಾಜಾವಲಿ ಹುಸೇನಮ್ಮನ ಹೋಟೆಲಿನಲ್ಲಿ ರಾತ್ರಿ ಅವಿತಿಡುವುದು. ಇಲ್ಲಿ ಕೇರಿಯ ಹುಡುಗನಾಗಿದ್ದ ಗೋವಿಂದನು ನೌಕರಿ ಇದ್ದವನು. ಅವನನ್ನು ಪ್ರೇಮಿಸಿದ್ದ ಸಾಂತಿಯನ್ನು ಒಂದುಗೂಡಿಸಲು ಖಾಜಾವಲಿಯು ಇಂತಹ ಪ್ರಯತ್ನವನ್ನು ಮಾಡುತ್ತಿರುತ್ತಾನೆ. ಆದರೆ ಅದು ಬೇರೆಯದೇ ಆದ ತಿರುವನ್ನು ಪಡೆದು ಜಾತಿ ಮತ್ತು ಧರ್ಮದ ನಡುವೆ ಸಂಘರ್ಷವನ್ನು ಉಂಟುಮಾಡುತ್ತದೆ. ಅಲ್ಲದೇ ಮುಸ್ಲಿಂ ಹುಡುಗ ಊರಿನ ದೊಡ್ಡ ಮನೆಯ ಹುಡುಗಿಯನ್ನು ಹಾರಿಸಿಕೊಂಡು ಹೋಗಿದ್ದಾನೆ ಎನ್ನುವುದನ್ನು ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯುತ್ತಿದ್ದ ಕಾರ್ಗಿಲ್ ಯುದ್ಧಕ್ಕೆ ಹೋಲಿಸುವ ಪ್ರಯತ್ನವನ್ನು ಊರಿನ ಜನರು ಮಾಡುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇದೇ ಕಾರಣಕ್ಕೆ ಗಿರೀಶನ ಗ್ಯಾಂಗಿಗೂ ಹಾಗೂ ಜಾಫರ್‌ನ ಗ್ಯಾಂಗಿಗೂ ಜಗಳವಾಗುವುದನ್ನು ಕತೆಯಲ್ಲಿ ಕಾಣಬಹುದು.

ಇದೇ ಕಾರಣವಲ್ಲದೇ ಹೋಟೆಲಿನಲ್ಲಿ ಹುಸೇನಮ್ಮ ಬೆಟ್ಟಿಂಗ್ ದಂಧೆಯನ್ನು ನಡೆಸಿ ಯುವಕರ ಮನಸ್ಥಿತಿಯು ಕೋಮುವಾದವನ್ನು ಪ್ರೇರೇಪಿಸುತ್ತಿರುವುದನ್ನು ಸಿದ್ಧಪ್ಪ ಚಿದಾನಂದನಿಗೆ ಬುದ್ಧಿ ಹೇಳುವಲ್ಲಿ ತಿಳಿಸುತ್ತಾನೆ. "ನೀನು ಬುದ್ಧಿವಂತ ಹುಡುಗ. ದೇಶ ದೇಶಗಳ ನಡುವೆ ಉತ್ತಮ ಬಾಂಧವ್ಯ ಬೆಳೆಯಲಿ ಅಂತ ಕ್ರಿಕೆಟ್ ಮ್ಯಾಚುಗಳು, ಕ್ರೀಡೆಗಳಿರ್ತವ. ಆಟಗಾರರಿಗೆ ತಮ್ಮ ಪ್ರತಿಭೆ ತೋರಿಸಲು ಅದೊಂದು ವೇದಿಕೆ. ಜನರಿಗೆ ಮನೋರಂಜನೆ. ಅದು ಬಿಟ್ಟು ನೀವೆಲ್ಲ ಬೆಟ್ಟುಕಟ್ಟಿ, ಗೆಲ್ಲೋದರ ಕಡೆ ಮನಸ್ಸಿಟ್ಟು, ಉದ್ವೇಗದಿಂದ ಆಟ ನೋಡಿದರೆ, ವೈಯಕ್ತಿಕ ಲಾಭಕ್ಕೆ ಆಟವನ್ನು ಬಳಸಿಕೊಂಡರೆ ಹೇಗೆ? ಮನಸ್ಸಿನ ಆರೋಗ್ಯ ಅದಲ್ಲ. ಕ್ರೀಡೆಗಳ ಉದ್ದೇಶಗಳನ್ನು ನೀವೆಲ್ಲ ದುರುಪಯೋಗ...."[೧೩೮] ಮಾಡಿಕೊಳ್ಳುತ್ತಿದ್ದೀರಿ ಎನ್ನುತ್ತಾನೆ.

ಇನ್ನೂ ಪೋಲೀಸ್ ಹುಸೇನಮ್ಮನನ್ನು ಪೋಲೀಸ್ ಸ್ಟೇಷನ್ನಿಗೆ ಎಳೆದುಕೊಂಡು ಹೋದಾಗಲೂ ಇದೇ ರೀತಿಯಲ್ಲಿ ಮಾತನಾಡುವುದನ್ನು ಕಾಣಬಹುದು. ಅಲ್ಲದೇ ಹುಸೇನಮ್ಮ ಶಾಂತಿಗೆ ಹೀಗೆ ಗೋವಿಂದನ ಹಿಂದೆ ಹೋದರೆ ಹೇಗೆ ಎಂದು ಪ್ರಶ್ನಿಸುವಾಗ "ಸಾಂತಿ, ನೀನು ಸಿನಿಮಾ ನೋಡಿ, ಅದರಾಗ ಮಾಡಿದ್ಹಂಗ ಮಾಡಾಕ ನಿಂತ್ರೆಂಗವ್ವ? ಜಾತಿ ಜಾತಿ ಮಂದಿ ಈಗೀಗ ಬಾಳ ಎಚ್ಚರ ಆಗ್ಯಾರ. ನೀವು ಹಿಂಗ ಅಡ್ಡ ದಾರಿ ಹಿಡದ್ರೆ ಮನೆತನಕ್ಕು ಕೆಟ್ಟೆಸರು! ಊರು ಮಂದಿಗೆ ಅದೇ ಸಾಕು. ಜಗಳ ಮಾಡಾಕ! ಇದು ಪಸಂದ ಅಲ್ಲದ ಕೆಲ್ಸ"[೧೩೯] ಎನ್ನುತ್ತಾಳೆ. ಜಾತಿಯ ಕೌರ್ಯ ಇನ್ನೂ ಆಳವಾಗಿ

ಇಂದಿನ ದಿನಗಳಲ್ಲಿ ನೆಲೆಯೂರುತ್ತಿರುವುದನ್ನು ಈ ಮೂಲಕ ತಿಳಿಯಲು ಸಾಧ್ಯವಾಗುತ್ತಿದೆ. ಅಲ್ಲದೇ ಇಂದು ಹಳ್ಳಿಗಳಲ್ಲಿ ಕೇವಲ ಜಾತಿ ಮಾತ್ರ ಪ್ರಾಧಾನ್ಯತೆಯನ್ನು ಪಡೆಯದೇ ಧರ್ಮಗಳಲ್ಲಿಯೂ ಇಂತಹ ಸ್ವರೂಪವನ್ನು ಗುರ್ತಿಸಲಾಗುತ್ತಿದೆ. ಅಲ್ಲದೇ ಸಾಂತಿಯು ಹುಸೇನಮ್ಮನಿಗೆ ನೀಡುವ ಜವಾಬು ಹೀಗಿದೆ. "ನನ್ಗ ಗೋವಿಂದ ಬೇಕು! ಅವನು ಯಾವ ಜಾತಿಯಾದ್ರೆ ನನ್ಗೇನು? ಅವನು ಜಾಬ್ ಮಾಡ್ತಾನ. ಸಿಟಿಲಿ ಇರ್ತೀವಿ. ಅಲ್ಲಿ ಯಾರು ಜಾತಿ ಕೇಳ್ತಾರ?"[೧೪೦] ಎನ್ನುವ ಮಾತುಗಳಲ್ಲಿ ಹಳ್ಳಿಗಳಲ್ಲಿ ಇರುವ ಜಾತಿಯ ಕಲ್ಪನೆಯು ನಗರ ಪ್ರದೇಶಗಳಲ್ಲಿ ಅಷ್ಟಾಗಿ ಇಲ್ಲವೆನ್ನುವುದನ್ನು ತಿಳಿಸುತ್ತಿದೆ.

ಕಾರ್ಗಿಲ್ ಯುದ್ಧದಲ್ಲಿ ಮರಣ ಹೊಂದಿದ ಚಂದ್ರಪ್ಪನ ಹೆಸರಿನಲ್ಲಿ ನಿಧಿ ಸಂಗ್ರಹಕ್ಕೆ ಬಂದಾಗ ಹುಸೇನಮ್ಮ ನೂರಾ ಒಂದು ರೂಪಾಯಿಯನ್ನು ಕೊಡಲು ಹೋಗುತ್ತಾಳೆ. ಆಗ 'ಜುಜುಬಿ ನೂರಾ ಒಂದು! ಬಿಚ್ಚು ಐದು ಸಾವಿರ! ಕಕ್ಕು ಹತ್ತು ಸಾವಿರ!' ಎಂದು ಹುಸೇನಮ್ಮಳನ್ನು ಹೀಯಾಳಿಸುತ್ತಾ 'ಪಾಪಿ ಹಣ ಯಾರಿಗೆ ಬೇಕು' ಹೋಗುತ್ತಾರೆ. ಅಂದರೆ ಇಡೀ ಹಳ್ಳಿಯಲ್ಲಿ ಧರ್ಮ ಮತ್ತು ಧರ್ಮಗಳ ನಡುವೆ ಮಾಡುತ್ತಿರುವ ಕೋಮುವಾದದ ಸ್ವರೂಪವನ್ನು ಪ್ರಸ್ತುತ ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಹಳ್ಳಿಗಳಲ್ಲಿ ಇದು ಜಾತಿಯು ಹೇಗೆ ತನ್ನ ಪ್ರಭಾವವನ್ನು ಇನ್ನೂ ಆಳವಾಗಿ ಬೇರುಬಿಡುತ್ತಿದೆಯೋ ಅಂತೆಯೇ ಧರ್ಮವು ಹೆಚ್ಚಿನ ಪ್ರಮಾಣದಲ್ಲಿ ತನ್ನ ಪ್ರಭಾವವನ್ನು ಜಾಗತೀಕರಣ ಸಂದರ್ಭದಲ್ಲಿ ಪಡೆಯುತ್ತಿರುವುದನ್ನು ಕಾಣಬಹುದು.

ಮೊಗಳ್ಳಿ ಗಣೇಶ್ ಅವರ 'ವ್ಯೂಹ' ಕತೆಯು ಸಮಕಾಲೀನ ಸಮಾಜದಲ್ಲಿ ನಡೆಯುತ್ತಿರುವ ಜಾತೀಯತೆಯ ವ್ಯವಸ್ಥೆಯನ್ನು ಕುರಿತು ಚಿತ್ರಿಸುತ್ತಿದೆ. ಇಡೀ ವ್ಯವಸ್ಥೆಯಲ್ಲಿ ಜಾತೀಯತೆಯು ತುಂಬಾ ಕ್ರೂರವಾಗಿ ಮೇಲ್ವರ್ಗವು ತಳವರ್ಗವನ್ನು ನಡೆಸಿಕೊಂಡಾಗಲೂ ಅವರು ಅದನ್ನು ಪ್ರತಿಭಟಿಸದೇ ಮೌನವಾಗಿ ಸಹಿಸುತ್ತಿದ್ದರು. ಆದರೆ ಈಗ ಆರ್ಥಿಕ ಮತ್ತು ಶೈಕ್ಷಣಿಕ ಕಾರಣಕ್ಕಾಗಿ ಇಂತಹ ದೌರ್ಜನ್ಯಗಳನ್ನು ಪ್ರತಿರೋಧಿಸುವ ನೆಲೆಯನ್ನು ಕಂಡುಕೊಳ್ಳುತ್ತಿರುವುದನ್ನು ಕತೆಯ ಮೂಲಕ ನೋಡಬಹುದಾಗಿದೆ. ಕತೆಯ ಮುಖ್ಯ ಪಾತ್ರವಾದ ಸುಬ್ಬೇಗೌಡರು ಊರಿನಲ್ಲಿ ತೋಟ, ಜಮೀನನ್ನು ಇಟ್ಟುಕೊಂಡು ಹಿಂದಿನಿಂದಲೂ ಯಜಮಾನಿಕೆಯನ್ನು ಮಾಡಿಕೊಂಡು ಬಂದವರು. "ಅವರ ಗತ ಜೀವನವು ಕಾಲು ಮುರಿದುಕೊಂಡು ಬಿದ್ದಿತ್ತು. ಹಾಗೆ ನೋಡಿದರೆ ಒಂದು ಕಾಲಕ್ಕೆ ಊರನ್ನು ಆಳೀ ಊರನ್ನು ಕಾದು ಹೆಸರುವಾಸಿ ಆಗಿದ್ದ ಗೌಡರು ಕಾಲದ ನೂರೆಂಟು ಹೊಡೆತಗಳಿಗೆ ಸಿಲುಕಿ ದಣಿದು ಹೋಗಿದ್ದರು. ಆದರೂ ಯಾರಿಗೂ ತಮ್ಮ ಒಳಗುಟ್ಟನ್ನು

ಬಿಟ್ಟುಕೊಟ್ಟಿಲ್ಲ ಎಂದೇ ಅವರು ತಿಳಿದಿದ್ದರು. ಜನಕ್ಕೆ ಗೌಡರ ಪರಿಸ್ಥಿತಿ ಚೆನ್ನಾಗಿ ಗೊತ್ತಿತ್ತು. ಅವರ ಹಿರಿಯ ಮಗ ಈ ಭೂಮಿ, ಈ ಊರು ಯಾವುದು ಬೇಡ ಎಂದು ಪ್ರೈವೇಟ್ ಕಂಪನಿಯೊಂದರಲ್ಲಿ ವಾಚ್‌ಮನ್ ಕೆಲಸಕ್ಕೆ ಸೇರಿಕೊಂಡಿದ್ದ."[೧೪೧] ಎನ್ನುವಲ್ಲಿ ಗೌಡನ ಆರ್ಥಿಕ ಸ್ಥಿತಿಗತಿಯು ಕಾರಣಾಂತರಗಳಿಂದ ಪೆಟ್ಟನ್ನು ತಿಂದಿರುವುದನ್ನು ಮಗನ ಮೂಲಕ ಚಿತ್ರಿಸಲಾಗಿದೆ.

ಇದೇ ಸಂದರ್ಭದಲ್ಲಿ ಗೌಡನು ತನ್ನ ಜಾತಿಯವನೇ ಆದ ಸಚಿವರನ್ನು ಭೇಟಿಯಾಗಲು ಹೋಗಿ ಅಲ್ಲಿಂದ ನೂಕಿಸಿಕೊಂಡು, ತುಳಿಸಿಕೊಂಡು ಬಂದಿದ್ದರು. ಅಲ್ಲದೇ ಗೌಡರು ಸರ್ಕಾರದಿಂದ ಬೆಳೆಗಾಗಿ ಪಡೆದ ಸಾಲದ ಹಣವನ್ನು ಸಚಿವರ ಮೂಲಕ ಹೇಗಾದರೂ ಮಾಡಿ ಮನ್ನಾ ಮಾಡಿಸಬಹುದೆಂಬ ಆಸೆಯಿಂದ ಅರ್ಜಿಯನ್ನು ತೆಗೆದುಕೊಂಡು ಹೋಗಿ ನಿರಾಸೆಯಿಂದ ಬಂದಿದ್ದರು. ಗೌಡರು ಹೋಗಲು ಮತ್ತೊಂದು ಕಾರಣವೆಂದರೆ "ಇವರು ತಮ್ಮ ಜಾತಿಯವರೇ ಆಗಿರುವ ಉಸ್ತುವಾರಿ ಸಚಿವರು ತನ್ನ ಕಷ್ಟಕ್ಕೆ ಆಗುವರೆಂಬ ವಿಶ್ವಾಸ ಅವರಿಗಿತ್ತು. ಅದು ಅಲ್ಲದೇ ಚುನಾವಣೆಯ ಕಾಲದಲ್ಲಿ ಸುಬ್ಬೇಗೌಡರು ಇಡೀ ತಮ್ಮ ಊರಿನ ಎಲ್ಲರ ಓಟನ್ನು ಹಾಕಿಸುವ ಮೂಲಕ ಸಚಿವರ ಗೆಲುವಿಗೆ ಅಳಿಲು ಸೇವೆ ಮಾಡಿದ್ದರು."[೧೪೨] ಅಂದರೆ ಚುನಾವಣೆಯಲ್ಲಿ ಜಾತಿಯು ಇಂದಿನ ದಿನಗಳಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಕತೆಯ ಮೂಲಕ ತಿಳಿಯಲಾಗಿದೆ.

ಇದೇ ಸಂದರ್ಭದಲ್ಲಿ ಗೌಡನು ತೋಟವನ್ನು ನೋಡಿಕೊಳ್ಳುತ್ತಿದ್ದ ಕೂಲಿ ಆಳಾಗಿದ್ದ ದಾಸನಿಗೆ ಒಂದು ವರ್ಷದಿಂದ ಸಂಬಳವನ್ನು ನೀಡದೆ ಇದ್ದುದರಿಂದ ಅವನು ಗೌಡರಿಗೆ ಕೇಳಲು ಮನೆಗೆ ಹೋಗಿದ್ದ. ಇವನು ಮನೆಗೆ ಬಂದಾಗ ಗೌಡನು "ಬೆಳ್ ಬೆಳಿಗ್ಗೆಯೇ ಆ ದರಿದ್ರ ಸೂಳೇಮಗ ನನ್ ಮನೆ ಕೊಟ್ಗೆಲಿ ಬಂದ್ ಕೂತ್ಕಂಡು ದುಡ್ಡು ಕೇಳುವಂಗಾದ್ನೇ ಎಂದು ಒಳಗೆ ಶಪಿಸುತ್ತಾ; ಮಧ್ಯಾನ ಬರ್ಬೇಕಂತೆ ಅಂತೇಳಿ ಅತ್ನ ಕಳ್ಸು"[೧೪೩] ಎಂದು ತಲೆ ಕೆಡಿಸಿಕೊಂಡರು.

ದಾಸ "ಊರಿನ ಮಾಮೂಲಿ ಕೂಲಿಕಾರ. ಗೌಡರ ಓಬಿರಾಯನ ಕಾಲದ ತೋಟದಲ್ಲಿ ನಿಷ್ಠೆಯಿಂದ ಕೂಲಿ ಮಾಡುವುದು ಅವನೇ. ಹೆಚ್ಚು ಕಡಿಮೆ ಒಂದು ವರ್ಷದಿಂದಲೂ ಗೌಡರು ದಾಸನಿಗೆ ಸರಿಯಾಗಿ ಕೂಲಿ ಹಣ ಪಾವತಿಸಿಲ್ಲ. ದಾಸನಿಗೆ ಹಕ್ಕಿನಿಂದ ಕೇಳುವ ಧೈರ್ಯವೂ ಇಲ್ಲ. ಜೋರಾಗಿ ಕೇಳಿದರೆ 'ನಿನಗ್ಯಾವ ಕೂಲಿನೋ ಕೊಡೋದೂ; ನಿಮ್ಮೊಬ ನನ್ನತ್ರ ಇಷ್ಟ ಸಾವ್ರ ಸಾಲ ತಕಂದು ನಿಗುರ್ಕಂಡು ನನ್ಗೆ ನಾಮ ಇಕ್ಬುಟ್ಟ"[೧೪೪]

ಅಂದರೆ ಇಲ್ಲಿ ಜಾತಿಯ ಕಾರಣಕ್ಕಾಗಿ ದಾಸನು ಗೌಡನನ್ನು ಮಾತನಾಡಿಸುವ ಭಾಷೆಯನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಅಲ್ಲದೇ ಮಾಡಿದ ಕೆಲಸವನ್ನು ಕೇಳಲು ಹೋದರೆ ಅಪ್ಪನ ಸಾಲವನ್ನು ದಾಸನನ್ನು ಹೊರಹಾಕುವ ಕೆಲಸವನ್ನು ಗೌಡನು ಮಾಡುತ್ತಿರುತ್ತಾನೆ.

ದಾಸನ ಕುಟುಂಬವು ಸಹ ದೊಡ್ಡದು. ನಾಲ್ಕು ಜನ ಮಕ್ಕಳು ಮತ್ತು ಹೆಂಡತಿ. ಅದರ ಜೊತೆಯಲ್ಲಿಯೆ ನಾಯಿಯೊಂದು ಅದರ ಮರಿಗಳು. ಇವೆಲ್ಲಕ್ಕೂ ಆಧಾರ ದಾಸನೇ ಆಗಿದ್ದನು. ಗೌಡರು ಸಂಬಳವನ್ನು ನೀಡುತ್ತಿಲ್ಲ ಅಥವಾ ಆರ್ಥಿಕ ಪರಿಸ್ಥಿತಿಯೇ ಆ ರೀತಿ ಇತ್ತು ಎನ್ನುವುದನ್ನು ಇಡೀ ಊರೇ ಅರಿತಿತ್ತು. ಆಗ ಸಂಜೆ ಗೌಡರು ಸರ್ಕಲ್ಲಿಗೆ ಬಂದಾಗ ದಾಸನನ್ನು "ಏನ್ಲಾ ದಾಸ ವತಾರೆ ಅಷ್ಟೊತ್ಗೆ ಅಟ್ಟಿಗಂಟಾ ಬಂದಿದ್ದಂತೆ ಎಂದು ಏನೂ ಗೊತ್ತಿಲ್ಲದವರಂತೆ ಕೇಳಿದರು. ತರಲೆಗಳಲ್ಲಿ ಒಬ್ಬಾತ; ಇದೇನ್ ಗೌಡ್ರೆ ಊರ್ಗೆ ಯಜಮಾನ್‌ರಾಗಿ ಇಂತಾ ತರ್ದೆಲಿ ಮಾತಾಡ್ತಾ ಇದ್ದೀರಲಾ ಎಂದು ಕೆಕ್ಕರಿಸಿ ನೋಡಿದ. 'ಇನ್ನೆಂಗ್ಲಾ ಮಾತಾಡ್‌ಬೇಕೂ'; ಏನಯ್ನೋರೆ, ನಿಮ್ ಪಾದ್‌ವೇ ಗತಿ ಅಯ್ನೋರೆ; ಬನ್ನಿ ಪಾದ್ ಪೂಜೆ ಮಾಡ್ತೀನಿ ಅಂತಾ ಕರಿಬೇಕೇಂದ್ರುಲಾ ಎಂದು ಅಮಲು ಹೆಚ್ಚಾಗಿದ್ದರಿಂದ ಸ್ವಲ್ಪ ಬಿರುಸಾಗಿಯೇ ಮಾತು ಎಸೆದರು."[೧೪೫]

ಅಲ್ಲಿ ಗೌಡರಿಗೂ ಮತ್ತು ಆ ತರಲೆಗಳಿಗೂ ಜಗಳ ಹತ್ತಿ ಎಷ್ಟು ದಾಸನು ಪ್ರಯತ್ನಿಸಿದರೂ, ಬೇಡಿದರೂ ಸುಮ್ಮನಾಗದೇ ಗೌಡರಿಗೂ ಅವರಿಗೂ ಕೈಕೈ ಹತ್ತಿತ್ತು. ನಂತರ ದಾಸನು "ಗೌಡ್ರೆ ನಿಮುಗೆ ದೊಡ್ ನಮಸ್ಕಾರ; ನಿಮ್ಗೂ ಅಷ್ಟೆ ಕನ್ರಪಾ ದೇವ್ರು ನಿಮ್ಮೆಲ್ಲುರ್ನು ಚೆನ್ನಾಗಿ ಮಡ್ಗಿರ್ಲಿ ಎಂದು ತೂರಾಡಿದ. ಅಪಮಾನಿತರಾಗಿದ್ದ ಗೌಡರು ದಾಸನ ಕಡೆಗೆ ಮುದಿ ಹುಲಿಯಂತೆ ಎಗರಿ ಘಾಸಿಗೊಳಿಸಿ ಕಚ್ಚಿದರು. ದಾಸ ಹಂದಿಯಂತೆ ಕಿರುಚಿಕೊಂಡ. ಕಿತ್ತಾಡ್ಕಂಡು ಸಾಯ್‌ರೀ ನನ್ನ ಮಕ್ಕಳಾ ಎಂದು ಪುಂಡರು ಕತ್ತಲೆಯಲ್ಲಿ ಅರಚಿಕೊಂಡರು."[೧೪೬] ಅಂದರೆ ಇಲ್ಲಿ ಕೂಲಿಕೆಲಸಗಾರನ ಹೆಸರಿನಲ್ಲಿ ಗೌಡನು ಮಾಡುತ್ತಿರುವ ದೌರ್ಜನ್ಯವನ್ನು ತಿಳಿಯಲಾಗಿದೆ. ಪುಂಡರು ಗೌಡರು ಮತ್ತು ದಾಸನ ನಡುವೆ ಜಗಳವನ್ನು ತಂದಿಟ್ಟು ಅಲ್ಲಿಂದ ಪರಾರಿಯಾಗುತ್ತಾರೆ. ದಾಸನು ಮನೆಗೆ ಹೋಗಿ ತನ್ನ ಕುಟುಂಬವು ಇವನನ್ನು ನೆಚ್ಚಿಕೊಂಡಿದ್ದರೆ ಗೌಡನು ಸಾವನ್ನು ನೆಚ್ಚಿಕೊಂಡಿರುವುದನ್ನು ಕತೆಯಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೇ ಜಾತಿಯಲ್ಲಿ ದಾಸನು ದಲಿತನಾದರೂ ಅವನಿಗೆ ಗೌಡನು ಒಂದು ವರ್ಷದ ಹಣವನ್ನು ನೀಡದೇ ಸತಾಯಿಸುತ್ತಿರುವುದು ಕೂಡಾ ಆಳವಾದ ಜಾತಿಯ ಸೋಂಕನ್ನು ತಿಳಿಸುತ್ತಿದೆ.

ಜಾತಿ ಧರ್ಮದ ಕಾರಣಕ್ಕಾಗಿ ಬಡವರ ಸ್ಥಿತಿಯು ಏನಾಗುತ್ತದೆ ಎನ್ನುವುದನ್ನು ಅಬ್ದುಲ್ ರಶೀದ್ ಅವರ 'ಮಣ್ಣಾಂಗಟ್ಟಿ' ಕತೆಯಲ್ಲಿ ಚಿತ್ರಿಸಲಾಗಿದೆ. ಮುಸ್ಲಿಂ ಕುಟುಂಬವೊಂದು ಹೋಟೆಲನ್ನು ಇಟ್ಟುಕೊಂಡು ಜೀವನವನ್ನು ಸಾಗಿಸುತ್ತಿದ್ದ ಸಂದರ್ಭದಲ್ಲಿ ನಡೆದ ಹಿಂದೂ-ಮುಸ್ಲಿಂ ಗಲಾಟೆಯಿಂದ ಹೋಟೆಲ್ ಅದಕ್ಕೆ ಬಲಿಯಾಗಿತ್ತು. ಇಸುಬು ನಸೀಬಾಳ ಅಣ್ಣ. ತನ್ನ ತಂಗಿಯಾದ ನಸೀಬಾಳನ್ನು ಅಬ್ಬಾಸ್ ಮುಕ್ರಿಗೆ ಮದುವೆ ಮಾಡಿ ಕೊಟ್ಟಿದ್ದರೂ ಅವಳನ್ನು ತನ್ನ ಮನೆಯಿಂದ ಕಳುಹಿಸಿದರೆ ತನಗೆ ಇಲ್ಲಿ ಹೋಟೆಲಿನಲ್ಲಿ ಸಹಾಯ ಮಾಡಲು ಯಾರೂ ಇಲ್ಲವೆಂದು ಗಂಡ-ಹೆಂಡತಿಯರಿಬ್ಬರನ್ನೂ ದೂರ ಮಾಡುವಲ್ಲಿ ಅನೇಕ ಪ್ರಯತ್ನಪಟ್ಟಿದ್ದನು. ಅಲ್ಲದೇ ಹಿಂದೂ-ಮುಸ್ಲಿಂ ಗಲಾಟೆಯ ನಂತರ ನಸೀಬಾ ಮಗಳು ಕೈರುವಿನ ಹತ್ತಿರ ಅಣ್ಣನಿಗೆ ತಿಳಿಯದಂತೆ ಅಬ್ಬಾಸ್ ಮುಕ್ರಿಗೆ ಪತ್ರವನ್ನು ಬರೆಸಿದ್ದಳು. ಅವನು ಎರಡನೇ ಮದುವೆಯಾದರೂ ನಸೀಬಾಳ ಪತ್ರವನ್ನು ಓದಿದ ಕೂಡಲೇ ಹೊರಟುಬಂದಿದ್ದ.

ವೈಯಕ್ತಿಕ ನೆಲೆಯಲ್ಲಿ ಸಂಬಂಧಗಳನ್ನು ಹಾಳುಗೆಡವುತ್ತಿರುವುದನ್ನು ಇಸುಬುವಿನ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಇಲ್ಲಿ ಹಾಳುಮಾಡುತ್ತಿರುವುದು ಇಸುಬು ಆದರೆ ಸಮಾಜದಲ್ಲಿರುವ ಈ ಧರ್ಮದ ರೋಗವು ಜನರನ್ನು ಅವರ ಮನಸ್ಸನ್ನು ಹಾಳು ಮಾಡುತ್ತಿರುವುದನ್ನು ಕತೆಯಲ್ಲಿ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಅಲ್ಲದೇ ತಾನು ಶುಕ್ರವಾರ ಹೊರಟು ಬರುತ್ತಿರುವಾಗ ದಾರಿಯಲ್ಲಿ ಹಿಂದೂ-ಮುಸ್ಲಿಂ ಗಲಾಟೆಯನ್ನು ನೋಡಿಕೊಂಡು ಬಂದ ಅಬ್ಬಾಸ್ ಮುಕ್ರಿಯು ಇಸುಬುವಿನ ಹೋಟೆಲ್‌ನ ಮುಂದೆ ಬಂದು "ಯಾಕೋ ಎಂದೂ ಬಾರದ ವೈರಾಗ್ಯವೊಂದು ನನ್ನನ್ನು ಆ ಹಸಿರು ಸಾಲಿನ ನಡುವೆ ಸುತ್ತಿಕೊಂಡು ಏನೂ ಬೇಡವೆನಿಸುತ್ತಿತ್ತು. ಸಂಬಂಧಗಳನ್ನು ಜೋಡಿಸುವುದು, ಕಾಣೆಯಾದವರನ್ನು ಹುಡುಕುವುದು, ಮರೆತು ಹೋದವರನ್ನು ಮತ್ತೆ ನೋಡುವುದು, ಎಲ್ಲಾ ಹುಚ್ಚಾಟಗಳು ಎನಿಸುತ್ತಿತ್ತು."[೧೪೭]

ಇಡೀ ಸಮಾಜದಲ್ಲಿ ಆಗುವ ಇಂತಹ ಗಲಾಟೆ, ಕಲಹಗಳು ವ್ಯಕ್ತಿ-ವ್ಯಕ್ತಿಗಳಲ್ಲಿ, ಸಂಬಂಧಗಳಲ್ಲಿ, ಅಲ್ಲದೇ ಕಳೆದುಹೋದವರನ್ನು ಮತ್ತೆ ಹುಡುಕುವುದು ಕಷ್ಟವೆನ್ನುವ ಸತ್ಯಸಂಗತಿಯನ್ನು ಕತೆಯು ಹೇಳುತ್ತಿದೆ. ಅಲ್ಲದೇ ಇಂತಹ ಕೋಮುಗಲಭೆಗಳು ಸಮಾಜದ ಮೇಲೆ ಪರಿಣಾಮವನ್ನು ಬೀರುವುದರ ಜೊತೆಗೆ ಧರ್ಮ-ಧರ್ಮಗಳ ನಡುವೆ ಇರುವ ಸಾಮರಸ್ಯವನ್ನು ಕೆಡಿಸುವ ಪ್ರಯತ್ನವನ್ನು ಮಾಡುತ್ತಿದೆ ಎನ್ನುವುದನ್ನು ಕತೆಯಲ್ಲಿ ಸೂಕ್ಷ್ಮವಾಗಿ

ತಿಳಿಸಲಾಗಿದೆ. ಅಲ್ಲದೇ ಇಂತಹ ಗಲಾಟೆಗಳಿಂದ ತೀರಾ ಬಡವರು, ಒಂದು ಹೊತ್ತಿನ ಊಟಕ್ಕಾಗಿ ಕೆಲಸ ಮಾಡಿಕೊಂಡು ಬದುಕುವ ಜನರ ಬದುಕು ದುರ್ಬರವಾಗುವುದನ್ನು ನಸೀಬಾಳ ಪಾತ್ರದ ಮೂಲಕ ಚಿತ್ರಿಸಲಾಗಿದೆ.

ಕೊನೆ ಟಿಪ್ಪಣಿ

೧. ಗಿರಡ್ಡಿ ಗೋವಿಂದರಾಜ, **ಸಾತತ್ಯ,** ಪು.ಸಂ–೯೫

೨. ರಹಮತ್ ತರೀಕೆರೆ(ಸಂ), **ಹೊಸ ತಲೆಮಾರಿನ ತಲ್ಲಣ,** ಪು.ಸಂ–೧೫೪

೩. ಪ್ರಹ್ಲಾದ ಅಗಸನಕಟ್ಟೆ, **ಅನುಸರಣ,** ಪು.ಸಂ–೧೮೯

೪. ಶಂಕರರಾವ್ ಚ.ನ., **ಸಮಾಜಶಾಸ್ತ್ರ,** ಪು.ಸಂ–೨೦೪

೫. ಅದೇ ಪುಸ್ತಕ, ಪು.ಸಂ–೨೦೪

೬. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ–V

೭. ವಸುಧೇಂದ್ರ, **ಚೇಳು,** ಪು.ಸಂ–೭

೮. ಅದೇ ಪುಸ್ತಕ, ಪು.ಸಂ–೮

೯. ಅದೇ ಪುಸ್ತಕ, ಪು.ಸಂ–೮

೧೦. ಗೊರವರ ಟಿ.ಎಸ್., **ಕುದರಿ ಮಾಸ್ತರ,** ಪು.ಸಂ–೨೦

೧೧. ಅದೇ ಪ್ರಸ್ತಕ, ಪು.ಸಂ–೨೨

೧೨. ವೇದಾ.ಎಂ.ಎಸ್., **ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ,** ಪು.ಸಂ–೧೮೯

೧೩. ಅದೇ ಪುಸ್ತಕ, ಪು.ಸಂ–೧೯೬

೧೪. ಜಯಂತ ಕಾಯ್ಕಿಣಿ, **ತೂಫಾನ್ ಮೇಲ್,** ಪು.ಸಂ–೫೭

೧೫. ಅದೇ ಪುಸ್ತಕ, ಪು.ಸಂ–೫೭

೧೬. ಅಮರೇಶ ನುಗಡೋಣಿ, **ಸವಾರಿ,** ಪು.ಸಂ–೧೯೭

೧೭. ಅದೇ ಪುಸ್ತಕ, ಪು.ಸಂ–೧೯೭

೧೮. ಅಮರೇಶ ನುಗಡೋಣಿ, **ತಮಂಧದ ಕೇಡು,** ಪು.ಸಂ–೧೩

೧೯. ನಾಗವೇಣಿ.ಎಚ್., **ಮೀಯುವ ಆಟ,** ಪು.ಸಂ–೬೨

೨೦. ಅದೇ ಪುಸ್ತಕ, ಪು.ಸಂ–೧

೨೧. ಅದೇ ಪುಸ್ತಕ, ಪು.ಸಂ–೨

೨೨. ಕೊಡ್ಲಿ.ಎಂ.ಸಿ., **ಅರ್ಥಶಾಸ್ತ್ರ ಪರಿಚಯ,** ಪು.ಸಂ–೩

೨೩. ಅದೇ ಪುಸ್ತಕ, ಪು.ಸಂ–೪

೨೪. ಮಹೇಶನ್.ಮ., **ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ,** ಪು.ಸಂ–೧೧

೨೫. ರಾಜೆಂದ್ರ ಚೆನ್ನಿ, ಸಿರಾಜ್ ಅಹಮ್ಮದ್(ಸಂ), **ಜಾಗತೀಕರಣ ಒಂದು ಸಮಗ್ರ ಮಂಥನ,** ಪು.ಸಂ–೩೨

೨೬. ವೇದಾ.ಎಂ.ಎಸ್., **ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ,** ಪು.ಸಂ–೨೦೪

೨೭. ರಾಮಲಿಂಗಪ್ಪ ಟಿ. ಬೇಗೂರು(ಸಂ), **ವರ್ತಮಾನದ ಕತೆಗಳು,** ಪು.ಸಂ–೪

೨೮. ಅದೇ ಪುಸ್ತಕ, ಪು.ಸಂ–೬

೨೯. ಮಹಾಂತೇಶ ನವಲಕಲ್, **ಭಾರತ ಭಾಗ್ಯವಿಧಾತ,** ಪು.ಸಂ–೫

೩೦. ಅದೇ ಪುಸ್ತಕ, ಪು.ಸಂ–೫

೩೧. ಅದೇ ಪುಸ್ತಕ, ಪು.ಸಂ–೮

೩೨. ಜಯಂತ ಕಾಯ್ಕಿಣಿ, **ತೂಫಾನ್ ಮೇಲ್,** ಪು.ಸಂ–೬೬

೩೩. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೫೫

೩೪. ಅದೇ ಪುಸ್ತಕ, ಪು.ಸಂ–೬೩

೩೫. ವಿವೇಕ ಶಾನಭಾಗ, **ಮತ್ತೊಬ್ಬನ ಸಂಸಾರ,** ಪು.ಸಂ–೬೪

೩೬. ಅದೇ ಪುಸ್ತಕ, ಪು.ಸಂ–೬೫

೩೭. ಅದೇ ಪುಸ್ತಕ, ಪು.ಸಂ–೬೫

೩೮. ಜಗದೀಶ್ ಕೊಪ್ಪ(ಡಿ.ಲಿಟ್.)., **ಜಾಗತೀಕರಣ ಮತ್ತು ಗ್ರಾಮಭಾರತ,** ಪು.ಸಂ–೧೩೩

೩೯. ನಾಗರಾಜ ಎಸ್(ಪಿಎಚ್.ಡಿ.)., **ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿ ಪ್ರಶ್ನೆ,** ಪು.ಸಂ–೭೭

೪೦. ಶಾಂತಿ ಕೆ. ಅಪ್ಪಣ್ಣ, **ಮನಸು ಅಭಿಸಾರಿಕೆ,** ಪು.ಸಂ–೧೨೭

೪೧. ಅದೇ ಪುಸ್ತಕ, ಪು.ಸಂ–೧೨೭

೪೨. ರಾಮಲಿಂಗಪ್ಪ ಟಿ. ಬೇಗೂರು(ಸಂ), **ವರ್ತಮಾನದ ಕತೆಗಳು,** ಪು.ಸಂ–೨೨

೪೩. ಅದೇ ಪುಸ್ತಕ, ಪು.ಸಂ–೨೨

೪೪. ಅದೇ ಪುಸ್ತಕ, ಪು.ಸಂ–೨೪

೪೫. ಅದೇ ಪುಸ್ತಕ, ಪು.ಸಂ–೨೫

೪೬. ಜಯಂತ್ ಕಾಯ್ಕಿಣಿ, **ತೂಫಾನ್ ಮೇಲ್,** ಪು.ಸಂ–೬೬

೪೭. ವಿವೇಕ ಶಾನಭಾಗ, **ಮತ್ತೊಬ್ಬನ ಸಂಸಾರ,** ಪು.ಸಂ–೬೩

೪೮. ಅದೇ ಪುಸ್ತಕ, ಪು.ಸಂ–೬೪

೪೯. ಅದೇ ಪುಸ್ತಕ, ಪು.ಸಂ–೬೪

೫೦. ಅದೇ ಪುಸ್ತಕ, ಪು.ಸಂ–೬೫

೫೧. ವೇದಾ ಎಂ.ಎಸ್., **ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ,** ಪು.ಸಂ–೧೯೦

೫೨. ಬರಗೂರು ರಾಮಚಂದ್ರಪ್ಪ(ಸಂ)., **ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು.ಸಂ–೩

೫೩. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೪೭

೫೪. ಅದೇ ಪುಸ್ತಕ, ಪು.ಸಂ–೫೨

೫೫. ಅದೇ ಪುಸ್ತಕ, ಪು.ಸಂ–೫೧

೫೬. ಅದೇ ಪುಸ್ತಕ, ಪು.ಸಂ–೫೭

೫೭. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೫೬

೫೮. ಅದೇ ಪುಸ್ತಕ, ಪು.ಸಂ–೧೧೨

೬೦. ಮೊಗಳ್ಳಿ ಗಣೇಶ್, **ಕನ್ನೆಮಳೆ,** ಪು.ಸಂ–೩೯

೬೧. ಅದೇ ಪುಸ್ತಕ, ಪು.ಸಂ-೩೯

೬೨. ಅದೇ ಪುಸ್ತಕ, ಪು.ಸಂ-೪೦

೬೩. ಅದೇ ಪುಸ್ತಕ, ಪು.ಸಂ-೪೦

೬೪. ಅದೇ ಪುಸ್ತಕ, ಪು.ಸಂ-೪೦

೬೫. ಅದೇ ಪುಸ್ತಕ, ಪು.ಸಂ-೪೪

೬೬. ಅದೇ ಪುಸ್ತಕ, ಪು.ಸಂ-೪೪

೬೭. ಜಗದೀಶ್ ಕೊಪ್ಪ, **ಜಾಗತೀಕರಣ ಮತ್ತು ಗ್ರಾಮಭಾರತ,** ಪು.ಸಂ-೯

೬೮. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ-೧೧೦

೬೯. ಅದೇ ಪುಸ್ತಕ, ಪು.ಸಂ-೪೯

೭೦. ಅದೇ ಪುಸ್ತಕ, ಪು.ಸಂ-೪೯

೭೧. ಮಂಜುನಾಥಲತಾ, **ಕತೆ ಎಂಬ ಇರಿವ ಈ ಅಲಗು,** ಪು.ಸಂ-೩೧

೭೨. ಅದೇ ಪುಸ್ತಕ, ಪು.ಸಂ-೩೨

೭೩. ಅದೇ ಪುಸ್ತಕ, ಪು.ಸಂ-೩೨

೭೪. ಅದೇ ಪುಸ್ತಕ, ಪು.ಸಂ-೩೩

೭೫. ಅದೇ ಪುಸ್ತಕ, ಪು.ಸಂ-೩೩

೭೬. ಅದೇ ಪುಸ್ತಕ, ಪು.ಸಂ-೩೧

೭೭. ಅದೇ ಪುಸ್ತಕ, ಪು.ಸಂ-೩೫

೭೮. ಅದೇ ಪುಸ್ತಕ, ಪು.ಸಂ-೩೫

೭೯. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ-೧೧೯

೮೦. ಅದೇ ಪುಸ್ತಕ, ಪು.ಸಂ-೧೧೪

೮೧. ಅದೇ ಪುಸ್ತಕ, ಪು.ಸಂ-೧೧೪

೮೨. ಶ್ರೀಧರ ಬಳಗಾರ, **ಒಂದು ಫೋಟೋದ ನೆಗೆಟಿವ್,** ಪು.ಸಂ–೧೪

೮೩. ಅದೇ ಪುಸ್ತಕ, ಪು.ಸಂ–೧೫

೮೪. ಅದೇ ಪುಸ್ತಕ, ಪು.ಸಂ–೧೬

೮೫. ಅದೇ ಪುಸ್ತಕ, ಪು.ಸಂ–೧೯

೮೬. ಷರೀಫಾ ಕೆ., **ಬಂಡಾಯ–ಮುಸ್ಲಿಂ ಸಂವೇದನೆ,** ಪು.ಸಂ–೮೨

೮೭. ಜಯಂತ್ ಕಾಯ್ಕಿಣಿ, **ತೂಫಾನ್ ಮೇಲ್,** ಪು.ಸಂ–೬೮

೮೮. ಅದೇ ಪುಸ್ತಕ, ಪು.ಸಂ–೬೮

೮೯. ಅದೇ ಪುಸ್ತಕ, ಪು.ಸಂ–೬೯

೯೦. ಅದೇ ಪುಸ್ತಕ, ಪು.ಸಂ–೬೯

೯೧. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೧೦೨

೯೨. ಅದೇ ಪುಸ್ತಕ, ಪು.ಸಂ–೧೦೨

೯೩. ಅದೇ ಪುಸ್ತಕ, ಪು.ಸಂ–೭೬

೯೪. ಅದೇ ಪುಸ್ತಕ, ಪು.ಸಂ–೭೭

೯೫. ಶ್ರೀಮತಿ ಎಚ್.ಎಸ್., ಸೇರಿಕೊಂಡ ಎಳೆಗಳು, ಪು.ಸಂ–೩೩

೯೬. ಜಯಂತ್ ಕಾಯ್ಕಿಣಿ, **ತೂಫಾನ್ ಮೇಲ್,** ಪು.ಸಂ–೬೬

೯೭. ಅದೇ ಪಸ್ತಕ, ಪು.ಸಂ–೬೬

೯೮. ಅಮರೇಶ ನುಗಡೋಣಿ, **ತಮಂಧದ ಕೇಡು,** ಪು.ಸಂ–೩೦

೯೯. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೧೧೩

೧೦೦. ಅದೇ ಪುಸ್ತಕ, ಪು.ಸಂ–೧೦೪

೧೦೧. ಅದೇ ಪುಸ್ತಕ, ಪು.ಸಂ–೫೪

೧೦೨. ಅದೇ ಪುಸ್ತಕ, ಪು.ಸಂ–೫೪

೧೦೩. ಮಹಾಂತೇಶ ನವಲಕಲ್, **ನೀರಿನ ನೆರಳು,** ಪು.ಸಂ–೩೭

೧೦೪. ಅಮರೇಶ ನುಗಡೋಣಿ. **ಸವಾರಿ,** ಪು.ಸಂ-೧೯೭

೧೦೫. ಅದೇ ಪುಸ್ತಕ, ಪು.ಸಂ-೧೯೭

೧೦೬. ಅದೇ ಪುಸ್ತಕ, ಪು.ಸಂ-೨೧೦

೧೦೭. ಜಗದೀಶ್ ಕೊಪ್ಪ, **ಜಾಗತೀಕರಣ ಮತ್ತು ಗ್ರಾಮಭಾರತ,** ಪು.ಸಂ-೨೫

೧೦೮. ಅದೇ ಪುಸ್ತಕ, ಪು.ಸಂ-೧೨೮

೧೦೯. ಶಾಂತಿ ಕೆ. ಅಪ್ಪಣ್ಣ, ಮನಸು ಅಭಿಸಾರಿಕೆ, ಪು.ಸಂ-೯

೧೧೦. ಅದೇ ಪುಸ್ತಕ, ಪು.ಸಂ-೧೦

೧೧೧. ಅದೇ ಪುಸ್ತಕ, ಪು.ಸಂ-೯

೧೧೨. ಅನುಪಮಾ ಪ್ರಸಾದ್, **ಜೋಗತಿ ಜೋಳಿಗೆ,** ಪು.ಸಂ-೪೨

೧೧೩. ಅದೇ ಪುಸ್ತಕ, ಪು.ಸಂ-೪೨, ೪೩

೧೧೪. ಮಹಾತೇಶ ನವಲಕಲ್, **ನೀರನ ನೆರಳು,** ಪು.ಸಂ-೨೫

೧೧೫. ಅದೇ ಪುಸ್ತಕ, ಪು.ಸಂ-೨೫

೧೧೬. ಅದೇ ಪುಸ್ತಕ, ಪು.ಸಂ-೨೫

೧೧೭. ಅದೇ ಪುಸ್ತಕ, ಪು.ಸಂ-೨೬

೧೧೮. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ-೧೧೧

೧೧೯. ವಿವೇಕ ಶಾನಭಾಗ, **ಮತ್ತೊಬ್ಬನ ಸಂಸಾರ,** ಪು.ಸಂ-೬೬

೧೨೦. ಅದೇ ಪುಸ್ತಕ, ಪು.ಸಂ-೬೮

೧೨೧. ಅದೇ ಪುಸ್ತಕ, ಪು.ಸಂ-೬೮

೧೨೨. ಅದೇ ಪುಸ್ತಕ, ಪು.ಸಂ-೬೬

೧೨೩. ಅದೇ ಪುಸ್ತಕ, ಪು.ಸಂ-೭೦

೧೨೪. ಅದೇ ಪುಸ್ತಕ, ಪು.ಸಂ-೭೫

೧೨೫. ಮಹಾಂತೇಶ ನವಲಕಲ್, **ನೀರಿನ ನೆರಳು,** ಪು.ಸಂ-೩೩

೧೨೬. ಅದೇ ಪುಸ್ತಕ, ಪು.ಸಂ-೩೫

೧೨೭. ಅದೇ ಪುಸ್ತಕ, ಪು.ಸಂ-೩೬

೧೨೮. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ-೧೧೨

೧೨೯. ಮಂಜುನಾಥಲತಾ, **ಕತೆ ಎಂಬ ಇರಿವ ಈ ಅಲಗು,** ಪು.ಸಂ-೭೪

೧೩೦. ಅದೇ ಪುಸ್ತಕ, ಪು.ಸಂ-೭೬

೧೩೧. ಅದೇ ಪುಸ್ತಕ, ಪು.ಸಂ-೭೫

೧೩೨. ಅದೇ ಪುಸ್ತಕ, ಪು.ಸಂ-೭೮

೧೩೩. ಶ್ರೀಧರ ಬಳಗಾರ, **ಒಂದು ಫೋಟೋದ ನೆಗೆಟಿವ್,** ಪು.ಸಂ-೧೫

೧೩೪. ಅದೇ ಪುಸ್ತಕ, ಪು.ಸಂ-೧೬

೧೩೫. ಅದೇ ಪುಸ್ತಕ, ಪು.ಸಂ-೧೬

೧೩೬. ಮಹಾಂತೇಶ ನವಲಕಲ್, **ನೀರಿನ ನೆರಳು,** ಪು.ಸಂ-೦೯

೧೩೭. ಅಮರೇಶ ನುಗಡೋಣಿ, **ಸವಾರಿ,** ಪು.ಸಂ-೪೪

೧೩೮. ಅದೇ ಪುಸ್ತಕ, ಪು.ಸಂ-೫೫

೧೩೯. ಅದೇ ಪುಸ್ತಕ, ಪು.ಸಂ-೫೮

೧೪೦. ಅದೇ ಪುಸ್ತಕ, ಪು.ಸಂ-೫೮

೧೪೧. ಮೊಗಳ್ಳಿ ಗಣೇಶ್, **ಕನ್ನೆಮಳೆ,** ಪು.ಸಂ-೧೨

೧೪೨. ಅದೇ ಪುಸ್ತಕ, ಪು.ಸಂ-೧೨

೧೪೩. ಅದೇ ಪುಸ್ತಕ, ಪು.ಸಂ-೧೩

೧೪೪. ಅದೇ ಪುಸ್ತಕ, ಪು.ಸಂ-೧೩

೧೪೫. ಅದೇ ಪುಸ್ತಕ, ಪು.ಸಂ-೧೪

೧೪೬. ಅದೇ ಪುಸ್ತಕ, ಪು.ಸಂ-೧೫

೧೪೭. ಅಬ್ದುಲ್ ರಶೀದ್, **ಮಣ್ಣಾಂಗಟ್ಟಿ,** ಪು.ಸಂ-೮೭

ಅಧ್ಯಾಯ : ಐದು

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಆಧುನಿಕತೆ

ಅಧ್ಯಾಯ : ಐದು

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣಕತೆಗಳಲ್ಲಿ ಆಧುನಿಕತೆ

ಜಾಗತೀಕರಣ ಸಂದರ್ಭದಲ್ಲಿ ಹಲವು ಜ್ಞಾನಶಿಸ್ತುಗಳ ಹಿನ್ನೆಲೆಯಿಂದ ಬಂದ ಕತೆಗಾರರು ಕಥಾರಚನೆಯಲ್ಲಿ ತೊಡಗಿದ್ದಾರೆ. ಇದರಿಂದ ಕನ್ನಡ ಕಥಾಸಾಹಿತ್ಯಕ್ಕೆ ವಿಶೇಷವಾದ ಚೈತನ್ಯ ಒದಗಿಬಂದಿದೆ. ಕನ್ನಡ ಕತೆಗಳು ಸಾಂಪ್ರದಾಯಿಕ ದೃಷ್ಟಿಕೋನದ ಹೊರತಾಗಿ ಇಂದು ಹೊಸ ಹೊಸ ವಿಷಯಗಳನ್ನು, ಸಮಸ್ಯೆಗಳನ್ನು ಮುಖ್ಯ ಮಾಡಿಕೊಂಡು ರಚನೆ ಆಗುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಅಲ್ಲದೇ ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಸಾಹಿತ್ಯವು ಇಂಗ್ಲೀಷ್ ಭಾಷೆಯ ಎದುರು ನಿಲ್ಲಬೇಕಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವೇ ಜ್ಞಾನದ ಮೂಲವೆಂದು ಪ್ರಸ್ತುತಪಡಿಸುತ್ತಿರುವಾಗ ಮಾನವಿಕಗಳ ಕಡೆಗೆ ಒಲವನ್ನು ತೋರಿಸುವ ಜರೂರತ್ತು ಇದೆ. ಇಂತಹ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದವರನ್ನು ಬಿಟ್ಟು ಉಳಿದೆಲ್ಲಾ ಕ್ಷೇತ್ರದವರೂ ಕೂಡಾ ಜಾಗತೀಕರಣದ ಆಧುನಿಕತೆಯ ಪರಿಣಾಮಗಳನ್ನು ವಿವರಿಸಿದ್ದಾರೆ. ಆದರೆ ಸಣ್ಣಕತೆಗಳಲ್ಲಿ ಜಾಗತೀಕರಣದ ಸಂದರ್ಭದ ಆಧುನಿಕತೆಯ ಪ್ರಭಾವ ಮತ್ತು ಪರಿಣಾಮವನ್ನು ಇಲ್ಲಿ ಗಮನಿಸಲಾಗಿದೆ.

ಆಧುನಿಕತೆಯು ಪ್ರತಿ ಕಾಲಕ್ಕೂ ಹೊಸತನ್ನು ಕಂಡುಕೊಳ್ಳುತ್ತಿರುತ್ತದೆ. ಪಂಪನ ಕಾಲಕ್ಕೆ ಅವನು ಬಳಸಿದ ಭಾಷೆ, ವಸ್ತು-ವಿನ್ಯಾಸ ಮುಂತಾದವುಗಳು ಆಧುನಿಕವಾಗಿದ್ದವು. ಆದರೆ ತೊಂಭತ್ತೊಂದರ ದಶಕದಲ್ಲಿ ಆಧುನಿಕತೆಯು ಮಾಡಿರುವಂತಹ ಪರಿಣಾಮಗಳು ಇಡೀ ಸಮಾಜದಲ್ಲಿನ ಎಲ್ಲಾ ಕ್ಷೇತ್ರಗಳನ್ನು ಪಲ್ಲಟಿಸುವ ಶಕ್ತಿಯನ್ನು ಹೊಂದಿರುವುದನ್ನು ಮುಖ್ಯವಾಗಿ ಅರಿಯಬೇಕಾಗಿದೆ. ಜಾಗತೀಕರಣದ ಈ ಹೊತ್ತಿನಲ್ಲಿ ಇಂತಹ ಕನ್ನಡದ ಕತೆಗಾರರು ಆಧುನಿಕತೆಯ ಪರಿಕಲ್ಪನೆಯನ್ನು ಕತೆಗಳ ಮೂಲಕ ಹೇಗೆ ಅಭಿವ್ಯಕ್ತಿಸಿದ್ದಾರೆ ಎನ್ನುವುದು ಒಂದು ನೆಲೆಯಾದರೆ; ಜಾಗತೀಕರಣದ ಈ ಸಂದರ್ಭದಲ್ಲಿ ಆಧುನಿಕತೆಯು

ಜಾಗತೀಕರಣದೊಂದಿಗೆ ಹೇಗೆ ಮಿಳಿತಗೊಂಡಿದೆ ಎನ್ನುವುದನ್ನು ಗ್ರಹಿಸುವುದು ಇಲ್ಲಿ ಮುಖ್ಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ಆಧುನಿಕತೆಯನ್ನು ಅರ್ಥೈಸುವುದರ ಜೊತೆಗೆ ಆ ಮೂಲಕ ಜಾಗತೀಕರಣ ಸಂದರ್ಭವನ್ನು ವಿವರಿಸಿಕೊಳ್ಳುವ ಅಗತ್ಯವಿದೆ.

ಆಧುನಿಕತೆ

ಆಧುನಿಕತೆ ಎನ್ನುವುದನ್ನು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಲು ಇತಿಹಾಸದಿಂದ ಸಾಧ್ಯವಾಗಿದೆ.

೧. ೧೫ನೇ ಶತಮಾನದಲ್ಲಿ ಮಧ್ಯಯುಗೀನ ಯುರೋಪಿನಲ್ಲಿ ಆರಂಭವಾದಂತಹ ಪುನರುಜ್ಜೀವನ ಕಾಲ.

೨. ೧೮ ಮತ್ತು ೧೯ನೇ ಶತಮಾನದಲ್ಲಿ ಆರಂಭವಾದಂತಹ ಪಶ್ಚಿಮ ರಾಷ್ಟ್ರಗಳಲ್ಲಿ ಆದಂತಹ ಕೈಗಾರೀಕರಣದ ಪರಿಣಾಮವಾಗಿ ಆಧುನಿಕತೆ ಬೆಳೆಯಿತು.

ಭಾರತದ ಸಂದರ್ಭದಲ್ಲಿ ೧೮ ಮತ್ತು ೧೯ನೇ ಶತಮಾನದಲ್ಲಿ ಪಶ್ಚಿಮ ರಾಷ್ಟ್ರಗಳಲ್ಲಿ ಆದಂತಹ ಕೈಗಾರಿಕಾ ಕ್ರಾಂತಿ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆದಂತಹ ಪ್ರಗತಿಯನ್ನು ಆಧುನಿಕತೆ ಎಂದು ಪರಿಭಾವಿಸಲಾಗಿದೆ. ಆರ್ಥಿಕ ಮತ್ತು ಔದ್ಯೋಗಿಕ ವಲಯಗಳಲ್ಲಿ ಬೃಹತ್ ಯಂತ್ರಗಳ ಆವಿಷ್ಕಾರದಿಂದಾಗಿ ದೊಡ್ಡ ಪ್ರಮಾಣದಲ್ಲಿ ಔದ್ಯೋಗಿಕರಣ ಆರಂಭವಾಯಿತು. ಇಂತಹ ಆಧುನಿಕತೆಯನ್ನು ವಸಾಹತುಶಾಹಿ ಆಳ್ವಿಕೆಯ ಪರಿಣಾಮದಿಂದಾಗಿ ಭಾರತದ ಮೇಲೂ ಪ್ರಭಾವವನ್ನು ಬೀರುವುದರ ಮೂಲಕ ಇಲ್ಲಿಯೂ ಆಧುನಿಕತೆಯು ತನ್ನ ಹರವನ್ನು ವಿಸ್ತರಿಸಿಕೊಂಡಿತು.

ಪಶ್ಚಿಮದ ದೇಶಗಳ ಸಂದರ್ಭದಲ್ಲಿ ಆಧುನಿಕತೆಯ ಪರಿಣಾಮವು ಏಕಮುಖಿ ನೆಲೆಯಲ್ಲಿ ಯಶಸ್ವಿಯನ್ನು ಪಡೆದರೆ; ಭಾರತದಂತಹ ವೈವಿಧ್ಯಮಯ ರಾಷ್ಟ್ರದಲ್ಲಿ ಅದರ ಸ್ವರೂಪ ಬಹಳ ಭಿನ್ನವಾಗಿಯೇ ರೂಪುಗೊಂಡಿದ್ದನ್ನು ಕಾಣಲು ಸಾಧ್ಯ. ಪಶ್ಚಿಮದ ದೇಶಗಳಲ್ಲಿ ಏಕರೂಪದ ಧರ್ಮವಿದ್ದ ಕಾರಣ, ಅಲ್ಲಿ ಇದ್ದದ್ದು ಉಳ್ಳವರು ಮತ್ತು ಇಲ್ಲದವರ ನಡುವಿನ ವರ್ಗಸಂಘರ್ಷ ಮತ್ತು ಅಸಮಾನತೆ ಮಾತ್ರ ಎದ್ದು ಕಾಣುತ್ತಿತ್ತು. ಕೈಗಾರಿಕೆಗಳಿಂದ ಉಂಟಾಗಿದ್ದ ಮಾಲೀಕ–ಕಾರ್ಮಿಕ, ಶ್ರೀಮಂತ–ಬಡವ, ಉಳ್ಳವರು–ಇಲ್ಲದವರು ಎಂಬಂತಹ ಆರ್ಥಿಕ ಪರಿಸ್ಥಿತಿಯ ಕಾರಣಕ್ಕಾಗಿ ಸಮಾಜದಲ್ಲಿ ಮಧ್ಯಮ ವರ್ಗವು ಹುಟ್ಟಿಕೊಂಡು ಹೊಸ ಕ್ರಾಂತಿಯೊಂದಕ್ಕೆ ಬುನಾದಿಯಾಗಿ ಆಧುನಿಕತೆಯು

ಕಂಡುಬಂದಿತು. ಮಧ್ಯಮ ವರ್ಗದವರಲ್ಲಿದ್ದ ಬಡತನ, ಶೋಷಣೆ, ನಿರುದ್ಯೋಗ ಸಮಸ್ಯೆಗಳು ಪಶ್ಚಿಮದ ದೇಶಗಳಲ್ಲಿ ಜನರನ್ನು ತೀವ್ರವಾಗಿ ಕಾಡಿದ್ದರ ಪರಿಣಾಮವಾಗಿ ಆಧುನಿಕತೆಯು ಹುಟ್ಟಿಕೊಳ್ಳಲು ಪ್ರೇರಣೆಯಾಯಿತು. ಆದರೆ ಈ ಆಧುನಿಕತೆಯು ಭಾರತದ ಸಂದರ್ಭಕ್ಕೆ ಬರುವಲ್ಲಿ ಅನೇಕ ಸ್ಥಿತ್ಯಂತರಗಳನ್ನು ಮೂಲದಲ್ಲಿ ಕಂಡುಕೊಂಡಿತು. ಕಾರಣ ಭಾರತವು ಬಹುಮುಖಿ ಆಯಾಮಗಳನ್ನು ಹೊಂದಿದ ದೇಶ. ಇಲ್ಲಿ ವೈವಿಧ್ಯತೆಯನ್ನು ಅನೇಕ ನೆಲೆಗಳಲ್ಲಿ ಗುರುತಿಸುವುದಕ್ಕೆ ಸಾಧ್ಯ. ಮುಖ್ಯವಾಗಿ ಭಾರತವು ಜಾತಿಯನ್ನು ಮೂಲ ಮಾಡಿಕೊಂಡು ಆಳವಾಗಿ ಬೇರೂರಿರುವ ಸಮಾಜ. ಆದ್ದರಿಂದ ಇಲ್ಲಿ ಆಧುನಿಕತೆಯು ಪ್ರವೇಶ ಪಡೆದಾಗ ಅದು ಸಮಾಜದಲ್ಲಿ ಬೇರೆಯದೇ ನಿಲುವನ್ನು ಪಡೆದದ್ದನ್ನು ಗುರುತಿಸಬಹುದಾಗಿದೆ.

ಭಾರತವನ್ನು ಬ್ರಿಟೀಷರು ತಮ್ಮ ವಸಾಹತು ದೇಶವನ್ನಾಗಿ ಮಾಡಿಕೊಂಡ ನಂತರದಲ್ಲಿ ಈ ಆಧುನಿಕತೆಯನ್ನು ಹಂತ ಹಂತವಾಗಿ ಅವರ ಅಧಿಕಾರವನ್ನು ನಡೆಸುವ ಪರಿಣಾಮವಾಗಿ ಇಲ್ಲಿ ಜಾರಿಗೆ ತಂದರು. ವ್ಯಾಪಾರದ ದೃಷ್ಟಿಕೋನವನ್ನು ಹೊಂದಿದ್ದ ಬ್ರಿಟೀಷರು ಭಾರತಕ್ಕೆ ಬಂದ ನಂತರದಲ್ಲಿ ಇಲ್ಲಿ ಕಂಡು ಬಂದ ಅನೇಕ ಆಂತರಿಕ ಸಮಸ್ಯೆಗಳಾದ ಜಾತಿ, ಧರ್ಮ, ಪುರೋಹಿತಶಾಹಿ ನೀತಿ, ಜಮೀನ್ದಾರಿ ಪದ್ಧತಿ ಮುಂತಾದವುಗಳಿಂದ ಭಾರತವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇದರ ಪರಿಣಾಮವಾಗಿ ಭಾರತದಲ್ಲಿ ಇದುವರೆಗೂ ಜಾರಿಯಲ್ಲಿದ್ದ ಜಮೀನ್ದಾರಿ ವ್ಯವಸ್ಥೆಗೆ ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಯು ರೂಪುಗೊಳ್ಳಲಿಕ್ಕೆ ಆಧುನಿಕತೆಯು ಮುಖ್ಯ ಕಾರಣವಾಯಿತು. "ಭಾರತ ಯುರೋಪಿನಂತೆ ಆಧುನಿಕವಾಗುವುದರಲ್ಲಿ ಆತಂಕಗಳೇ ಜಾಸ್ತಿ. ಏಕೆಂದರೆ ಅಲ್ಲಿಯಂತರ ನೇಷನ್ ಸ್ಟೇಟ್ ಆಗಿ ಭಾರತವಿಲ್ಲ. ಇಲ್ಲಿನ ಅನೇಕ ಧರ್ಮ, ಸಮುದಾಯ, ಜಾತಿ, ಸಂಸ್ಕೃತಿ ಸಂದರ್ಭದಲ್ಲಿ ಯುರೋಪಿನಲ್ಲಿ ಒಂದೇ ಧರ್ಮ, ಸಮುದಾಯ, ವರ್ಗ ಸಂಸ್ಕೃತಿಗೆ ಸೇರಿದವರಲ್ಲ. ಹಾಗಾಗಿ ಅಪಾಯಗಳ ಒಳಗೊಳ್ಳುವಿಕೆ ಸಾಧ್ಯತೆ ದಟ್ಟವಾಗಿದೆ. ಆಧುನಿಕ ನಾಗರೀಕತೆ ನಮಗೆ ಕೆಟ್ಟದ್ದು ಮಾತ್ರವಲ್ಲ, ಅದು ಬ್ರಿಟೀಷರಿಗೂ ಅದು ಕೆಟ್ಟದ್ದು"[೧] ಎಂದು ಯು.ಆರ್.ಅನಂತಮೂರ್ತಿ ಅವರ ಮಾತು ಇಲ್ಲಿ ಸಮಂಜಸವೆನಿಸುತ್ತದೆ.

ಆಧುನಿಕತೆಯು ಭಾರತಕ್ಕೆ ಬಂದಂತಹ ಸಂದರ್ಭದಲ್ಲಿ ಅದು ಅನೇಕ ಪರಿಣಾಮಗಳನ್ನು ಸಾಂಸ್ಕೃತಿಕ ಜಗತ್ತಿನಲ್ಲಿ ಉಂಟು ಮಾಡಿತು. ಜಮೀನ್ದಾರಿ ವ್ಯವಸ್ಥೆಯ ಬದಲಾಗಿ ಇಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಮತ್ತು ಕಾರ್ಖಾನೆಗಳನ್ನು ಸ್ಥಾಪಿಸಲು

ಬಂಡವಾಳ ಹೂಡಬೇಕಾದ ಪರಿಸ್ಥಿತಿಯು ಉಂಟಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ವೃತ್ತಿಗಳು ನಾಶವಾಗಿ ಜನರು ಉದ್ಯೋಗಗಳನ್ನು ಅರಸಿಕೊಂಡು ನಗರಗಳತ್ತ ವಲಸೆ ಹೋಗತೊಡಗಿದರು. ಇದರಿಂದ ನಗರೀಕರಣವು ಆರಂಭವಾಗಿ ಗ್ರಾಮ ವ್ಯವಸ್ಥೆಯು ತನ್ನ ಪರಂಪರೆ, ಸಂಪ್ರದಾಯ, ಆಚಾರ-ವಿಚಾರಗಳನ್ನು ಕಳೆದುಕೊಂಡು ಪಶ್ಚಿಮರ ಹೊರ ಸಂಸ್ಕೃತಿಯನ್ನು ಬಹಳ ಸುಲಭವಾಗಿ ಸ್ವೀಕರಿಸಿದರು. ಇದರ ಪರಿಣಾಮವನ್ನು ಗಿರಡ್ಡಿಯವರು ಹೀಗೆ ಗುರ್ತಿಸುತ್ತಾರೆ. "ವಸಾಹತು ನೀತಿಯಿಂದ ಭಾರತದಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿ ಮಾಡುವ ಎಲ್ಲವನ್ನೂ ಇಲ್ಲಿ ಮಾಡಿತು. ತನ್ನದೇ ಆದ ಆಡಳಿತ, ನ್ಯಾಯ, ಶಿಕ್ಷಣ ಪದ್ಧತಿಗಳನ್ನು ಭಾರತದ ಮೇಲೆ ಹೇರಿತು. ತನ್ನ ವಿಚಾರ ಪ್ರಣಾಲಿ, ತಂತ್ರಜ್ಞಾನಗಳನ್ನು ಇಲ್ಲಿ ಪ್ರಸಾರ ಮಾಡಿತು. ತನ್ನ ಜೀವನವಿಧಾನ, ಸಂಸ್ಕೃತಿ, ಸಾಹಿತ್ಯ, ಕಲೆ ಇತ್ಯಾದಿಗಳೆಲ್ಲವನ್ನೂ ಆದರ್ಶವಾಗಿ ಬಿಂಬಿಸಿತು. ತನ್ನದೆಲ್ಲವೂ ಶ್ರೇಷ್ಠ ಎಂಬ ದುರಹಂಕಾರಿ ನಂಬಿಕೆಯಿಂದ ಭಾರತೀಯರಿಗೆ ಕಲಿಸಿತು. ಭಾರತ ಒಂದು ಅನಾಗರೀಕ ಸ್ಥಿತಿಯಲ್ಲಿರುವ ದೇಶವೆಂದು ಗಟ್ಟಿಯಾಗಿ ನಂಬಿಕೊಂಡು ಅದನ್ನು ಸುಸಂಸ್ಕೃತಗೊಳಿಸುವುದು ತನ್ನ ಕರ್ತವ್ಯವೆಂದು ಭಾವಿಸಿತು."[೨]

ಗಿರಡ್ಡಿಯವರ ಈ ಮಾತನ್ನು ಒಪ್ಪಬೇಕಾಗುತ್ತದೆ. ಏಕೆಂದರೆ ಬ್ರಿಟೀಷರು ಭಾರತಕ್ಕೆ ಬಂದ ಹೊಸತರಲ್ಲಿ ಕೇವಲ ವ್ಯಾಪಾರದ ಉದ್ದೇಶದಿಂದ ಮಾತ್ರ ಬಂದವರು. ಕಾಲಾನಂತರದಲ್ಲಿ ಭಾರತದಲ್ಲಿದ್ದ ರಾಜಪ್ರಭುತ್ವ, ಸಾಮ್ರಾಜ್ಯಶಾಹಿ, ಜಮೀನ್ದಾರಿ ನೀತಿಗಳಿಂದ ಇಲ್ಲಿ ಅಧಿಕಾರವನ್ನು ಹಿಡಿಯುವ ಕುತಂತ್ರವನ್ನು ರೂಪಿಸಿ ಭಾರತವನ್ನು ವಸಾಹತುವನ್ನಾಗಿಸಿಕೊಂಡರು. ಬ್ರಿಟೀಷರು ಭಾರತಕ್ಕೆ ಬಂದಾಗ ಇಲ್ಲಿನ ಆಚಾರ-ವಿಚಾರ, ಜಾತಿ, ಧರ್ಮ, ಜಮೀನ್ದಾರಿ ವ್ಯವಸ್ಥೆ ಮುಂತಾದವುಗಳನ್ನು ಕಂಡು ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ. ಅವರಿಗೆ ನಾಗರೀಕತ್ವ ಇಲ್ಲ ಎನ್ನುವ ಮೂಲಕವೇ ಭಾರತೀಯರನ್ನು ಶೋಷಣೆಗೆ ಗುರಿಪಡಿಸಿದರು. ಈ ಹಿನ್ನೆಲೆಯಲ್ಲಿ ತಮ್ಮ ಅಧಿಕಾರವನ್ನು ಸುಸಜ್ಜಿತವಾಗಿ ನಡೆಸಲು ಅವರಿಗೆ ಜನಸಂಖ್ಯೆಯ ಬಲ ಬೇಕಾಯಿತು. ಆದ ಕಾರಣಕ್ಕಾಗಿ ಅವರು ಪಾಶ್ಚಾತ್ಯ ಶಿಕ್ಷಣವನ್ನು, ರೈಲು, ಅಂಚೆ ಮುಂತಾದ ಹೊಸ ಹೊಸ ಆವಿಷ್ಕಾರಗಳನ್ನು ಭಾರತದಲ್ಲಿ ಪರಿಚಯಿಸಿದರು.

ವಸಾಹತುಶಾಹಿಯ ಪರಿಣಾಮವಾಗಿ ಭಾರತದಲ್ಲಿ ಆಧುನಿಕತೆಯು ಮುಖ್ಯವಾಗಿ ಈ ಅಂಶಗಳನ್ನು ಜಾರಿಗೆ ತಂದಿತು. ಇದು ಭಾರತೀಯರನ್ನು ಬ್ರಿಟೀಷರ ವಸಾಹತು ನೀತಿಯ ವಿರುದ್ಧವಾಗಿ ಬೆಳೆಯುವಂತೆ ಮಾಡುವಲ್ಲಿ ಸಹಕಾರಿಯಾಯಿತು. ರಾಷ್ಟ್ರೀಯತೆ,

ಸುಧಾರಣಾವಾದ, ಪರಂಪರೆಯ ಸ್ಥಾಪಿತ ಮೌಲ್ಯಗಳ ಮೇಲೆ ಪರಿಣಾಮ, ಉದಾರ ಮಾನವತಾವಾದ ಹಾಗೂ ವಿಚಾರವಾದ ಎಂಬ ಅಂಶಗಳು ಇಂಗ್ಲಿಷ್ ಅಥವಾ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದಾಗಿ ಭಾರತೀಯರಲ್ಲಿ ವೈಚಾರಿಕ ದೃಷ್ಟಿಕೋನವನ್ನು ರೂಪಿಸಿಕೊಳ್ಳುವಲ್ಲಿ ಸಹಕಾರಿಯಾಯಿತು. "ರಾಷ್ಟ್ರೀಯತೆಯೆನ್ನುವುದು ಮೂಲತಃ ಆಧುನಿಕ ಬಂಡವಾಳಶಾಹಿ ಪರಿಕಲ್ಪನೆ. ಜಗತ್ತಿನ ಬಂಡವಾಳಶಾಹಿಗಳ ಮಾರುಕಟ್ಟೆಯಾಗಿ ಪರಿವರ್ತನೆಯಾಗುತ್ತಿದ್ದ ಕಾಲ ಅದು. 'ರಾಷ್ಟ್ರೀಯತೆ ಹುಟ್ಟಿದ್ದೇ ಮಾರುಕಟ್ಟೆ'ಯಲ್ಲಿ ಎನ್ನುವ ಲೆನಿನ್ನನ ಮಾತುಗಳು ಈ ಹಿನ್ನಲೆಯಲ್ಲಿ ಅರ್ಥಪೂರ್ಣ. ಪಾಶ್ಚಾತ್ಯ ಉದಾರವಾದದ ಜೊತೆಜೊತೆಗೆ ರಾಷ್ಟ್ರೀಯತೆ, ಜನತಂತ್ರ ಬೆಳೆದವು. ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳಶಾಹಿಯ ಹುಟ್ಟು ಬೆಳವಣಿಗೆಗಳೇ ವಸಾಹತುಶಾಹಿಯ ಬೆಳವಣಿಗೆಗೆ ಮತ್ತು ಭಾರತದಂತಹ ಅನೇಕ ದೇಶಗಳು ವಸಾಹತುಗಳಾಗಲು ಮುಖ್ಯ ಕಾರಣಗಳು"[೩] ಎಂದು ಎಸ್.ಚಂದ್ರಶೇಖರ್ ತಿಳಿಸುತ್ತಾರೆ.

ಇದೇ ಮುಂದೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನವೋದಯ ಕಾಲಘಟ್ಟದಲ್ಲಿನ ಆಶಯಗಳನ್ನು ಮುಂದಿಟ್ಟುಕೊಂಡು ಕುವೆಂಪು, ಬೇಂದ್ರೆ, ಮಾಸ್ತಿ, ಗಳಗನಾಥ ಮುಂತಾದವರು ಸಾಹಿತ್ಯವನ್ನು ರಚಿಸಿದರು. ಕನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಈ ವಸಾಹತುಶಾಹಿಯ ಪ್ರತಿರೋಧವಾಗಿ ಅದು ಹೇರಿದ ಅನೇಕ ನೀತಿಗಳನ್ನು ಸಾಹಿತ್ಯದ ಮುಖೇನ ಪ್ರತಿಭಟಿಸಿದರು. ನವೋದಯ ಕಾಲದ ಲಕ್ಷಣಗಳನ್ನು ಗುರುತಿಸುವಾಗ ಇಂತಹ ರಾಷ್ಟ್ರೀಯತೆ, ಉದಾರವಾದ, ವೈಚಾರಿಕತೆ, ಸುಧಾರಣಾವಾದ, ಕಲ್ಪನೆ, ದೇವರು ಮುಂತಾದವುಗಳನ್ನು ಸಾಹಿತ್ಯದಲ್ಲಿ ಕಾಣಲು ಸಾಧ್ಯವಾಯಿತು.

ನಟರಾಜ್ ಹುಳಿಯಾರ್ ಅವರು ಆಧುನಿಕತೆಯನ್ನು ಮುಖ್ಯವಾಗಿ ೩ ನೆಲೆಗಳಲ್ಲಿ ಗುರುತಿಸಿದ್ದಾರೆ. "ಒಂದು ಕಾಲದ ಜನ ೧) ಭೂತದೊಂದಿಗೆ ತಮ್ಮ ಸಂಬಂಧವನ್ನು ಪುರ್ನವ್ಯಾಖ್ಯಾಸಿಕೊಂಡಾಗ ಅಥವಾ ೨) ಭೂತದೊಂದಿಗೆ ತಮ್ಮ ಸಂಬಂಧವನ್ನು ಕಡಿದುಕೊಂಡಾಗ ಅಥವಾ ೩) ಭೂತದೊಂದಿಗೆ ತಮ್ಮ ಸಂಬಂಧವನ್ನು ಪುರ್ನ-ಸ್ಥಾಪಿಸಿಕೊಳ್ಳಲೆತ್ನಿಸಿದಾಗ ಈ ಮೂರು ಹಂತದಲ್ಲಿ ಆಧುನಿಕತೆ ಎಂಬ ಪರಿಕಲ್ಪನೆ ಇತಿಹಾಸದಲ್ಲಿ ಹೆಚ್ಚು ಚಾಲ್ತಿಗೆ ಬಂದಿದೆ"[೪] ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಒಟ್ಟಿನಲ್ಲಿ ಆಧುನಿಕತೆಯು ಭಾರತೀಯ ಸಂದರ್ಭದಲ್ಲಿ ವೈಚಾರಿಕತೆ, ಸುಧಾರಣಾವಾದ, ಶಿಕ್ಷಣ ಮುಂತಾದವುಗಳ ಮೂಲಕ ಸಮಾಜದಲ್ಲಿ ಅನೇಕ ಪಲ್ಲಟಗಳನ್ನು ಸೃಷ್ಟಿಸುವಲ್ಲಿ ಕಾರಣವಾಯಿತು. ಉದಾಹರಣೆಗೆ ಬಾಲ್ಯವಿವಾಹ, ಜಾತಿಪದ್ಧತಿ, ಸತಿಸಹಗಮನ ಪದ್ಧತಿ

ಮುಂತಾದ ಅನೇಕ ಅನಿಷ್ಠ ಪದ್ಧತಿಗಳನ್ನು ಇಲ್ಲಿನ ಜನರು ಪ್ರಶ್ನಿಸುವ ಆ ಮೂಲಕ ಸ್ಥಾಪಿತ ಹಿತಾಸಕ್ತಿಗಳನ್ನು ಪ್ರತಿರೋಧಿಸುವ ಕೆಲಸವೂ ಆಯಿತು. ಅಂತೆಯೇ ಆಧುನಿಕತೆ ಸಮಾಜದಲ್ಲಿ ಈವರೆಗೂ ಇದ್ದಂತಹ ಜಮೀನ್ದಾರಿ ವ್ಯವಸ್ಥೆಯ ಮುಂದುವರೆದ ಭಾಗದಂತೆ ಬಂಡವಾಳಶಾಹಿ ವ್ಯವಸ್ಥೆಯನ್ನು ರೂಪಿಸಿ ಭಾರತದ ಬಹುತ್ವವನ್ನು ಏಕರೂಪಿಗೊಳಿಸುವ ಪ್ರಯತ್ನವನ್ನು ಮಾಡಿತೆಂದು ಹೇಳಬಹುದು. ಇಲ್ಲಿನ ಅನೇಕ ಜನಸಮುದಾಯಗಳ ಸಂಸ್ಕೃತಿ, ಆಚಾರ-ವಿಚಾರ, ಕಲೆ, ಹಳ್ಳಿಜೀವನದಿಂದ ವಿಮುಖರಾಗಿ ನಗರಗಳತ್ತ ವಲಸೆ ಹೊರಟರು. ಪರಂಪರಾನುಗತವಾಗಿ ಬೆಳದುಬಂದಿದ್ದಂತಹ ಅನೇಕ ಜನಪದ ಆಚರಣೆಗಳು ಈ ಹಂತದಲ್ಲಿ ಹಿಂದೆ ಸರಿದು ಆ ಜಾಗದಲ್ಲಿ ಹೊಸ ವೈಜ್ಞಾನಿಕ ಜೀವನ ಕ್ರಮದ ಅಂಶಗಳಾದ ಟಿ.ವಿ. ಸಿನಿಮಾ, ರೇಡಿಯೋ, ಇಂಟರ್‌ನೆಟ್, ಮೊಬೈಲ್‌ಗಳು ಮುನ್ನೆಲೆಗೆ ಬಂದಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ ಎನ್ನುವುದನ್ನು ಡಿ.ಆರ್.ನಾಗರಾಜ ಅವರು ಹೀಗೆ ಪ್ರತಿಪಾದಿಸುತ್ತಾರೆ. "ಆಧುನಿಕತೆ ಎಂದರೆ ಬಹುಮುಖಿ ಪರಂಪರೆಗಳ ವಿನಾಶ ಎಂದು ನಾನು ಕರೆಯುತ್ತೇನೆ. ಆಧುನಿಕತೆಯೆಂದರೆ ಅದೊಂದು ಬಗೆಯ ಕಣ್ಮರೆ. ಅದು ತೋಂಡಿ ಸಂಪ್ರದಾಯದ ಅಧಿಕೃತ ಅಸ್ತಿತ್ವದ ಕಣ್ಮರೆ. ಅದು ಪರಿವರ್ತನಾಶೀಲ ಶಕ್ತಿಯ ಗೈರು ಹಾಜರಾತಿ"[೫] ಎಂದಿರುವುದು ಇದೇ ಹಿನ್ನೆಲೆಯಲ್ಲಿಯೇ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಜಾಗತೀಕರಣದ ಸಂದರ್ಭದಲ್ಲಿ ಆಧುನಿಕತೆ

ಕೈಗಾರೀಕರಣದ ನೀತಿಯಿಂದಾಗಿ ಆಧುನಿಕತೆಯು ಭಾರತದಂತಹ ವಸಾಹತುಶಾಹಿ ದೇಶದಲ್ಲಿ ತನ್ನ ಪ್ರವೇಶವನ್ನು ಪಡೆದುಕೊಂಡಿತು. ಅಂದರೆ ಇದು ಮುಖ್ಯವಾಗಿ ಭಾರತವನ್ನು ವಸಾಹತು ದೇಶವನ್ನಾಗಿ ಮಾಡಿಕೊಂಡು ಆ ಮೂಲಕ ಸಮಾಜದಲ್ಲಿ ಶಿಕ್ಷಣ, ವಿಜ್ಞಾನ-ತಂತ್ರಜ್ಞಾನದಂತಹ ಅನೇಕ ಹೊಸ ಪರಿಕಲ್ಪನೆಗಳನ್ನು ಸೃಷ್ಟಿಸಿದ್ದರಿಂದ ಭಾರತೀಯರಲ್ಲಿ ವಿಚಾರಶೀಲ ಪ್ರವೃತ್ತಿಯೂ ಬೆಳೆಯಿತು. ಇದು ಮುಖ್ಯವಾಗಿ ಭಾರತೀಯ ಸಾಂಪ್ರದಾಯಿಕ ಸಮಾಜವು ಇದುವರೆಗೂ ನಡೆಸಿಕೊಂಡು ಬಂದಿದ್ದ ಅನೇಕ ಮೂಢನಂಬಿಕೆಗಳನ್ನು, ಆಚರಣೆಗಳಾದ ಬಾಲ್ಯ ವಿವಾಹ, ಸತಿಪದ್ಧತಿ, ಜಾತಿ ವ್ಯವಸ್ಥೆ, ಪುರೋಹಿತಶಾಹಿ ನೀತಿಗಳ ಜೊತೆಗೆ ಮುಂತಾದ ಅನೇಕ ಸಮಸ್ಯೆಗಳನ್ನು ಪ್ರಶ್ನಿಸುವ ಮೂಲಕ ಅನೇಕ ಸುಧಾರಣೆಗಳನ್ನು ತರುವಲ್ಲಿ ಸಾಧ್ಯವಾಯಿತು.

"ಕೈಗಾರೀಕರಣ ಮತ್ತು ಜಾಗತೀಕರಣಗಳು ಪ್ರತ್ಯೇಕ ಪರಿಕಲ್ಪನೆಗಳು. ಎರಡೂ ಒಂದೇ ಎಂಬುದಾಗಿ ಅಥವಾ ಕೈಗಾರೀಕರಣದ ವಿಸ್ತೃತಭಾಗವೇ ಜಾಗತೀಕರಣ ಎಂಬುದಾಗಿ

ಪ್ರತಿಪಾದಿಸುವುಂಟು. ಕೆಲವು ಚರ್ಚೆಗಳಲ್ಲಿ ಇಂಥ ಪ್ರತಿಪಾದನೆಯ ಅಂಶಗಳು ಇಣುಕುತ್ತಿರುವುದನ್ನು ನಾನು ಕಂಡಿದ್ದೇನೆ ನಿಜ; ಕೈಗಾರೀಕರಣ ಮತ್ತು ಜಾಗತೀಕರಣ ಎರಡು ನೆಲೆಗಳಿಗೆ ಬಂಡವಾಳ ತೊಡಗಿಸುವಿಕೆಯು ಒಂದು ಮುಖ್ಯ ಕ್ರಿಯೆ. ಆದರೆ ಪರಿಣಾಮದಲ್ಲಿ ಸಾಕಷ್ಟು ಅಂತರವಿರುವುದನ್ನು ಕಾಣಬಹುದು”[೬] ಎಂದು ಬರಗೂರು ರಾಮಚಂದ್ರಪ್ಪನವರು ಈ ಎರಡು ಪರಿಕಲ್ಪನೆಗಳ ಬಗೆಗಿನ ತಮ್ಮ ಭಿನ್ನಾಭಿಪ್ರಾಯವನ್ನು ಹೀಗೆ ವಿವರಿಸುತ್ತಾರೆ.

ನಮ್ಮ ದೇಶವು ಗುಡಿ ಮತ್ತು ಕುಲಕಸುಬನ್ನು ಹೊಂದಿದ್ದ ದೇಶವಾಗಿತ್ತು. ಕುಲಕಸುಬು ಗುಡಿಕೈಗಾರಿಕೆಯ ಒಂದು ಭಾಗವಾಗಿ ಸಮಾಜದಲ್ಲಿ ಚಾಲ್ತಿಯಲ್ಲಿತ್ತು. ಕೈಗಾರೀಕರಣವು ಭಾರತದಲ್ಲಿ ಆರಂಭಗೊಂಡ ನಂತರದಲ್ಲಿ ಗುಡಿ ಕೈಗಾರಿಕೆಗೆ ಇದರಿಂದ ಹಿನ್ನೆಡೆಯಾದರೂ ಕುಲಮೂಲ ಕಸುಬಿನ ಕಲ್ಪನೆಯನ್ನು ದೊಡ್ಡ ಪ್ರಮಾಣದಲ್ಲಿ ಉಲ್ಲಂಘಿಸಿದ್ದು ಇದರ ಮುಖ್ಯ ಬೆಳವಣಿಗೆಯಾಗಿದೆ. ಕಸುಬಿನ ಮೂಲಕ ಕುಲ ಮೂಲವನ್ನು ಅರಿಯುವ ಅದನ್ನು ಇನ್ನೂ ಸಮಾಜದಲ್ಲಿ ಆಳವಾಗಿ ಬೇರೂರುವಂತೆ ಮಾಡುವ ಇಂತಹ ವ್ಯವಸ್ಥೆಯನ್ನು ಧಿಕ್ಕರಿಸುವ ನಿಟ್ಟಿನಲ್ಲಿ ಕೈಗಾರೀಕರಣದಿಂದ ಆದಂತಹ ಬಹುದೊಡ್ಡ ಪಲ್ಲಟವೂ ಆಗಿದೆ. ಈ ಎಲ್ಲಾ ಅಂಶಗಳು ಇದುವರೆಗೂ ಸಮಾಜದಲ್ಲಿ ಇದ್ದಂತಹ ಜಾತಿವ್ಯವಸ್ಥೆಗೆ ಆಳದಲ್ಲಿ ದೊಡ್ಡ ಪೆಟ್ಟನ್ನು ನೀಡಿದ್ದಂತೂ ನಿಜ. ಅಲ್ಲದೇ ಎಲ್ಲರನ್ನೂ ಒಂದೇ ಸೂರಿನಡಿ ಉದ್ಯೋಗದಲ್ಲಿ ತೊಡಗುವಂತೆ ಮಾಡಿದ್ದು ಕೈಗಾರೀಕರಣ ನೀತಿಯಿಂದ ಸಾಧ್ಯವಾಯಿತು. ಅಲ್ಲದೇ ಕೈಗಾರೀಕರಣ ನೀತಿಯೂ ಮಿಶ್ರ ಆರ್ಥಿಕ ವ್ಯವಸ್ಥೆಗೆ ಮತ್ತು ಸಂವಿಧಾನದ ಆಶಯುಗಳಿಗೆ ವಿರುದ್ಧವಾಗಿರಲಿಲ್ಲ ಎನ್ನುವುದು ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯ.

ಇನ್ನೂ ಜಾಗತೀಕರಣವನ್ನು ಕುರಿತಂತೆ ಅವರು ಮುಂದುವರೆದು ಅದು ಸಂವಿಧಾನದ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿದೆ. ಮಿಶ್ರ ಆರ್ಥಿಕ ಪದ್ಧತಿಯನ್ನು ಉಲ್ಲಂಘಿಸಿ ತಾನೇ ಆರ್ಥಿಕ ನೀತಿಯನ್ನು ರೂಪಿಸುತ್ತಿದೆ. ತಾನೇ ಇಡೀ ಸಮಾಜದ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸುವ ಮೂಲಕ ಹಿಡಿತವನ್ನು ಸಾಧಿಸುತ್ತಿದೆ. ಅಲ್ಲದೇ ಖಾಸಗೀಕರಣವು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದು, ಸಂವಿಧಾನದ ಸಮಾನತೆಯ ಆಶಯಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದೆ. ನೆಲಮೂಲದ ಸಂಸ್ಕೃತಿಗೆ, ಚಿಂತನೆಗೆ ಧಕ್ಕೆ ತರುವಷ್ಟು ಪ್ರಬಲವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಜ್ಞಾನದ ಧಿಕ್ಕನ್ನೇ ನಿಯಂತ್ರಿಸುವಷ್ಟು ಬಲಾಢ್ಯವಾಗಿದೆ ಎಂದಿದ್ದಾರೆ.

ಜಾಗತೀಕರಣ ಸಂದರ್ಭದ ನಂತರದಲ್ಲಿ ಭಾರತದಂತಹ ತೃತೀಯ ರಾಷ್ಟ್ರಗಳ ಮೇಲೆ ವಿಶ್ವಸಂಸ್ಥೆ, ವಿಶ್ವಬ್ಯಾಂಕ್, ಐ.ಎಂ.ಎಫ್.ಗಳಂತಹ ಸಂಸ್ಥೆಗಳು ಹೇರಿದ ಆರ್ಥಿಕ,

ಸಾಮಾಜಿಕ, ಶೈಕ್ಷಣಿಕ, ರಾಜಕೀಯ ನೀತಿಗಳು ಸಮಾಜವನ್ನು ಬೇರೆಯದೇ ಆದ ಪಲ್ಲಟಗಳಿಗೆ ಒಳಗಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಅಲ್ಲದೇ ಜಾಗತೀಕರಣವು ಬಹುಮುಖ್ಯವಾಗಿ 'ವಿಶ್ವವೇ ಒಂದು ಗ್ರಾಮದಂತಿದೆ' ಎಂಬ ಹೇಳಿಕೆಯ ಮೂಲಕ ಇಡೀ ಜಗತ್ತನ್ನು ಮುಂದುವರೆದ ದೇಶಗಳು ಮುಕ್ತ ಮಾರುಕಟ್ಟೆಗೆ ತೊಡಗುವಂತೆ ಪ್ರೇರೇಪಿಸಿತು. ಈ ನಿಟ್ಟಿನಲ್ಲಿ ಆರ್ಥಿಕವಾಗಿ ಹಿಂದುಳಿದ ತೃತೀಯ ರಾಷ್ಟ್ರಗಳು ಇಂತಹ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವ ಮುಖಾಂತರ ತಮ್ಮ ಒಪ್ಪಿಗೆಯನ್ನು ಸೂಚಿಸಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ತೃತೀಯ ದೇಶಗಳಲ್ಲಿ ನಿರ್ಮಿಸಲಾಯಿತು. ಇದು ಅಮೇರಿಕಾ ಅಥವಾ ಮುಂದುವರೆದ ದೇಶಗಳು ನವವಸಾಹತುಶಾಹಿ ವ್ಯವಸ್ಥೆಯಿಂದ ಬಂಡವಾಳಶಾಹಿಗಳು ಅಭಿವೃದ್ಧಿಯನ್ನು ಮುನ್ನೆಲೆ ಮಾಡಿಕೊಂಡು ಕಾರ್ಪೋರೇಟ್ ಕಂಪೆನಿಗಳು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ತೃತೀಯ ರಾಷ್ಟ್ರಗಳಲ್ಲಿ ವ್ಯಾಪಾರ ವ್ಯವಹಾರದಲ್ಲಿ ತೊಡಗಿದವು.

ಸಾಂಪ್ರದಾಯಿಕ ವ್ಯವಸ್ಥೆಯಿಂದ ಸಮಾಜವನ್ನು ಬೇರೆಡೆಗೆ ಕೊಂಡೊಯ್ಯುವ ಆಧುನಿಕತೆಯು ಸಮಾಜದಲ್ಲಿ ಅಥವಾ ಜನರಲ್ಲಿ ವೈಜ್ಞಾನಿಕ, ವೈಚಾರಿಕ ಮನೋಭಾವವನ್ನು ಮೂಡಿಸಿ, ಅವರಲ್ಲಿ ಸುಧಾರಣೆಯನ್ನು ತರುವ ಪ್ರಯತ್ನವಾಗಿತ್ತು ಎಂದು ಸರಳವಾಗಿ ವಿವರಿಸಿಕೊಳ್ಳಬಹುದು. ಆದರೆ ಜಾಗತೀಕರಣವು ಉದಾರೀಕರಣ, ಖಾಸಗೀಕರಣದ ಮೂಲಕ ಜಾಗತಿಕ ವ್ಯಾಪಾರಕ್ಕೆ ತೆರೆದುಕೊಳ್ಳುವ ಮೂಲಕ ಸಮಾಜದ ಸಂಸ್ಕೃತಿಯ ಜೊತೆಗೆ ಎಲ್ಲಾ ಕ್ಷೇತ್ರಗಳನ್ನು ವಾಣಿಜ್ಯೀಕರಣಗೊಳಿಸಿದೆ. ಅಲ್ಲದೇ ಸಮಾಜದ ಪ್ರತಿ ಅಂಶಗಳನ್ನು ಅದು ಸಜೀವ ಇಲ್ಲವೇ ನಿರ್ಜೀವ ಎನ್ನುವ ಬೇಧವಿಲ್ಲದೇ ವ್ಯಾಪಾರೀಕರಣದ ಸರಕನ್ನಾಗಿ ರೂಪಿಸುವ ಧ್ಯೇಯೋದ್ದೇಶಗಳನ್ನು ಹೊಂದಿದೆ.

"ಜಾಗತೀಕರಣವೆಂಬ ಪರಿಕಲ್ಪನೆಯು ಆಚಾರದಲ್ಲಿ ಢಾಂಬಿಕವಾಗಿ ಖಚಿತವಾಗಿ ಹೇಳಬೇಕೆಂದರೆ ಅದು 'ಸರಕು ಜಾಗತೀಕರಣ'ವೇ ಆಗಿದೆ. ಬಾಯಿ ಮಾತಿನಲ್ಲಿ ಮುಕ್ತ ಮಾರುಕಟ್ಟೆಯನ್ನು ಪ್ರತಿಪಾದಿಸುತ್ತಾ ವ್ಯವಹಾರದಲ್ಲಿ ವಿಧಿ-ನಿಷೇಧಗಳನ್ನು ಹೇರುತ್ತಾ ಎಲ್ಲಾ 'ವಸ್ತು-ವಿಷಯ'(Phenomena)ಗಳನ್ನು ಸರಕನ್ನಾಗಿಸುವ ಠಕ್ಕೂ ಇಲ್ಲಿ ಎದ್ದು ಕಾಣುತ್ತದೆ. ಆಪ್ತ ಭಾವನೆಗಳನ್ನು ಕೂಡ ಕ್ಯಾಷ್ ಮಾಡಿಕೊಳ್ಳುವುದು ಇಲ್ಲಿನ ಪ್ರವೃತ್ತಿ. ಅಜ್ಜಿಯ ಔಷಧಿಗೆ 'ಹೈಟೆಕ್' ಬಣ್ಣ ಬಳಿಯುವ ಹುನ್ನಾರ ಇಲ್ಲಿದೆ. ಸಸ್ಯ-ಪರಿಸರ, ಪ್ರಾಣಿ-ಪರಿಸರ, ಮನುಷ್ಯ-ಪರಿಸರ ಸೇರಿದಂತೆ ಸಮಸ್ತ ಉತ್ಪಾದನೆಯನ್ನು 'ಸರಕು' ಮಾಡುವುದು ಇಲ್ಲಿನ ಕುಯುಕ್ತಿಯಾಗಿದೆ. 'ಸರಕು' ಎಂಬ ಅಚ್ಚಗನ್ನಡ ದೇಶಿ ಶಬ್ಧಕ್ಕೆ

ನಾನಾರ್ಥಗಳ ಜನಬಳಕೆಯಲ್ಲಿರುವುದರಿಂದ ಇದೊಂದು ಶಕ್ತಿಯುತ ಪದವಾಗಿದೆ. 'ಸರಕು ಜಾಗತೀಕರಣ'ವೆಂಬ ಪದಪುಂಜವನ್ನು Globalisation ಎಂಬುದರ ಕಪಟವೇಷವನ್ನು ಬಿಚ್ಚಿ ತೋರಿಸುತ್ತದೆ"[೭] ಎಂದಿದ್ದಾರೆ.

ಇದರಿಂದ ಆದ ಅನೇಕ ಬದಲಾವಣೆಗಳು ಸಮಾಜ ಹಾಗೂ ಜನಜೀವನದ ಮೇಲೆ ಹಲವಾರು ಸಾಂಸ್ಕೃತಿಕ ಹಾಗೂ ಸಾಮಾಜಿಕ ಪಲ್ಲಟಗಳಿಗೆ ಕಾರಣವಾದವು. ಇಂತಹ ನೀತಿಗಳು ಮುಖ್ಯವಾಗಿ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದಂತಹ ಆಡಳಿತಾತ್ಮಕ ನೀತಿಗಳನ್ನು ಶ್ರೀಮಂತ ರಾಷ್ಟ್ರಗಳು ತೃತೀಯ ಅಥವಾ ಹಿಂದುಳಿದ ರಾಷ್ಟ್ರಗಳ ಮೇಲೆ ಹೇರಿದ್ದರ ಪರಿಣಾಮವಾಗಿ ಅನೇಕ ರೀತಿಯ ಹೊಸ ಹೊಸ ಸಮಸ್ಯೆಗಳಿಗೆ ಕಾರಣವಾದವು. ಇಂತಹ ಸಮಸ್ಯೆಗಳು ಜನರ ಜೀವನವನ್ನು ಅನೇಕ ನೆಲೆಗಳಲ್ಲಿ ಪಲ್ಲಟಗೊಳಿಸಿವೆ.

ಈ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಪರಿಕಲ್ಪನೆಗಳು ಜಗತ್ತಿನ ಬಹುತೇಕ ರಾಷ್ಟ್ರಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ಸಕಲ ಪ್ರಯತ್ನಗಳನ್ನು ಮಾಡುತ್ತಲೇ ಬಂದಿವೆ. ಸಮಾಜದ ಎಲ್ಲ ರಂಗಗಳಲ್ಲೂ ಈ ನೀತಿಗಳು ಹೆಜ್ಜೆಯನ್ನಿಟ್ಟು ಅದನ್ನು ವ್ಯಾಪಾರೀಕರಿಸುವ ಮಾರುಕಟ್ಟೆಯ ನೀತಿಗಳನ್ನು ಸೃಷ್ಟಿಸುವ ಮೂಲಕ ಇಡೀ ಸಮಾಜವನ್ನೇ ಮಾರುಕಟ್ಟೆಯ ಹಂದರವನ್ನಾಗಿ ರೂಪಿಸುವ ಕೆಲಸವನ್ನು ಮಾಡುತ್ತಲೇ ಇವೆ. ಶಿಕ್ಷಣ, ಆರೋಗ್ಯ, ಆಹಾರ ಪದ್ಧತಿ, ವೃತ್ತಿ, ಕಲೆ–ಸಾಹಿತ್ಯ ಮುಂತಾದ ಸಾಂಸ್ಕೃತಿಕ ಕ್ಷೇತ್ರಗಳನ್ನು ಸಹ ಇಂದು ಈ ನೀತಿಗಳು ತಮ್ಮ ಅಧಿಪತ್ಯವನ್ನು ಸ್ಥಾಪಿಸುವ ಹುನ್ನಾರವನ್ನು ನಡೆಸಿವೆ. "ನಮ್ಮ ದೇಶವು ಒಪ್ಪಿಕೊಂಡಿದ್ದ ಮಿಶ್ರ ಆರ್ಥಿಕ ಪದ್ಧತಿಯನ್ನು ಬುಡಮೇಲು ಮಾಡಿ, ಖಾಸಗೀಕರಣವೊಂದೇ ಮೋಕ್ಷಾರ್ಥ ಸಾಧನೆವೆಂದು ಪ್ರಚುರಪಡಿಸುವ ಜಾಗತೀಕರಣ ಪ್ರಕ್ರಿಯೆಯು ಪ್ರಾರಂಭವಾಗಿದ್ದು ಕಳೆದ ಶತಮಾನದ ಕೊನೆಯ ದಶಕದ ಆರಂಭದಲ್ಲಿ ಎಂಬುದನ್ನಿಲ್ಲಿ ಗಮನಿಸಬೇಕು"[೮] ಎಂದು ಬರಗೂರು ರಾಮಚಂದ್ರಪ್ಪ ಅವರು ತಿಳಿಸುತ್ತಾರೆ.

ಜಾಗತೀಕರಣದ ಸಂದರ್ಭವು ಇಡೀ ಸಮಾಜದಲ್ಲಿ ಉಂಟುಮಾಡಿದಂತಹ ಈ ಸಾರ್ವತ್ರಿಕ ಪಲ್ಲಟಕ್ಕೆ ಸಮಾಜವು ಅನೇಕ ಪರಿವರ್ತನೆಗಳಿಗೆ ತನ್ನನ್ನು ಆಗು ಮಾಡಿಕೊಂಡಿತು. ಇಂತಹ ಸಂದರ್ಭದಲ್ಲಿ ಜಾಗತೀಕರಣವನ್ನು ಕುರಿತು ಎರಡು ರೀತಿಯಾದಂತಹ ಪ್ರತಿಕ್ರಿಯೆಗಳು ಸಮಾಜದಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಲು ಸಾಧ್ಯ. ಜಾಗತೀಕರಣವು ಜನರ ಮತ್ತು ಸಮಾಜದ ಅಭಿವೃದ್ಧಿಗೆ ಪೂರಕ ಎಂದೂ, ಅಲ್ಲದೇ

ಬಡವರ, ಹಿಂದುಳಿದವರ, ಅಲ್ಪಸಂಖ್ಯಾತರ, ಶೋಷಿಣೆಗೊಳಪಟ್ಟವರ ಪರವಾಗಿ ಸಮಾಜದಲ್ಲಿ ದೃಢವಾಗಿ ಬೆಳೆಯಲು ಈ ಜಾಗತೀಕರಣದ ಅಂಶಗಳು ಸಹಕಾರಿ ಎನ್ನುವ ಒಂದು ನೆಲೆಯಾದರೆ; ಎರಡನೆಯ ನೆಲೆ ಸಮಾಜದಲ್ಲಿರುವ ವಾಸ್ತವವನ್ನು ಅರಿಯುವ ಪ್ರಮುಖ ಅಂಶಗಳನ್ನು ಹೊಂದಿರುವ ಬಗೆಯದು. ಇಲ್ಲಿ ಜಾಗತೀಕರಣದಿಂದ ಆಗುತ್ತಿರುವ ಇಂದಿನ ಹಲವಾರು ವಿದ್ಯಮಾನಗಳಿಂದ ಶ್ರೀಮಂತರು ಮತ್ತು ಬಡವರ ನಡುವೆ ಶೋಷಣೆ, ಅಂತರ ಹೆಚ್ಚಾಗಿ ಅಸಮಾನತೆಯು ಬೆಳೆಯುತ್ತಿದೆ. ಅಲ್ಲದೇ ರೈತರ, ಬಡವರ, ಶೋಷಿತರ ವಿರುದ್ಧವಾಗಿ ಮತ್ತು ಸಂವಿಧಾನದ ಆಶಯಗಳಿಗೆ ವಿರೋಧವಾಗಿ ಜಾಗತೀಕರಣವು ತನ್ನ ಮಾರುಕಟ್ಟೆಯ ಧೋರಣೆಗಳನ್ನು ಸಮಾಜದಲ್ಲಿ ಭಿತ್ತುವ ಮೂಲಕ ಜನರ ನಡುವೆ ಇಂದು ಪ್ರೀತಿ, ವಿಶ್ವಾಸ, ನಂಬಿಕೆಗಳು ಮಾಯವಾಗಿ ಎಲ್ಲವನ್ನು ಹಾಗೂ ಎಲ್ಲರನ್ನೂ ನೋಡುವ ದೃಷ್ಟಿಕೋನ ವ್ಯಾಪಾರೀಕರಣದಿಂದ ಕೂಡಿದೆ. ಈ ನೆಲೆಯಲ್ಲಿ ಯೋಚಿಸುವ ಪರಿಕಲ್ಪನೆಯು ಅನೇಕ ಹೊಸ ಒಳನೋಟಗಳನ್ನು ನಮ್ಮ ಕಣ್ಣೆದುರಿಗಿಡುತ್ತದೆ. ಇದಕ್ಕೆ ಸಣ್ಣ ಉದಾಹರಣೆಯೊಂದನ್ನು ನೋಡುವುದಾದರೆ ಹಳ್ಳಿಗಳು ಇಂದು ತಮ್ಮ ಹಿಂದಿನ ವೈಭವವನ್ನು ಅಂದರೆ ಜಾನಪದೀಯವಾಗಿ ಕಂಡುಬರುತ್ತಿದ್ದ ಅನೇಕ ಅಂಶಗಳು ನಮ್ಮಿಂದ ಕಣ್ಮರೆಯಾಗುತ್ತಿವೆ. ಇಷ್ಟೆಲ್ಲಾ ಅಂಶಗಳನ್ನು ಪ್ರತಿಪಾದಿಸುತ್ತಿರುವ ಎರಡನೆಯ ನೆಲೆಯು ಜಾಗತೀಕರಣವನ್ನು ಒಪ್ಪುವ ಮೂಲಕ ಅದು ಸಮಾಜದ ಮೇಲೆ ಮಾಡುತ್ತಿರುವ ಅನೇಕ ದೌರ್ಜನ್ಯಗಳನ್ನು, ದಬ್ಬಾಳಿಕೆಗಳನ್ನು, ವಿನಾಶದ ಅಂಚಿಗೆ ಕೊಂಡೊಯ್ಯುತ್ತಿರುವ ಜನರನ್ನು ಕುರಿತು ತಿಳಿಯುವ ಅನೇಕ ಅಂಶಗಳನ್ನು ಪ್ರತಿಪಾದಿಸುತ್ತದೆ ಎನ್ನುವುದನ್ನು ಈ ಕೆಳಗಿನ ಪದ್ಯದ ಮೂಲಕ ತಿಳಿಯಲಾಗಿದೆ.

"ಜಾಗತೀಕರಣವೆಂಬ ಸಮುದ್ರ ಮಂಥನದಲ್ಲಿ
ಮುಕ್ತ ಮಾರುಕಟ್ಟೆಯ ಕಡೆಗೋಲು ನೋಡ
ಅದಕ್ಕೆ ಸುತ್ತಿಹುದು ಎಲ್ಪಿಜಿಯೆಂಬ ಮುಪ್ಪುರಿಯ ವಾಸುಕಿ
ಬಾಯಕಡೆ ಹಿಡಿದವರು ರೈತರು ದಲಿತರು
ಬಾಲದೆಡೆ ಜಗ್ಗುವರು ಬಂಡವಾಳಿಗ ಐಟಿಬಿಟಿಗರು
ಹಾಲಾಹಲದ ನೇಣಿನಲ್ಲಿ ಸಾವುನೋವಿನ ಸರಣಿ
ಬಾಲ ಹಿಡಿದ ಸಾಲಿನಲ್ಲಿ ಬಂಗಾರದ ಭರಣಿ
ಉರಿವ ಮನೆಯ ನೆರೆಯಲ್ಲಿ ಉಂಡವನು ಕಡುಜಾಣ
ಅರಿವೇ ಗುರುವೆಂದ ಗುರುಸಿದ್ಧರಾಮ ತಂದೆ" [೯]

ಜಾಗತೀಕರಣದಿಂದ ಸಮಾಜದ ಮೇಲಾಗುತ್ತಿರುವ ತಲ್ಲಣಗಳನ್ನು ಎಸ್.ಜಿ. ಸಿದ್ಧರಾಮಯ್ಯನವರ ಈ ಪದ್ಯದಲ್ಲಿ ತಿಳಿಸಿದ್ದಾರೆ. ಜಾಗತೀಕರಣವನ್ನು ಸಮುದ್ರಕ್ಕೆ ಹೋಲಿಸುವ ಮೂಲಕ ಅಲ್ಲಿ ಮುಕ್ತ ಮಾರುಕಟ್ಟೆಯ ವ್ಯವಸ್ಥೆಯಿಂದಾಗಿ ಅದು ಜನಜೀವನದ ಮೇಲೆ ಮಾಡುತ್ತಿರುವ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಗಳು ವಾಸುಕಿಯಂತೆ ವಯಸ್ಸಾಗದ ನೀತಿಗಳು. ಅದು ತನ್ನ ಅಜಾತ ಬಾಹುಗಳನ್ನು ಇನ್ನೂ ಅಧಿಕ ಪ್ರಮಾಣದಲ್ಲಿ ವಿಸ್ತರಿಸಿಕೊಳ್ಳುತ್ತಲೇ ಎಲ್ಲಾ ರೀತಿಯಿಂದಲೂ ರೈತರ, ದಲಿತರ, ಶೋಷಿತರ ಮೇಲೆ ಕ್ರೌರ್ಯವನ್ನು ಮೆರೆಯುತ್ತಲೇ ಇದೆ. ಇದು ಜನರ ಮೇಲೆ ಪರಿಣಾಮವನ್ನು ಬೀರುತ್ತಾ ಅವರನ್ನು ತುಳಿಯುವ ಹುನ್ನಾರದಲ್ಲಿದ್ದರೆ ಇದರ ಮೂಲಕವೇ ಬಂಡವಾಳಶಾಹಿಗಳು ಅದನ್ನು ಬೆನ್ನುಹತ್ತಿ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಯಲ್ಲಿ ಕೂತಿರುವರು ಎಂದು ಮಾರ್ಮಿಕವಾಗಿ ತಿಳಿಸುತ್ತಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಹೊಸ ಶತಮಾನದ ಕತೆಗಾರರು ಇಂತಹ ಹೊಸ ಆರ್ಥಿಕ ನೀತಿ, ಆಧುನಿಕತೆಯನ್ನು ಅಸ್ತ್ರದಂತೆ ಬಳಸಿಕೊಂಡು ಇಡೀ ಸಮಾಜದಲ್ಲಿ ಶ್ರಮ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ ಸಂದರ್ಭದಲ್ಲಿ ಉಂಟಾದ ಪರಿಣಾಮಗಳನ್ನು ಅದರ ತಲ್ಲಣಗಳನ್ನು ಸಾಹಿತ್ಯದ ಮೂಲಕ ಹಿಡಿದಿಟ್ಟಿದೆ. ಅಲ್ಲದೇ ಸಮಾಜದಲ್ಲಿ ಕುಟುಂಬ, ಹಳ್ಳಿ ಜೀವನ, ಸಂಬಂಧಗಳ ನಡುವೆ ಬಿರುಕು, ನಗರೀಕರಣದಿಂದಾಗಿ ವಲಸೆ, ಗ್ರಾಮೀಣ ಕಸುಬುಗಳ ನಾಶ, ಕೃಷಿಯ ಮೇಲಿನ ಪರಿಣಾಮ ಮುಂತಾದ ಅನೇಕ ಸಮಸ್ಯೆಗಳನ್ನು ಮುಖ್ಯವಾಗಿ ಕತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಜಾಗತೀಕರಣ ಸಂದರ್ಭದಲ್ಲಿ ಆಧುನಿಕತೆಯಿಂದ ಉಂಟಾಗುತ್ತಿರುವ ಪರಿಣಾಮಗಳನ್ನು ಕನ್ನಡ ಕತೆಗಳು ಹೀಗೆ ಅಭಿವ್ಯಕ್ತಿಸಿವೆ.

೬.೧ ಪರಂಪರೆ

ಆಧುನಿಕತೆಯ ಮೂಲ ಸ್ವರೂಪ ಸೈದ್ಧಾಂತಿಕವಾಗಿ ಭಾರತದಲ್ಲಿ ಈ ಮೊದಲೇ ತಿಳಿಸಿದಂತೆ ಎರಡು ನೆಲೆಗಳಲ್ಲಿ ಬಂದಿದೆ. ಮೊದಲನೆಯದು ವಿಚಾರವಾದ; ಎರಡನೆಯದು ಸುಧಾರಣಾವಾದ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜವು ಇದುವರೆಗೂ ಇದ್ದಂತಹ ಅನಿಷ್ಟ ಪದ್ಧತಿಗಳಾದ ಜಾತಿ, ಧರ್ಮ, ಮೂಢನಂಬಿಕೆ, ಸತಿಪದ್ಧತಿ, ಬಾಲ್ಯ ವಿವಾಹ ಮುಂತಾದ ಆಚರಣೆಗಳನ್ನು ಪ್ರಶ್ನಿಸುವ ಅದನ್ನು ವಿರೋಧಿಸಿ ಪ್ರತಿಭಟಿಸುವ ವಿಚಾರಶೀಲತೆಯನ್ನು ಹುಟ್ಟು ಹಾಕಿತು. ಹಾಗೆಯೇ ಇದರ ಮುಂದುವರೆದ ಭಾಗವಾಗಿ ಬಾಲ್ಯ ವಿವಾಹವನ್ನು ನಿಷೇಧಿಸುವ, ವಿಧವಾ ಪುರ್ನವಿವಾಹ, ಸತಿ ಪದ್ಧತಿ ನಿಷೇಧಗೊಳಿಸುವ ಅನೇಕ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾಯಿತು.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯ ಎನ್ನುವ ಪರಿಭಾಷೆಗಳು ಪರಂಪರೆಗೆ ಪೂರಕವಾಗಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಪರಂಪರೆಯನ್ನು ಕುರಿತಂತೆ ಒಂದು ಸಮಾಜವು ಹಿಂದಿನಿಂದಲೂ ನಂಬಿಕೊಂಡು ಬಂದಂತಹ ಆಚಾರ–ವಿಚಾರಗಳು, ನಂಬಿಕೆಗಳು, ಆಹಾರ ಪದ್ಧತಿ, ರೂಢಿ, ಸಂಪ್ರದಾಯಗಳನ್ನು ಇಲ್ಲಿ ಪರಂಪರೆ ಎಂದು ಗ್ರಹಿಸಲಾಗಿದೆ. ಪರಂಪರೆಯನ್ನು ಆಧುನಿಕ ನಾಗರೀಕ ಪ್ರಜ್ಞೆಯು ಅದರ ಸಾಂಪ್ರದಾಯಿಕ ನಿಲುವುಗಳನ್ನು ಧಿಕ್ಕರಿಸುತ್ತಾ ಹೊಸ ಮಾರ್ಗವೊಂದನ್ನು ತುಳಿದು ಹಳೆಯ ಮೂಲವನ್ನು ಮಾರ್ಪಾಟುಗೊಳಿಸಿಕೊಳ್ಳುತ್ತದೆ. ಕನ್ನಡ ಸಾಹಿತ್ಯದಲ್ಲಿ ನೋಡುವುದಾದರೆ ದೇವರು, ಧರ್ಮ ಎನ್ನುವ ಸಾಂಪ್ರದಾಯಿಕ ನಿಲುವೊಂದಾದರೆ; ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸುವ ಆ ಮೂಲಕ ಆಧುನಿಕ ಮನಸ್ಥಿತಿಯಿಂದ ಸಮಾಜವನ್ನು ನೋಡುವ ಮತ್ತೊಂದು ನೆಲೆಯನ್ನು ಕಾಣಲು ಸಾಧ್ಯವಿದೆ. ಉದಾಹರಣೆಗೆ ಮಾಸ್ತಿ ಅವರ 'ವೆಂಕಟಿಗನ ಹೆಂಡತಿ' ಕತೆಯು ಆಧುನಿಕವನ್ನು ಪ್ರತಿನಿಧಿಸುವ ಕತೆ ಎಂದು ನಾವು ಗುರುತಿಸುವುದಾದರೂ ಕತೆಯ ಕೊನೆಯಲ್ಲಿ ವೆಂಕಟಿಗನು ತಾಳುವ ನಿಲುವು ಸ್ಥಾಪಿತ ಸಮಾಜಕ್ಕೆ ಹೆದರಿ ಊರು ಬಿಟ್ಟು ಹೋಗುವುದನ್ನು ನೋಡಿದಾಗ ಪರಂಪರೆಯ ಪ್ರಭಾವ ಇಡೀ ಸಮಾಜದ ಮೇಲೆ ಉಂಟು ಮಾಡಿರುವ ನಿಲುವನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯವನ್ನು ನಾವು ಗಮನಿಸುವುದಾದರೆ ಅಲ್ಲಿ ಸಾಮಾನ್ಯರ ಬಗೆಗಿನ ಪ್ರಸ್ತಾಪ ಬಹಳ ವಿರಳ ಎಂದೇ ಹೇಳಬೇಕು. ಅಲ್ಲಿ ದೇವರು, ಧರ್ಮ, ನೀತಿ ಕತೆಗಳು ಮುಂತಾದ ಅನೇಕ ಅಂಶಗಳೇ ಪ್ರತಿಪಾದನೆಗೊಂಡಿವೆ. ನಂತರದ ಸಾಹಿತ್ಯ ರಚನೆಯು ಸಾಮಾನ್ಯ ಜನರನ್ನು ಒಳಗೊಳ್ಳುವಂತಿಬೇಕು ಎನ್ನುವುದನ್ನು ಬಲವಾಗಿ ಪ್ರತಿಪಾದಿಸಿತು. ನವ್ಯ ಸಾಹಿತ್ಯವು ಇದೇ ಹಿನ್ನೆಲೆಯಲ್ಲಿ ಮನುಷ್ಯನ ವೈಯಕ್ತಿಕ ಸ್ವಾತಂತ್ರ್ಯ, ಅವನ ಹಿತಾಸಕ್ತಿ ಮುಖ್ಯವೆಂಬ ಧೋರಣೆಯನ್ನು ಹೊಂದಿ ಸಾಹಿತ್ಯ ನಿರ್ಮಾಣವಾದುದು ಇದೇ ಹಿನ್ನೆಲೆಯಲ್ಲಿ. ನಂತರ ಬಂದತಂಹ ದಲಿತ–ಬಂಡಾಯ ಕಾಲಘಟ್ಟದಲ್ಲಿ ಶೋಷಿತರ, ಹಿಂದುಳಿದವರ, ದಲಿತರು ಹಿಂದಿನಿಂದಲೂ ಸಾಮಾಜಿಕ ವ್ಯವಸ್ಥೆಯಲ್ಲಿ ಅನುಭವಿಸಿದಂತಹ ನೋವು ನಲಿವುಗಳನ್ನು ಅಭಿವ್ಯಕ್ತಿಸಿದ್ದುದು ಸಹ ಇದೇ ಹಿನ್ನೆಲೆಯಲ್ಲಿಯೇ. ಅಂದರೆ ಇಡೀ ಕಥಾ ಸಾಹಿತ್ಯದ ಪರಂಪರೆಯು ಕನ್ನಡ ಸಾಹಿತ್ಯದಲ್ಲಿ ಅನೇಕ ಸ್ಥಿತ್ಯಂತರಗಳನ್ನು ಕಂಡರೂ ಸಹ ಕತೆಗಳ ರಚನೆಯೂ ಮುಂದುವರೆದುಕೊಂಡು ಬಂದಿದೆ. ಅವರ ಕಥಾ ನಿರ್ಮಾಣದ ಅಂಶಗಳನ್ನು ಬಳಸಿಕೊಂಡರೂ ಅದರ ಆಶಯ, ಅಭಿವ್ಯಕ್ತಿ, ವಸ್ತುಗಳ ದೃಷ್ಟಿಯಿಂದ ಪಲ್ಲಟಗಳಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿದೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಅಂದರೆ ಜಾಗತೀಕರಣ ಸಂದರ್ಭದಲ್ಲಿ ಕನ್ನಡದ ಕತೆಗಾರರೂ ಇಂತಹ ಪರಂಪರೆಯನ್ನು ಮುಂದುವರೆಸಿದ್ದರೂ ಈ ಹಿಂದಿನ ಸಾಹಿತ್ಯ ರಚನೆಯಲ್ಲಿ ಇರುವಂತೆ ಕಾಲಘಟ್ಟಗಳಿಲ್ಲದೇ, ಯಾವುದೇ ಚಳುವಳಿಗಳಿಲ್ಲದೇ ತಮ್ಮ ವೈಯಕ್ತಿಕ ಅನುಭವಗಳನ್ನು ಮತ್ತು ಸಮಾಜದಲ್ಲಿ ತಾವು ಅನುಭವಿಸಿದ ಅಥವಾ ನೋಡಿದ, ಕೇಳಿದ ಸಮಸ್ಯೆಗಳನ್ನು ಕತೆಗಳ ಮೂಲಕ ನಿರೂಪಿಸುತ್ತಿರುವುದು ಸಹ ಇದೇ ಪರಂಪರೆಯನ್ನು ಒಳಗೊಂಡರೂ ಈ ಕಾಲದಲ್ಲಿ ಎದುರಿಸುತ್ತಿರುವ ಸಮಾಜದ ಸವಾಲುಗಳನ್ನು, ಸಮಸ್ಯೆಗಳನ್ನು ಇಟ್ಟುಕೊಂಡೇ ಕತೆಗಳು ರಚನೆಯಾಗಿವೆ. ಇಂತಹ ಕತೆಗಳಲ್ಲಿ ಪರಂಪರೆಯನ್ನು ಧಿಕ್ಕರಿಸುವ ಇಲ್ಲವೇ ಅದನ್ನು ಪ್ರತಿರೋಧಿಸುವ ಅನೇಕ ಅಂಶಗಳನ್ನು ಕತೆಗಳು ಅಭಿವ್ಯಕ್ತಿಸಿವೆ.

ಪ್ರಭುತ್ವ ಹಾಗೂ ಧರ್ಮ ಇಡೀ ಸಮಾಜವನ್ನು ಪ್ರಾಚೀನ ಕಾಲದಿಂದಲೂ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಮೂಲಕ ಇಡೀ ವ್ಯವಸ್ಥೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಡೆಸಿಕೊಳ್ಳುವ ಪರಂಪರೆಯನ್ನು ಇತಿಹಾಸದುದ್ದಕ್ಕೂ ಕಾಣಲು ಸಾಧ್ಯ. ಇಂತಹ ಧರ್ಮ ಮತ್ತು ಪ್ರಭುತ್ವದ ವಿರುದ್ಧವಾಗಿ ಅಥವಾ ಪ್ರಭುತ್ವದ ಪ್ರತಿರೋಧವಾಗಿ ಮಾತನಾಡುವ, ವಿರೋಧಿಸುವವರನ್ನು ಹೇಗೆ ವ್ಯವಸ್ಥಿತವಾಗಿ ಮೂಲೆಗುಂಪು ಮಾಡಿಬಿಡುತ್ತವೆ ಎನ್ನುವುದನ್ನು ಅಮರೇಶ ನುಗಡೋಣಿ ಅವರ 'ಸವಾರಿ' ಕತೆಯು ಸೂಕ್ಷ್ಮವಾಗಿ ನಮ್ಮೆದುರಿಗಿಡುತ್ತದೆ. ಭಾರತೀಯ ಸಾಂಪ್ರದಾಯಿಕ ಸಮಾಜವು ವೈದ್ಧಿಕ ಪರಂಪರೆಯನ್ನು ಪ್ರಾಚೀನ ಕಾಲದಿಂದಲೂ ಒಪ್ಪಿಕೊಂಡು ಅದನ್ನು ಅನುಸರಿಸಿಕೊಂಡು ಬಂದಿದೆ. ಅದರ ತಪ್ಪು-ಒಪ್ಪುಗಳನ್ನು ಪ್ರಶ್ನಿಸುವವರ ವಿರುದ್ಧ ಧರ್ಮ ನಿಂದನೆಯ, ಬಹಿಷ್ಕಾರದಂತಹ ಅನೇಕ ಕ್ರಮಗಳನ್ನು ಮಾಡಿರುವುದನ್ನು ಸಮಾಜದಲ್ಲಿ ಕಾಣಲು ಸಾಧ್ಯ. ಇಂತಹ ವೈದ್ಧಿಕ ಸಂಪ್ರದಾಯದಲ್ಲಿ ಅನೇಕ ಆಚಾರ-ವಿಚಾರಗಳು, ನಂಬಿಕೆಗಳು ಕೆಲವು ಬಾರಿ ಸಮಾಜದ ವಿರುದ್ಧವಾಗಿದ್ದರೂ ಅದನ್ನು ಒಪ್ಪಿಸುವ ಕೆಲಸವನ್ನು ನಿರಾಂತಕವಾಗಿ ಮಾಡುತ್ತಲೇ ಬಂದಿದೆ.

ಇಂತಹ ವೈದ್ಧಿಕ ಪರಂಪರೆಯ ಕೆಲವು ಸ್ಥಾಪಿತ ನಂಬಿಕೆಗಳನ್ನು ಸಮಾಜದ ಮುಂದಿಡುವ ಅನೇಕ ಬಗೆಯ ಅವಧೂತರು, ಸಂತರು ಈ ವೈದ್ಧಿಕತೆಯ ಹುನ್ನಾರಗಳನ್ನು ತೆರೆದಿಡುವ ಪ್ರಯತ್ನಗಳನ್ನು ಮಾಡಿದಾಗಲೂ ಅದನ್ನು 'ಹುಸಿ'ಯೆಂಬುದಾಗಿ ನಂಬಿಸುವ ಕೆಲಸವನ್ನು ಸವಾರಿ ಕತೆಯಲ್ಲಿ ಚಿತ್ರಿಸಲಾಗಿದೆ. ಕತೆಯಲ್ಲಿ ಮುಖ್ಯ ಪಾತ್ರವಾದ ಬ್ಯಾಗರೆ ವಜ್ರಪ್ಪ ಸಹ ಇಂತಹ ಸಿದ್ಧ ಪರಂಪರೆಗೆ ಸೇರಿದ ಅವೈದ್ಧಿಕ. ಸಾವನ್ನು ಮುಂಚಿತವಾಗಿಯೇ

ತಿಳಿಯುವ ಈತನ ಸಿದ್ಧ ಪರಂಪರೆಯ ವಿಶಿಷ್ಟ ಅನುಭಾವ ಶಕ್ತಿ. ಊರಿನ ಹಿರಿಯಗೌಡ ಮಲ್ಲನಗೌಡ ಜಮೀನ್ದಾರನಾಗಿದ್ದು ಊರಿನ ಜನರ ಮೇಲೆ ತನ್ನ ದೌರ್ಜನ್ಯಗಳನ್ನು ನಡೆಸಿ ಊರನ್ನೇ ವಿರುದ್ಧವಾಗಿ ಮಾಡಿಕೊಂಡಿದ್ದ. ಇವನ ಮಗ ಶಿವನಗೌಡ ರಾಜಕೀಯದಲ್ಲಿ ಹೆಸರು ಮಾಡಬೇಕೆಂದು ಜಿಲ್ಲಾ ಕೇಂದ್ರವನ್ನು ಸೇರಿದ್ದ. ಮಲ್ಲನಗೌಡನಿಗೆ ಸೊಂಟ ನೋವಿನಿಂದ ಇಪ್ಪತ್ತು ವರ್ಷ ಒದ್ದಾಡಿ ಈಗ ನಿತ್ರಾಣಗೊಂಡಿದ್ದರಿಂದ ಅವನು ಹೆಂಡತಿಯೊಂದಿಗೆ ಊರನ್ನು ಬಂದು ಸೇರಿದ್ದ.

ಸುಡುಗಾಡು ಸಿದ್ಧ ಪರಂಪರೆಗೆ ಸೇರಿದ್ದ ವಜ್ರನಿಗೆ ಮಲ್ಲನಗೌಡನು ಸತ್ತ ಎಂಬುದು ರಾತ್ರಿ ಕನಸಿನಲ್ಲಿ ಬಂದಿತ್ತು. ಇದನ್ನು ತಿಳಿದ ವಜ್ರ ಗೌಡರ ಮನೆಯ ಹತ್ತಿರ ಹೋಗಿ ಗೌಡ ರಾತ್ರಿ ಕನಸಿನಲ್ಲಿ ಸತ್ತವನಂತೆ ಕಂಡಿತು, ಅದಕ್ಕಾಗಿ ಬಂದೆ, ಕುಣಿಯನ್ನು ಎಲ್ಲಿ ತೋಡಬೇಕು ಎಂದು ಕೇಳುತ್ತಾನೆ. ಹಿರಿಗೌಡನಿಗೆ ಆಪ್ತನಾಗಿದ್ದ ಹಿರೇಮಠದಪ್ಪನು ಇಂತಹ ಧರ್ಮಸಂಕಟವನ್ನು ಮುಚ್ಚಿಡುವ ಸಲುವಾಗಿ ವಜ್ರನಿಗೆ ಬೈದು ಹತ್ತು ರೂಪಾಯಿಗಳನ್ನು ಕೊಟ್ಟು ಕಳಿಸುತ್ತಾನೆ. ಮರುದಿನವೂ ಹಿಂದಿನ ಬಾಗಲಿನಿಂದ ಬಂದು ಶಿವನಗೌಡನ ಹೆಂಡತಿ ಗೌಡತಿಯಾದ ಗೌರಮ್ಮನನ್ನು ಈ ಬಗ್ಗೆ ವಿಚಾರಿಸುತ್ತಾನೆ. ಅವಳು ಸಹ ಸಿಡುಕಿನಿಂದ ಅವನನ್ನು ಅಂತಹ ಯಾವುದೇ ಅನಾಹುತ ಆಗಿಲ್ಲವೆಂದು ವಜ್ರನನ್ನು ಅಲ್ಲಿಂದ ಓಡಿಸುತ್ತಾಳೆ. ಇಡೀ ಜೀವನವೆಲ್ಲಾ ವಜ್ರನೂ ತಾನು ನಂಬಿದ್ದ ತನ್ನ ವೃತ್ತಿಯು ಯಾವತ್ತೂ ಹೀಗೆ ಆಗಿರಲಿಲ್ಲವೆಂದು ಗೌಡ ಸತ್ತಿರುವುದು ಸತ್ಯವೆಂದು ಹೇಳಿದರೂ ಅದನ್ನು ನಿರಾಕರಿಸುವ ಇಡೀ ಶಿವನಗೌಡ ಅವನ ಸುತ್ತಲಿನ ಬೆಂಬಲಿಗರ ಹಿಂದೆ ರಾಜಕೀಯದ ಹುನ್ನಾರವೊಂದು ಅಡಗಿರುತ್ತದೆ.

ಇದರ ಜೊತೆಗೆ ಆ ಊರಿನ ಪಕ್ಕದ ರಾಜ್ಯ ಹೆದ್ದಾರಿಯಲ್ಲಿ ವಿದೇಶಿ ಕಂಪೆನಿಯೊಂದು ಮೂರುನೂರು ಎಕರೆಯಲ್ಲಿ ಕಂಪೆನಿಯೊಂದನ್ನು ನಿರ್ಮಿಸುವುದಾಗಿ ತಿಳಿದಿದ್ದ ಶಿವನಗೌಡ ಅದಕ್ಕಾಗಿ ತನ್ನ ಅಪ್ಪ ಸತ್ತ ಸುದ್ದಿಯನ್ನು ಮುಚ್ಚಿಡುವಂತೆ ಹಿರೇಮಠದಪ್ಪನ ಮೂಲಕ ಹೇಳಿಸಿ ಕೆಲಸ ಮಾಡಿಸಿಕೊಂಡಿದ್ದ. ಅಲ್ಲದೇ ಇದರಿಂದ ಶಿವನಗೌಡ ತನ್ನ ನೂರು ಎಕರೆ ಭೂಮಿಯನ್ನು ಉಳಿದ ಜನರ ಭೂಮಿಯನ್ನು ಸೇರಿಸಿ ಮಾರಿ ಅದರಿಂದ ಬಂದ ಹಣದಲ್ಲಿ ರಾಜಕೀಯವಾಗಿ ಬೆಳೆಯಬಹುದೆಂದು ತಿಳಿದಿದ್ದ. ಆದರೆ ಊರಿನಲ್ಲಿ ವಿದ್ಯಾವಂತನೂ ಮತ್ತು ಪ್ರಗತಿಪರ ರೈತನೂ ಆಗಿದ್ದ ಸಿದ್ಧಪ್ಪ ಈ ಕಂಪೆನಿ ನಿರ್ಮಾಣದ ಹುನ್ನಾರವನ್ನು ತಿಳಿದಿದ್ದ. ಈ ಕಾರಣದಿಂದ 'ನೆಲ-ಜಲ ರಕ್ಷಣಾ ವೇದಿಕೆ' ಎಂಬ ಸಂಘವನ್ನು ಕಟ್ಟಿಕೊಂಡು ಹೋರಾಟಕ್ಕೆ ಜನರನ್ನು ಸಿದ್ಧಗೊಳಿಸುವ ಕೆಲಸವನ್ನು ಮಾಡುತ್ತಿದ್ದ.

ಈ ಸಂದರ್ಭದಲ್ಲಿ ಊರಿನಲ್ಲಿ ಮೂರುನೂರು ಎಕರೆಯನ್ನು ಸಿದ್ಧಮಾಡಿಕೊಂಡಿದ್ದ ಶಿವನಗೌಡನಿಗೆ ಎಂಎಲ್.ಎ.ಗಳ ಒಪ್ಪಿಗೆ ಪಡೆಯಬೇಕೆಂದುಕೊಳ್ಳುವ ಸಂದರ್ಭದಲ್ಲಿಯೇ ಮಲ್ಲನಗೌಡ ಸತ್ತ ಎಂಬ ಸುದ್ಧಿಯನ್ನು ಹಿರೇಮಠದಪ್ಪ ತಿಳಿಸಿದ. ಈ ಸನ್ನಿವೇಷದಲ್ಲಿ ಗೌಡ ಸತ್ತಿದ್ದಾನೆ ಎನ್ನುವ ವಜ್ರಪ್ಪನ ಕಟುಸತ್ಯವನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗಿತ್ತು. ಊರಿಗೆ ಸುಡುಗಾಡ ಸಿದ್ಧ ಬರುತ್ತಾನೆಂದು ಅವನ ಹೆಂಡತಿ ರುದ್ರಿಯು ತಿಳಿಸುತ್ತಾಳೆ. ಅವನನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಳ್ಳುವ ಸಲುವಾಗಿ ಹಿರೇಮಠದಪ್ಪನು ಅವನನ್ನು ನೇರವಾಗಿ ಗೌಡನ ಮನೆಗೆ ಕರೆಯಿಸಿಕೊಂಡ. "ಸುಡುಗಾಡ ಸಿದ್ಧ ಯಾವ ದಿನ. ಯಾವ ಊರಿಗೆ ತನ್ನ ಪಾದ ಊರುತ್ತಾನೋ, ಆ ಊರಿನಲ್ಲಿ ಆ ದಿನ ಯಾರು ಸಾವನ್ನು ಕಾಣುತ್ತಾರೋ, ಅವರು 'ಪುಣ್ಯದ ಸಾವು' ಸತ್ತಿದ್ದಾರೆಂದು ಅಂಥವರು ಧರ್ಮಾತ್ಮರಾಗಿರುತ್ತಾರೆಂದು, ಪುಣ್ಯಾತ್ಮರಾಗಿರುತ್ತಾರೆಂದು ಅವರಿಗೆ ದೇವರು ಸ್ವರ್ಗದ ಬಾಗಿಲು ತೆರೆಯುತ್ತಾನೆಂದು ನಂಬಿಕೆ ಜನರಲ್ಲಿತ್ತು"[೧೦]

ಈ ಸಂದರ್ಭದಲ್ಲಿ ಸತ್ತ ಗೌಡನ ಮಣ್ಣನ್ನು ಸುಡುಗಾಡು ಸಿದ್ಧನು ಮಂತ್ರ, ಶಂಖನಾದಗಳಿಂದ ನೆರವೇರಿಸಲು ತನ್ನ ಶಿಷ್ಯನಾದ ವಜ್ರಪ್ಪನಿಗೆ ಬರಲು ಹೇಳಿದ. ಆದರೆ ವಜ್ರಪ್ಪ ಈ ಹಿಂದೆ ತನಗಾದ ಅಪಮಾನದಿಂದ ಬರುವುದಿಲ್ಲವೆಂದರೆ ಬಿಡದೇ ಅವನನ್ನು ಕರೆತಂದರು. ಆಗ ವಜ್ರಪ್ಪ "ಹುಸಿ, ಎಲ್ಲ ಹುಸಿ! ಲೇ ಸೂಳೇಮಕ್ಳೇ ಬುಡ್ರಿ! ಗುರುಸಿದ್ಧನೇ ಹುಸಿ! ಶಿವನಗೌಡ ಮ್ಯಾ ಹುಸಿ!"[೧೧] ಎಂದು ಕೂಗಾಡಿದನು. ಆದರೆ ಈ ಸಂದರ್ಭದಲ್ಲಿ ವಜ್ರಪ್ಪನ ಮೇಲೆ ಸಿದ್ಧರು ಕಾಲಿಟ್ಟಾಗ ಅವನು ಅಸುನೀಗಿದ್ದನ್ನೂ ಯಾರೂ ನೋಡಲಿಲ್ಲ. ಇಡೀ ಸಮಾಜವೊಂದು ಸುಡುಗಾಡ ಸಿದ್ಧನ ಪರಂಪರೆಯ ಸತ್ಯವನ್ನು ಹುಸಿಗೊಳಿಸಿ ತಾನು ನಿರ್ಮಿಸುತ್ತಿರುವ ಅಥವಾ ತಾನು ಹೇಳಿದ ಸತ್ಯವೇ ಸತ್ಯ ಎಂಬುದಾಗಿ ನಂಬಿಸುವ ಪ್ರಯತ್ನವನ್ನು ಸವಾರಿ ಕತೆಯು ಶಕ್ತಿಯುತವಾಗಿ ನಮ್ಮೆದುರಿಗಿಡುತ್ತದೆ. ಅಲ್ಲದೇ ಪರಂಪರೆಯಿಂದ ಅನುಸರಿಸಿಕೊಂಡು ಬಂದ ತನ್ನ ನಂಬಿಕೆಯೊಂದನ್ನು ಹೀಗೆ ವ್ಯವಸ್ಥಿತವಾಗಿ ಅದನ್ನು ನಿರ್ನಾಮ ಮಾಡುವ ಸಂದರ್ಭ ಅದು ಇಡೀ ಪರಂಪರೆಯನ್ನೇ ಧಿಕ್ಕರಿಸುವ ನೆಲೆಗೆ ಉತ್ತಮ ಉದಾಹರಣೆಯನ್ನಾಗಿ ಕಾಣಲು ಸಾಧ್ಯ. ಅಲ್ಲದೇ ಈ ಸಂದರ್ಭದಲ್ಲಿ ಪ್ರಭುತ್ವವು ನಿರ್ವಹಿಸಿದ ಪಾತ್ರವೂ ಸಹ ಇಂತಹದ್ದೇ ಕೆಲಸವನ್ನೂ ಮಾಡುತ್ತಿದೆ. ತನ್ನ ರಾಜಕೀಯ ಅಗತ್ಯಗಳಿಗಾಗಿ ಇಡೀ ಪರಂಪರೆಯೊಂದನ್ನು ಧಿಕ್ಕರಿಸುವ ತನ್ನ ಸ್ಥಾಪಿತ ಹಿತಾಸಕ್ತಿಗಳನ್ನು ಸಾಧಿಸುವ ಕೆಲಸವನ್ನು ಮಾಡಿದ್ದೂ ಸಹ ಇಂತಹದ್ದೇ ಆದ ಪ್ರಭುತ್ವದ ಆಕಾಂಕ್ಷೆಗಳಿಂದ ಎನ್ನುವುದು ನಿಜ.

ಇನ್ನೂ ಅಭಿವೃದ್ಧಿಯ ಹೆಸರಿನಲ್ಲಿ ಇಡೀ ಒಂದು ಸಮಾಜದ ಆಚರಣೆಗಳನ್ನು ನಂಬಿಕೆಗಳನ್ನು ಬದಿಗೊತ್ತುವ, ಆ ಮೂಲಕ ಇಡೀ ಊರನ್ನೇ ಒಕ್ಕಲೆಬ್ಬಿಸುವ ಕೆಲಸವನ್ನು ಪ್ರಭುತ್ವ ಮಾಡುತ್ತಾ ಬಂದಿದೆ. ಇಡೀ ಸಮಾಜ, ಸಮುದಾಯವೊಂದು ತನ್ನ ಪರಂಪರೆಯಿಂದ ಬಂದ ನಂಬಿಕೆ, ಆಚರಣೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ, ಯೋಜನೆಗಳ ಹೆಸರಿನಲ್ಲಿ ಸರ್ವನಾಶ ಮಾಡುತ್ತಿರುವುದರ ಉನ್ನಾರವೂ ಕೂಡ ಕಾರ್ಪೋರೇಟ್ ವಲಯದ ತಂತ್ರಗಾರಿಕೆಯೂ ಹೌದು. ಹನುಮಂತ ಹಾಲಗೇರಿ ಅವರ 'ನಾಗಬಲಿ' ಕತೆಯು ಇಂತಹ ಪ್ರಸಂಗವನ್ನು ಚಿತ್ರಿಸುತ್ತದೆ. ಹಾವೂರಿನಲ್ಲಿರುವ ನಾಗದೇವತೆಯ ಹುತ್ತವೂ ಪ್ರಾಚೀನ ಕಾಲದಿಂದಲೂ ಜನರು ಅದನ್ನು ದೈವವೆಂದು ನಂಬಿಕೊಂಡು ತಮ್ಮ ಜೀವನವಿಧಾನವನ್ನು ನಡೆಸಿಕೊಂಡು ಬಂದವರು. ಆದರೆ ಈ ಸಂದರ್ಭದಲ್ಲಿ ಸರ್ಕಾರವು ಅಭಿವೃದ್ಧಿಯ ಹೆಸರಿನಲ್ಲಿ ಮಲೆನಾಡಿನ ಈ ಪ್ರದೇಶದಲ್ಲಿ ಹೆದ್ದಾರಿಗೆ ಬೈಪಾಸನ್ನು ನಿರ್ಮಿಸಲು ಬಂದಿದ್ದರಿಂದ ಅದನ್ನು ತಡೆಯುವ ನಿಟ್ಟಿನಲ್ಲಿ ರಸ್ತೆಯಲ್ಲಿ ಜನರು ಪ್ರತಿಭಟನೆಯನ್ನು ನಡೆಸುತ್ತಿದ್ದರು. "ಕಾಡಿನ ಮಧ್ಯದಲ್ಲಿರುವ ಹಾವೂರಿನ ಹತ್ತಿರಸ ಎರಡಾಳೆತ್ತರದ ಹುತ್ತದಲ್ಲಿ ಪುರಾತನ ಕಾಲದಿದಂದಲೂ ನಾಗರದೈವವೊಂದು ನೆಲೆಸಿದ್ದು, ಈ ಬೈಪಾಸ್ ರಸ್ತೆಯು ಹುತ್ತದ ಮೇಲೆ ಹೋಗುವುದರಿಂದ ದಯವಿಟ್ಟು ನಮಗೆ ಬೈಪಾಸ್ ಬೇಡ, ಬೈಪಾಸ್ ಮಾಡಿದರೂ ಬೇರೆ ಕಡೆ ಹಾಯ್ದು ಹೋಗಲಿ ಎಂಬುದು ಅವರ ಮನವಿಯಾಗಿದೆ."[೧೨]

ಗುಂಪಿನ ಮಧ್ಯದಲ್ಲಿ ಡಿಸಿ ಮುಂದೆ ದುತ್ತನೆ ಪ್ರತ್ಯಕ್ಷನಾದ ಒಬ್ಬ ಮುದುಕ ಈ ನಾಗಲೋಕವು ಭೂಲೋಕ ಹುಟ್ಟೋ ಮೊದಲೇ ಶಿವನ ಕೊರಳಿಂದ ಇಳಿದು ಬಂದ ಕಿರುನಾಲಗೆಯಿಂದ ಇಷ್ಟಿಷ್ಟೇ ಉಗುಳಿ ಈ ಭೂಲೋಕದ ಸೃಷ್ಟಿ ಮಾಡ್ಯೆತೆ ಎಂದೊ, ಅದರ ಮೈಮೇಲೆ ಬಂಗಾರ ಬಣ್ಣದ ಮಾರುದ್ದದ ಕೂದಲು ಐತೆ. ಅದು ಹೆಡೆಯೆತ್ತಿದಾಗ ಅದರ ಎದೆಯುದ್ಧಕ್ಕೂ ಬಿಳಿಗಡ್ಡ ಜೋತು ಬೀಳುತೈತೆ ಎಂದು ತಿಳಿಸಿದ. ಅಂದರೆ ಇಡೀ ಊರು ಅಥವಾ ನಮ್ಮ ಬುಡಕಟ್ಟುಗಳು ನಿಸರ್ಗವು ನೀಡಿದಂತಹ ನೈಸರ್ಗಿಕ ಅಸ್ತಿತ್ವಗಳನ್ನು ಉಳಿಸಿಕೊಳ್ಳುವ ಆ ಮೂಲಕ ನಿಸರ್ಗ ಸಂಪತ್ತನ್ನೂ, ಪ್ರಾಣಿ ಸಂಕುಲವನ್ನು ಕಾಯ್ದುಕೊಳ್ಳುತ್ತಿದ್ದ ಪರಂಪರೆಯೊಂದನ್ನು ಇಂದು ಮಾಯವಾಗಿ ನಿಸರ್ಗ ಇರುವುದು ಮನುಷ್ಯನ ಸ್ವಾರ್ಥಕ್ಕಾಗಿ ಎಂಬ ಧೋರಣೆಯನ್ನು ವರ್ತಮಾನದ ಅನೇಕ ಸರ್ಕಾರದ ನೀತಿಗಳು ನಮ್ಮ ಕಣ್ಣೆದುರಿಗಿಡುತ್ತದೆ. ಅಲ್ಲದೇ ಇಡೀ ಊರೇ ಆ ನಂಬಿಕೆಯನ್ನು

ಹೊಂದಿದ್ದಾಗಲೂ ಅದನ್ನು ಪರಿಗಣನೆಗೆ ತೆಗೆದುಕೊಳ್ಳದಂತೆ ಮುಂದುವರೆಯುವ ಎಲ್ಲರನ್ನು ಅಂದರೆ ಮನುಷ್ಯ, ಪ್ರಾಣಿ ಎಲ್ಲವನ್ನು ಒಕ್ಕಲೆಬ್ಬಿಸುವ ಕೆಲಸ ನಡೆಯುತ್ತಿರುವುದನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸಲಾಗಿದೆ.

ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಈ ದೇವಸ್ಥಾನವನ್ನು ಬೈಪಾಸ್ ರಸ್ತೆಗಾಗಿ ಸ್ಥಳಾಂತರಗೊಳ್ಳುತ್ತಿರುವ ಕಾರ್ಯಕ್ಕೆ ಸರ್ವೇಯರ್ ಆಗಿ ಬಂದಿದ್ದ ಕತೆಯ ಮುಖ್ಯ ನಾಯಕ ಕಚೇರಿಯ ನಾಯಕಿಯಾದ ಮೀನಾಳನ್ನು ಕರೆದುಕೊಂಡು ಕಾಡಿಗೆ ಹೋದ. ಅಲ್ಲಿ "ಸಿದ್ಧಿ, ಕುಣಬಿ, ಹಾಲಕ್ಕಿಗಳು ಸಹಸ್ರ ಶತಮಾನಗಳ ಹಿಂದಿನ ತಮ್ಮ ಪೂರ್ವಜರ ವೇಷಭೂಷಣಗಳನ್ನು ಧರಿಸುವ ಮೂಲಕ ಆ ಕಾಲದ ಇತಿಹಾಸಕ್ಕೆ ಜಿಗಿದು ಪುಳಕಿತಗೊಳ್ಳುತ್ತಿದ್ದರು"[೧೩] ಹೀಗೆ ಸರ್ವೇಯರ್ ಆಗಿ ಬಂದಿದ್ದ ಇವನು ಕೆಲಸ ಮುಗಿದ ಬಳಿಕ ಮತ್ತೆ ಬೆಂಗಳೂರಿಗೆ ಹೊರಟುಹೋದ.

ಹಲವು ವರ್ಷಗಳ ಮತ್ತೆ ಹಾವೂರಿಗೆ ಬಂದವನಿಗೆ ಆ ಊರೇ ಯಾವುದು ಇಲ್ಲ ಎನ್ನುವ ಸಂಗತಿಯು ಅವನಲ್ಲಿ ಆತಂಕವನ್ನುಂಟು ಮಾಡಿತು. ಮೂಲ ದೇವಸ್ಥಾನಬಿಟ್ಟು ಹೊಸ ದೇವಸ್ಥಾನವೊಂದನ್ನು ಕಟ್ಟಲಾಗಿತ್ತು. ಆಗ ಅವನಿಗೆ "ಆಡಂಬರದ ಮಂದಿರದಲ್ಲಿ ಉತ್ಸವ ಮೂರ್ತಿಯೇ ಕಾಣೆಯಾದಂತೆ ಭಾಸವಾಯಿತು"[೧೪] ಇಡೀ ವ್ಯವಸ್ಥೆಯು ವಿದೇಶಿ ಕಂಪೆನಿಗಳ ಹಿತಾಸಕ್ತಿಗಳನ್ನು ಕಾಪಾಡಲು ಇಡೀ ಊರೊಂದನ್ನು ನಾಶ ಮಾಡುವ ಆ ಮೂಲಕ ಬೇರೊಂದು ಸಂಸ್ಕೃತಿಯನ್ನು ಒಪ್ಪಿಕೊಳ್ಳುವಂತೆ ಮಾಡಿ ದೇಸಿ ಸಂಸ್ಕೃತಿಯನ್ನು ನಾಶ ಮಾಡಿದುದು ಅವನ ಅರಿವಿಗೆ ಬರತೊಡಗಿತು. ಅವನು ನಾವು ಆಧುನಿಕತೆಗೆ ಒಳಗಾಗುತ್ತಿರುವ ಪರಿಯೇ ನಾಗರೀಕತೆ ಎನ್ನುವ ಮನೋಭಾವದಲ್ಲಿದ್ದವನು ಕಾಡಿನ ಜನರು ಹುತ್ತವೊಂದನ್ನು ದೇವಸ್ಥಾನವೆಂದು ಅದರ ಪರಂಪರೆಯಿಂದ ನಾಗರೀಕತೆಯ ವ್ಯಾಖ್ಯಾನವನ್ನು ಮರುವಿಮರ್ಶೆ ಮಾಡಿಕೊಂಡನು. ಅಂದರೆ ಅಭಿವೃದ್ಧಿ, ಆಧುನೀಕತೆಯೇ ನಾಗರೀಕತೆ ಎಂದು ಭಾವಿಸುವುದಕ್ಕಿಂತ ಪರಂಪರೆಯು ತಿಳಿದಿರುವ ಜ್ಞಾನವನ್ನು ನಾಗರೀಕತೆಯೆಂದು ಒಪ್ಪಿಕೊಳ್ಳುವುದನ್ನು ಕತೆಯಲ್ಲಿ ಮುಖ್ಯವಾಗಿ ಹಿಡಿದಿಡಲಾಗಿದೆ.

ಅಬ್ದುಲ್ ರಶೀದ್ ಅವರ 'ಮೂಸಾ ಮ್ಯೊಲೊಯಾರರ ಮುದ್ದಿನ ಮಗಳು ಮತ್ತು ಹೆಲಿಕಾಪ್ಟರ್ ಎಂಬ ದುಷ್ಟ ಜಂತು' ಎಂಬ ಕತೆಯು ಮುಸ್ಲಿಂ ಸಮುದಾಯವು ತನ್ನ ಸ್ಥಾಪಿತ ಹಿತಾಸಕ್ತಿಯ ಪರಂಪರೆಗಳನ್ನು ಮಹಿಳೆಯ ಮೇಲೆ ಹೇರಿಕೊಂಡು ಬರುತ್ತಿರುವ ಹಿನ್ನೆಲೆಗಳನ್ನಿಟ್ಟುಕೊಂಡು ಕತೆಯು ರಚನೆಯಾಗಿದೆ. ಕತೆಯ ಮುಖ್ಯ ಪಾತ್ರವಾದ ಆಮೀನಾ ಬೀಬಿ ಹೊಸ ತಂತ್ರಜ್ಞಾನವೊಂದು ತನ್ನೂರಿನ ಮೇಲೆ ಹೋಗುತ್ತದೆ ಎಂದು ತಿಳಿದು

ಬಾಪಾನಿಗೆ ಹೆಲಿಕಾಪ್ಟರ್‌ನ್ನು ನಾನು ನೋಡಲು ಹೋಗಬಹುದೇ ಎಂದು ಆಮೀನಾ ಬೀಬಿ ಕೇಳಿದಾಗ ಬಾಪಾ 'ನೀನು ಮೈಲಿಯಾರರ ಮಗಳು ಮೋಳೇ. ಹಾಗೆಲ್ಲಾ ಹೊಳೆದಾಡಿ ಹೋಗಬಾರದು. ಅಲ್ಲಿ ಕಾಫಿರ ಗಂಡಸರು ಹೆಂಗಸರು ಇರುತ್ತಾರೆ. ಅವರ ಕಣ್ಣು ನಿನ್ನ ಮೇಲೆ ಬೀಳಬಾರದು' ಎಂದು ತಿಳಿಸುವುದು ಮಹಿಳೆಯರ ಮೇಲಿನ ಮುಸ್ಲಿಂ ಪರಂಪರೆಯು ಹೇರಿರುವಂತಹ ಕಟ್ಟುಪಾಡುಗಳನ್ನು, ನಿಯಮಗಳನ್ನು ತಿಳಿಸುತ್ತಿದೆ. ಅವಳು ತನ್ನ ನೋವನ್ನು ಬೆಕ್ಕಿನ ಮೇಲೆ ಅಂದರೆ ಪೊಚೆಕುಟ್ಟಿಯ ಬೆನ್ನಿಗೆ ಬಲವಾಗಿ ಹೊಡೆಯುವುದರ ಮೂಲಕ ತೀರಿಸಿಕೊಳ್ಳುತ್ತಾಳೆ.

ಇಡೀ ಆಧುನಿಕತೆಯು ಹಳ್ಳಿಯನ್ನು ಪ್ರವೇಶ ಪಡೆದಾಗ ಅದು ಜನರಲ್ಲಿ ಉಂಟು ಮಾಡಬಹುದಾದ ಅನೇಕ ಆಶ್ಚರ್ಯಗಳನ್ನು ಪ್ರಸ್ತುತ ಕತೆಯಲ್ಲಿಯೂ ಆಮೀನಾ ಬೀಬಿಯ ಮೂಲಕ ಚಿತ್ರಿಸಲಾಗಿದೆ. ಆಧುನಿಕ ವಸ್ತುವೊಂದು ಹಳ್ಳಿಯನ್ನು ಪ್ರವೇಶ ಮಾಡಿದಾಗ ಅಲ್ಲಿನ ಜನರು ತಾಳಬಹುದಾದ ನಿಲುವು, ಆಶ್ಚರ್ಯ, ಉತ್ಸಾಹವನ್ನು ವಿವರಿಸುತ್ತಾ, ಆಮೀನಾ ಬೀಬಿಯಂತಹ ಮಹಿಳಾ ವರ್ಗವು ಈ ಆಧುನಿಕತೆಯ ಪ್ರವೇಶವನ್ನು ಬಹುಬೇಗ ಸ್ವಿಕರಿಸುತ್ತಾರೆ ಎನ್ನುವ ನಿಲುವನ್ನೂ ಸಹ ಸೂಚಿಸುತ್ತಿದೆ. ಸಂಬಂಧಗಳ ಹಿನ್ನೆಲೆಯಿಂದ ಈ ಕತೆಯನ್ನು ವಿಶ್ಲೇಷಿಸಿಕೊಂಡಾಗ ಆಮೀನಾ ಬೀಬಿಯ ಬದುಕಿಗೂ ಹಾಗೂ ಪೊಚೆಕುಟ್ಟಿ ಎಂಬ ಮುದ್ದು ಬೆಕ್ಕಿನ ಮೂಲಕ ಎರಡೂ ಪಾತ್ರಗಳೂ ತಮ್ಮ ನೋವನ್ನು ಯಾರಿಗೂ ಹೇಳಲಾಗದೇ ಅನುಭವಿಸುತ್ತಿರುವ ಹಿನ್ನೆಲೆಯಿಂದ ಆಧುನಿಕತೆಯನ್ನು ಒಪ್ಪಿಕೊಂಡಂತಾಗಿದೆ.

ಹೆಲಿಕಾಪ್ಟರ್‌ನ್ನು ಒಪ್ಪಿಕೊಳ್ಳಬೇಕೆ ಇಲ್ಲವೇ ಅದನ್ನು ನಿರಾಕರಿಸಬೇಕೆ ಎನ್ನುವ ಆತಂಕದಲ್ಲಿ, ಭಯದಲ್ಲಿ ಆಮೀನಾ ಇದ್ದಾಳೆ. 'ಬಹಳ ಹಿಂದೆ ಮೆಕ್ಕಾ ಎಂಬ ಪಟ್ಟಣದಲ್ಲಿ ಇಬ್ರಾಹಿಂ ಎಂಬ ಪ್ರವಾದಿ ತನ್ನ ಮುದ್ದು ಮಗನಾದ ಇಸ್‌ಮಾಯಿಲ್‌ನನ್ನು ಅಲ್ಲಾಹುವಿನ ಅಪ್ಪಣೆಯಂತೆ ಬಲಿಕೊಡಲು ಹೋದಾಗ ಈ ಇಬಿಲೀಸ್ ತೊಂದರೆ ನೀಡಿದನಂತೆ' ಎನ್ನುವ ಆಮೀನಾಳ ಮಾತುಗಳು ಆಧುನಿಕತೆಯು ಪರಂಪರೆ ಅಥವಾ ಸಂಪ್ರದಾಯವನ್ನು ಧಿಕ್ಕರಿಸುವ ಹಿನ್ನೆಲೆಯಲ್ಲಿ ಬಂದಿರುವಂತಹುದ್ದೇ ಆಗಿದೆ. ಅಲ್ಲದೇ ಮುಸ್ಲಿಂ ಧರ್ಮದಲ್ಲಿ ಅಲ್ಲಾಹುವಿನ ಮತ್ತೊಂದು ಲೋಕವನ್ನು ಸೃಷ್ಟಿಸಿರುವನು ಅವನೇ ಜಿನ್ನ. ಅವನನ್ನು ತನ್ನ ಜೀವನದಲ್ಲಿ ನೆನೆಯುತ್ತಾ ಇದ್ದವಳಿಗೆ ಆಧುನಿಕ ಲೋಕದ ಹೆಲಿಕಾಪ್ಟರ್‌ನ ಮತ್ತೊಂದು ಲೋಕವೆಂದು ಗ್ರಹಿಸಿ ತನ್ನ ಪರಿಚಿತನಾದ ಆಮೀದ್ ಕುಟ್ಟಿಯಿಂದ ವಂಚನೆಗೊಳದಾದುದನ್ನು ಇಲ್ಲಿ ನೋಡಬಹುದು. ಅದೇ ಸಂದರ್ಭವನ್ನು ತನ್ನ ಬಾಪಾ ಅಮೀದ್ ಕುಟ್ಟಿಯನ್ನು

ತನ್ನ ಅಳಿಯನೆಂದು ಸಂತಸಪಡುತ್ತಿರಲು ಇತ್ತ ಆಮೀನಾಬೀಬಿಯು ಇವನನ್ನು ಕಂಡು ಚೀರಿಕೊಂಡು ತೊಂಡೆ ಚಪ್ಪರದ ಕೆಳಗೆ ಪೊಚೆಕುಟ್ಟಿಯು ಸತ್ತುಬಿದ್ದಿತು. ಮುಸ್ಲಿಂ ಪರಂಪರೆಯನ್ನು ಕಳಚಿಕೊಂಡು ಹೊರ ನಡಯಬೇಕೆಂಬ ಆಸೆಯನ್ನು ಹೊಂದಿದ್ದ ಆಮೀನಾ ಬೀಬಿ ಮತ್ತೆ ಅದೇ ಸಂಪ್ರದಾಯದ ಇಕ್ಕಟ್ಟಿಗೆ ಸಿಲುಕಿದೆನೆಂಬ ಹಿನ್ನೆಲೆಯಿಂದ ಇಲ್ಲಿ ಪೊಚಿಕುಟ್ಟಿಯು ಸತ್ತು ಬಿದ್ದಿತು ಎಂದು ರೂಪಕವಾಗಿ ಕತೆಯನ್ನು ಮುಕ್ತಾಯಗೊಳಿಸಲಾಗಿದೆ.

೬.೨ ಆಧುನಿಕತೆಯಿಂದ ಸಂಬಂಧಗಳಲ್ಲಿ ಬದಲಾವಣೆ

ಆಧುನಿಕ ಜೀವನವಿಧಾನವು ಅನೇಕ ಬದಲಾವಣೆಗಳನ್ನು ಕಾಲದಿಂದ ಕಾಲಕ್ಕೆ ಸಮಾಜದಲ್ಲಿ ಮಾಡುತ್ತಲೇ ಬಂದಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಆಧುನಿಕತೆ ಎನ್ನುವುದು ಮುಖ್ಯವಾಗಿ ಭಾರತೀಯರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಆದ ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತಲೇ ಸೈದ್ಧಾಂತಿಕವಾಗಿ ಅನೇಕ ಪಲ್ಲಟಗಳಿಗೆ ಕಾರಣವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಎಳೆಗಳನ್ನು ಮೊದಮೊದಲು ನಿರಾಕರಿಸುತ್ತಲೇ ಅದನ್ನು ನಿಧಾನವಾಗಿ ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಪಿಸಲಾಯಿತು. ಜಾಗತೀಕರಣ ಸಂದರ್ಭದಲ್ಲಿ ಆಧುನಿಕತೆಯು ಸಮಾಜದಲ್ಲಿ ಅನೇಕ ಸಾಮಾಜಿಕ ಸಂಬಂಧಗಳಾದ ಕೌಟುಂಬಿಕ ಸಂಬಂಧಗಳನ್ನು, ಭಾವನಾತ್ಮಕ ಸಂಬಂಧಗಳನ್ನು, ಕುಟುಂಬದ ಹೊರಗಿನ ಸಂಬಂಧಗಳ ಧಿಕ್ಕನ್ನು ಪಲ್ಲಟಗೊಳಿಸುವ ಮೂಲಕ ಸಮಾಜದಲ್ಲಿ ಎಲ್ಲರೂ ಎಲ್ಲರನ್ನೂ ಸರಕನ್ನಾಗಿ ನೋಡುವ, ಆ ಮೂಲಕ ಮಾರುಕಟ್ಟೆಯ ಪರಿಪಾಠವನ್ನಾಗಿ ರೂಪಿಸಿರುವ ವ್ಯವಸ್ಥಿತ ಹುನ್ನಾರವನ್ನು ಕತೆಗಳು ಸಶಕ್ತವಾಗಿ ಮಂಡಿಸಿವೆ.

ಮನುಷ್ಯ ಸಂಬಂಧಗಳನ್ನು ಇಂದಿನ ವರ್ತಮಾನದ ಯುಗದಲ್ಲಿ ಕೇವಲ ಯಾಂತ್ರಿಕ ಭಾಗವಾಗಿ ಮಾತ್ರ ಪರಿಗಣಿಸಲಾಗುತ್ತಿದೆಯೇ ವಿನಃ ಅದನ್ನು ಭಾವನಾತ್ಮಕವಾಗಿ ಹೊಂದಿರಬಹುದಾದ ಯಾವುದೇ ಮಾನ್ಯತೆಯನ್ನು ನೀಡಲಾಗುತ್ತಿಲ್ಲ. ಅಲ್ಲದೇ ಈ ಹಿಂದೆ ಸಮಾಜವು ಸಾಮಾಜಿಕ ವ್ಯವಸ್ಥೆಯಲ್ಲಿ ಹೊಂದಿದ್ದ ಕುಟುಂಬದ ಪರಿಕಲ್ಪನೆಯ ವಿರುದ್ಧವಾಗಿ ಇಂದು ಏಕವ್ಯಕ್ತಿಯಾಗಿ ರೂಪಿಸುವ ತಂತ್ರವನ್ನು ಹೆಣೆಯಲಾಗಿದೆ. ಅವಿಭಕ್ತ ಕುಟುಂಬವನ್ನು ಹೊಂದಿದ್ದ ಭಾರತೀಯ ಸಮಾಜವು ನಂತರದಲ್ಲಿ ಅದನ್ನು ವಿಭಕ್ತ ಕುಟುಂಬದಲ್ಲಿ ನೋಡುವ ಪರಿಸ್ಥಿತಿ ಎದುರಾಗಿತ್ತು. ಆದರೆ ಇಂದಿನ ಜಾಗತೀಕರಣದ ಈ ಒತ್ತಡದಲ್ಲಿ ಮನುಷ್ಯ ಅನೇಕ ಕಾರಣಗಳಿಂದಾಗಿ ತನ್ನ ಆಂತರಿಕ ಸಂಬಂಧಗಳ ಜೊತೆಗೆ ಭಾವನಾತ್ಮಕ ಸಂಬಂಧಗಳನ್ನು ತನ್ನ ವೈಯಕ್ತಿಕ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಮರೆತಿರುವ ಪ್ರಸಂಗವು ನಿಜಕ್ಕೂ ದುರಂತವಾಗಿದೆ.

ಜಾಗತೀಕರಣದ ಆಧುನೀಕರಣದಲ್ಲಿ ಕುಟುಂಬದ ಪಾತ್ರ ಗೌಣವಾಗಿರುವುದನ್ನು ಅನೇಕ ಕತೆಗಳು ಮುಖ್ಯವಾಗಿ ಚಿತ್ರಿಸಿವೆ. ಅಂತಹ ಕತೆಗಳಲ್ಲಿ ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆ ಬಹುಮುಖ್ಯವಾದುದು. ಊರಿನ ಗೌಡನಾದ ಶರಭನಗೌಡನು ತನ್ನ ಹೆಂಡತಿ ಮಕ್ಕಳೊಂದಿಗೆ ಜಮೀನನ್ನು ಮಾಡಿಕೊಂಡು ಇದ್ದ. ಆದರೆ ಆಧುನೀಕತೆಯ ಶಿಕ್ಷಣದ ಕಾರಣಕ್ಕಾಗಿ ಗೌಡನ ಮಕ್ಕಳು ಹಾಗೂ ಅವನ ಹೆಂಡತಿಯನ್ನು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಮನೆಯನ್ನು ಮಾಡಿ ಇಡುವ ಪರಿಸ್ಥಿತಿ ಬರುತ್ತದೆ. ಆನಂತರ ಅವರ ಕೆಲಸದ ಕಾರಣಕ್ಕೆ ಅವರು ವಿದೇಶದಲ್ಲಿರುವ ಪ್ರಮೇಯ ಬರುತ್ತದೆ. ಕುಟುಂಬವು ಇಲ್ಲಿ ಶಿಕ್ಷಣ, ವೃತ್ತಿಯ ಕಾರಣಕ್ಕಾಗಿ ತಂದೆಯೇ ಒಂದು ಕಡೆ, ಹೆಂಡತಿ ಮಕ್ಕಳು ಬೇರೊಂದೆಡೆ ವಾಸ ಮಾಡಬೇಕಾದ ಸಂದರ್ಭ ಬರುತ್ತದೆ. ಅಲ್ಲದೇ ಮಕ್ಕಳಿಗೆ ಅಪ್ಪನ ಮೇಲೆ ನಕ್ಸಲರ ಜೀವ ಬೆದರಿಕೆ ಎಂದಾಗಲೂ ಅವರು ವಿದೇಶದಿಂದ ಬರದೇ ಅವನನ್ನು ವಿದೇಶಕ್ಕೆ ಬಂದು ನೆಲೆಸುವಂತೆ ತಿಳಿಸುವುದು ಅವರು ಕುಟುಂಬ ಪರಿಕಲ್ಪನೆಯು ಆಧುನಿಕತೆಯಿಂದ ಪಲ್ಲಟಗೊಂಡಿರುವುದನ್ನು ತೋರಿಸುತ್ತದೆ.

ಕೇರಿಯ ಜನರು ಗೌಡನ ಜಮೀನನಲ್ಲಿ ದುಡಿದು ಬದುಕನ್ನು ಸಾಗಿಸುತ್ತಿದ್ದರೆ ಗೌಡ ತನ್ನ ಮಕ್ಕಳನ್ನು, ಹೆಂಡತಿಯನ್ನು ವಿದೇಶಕ್ಕೆ ಕಳುಹಿಸಿ ಏಕಾಂಗಿಯಾಗಿ ಜಮೀನನ್ನು ನೋಡಿಕೊಂಡು ಬದುಕುತ್ತಿದ್ದಾನೆ. ಅಲ್ಲದೇ ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಹೇಗೆ ಬದಲಾವಣೆಗೆ ಒಳಪಡುತ್ತಿದೆ ಎಂಬುದನ್ನು ಕತೆಯ ಮೂಲಕ ನೊಡುವುದಾದರೆ "ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು" ಎಂಬ ಮಾತುಗಳು ವ್ಯವಸಾಯದಲ್ಲಿ ಆದ ಬದಲಾವಣೆಗಳನ್ನು ಕತೆಯ ಮೂಲಕವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಆದರೆ ಗೌಡನಿಗೆ ಈ ರೀತಿಯ ಯಾಂತ್ರಿಕವಾದ ಬದುಕು ಅವನಿಗೆ ಸರಿಹೊಂದುತ್ತಿರಲಿಲ್ಲ. "ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ." ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಹೆಂಡತಿ, ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದಾಗ ಇರದ ಈ ರೀತಿಯ ಏಕಾಂಗಿಭಾವ ತನ್ನ ದಿನನಿತ್ಯದ ಬದುಕಿನಲ್ಲಾದ ಬದಲಾವಣೆಗಳಿಂದ ಅವನನ್ನು ಕಾಡಲು ಶುರುಮಾಡಿತು.

ಅಂದರೆ ಇಲ್ಲಿ ಮುಖ್ಯವಾಗಿ ನಾವು ಸಂಬಂಧಗಳು ಎಂದು ಬಂದಾಗ ಎರಡು ನೆಲೆಗಳಲ್ಲಿ ಗುರ್ತಿಸಬಹುದಾಗಿದೆ.

೧. ಕುಟುಂಬದಲ್ಲಿ ಸಂಬಂಧಗಳು – ಅಂದರೆ ಅಪ್ಪ, ಮಗ, ಹೆಂಡತಿ, ಮಕ್ಕಳು ಇತ್ಯಾದಿ.

೨. ಕುಟುಂಬೇತರ ಸಂಬಂಧಗಳಾದ ಸಮಾಜದಲ್ಲಿರುವ ಜನರು, ಗೌಡನ ಮನೆಯ ಆಳುಗಳು, ಎತ್ತುಗಳು, ದನ–ಕರುಗಳು ಇತ್ಯಾದಿ.

ಇಂದಿನ ದಿನಮಾನಗಳಲ್ಲಿ ಕುಟುಂಬವು ಅವಿಭಕ್ತ ಕುಟುಂಬದ ಪರಿಕಲ್ಪನೆ ಅಲ್ಲ. ಗೌಡನ ಕುಟುಂಬವು ವಿಭಕ್ತ ಕುಟುಂಬವೇ ಆಗಿದ್ದಿತು. ಆದರೆ ಅದೂ ಕೂಡ ಆಧುನಿಕತೆಯ ಹಿನ್ನೆಲೆಯಲ್ಲಿ ಛಿದ್ರವಾಗುತ್ತಿರುವ ಹಿನ್ನೆಲೆಯಲ್ಲಿ ಕತೆಯು ಪ್ರಾಮುಖ್ಯತೆಯನ್ನು ಪಡೆದಿದೆ. ಕುಟುಂಬ ಮಾತ್ರವೇ ಆಗಿರದೇ ಶರಭನಗೌಡ ತನ್ನ ಆಳುಗಳೊಂದಿಗೆ ಹೊಂದಿದ್ದ ಸಂಬಂಧ, ಎತ್ತು, ದನ–ಕರುಗಳೊಂದಿಗೆ ಹೊಂದಿದ್ದ ಸಂಬಂಧಗಳು ಅಹ ಅವನನ್ನು ಕಾಡಿತ್ತು ಎಂಬುದು ಸಂಬಂಧಗಳ ವಿಸ್ತಾರತೆಯನ್ನು ತೋರಿಸುತ್ತದೆ. ಅಲ್ಲದೇ ಇಡೀ ಸಮಾಜದ ಜೊತೆಗೆ ಹೊಂದಿದ್ದ ಅನ್ಯೋನ್ಯ ಸಂಬಂಧಗಳು ಜಟಿಲವಾಗುತ್ತಿರುವುದನ್ನು ಇಡೀ ಕತೆಯು ವಿವರಿಸುತ್ತದೆ. ಅಂದರೆ ಆಧುನಿಕತೆಯು ಹಳ್ಳಿ ಜೀವನದ ಇಡೀ ಪರಂಪರೆಯನ್ನು ಪಲ್ಲಟಗೊಳಿಸಿ ಅಲ್ಲಿಯೇ ತನ್ನ ಜೀವನದ ಭಾಗವನ್ನು ಹಂಚಿಕೊಂಡಿದ್ದ ಪರಂಪರೆಯು ಧಿಕ್ಕು ತೋಚದ ಪರಿಸ್ಥಿತಿಗೆ ತಂದಿದ್ದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಅಬ್ದುಲ್ ರಶೀದ್ ಅವರ 'ಮೂಸಾ ಮ್ಯೊಲೊಯಾರರ ಮುದ್ದಿನ ಮಗಳು ಮತ್ತು ಹೆಲಿಕಾಪ್ಟರ್ ಎಂಬ ದುಷ್ಟ ಜಂತು' ಎಂಬ ಕತೆಯು ಮುಖ್ಯವಾಗಿ ಮುಸ್ಲಿಂ ಸಮುದಾಯದ ಮಹಿಳೆಯ ಶೋಷಣೆಯ ದುರಂತವನ್ನು ಆಧುನಿಕತೆಯ ಹಿನ್ನೆಲೆಯಲ್ಲಿ ವಿವರಿಸುತ್ತದೆ. ಕರುಣಾಮಯಿ, ಕಾರುಣ್ಯಮಯಿಯಾದ ದೇವರು ಹೇಗೆ ಮನುಷ್ಯರನ್ನು ಸೃಷ್ಟಿಸಿದನೋ ಅಂತೆಯೇ ಈ ಕೆಂಪು ಹೆಲಿಪೆಟ್ಟರನ್ನು ಆತನೇ ಸೃಷ್ಟಿ ಮಾಡಿರುವನು ಎಂಬಂತಹ ಪ್ರಶ್ನೆಗಳನ್ನು ಕತೆಯಲ್ಲಿ ಪ್ರಸ್ತಾಪಿಸಲಾಗಿದೆ.

ಆಧುನಿಕತೆಯ ಹಿನ್ನೆಲೆಯಲ್ಲಿ ಬಂದಿರುವ ಹೆಲಿಕಾಪ್ಟರ್ ಎನ್ನುವ ಯಂತ್ರವೊಂದನ್ನು ಮನುಷ್ಯರಂತೆ ಎಂದು ಭಾವಿಸುವ ಆಮೀನಾ ಬೀಬಿಯನ್ನು ಅಲ್ಲಿನ ಆಮಿದ್ ಕುಟ್ಟಿ ತನ್ನ ಸ್ವಾರ್ಥಕ್ಕೆ ಬಳಕೆ ಮಾಡಿಕೊಳ್ಳುವುದನ್ನು ಕತೆಯು ವಿಶ್ಲೇಷಿಸುತ್ತದೆ. ಜಿನ್ನ ಅಲ್ಲಾ ಸೃಷ್ಟಿಸಿದ ಇನ್ನೊಂದು ಲೋಕದ ಜೀವಿಗಳಂತೆ ಇದನ್ನು ಅವಳು ಪರಿಭಾವಿಸಿದಳು. ರಬ್ಬರ್ ಮರಗಳ ಕಪ್ಪು ನೆರಳಲ್ಲಿ ನಿಂತಿದ್ದ ಹೆಲಿಕಾಪ್ಟರ್‌ನನ್ನು ಕಂಡು ಬಂದು ನಿಂತವಳಿಗೆ

ಹಿಂದಿನಿಂದ ಅಮೀನಾ ಎಂದಾಗ ಯಾ ನನ್ನ ಜಿನ್ನ ಎಂದು ತನ್ನನ್ನು ತಬ್ಬಿ ಹಿಡಿದವನ ಎದೆಯ ಮೇಲೆ ಒರಗಿ ಒಂದು ರೀತಿಯ ನಿದ್ದೆಗಿಂತಲೂ ಮಿಗಿಲಾದ ಮತ್ತಿನಲ್ಲಿ ಬೆವರತೊಡಗಿದಳು. ಅಂದರೆ ಇಲ್ಲಿ ಅಮದ್ ಕುಟ್ಟಿಯೇ ಇವಳನ್ನು ರಬ್ಬರ್ ತೋಟದಲ್ಲಿ ಸೇರಿದನು. ಇದನ್ನು ತಪ್ಪಾಗಿ ತಿಳಿದ ಆಮೀನಾ ಬೀಬಿ ತನ್ನ ಸುಂದರ ಜಿನ್ನ ಎನ್ನುವ ಯುವಕ ಇವನಲ್ಲವೆಂದು ಅವನು ತನ್ನನ್ನು ಪಕ್ಷಿಯಂತೆ ಹಾರಿಸಿಕೊಂಡು ಹೋಗುತ್ತಾನೆ ಎನ್ನುವ ಎಲ್ಲಾ ಆಸೆಗಳು ನಿರಾಸೆಯಾಗುವುದು ಕತೆಯಲ್ಲಿ ಕಂಡುಬರುತ್ತದೆ. ಸಂಬಂಧಗಳ ಹಿನ್ನೆಲೆಯಲ್ಲಿ ಇಲ್ಲಿ ಬಾಪಾನಿಗೆ ಅಮಿದ್ ಕುಟ್ಟಿಯು ತನ್ನ ಅಳಿಯನಾಗುವುದು ಇಷ್ಟವಾದರೂ ಆಮೀನಾ ಬೀಬಿಗೆ ಅದು ಇಷ್ಟವಿರಲಿಲ್ಲ. ಅಂದರೆ ಕತೆಯು ಸೂಕ್ಷ್ಮವಾಗಿ ಆಧುನಿಕತೆಯ ನಡೆಯನ್ನೇ ಪ್ರಶ್ನೆ ಮಾಡಿದಂತಿದೆ. ಇಲ್ಲಿ ತನ್ನ ಸ್ವಯಂ ಇಷ್ಟದಿಂದ ಸೇರಿದ ಆಮೀನಾ ಬೀಬಿ ಅವನು ಅಮಿದ್ ಕುಟ್ಟಿ ಎಂದು ತಿಳಿದ ಬಳಿಕ ತನ್ನ ಕನಸಿನ ಹುಡುಗ ಇವನಲ್ಲ ಎಂದು ತಾಳುವ ನೀತಿಯು ಅವಳನ್ನು ಆಧುನಿಕತೆಯ ಹಿನ್ನೆಲೆಯಲ್ಲಿ ದಾರಿತಪ್ಪಿಸಲಾಯಿತು ಎನ್ನಬಹುದು. ಅಂದರೆ ಆಕೆಯ ಮತ್ತು ಅಮಿದ್ ಕುಟ್ಟಿಯ ಸಂಬಂಧವನ್ನು ಹೆಲಿಕಾಪ್ಟರ್ ಎನ್ನುವ ಯಂತ್ರವು ಹುಟ್ಟಿಹಾಕಿತು.

೬.೩ ವಿಜ್ಞಾನ ಮತ್ತು ತಂತ್ರಜ್ಞಾನದಿಂದಾದ ಪಲ್ಲಟಗಳು

ಆಧುನಿಕತೆಯ ಮುಖ್ಯ ಮೂಲ ಅಂಶವೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ. ಈ ವಿಚಾರಗಳನ್ನು ಅರಿಯಲು ಶಿಕ್ಷಣ ಬಹುಮುಖ್ಯ. ಅಲ್ಲದೇ ಶಿಕ್ಷಣವೆಂಬುದು ತರ್ಕಬದ್ಧ ಆಲೋಚನೆಗಳನ್ನು, ವಿಚಾರಶೀಲತೆಯನ್ನು ಬೆಳೆಸುವಲ್ಲಿ ಪರಿಣಾಮಕಾರಿಯಾದುದು. ಈ ಹಿನ್ನೆಲೆಯಲ್ಲಿ ಆಧುನಿಕತೆಯ ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರದಿಂದ ಭಾರತದಂತಹ ರಾಷ್ಟ್ರಕ್ಕೆ ಕಾಲಿಟ್ಟಾಗ ಅನೇಕ ಪರಿಣಾಮಗಳಾದವು. ಆದರೆ ಜಾಗತೀಕರಣ ಸಂದರ್ಭದಲ್ಲಿ ಇಂತಹ ವಿಜ್ಞಾನ ಮತ್ತು ತಂತ್ರಜ್ಞಾನಗಳೇ ಜೀವನದ ಭಾಗವಾಗಿ ಅನೇಕ ಸಮಸ್ಯೆಗಳಿಗೆ ಸಮಾಜವು ಒಳಗಾಗುತ್ತಿರುವುದನ್ನು ಕತೆಗಳ ಮೂಲಕ ಗುರುತಿಸಲು ಸಾಧ್ಯವಾಗಿದೆ. ಅಲ್ಲದೇ ಇದು ಮನುಷ್ಯನನ್ನು ಯಾಂತ್ರಿಕವಾದ ರೋಬೋಟ್‌ನಂತೆ ಮಾಡಿ ಅವನಿಗೆ ಭಾವನೆಗಳಿಲ್ಲದೇ, ಅನಿಸಿಕೆಗಳಿಲ್ಲದೇ, ಪ್ರೀತಿ, ವಿಶ್ವಾಸವಿಲ್ಲದೇ ಏಕಾಂಗಿಯಾಗಿ ಬದುಕುವ ಪರಿಸ್ಥಿತಿಗೆ ತಂದೊಡ್ಡಿದೆ. ಕುಟುಂಬಗಳ ಮೂಲಕ ಸಮಾಜಜೀವಿಯಾಗಿದ್ದ ಮನುಷ್ಯ ಇಂದು ಕುಟುಂಬವನ್ನೇ ಧಿಕ್ಕರಿಸಿ ಯಾರಿಗೂ ಬೆಲೆ ಕೊಡದೆ ಹಣದ ಬೆನ್ನು ಹತ್ತಿ ಯಂತ್ರದಂತೆ ತನ್ನ ಸ್ವರೂಪವನ್ನು ರೂಪಿಸಿಕೊಂಡಿದ್ದಾನೆ. ಈ ಹೊತ್ತಿನಲ್ಲಿ ಅವನ ಆಸೆ-ಆಕಾಂಕ್ಷೆಗಳನ್ನು ಬದಿಗೊತ್ತಿ ಸಮಯದ ಹಿಂದೆ ಬಿದ್ದು ಮಾನಸಿಕ ಭಾವನೆಗಳನ್ನು

ನಾಶ ಮಾಡಿಕೊಳ್ಳುತ್ತಿದ್ದಾನೆ. ಸಮಾಜದಲ್ಲಿ ಈ ಹಿಂದೆ ಎಲ್ಲರೂ ಒಂದಾಗಿ ಕೂಡಿ ದುಡಿಯುವಂತಹ ಪರಿಕಲ್ಪನೆಯು ಹೋಗಿ ಈಗ ವೈಯಕ್ತಿಕ ಸಾಧನೆಯು ಮುನ್ನೆಲೆಗೆ ಬಂದಿರುವ ಕಾರಣ ಯಾರನ್ನು ಗಣನೆಗೆ ತೆಗೆದುಕೊಳ್ಳದೇ ಏಕಾಂಗಿಯಾಗಿ ಬದುಕುತ್ತಿರುವುದನ್ನು ಕಾಣಲು ಸಾಧ್ಯವಾಗಿದೆ ಎನ್ನುವುದನ್ನು ಕತೆಗಳ ಮೂಲಕ ತಿಳಿಯಬಹುದಾಗಿದೆ.

ಮಹಾಂತೇಶ್ ನವಲಕಲ್ ಅವರ 'ನಾಯಿ ಎಂಬ ಮನುಷ್ಯ' ಕತೆಯು ವಿಜ್ಞಾನ ಮತ್ತು ತಂತ್ರಜಾನದ ಪರಿಣಾಮದಿಂದಾಗಿ ಎಲ್ಲಾ ಕ್ಷೇತ್ರಗಳಲ್ಲೂ ಹೇಗೆ ಹೈಬ್ರಿಡ್ ತಳಿಗಳನ್ನು ಉತ್ಪತ್ತಿ ಮಾಡುವ ಮೂಲಕ ಸಮಾಜವನ್ನು ಬಹುರಾಷ್ಟ್ರೀಯ ಕಂಪೆನಿಗಳು ಬೇರೆ ಧಿಕ್ಕಿನತ್ತ ಕೊಂಡೊಯ್ಯಲಾಗುತ್ತಿದೆ ಎನ್ನುವುದನ್ನು ಮುಖ್ಯವಾಗಿ ಚರ್ಚಿಸಲಾಗುತ್ತಿದೆ. ಇಲ್ಲಿ ಮನುಷ್ಯ ತನ್ನ ನೈತಿಕತೆಯನ್ನು ಕಳೆದುಕೊಂಡು ಹಣದ ಬೆನ್ನು ಹತ್ತಿ ಸಂಬಂಧಗಳನ್ನು ಹಾಳು ಮಾಡಿಕೊಳ್ಳುವ ಚಿತ್ರಣಗಳೂ ಬರುತ್ತವೆ. ಇಡೀ ಕತೆಯು ಕೃಷಿ ಜೀವನನದ ಮೇಲೆ, ನಮ್ಮ ದಿನನಿತ್ಯದ ಆಹಾರದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಅಲ್ಲದೇ ಇದರ ವಿರುದ್ಧ ಹೋರಾಡಬೇಕಾದ ಕತೆಯ ನಾಯಕನು ಪರಿತಪಿಸುವ ಹಂಬಲವನ್ನು ಕತೆಯು ನಮ್ಮೆದುರಿಗಿಡುತ್ತದೆ.

ಬ್ರಿಟೀಷರು ಇಲ್ಲಿನ ರಾಜರನ್ನು ಮೋಡಿ ಮಾಡಿ ದೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು ಎನ್ನುವ ಸೂರ್ಯ ಮತ್ತು ಸ್ವಾಮಿಯವರ ಮಾತಿನ ಮೂಲಕ ಕತೆಯು ಆರಂಭವಾಗುತ್ತದೆ. ಹಿಂದಿನ ವಸಾಹತುಶಾಹಿಯನ್ನು ಇಂದಿನ ಜಾಗತೀಕರಣದಿಂದ ಉದ್ಭವವಾಗಿರುವ ಬಹುರಾಷ್ಟ್ರೀಯ ಕಂಪೆನಿಗಳು ಸಹ ಅದೇ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿವೆ ಎನ್ನುವುದನ್ನು ಕತೆಯಲ್ಲಿ ಸೂರ್ಯನು ಹೀಗೆ ಹೇಳುತ್ತಾನೆ. "ಈ ಶತಮಾನದಲ್ಲಿ ಬಂದ ಮಲ್ಟಿ ನ್ಯಾಷನಲ್ ಕಂಪೆನಿಗಳು ಸಹ ಮಾಡುತ್ತರುವುದು ಇದನ್ನೇ ಎನ್ನುತ್ತಾನೆ"[೧೫] ಅಂದರೆ ಹಿಂದೆ ಬ್ರಿಟೀಷರಿಗೆ ಸ್ವಾತಂತ್ರ್ಯವನ್ನು ಒಪ್ಪಿಸಿ ತಮ್ಮ ಸರ್ವಸ್ವವನ್ನು ಕಳೆದುಕೊಂಡರೋ ಅಂತೆಯೇ ಇಂದೂ ಸಹ ಬಹುರಾಷ್ಟ್ರೀಯ ಕಂಪೆನಿಗಳ ಕೈಯಲ್ಲಿ ನಮ್ಮ ಸ್ವಾತಂತ್ರ್ಯವನ್ನು ಕೊಟ್ಟು ಸರ್ವಸ್ವವನ್ನು ಕಳೆದುಕೊಳ್ಳುತ್ತಿರುವ ವಸ್ತುಸ್ಥಿತಿಯನ್ನು ವಿವರಿಸುತ್ತಾನೆ.

ಶಿವಮೊಗ್ಗದಿಂದ ಬಂದ ಮಂಜಣ್ಣ ಗೌರ್ನಮೆಂಟ್‌ನಿಂದ ಬಂದಿದ್ದ ಆರ್ಡರ್‌ನಲ್ಲಿ ಸುಮಾರು ನಾಲ್ಕುನೂರು ಎಕರೆ ಜಾಗವನ್ನು ೨೦೦ ವರ್ಷಗಳ ಕಾಲ ಲೀಜ್‌ಗೆ ಬಂದಿರುವ ಒಪ್ಪಂದದ ಪತ್ರ. ಇಲ್ಲಿ ಮುಖ್ಯವಾಗಿ ಕೋಳಿ ಬ್ರೂಡ್‌ಗಳನ್ನು, ಧವಸ

ಧಾನ್ಯಗಳಾದ ಹತ್ತಿ, ದ್ವಿದಳ ಧಾನ್ಯಗಳನ್ನು ವೇಗವಾಗಿ ಉತ್ಪಾದಿಸಲ್ಪಡುತ್ತವೆ. "ನಾರ್ಮಲ್ ಕೋಳಿಗಳು ಸುಮಾರು ನಲವತ್ತೈದು ದಿನದಲ್ಲಿ ಕೊಬ್ಬು ತೆಗೆದುಕೊಂಡು ಮಾರಾಟಕ್ಕೆ ಸಜ್ಜಾದರೆ, ನ್ಯೂ ಕ್ರೂಸೆಲ್ ಕಂಪೆನಿ ತಯಾರು ಮಾಡುವ ಕೋಳಿ ಕೇವಲ ಹದಿನೈದು ದಿನದಲ್ಲಿ ತನ್ನ ಜೀವಿತಾವಧಿಯನ್ನು ಕೊನೆಗೊಳಿಸುತ್ತದೆ ಎಂದು ಇದು 'ಫಾಸ್ಟೆಸ್ಟ್ ಲೈಫ್ ಸೈಕಲ್' ಇರುವ ಬ್ರೂಡ್ ಎಂದು ಹೇಳಿ, ಇನ್ನೂ ಹತ್ತಿಯ ಬಗ್ಗೆ ಹೇಳಿದರೆ ಇದು ನಮ್ಮ ದೇಶದಲ್ಲೇ ಉತ್ಕೃಷ್ಟ ತಳಿ ಎಂಬ ಹೆಗ್ಗಳಿಕೆಯೊಂದಿಗೆ ಮಾರುಕಟ್ಟೆಗೆ ಬರುತ್ತದೆ. ಇದಕ್ಕೆ ಸ್ಪ್ರೇ ಮಾಡುವುದು ಬೇಕಿಲ್ಲ ಗೊಬ್ಬರ ಕೊಡುವುದು ಬೇಕಿಲ್ಲ. ನೀರು ಅಷ್ಟೇನೂ ಬೇಕಿಲ್ಲ. ಊಳಿ ಬಿತ್ತಿದರೆ, ಬರೀ ಹಣ ಬೆಳೆಯುವ ಬೆಳೆ ಎಕರೆಗೆ ೧೮ ಕ್ವಿಂಟಾಲ್ ನಿಂದ ೨೦ ಕ್ವಿಂಟಾಲ್ ಬೆಳೆ."[೧೬]

ಜಾಗತೀಕರಣದ ಈ ಸಂದರ್ಭ ಪ್ರತಿಯೊಂದನ್ನು ಸಹ ವ್ಯಾಪಾರೀಕರಣದ ಹಿನ್ನೆಲೆಯಲ್ಲಿ ನೋಡುವ ಪರಿಪಾಠದಿಂದ ಇಂತಹ ಅನೇಕ ಪರಿಣಾಮಗಳನ್ನು ಎದುರಿಸಬೇಕಾಗಿದೆ. ಅಲ್ಲದೇ ಇದು ಹಸಿರು ಕ್ರಾಂತಿಯ ಮುಂದುವರೆದ ಭಾಗ. ಈ ತಳಿಯು ನಮ್ಮ ದೇಶದ ಸಫೀಸಿಯನ್ಸಿ ಮತ್ತು ಆರ್ಥಿಕತೆ ಎಂಬ ಘೋಷಣೆಯೊಂದಿಗೆ ಇದು ಮಾರುಕಟ್ಟೆಗೆ ಬರುತ್ತದೆ. ದೇಶಿ ತಳಿಗಳು ಉತ್ಪತ್ತಿಯಾಗುವುದು ಭ್ರೂಣಗಳಿಂದ. ಆದರೆ ಇಲ್ಲಿ ಭ್ರೂಣಾಭಿವೃದ್ಧಿ ಇಲ್ಲವೇ ಇಲ್ಲ. ಆದ್ದರಿಂದ ಎಷ್ಟು ಜನ ಸಸ್ಯಾಹಾರದಿಂದ ಅಂಡಾಹಾರಕ್ಕೆ ಪಲ್ಲಟಗೊಂಡಿದ್ದಾರೋ ಅವರನ್ನು ನ್ಯೂ ಕ್ರೂಸೆಲ್ ಕಂಪೆನಿಯವರು ಟಾರ್ಗೆಟ್ ಮಾಡಿದ್ದಾರೆ.

ಮುಂದುವರೆದು ಮಂಜಣ್ಣ ಈ ಕಂಪೆನಿಯ ತಳಿಗಳ ಬಗೆಗೆ ಹೀಗೆ ಹೇಳುತ್ತಾನೆ. "ಬಾಳೆ ಬೆಳೆಗಳ ಬಗ್ಗೆ ಟಿಸ್ಯೂ ಕಲ್ಚರಿಗೆ ಸಂಬಂಧಪಟ್ಟ ವಿಷಯಗಳನ್ನು ಹೇಳತೊಡಗಿದ. ಇದು ಈಗಿನ ಬಾಳೆ ಬೆಳೆಗಳಿಗಿಂತಲೂ ಹತ್ತು ಪಟ್ಟು ಈಲ್ಡು ಕೊಡುತ್ತದೆ. ಇದರಲ್ಲಿ ಸುಕ್ರೋಸ್ ಪ್ರಮಾಣ ಜಾಸ್ತಿ ಇರುವುದರಿಂದ ಬಹಳ ಸ್ವೀಟ್ ಮತ್ತು ಕಾರ್ಬೋಹೈಡ್ರೇಟ್ ಪ್ರಮಾಣಗಳು ಜಾಸ್ತಿ ಎಂದು ನ್ಯೂ ಕ್ರೂಸೆಲ್ ಕಂಪೆನಿಯ ಭವಿಷ್ಯದ ಕ್ಯಾಟ್‌ಲಾಗ್ ಎಂದು ನನ್ನ ಮುಂದೆ ಒಗೆದ."[೧೭]

ಕೃಷಿಯು ಈ ಹಂತದಲ್ಲಿ ತನ್ನ ಸ್ಥಿತ್ಯಂತರಗಳನ್ನು ಕಾಣುತ್ತಿರುವ ಹಿನ್ನೆಲೆ ಜಾಗತೀಕರಣದಿಂದ ಬಂದಂತಹ ಬಹುರಾಷ್ಟ್ರೀಯ ಕಂಪೆನಿಗಳ ಹಣದ ವ್ಯಾಮೋಹದಿಂದ. ಈ ರೀತಿಯಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವ ರೈತನಿಗೆ ಅಷ್ಟೇ ಅಲ್ಲದೇ ಇಡೀ ಸಮಾಜದ ಜನರ ಆರೋಗ್ಯದ ದೃಷ್ಟಿಯಿಂದ ಹಾನಿಯುಂಟಾಗುತ್ತಿದೆ. ನಿಸರ್ಗದ

ಮೂಲಕ ಪಡೆಯಬೇಕಾದ ಕೃಷಿ ಮೂಲ ಉತ್ಪನ್ನಗಳನ್ನು ರಾಸಾಯನಿಕಗಳ ಮೂಲಕ ಪಡೆಯುತ್ತಿರುವ ಇದರ ಹಿಂದಿನ ಮೂಲ ಉದ್ದೇಶ ಖಾಸಗೀ ಕಂಪೆನಿಗಳ ಹಿತಾಸಕ್ತಿ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಕಂಪೆನಿಗಳ ಮೂಲಕ ಇಡೀ ವ್ಯವಸ್ಥೆಯೊಂದನ್ನು ತನ್ನ ಹುನ್ನಾರದಲ್ಲಿ ಸಿಲುಕಿ ಹಾಕಿಕೊಳ್ಳುವಂತೆ ಮಾಡಲು ಕೆಟಲಾಗ್‌ಗಳನ್ನು ನೀಡಲಾಗುತ್ತದೆ. ಈ ರೀತಿಯಾಗಿ ನ್ಯೂ ಕ್ರೂಸೆಲ್ ಕಂಪೆನಿಯ ಕೆಟಲಾಗ್‌ನ ಮುನ್ನುಡಿಯಲ್ಲಿ “ನಮ್ಮ ದೇಶದ ಪ್ರಮುಖ ಸಮಸ್ಯೆಗಳಾದ ನಿರಕ್ಷರತೆ, ಬಡತನ, ಅನಾರೋಗ್ಯಗಳಿಗೆ ರೈತರ ಆರ್ಥಿಕತೆಯೇ ಆಯುಧವೆಂಬಂತೆ ಮುಂದಿನ ಶತಮಾನ ರೈತನದಾಗಲಿದೆ. ಅದಕ್ಕಾಗಿ ನಮ್ಮ ನ್ಯೂ ಕ್ರೂಸೆಲ್ ಕಂಪೆನಿ ಸಂಪೂರ್ಣ ರೈತರ ಏಳಿಗೆಗಾಗಿ ದುಡಿಯುತ್ತಿದೆ ಎಂದು ಬರೆದು, ಕೊನೆಗೆ ನಮ್ಮ ಭಾರತದ ಸ್ಲೋಗನ್ ಜೈ-ಜವಾನ್, ಜೈ-ಕಿಸಾನ್ ಎಂದು ಹೇಳಿ ಮುನ್ನುಡಿ ಮುಗಿಸಿದ್ದ.”[೧೮]

ಅಮರೇಶ ನುಗಡೋಣಿ ಅವರ ಕತೆಯಲ್ಲಿಯೂ ಸಹ ಕೃಷಿ ಜೀವನವು ಆಧುನಿಕ ವಿಜ್ಞಾನ-ತಂತ್ರಜ್ಞಾನದಿಂದ ಹೇಗೆ ದೂರ ಸರಿಯುತ್ತಿದೆ ಎನ್ನುವುದನ್ನು ‘ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು’ ಕತೆಯಲ್ಲಿ ವಿವರಿಸಲಾಗಿದೆ. ಇಡೀ ಗ್ರಾಮೀಣ ಹಳ್ಳಿ ಸಮುದಾಯವೊಂದು ಕೃಷಿಯೇ ತನ್ನ ಜೀವನದ ಆಸ್ತಿ ಎಂದು ತಿಳಿದಿರುವಾಗ ಆಧುನಿಕತೆಯಿಂದ ಬಂದಂತಹ ಅನೇಕ ಕೃಷಿ ಉಪಕರಣಗಳು ಹೇಗೆ ಇಡೀ ಕೃಷಿ ಸಂಸ್ಕೃತಿಯನ್ನು ನಿರ್ವಹಿಸುತ್ತಿದ್ದ ಜನರನ್ನು ಮೂಲೆಗುಂಪು ಮಾಡಿತು ಎನ್ನುವುದನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ.

ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಹೇಗೆ ಬದಲಾವಣೆಗೆ ಒಳಪಡುತ್ತಿದೆ ಎಂಬುದನ್ನು ಕತೆಯ ಮೂಲಕ ನೊಡುವುದಾದರೆ “ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು” ಎಂಬ ಮಾತುಗಳು ವ್ಯವಸಾಯದಲ್ಲಿ ಆದ ಬದಲಾವಣೆಗಳನ್ನು ಕತೆಯ ಮೂಲಕವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಆದರೆ ಗೌಡನಿಗೆ ಈ ರೀತಿಯ ಯಾಂತ್ರಿಕವಾದ ಬದುಕು ಅವನಿಗೆ ಸರಿಹೊಂದುತ್ತಿರಲಿಲ್ಲ. “ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ.” ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಅಲ್ಲದೇ ಇಡೀ ಸಮುದಾಯದ

ಜೊತೆಗೆ ಇರುವಂತಹ ಕೃಷಿ ಸಂಸ್ಕೃತಿಯ ಆಚರಣೆ, ನಂಬಿಕೆಯ ಜೊತೆಗೆ ಜನರ ನಡುವಿದ್ದ ಭಾವನಾತ್ಮಕ ಸಂಬಂಧಗಳು ಸಹ ಮರೆಯಾಗುತ್ತಿವೆ ಎನ್ನುವುದನ್ನು ನೋಡಿದಾಗ ನಿಜಕ್ಕೂ ವಿಜ್ಞಾನ ಮತ್ತು ತಂತ್ರಜ್ಞಾನವು ಕೃಷಿ ಕೇತ್ರದಲ್ಲಿ ಬದಲಾವಣೆಯನ್ನು ಉಂಟುಮಾಡಿವೆ.

ಕೊನೆಗೆ ಕತೆಯು ಚಳುವಳಿಗಾರರು ಶರಭನಗೌಡನ ಮನಸ್ಸನ್ನು ಒಲಿಸಿ ಇದುವರೆಗೂ ತನ್ನ ಏಳ್ಗೆಗಾಗಿ ದುಡಿದ ಜನರಿಗೆ ಭೂಮಿಯನ್ನು ಹಂಚು ಎಂಬ ಸಲಹೆಯನ್ನು ನೀಡಿದ ಮೇಲೆ ಅವನು ತನ್ನ ಜಮೀನಿನಲ್ಲಿ ದುಡಿದವರಿಗೆ ಭೂಮಿಯನ್ನು ಹಂಚಲು ಹೋದಾಗ ಅವರು ಅವನ ಭೂಮಿಯನ್ನು ನಯವಾಗಿ ತಿರಸ್ಕರಿಸುತ್ತಾರೆ. ವಡ್ಡರಮಲ್ಲ ಗೌಡನಿಗೆ "ಈಗ ನೋಡ್ರಿ, ನನ್ನ ಮಗ ಓದ್ಯಾನ, ರಾಮನ ಮಗ್ಳು ಓದ್ಯಾಳ. ಕೇರ್ಯಾಗ ದುಡಕಂದು ತಿಂಬ ಮಂದಿ ಈಗೀಗ ಶಾಲಿ ಕಲತು ಕುಂತಾವ. ನಿಮ್ಮ ಮಕ್ಕಳು ದೊಡ್ಡ ದೊಡ್ಡ ಕೆಲ್ಸದಾಗರ ಅಂಬೋದು ಕೇಳೀವಿ. ಅವುರಿಗೆ ಹೇಳ್ರಿ, ನಮ್ಮ ಮಕ್ಕಳಿಗೆ ಒಂದು ಸಣ್ಣ ಚಾಕ್ರಿ ಕೊಡ್ಸಿದ್ರ, ತಿಂಗಳ ತಿಂಗಳ ಪಗಾರ ಬರುವಂತೆ ಆದ್ರ ನಮ್ಗ ಪಾಡ" ಎಂದು ಹೇಳುವ ಮಾತುಗಳು ಆಧುನಿಕತೆಯು ಸೃಷ್ಟಿ ಮಾಡಿದಂತಹ ಅನೇಕ ಉಪಕರಣಗಳು ಕೃಷಿ ಜೀವನದ ಶ್ರಮಿಕರ ವೃತ್ತಿಯನ್ನು ಕಸಿದುಕೊಂಡು ಅವರು ಬೇರೆ ವೃತ್ತಿಯನ್ನು ಹುಡುಕುವಂತಹ ಸ್ಥಿತಿಯನ್ನು ನಿರ್ಮಿಣ ಮಾಡಿದೆ ಎನ್ನುವುದನ್ನು ತಿಳಿಯಬಹುದಾಗಿದೆ.

ವಸುಧೇಂದ್ರ ಅವರ 'ಕ್ಷಮೆಯಿಲ್ಲದೂರಿನಲಿ' ಕತೆಯು ಇಂದಿನ ದಿನಮಾನಗಳಲ್ಲಿ ನಡೆಯುತ್ತಿರುವ ಐಟಿ-ಬಿಟಿಯಲ್ಲಿ ಕೆಲಸ ಮಾಡುವಂತಹ ಜನರ ಕುರಿತುದಾಗಿದೆ. ಅವರು ಅಪಾರ್ಟ್‌ಮೆಂಟೊಂದರಲ್ಲಿ ವಾಸಿಸುತ್ತಿದ್ದರೂ ಕೂಡ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಗುಣಗಳು ಇಲ್ಲದಾಗಿ, ಬದುಕನ್ನು ಜನರ ಜೊತೆ ಬೆರೆಯದೇ ಕೇವಲ ತಂತ್ರಜ್ಞಾನದ ಜೊತೆಯೇ ಕಾಲ ಕಳೆಯುವ ಮಾನವೀಯ ಮೌಲ್ಯಗಳನ್ನು ಮರೆತಿರುವ ಬಗೆಗೆ ಕತೆಯಲ್ಲಿ ಪ್ರಸ್ತಾಪಿಸುತ್ತಾರೆ. ಜಾಗತೀಕರಣದ ಪ್ರಭಾವದಿಂದಾಗಿ ಇಂದು ವ್ಯಕ್ತಿಗಳು ಪರಸ್ಪರ ತಮ್ಮನ್ನು ತಾವು ಇಂಟರ್‌ನೆಟ್, ಈ-ಮೇಲ್‌ಗಳ ಮೂಲಕವೇ ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳುತ್ತಾ ತಮ್ಮ ದೈನಂದಿನ ಘಟನೆಗಳನ್ನು ಅಂತರ್ಜಾಲದ ಮೂಲಕ ಚರ್ಚಿಸುವ ಕುರಿತು ಕತೆಯಲ್ಲಿ ಚಿತ್ರಿಸಿದ್ದಾರೆ. ಮನುಷ್ಯರು ಇಂದು ಮಾನವೀಯತೆಯನ್ನು ಮರೆತು ತಮ್ಮ ತೀರಾ ವೈಯಕ್ತಿಕವಾದ ವಿಚಾರಗಳನ್ನು ಸಹ ಈ ಇಂಟರ್‌ನೆಟ್‌ನ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುದರ ಅಪಾಯವನ್ನು ಕತೆಯು ಹಿಡಿದಿಡುತ್ತದೆ.

ಮಗುವೊಂದು ಈಜುಕೊಳದಲ್ಲಿ ಒಂದ ಮಾಡಿಕೊಳ್ಳುವ ಘಟನೆಯನ್ನಿಟ್ಟುಕೊಂಡು ಶುರುವಾಗುವ ಈ ಚರ್ಚೆಯು ಒಂದು ಕುಟುಂಬದ ದುರಂತ್ಯ ಅಂತ್ಯವನ್ನು ಹೇಗೆ ಕಾಣಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಕ್ಷಮೆಯನ್ನು ನೇರವಾಗಿಯೇ ಕೇಳಬಹುದಾಗಿದ್ದಂತಹ ಸಂದರ್ಭಗಳು ನಮಗಿದ್ದರೂ ಸಹ ಅದನ್ನು ನಾಲ್ಕು ಜನರ ಮುಂದೆ ಪ್ರತಿಷ್ಠೆಯಂತೆ ಭಾವಿಸಿ ಇಂಟರ್‌ನೆಟ್‌ನ ಮೊರೆ ಹೋಗಿ ಅಲ್ಲಿ ಕ್ಷಮೆ ಕೇಳುವ ಪ್ರಸಂಗವು ಒಂದು ಕುಟುಂಬದ ಮಾನಸಿಕ ನೆಮ್ಮದಿಯನ್ನು ಹಾಳುಮಾಡುವ ಮೂಲಕ ಸುಜಾಳ ಗಂಡನಾದ ಶ್ರೀನಿವಾಸನ ಅಂತ್ಯವನ್ನು ಕಾಣುವ ಮಟ್ಟಕ್ಕೆ ಹೋಗುತ್ತದೆ. ಕತೆಯಲ್ಲಿ ಮುಖ್ಯವಾಗಿ ನಾವು ಕಾಣಬಹುದಾದ ಮುಖ್ಯ ಅಂಶವೆಂದರೆ ಇಂದಿನ ದಿನಗಳಲ್ಲಿ ತಂತ್ರಜ್ಞಾನದ ಬೆನ್ನುಹತ್ತಿ ಮನುಷ್ಯ ಸಂಬಂಧಗಳನ್ನು ಮರೆತು ಓಡುವ ಕುದುರೆಗಳಂತೆ ಪಯಣ ಮಾಡುತ್ತಿದ್ದೇವೆ. ಜನರ ಜೊತೆಗೆ ಬೆರೆಯದೇ ಏಕಾಂಗಿ ಭಾವವನ್ನು ಹೊಂದಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ನಮ್ಮ ಅಂತ್ಯವನ್ನು ನಾವೇ ಕಂಡುಕೊಳ್ಳುತ್ತಿದ್ದೇವೆ ಎಂಬುದನ್ನು ತಿಳಿಸುತ್ತದೆ.

ಮನುಷ್ಯ ಇಂದು ಎಂತಹ ಮಟ್ಟವನ್ನು ತಲುಪಿದ್ದೇವೆಂದರೆ ಸಾವಿನ ವಿಷಯವನ್ನು ತಿಳಿಸಿ ಸಹಾಯ ಮಾಡುವಂತೆ ಕೋರುವ ಸುಜಾಳ ಪರಿಸ್ಥಿತಿಯ ಅರಿವು ಆಕೃತಿ ಶರ್ಮಾಳಿಗೆ ಗೊತ್ತಿದ್ದರೂ ಅವಳ ಸಹಾಯಕ್ಕೆಂದು ಹೊರಟವಳು ಟೇಬಲ್ ಮೇಲಿದ್ದ ಕಂಪ್ಯೂಟರ್‌ನ್ನು ನೋಡಿ ಶ್ರೀನಿವಾಸನ್ ರೌಡಿಯಿಂದ ಸತ್ತ ವಿಷಯವನ್ನು ಯಾಹೂ ಐಡಿಯೊಳಗೆ ಲಾಗಿನ್ ಆಗಿ ಇಂಟರ್‌ನೆಟ್‌ನಲ್ಲಿ ಪ್ರಸ್ತಾಪಿಸಿ ಹೊರಡುತ್ತಾಳೆ. ಅದಕ್ಕೆ ಪ್ರತಿಕ್ರಿಯೆಯಾಗಿ ನಾಲ್ಕಾರು ಕಾಮೆಂಟ್‌ಗಳು ಬರುತ್ತವೆ ಎಂಬಲ್ಲಿ ಕತೆಯು ಮುಗಿಯುತ್ತದೆ. ಅಂದರೆ ಸಾವನ್ನು ಕೂಡ ನಾವು ಇಂದು ಗಂಭಿರವಾಗಿ ಪರಿಗಣಿಸುತ್ತಿಲ್ಲ ಎಂಬ ಸ್ಥಿತಿಯನ್ನು ಪ್ರಸ್ತುತ ಕತೆಯು ಜಾಗತೀಕರಣ ಪ್ರಭಾವವು ಮನುಷ್ಯರನ್ನು ಇಂದು ಯಾವ ಸ್ಥಿತಿಗೆ ತಂದೊಡ್ಡಿದೆ ಎಂಬುದನ್ನು ಸೂಕ್ಷ್ಮವಾಗಿ ಹಾಗೆಯೇ ಗಂಭಿರವಾಗಿ ನಮ್ಮೆದುರಿಗಿಡುತ್ತದೆ.

ಅನುಪಮಾ ಪ್ರಸಾದ್ ಅವರ 'ಡೇಗೆ' ಕತೆಯು ಮುಖ್ಯವಾಗಿ ಇಂದಿನ ವರ್ತಮಾನದ ದಿನಗಳಲ್ಲಿ ಎಲ್ಲದಕ್ಕೂ ಮನುಷ್ಯ ವೈಜ್ಞಾನಿಕ ಸತ್ಯಗಳೊಂದಿಗೆ ಅದನ್ನು ನಿರ್ವಹಿಸುವ ಅನಿವಾರ್ಯತೆಯನ್ನು ಕಂಡುಕೊಂಡಿರುವುದನ್ನು ಗುರುತಿಸಲು ಸಾಧ್ಯವಾಗಿದೆ. ದೈಹಿಕವಾದ ಕಾರಣಗಳಿಗಾಗಿ ಮನುಷ್ಯ ತಂತ್ರಜ್ಞಾನವನ್ನು ಬಳಸಿಕೊಂಡು ಇನ್ನೊಬ್ಬರನ್ನು ಬಳಸಿಕೊಳ್ಳುವ ಉದ್ದೇಶವನ್ನು ಕತೆಯು ನಿರೂಪಿಸುತ್ತದೆ. ಕತೆಯ ಮುಖ್ಯ ಪಾತ್ರವಾದ ನೀಲು ಆರ್ಥಿಕವಾಗಿ

ಹಿಂದುಳಿದಿರುವ ಕಾರಣಕ್ಕಾಗಿ ಬಾಡಿಗೆ ತಾಯಿಯಾಗುವ ಪ್ರಕ್ರಿಯೆಗೆ ಒಳಪಡುತ್ತಾಳೆ. ಇದಕ್ಕೆ ಸಮಾಜದಲ್ಲಿ ಉನ್ನತ ಹುದ್ದೆಯಲ್ಲಿದ್ದು, ನೈತಿಕವಾಗಿ ತಡೆಯಬೇಕಾಗಿದ್ದ ಡಾಕ್ಟರ್ ಕೂಡಾ ಈ ಬಾಡಿಗೆ ತಾಯಿಯಾಗುವ ನೀಲೂಗೆ ಸಹಕರಿಸುವ ಮೂಲಕ ಅವಳಲ್ಲಿರುವ ನೈತಿಕ ಪ್ರಜ್ಞೆಯನ್ನು ಮರೆತು ಗರ್ಭಧಾರಣೆಯ ಸಮಯದಲ್ಲಿ ಇರುವ ವಾಸ್ತವ ಸಂಗತಿಯನ್ನು ಕೇವಲ ಹಣದ ಕಾರಣಕ್ಕಾಗಿ ಮರೆಯುವ ಪ್ರಸಂಗವನ್ನು ಕಾಣಬಹುದು.

ಮನುಷ್ಯ ನೈಸರ್ಗಿಕ ಅಂಶಗಳನ್ನು ತನ್ನ ಆಸೆ–ಆಕಾಂಕ್ಷೆಗಳಿಗಾಗಿ ಯಂತ್ರದಂತೆ ಬದಲಾಗುತ್ತಿರುವ ವಿವರಗಳನ್ನು ಈ ಕತೆಯಲ್ಲಿ ಕಾಣಬಹುದು. ಮಕ್ಕಳಾಗದಿದ್ದ ಶ್ರೀಮಂತ ದಂಪತಿಗಳಲ್ಲಿನ ವೀರ್ಯಾಣು ಮತ್ತು ಅಂಡಾಣುಗಳನ್ನು ಶಕ್ತವಾಗಿರುವ ಮಹಿಳೆಯ ದೇಹಕ್ಕೆ ಸೇರಿಸಿ ಆ ಮಗುವನ್ನು ಅವಳ ದೇಹದಲ್ಲಿ ಬೆಳೆಸುವ ಮೂಲಕ ಬಾಡಿಗೆ ತಾಯಿಯಾಗುವ ಪರಿಕಲ್ಪನೆಯನ್ನು ಆಧುನಿಕತೆಯ ವರ್ತಮಾನದ ದಿನಗಳಲ್ಲಿ ಕಾಣಲು ಸಾಧ್ಯವಾಗಿದೆ. ಈ ತೆರನಾದ ಬಾಡಿಗೆ ತಾಯಿಯಾಗುವ ಪರಿಕಲ್ಪನೆಯನ್ನು ನೀಲೂಳ ಗಂಡನು ಹೀಗೆ ಅರ್ಥೈಸಿಕೊಂಡಿದ್ದಾನೆ. 'ತಾನು ತರಕಾರಿ ಮಾರುವ ಗಾಡಿಯನ್ನ ಬಾಡಿಗೆಗೆ ಪಡೆಯುತ್ತಿದ್ದ ನೀಲೂಳ ಗಂಡನಿಗೆ ಬಾಡಿಗೆ ಭಾಷೆಯಲ್ಲೇ ಡಾಕ್ಟ್ರಮ್ಮನೂ ಅಧಿಕಾರಿಯೂ ವಿವರಿಸಿದ್ದರಿಂದ ಬಾಡಿಗೆ ಗರ್ಭಾಶಯದ ವ್ಯವಹಾರವೆಂದರೆ ತಾನು ಗಾಡಿ ಬಾಡಿಗೆ ಪಡೆಯುವುದು ಎಷ್ಟು ವ್ಯವಹಾರಿಕವೋ ಇದೂ ಅಷ್ಟೇ ಅನಿಸಿತ್ತು'.

ಡಾಕ್ಟರ್ ನೀಲಮ್ಮಳಿಗೆ ಕುರಿತು 'ಒಳ್ಳೆ ಕೆಲಸ ಮಾಡಿದೆ ನೀಲಮ್ಮ. ಮಕ್ಕಳನ್ನು ಹೆರಲಿಕ್ಕೆ ಆಗದಿದ್ದೋರ ಮಡಿಲು ತುಂಬಿದ ಪುಣ್ಯ ಬರ್ತದೆ ನಿಂಗೆ' ಎಂದಾಗ ನೀಲು ಮುಖ ಸಿಂಡರಿಸಿ 'ನಾವೇನ್ ಪುಣ್ಯ ಸಂಪಾದನೆ ಮಾಡಾಕ್ ಬಂದಿಲ್ಲ ಡಾಕ್ಟ್ರಮ್ಮ. ಅವ್ರಿಗೊಳ್ಳೆದಾಗ್ಲಿ ಅನ್ಕೊಂಡು ಬಂದ್ವಾ? ಮಗ ಹೆತ್ಕೊಟ್ರೆ ಕಾಸು ಬರುತ್ತೆ ಅದ್ಕೇ ಬಂದ್ವಿ' ಎನ್ನುವ ಮಾತುಗಳು ಮನುಷ್ಯ ಇಂದು ತನ್ನ ನೈತಿಕತೆಯನ್ನು ಮರೆತು ಅಧೋಗತಿಗೆ ಇಳಿದಿದ್ದಾನೆ ಎನ್ನುವುದನ್ನು ತೋರಿಸುತ್ತದೆ. ಸಹಜ ಜೀವನ ಕ್ರಮವನ್ನು ಅನುಸರಿಸುತ್ತಿದ್ದ ನೀಲಮ್ಮನಿಗೆ ಇಂತಹ ವೈಭವಯುತ ಜೀವನವು ಅವಳಲಿದ್ದಲ್ಲಿಯೇ ಎಲ್ಲವನ್ನು ತಂದು ಕೊಡುವುದು ಒಂದು ಬಗೆಯ ನಿರಾಸಕ್ತಿಯನ್ನು ಉಂಟುಮಾಡಿತು. ಅವಳಿಗೆ ತನ್ನ ಗಂಡನ ಬಳಿಯಿದ್ದಾಗಿನ ಸುಖ ಇಲ್ಲಿ ಇಲ್ಲ ಎನಿಸುವುದು ಸಹ ಮನುಷ್ಯನ ಎಲ್ಲಾ ಆಸೆಗಳನ್ನು ಕೇವಲ ದುಡ್ಡಿನಿಂದ ತೀರಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತದೆ.

ಈ ರೀತಿಯ ವ್ಯವಹಾರವನ್ನು ಮೊಟ್ಟೆ ಕೇಸು ಎಂಬ ಹೊಸದಾದ ಹೆಸರಿನೊಂದಿಗೆ ಆಸ್ಪತ್ರೆಯಲ್ಲಿನ ನರ್ಸ್ ಮತ್ತು ಅಜ್ಜಿಯು ಗುರುತಿಸುವುದನ್ನು ಕಾಣಬಹುದು. ಇಂತಹದ್ದೇ

ಒಂದು ಕೇಸನ್ನು ನರ್ಸಮ್ಮ ನೀಲುಗೆ ಹೇಳಿ ಒಬ್ಬ ಹುಡುಗಿ ಒಂದು ಹೀಗೆ ಮಗುವನ್ನು ಹೆತ್ತುಕೊಟ್ಟು ಅವಳು ಸತ್ತೇಹೋದದ್ದನ್ನು ತಿಳಿಸುತ್ತಾಳೆ. ನೀಲೂ ಮಗುವನ್ನು ಹೆತ್ತು ಕೊಟ್ಟು ಹೊರಗೆ ಬಂದಾಗ ಈ ಪರಿಯಾದ ಅವಳ ಬಿಗಿಯುತ್ತಿರುವ ಮೊಲೆಗಳಲ್ಲಿ ನೋವನ್ನು ತಡೆದುಕೊಳ್ಳಲು ಅವಳಿಗೆ ಸಾಧ್ಯವಾಗದೇ ಇನ್ನೊಮ್ಮೆ ಇಂತಹ ಕೆಲಸಕ್ಕೆ ಹೋಗಬಾರದೆಂದುಕೊಂಡಳು. ಆದರೆ ಮನೆಯ ಆರ್ಥಿಕ ಪರಿಸ್ಥಿಯು ಅವಳಿಗೆ ಮತ್ತೆ ಬಾಡಿಗೆ ತಾಯಿಯಾಗಿ ಮುಂದಿನ ಬಾರಿ ಶೆಡ್ಡಿನ ಹಿಂದೆ ತಗಡಿನ ಗೋಡೆ ಮಾಡಿ ಒಂದು ಪಾಯಿಖಾನೆ ಕಟ್ಟಬೇಕು, ಹಾಗೆಯೇ ಶೆಡ್ಡಿಗೆ ಹಂಚು ಹಾಕಿದರಾಯ್ತು ಎಂದುಕೊಂಡಳು.

ಪ್ರಕೃತಿ ನಿಯಮಕ್ಕೆ ವಿರೋಧವಾಗಿ ಕೆಲಸ ಮಾಡುವ ಮನುಷ್ಯನು ತನ್ನ ಆಸೆ-ಆಕಾಂಕ್ಷೆಗಳಿಗಾಗಿ ಜೀವವನ್ನೇ ಒತ್ತೆ ಇಟ್ಟು ಇಂತಹ ಕೆಲಸಗಳಲ್ಲಿ ಭಾಗಿಯಾಗುವ ಪ್ರಕ್ರಿಯೆಯನ್ನು ಕಾಣಬಹುದು. ಸಮಾಜದಲ್ಲಿನ ಆರ್ಥಿಕವಾದ ಅಸಮಾನತೆಯು ಇಂತಹ ಕೆಲಸಕ್ಕೆ ಅವರನ್ನು ಅಣಿಮಾಡುವ ದುಸ್ಥಿತಿಗೆ ತಂದಿರುವುದನ್ನು ಈ ಕತೆಯ ಮೂಲಕ ಕಾಣಲು ಸಾಧ್ಯವಾಗಿದೆ.

೬.೪ ಮಾರುಕಟ್ಟೆಯಲ್ಲಿನ ಬದಲಾವಣೆ

ಜಾಗತೀಕರಣದ ಮುಖ್ಯ ಧೋರಣೆಯೇ ಮುಕ್ತ ಮಾರುಕಟ್ಟೆ. ಅಂದರೆ ಮಾರುಕಟ್ಟೆ ವ್ಯವಸ್ಥೆಯು ಕೇವಲ ದೇಶಕ್ಕೆ ಮಾತ್ರ ಸೀಮಿತವಾಗಿರದೇ ಜಾಗತಿಕ ಮಟ್ಟದಲ್ಲಿ ಯಾರೂ ಬೇಕಾದರೂ ಮಾರುಕಟ್ಟೆಯ ಮೂಲಕ ವ್ಯಾಪಾರ ವ್ಯವಹಾರವನ್ನು ಮಾಡಬಹುದು ಎನ್ನುವ ನಿರ್ಣಯವದು.

ಮಹಾಂತೇಶ ನವಲ್‌ಕಲ್ ಅವರ ಈ ಕತೆಯು ಭಾರತದ ಜನರ ಮುಖ್ಯ ಮೂಲಕಸುಬಾದ ಕೃಷಿಯನ್ನು ಕುರಿತದ್ದಾಗಿದೆ. ಕತೆಯ ಶೀರ್ಷಿಕೆ 'ಭಾರತ ಭಾಗ್ಯವಿಧಾತ' ಶೀರ್ಷಿಕೆಯನ್ನು ಕತೆಗಾರರು ವ್ಯಂಗ್ಯದ ಹಿನ್ನೆಲೆಯಲ್ಲಿ ಬಳಸಿರುವುದನ್ನು ಕಾಣಬಹುದು. ದೇಶದ ಬೆನ್ನುಲುಬೆಂದು ಕರೆಯಲಾಗುವ ರೈತನು ಸಮಕಾಲೀನ ಸಂದರ್ಭದಲ್ಲಿ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾನೆ. ಈ ತೀವ್ರತೆ ಎಷ್ಟರ ಮಟ್ಟಿಗೆ ಇದೆಯೆಂದರೆ ಆ ಸಮಸ್ಯೆಗಳನ್ನು ರೈತನು ಬಗೆಹರಿಸಿಕೊಳ್ಳಲಾಗದೇ ಆತ್ಮಹತ್ಯೆಯ ಹಾದಿಯನ್ನು ಅವನು ಹಿಡಿಯುತ್ತಿದ್ದಾನೆ. ಜಾಗತೀಕರಣವನ್ನು ಭಾರತದ ಅರ್ಥವ್ಯವಸ್ಥೆಯಲ್ಲಿ ಅಳವಡಿಸಿಕೊಂಡ ನಂತರ ಉಂಟಾದ ಪಲ್ಲಟಗಳಿಂದಾಗಿ ಅನೇಕ ಬಹುರಾಷ್ಟ್ರೀಯ ಕಂಪನೆಗಳು ಹುಟ್ಟಿಕೊಂಡು ವ್ಯವಸಾಯಕ್ಕೆ ಪೂರಕವಾಗಿ ಕೆಲಸ ಮಾಡಲು ಅಂದರೆ ರಸಗೊಬ್ಬರ, ಕೀಟನಾಶಕದಂತಹ

ಕೆಲವು ಸರಕುಗಳನ್ನು ಉತ್ಪಾದನೆ ಮಾಡಲು ಶುರುಮಾಡಿದವು. ಅಲ್ಲದೇ ಈ ಬಹುರಾಷ್ಟ್ರೀಯ ಕಂಪೆನಿಗಳು ಮಾರುಕಟ್ಟೆಯ ಮೇಲೆ ಹಿಡಿತವನ್ನು ಸಾಧಿಸುವ ಪ್ರಯತ್ನವೂ ಹೆಚ್ಚಾಯಿತು. ಆದರೆ ಅದರಿಂದ ಉಂಟಾದ ದುಷ್ಪರಿಣಾಮವನ್ನು ಪ್ರಸ್ತುತ ಭಾರತ ಭಾಗ್ಯವಿಧಾತ ಕತೆಯು ಕೆಲವು ಉದಾಹರಣೆಗಳ ಮೂಲಕ ತಿಳಿಸುತ್ತದೆ. ಮೂಲ ಕೃಷಿ ಪದ್ಧತಿಯನ್ನು ಬದಲಾಯಿಸಿ ಅದಕ್ಕೆ ತಂತ್ರಜ್ಞಾನಯುಕ್ತವಾದ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ರೈತರು ತಮ್ಮ ಏಳ್ಗೆಯನ್ನು ಸಾಧಿಸಬಹುದೆಂದು ತಿಳಿಸಿದರೂ, ಪ್ರಾಯೋಗಿಕವಾಗಿ ಅದರಿಂದ ಉಂಟಾದ ನಷ್ಟವನ್ನು ಯಾರೂ ಸಹ ಪರಿಗಣಿಸದೇ ರೈತ ಸಾಲವನ್ನು ಮಾಡುವ, ಸಾಲಬಾಧೆಗೆ ತಾಳಲಾಗದೇ ಆತ್ಮಹತ್ಯೆಗೆ ಶರಣಾಗುವ ಪರಿಸ್ಥಿತಿಯನ್ನು ಕುರಿತು ಕತೆಯು ಅಭಿವ್ಯಕ್ತಿಸಿದೆ.

ಹಳ್ಳಿಯೊಂದರಲ್ಲಿ ವ್ಯವಸಾಯ ವೃತ್ತಿಯನ್ನೇ ತಮ್ಮ ಬದುಕಿನ ಆಸರೆಯನ್ನಾಗಿ ಮಾಡಿಕೊಂಡ ಕುಟುಂಬವು ಹೇಗೆ ಈ ಕಂಪೆನಿಗಳ ಮಾರುಕಟ್ಟೆಯ ಕುತಂತ್ರದಿಂದಾಗಿ ಆತ್ಮಹತ್ಯೆಯ ಬಾಗಿಲು ತಟ್ಟಬೇಕಾಗುತ್ತದೆ ಎಂಬುದನ್ನು ಕತೆಯು ತಿಳಿಸುತ್ತದೆ. ಈ ಬಹುರಾಷ್ಟ್ರೀಯ ಕಂಪನಿಗಳು ಮಾಡುವ ವ್ಯಾಪಾರದ ತಂತ್ರವನ್ನು ಕತೆಯು ತಿಳಿಸುತ್ತದೆ. ಕತೆಯು ಮುಖ್ಯ ಪಾತ್ರವಾದ ರಮೇಶನ ತಂದೆಯು ಈ ಕೀಟನಾಶಕ ಔಷಧಿಗಳನ್ನು ಕೊಂಡು ಅದರಿಂದ ಬೆಳೆಯು ಸರಿಯಾಗಿ ಬರದೇ ಅವನು ಸಾಲಗಾರರ ಕಾಟಕ್ಕೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಇದೇ ಕಾರಣಕ್ಕಾಗಿಯೇ ರಮೇಶನ ತಾಯಿಯು ಕೀಟನಾಶಕ ಔಷಧಿಯನ್ನು ಕುಡಿದು ಆತ್ಮಹತ್ಯೆಗೆ ಶರಣಾಗಿರುತ್ತಾಳೆ. ಅಲ್ಲದೇ ಈ ಸಾಲಕ್ಕಾಗಿ ರಮೇಶನ ಅಜ್ಜಿ ಸಂಗಮ್ಮನನ್ನು ಹಾಗೂ ಕುರುಡಿ ತಂಗಿಯನ್ನು ಮಾನಸಿಕವಾಗಿ ಹಿಂಸಿಸುವ ಪ್ರಸಂಗವನ್ನು ಕಾಣುತ್ತೇವೆ.

ಈ ಕಂಪೆನಿಗಳು ಮಾಡುವ ಹುನ್ನಾರವನ್ನು ರಮೇಶನು ಪ್ರಶ್ನಿಸುತ್ತಾನೆ. ರಾಮಚಂದ್ರಪ್ಪನ ಬಳಿ 'ನಮ್ಮ ತಂದೆಯವರು ನಿಮ್ಮ ಬಳಿ ಸಾಲ ಮಾಡಿದ್ದು ಹತ್ತಿ ಬೆಳೆಗಾಗಿ ಆದರೆ ನೀವು ನಮ್ಮ ತಂದೆಯವರಿಗೆ ಭತ್ತಕ್ಕೆ ಉಪಯೋಗಿಸುವ ಕೀಟನಾಶಕಗಳನ್ನು ಕೊಟ್ಟಿದ್ದೀರಾ? ಇದು ಮೋಸವಲ್ಲವೇ?' ಎನ್ನುತ್ತಾನೆ. ಮೂಲತಃ ರಮೇಶನು ಒಂದು ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದವನಾದ್ದರಿಂದ ಏಜೆಂಟ್‌ಗಳು ಹತ್ತಾರು ಕಂಪೆನಿಗಳ ಜೊತೆ ಒಪ್ಪಂದವನ್ನು ಮಾಡಿಕೊಂಡಿರುತ್ತವೆ. ಮಾರಾಟ ಮಾಡುವ ಗುರಿಗೆ ಅನುಗುಣವಾಗಿ ಕಂಪೆನಿಗಳು ವರ್ಷ ವರ್ಷಕ್ಕೂ ಸರಪಳಿ ಟಾರ್ಗೆಟ್ ಅನ್ನು ನೀಡುತ್ತವೆ. ಅಂದರೆ ಹತ್ತಿಯ ಕೀಟನಾಶಕ ಮಾರಬೇಕಾದರೆ ಭತ್ತದ ಕೀಟನಾಶಕವನ್ನು ಕೊಳ್ಳಲೇಬೇಕು. ಕಂಪೆನಿಗಳು ಹೇಗೆ ರೈತನನ್ನು

ಇಕ್ಕಟ್ಟಿಗೆ ಸಿಲುಕಿಸಿವೆ ಎಂಬುದನ್ನು ಇಲ್ಲಿ ತಿಳಿಯಬಹುದು. ಭೂಮಿಗೆ ಅನುಗುಣವಾಗಿ ಬೆಳೆಗಳನ್ನು ಬೆಳೆಯುವ ರೈತನು ಬೆಳೆಗೆ ಕೀಟನಾಶಕವನ್ನು ಹೊಡೆಯಲು ಆ ಬೆಳೆಯ ಜೊತೆಗೆ ಮತ್ತೊಂದು ಬೆಳೆಯ ಕೀಟನಾಶಕವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾರುಕಟ್ಟೆಯ ಈ ಸಿದ್ಧಾಂತಗಳು ದೇಶದ ಬೆನ್ನುಲುಬು ಎಂದು ಕರೆದುಕೊಳ್ಳುವ ರೈತನಿಗೆ ಪೂರಕದಾಯವಾಗದೇ ಮಾರಕವಾಗಿರುವುದನ್ನು ಗಮನಿಸಬಹುದು.

ವಿವೇಕ ಶಾನಭಾಗ ಅವರ 'ಕಂತು' ಕತೆಯು ಮಾವಿನೂರು ಎಂಬ ಹಳ್ಳಿಯೊಂದರಲ್ಲಿ ನಡೆಯುವ 'ಗ್ರಹಣ'ವನ್ನೇ ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತ ಹಳ್ಳಿಯಲ್ಲಿ ಆಗಬಹುದಾದ ಹಲವಾರು ಬದಲಾವಣೆಗಳನ್ನು ಗುರುತಿಸುತ್ತಿದ್ದಾರೆ. ಬಿಡಿ-ಬಿಡಿಯಾದ ಪಾತ್ರಗಳ ಮೂಲಕ, ಘಟನೆಗಳ ಮೂಲಕ ಮಾವಿನೂರು ಎಂಬ ಚಿಕ್ಕ ಹಳ್ಳಿಯೊಂದು ಬದಲಾವಣೆಗೆ ಒಳಗಾಗುತ್ತಿರುವ ಮೂಲಕ ಊರಿನ ಮತ್ತು ಅಲ್ಲಿರುವ ಜನರ ಅಂತ್ಯವು ಹೇಗೆ ನೆಡೆಯುತ್ತದೆ ಎಂಬುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಇಡೀ ಹಳ್ಳಿಯ ಜನರ ಜೀವನವೆಂಬುದು ಹೇಗೆ 'ಪೂರ್ಣ ಗ್ರಹಣ' ಎಂಬ ನೈಸರ್ಗಿಕವಾಗಿ ಆಗುವ ಪ್ರಕ್ರಿಯೆಯ ಕಾರಣದಿಂದಾಗಿ ತಮ್ಮ ಗ್ರಾಮದಲ್ಲಿ ಆಗಬಹುದಾದ ಸಾಮಾಜಿಕವಾದ ಪಲ್ಲಟಗಳನ್ನು ಕತೆಯಲ್ಲಿ ಕಾಣಬಹುದು. ಆ ಮೂಲಕ ಪ್ರಸ್ತುತ ಸಂದರ್ಭದ ಸಾಮಾಜಿಕ ಬಿಕ್ಕಟ್ಟುಗಳನ್ನು, ಸಾಂಸ್ಕೃತಿಕವಾದ ಬಿಕ್ಕಟ್ಟುಗಳನ್ನು ಕತೆಯ ನಮ್ಮೆದುರಿಗೆ ತೆರೆದಿಡುತ್ತದೆ.

ಗ್ರಹಣ ಎಂಬುದು ಮಾವಿನೂರಿನಲ್ಲಿ ನಡೆಯುತ್ತದೆ ಎಂಬುದನ್ನು ಹಳ್ಳಿಯ ಜನರು ಹಾಗೂ ವಿಜ್ಞಾನಿಗಳು, ಹಳ್ಳಿಯಲ್ಲಿಯೇ ಇರುವ ವಿಜ್ಞಾನದ ಶಿಕ್ಷಕರಾದ ಸದಾನಂದ ಮುಂತಾದವರ ಮೂಲಕ ತಮ್ಮ ತಮ್ಮ ದೃಷ್ಟಿಕೋನಕ್ಕೆ ತಕ್ಕಂತೆ ಅದನ್ನು ಎದುರುಗೊಳ್ಳುವ ಪರಿಸ್ಥಿತಿಯನ್ನು ಕತೆಯು ನಿರೂಪಿಸುತ್ತಿದೆ. ಕತೆಯು ಗ್ರಹಣವನ್ನು ಮುಖ್ಯವಾಗಿ ೨ ನೆಲೆಗಳಲ್ಲಿ ವಿಸ್ತರಿಕೊಳ್ಳುವುದನ್ನು ಕಾಣಬಹುದು.

೧. ವೈಜ್ಞಾನಿಕ ನೆಲೆಯಲ್ಲಿ

೨. ಶಾಸ್ತ್ರ/ನಂಬಿಕೆಯ ನೆಲೆಯಲ್ಲಿ

ಗ್ರಹಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಪಾತ್ರಗಳು ಅವರ ನಂಬಿಕೆ ಮತ್ತು ಅವರ ತಿಳುವಳಿಕೆಯ ಅರ್ಥದಲ್ಲಿ ಗ್ರಹಿಸಲು ಪ್ರಯತ್ನಿಸುತ್ತಿವೆ. ಸದಾನಂದ ಮಾಸ್ತರರ ಮೂಲಕ ವೈಜ್ಞಾನಿಕವಾಗಿ ಗ್ರಹಣದ ಪರಿಕಲ್ಪನೆಯನ್ನು ಹಳ್ಳಿಗರಿಗೆ ತಿಳಿಸಲು ಪ್ರಯತ್ನಿಸಿದರೂ ಜನರಿಗೆ ಅದು ಅರ್ಥವಾಗದೇ ಹೋಗುವ ಪರಿಸ್ಥಿತಿ ಕಂಡುಬರುತ್ತದೆ. ಮಾವಿನೂರಿನಲ್ಲಿಯೇ

ಈ ಗ್ರಹಣವು ಪೂರ್ಣವಾಗಿ ಗೋಚರಿಸುವ ಮೂಲಕ ಗ್ರಹಣದ ಕುರಿತಂತ ಹಲವಾರು ಆತಂಕಗಳನ್ನು, ಅನುಮಾನಗಳನ್ನು ನಾಗಣ್ಣ, ಅಪ್ಪಣ್ಣ, ಸದಾನಂದ ಮಾಸ್ತರ ಇನ್ನೂ ಮುಂತಾದ ಪಾತ್ರಗಳ ಮೂಲಕ ಚರ್ಚೆಗೆ ಒಳಪಡಿಸುತ್ತಿದೆ.

ಗಂಗಾಧರ ಪಾತ್ರವು ಮಹಮ್ಮಾಯಿ ದೇವಸ್ಥಾನದ ಕೆಲಸಗಳನ್ನು ನೋಡಿಕೊಳ್ಳುತ್ತಲೇ ದೇವಸ್ಥಾನದ ಒಳಗೆ ನಿಧಿಯಿದೆ ಎಂದು ಭಾವಿಸಿ ಅದನ್ನು ಶೋಧಿಸುವ ಕೆಲಸವನ್ನು ಮಾಡುತ್ತಿರುತ್ತಾನೆ. ಕೊನೆಗೆ ಒಂದನ್ನು ಕೆಡಿಸಿ ಇನ್ನೊಂದನ್ನು ಉಳಿಸುವ ಹೋರಾಟಕ್ಕೆ ಅರ್ಥವಿಲ್ಲವೆನಿಸಿ ತಾತ್ವಿಕ ಜೀವನಶೈಲಿಯ ಲೋಕದೃಷ್ಟಿಗೆ ಬರುತ್ತಾನೆ. ಇದೇ ಸಂದರ್ಭದಲ್ಲಿ ಸರ್ಕಾರವು ಅಣೆಕಟ್ಟನ್ನು ನಿರ್ಮಿಸುವ ಸಲುವಾಗಿ ಅನೇಕ ಊರುಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ ಎಂಬ ಆತಂಕ ಹಳ್ಳಿಗರನ್ನು ಕಾಡಲು ಶುರುಮಾಡುತ್ತದೆ. ವ್ಯವಸಾಯವನ್ನೇ, ಕುಲಕಸುಬುಗಳನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದವರು ಹೀಗೆ ಏಕಾಏಕಿಯಾದ ನಿರ್ಧಾರವನ್ನು ಕೇಳಿ ನಾವು ಊರನ್ನು ಏಕೆ ಬಿಡಬೇಕು ಎಂಬುದಾಗಿ ಪ್ರಶ್ನಿಸಿಕೊಳ್ಳುತ್ತಾರೆ. ಅಣೆಕಟ್ಟನ್ನು ನಿರ್ಮಾಣ ಮಾಡುವ ವಿಷಯವಾಗಿ ಸರ್ಕಾರದ ಹಲವು ಕೆಲಸಗಾರರು ಬಂದು ಊರನ್ನು ಸರ್ವೇ ಮಾಡಲು ಶುರುಮಾಡುತ್ತಾರೆ. ಹಲವು ಉಪಕರಣಗಳ ಪರಿಚಯವಿರದ ಜನರು ಇವರು ಏನು ಮಾಡುತ್ತಿದ್ದಾರೆ ಎಂದು ಕುತೂಹಲದಿಂದ ಅದನ್ನು ವೀಕ್ಷಿಸುತ್ತಾರೆ.

ಜಗನ್ನಾಥ ಮತ್ತು ಪಾಡುರಂಗರ ನಡುವಿನ ಆಂತರಿಕವಾದ ಕಲಹದಿಂದಾಗಿ ಮನೆಯು ಹೇಗೆ ಅವನತಿಯತ್ತ ಸಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ವಿದೇಶಿಗರು ಬಂದು ಊರಿನಲ್ಲಿ ಗ್ರಹಣವನ್ನು ವೀಕ್ಷಿಸಲು ಮನೆಯನ್ನು ಬಾಡಿಗೆಗೆ ಪಡೆಯುತ್ತಾರೆ. ಇದನ್ನು ಅರಿತ ಊರಿನ ಜನರು ತಮ್ಮ ಮನೆಗಳನ್ನು ಬಾಡಿಗೆಗೆ ನೀಡುವ ಮೂಲಕ ಹಣವನ್ನು ಸಂಪಾದನೆ ಮಾಡಲು ಶುರುಮಾಡುತ್ತಾರೆ. ವ್ಯಾಪಾರದ ರುಚಿ ಹತ್ತಿದ ಜನರು ಎಣ್ಣೆಯ ಗಿಂಡಿ, ಹಾಲಿನ ಒಳಲೆ, ಚಿತ್ತಾರದ ಮಣೆ ಹೀಗೆ ವಿವಿಧ ಬಗೆಯ ಸಾಮಾನುಗಳನ್ನು ವಿದೇಶಿಗರಿಗೆ ಮಾರಾಟ ಮಾಡಲು ಮುಂದಾಗುತ್ತಾರೆ. ಇಡೀ ಊರನ್ನೇ ಮಾರಾಟಕ್ಕಿಟ್ಟ ಹಾಗೆ ಮಾವಿನೂರು ಕಾಣಿಸುತ್ತದೆ.

ಒಟ್ಟಿನಲ್ಲಿ ಇಡೀ ಊರು ಗ್ರಹಣದ ಸುತ್ತ ಆರಂಭವಾಗಿ ಅದರ ಸುತ್ತ ನಡೆಯುವ ಈ ಎಲ್ಲಾ ಬದಲಾವಣೆಗಳನ್ನು ಕತೆಯು ನಿರೂಪಿಸುತ್ತಿದೆ. ಜಾಗತೀಕರಣವು ಹೇಗೆ ಎಲ್ಲವನ್ನು ಇಂದು ವ್ಯಾಪಾರದ ವಸ್ತುವನ್ನಾಗಿ ರೂಪಿಸುತ್ತಿದೆ ಎಂಬುದನ್ನು ಹಳ್ಳಿಯ

ಜನರ ಮೂಲಕ ಚಿತ್ರಿಸಲಾಗಿದೆ. ಸಾಮುದಾಯಿಕವಾದ ಸಾಂಘಿಕ ಬದುಕನ್ನು ಬಿಟ್ಟು ಇಡೀ ಹಳ್ಳಿ ಹೇಗೆ ವೈಯಕ್ತಿಕವಾದ ಹಿತಾಸಕ್ತಿಗಳನ್ನು ಬಯಸುತ್ತಿದೆ ಎಂಬುದನ್ನು ಪಾತ್ರಗಳ ಮೂಲಕ ತಿಳಿಯಲು ಸಾಧ್ಯವಾಗುತ್ತದೆ.

ಕೊನೆ ಟಿಪ್ಪಣಿ

೧. ಅನಂತಮೂರ್ತಿ ಯು.ಆರ್., **ಯುಗಪಲ್ಲಟ : ನಮ್ಮ ಕಾಲದ ತಲ್ಲಣಗಳು,** ಪು.ಸಂ–೨೯

೨. ಗಿರಡ್ಡಿ ಗೋವಿಂದರಾಜ, **ಕಾದಂಬರಿಯ ವಸ್ತು ಮತ್ತು ತಂತ್ರ,** ಪು.ಸಂ–೬೫

೩. ಚಂದ್ರಶೇಖರ್ ಎಸ್., **ವಸಾಹತುಕಾಲೀನ ಕರ್ನಾಟಕ,** ಪು.ಸಂ–೩೦೭

೪. ನಟರಾಜ ಹುಳಿಯಾರ್, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಪರಂಪರೆ,** ಪು.ಸಂ–೧೩೨

೫. ನಾಗರಾಜ ಡಿ.ಆರ್., **ಸಾಹಿತ್ಯ ಕಥನ,** ಪು.ಸಂ–೨೧೩

೬. ದಸ್ತಗೀರ್‌ಸಾಬ್ ದಿನ್ನಿ, **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ–೩,

೭. ಚಂದ್ರಶೇಖರ ನಂಗಲಿ, **ಪರಿಸರ ಮತ್ತು ಕನ್ನಡ ಸಂಸ್ಕೃತಿ,** ಪು.ಸಂ–೭೩

೮. ದಸ್ತಗೀರ್‌ಸಾಬ್ ದಿನ್ನಿ, **ಜಾಗತೀಕರಣ ಮತ್ತು ಸಂಸ್ಕೃತಿ,** ಪು.ಸಂ–೩, ೪

೯. ಸಿದ್ಧರಾಮಯ್ಯ ಎಸ್.ಜಿ., **ಕಾಲ ಕಣ್ಣಿನ ಹಂಗು,** ಪು.ಸಂ–೫೬೬

೧೦. ಅಮರೇಶ ನುಗಡೋಣಿ, **ಸವಾರಿ,** ಪು.ಸಂ–೩೦

೧೧. ಅದೇ ಪುಸ್ತಕ, ಪು.ಸಂ–೩೭

೧೨. ಹನುಮಂತ ಹಾಲಿಗೇರಿ, **ಗೆಂಡೇದೇವ್ರು,** ಪು.ಸಂ–೧೦೫

೧೩. ಅದೇ ಪುಸ್ತಕ, ಪು.ಸಂ–೧೫೦

೧೪. ಅದೇ ಪುಸ್ತಕ, ಪು.ಸಂ–೧೧೪

೧೫. ಮಹಾಂತೇಶ ನವಲಕಲ್, **ನೀರಿನ ನೆರಳು,** ಪು.ಸಂ–೧೯

೧೬. ಅದೇ ಪುಸ್ತಕ, ಪು.ಸಂ–೨೦

೧೭. ಅದೇ ಪುಸ್ತಕ, ಪು.ಸಂ–೨೧

೧೮. ಅದೇ ಪುಸ್ತಕ, ಪು.ಸಂ–೨೨

ಅಧ್ಯಾಯ : ಆರು

ಕನ್ನಡ ಸಣ್ಣಕತೆಗಳಲ್ಲಿ ಜಾಗತೀಕರಣ ಸಂದರ್ಭದಲ್ಲಿನ ಪರಿಣಾಮಗಳು

ಅಧ್ಯಾಯ : ಆರು

ಕನ್ನಡ ಸಣ್ಣಕತೆಗಳಲ್ಲಿ ಜಾಗತೀಕರಣ ಸಂದರ್ಭದಲ್ಲಿನ ಪರಿಣಾಮಗಳು

೨೦ನೇ ಶತಮಾನದ ಕೊನೆಯ ವೇಳೆಗೆ ಕನ್ನಡ ಸಾಹಿತ್ಯ ಸಂದರ್ಭವನ್ನು ಮುಖ್ಯವಾಗಿ ಗಮನಿಸುವುದಾದರೆ ಆ ಹೊತ್ತಿಗೆ ಅನೇಕ ಸಾಹಿತ್ಯಿಕ ಚಳುವಳಿಗಳು ಬಂದುಹೋಗಿದ್ದವು. ಅದರಲ್ಲಿ ಮುಖ್ಯವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯಗಳು ೭೦ನೇ ಶತಮಾನದವರೆಗೆ ಸಾಹಿತ್ಯಿಕ ಆಶಯಗಳನ್ನು ಅಭಿವ್ಯಕ್ತಿಗಳನ್ನು ಕತೆ, ಕಾದಂಬರಿ, ಕಾವ್ಯ ಮುಂತಾದ ಪ್ರಕಾರಗಳಲ್ಲಿ ರೂಪಿಸಿದವು. ನಿರ್ದಿಷ್ಟ ರೂಪು-ರೇಷೆಗಳನ್ನು ಹೊಂದಿದ್ದ ಈ ಕಾಲಘಟ್ಟಗಳಲ್ಲಿ ಆಯಾ ಕಾಲದ, ಸನ್ನಿವೇಷದ ಸಾಂಸ್ಕೃತಿಕ ಸಂದರ್ಭಗಳಿಗೆ ತಕ್ಕಂತೆ ಸಾಹಿತ್ಯ ಸೃಷ್ಟಿ ಉಂಟಾಗಿದೆ. ಆದರೆ ೭೦ರ ದಶಕದ ನಂತರದಲ್ಲಿ ಸ್ತ್ರೀ ಸಂವೇದನೆ, ಮುಸ್ಲಿಂ ಸಂವೇದನೆ, ದಲಿತ ಸಂವೇದನೆ. ನಗರ ಜೀವನ, ಧಾವಂತ ಬದುಕು, ವಿಜ್ಞಾನ-ತಂತ್ರಜ್ಞಾನ-ಮಾಹಿತಿ ಮುಂತಾದ ವೈಜ್ಞಾನಿಕ ಕ್ಷೇತ್ರಗಳ ಪ್ರಭಾವ ಮತ್ತು ಪರಿಣಾಮ ಇತರೆ ಸಮಸ್ಯೆಗಳು, ದೇಸಿಯತೆಯ ಸವಾಲು, ವ್ಯಕ್ತಿ ಕೇಂದ್ರಿತ ಬದುಕು, ಕೌಟುಂಬಿಕ ವಿಘಟನೆಗಳು, ಮಾನವೀಯ ಸಂಬಂಧಗಳ ನಾಶ, ಹಿಂಸಾತ್ಮಕ ಪ್ರಕ್ರಿಯೆಗಳು, ವ್ಯವಸ್ಥೆಯ ಭಿನ್ನ ಭಿನ್ನ ಆಡಳಿತಾತ್ಮಕ ನಿಲುವುಗಳು, ರೈತರ ಸಮಸ್ಯೆಗಳು ಇತ್ಯಾದಿ ಹತ್ತು ಹಲವಾರು ವಿಷಯಗಳು ಮುನ್ನೆಲೆಗೆ ಬಂದು ಈ ನೆಲೆಯ ಸಮಸ್ಯೆಗಳನ್ನೇ ಕನ್ನಡದ ಕತೆಗಾರರು ಯಾವುದೇ ಚಳುವಳಿಯ ತಾತ್ವಿಕ ಸಿದ್ಧಾಂತವನ್ನು ಕೇಂದ್ರೀಕರಿಸದೇ ತಾವು ಕಂಡುಂಡ ತಮ್ಮ ಅನುಭವ ಕೇಂದ್ರಿತ ನೆಲೆಯಲ್ಲಿ ಕತೆಗಳನ್ನು ಕಟ್ಟಿಕೊಟ್ಟಿರುವುದನ್ನು ಹೊಸ ಶತಮಾನದಲ್ಲಿ ಕಾಣಲು ಸಾಧ್ಯವಾಗಿದೆ. ಅಲ್ಲದೇ "ಜಾಗತೀಕರಣದ ದಾಳಿ, ಖಾಸಗೀಕರಣದ ಅಬ್ಬರ, ದೃಶ್ಯಮಾಧ್ಯಮಗಳ ಹಾವಳಿ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಸಮಾನತೆ, ನಿರುದ್ಯೋಗ, ನಶಿಸುತ್ತಿರುವ ವ್ಯವಸಾಯ ಸಂಸ್ಕೃತಿ ಹೀಗೆ ಹಲವು ಆತಂಕಗಳ ಒಳಸುಳಿಗೆ ಸಿಕ್ಕು ಇಂದಿನ ಯುವಜನತೆ ತಲ್ಲಣಗಳನ್ನು ಅನುಭವಿಸುತ್ತಿವೆ.

ಕೌಟುಂಬಿಕ ಛಿದ್ರೀಕರಣ, ದಾಂಪತ್ಯಗಳ ನಡುವಿನ ಬಿಕ್ಕಟ್ಟು, ಏಕಾಕಿತನ, ತಬ್ಬಲಿಭಾವ ಈ ಎಲ್ಲಾ ಸಮಸ್ಯೆಗಳನ್ನು ಕತೆಗಾರರನ್ನು ಕಾಡದೆ ಬಿಟ್ಟಿಲ್ಲ"[೧] ಎಂದು ಎಸ್.ಜಿ.ಸಿದ್ಧರಾಮಯ್ಯನವರು ಅಭಿಪ್ರಾಯಪಡುತ್ತಾರೆ.

ಕನ್ನಡ ಸಾಹಿತ್ಯವನ್ನು ಗಮನಿಸುವುದಾದರೆ ಮಾನವೀಯ ಮೌಲ್ಯಗಳನ್ನು ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಒಡಮೂಡಿಸಿರುವುದನ್ನು ಗಮನಿಸಬಹುದು. ಮಾನವೀಯ ಮೌಲ್ಯಗಳೆಂಬುದನ್ನು ಸ್ಪಷ್ಟೀಕರಿಸಿಕೊಂಡರೆ ಈ ಅರ್ಥವ್ಯಾಪ್ತಿಯು ನಮಗೆ ತಿಳಿಯುತ್ತದೆ. 'ಮಾನವೀಯ ಮೌಲ್ಯಗಳು (Human-Value) ಎಂದರೆ ಮಾನವ ತನಗೆ ಯಾವುದೇ ಲಾಭವಿಲ್ಲದಿದ್ದರೂ ಇತರರಿಗೆ ಉಪಕಾರ ಮಾಡುವವನು ಮಾನವ, ತನ್ನ ಸ್ವಾರ್ಥಕ್ಕಾಗಿ ಇತರರನ್ನು ನೋಯಿಸುವವ ದಾನವ, ಆದರೆ ತನಗೆ ಯಾವುದೇ ಲಾಭವಿಲ್ಲದಿದ್ದರೂ ಇತರರಿಗೆ ತೊಂದರೆ ಕೊಡುವವನಿಗೆ ಯಾವ ಹೆಸರಿಡಬೇಕು' ಎಂದು ಭರ್ತೃಹರಿ ತಿಳಿಸಿದ್ದಾನೆ.

ಜಾಗತೀಕರಣದ ಈ ಹೊತ್ತಿನಲ್ಲಿ ಆಧುನಿಕ ಜೀವನಪದ್ಧತಿಯಿಂದಾಗಿ ಮಾನವರಲ್ಲಿ ಜೀವನ ಮೌಲ್ಯಗಳು ಬದಲಾಗುತ್ತಿದ್ದು, ತಮ್ಮ ಆಂತರಿಕ ಲಾಭಕ್ಕಾಗಿ, ವೈಯಕ್ತಿಕ ಹಿತಾಸಕ್ತಿಗಾಗಿ ಹಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗುತ್ತಿದೆ. ಮನುಷ್ಯ ಸಂಬಂಧಗಳನ್ನು ಮರೆತು ಯಾಂತ್ರಿಕ ಜೀವನದ ಬೆನ್ನುಹತ್ತಿ ನಿಕಟ ಸಂಬಂಧಗಳಾದ ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿ ಮುಂತಾದ ರಕ್ತ ಸಂಬಂಧಗಳ ಜೊತೆಗೆ ಇತರೆ ಸ್ನೇಹಿತರ, ಒಡನಾಡಿಗಳ ಸಂಬಂಧಗಳನ್ನು ಸಹ ಕೇವಲ ತಾಂತ್ರಿಕವಾಗಿ ನೋಡುವ ಮತ್ತು ಬಳಸಿಕೊಳ್ಳುವ ಮನಸ್ಥಿತಿಗೆ ಮನುಷ್ಯ ಇಂದು ತಲುಪಿದ್ದಾನೆ. ಮಾನವೀಯ ಮೌಲ್ಯಗಳು ಇಂದಿನ ವರ್ತಮಾನದ ಪರಿಸರದಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ. ಉದಾಹರಣೆಗೆ ಇಂದಿನ ಆಧುನೀಕರಣದ ಈ ಹೊತ್ತಲ್ಲಿ ಮಾನವೀಯ ಮೌಲ್ಯಗಳು, ಜೀವನ ಮೌಲ್ಯಗಳು ನಶಿಸುತ್ತಿವೆ. ಪ್ರಸ್ತುತ ಸಮಾಜದಲ್ಲಿ ಸಾಮಾನ್ಯವಾಗಿ ನಾಗರೀಕತೆ ಬೆಳೆಯುತ್ತ ಮನುಷ್ಯ ತನ್ನ ಮಾನವೀಯ ಗುಣಗಳನ್ನು ಗಾಳಿಗೆ ತೂರುತ್ತಿದ್ದಾನೆ, ಭಾವನೆಗಳು ನಶಿಸುತ್ತಿವೆ, ಕರ್ತವ್ಯವನ್ನು ಮರೆತು ಯಾಂತ್ರಿಕ ಜೀವನ ನಡೆಸುತ್ತಿದ್ದಾನೆ ಎಂಬ ಭಾವನೆಗಳು ನಂಬಲು ಕಷ್ಟವಾದರೂ ವಾಸ್ತವವಾಗಿದೆ.

ಮಾನವೀಯ ಸಂಬಂಧಗಳು ಮತ್ತು ಮೌಲ್ಯಗಳು ಸಮಾಜದಿಂದ ಕಣ್ಮರೆಯಾಗುತ್ತಿದೆ ಎನ್ನುವುದನ್ನು ಕೆಲವು ಉದಾಹರಣೆಗಳ ಮೂಲಕ ನೋಡಬಹುದು. ವರ್ತಮಾನದಲ್ಲಿ ಶಿಕ್ಷಣ ಪದ್ಧತಿಯಿಂದಾಗಿ ಶಿಕ್ಷಣ ಇರುವುದು ನಮ್ಮ ಆತ್ಮೋಭಿವೃದ್ಧಿಗಾಗಿ ಎನ್ನುವುದು

ಮಾಯವಾಗಿ ಅದು ನಮ್ಮ ಉದ್ಯೋಗದ ದೃಷ್ಟಿಯಿಂದ ಎಂಬ ಭಾವನೆಯು ಜಾಗತೀಕರಣದಿಂದ ನಮ್ಮಲ್ಲಿ ಅದಾಗಲೇ ಬಂದಾಗಿದೆ. ಇಂತಹ ಮನೋ-ದೃಷ್ಟಿಕೋನದಿಂದಲೇ ಉದ್ಯೋಗಕ್ಕೆ ತೊಡಗಿದ ಮಕ್ಕಳು ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಬಲಿಯಾಗಿ ತಂದೆ-ತಾಯಿಯನ್ನು ನೋಡಿಕೊಳ್ಳಲು ಸಾಧ್ಯವಾಗದೇ ಮಕ್ಕಳು ವಿದೇಶದಲ್ಲಿ; ತಂದೆ-ತಾಯಿಗಳು ಅನಾಥಾಶ್ರಮದಲ್ಲಿ ಬದುಕುವ ಕ್ರೂರ ಪರಿಸ್ಥಿತಿಯು ಜಾಗತೀಕರಣವು ನಮ್ಮ ಸಮಾಜಕ್ಕೆ ತಂದೊಡ್ಡಿರುವ ಬಹುದೊಡ್ಡ ಆಘಾತವಾಗಿದೆ. ಇದು ಕೇವಲ ಒಂದು ಉದಾಹರಣೆ; ಇಂತಹ ನೂರಾರು ಉದಾಹರಣೆಗಳನ್ನು ನೋಡಲು ಸಾಧ್ಯವಾಗಿದೆ. ಜಾಗತೀಕರಣದ ಇಂತಹ ಸಂದರ್ಭದಲ್ಲಿ ಸಮಾಜದಲ್ಲಿ ಮನುಷ್ಯ ಸಂಬಂಧಗಳು ಸಹ ಬದಲಾವಣೆಗೊಳ್ಳುತ್ತಿವೆ. ಮನುಷ್ಯ ಸಂಬಂಧಗಳನ್ನು ಮರೆತು ಕೇವಲ ಯಾಂತ್ರಿಕತೆಯಂತೆ ಬದುಕುತ್ತಿರುವ ಈ ಹಿನ್ನೆಲೆಯು ಹಿಂದಿನ ನಮ್ಮ ಜಾನಪದ ಶಕ್ತಿಯಾದ ಸಂಘಟನಾತ್ಮಕ ಮನೋಧೋರಣೆಯ ಕೊರತೆ ಎಂದೇ ಹೇಳಬೇಕು. ಎಲ್ಲರನ್ನು ಕೂಡುವ ಆ ಮೂಲಕ ಎಲ್ಲರೊಳಗೊಂದಾಗುವ ಜನಪದರ ಒಗ್ಗಟ್ಟು, ಪರಸ್ಪರ ಪ್ರೀತಿ, ವಿಶ್ವಾಸ, ಕರುಣೆ, ಅಂತಕರಣೆ, ನಂಬಿಕೆ, ಸಹಾನುಭೂತಿ ಮುಂತಾದ ಮಾನವೀಯ ಅಂಶಗಳನ್ನು ಕನ್ನಡ ಕತೆಗಳಲ್ಲಿ ಹೇಗೆ ಗ್ರಹಿಸಲಾಗಿದೆ ಎನ್ನುವುದನ್ನು ಈ ಅಧ್ಯಯನದ ಮೂಲಕ ತಿಳಿಯಲಾಗಿದೆ.

"ಸಾರ್ವಜನಿಕರೊಂದಿಗೆ ವಿನಮ್ರತೆಯಿಂದ, ವಿನಯದೊಂದಿಗೆ ವ್ಯವಹರಿಸುವುದು, ನೊಂದವರಿಗೆ/ಕಷ್ಟದಲ್ಲಿರುವವರ ಸಂಕಷ್ಟ ಪರಿಹರಿಸಲು ಸಹಾಯಹಸ್ತ ಚಾಚುವುದು, ಯಾವುದೇ ಕಾರ್ಯವನ್ನು ಸೇವಾ ಮನೋಭಾವದಿಂದ ನಿರ್ವಹಿಸುವುದು, ಸಾರ್ವಜನಿಕರನ್ನು ಭಾತೃತ್ವಭಾವದಿಂದ ಕಾಣುವುದು, ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು, ಪ್ರಮಾಣ ಮಾಡಿದಂತೆ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುವುದು. ಸಾರ್ವಜನಿಕರನ್ನು, ಸಹೋದ್ಯೋಗಿಗಳನ್ನು, ಅಧೀನ ಸಿಬ್ಬಂದಿಯೊಂದಿಗೆ ಪ್ರೀತಿ/ ವಿಶ್ವಾಸ/ ಸಹೃದಯತೆಯಿಂದ ವರ್ತಿಸುವುದು, ವೈಯಕ್ತಿಕ ಸಮಸ್ಯೆಗಳಿಗೆ ಕೂಡ ಸ್ಪಂದಿಸುವುದು. ದೃಢತೆ ಹಾಗೂ ನಿಶ್ಚಯದೊಂದಿಗೆ ಮುಂದಡಿ ಇಟ್ಟು ಮಾರ್ಗದರ್ಶನ ಮಾಡುವುದು. ತನ್ನದೇ ನಿರ್ಧಾರ ಅಂತಿಮ, ತನ್ನದೇ ನಿರ್ಧಾರ ಅಚಲ, ಸಮರ್ಪಕ ಅಂತಾ ಭಾವಿಸದೇ ಇತರರಿಗೆ ಸಲಹೆ/ಸೂಚನೆಗಳನ್ನು ಪ್ರಾಂಜಲವಾಗಿ, ನಿರ್ಮಲ ಮನಸ್ಸಿನಿಂದ ಆಲಿಸುವುದು. ಸಮಂಜಸವೆನಿಸಿದಲ್ಲಿ ಸಲಹೆಗಳನ್ನು ಸ್ವೀಕರಿಸುವುದು, ತನ್ನ ನಿರ್ಧಾರದಲ್ಲಿ ಬದಲಾವಣೆ ಮಾಡಿಕೊಳ್ಳುವುದು. ತನಗೆ ತಿಳಿದಿರುವುದನ್ನು ಇತರರಿಗೂ ತಿಳಿಸುವುದು."[೨]

ಅವಿಭಕ್ತ ಕುಟುಂಬದ ನಾಶ, ನಗರಜೀವನ ವ್ಯವಸ್ಥೆ, ವಲಸೆ, ಶಿಕ್ಷಣ, ಶಿಕ್ಷಣದಿಂದ ಉದ್ಯೋಗದ ಬೆನ್ನು ಹತ್ತಿ ನಗರದ ಕಡೆ ಮುಖ ಮಾಡುವುದು, ಆಧುನಿಕ ಜೀವನಶೈಲಿ, ಏಕಾಂಗಿನತನ, ಪ್ರೀತಿ, ವಿಶ್ವಾಸ, ನಂಬಿಕೆಗಳಿಲ್ಲದೇ ಒಂಟಿತನ ಅನುಭವಿಸುವುದು, ಸಹಕಾರ ಮನೋಭಾವನೆಯಿಲ್ಲದೇ ಮತ್ತೊಬ್ಬರ ಮೇಲೆ ಹಗೆ ಸಾಧಿಸುವುದು, ಸದಾ ಒತ್ತಡ ಮತ್ತು ಭಾವೋದ್ರೇಕದಿಂದ ವರ್ತಿಸುವುದು, ಮಾನಸಿಕವಾಗಿ ನೆಮ್ಮದಿಯಿಲ್ಲದೇ ಕೊರಗುವುದು, ನೈತಿಕತೆಯಿಲ್ಲದೇ ಜೀವನ ಕ್ರಮ ಏರುಪೇರಾಗುವುದು ಹೀಗೆ ಹತ್ತು ಹಲವಾರು ಕಾರಣಗಳಿಂದ ಇಂದು ಮಾನವೀಯ ಮೌಲ್ಯಗಳು ನಾಶವಾಗುತ್ತಿವೆ. ಮಾನವ ಸಂಬಂಧಗಳ ಮೌಲ್ಯಗಳನ್ನು ಇಂದಿನ ತಂತ್ರಜ್ಞಾನದ ಯುಗದಲ್ಲಿ ಕಳೆದುಕೊಳ್ಳುತ್ತಿರುವ ಪರಿಸ್ಥಿತಿಯಿದೆ. ಜಾಗತೀಕರಣವು ಇಂದು ಮಾನವರಲ್ಲಿ ಇರುವ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುವುದರ ಜೊತೆಗೆ ಎಲ್ಲಾ ಕ್ಷೇತ್ರಗಳನ್ನು ಮಾರುಕಟ್ಟೆಯ ಹಿನ್ನೆಲೆಯಲ್ಲಿಯೇ ನೋಡುವ ಪರಿಪಾಠವನ್ನು ಬೆಳೆಸುತ್ತಿದೆ.

ಕನ್ನಡದ ಸಾಹಿತ್ಯಿಕ ಪರಂಪರೆಯನ್ನು ನಾವು ಸೂಕ್ಷ್ಮವಾಗಿ ಗಮನಿಸುವುದಾದರೆ ಕನ್ನಡದ ಮೊದಲ ಗದ್ಯ ಗ್ರಂಥವಾದ 'ವಡ್ಡಾರಾಧನೆ'ಯಿಂದಲೂ ಮಾನವನು ನೆಡೆಯಬೇಕಾದ ದಾರಿ, ರೀತಿ-ನೀತಿಗಳನ್ನು, ಅಲ್ಲದೇ ಸತ್ಯವನ್ನೇ ನಂಬಿಕೊಂಡು ನೆಡೆಯಬೇಕು ಎಂಬ ಸೂಕ್ಷ್ಮ ವಿಚಾರಗಳನ್ನು ಕತೆಗಳ ಮೂಲಕ ನೀತಿಯನ್ನು ಸಾರಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಜೈನ ಧರ್ಮದ ತಾತ್ವಿಕ ಆಯಾಮಗಳನ್ನು ತಿಳಿಸಲು ಕತೆಯೊಳಗೆ ಉಪಕತೆಯನ್ನು ಬರೆದಿರುವುದನ್ನು ಇಲ್ಲಿ ಕಾಣಲು ಸಾಧ್ಯ. ಅಂತೆಯೇ ಕನ್ನಡದ ಆದಿಕವಿಯಾದ ಪಂಪನು ಸಹ ತನ್ನ ಕಾವ್ಯದಲ್ಲಿ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದಿರುವುದು ಸಹ ಮಾನವೀಯ ಮೌಲ್ಯಗಳ ಭಿತ್ತಿಯೊಳಗೆ ಸೇರಿರುವಂತಹದ್ದು. ಅಂದರೆ ಪಂಪನು ರಾಜಾಶ್ರಯದೊಳಗೆ ಇದ್ದುಕೊಂಡೇ ಅನೇಕ ಮಾನವೀಯ ಮೌಲ್ಯಗಳನ್ನು ತನ್ನ ಕಾವ್ಯದಲ್ಲಿ ತಂದಿದ್ದಾನೆ.

ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವು ಮಾನವೀಯ ಮೌಲ್ಯಗಳಿಗೆ ಮೂಲಭಿತ್ತಿಯನ್ನು ಹಾಕಿದ ಕಾಲವೆಂದೇ ಹೇಳಬೇಕು. ಆ ಕಾಲದಲ್ಲಿ ಉಂಟಾಗಿದ್ದ ಜಾತಿ, ಅಸಮಾನತೆ, ಅನ್ಯಾಯ, ಕ್ಷೋಬೆ ಮುಂತಾದವುಗಳನ್ನು ಕಂಡು ಸಮಾಜದಲ್ಲಿ ಈ ತೆರನಾದ ಅಸ್ಥಿರತೆಯನ್ನು ತೊಡೆದುಹಾಕಲು ವಚನಕಾರರು ಸಾಹಿತ್ಯದ ಮೂಲಕ ಶ್ರಮಿಸಿದರು. ಬಸವಣ್ಣ, ಅಲ್ಲಮಪ್ರಭು, ಜೇಡರ ದಾಸಿಮಯ್ಯ ಸೇರಿದಂತೆ ಅನೇಕ

ವಚನಕಾರರು; ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವನಂತಹ ವಚನಕಾರ್ತಿಯರು ಇಂತಹ ಸಾಮಾಜಿಕ ಚಳುವಳಿಗೆ ಸೇರಿಕೊಂಡದ್ದು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಭಿತ್ತಲೆಂದೇ ಆಗಿದೆ.

ಕರ್ನಾಟಕದ ಸಾಂಸ್ಕೃತಿಕ ಪರಿಸರವನ್ನು ಗಮನಿಸಿದಾಗ ೧೨ನೇ ಶತಮಾನದ ವಚನ ಚಳುವಳಿಯು ಸಮಾಜದಲ್ಲಿದ್ದ ಜಾತಿ, ಅಸಮಾನತೆ, ತಾರತಮ್ಯ ನೀತಿ, ಮುಂತಾದವಗಳನ್ನೆಲ್ಲ ಎತ್ತಿ ತೋರಿಸುವ ಮೂಲಕ ಸಮಾಜದಲ್ಲಿ ಪಲ್ಲಟಗಳನ್ನು ಉಂಟು ಮಾಡಲು ಸಾಧ್ಯವಾಯಿತು. ಅಲ್ಲದೇ "ವಚನ ಚಳುವಳಿಯಿಂದ ಅವರ ಕಾಯಕ ಪರಿಕಲ್ಪನೆಯ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಮಾಜದ ಕೊನೆಯ ಅಂಚಿನಲ್ಲಿನ ಸಮುದಾಯಗಳಿಗೂ ಸಾಧ್ಯವಾಗಿ ಆಧ್ಯಾತ್ಮಿಕ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಕಾರಣವಾಯಿತು"[೩] ಎಂದು ಅಮರೇಶ ನುಗಡೋಣಿಯವರು ತಿಳಿಸುತ್ತಾರೆ.

ಅಂತೆಯೇ ಕನ್ನಡ ಸಾಹಿತ್ಯದಲ್ಲಿ ಕೀರ್ತನೆಕಾರರ ದಾಸ ಸಾಹಿತ್ಯ ಪರಂಪರೆ, ಆಧುನಿಕ ಕನ್ನಡ ಸಾಹಿತ್ಯವು ಇಂತಹ ಮಾನವೀಯ ಸಂದೇಶಗಳನ್ನು ಹೊತ್ತು ಬಂದಿದೆ. ಕುವೆಂಪು ಅವರು "ವಿಶ್ವ ಮಾನವ ಸಂದೇಶ"ವು ಇದೇ ನೆಲೆಯಲ್ಲಿ ನಿಂತಿರುವಂತದ್ದು. ಮನುಷ್ಯ ಪ್ರಜ್ಞೆಯನ್ನು ಉಳಿಸುವ, ಬೆಳೆಸುವ, ಜಾಗೃತಗೊಳಿಸುವ ಕೆಲಸವನ್ನು ಕನ್ನಡ ಸಾಹಿತ್ಯ ನಿರಂತರವಾಗಿ ಮಾಡಿಕೊಂಡು ಬಂದಿದೆ. ಆದರೆ ೧೯೯೧ರ ನಂತರ ಅಂದರೆ ಜಾಗತೀಕರಣವು ಭಾರತೀಯ ಅಥವಾ ಕನ್ನಡ ಪರಿಸರದೊಳಕ್ಕೆ ಕಾಲಿಟ್ಟ ನಂತರದಲ್ಲಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಅನೇಕ ಪಲ್ಲಟಗಳನ್ನು ಗುರುತಿಸಲು ಸಾಧ್ಯವಾಗಿದೆ. ಜಾಗತೀಕರಣವು ತಂದೊಡ್ಡಿರುವ ಅನೇಕ ಸಮಸ್ಯೆಗಳನ್ನು ಕನ್ನಡದ ಅನೇಕ ಸಾಹಿತ್ಯ ಪ್ರಕಾರಗಳು ತೆರೆದಿಟ್ಟಿವೆ. ಅಂತೆಯೇ ಕನ್ನಡದ ಕತೆಗಾರರು ಇಂತಹ ವಸ್ತುವಿಷಯವನ್ನು ತಮ್ಮ ಅನುಭವ ನೆಲೆಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

೬.೧ ಮಾನವೀಯತೆ

ಸಂಘಜೀವಿಯಾದ ಮಾನವ ಇತರರೊಡನೆ ನಡೆಸಬೇಕಾದ ವ್ಯವಹಾರದಲ್ಲಿ ಅನುಸರಿಸಬೇಕಾದ ರೀತಿನೀತಿಗಳಿಗೆ ಇಂಗ್ಲೀಷ್‌ನಲ್ಲಿ Morality ಎಂಬರ್ಥವಿದೆ. ಮನುಷ್ಯ ತನ್ನ ನಡವಳಿಕೆಯನ್ನು ಇತರರೊಂದಿಗೆ ಹೇಗೆ ನಡೆದುಕೊಂಡರೆ ಸರಿ, ಹೇಗೆ ನಡೆದುಕೊಂಡರೆ ತಪ್ಪು ಎನ್ನುವುದನ್ನು ಒಂದು ಸಮಾಜದ ಸಂಪ್ರದಾಯಗಳು ನಿರ್ಣಯಿಸುತ್ತವೆ. ಸದಾಚಾರ ಎನ್ನುವುದನ್ನು ಸಾಮುದಾಯಿಕವಾಗಿ ಒಂದು ಸಮಾಜ

ಒಪ್ಪಿಕೊಂಡಾಗ ಅದು ವ್ಯಕ್ತಿಯ ಜೀವನವನ್ನು ವಿಮರ್ಶೆ ಮಾಡಲು ಅವಶ್ಯವಾದ ಅಳತೆಗೋಲನ್ನು ಒದಗಿಸಿಕೊಡುತ್ತದೆ. ಸಮಾಜ ಅಂಗೀಕರಿಸುವ ಪ್ರಮಾಣದ ಸಹಾಯದಿಂದ ಸರಿ ತಪ್ಪು, ನೀತಿ ಅನೀತಿ, ಸದಾಚಾರ ದುರಾಚಾರ, ಪಾಪ, ಪುಣ್ಯ, ಸೌಜನ್ಯ ಎಂಬುವು ನಿರ್ಣಯಿಸಲ್ಪಡುತ್ತವೆ. ಈ ನೆಲೆಯಲ್ಲಿ ನೈತಿಕತೆಯನ್ನು ಒಳಗೊಂಡಂತಹ ಅನೇಕ ಅಂಶಗಳನ್ನು ಸಮಾಜವೊಂದು ಈಗಾಗಲೇ ಪೂರ್ವನಿರ್ಧರಿತವಾಗಿ ನಿರ್ಣಯಿಸಿರುತ್ತದೆ. ಅದನ್ನು ಮೀರಿ ಮಾನವ ನಡೆದಾಗ ಅದು ನೈತಿಕತೆಯ ಪ್ರಶ್ನೆಯನ್ನು ಎದುರುಗೊಳ್ಳುತ್ತದೆ.

ಉದಾಹರಣೆಗೆ ಹಿರಿಯರಿಗೆ ಗೌರವವನ್ನು ನೀಡುವುದು, ಮಹಿಳೆಯರಿಗೆ ಗೌರವವನ್ನು ನೀಡುವುದು, ಸಮಾಜದಲ್ಲಿ ಈಗಾಗಲೇ ಒಪ್ಪಿಗೆಯಾಗಿರುವ ಅಂಶಗಳನ್ನು ಗೌರವಿಸುವುದು ಜೊತೆಗೆ ಅದನ್ನು ನೆಡೆಸಿಕೊಂಡು ಹೋಗುವುದು, ಎಲ್ಲರೊಟ್ಟಿಗೆ ಪ್ರೀತಿ, ಸ್ನೇಹ, ವಿಶ್ವಾಸದಿಂದ ಇರುವುದು, ತಾನು ಒಂದು ಕೆಲಸವನ್ನು ಮಾಡುವುದರಿಂದ ಇತರರಿಗೆ ನೋವುಂಟಾಗದಿರುವಂತೆ ನೋಡಿಕೊಳ್ಳುವುದು, ಇನ್ನೊಬ್ಬರಿಗೆ ತೊಂದರೆ ಉಂಟು ಮಾಡದಿರುವುದು, ತನ್ನಿಂದ ಸಮಾಜಕ್ಕೆ ಅಥವಾ ವ್ಯಕ್ತಿಗಳಿಗೆ ಮಾರಕವಾಗುವಂತಹ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳದಿರುವುದು ಇಂತಹ ಅನೇಕ ಅಂಶಗಳನ್ನು ನೈತಿಕತೆಯು ನೀಡುತ್ತದೆ. ಇದು ಜಾಗತೀಕರಣದ ಸಂದರ್ಭದ ಈ ಹೊತ್ತಿನಲ್ಲಿ ಕಣ್ಮರೆಯಾಗುತ್ತಿದೆ ಎನ್ನುವುದು ಕನ್ನಡ ಕತೆಗಾರರು ಅನೇಕ ಕತೆಗಳ ಮೂಲಕ ಗ್ರಹಿಸಿದ್ದಾರೆ. ಮನುಷ್ಯ ಸಂಬಂಧಗಳನ್ನು ಮುರಿಯುವ, ಮೋಸ, ವಂಚನೆಗಳನ್ನೇ ಮುಂದೆ ಮಾಡಿಕೊಂಡು ಮನುಷ್ಯ ತಾನು ನಿರ್ವಹಿಸಿಬೇಕಾದ ಅನೇಕ ಕೆಲಸಗಳನ್ನು ಮರೆತು ಮನುಷ್ಯತ್ವವನ್ನು ಮೀರಿ ನಡೆಯುತ್ತಿದ್ದಾನೆ.

ವಸುಧೇಂದ್ರ ಅವರ 'ಕ್ಷಮೆಯಿಲ್ಲದೂರಿನಲಿ' ಕತೆಯು ಅಪಾರ್ಟ್‌ಮೆಂಟೊಂದರಲ್ಲಿ ವಾಸಿಸುತ್ತಿದ್ದರೂ ಕೂಡ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಗುಣಗಳು ಇಲ್ಲದಾಗಿ, ಬದುಕನ್ನು ಜನರ ಜೊತೆ ಬೆರೆಯದೇ ಕೇವಲ ತಂತ್ರಜ್ಞಾನದ ಜೊತೆಯೇ ಕಾಲ ಕಳೆಯುವ ಮಾನವೀಯ ಮೌಲ್ಯಗಳನ್ನು ಮರೆತಿರುವ ಬಗೆಗೆ ಕತೆಯಲ್ಲಿ ಪ್ರಸ್ತಾಪಿಸುತ್ತಾರೆ. ಜಾಗತೀಕರಣದ ಪ್ರಭಾವದಿಂದಾಗಿ ಇಂದು ವ್ಯಕ್ತಿಗಳು ಪರಸ್ಪರ ತಮ್ಮನ್ನು ತಾವು ಇಂಟರ್‌ನೆಟ್, ಈ-ಮೇಲ್‌ಗಳ ಮೂಲಕವೇ ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳುತ್ತಾ ತಮ್ಮ ದೈನಂದಿನ ಘಟನೆಗಳನ್ನು ಅಂತರ್ಜಾಲದ ಮೂಲಕ ಚರ್ಚಿಸುವ

ಕುರಿತು ಚಿತ್ರಿಸಿದ್ದಾರೆ. ಮನುಷ್ಯರು ಇಂದು ಮಾನವೀಯತೆಯನ್ನು ಮರೆತು ತಮ್ಮ ತೀರಾ ವೈಯಕ್ತಿಕವಾದ ವಿಚಾರಗಳನ್ನು ಸಹ ಈ ಇಂಟರ್‌ನೆಟ್‌ನ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುವುದರ ಅಪಾಯವನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

ಕ್ಷಮೆಯನ್ನು ನೇರವಾಗಿಯೇ ಕೇಳಬಹುದಾಗಿದ್ದಂತಹ ಸಂದರ್ಭಗಳು ನಮಗಿದ್ದರೂ ಸಹ ಅದನ್ನು ನಾಲ್ಕು ಜನರ ಮುಂದೆ ಪ್ರತಿಷ್ಠೆಯಂತೆ ಭಾವಿಸಿ ಇಂಟರ್‌ನೆಟ್‌ನ ಮೊರೆ ಹೋಗಿ ಅಲ್ಲಿ ಕ್ಷಮೆ ಕೇಳುವ ಪ್ರಸಂಗವು ಒಂದು ಕುಟುಂಬದ ಮಾನಸಿಕ ನೆಮ್ಮದಿಯನ್ನು ಹಾಳುಮಾಡುವ ಮೂಲಕ ಸುಜಾಳ ಗಂಡನಾದ ಶ್ರೀನಿವಾಸನ ಅಂತ್ಯವನ್ನು ಕಾಣುವ ಮಟ್ಟಕ್ಕೆ ಹೋಗುತ್ತದೆ. ಕತೆಯಲ್ಲಿ ಮುಖ್ಯವಾಗಿ ನಾವು ಕಾಣಬಹುದಾದ ಮುಖ್ಯ ಅಂಶವೆಂದರೆ ಇಂದಿನ ದಿನಗಳಲ್ಲಿ ನಾವು ತಂತ್ರಜ್ಞಾನದ ಬೆನ್ನುಹತ್ತಿ ಮನುಷ್ಯ ಸಂಬಂಧಗಳನ್ನು ಮರೆತು ಓಡುವ ಕುದುರೆಗಳಂತೆ ಪಯಣ ಮಾಡುತ್ತಿದ್ದೇವೆ. ಜನರ ಜೊತೆಗೆ ಬೆರೆಯದೇ ಏಕಾಂಗಿ ಭಾವವನ್ನು ಹೊಂದಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ನಮ್ಮ ಅಂತ್ಯವನ್ನು ನಾವೇ ಕಂಡುಕೊಳ್ಳುತ್ತಿದ್ದೇವೆ ಎಂಬುದನ್ನು ತಿಳಿಸುತ್ತದೆ.

ವರ್ತಮಾನದ ಪತಿಸ್ಥಿತಿಯನ್ನು ವಿಶ್ಲೇಷಿಸುತ್ತಾ ಸಾವಿನ ವಿಷಯವನ್ನು ತಿಳಿಸಿ ಸಹಾಯ ಮಾಡುವಂತೆ ಕೋರುವ ಸುಜಾಳ ಪರಿಸ್ಥಿತಿಯ ಅರಿವು ಆಕೃತಿ ಶರ್ಮಾಳಿಗೆ ಗೊತ್ತಿದ್ದರೂ ಅವಳ ಸಹಾಯಕ್ಕೆಂದು ಹೊರಟವಳು ಟೇಬಲ್ ಮೇಲಿದ್ದ ಕಂಪ್ಯೂಟರ್‌ನ್ನು ನೋಡಿ ಶ್ರೀನಿವಾಸನ್ ರೌಡಿಯಿಂದ ಸತ್ತ ವಿಷಯವನ್ನು ಯಾಹೂ ಐಡಿಯೊಳಗೆ ಲಾಗಿನ್ ಆಗಿ ಇಂಟರ್‌ನೆಟ್‌ನಲ್ಲಿ ಪ್ರಸ್ತಾಪಿಸಿ ಹೊರಡುತ್ತಾಳೆ. ಅದಕ್ಕೆ ಪ್ರತಿಕ್ರಿಯೆಯಾಗಿ ನಾಲ್ಕಾರು ಕಾಮೆಂಟ್‌ಗಳು ಬರುತ್ತವೆ ಎಂಬಲ್ಲಿ ಕತೆಯು ಮುಗಿಯುತ್ತದೆ. ಅಂದರೆ ಸಾವನ್ನು ಕೂಡ ನಾವು ಇಂದು ಗಂಭಿರವಾಗಿ ಪರಿಗಣಿಸುತ್ತಿಲ್ಲ ಎಂಬ ಸ್ಥಿತಿಯನ್ನು ಪ್ರಸ್ತುತ ಕತೆಯು ಜಾಗತೀಕರಣ ಪ್ರಭಾವವು ಮನುಷ್ಯರನ್ನು ಇಂದು ಯಾವ ಸ್ಥಿತಿಗೆ ತಂದೊಡ್ಡಿದೆ ಎಂಬುದನ್ನು ಸೂಕ್ಷ್ಮವಾಗಿ ಹಾಗೆಯೇ ಗಂಭಿರವಾಗಿ ನಮ್ಮೆದುರಿಗಿಡುತ್ತದೆ.

ವಸುಧೇಂದ್ರ ಅವರ 'ಚೇಳು' ಕತೆಯಲ್ಲಿ ಬರುವ ವೆಂಕಮ್ಮನನ್ನು ಪುರುಷವಾದಿ ಸಮಾಜವು ಮಾನವೀಯತೆಯನ್ನು ಮರೆತು ಅವಳನ್ನು ಏಕಾಂಗಿಯನ್ನಾಗಿ ಮಾಡುವ ಸನ್ನಿವೇಷವನ್ನು ಕುರಿತು ಚಿತ್ರಿಸುತ್ತದೆ. ಅಲ್ಲದೇ ಪುರುಷವಾದಿ ಸಮಾಜವು ಮಕ್ಕಳಾಗದಿದ್ದರೆ ಅದನ್ನು ಮಹಿಳೆಯರ ಮೇಲೆ ಹಾಕುವ ಆ ಮೂಲಕ ಅವಳನ್ನು ಶೋಷಣೆಗೆ ಒಳಗು ಮಾಡುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಅಲ್ಲದೇ ಸಾಂಪ್ರದಾಯಿಕ ಮೂಢನಂಬಿಕೆಗಳನ್ನು ಇಟ್ಟುಕೊಂಡು ಮಹಿಳೆಯನ್ನು ಶೋಷಣೆಗೆ ಒಳಪಡಿಸುವ ಅವಳನ್ನು ದೈಹಿಕವಾಗಿ

ಬಳಸಿಕೊಳ್ಳುವ ಚಿತ್ರಣವು ಕತೆಯಲ್ಲಿದೆ. ಅಲ್ಲದೇ ಇಡೀ ಸಮಾಜದಲ್ಲಿ ಮಕ್ಕಳಾಗದಿದ್ದರೆ ಮಹಿಳೆಯನ್ನೇ ದೂಷಣೆಗೆ ಗುರಿ ಮಾಡುವುದು, ಅವಳನ್ನು ಬಂಜೆ ಎಂದು ಕರೆಯುವ ಅನೇಕ ಸಂಗತಿಗಳನ್ನು ಕಾಣಲು ಸಾಧ್ಯವಿದೆ. ಇಂತಹ ಸಂದರ್ಭದಲ್ಲಿ ಕೊಮ್ಮಣ್ಣನು ವೆಂಕಮ್ಮಳಿಗೆ ಮಕ್ಕಳಾಗಲಿಲ್ಲ ಎನ್ನುವುದಕ್ಕೆ ಊರಿಗೆ ಬಂದ ಸನ್ಯಾಸಿ-ಸಾಧು-ಸಂತರಿಗೆಲ್ಲಾ ತೋರಿಸಿ ದೇವರಲ್ಲಿ ಬೇಡಿಕೊಳ್ಳುತ್ತಿದ್ದನು.

ಒಮ್ಮೆ ಊರಿಗೆ ಭೈರವ ಬಾಬಾ ಬಂದಾಗ ಕೊಮ್ಮಣ್ಣ ತನ್ನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಬೇಡಿಕೊಳ್ಳುತ್ತಾನೆ. ಬಾಬಾ ಆಗ ವೆಂಕಮ್ಮನನ್ನು ಮೂರು ದಿನ ರಾತ್ರಿ ಪೂಜೆಗೆ ಬರಬೇಕೆಂದು ತಿಳಿಸಿ ಅವಳನ್ನು ದೈಹಿಕವಾಗಿ ಬಳಸಿಕೊಳ್ಳುತ್ತಾನೆ. ಆಗ ಕೊಮ್ಮಣ್ಣ ಅವಳನ್ನು ನಡತೆಗೆಟ್ಟವಳು ಎಂದು ದೂರುವ ಮೂಲಕ 'ನನ್ನ ಹೆಂಡತಿ ಅಲ್ಲ' ಎಂದು ಏಕಾಂಗಿ ಮಾಡುವ ಪ್ರಸಂಗವಿದೆ. ಇಡೀ ಸಮಾಜವು ಅವಳನ್ನು ಕೆಟ್ಟ ದೃಷ್ಟಿಯಿಂದ ಕಾಣುತ್ತದೆ. ಅಲ್ಲದೇ ಅವಳ ತಂದೆ-ತಾಯಿ ಕೂಡಾ ಇಂತಹ ಕೆಲಸವನ್ನೂ ಏಕೆ ಮಾಡಿದೆ ಎಂದು ಕೇಳುವಾಗ ಕೊಮ್ಮಣ್ಣನನ್ನು ಯಾರೂ ಪ್ರಶ್ನಿಸುವುದಿಲ್ಲ.

ಅಂದರೆ ಮಾನವೀಯತೆಯನ್ನು ಮರೆತಿರುವ ಸಮಾಜದಲ್ಲಿ ನಮ್ಮ ಅಜ್ಞಾನ, ಅಂಧಕಾರ, ಅವಿವೇಕದ ಕೆಲಸಗಳು ನಮ್ಮನ್ನು ಯಾವ ಕಡೆಗೆ ನೂಕುತ್ತಿವೆ ಎನ್ನುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಮಾನವೀಯತೆಯನ್ನು ಮರೆತು ವೆಂಕಮ್ಮನಿಗೆ ಚೇಳು ಕಡಿದಾಗ ಅದಕ್ಕೆ ಔಷಧಿಯನ್ನು ಮಾಡುವ ವಿದ್ಯೆಯನ್ನು ಬಾಬಾನು ಹೇಳಿ ಕೊಟ್ಟಿರುತ್ತಾನೆ. ಇಡೀ ಊರಿಗೆ ಚೇಳಿನ ಔಷಧಿಯನ್ನು ವೆಂಕಮ್ಮ ಕೊಡುತ್ತಿರುತ್ತಾಳೆ. ಆದರೆ ಶಾಸ್ತ್ರಿಯೊಬ್ಬನಿಗೆ ಚೇಳು ಕಡಿದಾಗ ಅವನು ಅವಳನ್ನು ಈ ಹಿಂದೆ ಇಂತಹವಳಿಂದ ಸತ್ತರೂ ಪರವಾಗಿಲ್ಲ, ಔಷಧಿಯನ್ನು ಮಾತ್ರ ತೆಗೆದುಕೊಳ್ಳಲಾರೆ ಎನ್ನುವ ಮಾತನ್ನು ಮೀರಿ ಚೇಳು ಕಚ್ಚಿದಾಗ ವೆಂಕಮ್ಮ ಅವನಿಗೆ ಸಹಾಯವನ್ನು ಮಾಡಿದಳು. ಅಂದರೆ ಮಾನವೀಯತೆಯನ್ನು ಮರೆತಂತಹ ಸಮಾಜದಲ್ಲಿ ವೆಂಕಮ್ಮನಂತಹ ಪಾತ್ರಗಳು ತಮ್ಮ ನೋವಿನೊಳಗೂ, ತಮಗೆ ಕಷ್ಟಗಳಿದ್ದಾಗಲೂ ಮಿಡಿಯುತ್ತಿರುತ್ತವೆ ಎನ್ನುವುದನ್ನು ಚಿತ್ರಿಸಿದೆ.

ಎಂ.ಎಸ್.ವೇದಾ ಅವರ 'ಪಾಲು' ಕತೆಯು ತಾಯಿಯೊಬ್ಬಳು ಹೆತ್ತು ಹೊತ್ತು ಬೆಳೆಸಿದ ಮಕ್ಕಳು ವಯಸ್ಸಿಗೆ ಬಂದ ನಂತರದಲ್ಲಿ ಅವರ ಕುಟುಂಬ, ಅವರ ಹೆಂಡತಿ-ಮಕ್ಕಳು ಎಂದು ಹೆತ್ತವರನ್ನು ಬಿಟ್ಟು ಬೇರೆಯಾಗುವ ಮತ್ತು ತನ್ನ ತಾಯಿಯ ಮೇಲಿನ ಪ್ರೀತಿಯನ್ನು ಬಿಟ್ಟು ಆಸ್ತಿಯನ್ನು ಕೇಳುವ ಚಿತ್ರಣ ಈ ಕತೆಯದ್ದಾಗಿದೆ. ತಾಯವ್ವ ತನ್ನ

ಮಕ್ಕಳಿಗೆ ಮದುವೆ ಮಾಡಿದಾಗ ಬಂದ ಕಿರಿಸೊಸೆಯಾದ ಚಂದಮ್ಮಳು ತನ್ನ ಮಗನನ್ನು ದೂರ ಮಾಡಿದಳು ಎಂಬ ಕಾರಣಕ್ಕೆ ಮಗನ ಮೇಲೆ ಕೋಪವಿದ್ದರೂ ಅವನ ಮೇಲಿನ ಪ್ರೀತಿ ಕಡಿಮೆಯಾಗಿರಲಿಲ್ಲ.

ಮಕ್ಕಳು ತಮಗೆ ಏನೇ ಮಾಡಿದರೂ ಅವಳ ಸೌಖ್ಯವನ್ನೇ ಬಯಸುವ ತಾಯಿಯ ಪ್ರೀತಿ, ಕಾಳಜಿಯನ್ನು ಮರೆತು ಮಕ್ಕಳಾದ ಸಿದ್ಲಿಂಗು, ಹಿರಿಮಗ ಶಿವಲಿಂಗ ಅದನ್ನು ಮರೆತು ತಮ್ಮ ವೈಯಕ್ತಿಕ ಕಾಳಜಿಯನ್ನು ಮುನ್ನೆಲೆಗೆ ತರುತ್ತಾರೆ. ಅಲ್ಲದೇ ತಾಯಿಯಿಂದ ಬೇರೆಯಾಗುವ ಸನ್ನಿವೇಶ ಬಂದಾಗ ಆಸ್ತಿಯ ವಿಚಾರಕ್ಕೆ ಬಂದಾಗ ತಾನು ಸಂಪಾದಿಸಿ ಗಳಿಸಿದ ಆಸ್ತಿಯನ್ನು ಅವಳು ಭಾಗ ಮಾಡಲು ಸಿದ್ಧ. ಆದರೆ ಅವಳು ತಲೆಬಾಗಿಲಿನ ವಿಚಾರಕ್ಕೆ ಬಂದಾಗ ಅವಳ ಮಾತನ್ನು ಕೇಳದೇ ಅದಕ್ಕೆ ಖರ್ಚಾಗಿರುವ ದುಡ್ಡನ್ನು ಕೊಡುತ್ತೇವೆಂದು ಹೇಳುವ ಮಕ್ಕಳನ್ನು ಕಂಡಾಗ ನಿಜಕ್ಕೂ ಅವಳಿಗೆ ಅರಗಿಸಿಕೊಳ್ಳಲಾಗಲಿಲ್ಲ. ಮಾನವೀಯತೆಯನ್ನು ಮರೆತ ನಾವು ಕೆಲವು ಮನುಷ್ಯ ಸಹಜವಾಗಿ ನಾವು ಕೆಲವು ವಸ್ತುಗಳ ಮೇಲೆ ಇಟ್ಟಿರಬಹುದಾದ ಪ್ರೀತಿಯನ್ನು ಅರ್ಥಮಾಡಿಕೊಳ್ಳಲಾರದ ಮಕ್ಕಳ ಮೇಲೆ ಅವಳಿಗೆ ಅಸಹ್ಯವೆನಿಸಿಬಿಡುತ್ತದೆ. ಇಲ್ಲಿ ಪ್ರಮುಖವಾಗಿ ಆಸ್ತಿಯ ಹಂಚಿಕೆಯಲ್ಲಿ ಮಾದೇವಿಗೆ ಏಕೆ ಕೊಡಬೇಕು? ಅವಳಿಗೆ ಮದುವೆಯನ್ನು ಮಾಡಿಲ್ಲವಾ? ಎಂಬ ಪ್ರಶ್ನೆಯನ್ನು ಈ ಮಕ್ಕಳು ಕೇಳುತ್ತಾರೆ. ಈ ಹಿನ್ನೆಲೆಯಲ್ಲಿ ಆಸ್ತಿಯನ್ನು ಪಡೆಯುವಲ್ಲಿ ಗಂಡುಮಕ್ಕಳಿಗೆ ಮಾತ್ರ ಹಕ್ಕಿದೆ ಎಂಬ ಸಂಪ್ರದಾಯವಾದಿ ನಿಲುವನ್ನು ತಾಯವ್ವ ಪ್ರಶ್ನಿಸುತ್ತಾಳೆ. ಮಾನವೀಯತೆಯನ್ನು ಮರೆತ ಮಕ್ಕಳ ಚಿತ್ರಣವನ್ನು ಕತೆಯಲ್ಲಿ ಚಿತ್ರಿಸಲಾಗಿದೆ.

೬.೨ ಏಕಾಂಗಿತನ/ಒಂಟಿತನ

ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಇದ್ದಂತಹ ಪರಿಸ್ಥಿತಿಯಲ್ಲಿ ಏಕಾಂಗಿತನ ಇಲ್ಲವೇ ಒಂಟಿತನದಂತಹ ಸಮಸ್ಯೆಗಳು ಅಷ್ಟಾಗಿ ಕಾಡುತ್ತಿದ್ದಿರಲಿಲ್ಲ. ಏಕೆಂದರೆ ಇಡೀ ಕುಟುಂಬ ಎಲ್ಲರನ್ನು ಒಳಗೊಳ್ಳುವ ಮತ್ತು ಎಲ್ಲರ ಹಿತವೇ ತನ್ನ ಹಿತ ಎಂಬ ಮನೋಧೋರಣೆಯ ಅಂಶಗಳನ್ನು ಒಳಗೊಂಡಿದ್ದಿತು. ಆದರೆ ಕಾಲಾನಂತರದಲ್ಲಿ ಆದ ಅನೇಕ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪಲ್ಲಟಗಳಿಂದ ವ್ಯಕ್ತಿ ಅವಿಭಕ್ತ ಕುಟುಂಬದಿಂದ ಹಿಮ್ಮುಖವಾಗಿ ನಡೆದು ವಿಭಕ್ತ ಕುಟುಂಬಗಳು ಸಮಾಜದಲ್ಲಿ ಕಾಣಿಸಿಕೊಂಡವು. ಸಮಾಜವು ನಿಂತ ನೀರಲ್ಲ ಎಂಬ ಮಾತಿನಂತೆ ಕುಟುಂಬದ ಸದಸ್ಯರ ಸಂಖ್ಯೆ ಕಡಿಮೆಯಾದ ಕೂಡಲೇ ಎಲ್ಲರೂ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯ ಉಂಟಾಯಿತು. ಅಂದರೆ

ಅವಿಭಕ್ತ ಕುಟುಂಬದಲ್ಲಿ ಇದ್ದಂತಹ ಕೆಲವು ಸಂದರ್ಭಗಳು ಇಲ್ಲಿ ಕಳೆದುಹೋಗಿ ಪೂರ್ಣಪ್ರಮಾಣದ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿತು.

ಇಂತಹ ಸಂದರ್ಭದಲ್ಲಿ ಸಮಾಜ ಸದಾಕಾಲ ಪರಿವರ್ತನಾಶೀಲ ಗುಣವೊಂದಿರುವುದರಿಂದ ಸಮಾಜಕ್ಕೆ ಅನುಗುಣವಾಗಿ ನಡೆಯತೊಡಗಿದಾಗ ಪರಸ್ಪರರಲ್ಲಿ ಇದ್ದಂತಹ ಭಾವನಾತ್ಮಕ ಅಂಶಗಳು ಕಣ್ಮರೆಯಾಗತೊಡಗಿದವು. ಅನೇಕ ಕಾರಣಕ್ಕಾಗಿ ಏಕಾಂಗಿಯಾಗಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿದ್ದರ ಪರಿಣಾಮವಾಗಿ ಇಂದಿನ ವರ್ತಮಾನ ಸಮಾಜದಲ್ಲಿ ಇದು ಒಬ್ಬರ ಸಮಸ್ಯೆಯಾಗಿ ಕಂಡುಬರುವುದಿಲ್ಲ ಬದಲಾಗಿ ಎಲ್ಲರ ಸಮಸ್ಯೆಯಾಗಿ ಪರಿವರ್ತನೆಯಾಗಿದೆ. ಉದಾಹರಣೆಗೆ ಶಿಕ್ಷಣದ ಕಾರಣಕ್ಕಾಗಿ ಮಕ್ಕಳು, ಕೆಲಸದ ಕಾರಣಕ್ಕಾಗಿ ಗಂಡ–ಹೆಂಡತಿ, ಹಳ್ಳಿಯಲ್ಲಿ ಮನೆ–ಮಠ, ಆಸ್ತಿಯನ್ನು ಬಿಟ್ಟಿರಲಾರದೇ ಅಜ್ಜ–ಅಜ್ಜಿ ಹೀಗೆ ಎಲ್ಲರಲ್ಲೂ ಕೆಲವು ನಿರ್ವಹಿಸಲೇಬೇಕಾದ ಜವಾಬ್ದಾರಿಗಳು ಬಂದುಬಿಟ್ಟಿವೆ. ಈ ಎಲ್ಲಾ ಜವಾಬ್ದಾರಿಗಳ ಪರಿಣಾಮವಾಗಿ ಇಂದು ನಾವು ಸಮಾಜದಲ್ಲಿ ಎಲ್ಲರೂ ಇದ್ದು ಯಾರೂ ಇಲ್ಲದಂತಹ ಏಕಾಂಗಿಭಾವವನ್ನು ಅನುಭವಿಸುತ್ತಿದ್ದೇವೆ.

ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಶರಭನಗೌಡ ಮುಖ್ಯ ಪಾತ್ರವಗಿದ್ದು ಇವನು ಊರಿನ ಗೌಡನಾಗಿರುತ್ತಾನೆ. ಇವನು ಸಾಕಷ್ಟು ಪ್ರಮಾಣದಲ್ಲಿ ಜಮೀನನ್ನು ಹೊಂದಿದವನಾಗಿರುತ್ತಾನೆ. ಶರಭನಗೌಡ ಏಕಾಂಗಿಯಾಗಿದ್ದು ಮಕ್ಕಳು ಮತ್ತು ಅವನ ಹೆಂಡತಿ ಗೌಡನನ್ನು ಬಿಟ್ಟು ದೂರದ ವಿದೇಶದಲ್ಲಿ ವಾಸವಾಗಿರುತ್ತಾರೆ. ಶಿಕ್ಷಣದ ಕಾರಣಕ್ಕಾಗಿ ಗೌಡನ ಮಕ್ಕಳು ಹಾಗೂ ಅವನ ಹೆಂಡತಿಯನ್ನು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಮನೆಯನ್ನು ಮಾಡಿ ಇಟ್ಟಿರುತ್ತಾನೆ. ಆನಂತರ ಅವರ ಕೆಲಸದ ಕಾರಣಕ್ಕೆ ಅವರು ವಿದೇಶದಲ್ಲಿರುವ ಪ್ರಮೇಯ ಬರುತ್ತದೆ. ಕೇರಿಯ ಜನರು ಗೌಡನ ಜಮೀನನಲ್ಲಿ ದುಡಿದು ಬದುಕನ್ನು ಸಾಗಿಸುತ್ತಿದ್ದರೆ ಗೌಡ ತನ್ನ ಮಕ್ಕಳನ್ನು, ಹೆಂಡತಿಯನ್ನು ವಿದೇಶಕ್ಕೆ ಕಳುಹಿಸಿ ಏಕಾಂಗಿಯಾಗಿ ಜಮೀನನ್ನು ನೋಡಿಕೊಂಡು ಬದುಕುತ್ತಿದ್ದಾನೆ. ಪ್ರಜಾಪ್ರಭುತ್ವದ ಮೂಲ ಆಶಯವಾದ ಸರ್ವರಿಗೂ ಸಮಾನತೆಯನ್ನು ನೀಡಬಯಸದೇ ತನ್ನ ವೈಯಕ್ತಿಕವಾದ ಹಿತಾಸಕ್ತಿಯ ಕಡೆಗೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದಾನೆ. ಸಾಮಾಜಿಕ ಸಮಾನತೆಯು ಇಲ್ಲದಿರುವಾಗ, ಆಸ್ತಿಯು ಕೆಲವೇ ಮಂದಿಯ ಕೈಯಲ್ಲಿ ಕ್ರೋಢಿಕರಣವಾಗಿರುವ ಕಾರಣದಿಂದ ವಲಸೆಯು ಇಂದು ಯಥೇಚ್ಛವಾಗಿದೆ ಎಂಬುದನ್ನು ಕತೆಯ ಮೂಲಕ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಗೌಡನಿಗೆ ಕೇವಲ ಕುಟುಂಬದಿಂದ ಮಾತ್ರ ಏಕಾಂಗಿತನದ ಅನುಭವ ಆಗಿಲ್ಲ. ಬದಲಾಗಿ ಆಧುನಿಕವಾದ ತಂತ್ರಜ್ಞಾನದಿಂದ ವ್ಯವಸಾಯ ಸಂಸ್ಕೃತಿ ಹೇಗೆ ಬದಲಾವಣೆಗೆ ಒಳಪಡುತ್ತಿದೆ ಎಂಬುದನ್ನು ಕತೆಯ ಮೂಲಕ ನೊಡುವುದಾದರೆ "ಟ್ರ್ಯಾಕ್ಟರ್ ತಂದರು. ಎತ್ತುಗಳಿಂದ ವ್ಯವಸಾಯ ನಿಂತಿತು. ಮನೆಯಲ್ಲಿ ಎತ್ತುಗಳು, ದನಕರುಗಳು ಕಮ್ಮಿಯಾದವು. ಜೀತದಾಳುಗಳಲ್ಲಿ ಅನೇಕರನ್ನು ಕೈಬಿಟ್ಟರು. ಕಲ್ಲಿನ ದೊಡ್ಡಮನೆಗೆ ಕರೆಂಟು ಬಂತು"[೨] ಎಂಬ ಮಾತುಗಳು ಅವನಲ್ಲಿ ಆದ ಒಂಟಿತನವನ್ನು ಪ್ರಸ್ತುತಪಡಿಸುತ್ತಿದೆ. ಆದರೆ ಗೌಡನಿಗೆ ಈ ರೀತಿಯ ಯಾಂತ್ರಿಕವಾದ ಬದುಕು ಅವನಿಗೆ ಸರಿಹೊಂದುತ್ತಿರಲಿಲ್ಲ. "ಗೌಡರ ಸ್ವಭಾವವೆಂದರೆ ಜೀತದಾಳುಗಳ ಜತೆ ತಮಾಸೆ ಮಾಡಿಕೊಂಡು ಅಡ್ಡಾಡುವುದು ತಪ್ಪಿ ಹೋಯಿತು. ಮನೆಯಲ್ಲಿ ಕಣ್ಣುಕುಕ್ಕುವ ಲೈಟಿನ ಬೆಳಕು ಗೌಡನಿಗೆ ಆಗಿಬರಲಿಲ್ಲ."[೩] ಇಂತಹ ಹಲವಾರು ಬದಲಾವಣೆಗಳು ಗೌಡನಿಗೆ ಏಕಾಂಗಿತನದ ಅನುಭವವನ್ನು ನೀಡಿದವು. ಹೆಂಡತಿ, ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದಾಗ ಇರದ ಈ ರೀತಿಯ ಏಕಾಂಗಿಭಾವ ತನ್ನ ದಿನನಿತ್ಯದ ಬದುಕಿನಲ್ಲಾದ ಬದಲಾವಣೆಗಳಿಂದ ಅವನನ್ನು ಕಾಡಲು ಶುರುಮಾಡಿತು.

ಅಂದರೆ ಏಕಾಂಗಿತನ ಎನ್ನುವುದು ಕೇವಲ ಹೆಂಡತಿ, ಮಕ್ಕಳು, ಬಂಧು-ಬಳಗ ಅಷ್ಟೇ ಅಲ್ಲದೇ ಅದು ಇಡೀ ಸಮಾಜದೊಂದಿಗೆ ಬೆಸೆದುಕೊಂಡಿರುವ ಬಗೆಯನ್ನು ಈ ಕತೆಯು ಪ್ರತಿನಿಧಿಸುತ್ತಿದೆ ಎಂದರೆ ತಪ್ಪಾಗಲಾರದು. ಗೌಡನಿಗೆ ತನ್ನ ವಿದೇಶದಲ್ಲಿರುವ ಮಗನು ಕಂಪೆನಿಗಳು ಇಂದು ಭೂಮಿಯನ್ನು ಕೊಳ್ಳಲು ಹೇಗೆ ಸಾಲು ಸಾಲಾಗಿ ನಿಂತಿವೆ ಎಂಬುದನ್ನು ತಿಳಿಸುವ ಮೂಲಕ ಭೂಮಿಯನ್ನು ಮಾರಿ ತಮ್ಮ ಜೊತೆಗೆ ವಿದೇಶಕ್ಕೆ ಬರುವಂತೆ ಹೇಳುತ್ತಾನೆ. ಆದರೆ ಗೌಡ ಭೂಮಿಯನ್ನು ನಂಬಿಕೊಂಡು ಬದುಕಿದಾತ, ಆತನಿಗೆ ಭೂಮಿಯ ಜೊತೆಗೆ ಬಿಡಿಸಲಾಗದ ಭಾವನಾತ್ಮಕ ನಂಟು ಅವನನ್ನು ತನ್ನ ಊರನ್ನು ಬಿಟ್ಟು ಹೋಗಲು ಬಿಡುವುದಿಲ್ಲ.

ಎಂ.ಎಸ್.ವೇದಾ ಅವರ 'ಪರಕೀಯರು' ಕತೆಯ ಚಿತ್ರಣವು ಈ ನೆಲೆಯದ್ದೇ ಆದ ಭಿನ್ನ ಆಲೋಚನೆಯ ಏಕಾಂಗಿತನವನ್ನು ಕುರಿತು ಚಿತ್ರಿಸುತ್ತದೆ. ಪಟ್ಟಣದಲ್ಲಿದ್ದ ಮನು ತನ್ನ ತಾತನ ಮನೆಯನ್ನು ನೋಡಲು ರಜೆಯಲ್ಲಿ, ಹಳ್ಳಿಯ ಜೀವನದ ಬಗ್ಗೆ ಒಂದು ಕಲ್ಪಿತ ಜಗತ್ತನ್ನು ಸೃಷ್ಟಿಸಿಕೊಂಡವಳು ಹಳ್ಳಿಯ ವಾಸ್ತವ ಜಗತ್ತನ್ನು ಕಂಡು ತಾನು ಪರಕೀಯಳು ಎಂಬ ಭಾವನೆ ಮೂಡಲಾರಂಭಿಸುತ್ತದೆ. ನಗರ ಪ್ರದೇಶದಲ್ಲಿ ಕಂಡುಬರುವ ಚಿತ್ರಣಕ್ಕೂ ಹಳ್ಳಿಯ ಜೀವನಕ್ಕೂ ಇರುವ ಅಗಾಧ ವ್ಯತ್ಯಾಸಗಳನ್ನು

ಮನು ಕಂಡು ನಾನು ಹೊರಗಿನವಳು ಎಂಬ ಭಾವನೆ ಮೂಡುತ್ತದೆ. ಹಳ್ಳಿಯನ್ನು ಮನು ಒಂದು ಸುಂದರ ಜಗತ್ತು ಎಂದು ಭಾವಿಸಿದರೆ; ಅವಳ ಆಲೋಚನೆಗೆ ವಿರುದ್ಧವಾಗಿ ಹಳ್ಳಿಯ ಇರುತ್ತದೆ. ಅಲ್ಲದೇ ಹಳ್ಳಿಯ ಒಂದು ಚಿತ್ರಣವು ಅವಳನ್ನು ಭಯಭೀತಿಗೊಳಿಸುತ್ತದೆ. "ನನ್ನ ಮಕ್ಳು ನನ್ನ ಬಡ್ದು ಬಾವಿಗ್ ಹಾಕ್ಯತ್ತಾ ಅವ್ರೆ ಯಾರಾದ್ರೂ ಬಂದು ಕಾಪಾಡ್ರಪ್ಪೋ.."[೬] ಎಂಬ ವಯಸ್ಸಾದ ಮುದುಕನೊಬ್ಬನ ಆರ್ತನಾದ ಮನುವನ್ನು ಕಾಡುತ್ತದೆ. ಅಲ್ಲದೇ ಹಳ್ಳಿಯಲ್ಲಿ ಮಕ್ಕಳೇ ಹೆತ್ತ ತಂದೆಯನ್ನೇ ಹೀಗೆ ಬಾವಿಗೆ ನೂಕುತ್ತಾರೆ ಎಂಬುದು ಅವಳಲ್ಲಿ ವಿಚಿತ್ರವಾಗಿ ಕಾಣುತ್ತದೆ.

ನಗರದ ಮನೆಯಲ್ಲಿ ಅವಳೇ ಎಲ್ಲರ ಕೇಂದ್ರ ಬಿಂದುವಾಗಿದ್ದಳು. ಎಲ್ಲರೂ ಅವಳನ್ನು ತುಂಬಾ ಪ್ರೀತಿಯಿಂದ ಆರೈಕೆಯಿಂದ ನೋಡಿಕೊಳ್ಳುತ್ತಿದ್ದರು. ಆದರೆ ಅವಳು ಹಳ್ಳಿಗೆ ಬಂದ ನಂತರ ಅವಳ ಅಮ್ಮನೇ ಅವಳನ್ನು ಬಿಟ್ಟು ಇತರರೊಡನೆ ಸೇರಿಕೊಂಡದ್ದು ಅವಳಿಗೆ ತಾನು ಇಲ್ಲಿ ಅಪರಿಚಿತಳು. ನಗರದ ಮನೆಯಲ್ಲಿ ಎಲ್ಲರಿಗೂ ಇಷ್ಟವಾಗುವ ನಾನು ಇಲ್ಲಿ ಯಾರೊಬ್ಬರೂ ತನ್ನನ್ನು ಕೇಳುವರಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ.

ಅಲ್ಲದೇ ಹಳ್ಳಿಯ ಎಲ್ಲಾ ಸಂಬಂಧಗಳಲ್ಲಿಯೂ ಅವರವರು ಒಂದಾಗಿ ಬೆರೆತಿದ್ದಾರೆ. ಮನು ಮಾತ್ರ ಅವರೆಲ್ಲ ಒಂದು; ತಾನು ಮಾತ್ರ ಒಂದು ಎನ್ನುತ್ತಾಳೆ. ಅಲ್ಲದೇ "ತಾನು ಬಂದಾಗ ಯಾವುದೇ ಬಗೆಯ ಪ್ರೀತಿಯ ಪ್ರದರ್ಶನವನ್ನು ಮಾಡದೇ ಇದ್ದ ತಾತ ತಮ್ಮ ಈ ಮೊಮ್ಮಕ್ಕಳೊಂದಿಗೆ ಖುಷಿಯಾಗಿರುವಂತೆ ವರ್ತಿಸುವುದನ್ನು ಕಂಡಾಗ ಮನುವಿಗೆ ನಿಜವಾಗಿಯೂ ಅಳು ಬಂದುಬಿಟ್ಟಿತ್ತು. ತನ್ನ ಮನೆಯಲ್ಲಿ ತನ್ನ ಮಾತಿಗೆ, ನೋಟಕ್ಕೆ, ನೋವಿಗೆ, ನಲಿವಿಗೆ ಎಷ್ಟೆಲ್ಲಾ ಬೆಲೆ! ಆದರೆ ಇಲ್ಲಿ?"[೭] ಎಂದು ಅವಳನ್ನೇ ಅವಳು ಪ್ರಶ್ನೆ ಮಾಡಿಕೊಳ್ಳುತ್ತಿದ್ದಾಳೆ. ಇಲ್ಲಿ ಹಳ್ಳಿಯಲ್ಲಿ ಕಂಡುಬರುವ ಪ್ರೀತಿ, ವಿಶ್ವಾಸ, ಸ್ನೇಹ ಎನ್ನುವುದು ನಗರದಲ್ಲಿ ಕಂಡುಬರುವುದು ಕಡಿಮೆ. ಅದನ್ನು ತೋರಿಸುವವರು ಮನೆಯವರಾಗಿರುತ್ತಾರೆಯೇ ಹೊರತು ಇನ್ನಿತರರಲ್ಲ ಎಂಬ ಅಂಶವು ಸೂಚ್ಯವಾಗಿ ವ್ಯಕ್ತವಾಗುತ್ತಿದೆ.

ಇನ್ನೂ ವೃತ್ತಿಯ ಆದಾಯದ ಕಾರಣಕ್ಕಾಗಿ ವ್ಯಕ್ತಿಯೊಬ್ಬನನ್ನು ಕುಟುಂಬದವರಿಂದ ಹೇಗೆ ದೂರವಾಗಿ ಏಕಾಂಗಿಯಾಗುತ್ತಿದ್ದಾನೆ ಎನ್ನುವುದನ್ನು ಮಹಾಂತೇಶ ನವಲಕಲ್ ಅವರ 'ಗಾಂಧಿ.... ಬಂದಾನೆ?' ಕತೆಯಲ್ಲಿ ನಿರೂಪಿಸಲಾಗಿದೆ. ಬಸವರಾಜ ಎನ್ನುವ ಪಾತ್ರವು ಇಲ್ಲಿ ಪಿಡಬ್ಲ್ಯೂಡಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ಕೆಲಸ ಮಾಡುತ್ತಿರುತ್ತಾನೆ. ಇಡೀ ವ್ಯವಸ್ಥೆಯು ಅವನನ್ನು ಇಂಜಿನಿಯರ್

ಆಗಿ ಎಷ್ಟೆಲ್ಲಾ ಆದಾಯವನ್ನು ಸಂಪಾದನೆ ಮಾಡಿರಬಹುದು ಎನ್ನುವ ಲೆಕ್ಕಾಚಾರದಲ್ಲೇ ಯೋಚಿಸುತ್ತಿರುವಾಗ ಅವನಿಗೆ ಸಂಬಳ ಬರುತ್ತಿರುವುದು ಎಂಟು ಸಾವಿರದ ಐನೂರು ರೂಪಾಯಿಗಳು ಮಾತ್ರ.

ತಂದೆ ಸತ್ತಾಗ ಅವನಿಗೆ ಬಂದ ಸಾಲದ ಮೊತ್ತವನ್ನು, ತನ್ನ ಕುಟುಂಬದ ಮಕ್ಕಳ ಹೆಂಡತಿಯ ಬೇಕು ಬೇಡುಗಳನ್ನು ಸಹ ಅವನಿಗೆ ತೀರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೇ ಅವನ ಆಫಿಸ್‌ನಲ್ಲಿಯೂ ಕೂಡಾ ಪ್ರಾಮಾಣಿಕತೆಯಿಂದ ಇದ್ದಿದ್ದರ ಪರಿಣಾಮವಾಗಿ ಎಲ್ಲರಿಂದ ಅವನು ಒಬ್ಬಂಟಿಯಾದಂತೆ ಭಾಸವಾಗುತ್ತಿತ್ತು. ಇವನಿಗೆ 'ಗಾಂಧಿ' ಎನ್ನುವ ಉಪನಾಮವನ್ನು ಅವನ ಪ್ರಾಮಾಣಿಕತೆಯಿಂದ ಆಫೀಸ್‌ನಲ್ಲಿಯೂ ಮನೆಯಲ್ಲಿಯೂ ಕರೆಯುತ್ತಿದ್ದರು. ಇದೇ ಸಂದರ್ಭದಲ್ಲಿ ಮಗನಾದ ಇಂದ್ರಜಿತ್‌ನು ಕಂಪೆನಿಯೊಂದಕ್ಕೆ ಕೆಲಸಕ್ಕೆ ಹೋಗಿದ್ದರಿಂದ ಇಡೀ ಕುಟುಂಬದ ಚಿತ್ರಣವೇ ಬದಲಾಯಿತು. ಅಲ್ಲದೇ ಬಸವರಾಜ ತಾನು ಏಕಾಂಗಿಯಾದೆ ಎನ್ನುವ ಭಾವವನ್ನು ಹೀಗೆ ವ್ಯಕ್ತಪಡಿಸುತ್ತಾನೆ.

"ಇಲ್ಲಿ ಬದುಕಿನ ಪ್ರತಿಕ್ಷಣವೂ ಒಂಟಿ ಎನ್ನುವಂತೆ ಭಾಸವಾಯಿತು. ಈ ಜಗತ್ತೇ ನನ್ನ ಸರಳತತ್ವದ ಜಾಯಮಾನವನ್ನು ಪ್ರಶ್ನಿಸುತ್ತದೆ. ನಾನು ಯಾರಿಗೂ ಹೊಂದಿಕೊಳ್ಳದ ಪ್ರಾಣಿಯೋ ಅಥವಾ ಜಗತ್ತು ನನ್ನ ಜೊತೆ ಹೊಂದಿಕೊಳ್ಳಲಾರದೋ ನನ್ನ ಅಸಹಾಯಕತೆ ನನ್ನನ್ನು ಪಿತೃದ್ರೋಹಿಯನ್ನಾಗಿಸಿತು. ನನ್ನ ಊರವರು ನನ್ನನ್ನು ಪಿತೃದ್ರೋಹದ ಶಿಲುಬೆಗೆ ಏರಿಸಿದರು. ನನ್ನ ಆಫೀಸಿನ ಜನಕ್ಕೆ ನಾನು ಮೂರ್ಖ ಗಾಂಧಿ ಮಾತ್ಮಾ. ನನ್ನ ಹೆಂಡತಿ ಮಕ್ಕಳಿಗೆ ಈ ಸರಳ ಜೀವನದ ಸರಗುಣಿಕೆಗೆ ಹಾಕಿ ತಮ್ಮ ಜೀವನವನ್ನು ನರಕಕ್ಕೆ ದೂಡಿದ ಪಾಖಂಡಿ, ಗಾಂಧಿ ಇಲ್ಲದ ನಾಡಿನಲ್ಲಿ ನಾನು ಯಾರ ಜೊತೆ ಮುಖಾಮುಖಿಯಾಗಲಿ ಯಾರೊಂದಿಗೆ ಬದುಕಲಿ, ಕ್ಷಣಕ್ಷಣಕ್ಕೂ ನಾನು ಒಂಟಿಯೆನಿಸಿ ಚಿಂತಿಸಿದೆ."[೮]

ಅಂದರೆ ಇಡೀ ಕತೆಯಲ್ಲಿ ಬಸವರಾಜನ ಸರಳ ವ್ಯಕ್ತಿತ್ವ, ಪ್ರಾಮಾಣಿಕತೆ ಅವನನ್ನು ಸಮಾಜದಿಂದ ಮತ್ತು ಕುಟುಂಬದಿಂದ ಹೇಗೆ ಒಂಟಿಯನ್ನಾಗಿ ಗಾಂಧಿಯ ಆದರ್ಶ ತತ್ವಗಳನ್ನು ಮರೆಯುತ್ತಿರುವ ಚಿತ್ರಣವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಅಲ್ಲದೇ ಆರ್ಥಿಕ ದೃಷ್ಟಿಕೋನವು ಇಂದಿನ ಸಮಾಜದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿರುವುದನ್ನು ಕತೆಯಲ್ಲಿ ಮುಖ್ಯವಾಗಿ ಚರ್ಚಿಸಲಾಗಿದೆ. ಇಡೀ ಸಮಾಜವು ಬದಲಾವಣೆಯನ್ನು ಕಾಣುತ್ತಿರುವ ಹಿನ್ನೆಲೆಯಲ್ಲಿ ಗಾಂಧೀಜಿಯ ತತ್ವಗಳನ್ನು, ಆದರ್ಶಗಳನ್ನು ಪಾಲನೆ ಮಾಡುತ್ತಿರುವ ವ್ಯಕ್ತಿಗಳನ್ನು ಹೇಗೆ ನೋಡಿಕೊಳ್ಳಲಾಗುತ್ತಿದೆ ಎನ್ನುವುದನ್ನು ಕತೆಯಲ್ಲಿ ಚರ್ಚಿಸಿರುವುದನ್ನು ನೋಡಬಹುದಾಗಿದೆ.

೬.೩ ಆಯ್ಕೆಯ ಸ್ವಾತಂತ್ರ್ಯ

ಭಾರತೀಯ ಪರಂಪರೆಯು ಬಹುತ್ವದ ನೆಲೆಯಲ್ಲಿ ರೂಪುಗೊಂಡಿರುವಂತಹದ್ದು. ಭಾರತೀಯ ಸಂವಿಧಾನವು ತನ್ನ ಮಾನವ ಹಕ್ಕುಗಳಲ್ಲಿ ವೈಯಕ್ತಿಕವಾದ ನಾಗರೀಕರೆಲ್ಲರಿಗೂ ಆಯ್ಕೆಯ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಯ್ಕೆಯ ಸ್ವಾತಂತ್ರ್ಯವನ್ನು ವ್ಯಕ್ತಿಗೆ ನೀಡಿರುವುದು ನೈತಿಕ ದೃಷ್ಟಿಕೋನವನ್ನು ಹೊಂದಿರುವ ಸಮಾಜವು ಪೂರ್ವನಿರ್ಧರಿಸಲ್ಪಟ್ಟಿರುತ್ತದೆ. ಸಮಾಜವು ವ್ಯಕ್ತಿಗೆ ಇಂತಹ ಕೆಲಸವನ್ನು ಮಾಡಬೇಕು, ಇಂತಹ ಕೆಲಸವನ್ನು ಮಾಡಬಾರದು ಎಂಬ ಅನೌಪಚಾರಿಕ ನಿಯಮವನ್ನು ರೂಪಿಸಿದೆ.

ಅನುಪಮಾ ಪ್ರಸಾದ್ ಅವರ 'ಡೇಗೆ' ಕತೆಯು ಮುಖ್ಯವಾಗಿ ಆಧುನಿಕ ಪರಿಸರದಲ್ಲಿ ವಾಸಿಸುತ್ತಿರುವ ಜನರಲ್ಲಿ ಇರುವ ಸಾಮಾಜಿಕ ಅಸಮಾನತೆಯ ಕಾರಣಕ್ಕಾಗಿ ಬಡವರು ಹೇಗೆ ತಮ್ಮ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ತಿಳಿಸುತ್ತಿದ್ದಾರೆ. ಇಂದಿನ ವರ್ತಮಾನದ ದಿನಗಳಲ್ಲಿ ಎಲ್ಲದಕ್ಕೂ ಮನುಷ್ಯ ವೈಜ್ಞಾನಿಕ ಸತ್ಯಗಳೊಂದಿಗೆ ಅದನ್ನು ನಿರ್ವಹಿಸುವ ಅನಿವಾರ್ಯತೆಯನ್ನು ಕಂಡುಕೊಂಡಿರುವುದನ್ನು ಗುರುತಿಸಲು ಸಾಧ್ಯವಾಗಿದೆ. ದೈಹಿಕವಾದ ಕಾರಣಗಳಿಗಾಗಿ ಮನುಷ್ಯ ತಂತ್ರಜ್ಞಾನವನ್ನು ಬಳಸಿಕೊಂಡು ಇನ್ನೊಬ್ಬರನ್ನು ಬಳಸಿಕೊಳ್ಳುವ ಉದ್ದೇಶವನ್ನು ಕತೆಯು ನಿರೂಪಿಸುತ್ತದೆ.

ಇಲ್ಲಿ ಬಡತನವು ಸಾಮಾಜಿಕವಾಗಿ ವ್ಯವಸ್ಥೆಯ ಅಂಚಿನಲ್ಲಿರುವವರಿಗೆ ಬದುಕಲು ಬೇರೆ ಯಾವುದೇ ಆಯ್ಕೆಗಳಿಲ್ಲದೇ ತಮ್ಮ ಜೀವವನ್ನೇ ಅಥವಾ ಜೀವನವನ್ನೇ ಮುಡಿಪಾಗಿಡುವ ಸ್ಥಿತಿಯನ್ನು ಕತೆಯು ತಿಳಿಸುತ್ತಿದೆ. ಕತೆಯ ಮುಖ್ಯ ಪಾತ್ರವಾದ ನೀಲು ತನ್ನ ಆರ್ಥಿಕವಾಗಿ ಹಿಂದುಳಿದಿರುವ ಕಾರಣಕ್ಕಾಗಿ ಬಾಡಿಗೆ ತಾಯಿಯಾಗುವ ಪ್ರಕ್ರಿಯೆಗೆ ಒಳಪಡುತ್ತಾಳೆ. ಇದಕ್ಕೆ ಸಮಾಜದಲ್ಲಿ ಉನ್ನತ ಹುದ್ದೆಯಲ್ಲಿದ್ದು ಇದನ್ನು ನೈತಿಕವಾಗಿ ತಡೆಯಬೇಕಾಗಿದ್ದ ಡಾಕ್ಟರ್ ಕೂಡಾ ಈ ಬಾಡಿಗೆ ತಾಯಿಯಾಗುವ ನೀಲೂಗೆ ಸಹಕರಿಸುವ ಆ ಮೂಲಕ ಅವಳಲ್ಲಿರುವ ನೈತಿಕ ಪ್ರಜ್ಞೆಯನ್ನು ಮರೆತು ಗರ್ಭಧಾರಣೆಯ ಸಮಯದಲ್ಲಿ ಇರುವ ವಾಸ್ತವ ಸಂಗತಿಯನ್ನು ಕೇವಲ ಹಣದ ಕಾರಣಕ್ಕಾಗಿ ಮರೆಯುವ ಪ್ರಸಂಗವನ್ನು ಕಾಣಬಹುದು.

ಬಾಡಿಗೆ ತಾಯಿಯಾಗುವ ಪರಿಕಲ್ಪನೆಯನ್ನು ನೀಲೂಳ ಗಂಡನು ಹೀಗೆ ಅರ್ಥೈಸಿಕೊಂಡಿದ್ದಾನೆ. "ತಾನು ತರಕಾರಿ ಮಾರುವ ಗಾಡಿಯನ್ನು ಹೇಗೆ ಬಾಡಿಗೆ ಪಡೆಯುತ್ತಿದ್ದನೋ ಹಾಗೆ ಇದು ಕೂಡಾ ಅಷ್ಟೇ ವ್ಯವಹಾರಿಕ ಅನ್ನಿಸಿತ್ತು"[೯]. ಡಾಕ್ಟರ್ ನೀಲಮ್ಮಳಿಗೆ ಕುರಿತು 'ಒಳ್ಳೆ ಕೆಲಸ ಮಾಡಿದೆ ನೀಲಮ್ಮ. ಮಕ್ಕಳನ್ನು ಹೆರಲಿಕ್ಕೆ ಆಗದಿದ್ದೋರ

ಮಡಿಲು ತುಂಬಿದ ಪುಣ್ಯ ಬರ್ತದೆ ನಿಂಗೆ' ಎಂದಾಗ ನೀಲು ಮುಖ ಸಿಂಡರಿಸಿ 'ನಾವೇನ್ ಪುಣ್ಯ ಸಂಪಾದನೆ ಮಾಡಾಕ್ ಬಂದಿಲ್ಲ ಡಾಕ್ಟ್ರಮ್ಮ. ಅವ್ರಿಗೊಳ್ಳೆದಾಗ್ಲಿ ಅನ್ಕೊಂಡು ಬಂದ್ವಾ? ಮಗ ಹೆತ್ಕೊಟ್ರೆ ಕಾಸು ಬರುತ್ತೆ ಅದ್ಕೇ ಬಂದ್ವಿ' ಎನ್ನುವ ಮಾತುಗಳು ಮನುಷ್ಯ ಇಂದು ತನ್ನ ನೈತಿಕತೆಯನ್ನು ಮರೆತು ಹೇಗೆ ಅಧೋಗತಿಗೆ ಇಳಿದಿದ್ದಾನೆ ಎನ್ನುವುದನ್ನು ತೋರಿಸುತ್ತದೆ. ಸಹಜ ಜೀವನ ಕ್ರಮವನ್ನು ಅನುಸರಿಸುತ್ತಿದ್ದ ನೀಲಮ್ಮನಿಗೆ ವೈಭವಯುತ ಜೀವನ ಅವಳಲಿದ್ದಲ್ಲಿಯೇ ಎಲ್ಲವನ್ನು ತಂದು ಕೊಡುವುದು ಅವಳಲ್ಲಿ ಒಂದು ಬಗೆಯ ನಿರಾಸಕ್ತಿಯನ್ನು ಉಂಟುಮಾಡಿತು. ಅವಳಿಗೆ ತನ್ನ ಗಂಡನ ಬಳಿಯಿದ್ದಾಗಿನ ಸುಖ ಇಲ್ಲಿ ಇಲ್ಲ ಎನಿಸುವುದು ಸಹ ಮನುಷ್ಯನ ಎಲ್ಲಾ ಆಸೆಗಳನ್ನು ಕೇವಲ ದುಡ್ಡಿನಿಂದ ತೀರಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತದೆ.

ನೀಲೂ ಮಗುವನ್ನು ಹೆತ್ತು ಕೊಟ್ಟು ಹೊರಗೆ ಬಂದಾಗ ಈ ಪರಿಯಾದ ಅವಳ ಬಿಗಿಯುತ್ತಿರುವ ಮೊಲೆಗಳಲ್ಲಿ ನೋವನ್ನು ತಡೆದುಕೊಳ್ಳಲು ಅವಳಿಗೆ ಸಾಧ್ಯವಾಗದೇ ಇನ್ನೊಮ್ಮೆ ಇಂತಹ ಕೆಲಸಕ್ಕೆ ಹೋಗಬಾರದೆಂದುಕೊಂಡಳು. ಆದರೆ ಮನೆಯ ಆರ್ಥಿಕ ಪರಿಸ್ಥಿಯು ಅವಳಿಗೆ ಮತ್ತೆ ಬಾಡಿಗೆ ತಾಯಿಯಾಗಿ ಮುಂದಿನ ಬಾರಿ ಶೆಡ್ಡಿನ ಹಿಂದೆ ತಗಡಿನ ಗೋಡೆ ಮಾಡಿ ಒಂದು ಪಾಯಿಖಾನೆ ಕಟ್ಟಬೇಕು, ಹಾಗೆಯೇ ಶೆಡ್ಡಿಗೆ ಹಂಚು ಹಾಕಿದರಾಯ್ತು ಎಂದುಕೊಂಡಳು. ಪ್ರಕೃತಿ ನಿಯಮಕ್ಕೆ ವಿರೋಧವಾಗಿ ಕೆಲಸ ಮಾಡುವ ಮನುಷ್ಯನು ತನ್ನ ಆಸೆ–ಆಕಾಂಕ್ಷೆಗಳಿಗಾಗಿ ಜೀವವನ್ನೇ ಒತ್ತೆ ಇಟ್ಟು ಇಂತಹ ಕೆಲಸಗಳಲ್ಲಿ ಭಾಗಿಯಾಗುವ ಪ್ರಕ್ರಿಯೆಯನ್ನು ಕಾಣಬಹುದು. ಸಮಾಜದಲ್ಲಿನ ಆರ್ಥಿಕವಾದ ಅಸಮಾನತೆಯು ಇವಳಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಆರ್ಥಿಕ ಹಿನ್ನೆಲೆಯಲ್ಲಿ ಗಮನಿಸಿದಾಗ ಇಂತಹ ಕೆಲಸಕ್ಕೆ ಅವರನ್ನು ಅಣಿಮಾಡುವ ದುಸ್ಥಿತಿಗೆ ತಂದಿರುವುದನ್ನು ಈ ಕತೆಯ ಮೂಲಕ ಕಾಣಲು ಸಾಧ್ಯವಾಗಿದೆ.

ಅಲ್ಲದೇ ಅಮರೇಶ ನುಗಡೋಣಿ ಅವರ ಪಕ್ಕಕ್ಕಲ್ಲದೇ ಪರಿಣಾಮ ಕಾಣಿಸದು ಕತೆಯಲ್ಲಿ ಬರುವ ಪಾತ್ರಗಳಲ್ಲೂ ಕೂಡಾ ಇಂತಹ ಆಯ್ಕೆಯ ಸ್ವಾತಂತ್ರ್ಯವನ್ನು ಶರಭನಗೌಡ ನಿರಾಕರಿಸುವ ಮತ್ತು ಅದಕ್ಕೆ ಪ್ರತಿರೋಧವಾಗಿ ಕತೆಯಲ್ಲಿ ಚಳುವಳಿಗಾರರು ಗೌಡನ ಮನಃ ಪರಿವರ್ತನೆಯನ್ನು ಮಾಡಿ ಅವನ ಜಮೀನಿನಲ್ಲಿ ಕೂಲಿಯ ಆಳುಗಳಾಗಿ ಕೆಲಸ ಮಾಡಿದ್ದವರಿಗೆ ಭೂಮಿಯನ್ನು ಅವರ ದುಡಿಮೆಗೆ, ಜೀವನಕ್ಕೆ ಅನುಕೂಲವಾಗಲೆಂದು ಅಲ್ಲದೇ ಅಸಮಾನತೆಯನ್ನು ಈ ಮೂಲಕ ನಿವಾರಿಸಬಹುದು ಎನ್ನುವ ಆಶಯ ಕತೆಯಲ್ಲಿದೆ. ಆದರೆ ಕತೆಯಲ್ಲಿ ಗೌಡನು ಜಮೀನನ್ನು ಕೊಡಲು ಹೋದಾಗ ಅವರು

ಗೌಡನ ಭೂಮಿಯನ್ನು ನಯವಾಗಿ ತಿರಸ್ಕರಿಸುತ್ತಾರೆ. ಅಲ್ಲದೇ ಬದಲಾಗುತ್ತಿರುವ ಸಮಾಜದಲ್ಲಿ ಬದುಕುವ ಆಯ್ಕೆಯ ಪ್ರಶ್ನೆಗಳು ಇಂದು ಜನರನ್ನು ಏನನ್ನೂ ಕೇಳುವಂತೆ ಪ್ರೇರೇಪಿಸುತ್ತಿವೆ ಎನ್ನುವುದನ್ನು ಕತೆಯಲ್ಲಿ ತಿಳಿಸಲಾಗಿದೆ.

ಅಲ್ಲದೇ ಜಾಗತೀಕರಣ ಸಂದರ್ಭದಲ್ಲಿ ಬದಲಾಗುತ್ತಿರುವ ಜನರ ಆಯ್ಕೆಗಳನ್ನು ಕತೆಯಲ್ಲಿ ಹೀಗೆ ನೋಡಬಹುದು. ವಡ್ಡರಮಲ್ಲ ಗೌಡನಿಗೆ "ಈಗ ನೋಡ್ರಿ, ನನ್ನ ಮಗ ಓದ್ಯಾನ, ರಾಮನ ಮಗ್ಳು ಓದ್ಯಾಳ. ಕೇರ್ಯಾಗ ದುಡಕಂದು ತಿಂಬ ಮಂದಿ ಈಗೀಗ ಶಾಲಿ ಕಲತು ಕುಂತಾವ. ನಿಮ್ಮ ಮಕ್ಕಳು ದೊಡ್ಡ ದೊಡ್ಡ ಕೆಲ್ಸದಾಗರ ಅಂಬೋದು ಕೇಳೀವಿ. ಅವುರಿಗೆ ಹೇಳ್ರಿ, ನಮ್ಮ ಮಕ್ಕಳಿಗೆ ಒಂದು ಸಣ್ಣ ಚಾಕ್ರಿ ಕೊಡ್ಸಿದ್ರ, ತಿಂಗಳ ತಿಂಗಳ ಪಗಾರ ಬರುವಂತೆ ಆದ್ರ ನಮ್ಗ ಪಾಡ"[೧೦] ಎಂದು ಹೇಳುವ ಮಾತುಗಳು ಸಮಾಜದಲ್ಲಿ ಶಿಕ್ಷಣದ ಮೂಲಕ ಆಗುತ್ತಿರುವ ಬದಲಾವಣೆಗಳು ಮನುಷ್ಯರ ಜೀವನದಲ್ಲೂ ಅನೇಕ ಬದಲಾವಣೆಗಳನ್ನು ತಂದಿವೆ. ಅಲ್ಲದೇ ಶಿಕ್ಷಣದ ಕಾರಣಕ್ಕಾಗಿ ಬದಲಾಗುತ್ತಿರುವ ಉದ್ಯೋಗವು ಜೀವನಕ್ಕೆ ಆಧಾರವಾಗಿದೆ ಎನ್ನುವ ಪ್ರಶ್ನೆಯು ಕತೆಯು ನಮ್ಮ ಮುಂದಿಟ್ಟಿದೆ. ಅಲ್ಲದೇ ಗೌಡನು ತನ್ನ ಭೂಮಿಯನ್ನು ಬಿಟ್ಟುಕೊಡುವುದಾಗಿ ಹೇಳಿದಾಗ ಶಿಕ್ಷಣವು ಆಳುಗಳನ್ನು ಗೌಡನ ಮಾತಿಗೆ ಪ್ರತಿರೋಧವಾಗಿ ನಮ್ಮ ಇಂದಿನ ಜನರ ಆಯ್ಕೆಗಳು ಏನಾಗಿವೆ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಮಹಿಳೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಸುಮಂಗಲ ಅವರ 'ಮುತ್ತಿನ ಬುಗಡಿ' ಕತೆಯಲ್ಲಿ ಮುಖ್ಯ ಪಾತ್ರ ಮಧುಕರ. ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಮಧುಕರ ತನ್ನೊಂದಿಗೆ ತನ್ನ ತಾಯಿಯ ಆರೋಗ್ಯ ಸರಿಯಿಲ್ಲದ್ದರಿಂದ ಕ್ಯಾನ್ಸರ್ ವಿಚಾರವಾಗಿ ಬೆಂಗಳೂರಲ್ಲಿ ಆಸ್ಪತ್ರೆಗೆ ಸೇರಿಸುವ ವಿಚಾರದಿಂದ ತೋರಿಸುವ ವ್ಯವಸ್ಥೆ ಮಾಡುತ್ತಾರೆ. ಹಳ್ಳಿಯಿಂದ ಬಂದಿದ್ದ ತನ್ನವ್ವ ಪಟ್ಟಣದವರ ಎದುರಿಗೆ ಮುಜುಗರವಾಗುವಂತೆ ಎಲ್ಲಿ ನಡೆದುಕೊಳ್ಳುತ್ತಾಳೆಂಬ ಗೀಳು ಮಧುಕರನಲ್ಲಿ ಆವರಿಸಿಕೊಂಡಿರುತ್ತದೆ. ತನ್ನ ಕುಟುಂಬದವರಿಗೆ ತಲೆಮಾರಿನಿಂದ ವಂಶಪಾರಂಪರ್ಯವಾಗಿ ಬಂದಿದ್ದ ಓಲೆಗಳನ್ನು ಶಿವಾನಿಗೆ ತಾಯಿ ಕೊಟ್ಟಿದ್ದರಿಂದ ಮಧುಕರನಿಗೆ ಮನಸ್ಸಿನೊಳಗೆ ಕಸಿವಿಸಿಯಾಗಿರುತ್ತದೆ. ತನ್ನವ್ವ ಶಿವಾನಿಗೆ ಓಲೆಗಳನ್ನು ಕೊಟ್ಟಿರುವುದನ್ನು ಸಹಿಸಲಾಗದ ಮಧುಕರನ ಜೊತೆ ಶಿವಾನಿಯು ಮಾತನಾಡುವಾಗ ಮಧುಕರನಲ್ಲಿ ಸುಪ್ತವಾಗಿ ಅವಿತು ಕುಳಿತಿರುವ ಪುರುಷವಾದಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಈ ವಿಚಾರವಾಗಿ "ಅವ್ವ ಒಂದು ಸ್ವತಂತ್ರ ವ್ಯಕ್ತಿತ್ವ ಅನ್ನೋದನ್ನ ನಮ್ಮ ಮನಸ್ಸು ಎಷ್ಟರ ಮಟ್ಟಿಗೆ ಒಪ್ಪಲ್ಲ ಎಂದು ಹಾಗೆಂದು

ನಾವು ಒಂದು ಅಪರಿಚಿತ ಭಾವವನ್ನೇ ಬೆಳೆಸಿಕೊಳ್ತೀವಿ. ಕಿರಿಕಿರಿ ಅನಿಸುತ್ತೆ ಅಲ್ವಾ"[೧೧] ಎಂದು ವಿನುತಾ ಕೇಳುವ ಮಾತು ಹೆಣ್ಣು ಹೆಣ್ಣನ್ನು ಅರಿತುಕೊಂಡ ನೆಲೆಯಲ್ಲಿ ಚಿತ್ತರಿಸಲಾಗಿದೆ.

ಮಹಿಳೆಯನ್ನು ೨೧ ಶತಮಾನದಲ್ಲಿ ಮಹಿಳೆಯು ಸ್ವಾವಲಂಬಿಯಾಗಿದ್ದಾಳೆ. ಮಹಿಳೆ ಅಬಲೆಯಲ್ಲಿ, ಸಬಲೆ ಎನ್ನುವ ಅನೇಕ ಹೇಳಿಕೆಗಳನ್ನು ಕೇಳಿದ್ದರೂ ಇಂತಹ ಕತೆಗಳ ಮೂಲಕ ಆಳದಲ್ಲಿ ಬೀಡುಬಿಟ್ಟುಕೊಂಡಿರುವ ಪುರುಷವಾದಿ ಮನಸ್ಥಿತಿಯು ಇನ್ನೂ ಹೋಗಿಲ್ಲ ಎನ್ನುವುದನ್ನು ಕತೆಯು ಚಿತ್ರಿಸಿದೆ. ಹೆಣ್ಣನ್ನು ಕೇವಲ ತನ್ನ ಅಡಿಯಾಳಾಗಿರಿಸಿಕೊಳ್ಳುವ ಹುನ್ನಾರವನ್ನು ಕತೆಯಲ್ಲಿ ಓಲೆಯ ಮೂಲಕ ಚಿತ್ರಿಸಲಾಗಿದೆ. ಮಹಿಳೆಯ ದೇಹದ ಮೇಲೆ ಅಧಿಪತ್ಯವನ್ನು ಸ್ಥಾಪಿಸಿರುವ ಪುರುಷ ಸಮಾಜವು ಇಂದು ದೇಹವಷ್ಟೇ ಅಲ್ಲದೇ ಅವಳ ಮೇಲಿನ ಉಡುಗೆ-ತೊಡುಗೆ, ಆಚಾರ ವಿಚಾರ, ಒಡವೆ ಇನ್ನಿತ್ಯಾದಿ ವಸ್ತುಗಳ ಮೇಲೂ ಅವಳಿಗೆ ಅಧಿಕಾರವಿಲ್ಲ ಎನ್ನುವ ಅಂಶವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಆದರೆ ಇದಕ್ಕೆ ಪ್ರತಿರೋಧವಾಗಿ ಕತೆಯಲ್ಲಿ ಶಿವಾನಿಗೆ ಓಲೆಯನ್ನು ತೋರುವುದರ ಮೂಲಕ ಪುರುಷವಾದಿ ಧೋರಣೆಯನ್ನು ಧಿಕ್ಕರಿಸಿ ತನ್ನ ಆಯ್ಕೆಯನ್ನು ಎತ್ತಿಹಿಡಿದಿರುವುದನ್ನು ಕತೆಯು ತಿಳಿಸುತ್ತದೆ.

ಎಚ್.ಎಸ್.ಅನುಪಮಾ ಅವರ 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ' ಎಂಬ ಕತೆಯಲ್ಲಿ ಬದುಕಿನ ಅಂತಿಮ ಹಂತವಾದ ಸಾವನ್ನು ಕುರಿತಂತೆ ಎರಡು ಮಹಿಳಾ ಪಾತ್ರಗಳು ತಳೆಯಬಹುದಾದ ನಿಲುವುಗಳನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತಾರೆ. ಒಂದು ಬಡ ಕುಟಂಬದ ಮಹಿಳೆ ತನ್ನ ಗಂಡ ಮತ್ತು ನಾಲ್ಕು ಮಕ್ಕಳನ್ನು ಹೊಂದಿದ್ದರೆ ಮತ್ತೊಂದೆಡೆ ಶ್ರೀಮಂತ ಕುಟುಂಬದ ಮಹಿಳೆ, ಅವಳ ಗಂಡ ಮತ್ತು ಮಗನ ಚಿತ್ರಣವನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಈ ಎರಡೂ ಕುಟುಂಬಗಳಲ್ಲಿಯ ಗಂಡಂದಿರೂ ಕಾಯಿಲೆಯಿಂದ ನರಳುತ್ತಿರುವವರು. ಮಹಿಳೆಯರಿಗೆ ತಮ್ಮದೇ ಆದ ನೋವು-ನಲಿವುಗಳಿದ್ದರೂ ಅವನ್ನು ಸಮಾಜದ ಮುಂದೆ ತೋರ್ಪಡಿಸಿಕೊಳ್ಳಲಾಗದಂತಹ ಪರಿಸ್ಥಿತಿ. ಏಕೆಂದರೆ ಇಂತಹ ಸಂದರ್ಭವನ್ನು ಸೃಷ್ಟಿಸಿರುವುದು ಅವರ ಗಂಡಂದಿರೇ. ಕತೆಯ ಕೊನೆಯಲ್ಲಿ ಈ ಎರಡೂ ಸ್ತ್ರೀ ಪಾತ್ರಗಳು ಸಹ ತಮ್ಮ ಗಂಡಂದಿರನ್ನು ಬದುಕಿಸಲು ಸಕ್ಕರೆ ನೀರನ್ನು ಕೊಟ್ಟು ಇನ್ನೂ ಸ್ವಲ್ಪ ದಿನಗಳ ಕಾಲ ಅವರನ್ನು ಬದುಕಿಸಬಹುದಾದರೂ ಅವರಿಗೆ ಸಕ್ಕರೆ ನೀರನ್ನು ಕೊಡದೆ ಇವರಿಂದಲೇ ನಮ್ಮ ಜೀವನದಲ್ಲಿ ನರಕ ಸೃಷ್ಟಿಯಾಗುತ್ತಿರುವುದು ಎಂಬ ನಿಲುವಿನಿಂದ ಅವರ ಜೀವನವನ್ನು ಮುಕ್ತಿಯತ್ತ ಕೊಂಡೊಯ್ಯುತ್ತಾರೆ ಎಂಬಲ್ಲಿಗೆ ಕತೆಯು ಮುಕ್ತಾಯವಾಗುತ್ತದೆ.

ಕತೆಗಾರ್ತಿಯ ಸೂಕ್ಷ್ಮ ಒಳನೋಟವನ್ನು ಈ ಹಂತದಲ್ಲಿ ಗುರುತಿಸಬಹುದು. ಅವರಿಗೆ ಸಕ್ಕರೆ ನೀರನ್ನು ಕೊಟ್ಟು ಬದುಕಿಸಲು ಸಾಧ್ಯವಿದ್ದರೂ 'ಮುಕ್ತಿ' ನೀಡುತ್ತಿದ್ದೇವೆ ಎಂಬುದರ ಮೂಲಕ ಇಲ್ಲಿನ ಪರಿಸರದಲ್ಲಿ ದಿನನಿತ್ಯ ನರಕವನ್ನು ತಾವು ಅನುಭವಿಸುತ್ತಿರುವುದಲ್ಲದೇ ತಮ್ಮ ಸುತ್ತಮುತ್ತಲಿನವರಿಗೂ ಈ ನರಕವನ್ನು ಉಂಟುಮಾಡುತ್ತಿರುವುದು ಅತ್ಯಂತ ಹೇಯಕರ ಎಂಬುದನ್ನು ಸರೋಜಮ್ಮ ಎಂಬ ಪಾತ್ರದಿಂದಲೇ ಹೇಳಿಸುತ್ತಾರೆ. ಕತೆಯು ಈ ಎರಡು ಸಾವನ್ನು 'ಮುಕ್ತಿ' ಎಂಬುದಾಗಿ ಗ್ರಹಿಸುವ ಮೂಲಕ ಉಳಿದವರ ಪಾಲಿಗೆ ಅದು ಬದುಕನ್ನು ಸುಂದರಗೊಳಿಸುವ ಪ್ರಯತ್ನವನ್ನು ಮಾಡುತ್ತಿದೆ. ಅಂದರೆ ಇಲ್ಲಿ ಸಾವು ಕೂಡ ಈ ಇಬ್ಬರೂ ಮಹಿಳೆಯರ ಬದುಕಿಗೆ ಸ್ಫೂರ್ತಿಯಾಗಿ ನಿಲ್ಲಬೇಕೆಂಬ ಆಶಯವನ್ನು ಕತೆಯಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣು ಕೇವಲ ಗಂಡಿನ ಅಡಿಯಾಳು, ಅವಳು ಸತಿಸಾವಿತ್ರಿಯರಂತೆ ಗಂಡನ ಸೇವೆಯಲ್ಲಿಯೇ ಬಾಳಬೇಕೆಂಬ ಪುರುಷವಾದಿ ಮನೋಧೋರಣೆಯನ್ನು ಮುರಿಯುವ ಮೂಲಕ ಅವಳಿಗೆ ತನ್ನದೇ ಆದ ಅಸ್ತಿತ್ವವೊಂದಿದೆ, ತನಗೂ ತನ್ನ ಬದುಕು ಮುಖ್ಯ ಎಂದು ತಮ್ಮ ಆಯ್ಕೆಯನ್ನು ಪ್ರತಿಪಾದಿಸುವ ಆಶಯವನ್ನು ಬಡ ಮಹಿಳೆಯು ಮಲ್ಲಿಗೆ ಹೂವನ್ನು ತಂದು ನೆಡುವ ಪ್ರಕ್ರಿಯೆಯ ಮೂಲಕ ಕಟ್ಟಿಕೊಡಲಾಗಿದೆ.

೬.೪ ಅಪರಾಧಿ ಪ್ರಜ್ಞೆ / ಮಾನಸಿಕ ಖಿನ್ನತೆ

ಮನುಷ್ಯ ತನ್ನ ತಪ್ಪನ್ನು ತಾನು ಅರಿತು ಅದನ್ನು ತಿದ್ದಿಕೊಳ್ಳುವ ಅವಕಾಶವಿಲ್ಲದಿದ್ದಾಗ ಅವನಲ್ಲಿ ಅಪರಾಧಿ ಪ್ರಜ್ಞೆ ಇಲ್ಲವೇ ಮಾನಸಿಕ ಖಿನ್ನತೆ ಕಾಡಲು ಶುರುಮಾಡುತ್ತದೆ. ಅಥವಾ ತಾನು ಮಾಡಿರುವ ಯಾವುದೇ ಒಂದು ತಪ್ಪನ್ನು ತಾನು ಸರಿಪಡಿಸಿಕೊಳ್ಳಲು ಜಾಗವಿದ್ದಾಗಲೂ ಕೂಡ ಆ ತಪ್ಪನ್ನು ಸರಿಪಡಿಸಿಕೊಳ್ಳದೇ ತನ್ನ ಮನಸ್ಸಿನಲ್ಲಿಯೇ ಮಾನಸಿಕವಾದ ಪ್ರಜ್ಞೆಯೊಂದು ಅವನಿಗೆ ತಾನು ಮಾಡಿದ ತಪ್ಪನ್ನು ಮತ್ತೆ ಮತ್ತೆ ನೆನಪಿಸುವ ಪ್ರಯತ್ನ ಮಾಡುತ್ತದೆ. ಇಂತಹದ್ದೇ ಅನೇಕ ಪ್ರಸಂಗಗಳನ್ನು ಜಾಗತೀಕರಣದ ಸಂದರ್ಭದ ಸಣ್ಣಕತೆಗಳು ಹಿಡಿದಿಡಲು ಪ್ರಯತ್ನಿಸಿವೆ. ತನ್ನ ಅಜಾಗರೂಕತೆಯಿಂದ, ನಿರ್ಲಕ್ಷತೆಯಿಂದ ಇಲ್ಲವೇ ಅನಿವಾರ್ಯ ಕಾರಣಗಳಿಂದ ಆಗಿರಬಹುದಾದ; ತನ್ನ ಪ್ರಜ್ಞಾವಸ್ಥೆಯ ಸ್ಥಿತಿಯಿಂದಲೇ ಆಗುವ ಸಣ್ಣ ಇಲ್ಲವೇ ದೊಡ್ಡ ಘಟನೆಗಳನ್ನು ಅನಾಹುತಕ್ಕೆ ಕಾರಣವಾಗಬಹುದು.

ಇಂತಹ ಅನೇಕ ಸಂದರ್ಭಗಳಲ್ಲಿ ಮನುಷ್ಯನಿಗೆ ತನ್ನ ಸುಪ್ತಪ್ರಜ್ಞೆ ಅವನು ಮಾಡಿರುವ ತಪ್ಪಿಗಾಗಿ ಇಲ್ಲವೇ ನಿರ್ಲಕ್ಷಕ್ಕಾಗಿ ಅಪರಾಧಿ ಮನೋಭಾವನೆಯನ್ನು ಅವನ ಬಗ್ಗೆ

ಅವನಲ್ಲಿಯೇ ಮೂಡುವ ಅನೇಕ ಪ್ರಸಂಗಗಳನ್ನು ಕಾಣಬಹುದು. ಕೇವಲ ತಪ್ಪು ಎಂದೇ ಅಲ್ಲ; ಇಲ್ಲಿ ಮನುಷ್ಯ ತಾನು ಮಾನವೀಯ ಪ್ರಜ್ಞೆಯನ್ನು ಇಟ್ಟುಕೊಂಡು ಇನ್ನೊಬ್ಬರಿಗೆ ಸಹಾಯ ಮಾಡುವ ಸಂದರ್ಭವಿದ್ದರೂ ಅದನ್ನು ಮಾಡದೇ ವೈಯಕ್ತಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಇಂತಹವರಿಗೆ ಕಾಲಾನಂತರದಲ್ಲಿ ತಮ್ಮ ತಪ್ಪಿನ ಅರಿವಾಗಿ ಕಾಡುವ ಸಂದರ್ಭವನ್ನು ಇಲ್ಲಿ ಅಪರಾಧಿ ಪ್ರಜ್ಞೆಯಾಗಿ ಭಾವಿಸಿ ಅದು ಮಾನಸಿಕ ಖಿನ್ನತೆಗೆ ಕಾರಣವಾಗಿರುವುದನ್ನು ಅನೇಕ ಕತೆಗಳಲ್ಲಿ ಹೀಗೆ ಕಾಣಬಹುದು.

ಅಮರೇಶ ನುಗಡೋಣಿ ಅವರ ಪಕ್ವಕಲ್ಲದೇ ಪರಿಣಾಮ ಕಾಣಿಸದು ಕತೆಯಲ್ಲಿ ಬರುವ ಶರಭನಗೌಡನು ಜಮೀನ್ದಾರನಾಗಿದ್ದು, ಇಡೀ ವ್ಯವಸಾಯದ ಭೂಮಿಯನ್ನು ತಾನು ಕೂಲಿಕಾರ್ಮಿಕರಾದ ರೈತರಿಂದ ನೆಡೆಸಿಕೊಂಡು ಊಳಿಗಮಾನ್ಯ ವ್ಯವಸ್ಥೆಯನ್ನು ನಡೆಸುತ್ತಿದ್ದನು. ಇವನಿಗೆ ತನ್ನವರಾದ ಹೆಂಡತಿ, ಮಕ್ಕಳೊಂದಿಗೆ ಇರದೇ ಅವರನ್ನು ದೂರದ ಪಟ್ಟಣಗಳಲ್ಲಿ ಶಿಕ್ಷಣದ ಕಾರಣಕ್ಕಾಗಿ, ನಂತರ ಅವರ ಕೆಲಸದ ಕಾರಣಕ್ಕಾಗಿ ಇವನೊಬ್ಬನೇ ಹಳ್ಳಿಯಲ್ಲಿ ಏಕಾಂಗಿಯಾಗಿ ಬದುಕುತ್ತಿರುತ್ತಾನೆ. ಅಲ್ಲದೇ ಅವನೇ ಹೇಳಿಕೊಳ್ಳುವಂತೆ ಹಳ್ಳಿಯನ್ನು, ಹಳ್ಳಿಯ ಪರಿಸರವನ್ನು, ತನ್ನ ವ್ಯವಸಾಯ ಜೀವನವನ್ನು, ಎತ್ತುಗಳನ್ನು, ಬೇಸಾಯದ ಪರಿಕರಗಳನ್ನು ಬಿಟ್ಟು ಬದುಕಲಾಗದ ಮಾನಸಿಕ ಹಿಂಸೆಯನ್ನು ಅವನ ಮಾತುಗಳಲ್ಲಿ ಹೀಗೆ ನೋಡಬಹುದು.

ಆಧುನಿಕವಾದ ತಂತ್ರಜ್ಞಾನದಿಂದ ಆದ ಬದಲಾವಣೆಯು ಅವನನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡಿತು. ಇಡೀ ಕುಟುಂಬವು ಗೌಡನನ್ನು ಏಕಾಂಗಿಯಾಗಿ ಬಿಟ್ಟು ಹೋದಾಗಲೂ ಕಾಡದ ಏಕಾಂಗಿ ಭಾವನೆ ಅವನನ್ನು ಆಧುನಿಕತೆಯು ತಂದ ತಂತ್ರಜ್ಞಾನದ ಪರಿಣಾಮವಾಗಿ ಬಂದ ಉಪಕರಣಗಳಿಂದ ಅವನಿಗೆ ಏಕಾಂಗಿತನ ಕಾಡಿತು. ಏಕೆಂದರೆ ಎಲ್ಲರೊಂದಿಗೂ ತಮಾಷೆ ಮಾಡುತ್ತಾ, ನಗುತ್ತಾ ಮಾತನಾಡುತ್ತಾ ಕಾಲ ಕಳೆಯುತ್ತಿದ್ದ ಗೌಡನಿಗೆ ಈಗ ಯಂತ್ರಗಳಿಂದ ಆಳುಗಳು ಕಡಿಮೆಯಾದದ್ದು ಅವನನ್ನು ಕಾಡಲು ಶುರುವಾಯಿತು.

ಇದು ಒಂದು ನೆಲೆಯಾದರೆ ಎರಡನೆಯದು ಊಳಿಗಮಾನ್ಯ ಪದ್ಧತಿಯ ಇಂತಹ ಜಮೀನುದಾರಿಕೆಯನ್ನು ಒಪ್ಪದ ನಕ್ಸಲ್ ಚಳುವಳಿಗಾರರದ್ದು. ಅವರು ಗೌಡನನ್ನು ಕೊಲ್ಲುತ್ತಾರೆ ಎಂಬ ಭಯದಿಂದಲೇ ಗೌಡನನ್ನು ಊರು ಬಿಟ್ಟು ಬರುವಂತೆ ಎಷ್ಟೇ ಮಕ್ಕಳು ಗೋಗರೆದರೂ ಊರನ್ನು ಬಿಟ್ಟು ಹೋಗದಂತ ಅವಿನಾಭಾವ ಸಂಬಂಧವನ್ನು ಗೌಡ ಹಳ್ಳಿಯೊಂದಿಗೆ ಜನರೊಂದಿಗೆ ಇಟ್ಟುಕೊಂಡಿದ್ದಾನೆ. ಅಲ್ಲದೇ ಜಮೀನನ್ನು ಇಷ್ಟು ವರ್ಷ

ಕೆಲಸ ಮಾಡಿದ ಆಳುಗಳಿಗೆ ಹಂಚುವಂತೆ ಸಲಹೆ ನೀಡಿದಾಗ ಗೌಡನಿಗೆ ತನ್ನ ಇಂತಹ ವರ್ತನೆಯಿಂದ ಮರುಗಿ ಅವನು ಭೂಮಿಯನ್ನು ಹಂಚಲು ಒಪ್ಪುತ್ತಾನೆ. ಆದರೆ ವಡ್ಡರಮಲ್ಲ ಇದನ್ನು ಬೇರೆಡೆಗೆ ತಿರುಗಿಸಿ ಹೇಳಿದಾಗ ಗೌಡನಿಗೆ ಮಾನಸಿಕವಾಗಿ ಬಳಲುತ್ತಾನೆ. ತಾನು ಭೂಮಿಯನ್ನು ಕೊಡುತ್ತೇನೆಂದರೂ ಒಪ್ಪುತ್ತಿಲ್ಲವಲ್ಲ ಎಂದು ಅವನಿಗೆ ಚಿಂತೆಗೀಡಾಗುತ್ತಾನೆ. ಇಡೀ ಕತೆಯಲ್ಲಿ ಶರಭನಗೌಡನು ಖಿನ್ನತೆಯನ್ನು ಹಚ್ಚಿಕೊಂಡಿರುವುದನ್ನು ಚಿತ್ರಿಸಲಾಗಿದೆ.

ಎಚ್.ನಾಗವೇಣಿ ಅವರ 'ಮೀಯುವ ಆಟ' ಕತೆಯಲ್ಲಿ ಸಹಾಯ ಮಾಡಬೇಕೆಂಬ ಹಂಬಲವಿದ್ದರೂ ಅದಕ್ಕೆ ನೈಸರ್ಗಿಕವಾದ ಅಡೆತಡೆಗಳು ಹೇಗೆ ಮನುಷ್ಯನನ್ನು ಸ್ವಾರ್ಥಿಯನ್ನಾಗಿಸುತ್ತದೆ ಎನ್ನುವುದನ್ನು ಕತೆಯಲ್ಲಿ ಚಿತ್ರಿಸಲಾಗಿದೆ. ಕತೆಯ ಮುಖ್ಯ ಪಾತ್ರವಾದ ಖಾದ್ರಿಬ್ಯಾರಿಗೆ 'ವಾತ' ರೋಗವಿದ್ದ ಕಾರಣ ಅವನಿಗೆ ಬಿಸಿನೀರಿನ ಅವಶ್ಯಕತೆಯಿರುತ್ತದೆ. ಆದರೆ ಇವನ ಹೆಂಡತಿ ಮೈಮೂನಮ್ಮ ಸತ್ತ ನಂತರ ಸೊಸೆಯಾದ ನಫೀಸಮ್ಮ ಖಾದ್ರಿಬ್ಯಾರಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಇದರಿಂದ ಖಾದ್ರಿಬ್ಯಾರಿಯು ಊರಿನಲ್ಲಿರುವ ಜನರಲ್ಲಿ ಜಾತಿಧರ್ಮದ ಭೇದವಿಲ್ಲದೇ ತನ್ನ ರೋಗದ ಲಕ್ಷಣಗಳನ್ನು ಅದಕ್ಕೆ ಇರುವ ಪರಿಹಾರವನ್ನು ಹೇಳಿಕೊಳ್ಳುತ್ತಿದ್ದನು.

ಸೊಸೆಯಾದ ನಫೀಸಮ್ಮನಿಗೆ ಮೊಮ್ಮಕ್ಕಳ ಕೈಲಿ ಅಜ್ಜನಿಗೆ ತಿಂಡಿ ಬೇಡ ಎಂದು ಹೇಳಿಸಿ ಅದರ ಬದಲಿಗೆ ಮೀಯಲು ಒಂದಿಷ್ಟು ಬಿಸಿನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿದನು. ಇದಕ್ಕೆ ಸೊಸೆಯು "ಅಡುಗೆ ಮನೆಗೆ ಉರಿ ಹಚ್ಚುದಕ್ಕೇ ಮನೆಯ ರೀಪು-ಪಕ್ಕಾಸುಗಳನ್ನು ಕೀಳಬೇಕೆಂದಿದ್ದೇನೆ. ಇನ್ನು ಅವರನ್ನು ಮೀಯಿಸಲು ಒಂದು ಕಾಡು ಬೆಳೆಸಿ ನಂತರ ಮೀಯಿಸಿ ಬಿಡುವ.... ಆಗದಾ?"[೧] ಎಂದು ಪ್ರಶ್ನಿಸುತ್ತಾಳೆ. ಇದೇ ಸಮಯಕ್ಕೆ ವೆಂಕಪ್ಪಶೆಟ್ಟರ ಮಗಳಾದ ಸುಮತಿಯ ಬಾಣಂತನಕ್ಕೆ ಬಿಸಿನೀರನ್ನು ಕಾಯಿಸಲು ಆಳುಗಳನ್ನು ವೆಂಕಪ್ಪಶೆಟ್ಟರು ಹುಡುಕುತ್ತಿದ್ದಾಗ ಅವರಿಗೆ ಖಾದ್ರಿಬ್ಯಾರಿಯವರ ನೆನಪಾಗಿ ಅವರಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಂಡು ಅವರೂ ಮೀಯಲು ಅನುಕೂಲವಾಗುತ್ತದೆ ಎಂದು ವಿನಂತಿಸಿಕೊಂಡರು. ಇದಕ್ಕೆ ಖಾದ್ರಿಬ್ಯಾರಿಯು ಒಪ್ಪಿಕೊಂಡು ಬಿಸಿನೀರನ್ನು ಕಾಯಿಸಲು ಶುರುಮಾಡಿದರು.

ಇದು ಕತೆಯ ಒಂದು ಆಯಾಮವಾದರೆ ಇನ್ನೊಂದು ಆಯಾಮದಲ್ಲಿ ಕುಟುಂಬದಿಂದ ನಿರ್ಲಕ್ಷಿಸಲ್ಪಟ್ಟ ಖಾದ್ರಿಬ್ಯಾರಿಯು ಊರಿನಲ್ಲಿ ಒಳ್ಳೆಯ ಮರ್ಯಾದೆ, ಗೌರವವನ್ನು ಹೊಂದಿದ್ದರು. ಆದರೆ ಅವರಿಗೆ ವೆಂಕಪ್ಪಶೆಟ್ಟರ ಮನೆಯಲ್ಲಿ ನೀರನ್ನು ಕಾಯಿಸಲು

ಬಂದಾಗ ಅವನಿಗೆ ಆಗುವ ಅಪಮಾನ, ಅವಮಾನಗಳನ್ನು ಕತೆಯಲ್ಲಿ ತಿಳಿಸಲಾಗಿದೆ. ಉಮ್ಮಕ್ಕ ಶೆಡ್ತಿಯು ಬಿಸಿನೀರನ್ನು ಕಾಯಿಸಲು ಬಂದಾಗ "ಇಂಥಾ ಪೋಕಾಲದ ಮಳೆಯಲ್ಲಿ... ಇಷ್ಟೊಂದು ಸೌದೆ-ತರಗಲೆಯ ಸಮಸ್ಯೆ ಇರುವಾಗ, ನಮ್ಮ ಮಗು-ಬಾಣಂತಿಗೆ ನೀರು ಕಾಯಿಸುದೇ ಕಷ್ಟ. ಬೇಕಾದರೆ ಒಂದ್ನಾಕು ಕಾಸು ಜಾಸ್ತಿಯೇ ಹೋಗಲಿ ಒಂದು ಆಳನ್ನು ಇಟ್ಟು ಬಾಣಂತಿಗೆ ನೀರು ಕಾಯಿಸುವ ವ್ಯವಸ್ಥೆ ಮಾಡಿದ್ರೆ ಆಗ್ತಿರ್ಲಿಲ್ವಾ...? ದುಡ್ಡು ಕೊಟ್ರೂ ಒಣ ಸೌದೆ ಸಿಗದ ಈ ಥಂಡಿ ಕಾಲದಲ್ಲಿ... ಇವ್ರು ಹೋಗಿ ಹೋಗಿ... ಆ ಕಣ್ಣಲ್ಲಿ ಮಾತ್ರವೇ ಜೀವ ಇಟ್ಟುಕೊಂಡಿರುವ, ಬಿಸಿನೀರಿಗೆ ಜೀವ ಬಿಡುವ ಆ ಮುದಿಸ್ಯಾಬರಿಗೆ ಹೇಳುದಾ...? ಈ ಸ್ಯಾಬದ್ರು ಬಯಸುದೇವ! ಕಾಸೂ ಅಲ್ಲ ಕಾಣಿಯೂ ಅಲ್ಲ.... ಮೀಯುವುದಕ್ಕೆ ಬಿಸಿ ನೀರು!"[೧೨] ಎಂದಳು.

ಅಂದರೆ ಇಡೀ ಕತೆಯಲ್ಲಿ ಉಮ್ಮಕ್ಕಶೆಡ್ತಿಗೆ ಖಾದ್ರಿಬ್ಯಾರಿಯವರ ಮೇಲೆ ಕೆಟ್ಟ ಅಭಿಪ್ರಾಯವಿಲ್ಲ. ಉಮ್ಮಕ್ಕಶೆಡ್ತಿಯೂ ಖಾದ್ರಿಬ್ಯಾರಿಯವರಿಗೆ ನೋವನ್ನುಂಟು ಮಾಡಲು ಈ ರೀತಿಯಾದಂತಹ ಮಾತನ್ನು ಆಡುತ್ತಿರಲಿಲ್ಲ. ಮಳೆಗಾಲವಾದ್ದರಿಂದ ಸೌದೆಯು ಸಿಗುವುದಿಲ್ಲ ಎನ್ನುವ ಆತಂಕದಲ್ಲಿ ಶೆಡ್ತಿಯು ಇಂತಹ ಮಾತುಗಳನ್ನು ಆಡುತ್ತಿದ್ದಳು. ಇಲ್ಲಿ ಪ್ರಕೃತಿಯ ಕೆಲವು ನೈಜ ಸಂಗತಿಗಳು ಮನುಷ್ಯರನ್ನು ಹೇಗೆ ಸಂಕಷ್ಟಕ್ಕೆ ಸಿಲುಕಿಸಿ ಅವರನ್ನು ಸಹಾಯ ಮಾಡಲಾಗದಂತೆ ಮಾಡುತ್ತದೆ ಎನ್ನುವುದನ್ನು ಕತೆಯಲ್ಲಿ ತಿಳಿಸಲಾಗಿದೆ. ಅಲ್ಲದೇ ಉಮ್ಮಕ್ಕ "ಅಲ್ಲಾ ಸ್ಯಾಬೆರೆ, ನಿಮ್ಗೆ ಎಷ್ಟೂಂತ ಹೇಳುದು ಮಾರಾಯ್ರೆ! ಇದು ಮಗು-ಬಾಣಂತಿ ಮೀಯುವ ನೀರಾ ಅಥವಾ ಹೆಣ ಮೀಯಿಸುವ ನೀರಾ...?"[೧೩] ಎನ್ನುವ ಮಾತುಗಳು ಖಾದ್ರಿಬ್ಯಾರಿಯ ಮನಸ್ಸಿನ ಮೇಲೆ ಪರಿಣಾಮವನ್ನು ಬೀರಿತು.

ಖಾದ್ರಿಬ್ಯಾರಿಯು ಮೊಮ್ಮಗಳಾದ ಜೋಹರಾಳ ತೊಡೆಯ ಮೇಲೆ ಸಾವನ್ನಪ್ಪಿದ ವಿಷಯವನ್ನು ತಿಳಿದ ಜನರು "ಇದು ಎಂತಹ ಸಾವು ಹೂವೆತ್ತಿದಷ್ಟು ಮೌನ, ಹಗುರ! ಲಕ್ಷದಲ್ಲೊಬ್ಬರಿಗೆ ಇಂಥ ಸಾವು ಮಾರಾಯ್ರೆ...! ಒಟ್ಟಿನಲ್ಲಿ ಇವ್ರು ಪುಣ್ಯಾತ್ಮರಪ್ಪ ನಮಗೂ ಹೀಗೆಯೇ ಸದ್ದಿಲ್ಲದ ಸಾವು ಬರಲಿ"[೧೪] ಎಂದುಕೊಂಡರು. ಇವರ ಹೆಣವನ್ನು ತೊಳೆಯಲು ಕಟ್ಟಿಗೆಗಳು ನೀರಲ್ಲಿ ತೊಯ್ದು ಒಲೆಗೆ ಬೆಂಕಿ ಹತ್ತದಿದ್ದಾಗ ವೆಂಕಪ್ಪ ಶೆಟ್ಟರು ಮನೆಯಿಂದ ಕಟ್ಟಿಗೆಯನ್ನು ತಂದು ನೀರನ್ನು ಕಾಯಿಸಲು ಶುರುಮಾಡಿದರು. ಉಮ್ಮಕ್ಕ ಶೆಡ್ತಿಯು ಈ ನಡುವೆ ಅಲ್ಲಿಗೆ ಬಂದು ತಾನು ಆಡಿದ ಮಾತಿನಿಂದ ಅವರಿಗೆ ನೋವುಂಟು ಮಾಡಿರಬಹುದು ಎನ್ನುವ ಭಾವನೆಯಿಂದಲೇ ಮುಂಜಾನೆ ತನ್ನ ಗಂಡನು ಹೇಳಿದ್ದ

ಮಾತನ್ನು ನೆನೆದಳು. "ಆನೆ ಹೋದ ದಾರಿಯಲ್ಲಿ ಆಡು ಹೋದೀತು... ಮಾರಾಯ್ತಿ, ಆದರೆ ಆಡು ಹೋದ ದಾರಿಯಲ್ಲಿ ಆನೆಯೆಂದೂ ಸಾಗದು."[೧೬] ಎನ್ನುವ ಮಾತು ಅವಳಲ್ಲಿ ಮೂಡಿತು.

ಮಹಾಂತೇಶ್ ನವಲಕಲ್ ಅವರ 'ಡಿಪ್ರೆಶನ್' ಕತೆಯಲ್ಲಿ ಭೂಮಿಕಾ ಪಾತ್ರವೂ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದಾಳೆ. ಅವಳ ಭೂತದಿಂದ ಬಿಡಿಸಿಕೊಳ್ಳದೇ ವರ್ತಮಾನದಲ್ಲಿ ಬದುಕುತ್ತಿರುವ ಸ್ಥಿತಿಯೇ ಮಾನಸಿಕ ಖಿನ್ನತೆಯಾಗಿ ಪರಿಣಮಿಸಿದೆ. ಅವಳ ಬದುಕಿನಲ್ಲಿ ನಡೆದ ಘಟನೆಯೊಂದು ಅವಳನ್ನು ಇಲ್ಲಿಯವರೆಗೂ ಮಾನಸಿಕವಾಗಿ ಒಂದು ವರ್ಷದಿಂದ ಬಳಲುವಂತೆ ಮಾಡಿದೆ. ಅವಳ ಮಾನಸಿಕ ಸ್ಥಿತಿ ಹೇಗಿದೆಯೆಂದರೆ ಯಾರನ್ನೂ ನಂಬದ, ಯಾರ ಮಾತನ್ನು ಕೇಳದ ಸ್ಥಿತಿಯಲ್ಲಿದ್ದಾಳೆ. ಭೂಮಿಕಾಗೆ ಮನೆಯಲ್ಲಿನ ಪ್ರತಿ ಘಟನೆ, ಚಟುವಟಿಕೆಗಳು ಆದಂತೆ ಕಂಡಿತು. "ನೆರಳು ಬೆಳಕಿನಾಟ, ಬೆಕ್ಕು ಕಿರುಚಾಟ, ಕ್ಷಣಕ್ಷಣಕ್ಕೂ ಬಾಗಿಲು ಬಾರಿಸಿದ ಶಬ್ಧ."[೧೭] ಈ ಎಲ್ಲಾ ಘಟನೆಗಳು ಸಹ ಅವಳು "ತಾನು ಓದಿದ ವಿಜ್ಞಾನ ಇದೆಲ್ಲವನ್ನೂ ಧಿಕ್ಕರಿಸಿದರೂ ಮನಸ್ಸು ಇನ್ನೂ ಇದೆಲ್ಲವನ್ನೂ ಪುರಸ್ಕರಿಸುತ್ತದೆ. ಕ್ಷಣಕ್ಷಣ ಅವನ ನೆನಪು ಈ ಶಬ್ಧದೊಂದಿಗೆ ನುಸುಳಿ ಮಾಯವಾಯಿತು."[೧೮]

ಏಕೆಂದರೆ ಇದೇ ಸೆಪ್ಟೆಂಬರ್ ೭ಕ್ಕೆ ಹದಿನೆಂಟು ವರ್ಷವಾಯಿತಲ್ಲ ಎಂದು ನೆನೆದಳು. ಮೂರು ದಿನದಿಂದ ವಿಚಿತ್ರ ಡಿಪ್ರೆಶನ್ ಒಳಗಾಗಿದ್ದ ಭೂಮಿಕಾ ಸೆಪ್ಟೆಂಬರ್ ೭ಕ್ಕೆ ಆ ದಿನಕ್ಕಾಗಿ ಮಾನಸಿಕವಾಗಿ ಸನ್ನದ್ಧಳಾಗುತ್ತಿದ್ದಾಳೆ. ಆ ಸನ್ನದ್ಧತೆಯೇ ಈ ಖಿನ್ನತೆಯಾ? ಎಂಬ ಪ್ರಶ್ನೆ ಅವಳನ್ನು ಮೂಡಿಸಿತು. ಅವಳ ಪ್ರಜ್ಞೆ ಹೇಗಿದೆಯೆಂದರೆ ಟಿ.ವಿ.ಚಾನೆಲ್‌ನಲ್ಲಿ ದೇವರು ರಾಕ್ಷಸನನ್ನು ಕೊಲ್ಲುವ ಮೂಲಕ ಭೂಮಂಡಲಕ್ಕೆ ಶಾಂತಿಯನ್ನು ಕೊಡುವವನಂತೆ ಕೈಮೇಲೆತ್ತಿದ ಚಿತ್ರ ಅನೇಕ ಪ್ರಶ್ನೆಗಳು ಅವಳ ತಲೆಯಲ್ಲಿ ಸುತ್ತಿಕೊಂಡವು. "ನನ್ನ ಸುತ್ತ ಮಾಯೆ ಇದೆಯೋ ಅಥವಾ ನಾನು ಮಾಯೆ ಒಳಗೆ ಇದ್ದೇನೋ ಎಂದು ತಿಳಿಯದಾಯಿತು"[೧೯] ಎಂದು ಭೂಮಿಕಾ ಹೇಳಿಕೊಂಡಳು.

ಅಲ್ಲದೇ ಭೂಮಿಕಾ ಕೈ ಕೆಳಗೆ ಕೆಲಸ ಮಾಡುವ ಸಬಾರ್ಡಿನೇಟ್ ಆಗಿದ್ದ. ಅವನು ತನ್ನ ಬಾಸ್ ಅವಳನ್ನು ಭುಜದ ಮೇಲೊರಗಿ ತನ್ನ ಎಡಗೈಯನ್ನು ಕೆಳಗೆ ತಂದ. ಹದಿನೇಳು ವರ್ಷಗಳ ಕಠೋರ ತಪಸ್ಸು ಈ ಮಹಾದೇವ ಮುಗಿಯುವ ಹಂತಕ್ಕೆ ಬಂದಿತ್ತು. "ಥೂ.... ನೀನು ಏನು ಅಂದುಕೊಂಡು ಇಲ್ಲಿಗೆ ಬಂದೆ. ಏನು

ಮಾಡುತ್ತೀಯಾ? ಎಲ್ಲಾ ಪಾಪಗಳನ್ನು ಈ ಸಮಾಜಸೇವೆ ತೊಳೆಯುತ್ತದೆ ಎಂದುಕೊಂಡು ಇಲ್ಲಿಗೆ ಬಂದೆ. ಆದರೆ ಮತ್ತೆ ಮೂರನೇ ಬಲಿಗಾಗಿ ನಿನ್ನಲ್ಲಿ ಜಾಲ ಸಿದ್ಧವಾಗಿದೆಯಲ್ಲ."[೨೦] ಎಂದು ಭೂಮಿಕಾ ಹೇಳಿಕೊಳ್ಳುತ್ತಾಳೆ.

ಮುಂದುವರೆದು "ಹೌದು ಅವನು ನನ್ನ ತಪಸ್ಸಿಗೆ ಭಂಗ ತರುವಂತವನು, ಯಕಶ್ಚಿತ್ ಸಬಾರ್ಡಿನೇಟ್. ಆ ಸಬಾರ್ಡಿನೇಟ್‌ಗೆ ಎಷ್ಟೆಲ್ಲಾ ಸ್ವಾತಂತ್ರ್ಯ? ಥೂ ಅಂದೇ ಅವನು ಅಂಡು ಮುಟ್ಟಲು ಬಂದಾಗ ಒದ್ದು ಕಾರಿನಿಂದ ಹೊರಗೆ ಹಾಕಬೇಕಿತ್ತು. ಭುಜಗಳ ಜುಗಲ್‌ಬಂದಿ ಮಾಡಲು ಬಂದಾಗ ಎಡಕಿವಿಯನ್ನು ಹಿಡಿದು ಎಳೆದು ಹೊರಗೆ ಹಾಕಬೇಕಿತ್ತು. ನಾನು ನಿನ್ನ ಹಿರಿಯ ಅಕ್ಕ ಅಥವಾ ತಾಯಿ ಅನ್ನಬೇಕಾಗಿತ್ತು. ನಾನು ಅನ್ನಲಿಲ್ಲವಲ್ಲ? ಯಾಕೆಂದರೆ ನನ್ನ ಸುಳ್ಳುಗಳು ನನ್ನ ಆಳದಲ್ಲಿರುವ ವಂಚನೆ, ಆತ್ಮಸಾಕ್ಷಿಗಳು ಎಲ್ಲವೂ ನನಗೆ ಗೊತ್ತಿಲ್ಲದೇ ನನ್ನನ್ನು ಆಳುತ್ತಿರಬಹುದೇ? ಉಪದೇಶಕ್ಕಾಗಿ ನನ್ನೊಳಗಿನ ಒಬ್ಬನನ್ನು ಉಪದೇಶ ಧಿಕ್ಕರಿಸಲಿಕ್ಕಾಗಿ ಇನ್ನೊಂದು ಮನಸ್ಸನ್ನು ನಾನೇ ಸೃಷ್ಟಿಸಿಕೊಂಡಿರುವೆನೆ? ಅಥವಾ ಇವೆಲ್ಲವೂ ಕೃತಕ ಕರ್ಮಶಾಲೆಯಲ್ಲಿ ಅರಳಿರುವ ಉಪಭೋಗಗಳೇ?"[೨೧] ಎಂದು ತನ್ನಲ್ಲಿಯೇ ಭೂಮಿಕಾ ಪ್ರಶ್ನೆಯನ್ನು ಕೇಳಿಕೊಂಡಳು.

ಮನೆಗೆ ಬಂದ ಆಫೀಸಿನಲ್ಲಿ ಕೆಲಸ ಮಾಡುವವರು ಭೂಮಿಕಾಳ ಸಾಧನೆ ಎಲ್ಲವನ್ನು ನೋಡಿ ನೀವು ಆತ್ಮಕಥೆಯೊಂದನ್ನು ಬರೆಯಿಸಬೇಕು ಎನ್ನುತ್ತಾರೆ. ಆಗ ಭೂಮಿಕಾ "ಹದಿನೇಳು ವರ್ಷದಾಚೆಗಿನ ಇತಿಹಾಸವನ್ನು ಬರೆಯದೇ ಮುಂದಿನ ಇತಿಹಾಸ ಬರೆಯಲು ನನಗಾವ ಹಕ್ಕಿದೆ. ಮನುಷ್ಯನ ಇತಿಹಾಸವೆಲ್ಲವೂ ಈ ಧಾಟಿಯಲ್ಲಿರಬಹುದು. ಅಂದರೆ ಸುಳ್ಳು ಜಗತ್ತಿನಲ್ಲಿ ನಾನು ಅದೇ ಹಾರಾಡುತ್ತಿರುವ ಗುಂಗಾಡಿ ಇರಬಹುದು ಎಂದುಕೊಂಡು ಹಾಸಿಗೆಗೆ ಕಾಲುಚಾಚಿ ಕಾಲಿನ ಪಾದವನ್ನು ಮೇಲೆ ಕೆಳಗೆ ಮಾಡಿದಳು."[೨೨]

ಕೊನೆಗೆ ಆತ್ಮಕತೆಯನ್ನು ಬರೆಯಲು ಬಂದ ಕವಿಚಕ್ರವರ್ತಿಯ ಕತೆಯು ಭೂಮಿಕಾಳನ್ನು ತನ್ನದೇ ನೈಜ ಕತೆಯೆಂಬಂತೆ ಚಿತ್ರಿಸಿರುವುದನ್ನು ಕಂಡು ಡಿಪ್ರೆಶನ್‌ನಿಂದ ಹೊರಬಂದಳು. ಅಂದರೆ ಕವಿ ಚಕ್ರವರ್ತಿಯ ಕತೆಯಲ್ಲಿ ಗಂಡನೊಬ್ಬ ಊರಿಗೆ ಹೋಗುತ್ತೇನೆಂದು ಹೋದ. ಅವನು ಮತ್ತೆ ಮನೆಗೆ ತಿರುಗಿ ಬಂದಾಗ ಅವಳು ಗೆಳೆಯನ ಜೊತೆಗೆ ಸಿಕ್ಕಿಬಿದ್ದಳು. ನಂತರ ಗಂಡನಿಗೆ ಪ್ಯಾರಲೈಸಿಸ್ ಆಗಿ ಸ್ವಾಧೀನ ಕಳೆದುಕೊಂಡಾಗ ಗೆಳೆಯ ಮನೆಗೆ ಬಂದು ಗಂಡನ ಎದುರಿಗೆ 'ಕೇಳಿಗಾಗಿ' ಅಣಿಗೊಳಿಸಿದ. ಅವಳ ಪ್ರತಿರೋಧದ ನಡುವೆಯೂ ಇದೆಲ್ಲಾ ನಡೆದುಹೋಯಿತು. ಗಂಡ ಒಂದು ದಿನ ಸತ್ತ ನಂತರ ಹಿಮಾಲಯಕ್ಕೆ ಹೋಗಿ ಯೋಗ ಮಾಡಿ ಮತ್ತೆ ಬಂದಳು. ಈ ಕತೆಯನ್ನು

ಓದಿದ ಭೂಮಿಕಾಗೆ ಡಿಪ್ರೆಶನ್ ಪೂರ್ತಿಯಾಗಿ ಇಳಿದಿತ್ತು. "ತನ್ನ ಪೂರ್ವಾಶ್ರಮ ತಿಳಿದೇ ಇದನ್ನು ಬರೆದಿರಬಹುದು ಅನ್ನಿಸುವಷ್ಟು ಸಾಮ್ಯತೆ ಇತ್ತು. ಆದರೂ ಈ ಕವಿ ಚಕ್ರವರ್ತಿ ತನ್ನ ಬಿಡುಗಡೆಯ ದಾರಿಗಾಗಿ ಬಂದುದಕ್ಕೆ ಕೃತಜ್ಞತೆ ಸಲ್ಲಿಸಿದಳು. ಇದನ್ನು ಹತ್ತು ಕಾಫಿ ಜೆರಾಕ್ಸ್ ಮಾಡಿಸಲು ಪಕ್ಕದ ಶ್ರೀನಿವಾಸನಿಗೆ ಹೇಳಿದಳು."[೨೩]

ಒಟ್ಟಿನಲ್ಲಿ ಇಡೀ ಕತೆಯು ಭೂಮಿಕಾಳ ಭೂತದ ಘಟನೆಯು ಅವಳನ್ನು ವರ್ತಮಾನದ ಅವಳ ಸ್ಥಾನಮಾನವನ್ನು ನಿರ್ಧರಿಸುತ್ತಿರುವ ಸಮಾಜದ ನಿರ್ಣಯವನ್ನು ಅವಳೇ ಪ್ರಶ್ನಿಸಿಕೊಂಡು ಮಾನಸಿಕವಾಗಿ ಖಿನ್ನಳಾಗುತ್ತಿದ್ದಾಳೆ. ಇಡೀ ಅವಳ ವ್ಯಕ್ತಿತ್ವದ ಹಿಂದೆ ಅವಳ ಗಂಡನಿಗೆ ಮಾಡಿರಬಹುದಾದ ಮೋಸವನ್ನು ನೆನೆದು ಮಾನಸಿಕವಾಗಿ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ. ಇಡೀ ಕತೆಯಲ್ಲಿ ಭೂಮಿಕಾ ಅನುಭವಿಸುತ್ತಿರುವ ಮಾನಸಿಕ ಖಿನ್ನತೆ ಅವಳಲ್ಲಿನ ಅಪರಾಧಿ ಪ್ರಜ್ಞೆ ಅವಳ ಈ ವರ್ತಮಾನದ ಪರಿಸ್ಥಿತಿಗೆ ಕಾರಣವಾಗಿದೆ.

ಕೊನೆ ಟಿಪ್ಪಣಿ

೧. ಸಿದ್ಧರಾಮಯ್ಯ.ಎಸ್.ಜಿ., **ನವಲೇಖನ ಕನ್ನಡ ಕತೆಗಳು,** ಪು.ಸಂ.೧

೨. (https://kn.wikipedia.org/wiki/ಮಾನವೀಯ ಮೌಲ್ಯಗಳು)

೩. ಅಮರೇಶ ನುಗಡೋಣಿ, **ಜಾಗತೀಕರಣ: ಕನ್ನಡ ಸಂಸ್ಕೃತಿಯ ವಿವೇಕ,** ಪು.ಸಂ– ೧೫೧

೪. ಅಮರೇಶ ನುಗಡೋಣಿ, **ಸವಾರಿ,** ಪು.ಸಂ–೧೯೭

೫. ಅದೇ ಪುಸ್ತಕ, ಪು.ಸಂ–೧೯೭

೬. ವೇದಾ.ಎಂ.ಎಸ್., **ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ,** ಪು.ಸಂ–೨೦೬

೭. ಅದೇ ಪುಸ್ತಕ, ಪು.ಸಂ–೨೧೩

೮. ಮಹಾಂತೇಶ ನವಲಕಲ್, **ನೀರಿನ ನೆರಳು,** ಪು.ಸಂ–೩೭

೯. ಅನುಪಮಾ ಪ್ರಸಾದ್, **ಜೋಗತಿ ಜೋಳಿಗೆ,** ಪು.ಸಂ–೪೨

೧೦. ಅಮರೇಶ ನುಗಡೋಣಿ, **ಸವಾರಿ,** ಪು.ಸಂ–೨೧೦

೧೧. ಸುಮಂಗಲ, **ಕಾಲಿಟ್ಟಲ್ಲಿ ಕಾಲುದಾರಿ,** ಪು.ಸಂ–೧೦

೧೨. ನಾಗವೇಣಿ ಎಚ್., **ಮೀಯುವ ಆಟ,** ಪು.ಸಂ-೧೨

೧೩. ಅದೇ ಪುಸ್ತಕ, ಪು.ಸಂ-೬

೧೪. ಅದೇ ಪುಸ್ತಕ, ಪು.ಸಂ-೨

೧೫. ಅದೇ ಪುಸ್ತಕ, ಪು.ಸಂ-೧೩

೧೬. ಅದೇ ಪುಸ್ತಕ, ಪು.ಸಂ-೧೫

೧೭. ರಾಮಲಿಂಗಪ್ಪ ಟಿ. ಬೇಗೂರು, ರವಿ ಕೃಷ್ಣಾರೆಡ್ಡಿ(ಸಂ)., **ವರ್ತಮಾನದ ಕಥೆಗಳು,** ಪು.ಸಂ-೧೨

೧೮. ಅದೇ ಪುಸ್ತಕ, ಪು.ಸಂ-೧೨

೧೯. ಅದೇ ಪುಸ್ತಕ, ಪು.ಸಂ-೧೨

೨೦. ಅದೇ ಪುಸ್ತಕ, ಪು.ಸಂ-೧೩

೨೧. ಅದೇ ಪುಸ್ತಕ, ಪು.ಸಂ-೧೩

೨೨. ಅದೇ ಪುಸ್ತಕ, ಪು.ಸಂ-೧೮

೨೩. ಅದೇ ಪುಸ್ತಕ, ಪು.ಸಂ-೨೮

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಜಾಗತೀಕರಣ ಸಂದರ್ಭದಲ್ಲಿ ಭಾರತದಂತಹ ಕೃಷಿಪ್ರಧಾನ ದೇಶವು ಅನೇಕ ಸ್ಥಿತ್ಯಂತರಗಳನ್ನು ಕಂಡುಕೊಂಡಿರುವುದನ್ನು ಅನೇಕ ಜ್ಞಾನಶಿಸ್ತುಗಳ ವಿದ್ವಾಂಸರು ಗುರ್ತಿಸಿದ್ದಾರೆ. ಆದರೆ ಕನ್ನಡದ ವಿದ್ವಾಂಸರು ಜಾಗತೀಕರಣದ ಸಂದರ್ಭವನ್ನು ಇತರೆ ಜ್ಞಾನಶಿಸ್ತುಗಳಂತೆ ಅಂಕಿ-ಅಂಶಗಳನ್ನು ನೀಡುವ, ಇಲ್ಲವೇ ಕೇವಲ ವರದಿ ರೂಪದಲ್ಲಿ ತನ್ನ ನಿಲುವನ್ನು ಮಂಡಿಸುತ್ತವೆ. ಆದರೆ ಸಾಹಿತ್ಯವು ಇಂತಹ ಪಲ್ಲಟಗಳನ್ನು ಸೂಕ್ಷ್ಮವಾಗಿ ಅರಿಯುವ, ಅದಕ್ಕೆ ಕಾರಣಗಳನ್ನು ಹುಡುಕುವ, ಅದರ ಪರಿಣಾಮಗಳನ್ನು ಭಿನ್ನ ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡುತ್ತದೆ. ಅಲ್ಲದೇ ಇಂತಹ ಕ್ಷೇತ್ರಗಳು ಜಾಗತೀಕರಣದಂತಹ ಆರ್ಥಿಕ ಪ್ರಕ್ರಿಯೆಯಿಂದ ಸಮಾಜವು ಬದಲಾವಣೆ ಹೊಂದುತ್ತಿರುವುದನ್ನು ಸಾಹಿತ್ಯವು ಹಿಡಿದಿಟ್ಟಿರುವ ನೆಲೆಯು ಸೂಕ್ಷ್ಮವಾಗಿದೆ ಹಾಗೂ ಪರಿಣಾಮಕಾರಿಯಾಗಿದೆ.

ಜಾಗತೀಕರಣದ ಚರ್ಚೆಯನ್ನು ಭಾರತದಂತಹ ಸಂದರ್ಭದಲ್ಲಿ ಎರಡು ನೆಲೆಗಳಲ್ಲಿ ನೋಡುವ ದೃಷ್ಟಿಕೋನಗಳಿವೆ. ಒಂದು ಜಾಗತೀಕರಣದಿಂದ ಅನುಕೂಲವಾಗಿದೆ ಎನ್ನುವ ನೆಲೆ ಒಂದಾದರೆ; ಮತ್ತೊಂದು ಜಾಗತೀಕರಣವು ಸಮಾಜದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವುದರ ಮೂಲಕ ಮೇಲಿನ ಕ್ಷೇತ್ರಗಳಲ್ಲಿ ಅನೇಕ ಪಲ್ಲಟಗಳನ್ನು ಮಾಡಿದೆ ಎನ್ನುವ ನೆಲೆಯಲ್ಲಿದೆ. ಜಾಗತೀಕರಣದ ನಂತರದ ವರ್ಷಗಳಲ್ಲಿ ಅದನ್ನು ಅಧ್ಯಯನ ಮಾಡಿರುವ ಬಹುತೇಕ ವಿದ್ವಾಂಸರು ಜಾಗತೀಕರಣದಿಂದ ಅನುಕೂಲಗಳೆಷ್ಟಾಗಿದೆಯೋ, ಅದಕ್ಕಿಂತ ಹೆಚ್ಚಿನದಾಗಿ ಅದು ಸಮಾಜದ ಮೇಲೆ ಬೀರುತ್ತಿರುವ ಪ್ರತಿಕೂಲ ಪರಿಣಾಮಗಳನ್ನು ಎಲ್ಲಾ ಜ್ಞಾನಶಿಸ್ತುಗಳಲ್ಲಿಯೂ ಗುರ್ತಿಸಿರುವರು.

ಕಾವ್ಯ, ಸಣ್ಣಕತೆ, ಕಾದಂಬರಿ, ವಿಮರ್ಶೆ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಜಾಗತೀಕರಣವು ಬೀರುತ್ತಿರುವ ಪರಿಣಾಮಗಳನ್ನು ಗುರ್ತಿಸುವ ಪ್ರಯತ್ನವನ್ನು ಮಾಡಿದೆ. ಕನ್ನಡದ ಸಾಹಿತ್ಯದ ಸಂದರ್ಭದಲ್ಲೂ ಜಾಗತೀಕರಣದ ಬಗೆಗೆ ಬಂದಿರುವ ಅಭಿಪ್ರಾಯಗಳನ್ನು ಗಮನಿಸಿದರೆ ಜಾಗತೀಕರಣದಿಂದ ಉಪಯೋಗ ಎಷ್ಟಿದೆಯೋ; ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅನನುಕೂಲಗಳು ಸಮಾಜದ ಮೇಲೆ ಬೀರಿರುವ ಪರಿಣಾಮಗಳನ್ನು ಕುರಿತು ಚಿತ್ರಿಸಿರುವುದನ್ನು ತೊಂಭತ್ತರ ನಂತರದ ದಶಕದಲ್ಲಿ ಬರೆಯುತ್ತಿರುವ ಕತೆಗಾರರ ಕತೆಗಳ ಮೂಲಕ ಕಂಡುಕೊಳ್ಳಲಾಗಿದೆ. ಅಲ್ಲದೇ ಜಾಗತೀಕರಣದ ಬಗೆಗಿನ ಅಭಿಪ್ರಾಯವನ್ನು ಮಂಡಿಸುವಾಗ ಅದನ್ನು ವಿರೋಧಿಸುವ ನೆಲೆಯಲ್ಲಿ ಅಭಿಪ್ರಾಯ ಮಂಡಿಸಿದ್ದಾರೆ.

ಪ್ರಭುತ್ವ ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಇಂದು ಸಮಾಜವನ್ನು ಮಾರುಕಟ್ಟೆಯ ವ್ಯವಸ್ಥೆಗೆ ರೂಪಿಸುವ ಉದ್ದೇಶವನ್ನು ಹೊಂದಿರುವ ಜಾಗತೀಕರಣವು ತೃತೀಯ ರಾಷ್ಟ್ರಗಳನ್ನು ತನ್ನ ಉತ್ಪನ್ನಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ, ತನ್ನ ಉತ್ಪನ್ನಗಳಿಗೆ ಮಾರುಕಟ್ಟೆಯನ್ನಾಗಿಸಿಕೊಂಡು ಈ ರಾಷ್ಟ್ರಗಳಲ್ಲಿ ಉತ್ಪಾದನಾ ಶಕ್ತಿಯನ್ನು ಕುಂಠಿತಗೊಳಿಸುವ ಹುನ್ನಾರವನ್ನು ಮಾಡಿವೆ. ಭಾರತವು ಕೃಷಿ ಪ್ರಧಾನ ದೇಶ. ಆದರೆ ಆಧುನಿಕ ಶಿಕ್ಷಣ, ವಿಜ್ಞಾನ ತಂತ್ರಜ್ಞಾನಗಳು ಇಂದು ಕೃಷಿಯನ್ನು ಕೊನೆಯ ದರ್ಜೆಯ ವೃತ್ತಿಯಾಗಿ ಪರಿಗಣಸಿರುವುದನ್ನು ಕನ್ನಡ ಕತೆಗಳು ಗಮನಿಸಿವೆ. ಇಂತಹ ಪರಿಸ್ಥಿತಿಯು ಇಂದು ಎಲ್ಲಾ ವೃತ್ತಿಗಳ ವಿಷಯದಲ್ಲೂ ನಡೆಯುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ತಾಳುತ್ತಿರುವ ನಿಲುವುಗಳ ನಿಜಕ್ಕೂ ಆತಂಕಕಾರಿ. ಮಹಿಳೆಯರ ವಿಷಯದಲ್ಲೂ ಪುರುಷವಾದಿ ಮನೋಸ್ಥಿತಿಯನ್ನು ಮುಂದುವರೆಸುವ ಅನೇಕ ಉದಾಹರಣೆಗಳು ಇದ್ದರೂ ಅದನ್ನು ಮೀರುವ ಅನೇಕ ನೆಲೆಗಳು ಇಂದು ಸೃಷ್ಟಿಯಾಗಿರುವುದನ್ನು ಕಾಣಲು ಸಾಧ್ಯವಾಗಿದೆ.

ಕನ್ನಡ ಸಣ್ಣಕತೆಗಳಲ್ಲಿ ಜಾಗತೀಕರಣ ಸಂದರ್ಭವನ್ನು ವಿವರಿಸುತ್ತಿರುವ ಕನ್ನಡದ ಕತೆಗಾರರು ೨೧ನೇ ಶತಮಾನದಲ್ಲಿ ಜಾಗತೀಕರಣವು ಸಮಾಜದ ಮೇಲೆ ಮಾಡುತ್ತಿರುವ ಅನುಕೂಲ ಮತ್ತು ಅನನುಕೂಲಗಳನ್ನು ಕಾಣಿಸಿದ್ದಾರೆ. ಕನ್ನಡದ ಕತೆಗಳಲ್ಲಿ ಜಾಗತೀಕರಣದ ಬಗೆಗೆ ವಿರುದ್ಧವಾದ ಅಭಿಪ್ರಾಯಗಳನ್ನು ರೂಪಿಸುವ ಕತೆಗಳೇ ಹೆಚ್ಚಾಗಿ ಮೂಡಿಬಂದಿವೆ. ಕತೆಗಾರರ ಜಾಗತೀಕರಣದ ಬಗೆಗಿನ ಈ ದೃಷ್ಟಿಕೋನವು ಸಮಾಜದಲ್ಲಿನ ಜನರು ಜಾಗತೀಕರಣದ ಬಗೆಗೆ ಹೊಂದಿರುವ ದೃಷ್ಟಿಕೋನಕ್ಕಿಂತ ಭಿನ್ನವಾಗಿದೆ.

ಜಾಗತೀಕರಣದ ಸಂದರ್ಭವನ್ನು ಕನ್ನಡದ ಕತೆಗಳು ದರ್ಶಾತ್ಮಕ ದೃಷ್ಟಿಕೋನದಿಂದ ನೋಡಿವೆ. ಸಮಾಜವು ಜಾಗತೀಕರಣವನ್ನು ದಿನನಿತ್ಯದ ಬದುಕಿನಲ್ಲಿ ಒಪ್ಪಿಕೊಳ್ಳುವ ಸ್ಥಿತಿಯಿದೆ. ಕತೆಗಳಲ್ಲಿ ಇದನ್ನು ಭಿನ್ನ ನೆಲೆಯಲ್ಲಿ ನೋಡಲಾಗಿದೆ. ಜಾಗತೀಕರಣವು ಮಾಡುತ್ತಿರುವ ಪರಿಣಾಮಗಳನ್ನು ಮನುಷ್ಯ ಸಂಬಂಧಗಳು, ಕುಟುಂಬ, ವೃತ್ತಿ, ಭಾಷೆ, ಶಿಕ್ಷಣ, ವಲಸೆ, ಮಹಿಳೆ, ಅಸಮಾನತೆ, ರೈತ, ಅಭಿವೃದ್ಧಿ, ರಾಜಕೀಯ ನೆಲೆ, ಜಾತಿ ಮತ್ತು ಧರ್ಮ ಮುಂತಾದವುಗಳ ಬಗೆಗೆ ಅವು ಚಿತ್ರಿಸಿವೆ. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಸಹ ಜಾಗತೀಕರಣವು ನಿರೀಕ್ಷೆಗೆ ಮೀರಿದ ಬದಲಾವಣೆಳು ಆಗಿರುವುದನ್ನು ಚಿತ್ರಿಸುತ್ತವೆ. ಇಂತಹ ವೈರುಧ್ಯಗಳನ್ನು ಕತೆಗಾರರು ಸಮಾಜದ ವಾಸ್ತವ ಸ್ಥಿತಿಯನ್ನು ಭಿನ್ನವಾಗಿ ಚಿಂತಿಸಲು ಕಾರಣವೆಂದರೆ ಸಾಹಿತ್ಯವು ಪ್ರತಿಯೊಂದನ್ನು ಸೂಕ್ಷ್ಮವಾಗಿ ಗ್ರಹಿಸುವ, ಅದಕ್ಕೆ ಕಾರಣಗಳನ್ನು ಹುಡುಕುತ್ತದೆ.

ಅಧ್ಯಯನದ ಫಲಿತಗಳು

ಕನ್ನಡದ ಕತೆಗಳು ಜಾಗತೀಕರಣ ಸಂದರ್ಭದಲ್ಲಿ ಬದಲಾಗುತ್ತಿರುವ ಸಮಾಜದ ನೆಲೆಗಳನ್ನು ಗ್ರಹಿಸಿರುವ ಬಗೆಯನ್ನು ಫಲಿತಗಳಾಗಿ ಹೀಗೆ ಗುರ್ತಿಸಲಾಗಿದೆ.

೧. ಕನ್ನಡದ ಕಥಾಪರಂಪರೆಯಲ್ಲಿ ಇದುವರೆಗೂ ಇದ್ದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎನ್ನುವ ಕಾಲಘಟ್ಟಗಳನ್ನು ಅಧ್ಯಯನಕಾರರು ಗುರ್ತಿಸಿ, ಆ ಕಾಲದ ಆಶಯಗಳಿಗೆ ಅನುಗುಣವಾಗಿ ಸಾಹಿತ್ಯ ರಚನೆಯಾಗಿದೆ ಎಂದು ವಿಂಗಡಿಸಿರುವರು. ಆದರೆ ಇಂದಿನ ಜಾಗತೀಕರಣ ಸಂದರ್ಭದಲ್ಲಿ ಬರೆಯುತ್ತಿರುವ ಕತೆಗಾರರು ಇಂತಹ ಪರಂಪರೆಯನ್ನು ಮೀರಿ ನಿರ್ದಿಷ್ಟ ಕಾಲಘಟ್ಟದ ಆಶಯಗಳನ್ನು ಹೊಂದದೇ, ತಮ್ಮ ಸಿದ್ಧಾಂತಕ್ಕೆ ಅಥವಾ ದೃಷ್ಟಿಕೋನಕ್ಕೆ ಒಳಪಡದೇ ತಮ್ಮ ಅನುಭವ ಕೇಂದ್ರಿತ ಮತ್ತು ಸಮಾಜದಲ್ಲಿ ಕಾಣುತ್ತಿರುವ ಸಮಸ್ಯೆಗಳನ್ನೇ ಮುಖ್ಯವಾಗಿ ಕೇಂದ್ರೀಕರಿಸಿಕೊಂಡು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದಾರೆ.

೨. ಜಾಗತೀಕರಣ ಸಂದರ್ಭದಲ್ಲಿ ಇದುವರೆಗೂ ಕುಟುಂಬ ವ್ಯವಸ್ಥೆಗೆ ಇದ್ದ ವ್ಯಾಖ್ಯಾನಕ್ಕೆ ಭಿನ್ನವಾದ ಅರ್ಥವನ್ನು ನೀಡುತ್ತಿರುವುದನ್ನು ಕತೆಗಳ ಮೂಲಕ ಗ್ರಹಿಸಬಹುದು. ಕುಟುಂಬ ಎಂದರೆ ತಂದೆ–ತಾಯಿ ಮಕ್ಕಳು ಒಂದೇ ಸೂರಿನಡಿ ವಾಸ ಮಾಡುವ ವ್ಯವಸ್ಥೆಯನ್ನು ಕುಟುಂಬ ಎನ್ನುವ ಪರಿಕಲ್ಪನೆಯಲ್ಲಿ ಸಮಾಜಶಾಸ್ತ್ರೀಯ ಅಧ್ಯಯನಗಳು ಗ್ರಹಿಸಿದ್ದವು. ಆದರೆ ಇಂದಿನ ಜಾಗತೀಕರಣ ಸಂದರ್ಭದಲ್ಲಿನ ಕುಟುಂಬ ವ್ಯವಸ್ಥೆಯಲ್ಲಿ ಪಲ್ಲಟಗಳಾಗಿರುವುದನ್ನು ಕನ್ನಡ ಕತೆಗಳು ಕಾಣಿಸುತ್ತವೆ.

೩. ವಸಾಹತುಶಾಹಿಯ ಪ್ರಭಾವದಿಂದ ಕುಟುಂಬ ವ್ಯವಸ್ಥೆಯಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳಾಗಿ ಅವಿಭಕ್ತ ಕುಟುಂಬ ವ್ಯವಸ್ಥೆಯಿಂದ ವಿಭಕ್ತ ಕುಟುಂಬ ವ್ಯವಸ್ಥೆಗಳು ರೂಪುಗೊಂಡವು. ಆದರೆ ಜಾಗತೀಕರಣದ ಸಂದರ್ಭದಲ್ಲಿ ಹೆಚ್ಚು ಅಥವಾ ಗುಂಪು ಜನರ ಕುಟುಂಬ ಪರಿಕಲ್ಪನೆಯು ಪ್ರಾಧಾನ್ಯತೆಯನ್ನು ಕಳೆದುಕೊಂಡು ಭಿನ್ನ ಸ್ವರೂಪ ಪಡೆಯುತ್ತಿರುವುದನ್ನು ಅಮರೇಶ ನುಗಡೋಣಿ, ವಸುದೇಂಧ್ರ ಮುಂತಾದವರ ಕತೆಗಳಲ್ಲಿ ಕಾಣಬಹುದು. ವೃತ್ತಿಯ ಕಾರಣಕ್ಕಾಗಿ ವರ್ತಮಾನದಲ್ಲಿ ವಿಚ್ಛೇಧನಗಳು ಹೆಚ್ಚಾಗಿ ಚಿಕ್ಕ ಕುಟುಂಬಗಳ ಕಲ್ಪನೆಯೂ ಮಾಯವಾಗುತ್ತಿದೆ. ಅಲ್ಲದೇ 'ಲಿವಿಂಗ್ ಟುಗೆದರ್'ನಂತಹ ಸನ್ನಿವೇಷಗಳು ಎದುರಾಗುತ್ತಿರುವುದನ್ನು ಚಿತ್ರಿಸುತ್ತಿವೆ.

೪. ಕುಟುಂಬದ ಒಳಗಿನ ಮತ್ತು ಕುಟುಂಬದ ಹೊರಗಿನ ಸಂಬಂಧಗಳು ಇಂದಿನ ದಿನಗಳಲ್ಲಿ ಆಸ್ತಿ, ಸ್ವಾರ್ಥ, ವೈಯಕ್ತಿಕ ಹಿತಾಸಕ್ತಿ ಹೀಗೆ ಮುಂತಾದ ಕಾರಣಗಳಿಗಾಗಿ ಅವನತಿ ಹೊಂದುತ್ತಿರುವುದನ್ನು ಕತೆಗಳು ಚಿತ್ರಿಸುತ್ತವೆ. ಕುಟುಂಬದಲ್ಲಿ ಇಂದಿನ ದಿನಗಳಲ್ಲಿ ಶಿಕ್ಷಣ, ಉದ್ಯೋಗದ ಕಾರಣಕ್ಕಾಗಿ, ಆಸ್ತಿಯ ಕಾರಣಕ್ಕಾಗಿ, ಅನುಮಾನದ ಕಾರಣಕ್ಕಾಗಿ, ನೈತಿಕತೆಯನ್ನು ಕಳೆದುಕೊಂಡಿದ್ದಕ್ಕಾಗಿ ಕುಟುಂಬದ ಒಳಗಿನ ಸಂಬಂಧಗಳು ಹಾಳಾಗುವುದನ್ನು ಅವು ತೋರಿಸುತ್ತವೆ. ಇನ್ನೂ ಕುಟುಂಬೇತರ ಸಂಬಂಧಗಳಲ್ಲಿ ಮುಖ್ಯವಾಗಿ ನೆರೆಹೊರೆಯವರು, ಸ್ನೇಹಿತರು, ಪರಿಚಿತರನ್ನು ಮಾತ್ರವೇ ಪರಿಗಣಿಸುವುದರ ಜೊತೆಗೆ ಮನುಷ್ಯ ಸಂಬಂಧಗಳನ್ನು ಬಿಟ್ಟು ಇತರೆ ಸಂಬಂಧಗಳಾದ ಪ್ರಾಣಿ, ಜಮೀನಿನಲ್ಲಿ ಕೆಲಸ ಮಾಡುವ ಆಳುಗಳು, ತಾವು ಬೆಳೆದ ಪರಿಸರವನ್ನು ಕೂಡ ಕುಟುಂಬೇತರ ಸಂಬಂಧ ಎಂದು ಪರಿಗಣಿಸಲಾಗಿದೆ. ಈ ಸಂಬಂಧಗಳೂ ಕೂಡಾ ವೈಯಕ್ತಿಕ ಹಿತಾಸಕ್ತಿಗೆ, ಸ್ವಾರ್ಥಕ್ಕೆ ಹಾಳಾಗುತ್ತಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೫. ಜಾಗತೀಕರಣ ಸಂದರ್ಭದಲ್ಲಿ ಮನುಷ್ಯರು ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದನ್ನು ಬಿಟ್ಟು ಆರ್ಥಿಕ ಸಬಲತೆಗೆ ಅಂದರೆ ಹಣ, ಆಸ್ತಿ, ಸಂಪತ್ತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿರುವುದನ್ನು ಕನ್ನಡ ಸಣ್ಣಕತೆಗಳು ಕಾಣಿಸುತ್ತವೆ. ಇಂದು ಕುಟುಂಬಗಳಲ್ಲಿ ಹೆಚ್ಚಿನ ಒಡಕು ಮೂಡುತ್ತಿರುವುದಕ್ಕೆ ಮೂಲ ಕಾರಣವಾಗುತ್ತಿರುವುದು ಆಸ್ತಿಯ ಹಂಚಿಕೆಯಲ್ಲಿಯೇ. ಅಲ್ಲದೆ ಜಾಗತೀಕರಣ ಸಂದರ್ಭದಲ್ಲಿ ಬಂಡವಾಳಶಾಹಿಗಳು ಹಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುವರು.

ಶಿಕ್ಷಣ, ಸಿನಿಮಾ, ಕಲೆ, ಕೃಷಿ ಎಲ್ಲಾ ಕ್ಷೇತ್ರಗಳನ್ನು ಸಹ ಆರ್ಥಿಕ ಮಾರುಕಟ್ಟೆಯ ಮೌಲ್ಯದ ಹಿನ್ನೆಲೆಯಲ್ಲಿಯೇ ಗುರ್ತಿಸಲಾಗುತ್ತಿದೆ. ಮಹಾಂತೇಶ ನವಲಕಲ್ ಅವರ 'ಭಾರತ ಭಾಗ್ಯವಿಧಾತ' ಕತೆಯಲ್ಲಿ ಬಂಡವಾಳಶಾಹಿಗಳು ವ್ಯವಸ್ಥಿತವಾಗಿ ಹಣವನ್ನು ಲೂಟಿ ಮಾಡುತ್ತಿರುವುದನ್ನು ಚಿತ್ರಿಸಲಾಗಿದೆ.

೬. ಶೈಕ್ಷಣಿಕ ನೆಲೆಯಿಂದ ಜಾಗತೀಕರಣವನ್ನು ಮುಖ್ಯವಾಗಿ ಗಮನಿಸುವುದಾದರೆ ಪ್ರಸ್ತುತ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಗೆ ಪ್ರಾಧಾನ್ಯತೆ ದೊರೆಯುತ್ತಿದೆ. ಇದೇ ಕಾಲಕ್ಕೆ ಪ್ರಾದೇಶಿಕ ಭಾಷೆಗಳಲ್ಲಿ ಭಾಷಿಕವಾದ ಶಿಕ್ಷಣ ಕ್ರಮವು ಕಡಿಮೆಯಾಗುತ್ತಿದೆ. ಇಂಗ್ಲೀಷ್ ಭಾಷೆಯು ಪ್ರಭುತ್ವದ ಭಾಷೆಯಾಗಿ ರೂಪುಗೊಳ್ಳುವ ಮೂಲಕ ಪ್ರಾದೇಶಿಕ ಭಾಷೆಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ. ಅಲ್ಲದೇ ಜಾಗತೀಕರಣ ಸಂದರ್ಭದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಇಂಗ್ಲೀಷ್‌ನ್ನೇ ಮಾಧ್ಯಮ ಭಾಷೆಯನ್ನಾಗಿ ಬಳಸುವಂತೆ ಮಾಡಲಾಗಿದೆ. ಈ ಹುನ್ನಾರವನ್ನು ಕನ್ನಡದ ಕತೆಗಳ ಮೂಲಕ ಅರಿಯಬಹುದು. ಇಂದು ಶಿಕ್ಷಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವೇ ಜ್ಞಾನ ಕೇಂದ್ರವಾಗಿ ಮಾನವಿಕಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡು ಕಣ್ಮರೆಯಾಗುತ್ತಿರುವುದನ್ನು ಬಾಹುಗಳು, ಡಿಪ್ರೆಶನ್, ತೂಫಾನ್ ಮೇಲ್, ಕೆಲವು ತತ್ವಗಳ ಸಲುವಾಗಿ, ಕರ್ಕಿಬೇರು, ಪಾಲು ಮುಂತಾದ ಕತೆಗಳಲ್ಲಿ ಚಿತ್ರಿಸಲಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಬಹುರಾಷ್ಟ್ರೀಯ ಕಂಪೆನಿಗಳಿಗೆ ಉದ್ಯೋಗಾಕಾಂಕ್ಷಿಗಳನ್ನು ಸೃಷ್ಟಿಸುವ ಕೆಲಸವನ್ನು ಶಿಕ್ಷಣ ವ್ಯವಸ್ಥೆಯು ಮಾಡುತ್ತಿದೆ.

೭. ಪ್ರಭುತ್ವವು ಜಾಗತೀಕರಣವನ್ನು ಜಾರಿಗೆ ತರುವುದರ ಮೂಲಕ ಬಂಡವಾಳಶಾಹಿ-ಗಳೊಂದಿಗೆ ಸೇರಿಕೊಂಡು ಪ್ರಜಾಪ್ರಭುತ್ವದ ಆಶಯಗಳನ್ನು ಮೂಲೆಗುಂಪು ಮಾಡುತ್ತಿದೆ. ಸರ್ಕಾರಗಳು ಅಭಿವೃದ್ಧಿ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ರೈತರ, ಬಡವರ, ಹಿಂದುಳಿದವರ ಭೂಮಿಯನ್ನು ಮತ್ತು ಅವರ ಜೀವನವನ್ನು ಕಿತ್ತುಕೊಳ್ಳುತ್ತಿರುವುದನ್ನು ಹನುಮಂತ ಹಾಲಗೇರಿ ಅವರ 'ದೇವಸಗ್ಗ', 'ನಾಗಬಲಿ', ಅಮರೇಶ ನುಗಡೋಣಿ ಅವರ 'ಧರೆ ಉರಿದರೆ', 'ಏ ದಿಲ್ ಮಾಂಗೇ ಮೋರ್', ಮೊಗಳ್ಳಿ ಗಣೇಶ್ ಅವರ 'ಗಣಿ ನಿಲ್ದಾಣ' ಕತೆಗಳು ಚಿತ್ರಿಸುತ್ತದೆ. ಅಲ್ಲದೇ ಅಧಿಕಾರಕ್ಕಾಗಿ ರಾಜಕಾರಣಿಗಳು ಜನರ ಮೇಲೆ ಮಾಡುತ್ತಿರುವ ಕೌರ್ಯವನ್ನು ಕತೆಗಳು ತಿಳಿಸಿವೆ. ಬಂಡವಾಳಶಾಹಿಗಳ ಜೊತೆಯಲ್ಲಿ ಪ್ರಭುತ್ವವು ಸೇರಿಕೊಂಡು ಜನರ ಮೇಲೆ ಆಕ್ರಮಣ ಮಾಡುತ್ತಿದೆ.

೮. ಜಾಗತೀಕರಣದಿಂದಾಗಿ ಬುಡಕಟ್ಟುಗಳ, ಹಿಂದುಳಿದವರ, ದಲಿತರ, ತಳಸಮುದಾಯಗಳ ಸಂಸ್ಕೃತಿಯಲ್ಲಿ ಮತ್ತು ಜೀವನಕ್ರಮದಲ್ಲಿ ಅನೇಕ ರೀತಿಯ ಬದಲಾವಣೆಗಳು ಆಗುತ್ತಿರುವುದು ಕತೆಗಳ ಮುಖ್ಯ ಆಶಯವಾಗಿದೆ. ಮೂಲಪರಂಪರೆಯ ಅನೇಕ ಅಂಶಗಳನ್ನು ಪಾಶ್ಚಾತ್ಯೀಕರಣದ ಪ್ರಭಾವದಿಂದ ಕಳೆದುಕೊಳ್ಳುತ್ತಿದೆ. ಅಲ್ಲದೇ ಸಂಸ್ಕೃತಿಯ ನಾಡಿಗಳಾದ ಜನಪದ ಹಾಡು, ಗಾದೆ, ಒಗಟುಗಳಿಗಿಂತ ಪಾಶ್ಚಾತ್ಯ ಸಂಸ್ಕೃತಿಯ ಹಾಡುಗಳನ್ನು, ಸಿನಿಮಾಗಳನ್ನು ಜನರು ಇಷ್ಟಪಡುತ್ತಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯನ್ನು ಅಂಧಾನುಕರಣವಾಗಿ ಅನುಕರಣೆ ಮಾಡುತ್ತಿರುವುದನ್ನು ಹನುಮಂತ ಹಾಲಗೇರಿ ಅವರ 'ದೇವಸಗ್ಗ', 'ನಾಗಬಲಿ', ಮಂಜುನಾಥ್‌ಲತಾ ಅವರ 'ಮಂಟೇದರನೊಕ್ಕಲು ಲೋಕರೂಢಿಗೊಳಗಾದುದು', ಶ್ರೀಧರ ಬಳಗಾರ ಅವರ 'ಒಂದು ಫೋಟೋದ ನೆಗೆಟಿವ್' ಮುಂತಾದ ಕತೆಗಳಲ್ಲಿ ಢಾಳಾಗಿ ಗುರ್ತಿಸಬಹುದು.

೯. ಪುರುಷವಾದಿ ಸಮಾಜವು ಮಹಿಳೆಯನ್ನು ಪ್ರಾಚೀನ ಕಾಲದಿಂದಲೂ ಶೋಷಣೆ ಮಾಡಿಕೊಂಡು ಬಂದಿದೆ. ಜಾಗತೀಕರಣ ಸಂದರ್ಭದಲ್ಲಿ ಮಹಿಳೆಯರಿಗೆ ಸ್ವಾತಂತ್ರವು ಲಭಿಸಿದ್ದರೂ ಕೂಡ ಅವಳನ್ನು ಪುರುಷವಾದಿ ಸಮಾಜವು ಇನ್ನೂ ಶೋಷಣೆಗೆ ಗುರಿ ಮಾಡಿದೆ. ಅಲ್ಲದೇ ಇಂದು ಮಹಿಳೆಯರೂ ಕೂಡಾ ವೃತ್ತಿವನ್ನು ಮಾಡುತ್ತಿದ್ದರೂ ಅವಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಶೋಷಣೆಗೆ ಒಳಪಡಿಸುತ್ತಿರುವ ಹಿನ್ನೆಲೆಯೂ ಇದೇ ಪುರುಷ ಮನಸ್ಥಿತಿಯ ಕಾರಣದಿಂದಾಗಿಯೇ. ಇಡೀ ಕುಟುಂಬವನ್ನು ಮುನ್ನೆಡೆಸಲು ಮಹಿಳೆಯು ತನ್ನ ಜೀವನವನ್ನೇ ಮುಡಿಪಾಗಿಡುವ ಪ್ರಸಂಗಗಳನ್ನು ಜಯಂತ್ ಕಾಯ್ಕಿಣಿ ಅವರ 'ತೂಫಾನ್ ಮೇಲ್', ಹನುಮಂತ ಹಾಲಗೇರಿ ಅವರ 'ಪಿಡುಗು' ಕತೆಗಳಲ್ಲಿದೆ. ಜಾಗತೀಕರಣ ಸಂದರ್ಭದಲ್ಲಿ ಮಹಿಳೆಯು ಅಸಹಾಯಕತೆಯಿಂದ ಅತ್ಯಾಚಾರ, ಶೋಷಣೆ, ಕೊಲೆಗಳನ್ನು ಎದುರಿಸುತ್ತಿದ್ದರೂ ಶಿಕ್ಷಿತ ಅಥವಾ ಅನುಭವ ಕೇಂದ್ರಿತ ಮಹಿಳೆಯು ಪುರುಷವಾದಿ ಧೋರಣೆಯನ್ನು ತಿರಸ್ಕರಿಸಿ ತನ್ನ ಜೀವನ ನಿಲುವನ್ನು ತಾಳುವ ಚಿತ್ರಣವನ್ನು ಎಚ್.ಎಸ್.ಅನುಪಮಾ ಅವರ 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ', ಶಾಂತಿ ಕೆ. ಅಪ್ಪಣ್ಣ ಅವರ 'ಮುಳ್ಳುಗಳು', ಸುಮಂಗಲ ಅವರ 'ಮುತ್ತಿನ ಬುಗುಡಿ' ಕತೆಗಳ ಮೂಲಕ ಅರಿಯಲಾಗಿದೆ. ಅಲ್ಲದೇ ಆಧುನಿಕತೆಯ ಪ್ರವೇಶದಿಂದಾಗಿ ಮಹಿಳೆಯರು ತಮ್ಮ ವಿಮೋಚನೆಯ ಧಿಕ್ಕಿನತ್ತಾ ಕೊಂಡೊಯ್ಯಲಾಗುತ್ತಿದೆ ಎನ್ನುವ ಹುಸಿಭ್ರಮೆಯನ್ನು ಹುಟ್ಟುಹಾಕಲಾಗುತ್ತಿದೆ.

೧೦. ಸಮಾಜವು ಬದಲಾದಂತೆ ವ್ಯಕ್ತಿಗಳು ಪ್ರತಿ ಕ್ಷೇತ್ರಗಳಲ್ಲೂ ಸಹ ಸಾಮಾನ್ಯವಾಗಿ ಬದಲಾವಣೆ ಆಗುತ್ತಿರುತ್ತಾರೆ. ವರ್ಣವ್ಯವಸ್ಥೆಯಿದ್ದ ಭಾರತೀಯ ಸಮಾಜವು ನಂತರ ಕೃಷಿಪ್ರಧಾನವಾದ ದೇಶವಾಗಿ ರೂಪುಗೊಂಡಿದೆ. ಆದರೆ ಜಾಗತೀಕರಣದ ಈ ಸಂದರ್ಭದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯಿಂದ, ಆರ್ಥಿಕ ಕಾರಣಾಂತರಗಳಿಂದ ವೃತ್ತಿಯಲ್ಲಿ ಬದಲಾವಣೆಗಳು ಆಗುತ್ತಿದೆ. ಪ್ರಭುತ್ವದ ಅಭಿವೃದ್ಧಿ ಯೋಜನೆಗಳು ಸಹ ಜಾಗತೀಕರಣ ಸಂದರ್ಭದಲ್ಲಿ ರೈತರನ್ನು ಒಕ್ಕಲೆಬ್ಬಿಸಿ ಅವರ ಭೂಮಿಯನ್ನು ಕಿತ್ತುಕೊಂಡು ಅವರು ವೃತ್ತಿಯನ್ನು ಬದಲಿಸಿಕೊಳ್ಳುವಂತೆ ಮಾಡಲಾಗಿದೆ. ಆಧುನಿಕತೆಯಿಂದ ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಣಾಮವಾಗಿ ವೃತ್ತಿಯಲ್ಲಿ ತೀವ್ರಗತಿಯಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಇಂದು ವೃತ್ತಿಯು ಆರ್ಥಿಕ ಸ್ಥಿತಿಗತಿಯನ್ನು ನಿರ್ವಹಿಸಲು ಎನ್ನುವ ಮನೋಭಾವನೆಯು ಜನರಲ್ಲಿ ಮೂಡುತ್ತಿರುವುದನ್ನು ಅಮರೇಶ ನುಗಡೋಣಿ ಅವರ 'ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು', ಹನುಮಂತ ಹಾಲಗೇರಿ ಅವರ 'ನಾಗಬಲಿ', ಮಹಾಂತೇಶ ನವಲಕಲ್ ಅವರ 'ಗಾಂಧಿ.....ಬಂದಾನೆ' ಕತೆಗಳ ಮೂಲಕ ಗ್ರಹಿಸಬಹುದು.

೧೧. ಜಾಗತೀಕರಣದ ಮೂಲ ಉದ್ದೇಶ ಆರ್ಥಿಕ ಅಂಶವೇ ಆಗಿರುವುದರಿಂದ ಇದು ಸಮಾಜದಲ್ಲಿ ಮೇಲು–ಕೀಳು, ಬಡವ–ಶ್ರೀಮಂತ, ಉಳ್ಳವರು–ಇಲ್ಲದವರು, ಗ್ರಾಮ–ನಗರ, ಪುರುಷ–ಮಹಿಳೆ ಎಂಬ ಅನೇಕ ನೆಲೆಗಳಲ್ಲಿ ಅಸಮಾನತೆಯನ್ನು ಮೂಡಿಸುತ್ತಿರುವುದನ್ನು ಈ ಅಧ್ಯಯನದಿಂದ ತಿಳಿಯಬಹುದು. ಬಡವರು ಇಂದು ಶ್ರೀಮಂತರ ದಬ್ಬಾಳಿಕೆಯಿಂದ, ಶೋಷಣೆಯಿಂದ ಅನ್ಯಾಯಕ್ಕೆ ಒಳಗಾಗುತ್ತಿರುವುದರ ಜೊತೆಗೆ ಮಹಿಳೆಯು ಅಸಮಾನತೆಯ ಸಮಾಜದಲ್ಲಿ ಕುಟುಂಬವನ್ನು ನಿರ್ವಹಣೆ ಮಾಡಲು ತಮ್ಮ ದೇಹವನ್ನೇ ಪಣಕ್ಕಿಡುತ್ತಿರುವುದನ್ನು ಅನುಪಮಾ ಪ್ರಸಾದ್ ಅವರ 'ಡೇಗೆ', ಶಾಂತಿ ಕೆ. ಅಪ್ಪಣ್ಣ ಅವರ 'ಮುಳ್ಳುಗಳು' ಕತೆಗಳ ಮೂಲಕ ಅರಿಯಬಹುದು.

೧೨. ೮೦ರ ದಶಕದ ನಂತರದಲ್ಲಿ ಪ್ರತಿಭಟನೆ, ಹೋರಾಟಗಳು ಕಾಣೆಯಾಗುತ್ತಿರುವುದನ್ನು ಕತೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ಜಾಗತೀಕರಣ ಸಂದರ್ಭದಲ್ಲಿ ಹೋರಾಟಗಳು, ಪ್ರತಿಭಟನೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕಾಗಿತ್ತು. ಆದರೆ ಇಂದಿನ ಯುವಕರು ಬಂಡವಾಳಶಾಹಿಗಳ ಭ್ರಷ್ಟಾಚಾರದಲ್ಲಿ ಬಿದ್ದು, ವೈಯಕ್ತಿಕ ಲಾಭಕ್ಕಾಗಿ ಹೋರಾಟಗಳನ್ನು ಮಣ್ಣುಪಾಲು ಮಾಡುತ್ತಿರುವರು. ಅಲ್ಲದೇ ಯಾವುದೇ

ಸಿದ್ಧಾಂತ, ಬದ್ಧತೆಗೆ ಒಳಗಾಗದೇ ತಮ್ಮ ಸ್ವಾರ್ಥಕ್ಕಾಗಿ ಹೋರಾಟಗಳನ್ನು ಮಾಡುತ್ತಿರುವುದನ್ನು ಮಹಾಂತೇಶ್ ನವಲಕಲ್ ಅವರ 'ನಾಯಿ ಎಂಬ ಮನುಷ್ಯ', ವಿವೇಕ ಶಾನಭಾಗ ಅವರ 'ಕೆಲವು ತತ್ವಗಳ ಸಲುವಾಗಿ', ಹಾಲಗೇರಿ ಅವರ 'ನಾಗಬಲಿ' ಕತೆಗಳಲ್ಲಿ ಕಾಣಲಾಗಿದೆ.

೧೩. ಭ್ರಷ್ಟಾಚಾರವು ಸಮಾಜದಲ್ಲಿ ಒಂದು ಪಿಡುಗಾಗಿದ್ದು ಜಾಗತೀಕರಣ ಸಂದರ್ಭದಲ್ಲಿ ಇಂತಹ ಘಟನೆಗಳು ಸಮಾಜದಲ್ಲಿ ಒಪ್ಪಿತ ನೆಲೆಯಲ್ಲಿ ಅಂಗೀಕಾರವಾಗುತ್ತಿವೆ. ಇಲ್ಲಿ ಮೌಲ್ಯಗಳಿಗೆ, ಪ್ರಾಮಾಣಿಕತೆಗೆ, ನಿಷ್ಠೆಗೆ ಬೆಲೆಯು ಗೌಣವಾಗಿ ಭ್ರಷ್ಟಾಚಾರವನ್ನು ಮಾಡಿ ಗಳಿಸಿದ ಆಸ್ತಿ ಅಂತಸ್ತೇ ಮುನ್ನೆಲೆಗೆ ಬಂದು ವ್ಯಕ್ತಿಯ ಮಾನ, ಮರ್ಯಾದೆ, ಗೌರವಗಳನ್ನು ಎತ್ತಿಹಿಡಿಯಲಾಗುತ್ತಿದೆ. ಬಂಡವಾಳಶಾಹಿಗಳು ತಮ್ಮ ಕೆಲಸವನ್ನು ಮಾಡಿಕೊಳ್ಳುವ ಸಲುವಾಗಿ ಸರ್ಕಾರವನ್ನು ಭ್ರಷ್ಟಾಚಾರಕ್ಕೆ ತಳ್ಳಿ ಮುಗ್ಧ ಜನರನ್ನು ಸುಲಿಗೆ ಮಾಡುತ್ತಿರುವರು. ಯೋಜನೆಗಳ ಹೆಸರಿನಲ್ಲಿ ಭ್ರಷ್ಟಾಚಾರವನ್ನು ಮಾಡಿ ಜನರ ಬದುಕನ್ನು ನಾಶ ಮಾಡುತ್ತಿರುವರು ಈ ಪಲ್ಲಟವನ್ನು ಮಹಾಂತೇಶ ನವಲಕಲ್ ಅವರ 'ಗಾಂಧಿ.....ಬಂದಾನೆ', ಮಂಜುನಾಥ್‌ಲತಾ ಅವರ 'ಆರ್ಮುಗ, ಕುರುಜ ಮತ್ತು ಶ್ರೀಲಿಂಗಸ್ವಾಮಿ' ಎನ್ನುವ ಕತೆಗಳಲ್ಲಿ ಚಿತ್ರಿಸಲಾಗಿದೆ.

೧೪. ಜಾಗತೀಕರಣದ ಸಂದರ್ಭದಲ್ಲಿ ನಗರಗಳು ಬೆಳೆದು, ಅನೇಕ ವೃತ್ತಿಗಳನ್ನು ಸೃಷ್ಟಿಸುವುದರಿಂದ ವಲಸೆ ಪ್ರವೃತ್ತಿಯು ಇಂದು ಹೆಚ್ಚಾಗುತ್ತಿದೆ. ಹಳ್ಳಿಗಳಲ್ಲಿ ಕೃಷಿಕರು, ಕೃಷಿ ಕಾರ್ಮಿಕರು ಭೂಮಿಯು ಇಲ್ಲದೇ ಜನ ತಮ್ಮ ಜೀವನೋಪಾಯಕ್ಕಾಗಿ ಹಳ್ಳಿಯಿಂದ ನಗರಗಳಿಗೆ ದುಡಿಮೆಗಾಗಿ ವಲಸೆ ಬರುತ್ತಿರುವರು. ಮನೆಯ ಕಷ್ಟ ನೋವುಗಳನ್ನು ನೀಗಿಸಲು ಪಟ್ಟಣಗಳಿಗೆ ವಲಸೆ ಬರುತ್ತಿರುವುದು ಕತೆಗಳ ಮುಖ್ಯ ವಸ್ತುವಾಗಿದೆ.

೧೫. ಭಾರತೀಯ ಸಮಾಜವು ಜಾತಿ ಮತ್ತು ಧರ್ಮಗಳನ್ನು ತನ್ನ ಒಡಲಲ್ಲೇ ಇಟ್ಟುಕೊಂಡೇ ಬಂದಿದೆ. ಜಾಗತೀಕರಣ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಎಷ್ಟೇ ಮುಂದುವರೆದರೂ ಜಾತಿ ಮತ್ತು ಧರ್ಮಗಳು ತಮ್ಮ ಬೇರನ್ನು ಇನ್ನೂ ಆಳವಾಗಿ ವಿಸ್ತರಿಸಿಕೊಂಡಿರುವೆ. ನಗರ ಪ್ರದೇಶಗಳಲ್ಲಿ ಧರ್ಮವು ತನ್ನ ಸ್ವರೂಪವನ್ನು ಕೋಮುವಾದದ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳುತ್ತಿವೆ. ಹಳ್ಳಿಗಳಲ್ಲಿ ಜಾತಿಯು ಪ್ರಬಲವಾಗುತ್ತಿದ್ದು ಇಲ್ಲಿ ಜಾತಿ ಸಂಘಟನೆ, ಸಂಘರ್ಷಗಳು ಹೆಚ್ಚಾಗುತ್ತಿವೆ. ರಾಜಕಾರಣವು ಓಟ್‌ಬ್ಯಾಂಕಿನ ಮೂಲಕ ಜಾತಿ ಮತ್ತು ಮತಧರ್ಮವನ್ನು ಇನ್ನೂ

ಹೆಚ್ಚಾಗಿ ಸಮಾಜದಲ್ಲಿ ನೆಲೆಯೂರುವಂತೆ ಮಾಡುತ್ತಿರುವುದನ್ನು ಮೊಗಳ್ಳಿ ಗಣೇಶ್ ಅವರ 'ವ್ಯೂಹ', ಅಬ್ದುಲ್ ರಶೀದ್ ಅವರ 'ಮಣ್ಣಾಂಗಟ್ಟಿ', ಮಹಾಂತೇಶ್ ನವಲಕಲ್ ಅವರ 'ನೀರಿನ ನೆರಳು', ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕತೆಗಳಲ್ಲಿ ಕಾಣಬಹುದು.

೧೬. ಬಹುರಾಷ್ಟ್ರೀಯ ಕಂಪೆನಿಗಳು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಇಂದು ಆಹಾರಪದ್ಧತಿ, ಕೃಷಿ ಜೀವನದ ಜೊತೆಗೆ ಇಡೀ ಸಮಾಜದ ಜನರ ಜೀವನವಿಧಾನವನ್ನೇ ಪಲ್ಲಟಗೊಳಿಸುತ್ತಿದೆ. ಎಲ್ಲಾ ವಸ್ತುಗಳನ್ನು ಕೃತಕ ತಂತ್ರಜ್ಞಾನದ ಮೂಲಕ ಉತ್ಪಾದಿಸಿ ವಾಣಿಜ್ಯೀಕರಣಕ್ಕಾಗಿ ಬಳಸಿಕೊಳ್ಳುತ್ತಿರುವುದನ್ನು ತಿಳಿಯಲಾಗಿದೆ. ಇಡೀ ಸಮಾಜವನ್ನು ಜಾಗತೀಕರಣವು ಮಾರುಕಟ್ಟೆಗೆ ಮಾರಾಟಕ್ಕಿಟ್ಟಿರುವ ಸರಕು ಎನ್ನುವುದಾಗಿ ಕಾಣುತ್ತಿರುವುದನ್ನು ಮುಖ್ಯವಾಗಿ ಗುರ್ತಿಸಲಾಗಿದೆ. ಇದನ್ನು ಮಹಾಂತೇಶ ನವಲಕಲ್ ಅವರ 'ಭಾರತ ಭಾಗ್ಯವಿಧಾತ', ಅಬ್ದುಲ್ ರಶೀದ್ ಅವರ 'ಮೂಸಾ ಮ್ಯೊಲೊಯಾರರ ಮುದ್ದಿನ ಮಗಳು ಮತ್ತು ಹೆಲಿಕಾಪ್ಟರ್ ಎಂಬ ದುಷ್ಟ ಜಂತು', ವಿವೇಕ ಶಾನಭಾಗ ಅವರ 'ಕಂತು', ಅನುಪಮಾ ಪ್ರಸಾದ್ ಅವರ 'ಡೇಗೆ' ಅಮರೇಶ ನುಗಡೋಣಿ ಅವರ 'ಸವಾರಿ' ಕತೆಗಳ ಮೂಲಕ ತಿಳಿಯಬಹುದು.

೧೭. ಮನುಷ್ಯ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಬೆನ್ನುಹತ್ತಿ ಮಾನವ ಸಹಜ ಗುಣಗಳಾದ ಪ್ರೀತಿ, ವಿಶ್ವಾಸ, ನಂಬಿಕೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದನ್ನು ಕತೆಗಳ ಅಧ್ಯಯನದ ಮೂಲಕ ತಿಳಿಯಲಾಗಿದೆ. ಉದ್ಯೋಗ, ಆಸ್ತಿ, ಹಣಕ್ಕಾಗಿ ಇತರರನ್ನು ನಂಬದೇ ಅವರನ್ನು ಮೋಸಗೊಳಿಸಿ ಯಾರೂ ಇಲ್ಲದೇ ಅನಾಥನಂತೆ ಏಕಾಂಗಿಯಾದ ಬದುಕನ್ನು ನಡೆಸುತ್ತಿರುವುದನ್ನು ವಸುಧೇಂದ್ರ ಅವರ 'ಕ್ಷಮೆಯಿಲ್ಲದೂರಿನಲಿ', 'ಚೇಳು', ಎಸ್.ಬಿ.ಜೋಗೂರ ಅವರ 'ಹೊತ್ತಿಗೊದಗದ ಮಾತು', ಎಂ.ಎಸ್.ವೇದಾ ಅವರ 'ಪಾಲು', 'ಪರಕೀಯರು', ಎಚ್.ನಾಗವೇಣಿ ಅವರ 'ಮೀಯುವ ಆಟ' ಮಹಾಂತೇಶ್ ನವಲಕಲ್ ಅವರ 'ಡಿಪ್ರೆಶನ್' ಕತೆಗಳ ಮೂಲಕ ಅರಿಯಬಹುದು.

ಆಕರ ಗ್ರಂಥಗಳು

ಆಕರ ಗ್ರಂಥಗಳು

ಅ. ಮೂಲ ಆಕರಗಳು

೧. ಅಮರೇಶ ನುಗಡೋಣಿ : ಸವಾರಿ
ಪಕ್ವಕ್ಕಲ್ಲದೇ ಪರಿಣಾಮ ಕಾಣಿಸದು
ಏ ದಿಲ್ ಮಾಂಗೇ ಮೋರ್
ಧರೆ ಉರಿದರೆ
ತಮಂಧದ ಕೇಡು

೨. ಅಬ್ದುಲ್ ರಶೀದ್ : ಮೂಸಾ ಮೈಲೊಯಾರರ ಮುದ್ದಿನ
ಮಗಳು ಮಗಳು ಮತ್ತು ಹೆಲಿಕಾಪ್ಟರ್
ಎಂಬ ವಿಷಜಂತು
ಮಣ್ಣಾಂಗಟ್ಟಿ

೩. ಅನುಪಮಾ ಪ್ರಸಾದ್ : ಡೇಗೆ

೪. ಅನುಪಮಾ ಎಚ್.ಎಸ್. : ಹೂವರಳಿದ್ದಕ್ಕೆ ಯಾಕೆ ಸಾಕ್ಷಿ

೫. ಜಯಂತ ಕಾಯ್ಕಿಣಿ : ತೂಫಾನ್ ಮೇಲ್
ಕನ್ನಡಿ ಇಲ್ಲದ ಊರಲ್ಲಿ

೬. ನಾಗವೇಣಿ ಎಚ್. : ಮೀಯುವ ಆಟ

೭. ಮಂಜುನಾಥ್‌ಲತಾ : ಮಂಟೇದರನೊಕ್ಕಲು
ಲೋಕರೂಢಿಗೊಳಗಾದುದು
ಆರ್ಮುಗ, ಕುರುಜು ಮತ್ತು
ಶ್ರೀಲಿಂಗಸ್ವಾಮಿ

೮. ಮಹಾಂತೇಶ ನವಲಕಲ್ : ಭಾರತ ಭಾಗ್ಯವಿಧಾತ
ನಾಯಿ ಎಂಬ ಮನುಷ್ಯ
ಗಾಂಧಿ ಬಂದಾನೆ...?
ಡಿಪ್ರೆಶನ್
ನೀರಿನ ನೆರಳು

೯. ಮೊಗಳ್ಳಿ ಗಣೇಶ್ : ಗಣಿ ನಿಲ್ದಾಣ
ವ್ಯೂಹ

೧೦. ವೇದಾ ಎಂ.ಎಸ್. : ಪಾಲು
ಪರಕೀಯರು

೧೧. ಶ್ರೀಧರ ಬಳಗಾರ : ಒಂದು ಫೋಟೋದ ನೆಗೆಟಿವ್

೧೨. ಶಾಂತಿ ಕೆ. ಅಪ್ಪಣ್ಣ : ಬಾಹುಗಳು
ಮುಳ್ಳುಗಳು

೧೩. ಹನುಮಂತ ಹಾಲಗೇರಿ : ದೇವಸಗ್ಗ
ಪಿಡುಗು
ನಾಗಬಲಿ
ಕರ್ಕಿಬೇರು

೧೪. ವಿವೇಕ ಶಾನಭಾಗ : ಕಂತು
ಕೆಲವು ತತ್ವಗಳ ಸಲುವಾಗಿ

೧೫. ಗೊರವರ ಟಿ.ಎಸ್. : ಕುದರಿ ಮಾಸ್ತರ

೧೬. ಜೋಗೂರ ಎಸ್.ಬಿ. : ಹೊತ್ತಿಗೊದಗದ ಮಾತು

೧೭. ವಸುಧೇಂದ್ರ : ಕ್ಷಮೆಯಿಲ್ಲದೂರಿನಲಿ
ಚೇಳು

೧೮. ಸುಮಂಗಲ : ಮುತ್ತಿನ ಬುಗಡಿ

ಆ. ಪರಾಮರ್ಶನ ಗ್ರಂಥಗಳು

ಅನಂತಮೂರ್ತಿ ಯು.ಆರ್., **ಪ್ರಜ್ಞೆ ಮತ್ತು ಪರಿಸರ,** ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೪

ಅನಂತಮೂರ್ತಿ ಯು.ಆರ್., **ಯುಗಪಲ್ಲಟ – ನಮ್ಮ ಕಾಲದ ತಲ್ಲಣಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪

ಅನುಪಮಾ.ಎಚ್.ಎಸ್., **ಹೂವರಳಿದ್ದಕ್ಕೆ ಯಾಕೆ ಸಾಕ್ಷಿ,** ಅಂಬಾರಿ ಪ್ರಕಾಶನ, ಮೈಸೂರು, ೨೦೦೯.

ಅನುಪಮಾ ಪ್ರಸಾದ್, **ಜೋಗತಿ ಜೋಳಿಗೆ,** ಅಹರ್ನಿಣಿ ಪ್ರಕಾಶನ, ಶಿವಮೊಗ್ಗ, ೨೦೧೫

ಅಬ್ದುಲ್ ರಶೀದ್, **ಈ ತನಕದ ಕಥೆಗಳು,** ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

ಅಮರೇಶ ನುಗಡೋಣಿ, **ಸವಾರಿ,** ಅಂಕಿತ ಪುಸ್ತಕ, ಬೆಂಗಳೂರು, ೨೦೦೭.

ಅಮರೇಶ ನುಗಡೋಣಿ, **ತಮಂಧದ ಕೇಡು,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೬.

ಅಮರೇಶ ನುಗಡೋಣಿ, **ಕತೆಗಳ ಕಟ್ಟು,** ದೇಸಿ ಪುಸ್ತಕ, ಬೆಂಗಳೂರು, ೨೦೧೯

ಅಮರೇಶ ನುಗಡೋಣಿ, **ಕಥೆ ಹುಟ್ಟುವ ಪರಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

ಅಶೋಕ ಟಿ.ಪಿ, **ಸಾಹಿತ್ಯ ಸಂದರ್ಭ,** ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೧

ಅಶೋಕ ಟಿ.ಪಿ, **ಕಥನ ಪ್ರೀತಿ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೩

ಆಶಾದೇವಿ ಎಂ.ಎಸ್., **ಬೆಳಕಿಗಿಂತ ಬೆಳ್ಳಗೆ,** ಸಾಹಿತ್ಯ ಅಕಾದೆಮಿ, ನವದೆಹಲಿ, ೨೦೧೬

ಆಮೂರ ಜಿ.ಎಸ್., **ನಿರಂತರ,** ಸ್ವಪ್ನಬುಕ್‌ಹೌಸ್, ಬೆಂಗಳೂರು, ೨೦೧೦

ಆಮೂರ ಜಿ.ಎಸ್., **ಕನ್ನಡ ಕಥನ ಸಾಹಿತ್ಯ:ಸಣ್ಣಕತೆ,** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩

ಆಮೂರ ಜಿ.ಎಸ್., **ಕನ್ನಡ ಕಥನ ಸಾಹಿತ್ಯ:ಕಾದಂಬರಿ,** ಸ್ವಪ್ನಬುಕ್‌ಹೌಸ್, ಬೆಂಗಳೂರು, ೨೦೧೩

ಆಮೂರ ಜಿ.ಎಸ್., **ಕಥನಶಾಸ್ತ್ರ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

ಕರೀಗೌಡ ಬೀಚನಹಳ್ಳಿ, **ಶತಮಾನದ ಸಣ್ಣಕತೆಗಳ ಸಮೀಕ್ಷೆ,** ಕನ್ನಡ ಸಾಹಿತ್ಯ ಅಕಾದೆಮಿ, ಬೆಂಗಳೂರು, ೨೦೦೩

ಕೀರ್ತಿನಾಥ ಕುರ್ತಕೋಟಿ, **ಯುಗಧರ್ಮ ಮತ್ತು ಸಾಹಿತ್ಯ ದರ್ಶನ,** ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, ೨೦೦೮

ಕೊಡ್ಲಿ.ಎಂ.ಸಿ., **ಅರ್ಥಶಾಸ್ತ್ರ ಪರಿಚಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫

ಗಿರಡ್ಡಿ ಗೋವಿಂದರಾಜ, **ಸಣ್ಣಕತೆಯ ಹೊಸ ಒಲವುಗಳು,** ಸಂಕ್ರಮಣ ಪ್ರಕಾಶನ, ಧಾರವಾಡ, ೧೯೬೫

ಗಿರಡ್ಡಿ ಗೋವಿಂದರಾಜ, **ಕಲ್ಪಿತ ವಾಸ್ತವ : ಸಣ್ಣಕತೆ,** ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೯

ಗಿರಡ್ಡಿ ಗೋವಿಂದರಾಜ, **ಸಾತತ್ಯ,** ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೧೫

ಗಿರಡ್ಡಿ ಗೋವಿಂದರಾಜ, **ಕಾದಂಬರಿಯ ವಸ್ತು ಮತ್ತು ತಂತ್ರ,** ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೧೫

ಗೊರವರ.ಟಿ.ಎಸ್., **ಕುದರಿ ಮಾಸ್ತರ,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨.

ಚಂದ್ರಶೇಖರ್ ರಾಮೇನಹಳ್ಳಿ ಆರ್.ವಿ., **ಜಾಗತೀಕರಣ ಮತ್ತು ಸಮಾಜ,** ಅಂಜತಾ ಎಂಟರ್‌ಪ್ರೈಸಸ್, ಬೆಂಗಳೂರು, ೨೦೧೨

ಚಂದ್ರಶೇಖರ ವಿ., **ಕಾಡು ಮತ್ತು ತೋಪು,** ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೦

ಚಂದ್ರಶೇಖರ ಎಸ್.ಆರ್., **ವಸಾಹತು ಕಾಲೀನ ಕರ್ನಾಟಕ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ಜನಾರ್ಧನ್‌ಭಟ್(ಸಂ), **ಸಾಹಿತ್ಯ ವಿಮರ್ಶೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

ಜಯಂತ್ ಕಾಯ್ಕಿಣಿ, **ತೂಫಾನ್ ಮೇಲ್,** ಅಂಕಿತ ಪುಸ್ತಕ, ಬೆಂಗಳೂರು, ೨೦೦೫

ದಂಡಪ್ಪ ಎಚ್. ಮತ್ತು ಸುಮಿತ್ರಾಬಾಯಿ ಬಿ.ಎನ್(ಸಂ)., **ಸುವರ್ಣ ಸಾಹಿತ್ಯ ವಿಮರ್ಶೆ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ದಸ್ತಗೀರಸಾಬ್ ದಿನ್ನಿ(ಸಂ)., **ಜಾಗತೀಕರಣ ಮತ್ತು ಸಂಸ್ಕೃತಿ,** ಕನಸು ಪ್ರಕಾಶನ, ರಾಯಚೂರು, ೨೦೦೪.

ನಟರಾಜ್ ಹುಳಿಯಾರ್, **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೭

ನಾಗರಾಜ ಡಿ.ಆರ್., **ಸಾಹಿತ್ಯ ಕಥನ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೪

ನಾಗರಾಜ ಡಿ.ಆರ್., **ಸಂಸ್ಕೃತಿ ಕಥನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

ನಾವಡ.ಎ.ವಿ., **ಕನ್ನಡ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

ನಾರಾಯಣ ಕೆ.ವಿ., **ಬೇರು ಕಾಂಡ ಚಿಗುರು,** ವಿವೇಕ ಪ್ರಕಾಶನ, ಬೆಂಗಳೂರು, ೨೦೦೬

ಪ್ರಹ್ಲಾದ ಅಗಸನಕಟ್ಟೆ, **ಅನುಸರಣ,** ಕಾಲ ಪ್ರಕಾಶನ, ಬೆಂಗಳೂರು, ೨೦೧೩

ಪುರುಷೋತ್ತಮ ಬಿಳಿಮಲೆ, **ಬಂಡಾಯ-ದಲಿತ ಸಾಹಿತ್ಯ,** ಕರ್ನಾಡಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨

ಬರಗೂರು ರಾಮಚಂದ್ರಪ್ಪ, **ಸಿನಿಮಾ ಒಂದು ಜನಪದ ಕಲೆ,** ಅಂಕಿತ ಪುಸ್ತಕ, ಬೆಂಗಳೂರು, ೨೦೦೭

ಬಸವರಾಜ ಕಲ್ಗುಡಿ(ಸಂ)., **ಸುವರ್ಣ ವಿಚಾರ ಸಾಹಿತ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ಬಸವರಾಜ ಸಬರದ, **ಹೊಸದಿಕ್ಕು,** ಪಲ್ಲವಿ ಪ್ರಕಾಶನ, ಬೀದರ್, ೧೯೯೦

ಮಹಾಂತೇಶ ನವಲಕಲ್, **ನೀರಿನ ನೆರಳು,** ಕಥನ ಪ್ರಕಾಶನ, ಬೆಂಗಳೂರು, ೨೦೦೮

ಮಹೇಶನ್.ಮ., **ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨

ಮಹಾಂತೇಶ್ ನವಲ್ಕಲ್, **ಭಾರತ ಭಾಗ್ಯವಿಧಾತ,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೪.

ಮಂಜುನಾಥ್‌ಲತಾ, **ಕತೆ ಎಂಬ ಇರಿವ ಈ ಅಲಗು,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೧.

ಮುಗಳಿ ರಂ.ಶ್ರೀ., **ಕನ್ನಡ ಸಾಹಿತ್ಯ ಚರಿತ್ರೆ,** ಗೀತಾಬುಕ್‌ಹೌಸ್, ಮೈಸೂರು, ೨೦೦೯

ರಂಗನಾಥ ಕಂಟನಕುಂಟೆ, **ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ,** ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು, ೨೦೦೯

ರಹಮತ್ ತರೀಕೆರೆ, **ಸಾಂಸ್ಕೃತಿಕ ಅಧ್ಯಯನ,** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೦

ರಹಮತ್ ತರೀಕೆರೆ(ಸಂ)., **ಹೊಸತಲೆಮಾರಿನ ತಲ್ಲಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

ರಾಜೇಂದ್ರ ಚೆನ್ನಿ, ಸಿರಾಜ್ ಅಹಮದ್.ಎಸ್(ಸಂ)., **ಜಾಗತೀಕರಣ: ಒಂದು ಸಮಗ್ರ ಮಂಥನ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

ರಾಜೇಂದ್ರ ಚೆನ್ನಿ, **ನಡುಹಗಲಿನಲ್ಲಿ ಕಂದೀಲುಗಳು,** ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೪

ರಾಜೇಂದ್ರ ಚೆನ್ನಿ, **ಅಸಮಗ್ರ,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೦

ರಾಜೇಂದ್ರ ಚೆನ್ನಿ, **ಸದ್ಯದ ಹಂಗು,** ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೩

ರಾಮಚಂದ್ರನ್ ಸಿ.ಎನ್., **ಸಾಹಿತ್ಯ ವಿಮರ್ಶೆ ಮತ್ತು ವಸಾಹತ್ತೋತ್ತರ ಚಿಂತನೆ,** ಅಂಕಿತ ಪುಸ್ತಕ, ಬೆಂಗಳೂರು, ೧೯೯೦

ರಾಮಲಿಂಗಪ್ಪ ಟಿ. ಬೇಗೂರು, **ಸಂದರ್ಬ : ಸಮ್ಮಂಧ,** ಸಿವಿಜಿ ಇಂಡಿಯಾ, ಬೆಂಗಳೂರು, ೨೦೧೪

ರಾಮಲಿಂಗಪ್ಪ ಟಿ. ಬೇಗೂರು ಮತ್ತು ಕೃಷ್ಣಾರೆಡ್ಡಿ(ಸಂ), **ವರ್ತಮಾನದ ಕಥೆಗಳು,** ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿ. ಬೆಂಗಳೂರು, ೨೦೧೩

ವಸುಧೇಂದ್ರ, **ಹಂಪಿ ಎಕ್ಸ್‌ಪ್ರೆಸ್,** ಛಂದ ಪುಸ್ತಕ, ಬೆಂಗಳೂರು, ೨೦೧೦

ವಸುಧೇಂದ್ರ, **ಚೇಳು,** ಛಂದ ಪುಸ್ತಕ, ಬೆಂಗಳೂರು, ೨೦೧೦

ವಿಜಯಶಂಕರ ಎಸ್.ಆರ್., **ಒಳದನಿ,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪

ವಿವೇಕ ಶಾನಭಾಗ, **ಹುಲಿ ಸವಾರಿ,** ಅಂಕಿತ ಪುಸ್ತಕ, ಬೆಂಗಳೂರು, ೨೦೧೧

ವಿವೇಕ ಶಾನಭಾಗ, **ಘಾಚರ್ ಘೋಚರ್,** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೩

ವಿವೇಕ ಶಾನಭಾಗ, **ಮತ್ತೊಬ್ಬನ ಸಂಸಾರ,** ಅಂಕಿತ ಪುಸ್ತಕ, ಬೆಂಗಳೂರು, ೨೦೦೫

ವಿಜಯಶ್ರೀ ಸಬರದ, **ವಿಚಾರ ಸಾಹಿತ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯

ವೇದಾ.ಎಂ.ಎಸ್., **ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ,** ಸಂವಹನ ಪಬ್ಲಿಕೇಷನ್ಸ್, ಮೈಸೂರು, ೨೦೧೦

ಶಂಕರರಾವ್.ಚ.ನ., **ಸಮಾಜಶಾಸ್ತ್ರ,** ಜೈಭಾರತ್ ಪ್ರಕಾಶನ, ಮಂಗಳೂರು, ೨೦೦೮

ಶಂಕರರಾವ್.ಚ.ನ., **ಭಾರತೀಯ ಸಮಾಜ,** ಜೈಭಾರತ್ ಪ್ರಕಾಶನ, ಮಂಗಳೂರು, ೨೦೦೯

ಶಾಂತಿ ಕೆ. ಅಪ್ಪಣ್ಣ, **ಮನಸು ಅಭಿಸಾರಿಕೆ,** ಛಂದ ಪುಸ್ತಕ, ಬೆಂಗಳೂರು, ೨೦೧೬

ಶಾಂತಿನಾಥ ದಿಬ್ಬದ, **ವೈಚಾರಿಕ ಲೇಖನಗಳು,** ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೨೦೦೫

ಶಾಂತಿನಾಥ ದೇಸಾಯಿ, **ನವ್ಯ ಸಾಹಿತ್ಯ ದರ್ಶನ,** ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೪

ಶಿವರಾಮ ಪಡಿಕ್ಕಲ್, **ನಾಡು ನುಡಿ ರೂಪಕ,** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ೨೦೦೧

ಶ್ರೀಧರ ಬಳಗಾರ, **ಒಂದು ಫೋಟೋದ ನೆಗೆಟಿವ್,** ಅಂಕಿತ ಪುಸ್ತಕ, ಬೆಂಗಳೂರು, ೨೦೦೮

ಶ್ರೀನಿವಾಸ ಹಾವನೂರ, **ಹೊಸಗನ್ನಡ ಅರುಣೋದಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಶ್ರೀಮತಿ ಎಚ್.ಎಸ್., **ಸೇರಿಕೊಂಡ ಎಳೆಗಳು,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩

ಶೇಷಗಿರಿರಾವ್ ಎಲ್.ಎಸ್., **ಹೊಸಗನ್ನಡ ಸಾಹಿತ್ಯ ಚರಿತ್ರೆ,** ಅಂಕಿತ ಪ್ರಕಾಶನ, ಬೆಂಗಳೂರು, ೨೦೦೮

ಷರೀಫಾ ಕೆ., **ಬಂಡಾಯ ಮುಸ್ಲಿಂ ಸಂವೇದನೆ,** ಸಿ.ವಿ.ಜಿ ಪ್ರಕಾಶನ, ಬೆಂಗಳೂರು, ೨೦೦೪

ಸತ್ಯನಾರಾಯಣ ಕೆ., **ವೈವಿಧ್ಯ,** ವಸಂತ ಪ್ರಕಾಶನ, ಬೆಂಗಳೂರು, ೨೦೧೫

ಸಾಯಿನಾಥ.ಪಿ(ಮೂಲ)., ಸಿಂಚನ ತಂಡ(ಅನು)., **ಅಸಮಾನತೆಯ ಜಾಗತೀಕರಣ,** ಶ್ರಮಿಕ ಸ್ಮೃತಿಮಾಲೆ–೧, ಲಡಾಯಿ ಪ್ರಕಾಶನ, ಗದಗ, ೨೦೧೧.

ಸುಮಂಗಲಾ, **ಕಾಲಿಟ್ಟಲ್ಲಿ ಕಾಲುದಾರಿ,** ಛಂದ ಪುಸ್ರಕ, ಬೆಂಗಳೂರು, ೨೦೦೯.

ಸುಮಿತ್ರಾಬಾಯಿ ಬಿ.ಎಸ್., **ಸ್ತ್ರೀವಾದಿ ಪ್ರವೇಶಿಕೆ,** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೫

ಸಿದ್ಧರಾಮಯ್ಯ.ಎಸ್.ಜಿ., **ನವಲೇಖನ ಕನ್ನಡ ಕತೆಗಳು,** ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ. ೨೦೧೬.

ಹನುಮಂತ ಹಾಲಿಗೇರಿ, **ಗೆಂಡೆದೇವ್ರು,** ಕಾವ್ಯಮನೆ ಪ್ರಕಾಶನ, ಕಲಬುರಗಿ, ೨೦೧೬

ಪತ್ರಿಕೆಗಳು

ಅಕ್ಷರ ಕೆ.ವಿ., **ಹೆಳವನ ಹೆಗಲ ಮೇಲೆ ಕುರುಡ ಕುಳಿತ ಕಾಲ,** ಪ್ರಜಾವಾಣಿ ಪತ್ರಿಕೆ, ೮ ಆಗಸ್ಟ್ ೨೦೧೬

ಸಿರಾಜ್ ಅಹಮ್ಮದ್, **ಜಾಗತೀಕರಣ ಮತ್ತು ಸಂಸ್ಕೃತಿ,** ನುಡಿಗಣ್ಣು ಬ್ಲಾಗ್‌ಸ್ಪಾಟ್, ೨೯ ಮೇ ೨೦೧೧

ಎಸ್.ಬಿ.ಜೋಗೂರ, **ಸಾಂಸ್ಕತಿಕ ಜಾಗತೀಕರಣ ಹಾಗೂ ಪ್ರತಿರೋಧ,** ವರ್ತಮಾನ ಪತ್ರಿಕೆ, ೧೧ ಏಪ್ರಿಲ್ ೨೦೧೨

ಬಾಪು ಹೆದ್ದೂರಶೆಟ್ಟಿ, **ಜಾಗತೀಕರಣ: ಒಂದು ಸವಾಲು, ಒಂದು ಅವಕಾಶ,** ಪ್ರಜಾವಾಣಿ ಪತ್ರಿಕೆ ೦೨ ಏಪ್ರಿಲ್ ೨೦೧೬

ಜಾಗತೀಕರಣದ ಇತ್ತೀಚಿನ ಆಯಾಮಗಳು, ಕಣಜ.

ಪಿಎಚ್.ಡಿ ಮತ್ತು ಎಂ.ಫಿಲ್ ಪ್ರಬಂಧಗಳು

ಜಗದೀಶ್ ಕೊಪ್ಪ, **ಜಾಗತೀಕರಣ ಮತ್ತು ಗ್ರಾಮಭಾರತ**(ಡಿ.ಲಿಟ್.), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಕ್ಷ್ಮೀಪತಿ.ಸಿ.ಜೆ., **ಕರ್ನಾಟಕದ ಸಾಮಾಜಿಕ ಬದಲಾವಣೆ (ಸಮಾಜಶಾಸ್ತ್ರ ಹಾಗೂ ಸಾಹಿತ್ಯ ನೋಡಿರುವ ಬಗೆ),** ಪಿಎಚ್.ಡಿ., ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಧರ್ಮವೀರ.ಕೆ.ಎಚ್., **ಹೊಸತಲೆಮಾರಿನ ಕಥಾಸಾಹಿತ್ಯದ ಪ್ರವೃತ್ತಿಗಳ ಅಧ್ಯಯನ,** ಪಿಎಚ್.ಡಿ., ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

ವಸುಧೇಂದ್ರರವರ ಕನ್ನಡ ಸಣ್ಣಕತೆಗಳಲ್ಲಿ ಆಧುನೀಕರಣ, ಎಂ.ಫಿಲ್. ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಕೀಲಾ ಕೆ., **ಮಹಿಳಾ ಕಥಾಸಾಹಿತ್ಯ: ಮಹಿಳೆ ಮತ್ತು ಕುಟುಂಬದ ವಿನ್ಯಾಸಗಳು,** ಪಿಎಚ್.ಡಿ., ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬

ನಾಗರಾಜ ಎಸ್., **ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿ ಪ್ರಶ್ನೆ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ರಾಜೇಶ್ವರಿ ಜಿ. ದೊಡ್ಡಬಸವನಗೌಡ, **ಕನ್ನಡ ಕಥನ ಸಾಹಿತ್ಯದಲ್ಲಿ ವಲಸೆ ಪರಿಕಲ್ಪನೆ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬

ವೆಂಕಟೇಶಮೂರ್ತಿ ಟಿ., **ಆಧುನಿಕ ಕನ್ನಡ ನಾಟಕಗಳಲ್ಲಿ ಪ್ರಭುತ್ವ, ಯಾಜಮಾನ್ಯತೆ ಹಾಗೂ ಅಧಿಕಾರ ಕೇಂದ್ರಗಳ ಪ್ರತಿನಿಧೀಕರಣ, ವಸ್ತುನಿಷ್ಠ ಅಧ್ಯಯನ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

ಕೆ.ಸಿ.ಶಿವಾರೆಡ್ಡಿ, **ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಎಚ್.ಟಿ. ವೆಂಕಟೇಶಮೂರ್ತಿ, **ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭಗಳಲ್ಲಿ ಕರ್ನಾಟಕದ ದಲಿತ ಚಳುವಳಿ ಮತ್ತು ಸಾಹಿತ್ಯ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧


ಪಿ.ಜೆ.ವೇಗೇರಿ, **ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಉಮೇಶ.ಎಂ, **ನವೋದಯ ಕಥಾಸಾಹಿತ್ಯದಲ್ಲಿ ಗ್ರಾಮಸಮಾಜ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಎಚ್.ಡಿ.ಪ್ರಶಾಂತ್, **ಲಂಬಾಣಿಗಳಲ್ಲಿ ಸಾಮಾಜಿಕ ಬದಲಾವಣೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ನಾಗಭೂಷಣ, **ಬದಲಾಗುತ್ತಿರುವ ಆಧುನಿಕ ಪರಿಸರದಲ್ಲಿ ಜಾನಪದ,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

ಆನಂದ.ಕೆ.ಆರ್, **ಸಮಕಾಲೀನ ಕನ್ನಡ ಸಣ್ಣಕತೆಗಳ ಸಾಂಸ್ಕೃತಿಕ ಸ್ವರೂಪಗಳು,** ಪಿಎಚ್.ಡಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ